
ಮಹಾ ತಪಸ್ವಿ

ಕಾವ್ಯಕಂಠ ವಾಸಿಷ್ಠ ಗಣಪತಿ ಮುನಿಗಳ ಜೀವನ ಚರಿತ್ರೆ



SAKSHI
Trust

ಮಹಾ ತಪಸ್ವಿ

ಕಾವ್ಯಕಂಠ ವಾಸಿಷ್ಠ ಗಣಪತಿ ಮುನಿಗಳ ಜೀವನ ಚರಿತ್ರೆ

ತೆಲುಗು ಮೂಲ

ಎ.ವಿ.ರಮಣ

(ಕಾವ್ಯಕಂಠ ಗಣಪತಿ ಮುನಿಗಳ ಮೊಮ್ಮಗ)

ಇಂಗ್ಲಿಷ್‌ಗೆ

ಶೊಂಠಿ ಅನಸೂಯಮ್ಮ

ಕನ್ನಡಕ್ಕೆ

ಗುರುಪ್ರಸಾದ್ ಹಾಲ್ಕುರಿಕೆ

ಸಂಪಾದಕ

ರ. ವಿ. ಜಹಾಗೀರದಾರ

SAKSHI Trust

ಶ್ರೀ ಅರೋಬಿಂದೊ ಕಪಾಲಿಶಾಸ್ತ್ರಿ ವೇದಸಂಸ್ಕೃತಿ ಸಂಸ್ಥೆ

ಪ್ರಕಾಶಕ:
ಶ್ರೀ ಅರೋಬಿಂದೊ ಕಪಾಲಿಶಾಸ್ತ್ರಿ ಇನ್‌ಸ್ಟಿಟ್ಯೂಟ್ ಆಫ್ ವೇದಿಕ್ ಕಲ್ಚರ್
ನಂ. 63, 13ನೇ ಮೇನ್, 4ನೇ ಬ್ಲಾಕ್, ಜಯನಗರ, ಬೆಂಗಳೂರು - 560011
ದೂರವಾಣಿ: 08022456315 / 9008833886
ಈ ಮೇಲ್: info@vedah.com / web: www.vedah.com

ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರಕಾರ
ಇವರ ಅನುದಾನದಿಂದ ಪ್ರಕಟಿತ

ಪುಟಗಳು: x + 285

ಮೊದಲ ಆವೃತ್ತಿ: 2021

ಬೆಲೆ: ₹ 100/-

ಮುಖಪುಟ ವಿನ್ಯಾಸ: ಕಿರಣ್ ಪಟಿ

ಅಳತೆ: 1/8 ಡೆಮಿ, ಕಾಗದ: 70 ಜಿಎಸ್‌ಎಮ್ ಮ್ಯಾಪ್ಲಿಥೊ
ಮುಖಪುಟ: 300 ಜಿಎಸ್‌ಎಮ್ ಆರ್ಟ್‌ಬೋರ್ಡ್
ಮುದ್ರಕರು: ಶ್ರೀರಂಗ ಪ್ರಿಂಟರ್ಸ್ ಪ್ರೈ. ಲಿ., ಬೆಂಗಳೂರು - 560 070

ISBN 10 : 81-7994-216-3
ISBN13 : 978-81-7994-216-1
EAN : 9788179942161

Maha Tapasvi: Biography of Sri Vasishtha Ganapati Muni (Kannada). Original in English by **Shonti Anasuyamma;** Kannada Translation by Guru Prasad Halkurike, Published by: **SAKSHI**, No. 63, 13th Main, 4th Block East, Jayanagar, Bengaluru-560 011.
First edition: 2021, Pages x+285, Price ₹ 100/-

Printed at : Sreeranga Printers Pvt. Ltd., Bengaluru - 560 070.

ಒಳಪುಟಗಳಲ್ಲಿ

ಭಾಗ – 1

ಭಾಗ – 2

ಭಾಗ – 3

ಮುನ್ನುಡಿ

(ಮೂಲ ತೆಲುಗು ಆವೃತ್ತಿಗೆ ಬರೆದದ್ದು)

ಅರುಣಾಚಲ ಬೆಟ್ಟದಲ್ಲಿ ಸಂಪೂರ್ಣ ಮೌನದಿಂದ ಕುಳಿತಿದ್ದ ಒಬ್ಬ ಯೋಗಿಯನ್ನು ಗಣಪತಿ ಮುನಿಗಳು ನೋಡಿದರು. ಅವರು ಆ ಯೋಗಿಯನ್ನು ಮಹಾನ್ ಋಷಿಯೆಂದು ಗುರುತಿಸಿ ಅವರನ್ನು ತನ್ನ ಗುರುಗಳನ್ನಾಗಿ ಒಪ್ಪಿಕೊಂಡು ಅವರನ್ನು ಆ ದಿನದಿಂದಲೇ ಭಗವಾನ್ ಶ್ರೀ ರಮಣ ಮಹರ್ಷಿಯೆಂದು ಘೋಷಿಸಿದರು.

ಅವರು ತಾವಿಬ್ಬರೂ ತಮ್ಮ ಪೂರ್ವಜನ್ಮದಲ್ಲಿ ಹತ್ತಿರದ ಸಂಬಂಧಿಗಳೆಂದು ಘೋಷಿಸಿದ್ದಲ್ಲದೇ ಒಂದು ಶ್ಲೋಕದ ಮೂಲಕ ಶ್ರೀ ರಮಣ ಮಹರ್ಷಿಗಳನ್ನು ಉಮಾ ಹಾಗೂ ಶಿವ ದಂಪತಿಗಳ ಪುತ್ರ ಕುಮಾರಸ್ವಾಮಿಯ ಅವತಾರವೆಂದು ಹಾಗೂ ತಾವು ಆ ದಂಪತಿಗಳ ಜ್ಯೇಷ್ಠ ಪುತ್ರ ಗಣಪತಿ ಎಂದು ವರ್ಣಿಸಿರುವರು.

ಗಣಪತಿ ಮುನಿ ಮಹಾನ್ ಋಷಿ, ಕವಿ, ದೇಶಭಕ್ತ ಹಾಗೂ ಸಮಾಜ ಸುಧಾರಕರಾಗಿದ್ದರು. ಸಾಹಿತ್ಯ ಕ್ಷೇತ್ರದಲ್ಲಿ ಶ್ರೇಷ್ಠತೆ ಹಾಗೂ ಎಲ್ಲ ವಿಷಯಗಳ ಸಾರಗಳ ಬಗ್ಗೆ ಜ್ಞಾನವನ್ನು ಅವರು ದೈವೀ ಮಾತೆಯ ಅನುಗ್ರಹದಿಂದ ಪಡೆದಿದ್ದರು.

ತೀವ್ರವಾದ ಆಧ್ಯಾತ್ಮಿಕ ಪ್ರಯತ್ನವನ್ನು ತಪಸ್ಸು ಎಂದು ವ್ಯಾಖ್ಯಾನಿಸಲಾಗಿದೆ. ಆಸೆಯೊಂದನ್ನು ತೀರಿಸಿಕೊಳ್ಳುವ ಸಲುವಾಗಿ ಮಾಡುವ ತಪಸ್ಸು ನಿಜವಾದ ತಪಸ್ಸಲ್ಲ. ದೈವೀ ದರ್ಶನಗಳು ಕೇವಲ ವ್ಯಕ್ತಿಯೊಬ್ಬನ ಮನೋಬಿಂಬಗಳಾಗಿವೆ. ಆತ್ಮಜ್ಞಾನದ ಅರಿವನ್ನು ಪಡೆಯುವ ತನಕ, ನಾವು ತಪಸ್ಸನ್ನು ಮುಂದುವರೆಸಿಕೊಂಡು ಹೋಗಬೇಕು ಹಾಗೂ ಇದನ್ನೇ ಗಣಪತಿ ಮುನಿಗಳು ಮಾಡಿದ್ದು.

ಬ್ರಹ್ಮಗ್ರಂಥಿಯು ಅವಾಸ್ತವ ಮತ್ತು ವಾಸ್ತವ ಆತ್ಮಗಳ ನಡುವಿನ ಗಂಟು ಎಂದಿದ್ದಾರೆ ಗಣಪತಿ ಮುನಿಗಳು. ಈ ಗಂಟನ್ನು ಬಿಚ್ಚಲು ತಪಸ್ಸು ಮಾಡುವದು ಅಗತ್ಯ ಹಾಗೂ ಇದು ವಿದ್ಯಾರ್ಜನೆಗೆ ಮುಖ್ಯವಾದ ಸಾಧನ. 60 ವರ್ಷಗಳ ದೀರ್ಘ ಪ್ರಯತ್ನದಿಂದ ಪಡೆದ ಜ್ಞಾನವನ್ನು ಆರು ವರ್ಷಗಳ ತಪಸ್ಸಿನಿಂದ ಸಂಪಾದಿಸಬಹುದು. ಅಲ್ಲದೇ ಗಣಪತಿ ಮುನಿಗಳೇ ಸ್ವತಃ ಇದನ್ನು ಹತ್ತುದಿನಗಳ ತೀವ್ರ ತಪಸ್ಸಿನಿಂದ ತಮಿಳು ಭಾಷೆಯನ್ನು ಕರತಲಾಮಲಕ ಮಾಡಿಕೊಳ್ಳುವ ಮೂಲಕ ಸಾಬೀತುಪಡಿಸಿದ್ದಾರೆ. ಗಣಪತಿ ಮುನಿಗಳು ತಮ್ಮ ತಾಯ್ನಾಡನ್ನು ಗುಲಾಮಗಿರಿ ಹಾಗೂ ಅಜ್ಞಾನದಿಂದ ಹೊರತರುವ ಉದ್ದೇಶದಿಂದ ತೀವ್ರವಾದ ತಪಸ್ಸನ್ನಾಚರಿಸಿದರು. ಅವರು ತಮ್ಮ ಸ್ಫೂರ್ತಿಯುತ ಭಾಷಣ ಹಾಗೂ ಸುಧಾರಣಾ ಧ್ಯೇಯಗಳಿಂದ ಸ್ವಾತಂತ್ರ ಹೋರಾಟಗಾರರ ಹೃದಯದಲ್ಲಿನ ದೈವೀ ಶಕ್ತಿಯನ್ನು ಬಡಿದೆಬ್ಬಿಸಿದರು.

ಮುನಿಗಳ ಜೀವನದ ಪ್ರತಿಯೊಂದು ಹಂತವೂ ಅನೇಕ ಪುಸ್ತಕಗಳನ್ನು ಬರೆಯಲು ಸಾಕಷ್ಟು ವಿಷಯಗಳನ್ನು ಒದಗಿಸುತ್ತವೆ. ದೀರ್ಘಕಾಲದ ಹಾಗೂ ಸಮರ್ಪಣಾಭಾವದಿಂದ ಕೂಡಿದ ಸಂಶೋಧನೆ ಮಾಡದೇ ಇಂತಹ ಮಹಾನ್ ತಪಸ್ವಿಯ ಜೀವನ ಚರಿತ್ರೆಯನ್ನು ಬರೆಯುವುದು ಅಸಾಧ್ಯ. ಹಾಗಾಗಿ, ನಾನು ನನ್ನ ಪ್ರಯತ್ನವನ್ನು ಗಣಪತಿ ಮುನಿಗಳ ಸಾಹಿತ್ಯ ಶ್ರೇಷ್ಠತೆ ಹಾಗೂ ಅವರು ಕೈಗೊಂಡ ತಪಸ್ಸಿನ ಪ್ರಯತ್ನಗಳಿಗೆ ಮಾತ್ರ ಸೀಮಿತಗೊಳಿಸಿಕೊಂಡೆ.

ಡಾ.ಕೆ.ಸುಬ್ರಹ್ಮಣಿಯನ್ ಅವರು ಹೈದರಾಬಾದಿನ ವಿದ್ಯಾ ಸಂಸ್ಥೆ CFILನಲ್ಲಿ ಅಧಿಕಾರಿ ಹಾಗೂ ಹಿಂದೂ ಪತ್ರಿಕೆಯ "ನಾನು ಮತ್ತು ನೀವು" "ನಿಮ್ಮ ಇಂಗ್ಲಿಷನ್ನು ಅರಿಯಿರಿ" ಎಂಬ ಅಂಕಣಗಳ ಅಂಕಣಕಾರ. ಅವರು ರಮಣ ಮಹರ್ಷಿಗಳ ಭಕ್ತರು ಹಾಗೂ ತಮ್ಮ ಕೊನೆಯುಸಿರಿರುವವರೆಗೂ ಮಹರ್ಷಿಗಳನ್ನು ಸೇವಿಸುತ್ತಾ ಇದ್ದರು. ಗಣಪತಿ ಮುನಿಗಳ ಜೀವನ ಚರಿತ್ರೆಯನ್ನು ಬರೆಯಲು ನನಗೆ ಸ್ಫೂರ್ತಿದಾಯಕರೇ ಸುಬ್ರಮಣಿಯನ್ ಅವರು.

ಒಂದು ದಿನ ಡಾ.ಸುಬ್ರಮಣಿಯನ್ ಅವರು, "ರಮಣ! ನಾಯನರ ಜೀವನ ಚರಿತ್ರೆಯನ್ನು ಸರಿಯಾಗಿ ಬರೆದಿಲ್ಲ. ನೀವು ಏಕೆ ಅದನ್ನು ಮಾಡಬಾರದು?" ಎಂದು ಕೇಳಿದರು.

ನಾನು ದಿಗ್ಭ್ರಾಂತನಾಗಿ, "ನಾನು ಹೇಗೆ ಬರೆಯಲಿ ಸರ್! ನಾನು ನನ್ನ ತಾತನವರನ್ನು ನೋಡಿಯೇ ಇಲ್ಲ. ನಾನು ಹೇಗೆ ಅವರ ಜೀವನ ಚರಿತ್ರೆಯನ್ನು ಬರೆಯಲು ಪ್ರಯತ್ನಿಸುವುದು?"

ಸುಬ್ರಮಣಿಯನ್ ಅವರು ಒಂದು ಕ್ಷಣ ಮೌನವಾಗಿದ್ದರು. ನಂತರ ನನ್ನ ಕಣ್ಣುಗಳನ್ನೇ ನೇರವಾಗಿ ದೃಷ್ಟಿಸಿ ಶಾಂತಚಿತ್ತರಾಗಿ, "ಶ್ರೀರಾಮನ ಬಗ್ಗೆ ಬರೆದವರೆಲ್ಲರೂ ರಾಮನನ್ನು ನೋಡಿರುವರೆ?" ಎಂದು ಕೇಳಿದರು.

ಅವರ ಭಕ್ತಿ ಮಾರ್ಗವು ನನ್ನನ್ನು ಎಚ್ಚರಿಸಿತು. ನಾನು ಶರಣಾಗತಿಯ ಮನೋಭಾವನೆಯಿಂದ ಬರೆಯುವಂತೆ ಅವರು ಸಲಹೆ ನೀಡಿದರು. ಹಾಗಾಗಿ ನಾನು ಬರೆಯಲು ತೊಡಗಿದೆ.

ಈ ಪುಸ್ತಕವನ್ನು ಸಂಪೂರ್ಣವಾಗಿ ಗೌರವಾನ್ವಿತ, ಹಾಗೂ ವ್ಯಾಕರಣ ವಿಶಾರದ ಮತ್ತು ಛಂದಸ್ಸುಗಳಲ್ಲಿ ಪ್ರವೀಣರಾದ ಮತ್ತು ವಿದ್ವಾಂಸರಾದ ಶ್ರೀಆಚಾರ್ಯ ಅಪ್ಪಲ್ಲ ಸೋಮೇಶ್ವರ ಶರ್ಮ ಅವರು ಅತ್ಯಂತ ಆಸಕ್ತಿಯಿಂದ ಓದಿ, ನಂತರ ಅಗತ್ಯವಾದ ತಿದ್ದುಪಡಿಗಳನ್ನು ಮಾಡಿ ನನ್ನನ್ನು ಆಶೀರ್ವದಿಸಿದರು. ಶ್ರೀ ವೇದುಲ ಸುಬ್ರಹ್ಮಣ್ಯ ಶಾಸ್ತ್ರಿ, ಶ್ರೀ ಪುಡಿಪೆದ್ದಿ ಲಕ್ಷ್ಮಣ ಮೂರ್ತಿ ಹಾಗೂ ನನ್ನ ಸಹೋದರಿ ಹಾಗೂ ಕವಯಿತ್ರಿ ಶ್ರೀಮತಿ ಪಿ. ವಿಶಾಲಾಕ್ಷಿ ಅವರುಗಳು ನನಗೆ ಈ ಪುಸ್ತಕವನ್ನು ಬರೆಯಲು ಸಾಕಷ್ಟು ಉತ್ತೇಜನವನ್ನು

ನೀಡಿದ್ದಕ್ಕೆ ಅವರೆಲ್ಲರಿಗೂ ನನ್ನ ವಿನಯಪೂರ್ವಕ ಪ್ರಣಾಮವನ್ನು ಸಲ್ಲಿಸುವೆ.

ಈ ಜೀವನ ಚರಿತ್ರೆಯನ್ನು ಬರೆಯಲು ಬೇಕಾದ ವಿಷಯ ಸಾಮಗ್ರಿಗಳನ್ನು ಒಟ್ಟುಗೂಡಿಸುವುದು ಅತ್ಯಂತ ಕಷ್ಟಕರವಾಗಿತ್ತು. ನನ್ನ ಅಣ್ಣ, ಪುರಂಧರ, ಸಹೋದರಿ ಪಿ.ಇಂದಿರ ಮತ್ತು ಕಿರಿಯ ಸಹೋದರ ಶ್ರೀಧರ ಅವರುಗಳು ಈ ದಿಶೆಯಲ್ಲಿ ನನಗೆ ಅಪಾರ ಸಹಾಯವನ್ನು ಮಾಡಿದರು. ನಾಯನರ ಸಂಸ್ಕೃತ ಭಾಷೆಯಲ್ಲಿನ ಜೀವನ ಚರಿತ್ರೆ, ಶ್ರೀ ಟಿ.ವಿ. ಕಪಾಲಿಶಾಸ್ತ್ರಿ ರಚಿತ "ವಾಸಿಷ್ಠ ವೈಭವಮ್" ಕೃತಿಯು ನನ್ನ ಪ್ರಯತ್ನಗಳಿಗೆ ಸಹಾಯವನ್ನು ನೀಡಿತು. ನನ್ನ ಈ ಪ್ರಯತ್ನಕ್ಕೆ ಎಲ್ಲ ಸಹಕಾರವನ್ನೂ ನೀಡಿದ ನನ್ನ ಹಿರಿಯರಿಗೆ ನನ್ನ ಕೃತಜ್ಞತೆಗಳನ್ನೂ ಹಾಗೂ ನನ್ನ ಕುಟುಂಬದಲ್ಲಿನ ಕಿರಿಯರಿಗೆ ನನ್ನ ಆಶೀರ್ವಾದಗಳನ್ನೂ ಸಲ್ಲಿಸುವೆ. ಹೈದರಾಬಾದಿನ ಶ್ರೀರಮಣ ಸತ್ಸಂಗದ ಸದಸ್ಯರು ತಮ್ಮ ಶ್ರೀ ರಮಣ ಜ್ಯೋತಿ ಪತ್ರಿಕೆಯಲ್ಲಿನ ಪ್ರತಿಯೊಂದು ಸಂಚಿಕೆಯಲ್ಲೂ ಜೀವನ ಚರಿತ್ರೆಯ ಒಂದೊಂದು ಅಧ್ಯಾಯವನ್ನು ಪ್ರಕಟಿಸಿ ನನ್ನನ್ನು ಹುರಿದುಂಬಿಸಿದರು.

ಪ್ರಬುದ್ಧ ಹಾಗೂ ಜನಸಾಮಾನ್ಯರು, ಭಕ್ತರು ಹಾಗೂ ಸಂಶೋಧಕರು ಈ ಪುಸ್ತಕವನ್ನು ಅಮೂಲ್ಯವಾದದ್ದೆಂದು ಪರಿಗಣಿಸಿರುವರು, ಅದು ಭಗವಾನ್ ಶ್ರೀ ರಮಣ ಮಹರ್ಷಿ ಹಾಗೂ ನಾಯನರ ಮಹೋನ್ನತವಾದ ಆಶೀರ್ವಾದವೆಂದು ನಾನು ಪರಿಗಣಿಸುವೆ.

ಎಲ್ಲ ಮಹಾನ್ ಆತ್ಮಗಳಿಗೂ ನನ್ನ ವಿನಮ್ರ ಪ್ರಣಾಮಗಳು.

ಎ. ವಿ. ರಮಣ
(ಮೈತ್ರಾವರುಣ)

ಅನುವಾದಕರ ಮಾತು

ವಾಸಿಷ್ಠ ಗಣಪತಿ ಮುನಿಗಳು ಋಷಿಸದೃಶ ಕವಿ ಎನ್ನುವುದು ಅವರ ಅನೇಕ ಅನುಭಾವೀ ರಚನೆಗಳಲ್ಲಿ ಕಂಡುಬರುತ್ತದೆ. ಗಣಪತಿ ಮುನಿಗಳನ್ನು ಕಾವ್ಯರಚನೆಯಲ್ಲಿ ಕಾಳಿದಾಸ ಹಾಗೂ ಆದಿ ಶಂಕರಾಚಾರ್ಯರಿಗೆ ಸಮ ಎಂಬುದಾಗಿ ಪರಿಗಣಿಸಲಾಗಿದೆ. ಗಣಪತಿ ಮುನಿಗಳು ಔಷಧಿ ಜ್ಞಾನದಲ್ಲಿ ಚರಕನಂತೆಯೂ, ಜ್ಯೋತಿಷ್ಯಶಾಸ್ತ್ರದಲ್ಲಿ ಪರಾಶರರಂತೆಯೂ, ಹಾಗೂ ಖಗೋಳಶಾಸ್ತ್ರದಲ್ಲಿ ವರಾಹಮಿಹಿರರಂತೆಯೂ ಸುಪ್ರಸಿದ್ಧರಾಗಿದ್ದರು. ಇವರು ಯಾವುದೇ ದೇವರನ್ನು ಕುರಿತು ಧ್ಯಾನಮಾಡಿದರೂ ಆ ದೈವವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಿದ್ದರು. ತಮ್ಮ ಜೀವಿತಾವಧಿಯಲ್ಲಿಯೇ ಇವರು ಕಪಾಲಭೇದದಲ್ಲಿ ಸಿದ್ಧಿಯನ್ನು ಸಾಧಿಸಿದ್ದರು. ಇವರು ತಪಸ್ಸಿನಲ್ಲಿ ಉಜ್ವಲತೆ ಮೆರೆದವರು. ಒಟ್ಟಿನಲ್ಲಿ ಇವರ ಜೀವನವು ಅತ್ಯಂತ ಪವಿತ್ರವಾದದ್ದು, ರೋಚಕವಾದದ್ದು ಹಾಗೂ ಎಲ್ಲರೂ ಅರಿಯಲೇಬೇಕಾದದ್ದು.

ವಾಸಿಷ್ಠ ಗಣಪತಿ ಮುನಿಗಳ ಜೀವನ ಚರಿತ್ರೆಯನ್ನು ಅವರ ಮೊಮ್ಮಗ ಶ್ರೀ.ಎ.ವಿ.ರಮಣ ಅವರು ತೆಲುಗಿನಲ್ಲಿ "ಮಹಾತಪಸ್ವಿ" ಎಂಬ ಶೀರ್ಷಿಕೆಯಲ್ಲಿ ರಚಿಸಿದ್ದು ಅದನ್ನು ಶ್ರೀಮತಿ ಶೊಂಠಿ ಅನಸೂಯಮ್ಮ ಅವರು ಆಂಗ್ಲ ಭಾಷೆಗೆ ಭಾಷಾಂತರಿಸಿರುವರು. ಅದನ್ನು ಆಧರಿಸಿ ಅದೇ ಶೀರ್ಷಿಕೆಯಡಿಯಲ್ಲಿ ಕನ್ನಡ ಭಾಷೆಗೆ ಭಾಷಾಂತರಿಸಿದ್ದೇನೆ. ಭಾಷಾಂತರಿಸುವ ಸಮಯದಲ್ಲಿ ನಾನು, ಮುನಿಗಳು ಉಮಾ ಸಹಸ್ರಂ ಕೃತಿಯನ್ನು ರಚಿಸಿದ್ದ ಸ್ಥಳವಾದ ಮಾವಿನ ತೋಪಿನ ಗುಹೆಗೆ ಹಾಗೂ ಅವರು ರಮಣ ಮಹರ್ಷಿಗಳೊಂದಿಗೆ ಅನೇಕ ದಿನಗಳು ಕಳೆದ ವಿರೂಪಾಕ್ಷ ಗುಹೆಗೂ ಹಾಗೂ ರಮಣಾಶ್ರಮಕ್ಕೂ ಅನೇಕ ಬಾರಿ ಭೇಟಿ ಕೊಟ್ಟು ಸ್ಫೂರ್ತಿಯನ್ನು ಪಡೆದಿದ್ದೇನೆ.

ಮೂಲ ಕೃತಿಯಲ್ಲಿ ಗಣಪತಿ ಮುನಿಗಳು ರಚಿಸಿದ ಪ್ರಕಟಿತ ಹಾಗೂ ಅಪ್ರಕಟಿತ ಅನೇಕ ಕೃತಿಗಳಿಂದ ಹಾಗೂ ಇತರ ಮಹಾನ್ ಕೃತಿಗಳಿಂದ ಶ್ಲೋಕಗಳನ್ನು ಸಂಸ್ಕೃತದಲ್ಲೇ ಉದ್ಧರಿಸಲಾಗಿದೆ. ಅವೆಲ್ಲವುಗಳನ್ನೂ ಆಂಗ್ಲ ಭಾಷೆಯಲ್ಲೂ ಆಯ್ದುಕೊಳ್ಳಲಾಗಿದೆ. ಅದೇ ರೀತಿ ಕನ್ನಡದಲ್ಲೂ ಎಲ್ಲ ಶ್ಲೋಕಗಳನ್ನೂ ಅರ್ಥಸಹಿತ ಪ್ರಸ್ತುತ ಪಡಿಸಲಾಗಿದೆ.

ಅನುವಾದಿತ ಕೃತಿಯನ್ನು ಪ್ರಕಟಿಸಲು ಅನುಮತಿ ನೀಡಿದ ರಮಣಾಶ್ರಮದ ಪದಾಧಿಕಾರಿಗಳಿಗೆ, ಪ್ರಕಟಿಸಲು ಮುಂದಾದ ಸಾಕ್ಷಿ ಟ್ರಸ್ಟ್ ಪದಾಧಿಕಾರಿಗಳಿಗೆ ನಾನು ಕೃತಜ್ಞನಾಗಿದ್ದೇನೆ.

ಅನುವಾದಕ್ಕೆ ಸಂಬಂಧಿಸಿದಂತೆ ಸೂಕ್ತ ಸಲಹೆ ನೀಡಿದ ಹಾಗೂ ಅನುವಾದದ ನಂತರ ಕೃತಿಯನ್ನು ಪರಿಶೀಲಿಸಿದ ಡಾ॥ ಜಯಂತಿ ಮನೋಹರ್ ಅವರಿಗೆ ಧನ್ಯವಾದಗಳು.

ಗುರುಪ್ರಸಾದ್ ಹಾಲ್ಕುರಿಕೆ

೧

ತಪಸ್ಸು

ಪ್ರಕೃತಿ ಮತ್ತು ಪುರುಷರು ಶಕ್ತಿ ಮತ್ತು ಈಶ್ವರರ ರೂಪಗಳು. ಸೃಷ್ಟಿ, ಸ್ಥಿತಿ, ಲಯಗಳಲ್ಲಿನ ಅಂತರ್ಗತ ಪರಿಶುದ್ಧ ಜ್ಞಾನ ತತ್ತ್ವವು ಪುರುಷ. ಶಕ್ತಿಯು ಮಾತೃವಾದರೆ, ಪುರುಷನು ಪಿತೃ. ಪುರಾಣಕಾಲದ ಮುನಿಗಳು ಭೂಮಿ, ಆಕಾಶ, ಅಗ್ನಿ, ವಾಯು, ಜಲ, ಸೂರ್ಯ, ಚಂದ್ರ ಮತ್ತು ಜೀವಗಳನ್ನು ಈ ಎರಡು ತತ್ತ್ವಗಳ ಎಂಟು ಅಭಿವ್ಯಕ್ತಿತ್ವವೆಂಬ ಸತ್ಯವನ್ನು ತಿಳಿಸಿಕೊಟ್ಟಿದ್ದಾರೆ. ಈ ಸತ್ಯದ ಹುಡುಕಾಟದಲ್ಲಿರುವ ಸಂಯಮವೇ ತಪಸ್ಸು. ಎಲ್ಲರ ಕೊನೆಯ ಗುರಿಯೇ ತಪಸ್ಸು. ಆದರೆ ಅನೇಕರು ಈ ಹಾದಿಯಲ್ಲಿ ಪ್ರಾಪಂಚಿಕ ಸುಖಗಳ ಅನ್ವೇಷಣೆಯಲ್ಲಿ ತೊಡಗಿರುತ್ತಾರೆ. ನಮ್ಮ ಪುರಾಣಗಳ ಪ್ರಕಾರ ಮಾನವ, ದೇವತೆ ಮತ್ತು ಅಸುರರು ಸತ್ಯಾನ್ವೇಷಣೆಯಲ್ಲಿ ತಪಸ್ಸನ್ನು ಮಾರ್ಗವನ್ನಾಗಿ ಆರಿಸಿಕೊಂಡಿದ್ದರು.

ಸತಿಯು ದಕ್ಷಪ್ರಜಾಪತಿಯ ಮಗಳು ಹಾಗೂ ಶಿವನ ಪತ್ನಿ. ದಕ್ಷಯಜ್ಞದಲ್ಲಿ ಸತಿಯು ಶಿವನಿಗಾದ ಅವಮಾನವನ್ನು ಸಹಿಸಲಾಗದೇ ಯಜ್ಞಕುಂಡದಲ್ಲಿ ಹಾರಿ ಪ್ರಾಣಬಿಟ್ಟಳು.

ಸತಿಯು ಮತ್ತೊಂದು ಜನ್ಮದಲ್ಲಿ ಹಿಮವಂತನ ಮಗಳು ಪಾರ್ವತಿಯಾಗಿ ಜನಿಸಿದಳು. ಶಿವನ ಪ್ರೀತಿಯನ್ನು ಗಳಿಸಲು ಅವಳು ತಪಸ್ಸನ್ನಾಚರಿಸಲು ತನ್ನ ಇಂಗಿತವನ್ನು ತನ್ನ ತಾಯಿ ಮೇನಕಳಿಗೆ ವ್ಯಕ್ತಪಡಿಸಿದಳು. ಮೇನಕೆಯು ತಪಸ್ಸಿನ ಹಾದಿಯು ಅತ್ಯಂತ ಕಠಿಣವಾಗಿದ್ದು ಅದನ್ನು ಅನುಸರಿಸಬೇಡ ಎಂದಳು.

ಮೇನಕಳು "ಉ" (ಓ ಪ್ರೀತಿಯ ಮಗಳೇ) "ಮಾ" (ದಯವಿಟ್ಟು ಬೇಡ) ಪದಗಳನ್ನು ಅವಳ ಮಗಳಿಗೆ ಹೇಳುವಾಗ ಉಪಯೋಗಿಸಿದಳು. ನಂತರ ಈ ಎರಡಕ್ಷರವನ್ನು ಸೇರಿಸಿ "ಉಮಾ" ಎಂಬ ಮತ್ತೊಂದು ಹೆಸರು ಪಾರ್ವತಿಗೆ ಬಂದಿತು.

ಕಾಳಿದಾಸನು ತನ್ನ ಮೇರು ಕೃತಿಯಾದ 'ಕುಮಾರ ಸಂಭವ'ದಲ್ಲಿ ಉಮಾ ಪದವನ್ನು ಉಪಯೋಗಿಸಿರುವನು. ಗಣಪತಿ ಮುನಿಗಳು ಈ ಪದಕ್ಕೆ ಬೇರೆಯದೇ ಆದ ಸುಂದರ ಅರ್ಥವನ್ನು ತಮ್ಮ ಮೇರು ಕೃತಿಯಾದ ಉಮಾಸಹಸ್ರಮ್‌ನಲ್ಲಿ ಈ ರೀತಿಯಾಗಿ ವಿವರಿಸಿದ್ದಾರೆ:

ಭವತ್ಯಸಾವತೋ ಭವಾನ್ಯನಾದಿರಂತವರ್ಜಿತಾ
ಜಗಂತಿ ಮಾತಿ ನಿತ್ಯಮೋರಸೌ ತದಭ್ಯುಧಾಯ್ಯುಮಾ

ರಸಾತ್ಮಿಕಾಶ್ಯತೇಽಖಿಲೈರಸೌ ತತಃ ಶಿವೋಚ್ಯತೇ
ಪರೈವಮೀಶಿತುಶ್ಶಕ್ತಿಸ್ತ್ರಿಧಾ ಬುಧೈರುದೀರ್ಯತೇ
– ಉಮಾಸಹಸ್ರಮ್ (1–2–9)

"ಸತ್ ಎಂಬ ಮಹಾನ್ ಶಕ್ತಿಸ್ವರೂಪದಲ್ಲಿ ಅನಂತಕಾಲದಲ್ಲಿ ಅಸ್ತಿತ್ವದಲ್ಲಿರುವುದರಿಂದ (ಭವ) ಈ ಶಕ್ತಿಯೇ ಭವಾನಿ. ವಿಶ್ವದ ಒಡೆಯನಾದ ಈಶ್ವರನನ್ನು ಅಳೆಯುವ ತತ್ತ್ವವಾದ್ದರಿಂದ ಅವಳನ್ನು ಉಮಾ ಎನ್ನುವರು. ಎಲ್ಲರೂ ಹಂಬಲಿಸುವ ಅನಂತ ಆನಂದ ಅವಳಾದ್ದರಿಂದ ಅವಳನ್ನು "ಶಿವಾ" ಎಂದೂ ಕರೆಯಲಾಗುವುದು. ಜ್ಞಾನಿಗಳು ಈಶ್ವರನ ಪರಾಚಿತ್‌ನ ಮೂರು ಶಕ್ತಿಗಳನ್ನು "ಭವಾನಿ", "ಉಮ" ಮತ್ತು "ಮ" ಎಂಬುದಾಗಿ ಗೊತ್ತುಪಡಿಸಿರುವರು.

ಇಲ್ಲಿ ಈಶ್ವರನ ಗುಣದ ಇತಿಮಿತಿಯನ್ನು ಉಮ ಎಂಬುದಾಗಿ ವರ್ಣಿಸಲಾಗಿದೆ. ಇದನ್ನು ಸೃಷ್ಟಿಯಲ್ಲಿನ ಸಹಜ ಶಕ್ತಿಯ ಮಿತಿಯನ್ನಾಗಿಯೂ ಅರ್ಥೈಸಬಹುದು. ಮಿತಿಯು (ಪಾರ್ವತಿಯು), ಇತಿಯೊಂದಿಗೆ (ಶಿವ) ಸೃಷ್ಟಿಕ್ರಿಯೆಯ ಮಾರ್ಗದಲ್ಲಿ ಒಂದಾಗಬೇಕಾದರೆ ಪಾರ್ವತಿಯು ತಪಸ್ಸನ್ನಾಚರಿಸಬೇಕು. ಪಾರ್ವತಿಯ ತಾಯಿಯ ಈ (ತಪಸ್ಸನ್ನಾಚರಿಸದೇ ಇರುವ) ರೀತಿಯನ್ನು ಉಮ ಎಂದು ವಿವರಿಸಿರುವುದು ಗಣಪತಿ ಮುನಿಗಳಿಗೆ ಹಿಡಿಸದೆ ಅವರು ಬೇರೆ ರೀತಿಯ ಹಾಗೂ ಹೆಚ್ಚಿನ ಅರ್ಥವನ್ನು "ಉಮ" ಪದಕ್ಕೆ ನೀಡಿದರು ಮತ್ತು ಆ ಕಾಲದ ವಿದ್ವಾಂಸರು ಗಣಪತಿ ಮುನಿಗಳ ಈ ಪ್ರಯತ್ನವನ್ನು ಬಹುವಾಗಿ ಮೆಚ್ಚಿಕೊಂಡರು. ತಪಸ್ಸಿನ ಮಾರ್ಗದಲ್ಲಿರುವವರು ತಮ್ಮ ಮೂಲಭೂತ ತತ್ತ್ವವನ್ನು ಯಾವುದೇ ಒತ್ತಡ ಬಂದರೂ ಬಿಟ್ಟುಕೊಡುವುದಿಲ್ಲ. ಅವರು ತಮ್ಮ ಸತ್ಯದ ಬಗೆಗಿನ ತಮ್ಮ ದೃಷ್ಟಿಕೋನವನ್ನು ಬಿಟ್ಟುಕೊಡದೆ ಆ ಮಾರ್ಗದಲ್ಲೇ ವಾಚಾ, ಮನಸಾ ಮುಂದುವರೆಯುತ್ತಾರೆ. ಇದು ತಪಸ್ಸಿನ ನೈಜ ದೃಷ್ಟಿ (ತಪೋ ದೃಷ್ಟಿ).

ನಮ್ಮ ಗ್ರಂಥಗಳು ತಪೋ ಲೋಕವನ್ನು ಏಳು ಲೋಕಗಳಲ್ಲಿ ಒಂದೆಂಬುದಾಗಿ – ಭೂ, ಭುವಃ, ಸುವಃ, ಮಹಃ, ಜನಃ, ತಪಃ ಮತ್ತು ಸತ್ಯಲೋಕಗಳು – ವಿವರಿಸುವುದು. ತಪಸ್ಸು ಎಂದರೆ ಗುರಿಯನ್ನು ತಲುಪಲು ಅನುಸರಿಸುವ ತೀವ್ರವಾದ ಮಾರ್ಗ. ವೇದಗಳ ಪ್ರಕಾರ ಇಡೀ ಸೃಷ್ಟಿಯೇ ಭಗವಂತನ ತಪಸ್ಸಿನ ಫಲ. ಸಮಸ್ತ ಸೃಷ್ಟಿಯು ಸದಾ ಆನಂದವನ್ನು ಅರಸುತ್ತಿರುತ್ತದೆ. ಐಹಿಕ ಸುಖಗಳನ್ನು ಪಡೆಯುವ ಉದ್ದೇಶದಿಂದ ಮಾಡುವ ತಪಸ್ಸನ್ನು ತೀವ್ರಗೊಳಿಸಿದಾಗ ಅದು ಆ ಮಾರ್ಗವನ್ನನುಸರಿಸುವ ಸಾಧಕನಿಗೆ ತೀವ್ರ ಹಿಂಸೆಯನ್ನುಂಟು ಮಾಡುತ್ತದೆ. ಭಗವಂತನ ಪಾದವನ್ನು ತಲುಪಲು ಮಾಡುವ ತಪಸ್ಸು ಅತ್ಯುತ್ತಮವಾದುದು.

ನಮ್ಮ ಪುರಾಣಗಳಲ್ಲಿ ವಿವರಿಸಿರುವಂತೆ ದೇವ ದಾನವರು ತಪಸ್ಸನ್ನಾಚರಿಸಿದರು. ಈ ರೀತಿಯ ತಪಸ್ಸಿನಲ್ಲಿ ಒಂದು ವಿಧವಾದ ಆಸೆ ಅಥವಾ ಉದ್ದೇಶ ಸಾಧನೆಗಳು ಇರುವುದು. ಇದನ್ನು ಪ್ರಪಂಚದ ಒಳಿತಿಗಾಗಿ ಅಥವಾ ಕೆಡುಕನ್ನುಂಟುಮಾಡುವುದಕ್ಕಾಗಿಯೂ

ಆಚರಿಸಬಹುದು. ಅಂಥಹ ತಪಸ್ಸಿಗೆ ಫಲವು ದೊರೆತಾಗ ಅದು ಆ ತಪಸ್ವಿಯ ತಪಸ್ಸಿನ ಉದ್ದೇಶದ ಮೇರೆಗೆ ಮನುಕುಲಕ್ಕೆ ಒಳಿತಾಗಬಹುದು ಅಥವಾ ಕೆಡುಕಾಗಬಹುದು. ತಪಸ್ಸು ಅದನ್ನಾಚರಿಸುವವನ ಅಂತರ್ಮುಖವಾಗಿ ಶಕ್ತಿಯನ್ನು ಹೆಚ್ಚಿಸುವುದು. ಆಧ್ಯಾತ್ಮಿಕ ಕ್ಷೇತ್ರದಲ್ಲಿ ತಪಸ್ಸನ್ನಾಚರಿಸಿದವರ ಮನಸ್ಸು ಶುದ್ಧವಾಗಿ ಅವರನ್ನು ಅಂತರಂಗದ ಆತ್ಮದೆಡೆಗೆ ಕೊಂಡೊಯ್ಯುತ್ತದೆ.

ತಪಸ್ಸಿನ ಮೂಲಕ ತಪಸ್ವಿಯು ಶಕ್ತಿ ಅಥವಾ ಸಿದ್ಧಿಯನ್ನು ಪಡೆಯಬಹುದು. ಒಮ್ಮೆ ಒಬ್ಬ ಸಾಧುವು ತನ್ನ ಶರೀರದಿಂದ ದಿವ್ಯ ಪರಿಮಳವು ಹೊರಬರುವ ಉದ್ದೇಶದಿಂದ ಹದಿನಾಲ್ಕು ವರ್ಷ ತಪಸ್ಸನ್ನಾಚರಿಸಿ ತನ್ನ ಆಸೆಯನ್ನು ಪೂರೈಸಿಕೊಂಡು ರಾಮಕೃಷ್ಣ ಪರಮಹಂಸರ ಬಳಿಸಾರಿ ತನ್ನ ಸಾಧನೆಯನ್ನು ಹೊಗಳಿಕೊಂಡ. ರಾಮಕೃಷ್ಣ ಪರಮಹಂಸರು ಮುಗುಳ್ನಕ್ಕು ಅವನು ತನ್ನ ಜೀವನದ ಅಮೂಲ್ಯವಾದ ಹದಿನಾಲ್ಕು ವರ್ಷಗಳನ್ನು ವ್ಯರ್ಥಗೊಳಿಸಿದನೆಂದು ಕನಿಕರಿಸಿದರು.

ಅನೇಕ ಸಾಧಕರು ತಪಸ್ಸನ್ನಾಚರಿಸುವುದು ಕೆಲವು ಆಸೆಗಳನ್ನು ಪೂರೈಸಿಕೊಳ್ಳಲು. ಅವರು ಸೂತ್ರಹರಿದ ಗಾಳಿಪಟದಂತೆ. ಅವರು ತಮಗೆ ಬೇಕಾದ ದೈವ ಅಥವಾ ಬೇರೆ ಯಾವುದೋ ಉದ್ದೇಶದೆಡೆಗೆ ತಮ್ಮ ದೃಷ್ಟಿಯನ್ನು ಕೇಂದ್ರೀಕರಿಸಿ ಅದು ಈಡೇರಿದ ಕೂಡಲೇ ಅಷ್ಟರಲ್ಲೇ ತೃಪ್ತಿಪಟ್ಟುಕೊಳ್ಳುವರು. ತಪಸ್ಸಿನ ಸಾಧನವಾದ ಮನಸ್ಸು ಸಾಧಕನನ್ನು ಸದಾ ಭ್ರಮೆಯಲ್ಲಿರಿಸುತ್ತದೆ ಮತ್ತು ಅವನು ತಾನಂದುಕೊಂಡದ್ದು ಸಾಧಿಸಿದರಷ್ಟೇ ಸಾಕೆಂದು ಹಾಗೂ ಅದೇ ಕಟ್ಟ ಕಡೆಯ ಸಾಧನೆಯೆಂದು ಯೋಚಿಸುತ್ತಾನೆ.

ಚಂಚಲ ಮನಸ್ಸನ್ನು ನಾಶಮಾಡುವುದೇ ತಪಸ್ಸು. ಸ್ಥಿರಮನಸ್ಸೇ ಚಂಚಲ ಮನಸ್ಸನ್ನು ನಾಶಮಾಡುವ ಮೊದಲ ಹೆಜ್ಜೆ. ಈ ಸ್ಥಿರತೆಯನ್ನು ಸಾಧಿಸಲು ಸಾಧಕರು ಪ್ರಶಾಂತವಾದ ಸ್ಥಳವನ್ನು ಹುಡುಕಿಕೊಂಡು ಹೋಗುವರು, ಮತ್ತೆ ಕೆಲವರು ಒಂಟಿ ಕಾಲಿನಲ್ಲಿ ನಿಂತೋ, ಅಥವಾ ತಲೆಕೆಳಕಾಗಿ ನಿಂತರೆ ಮಾತ್ರವೇ ತಪಸ್ಸೆಂದು ಭಾವಿಸುವರು. ಕೇವಲ ಸುಖಾಸನದಲ್ಲಿ ಕುಳಿತರೆ ಸಾಕು ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳಬಹುದು. ತಪಸ್ಸನ್ನಾಚರಿಸಲು ಕಾಡು, ಬೆಟ್ಟಗಳು, ಗುಹೆ, ನದೀ ತೀರಗಳು ಪ್ರಶಸ್ತ ಸ್ಥಳಗಳು. ಗಣಪತಿ ಮುನಿಗಳ ಪ್ರಕಾರ ಸ್ಥಿರ ಮನಸ್ಸನ್ನು ಹೊಂದಲು ಇಂಥದೇ ಜಾಗವು ಬೇಕೆಂದಿಲ್ಲ.

ತಪಸ್ಸಿನಿಂದ ಪಡೆದ ಶಕ್ತಿಯು ಅದನ್ನು ಉಪಯೋಗಿಸುವ ರೀತಿಯಿಂದ ಹೆಚ್ಚಾಗುವುದೋ ಅಥವಾ ಕಡಿಮೆಯಾಗುವುದೋ ಎಂಬುದನ್ನು ಅವಲಂಬಿಸಿದೆ. ಇದಕ್ಕೆ ಉದಾಹರಣೆಯೆಂದರೆ ಮಹರ್ಷಿ ವಿಶ್ವಾಮಿತ್ರ. ಅವರು ಹಲವಾರು ಬಾರಿ ತಮ್ಮ ತಪಸ್ಸಿನ ಶಕ್ತಿಯನ್ನು ತಮ್ಮ ಆಸೆಗಳನ್ನು ಪೂರೈಸಿಕೊಳ್ಳುವುದಕ್ಕೂ ಹಾಗೂ ಬೇರೊಬ್ಬರ ಆಸೆಯನ್ನು ಪೂರೈಸಲೋ ಉಪಯೋಗಿಸಿದ್ದರು.

ಆಧುನಿಕ ಕಾಲದಲ್ಲಿ ಗೃಹಸ್ಥರಾಗಿದ್ದುಕೊಂಡೇ ತಪಸ್ಸನ್ನಾಚರಿಸಬಹುದು. ಗಣಪತಿ ಮುನಿಗಳ ಜೀವನವೇ ತಪಸ್ಸಿಗೆ ಉದಾಹರಣೆ. ಈಗಿನ ಜನಾಂಗವು ತಪಸ್ಸಿನ ಪರಿಕಲ್ಪನೆಯನ್ನು ಸರಿಯಾಗಿ ಅರಿತಿಲ್ಲ. ಗಣಪತಿ ಮುನಿಗಳು ಪ್ರಾಯೋಗಿಕ ಪ್ರದರ್ಶನದ ಮೂಲಕ ತಪಸ್ಸಿನ ಪ್ರಾರಂಭದಿಂದ ಕೊನೆಯ ಹಂತದವರೆಗೂ ತೋರಿಸಿಕೊಟ್ಟರು. ತಪಸ್ಸಿನ ಪರಾಕಾಷ್ಠೆಯನ್ನು ತಲುಪಲು ಅವರು ರಮಣ ಮಹರ್ಷಿಗಳಲ್ಲಿ ಸಂಪೂರ್ಣವಾಗಿ ಶರಣಾದರು.

ಗಣಪತಿ ಮುನಿಗಳನ್ನು ಕಾವ್ಯ ರಚನೆಯಲ್ಲಿ ಕಾಳಿದಾಸನ ಮತ್ತು ಶಂಕರಾಚಾರ್ಯರಿಗೆ ಸಮವೆಂದು ಪರಿಗಣಿಸುತ್ತಿದ್ದರು. ಅವರು ವೈದ್ಯ ಜ್ಞಾನದಲ್ಲಿ ಚರಕ, ಜ್ಯೋತಿಷ್ಯ ಶಾಸ್ತ್ರದಲ್ಲಿ ಪರಾಶರ ಮತ್ತು ಖಗೋಳಶಾಸ್ತ್ರದಲ್ಲಿ ವರಾಹಮಿಹಿರರಿಗೆ ಸಮವೆಂದು ಪರಿಗಣಿಸಿದ್ದರು. ಅವರು ಯಾವುದೇ ದೇವರನ್ನು ಕುರಿತು ಧ್ಯಾನ ಮಾಡಲು ತೊಡಗಿದರೆ ಆ ದೈವವನ್ನು ಪ್ರತ್ಯಕ್ಷ ಮಾಡಿಕೊಳ್ಳುತ್ತಿದ್ದರು. ಅವರು ತಮ್ಮ ಜೀವಿತಾವಧಿಯಲ್ಲೇ ಕಪಾಲಭೇದನ ಸಿದ್ಧಿಯನ್ನು ಸಾಧಿಸಿದ್ದರು. ಅವರು ರಮಣ ಮಹರ್ಷಿಗಳ ಶಿಷ್ಯರಾಗಿ ವಿನಯ ಮತ್ತು ಸನ್ನಡತೆಗೆ ಮಾದರಿಯಾಗಿದ್ದರು. ಅವರು ತಪಸ್ಸಿಗೆ ಜೀವಂತ ನಿದರ್ಶನವಾಗಿದ್ದ "ಮಹಾತಪಸ್ವಿ".

೧

ಹಿರಣ್ಯಗರ್ಭ

ನಭೋಽನ್ತರೇ ಪ್ರಚಕ್ಷತೇ ಹಿರಣ್ಮಯಾಂಗಮೀಶ್ವರಂ
ದಿನೇಶಬಿಂಬಪೂರುಷಂ ಹಿರಣ್ಯಗರ್ಭಮಾಖ್ಯಯಾ
ವಿರಾಜಮಾನಮಕ್ಷರಂ ವಿರಾಜಮಂತರೇ ನೃಣಾಂ
ಸವಿತ್ರಿ ತತ್ತ್ವವೇದಿನಾಮಿಯಂ ತಿ ನಾಮಕಲ್ಪನಾ
– ಉಮಾಸಹಸ್ರಮ್ (1–2–21)

"ಸವಿತ್ರಿಯಾದ ಮಾತೆಯೇ! ಆಕಾಶದಲ್ಲಿರುವ ಈಶ್ವರನನ್ನು ಹಿರಣ್ಮಯಾಂಗನೆಂದು ಕರೆಯುವರು. ಸೂರ್ಯಮಂಡಲದಲ್ಲಿರುವ ಈಶ್ವರನನ್ನು ಹಿರಣ್ಯಗರ್ಭನೆಂದೂ, ಮನುಷ್ಯರ ಹೃದಯಗಳಲ್ಲಿ ವಿರಾಜಮಾನನಾಗಿರುವವನನ್ನು (ಪ್ರಕಾಶಿಸುತ್ತಿರುವವನನ್ನು) ವಿರಾಜನೆಂದೂ ವೇದಾಂತಿಗಳು ನಾಮಕಲ್ಪನೆ ಮಾಡುವರು."

ಯಾವಾಗ ಸದಾಚಾರದ ಉಲ್ಲಂಘನೆಯಾಗುವುದೋ, ಯಾವಾಗ ಜನಗಳು ಸನ್ಮಾರ್ಗವನ್ನು ತೊರೆಯುತ್ತಾರೋ ಮತ್ತು ದುಷ್ಟತನದ ಪ್ರಾಬಲ್ಯವಾಗುವುದೋ ಅಗ ಹಿರಣ್ಯಗರ್ಭನಿಂದ ಬೆಳಕಿನ ಕಿರಣವೊಂದು ಅವತಾರ ರೂಪದಲ್ಲಿ ಭೂಮಿಯ ಮೇಲೆ ಕೆಳಗಿಳಿಯುತ್ತದೆಂದು ಹಿರಿಯರು ವಿವರಿಸುತ್ತಾರೆ. ಗೀತೆಯಲ್ಲಿ ಭಗವಾನ್ ಶ್ರೀಕೃಷ್ಣನೂ ಇದನ್ನೇ ಹೇಳುತ್ತಾನೆ.

ಈ ಅವತಾರಗಳು ಅನೇಕ ವಿಧವಾಗಿರುವುದು: ಪರಿಪೂರ್ಣ, ಆವೇಶ (ಭಾವನಾತ್ಮಕ), ಅಂಶ (ಭಾಗಶಃ) ಮತ್ತು ಕಾಲ. ಇದಲ್ಲದೇ ಇನ್ನೂ ಕೆಲವೆಂದರೆ ಋಷಿ, ಮುನಿ (ತಪಸ್ವಿ), ಪ್ರಚಾರಕ, ದೂತ (ಸಂದೇಶವಾಹಕ), ಮತ್ತು ಕುಮಾರ ಅವತಾರಗಳು. ಅವತಾರ ಪುರುಷರು ಭೂಮಿಯ ಮೇಲೆ ಅವತರಿಸುವ ಮೊದಲು ಸಾಮಾನ್ಯವಾಗಿ ಕೆಲವು ಅಸಾಮಾನ್ಯ ಘಟನೆಗಳು ಘಟಿಸುವುದು. ಉಮಾಸಹಸ್ರಮ್ ಕೃತಿಯ ಕವಿಗಳಾದ ಶ್ರೀಗಣಪತಿ ಮುನಿಗಳು ಜನಿಸುವ ಸಮಯದಲ್ಲೂ ಇಂತಹ ಘಟನೆಗಳು ಘಟಿಸುತ್ತವೆ.

ಗಣಪತಿಮುನಿಗಳು ವಸಿಷ್ಠಗೋತ್ರದ ಶ್ರೀವಿದ್ಯಾ ದೀಕ್ಷೆಗೆ ಸೇರಿದ ಒಂದು ಕುಟುಂಬಕ್ಕೆ ಸೇರಿದವರು. ಈ ಕುಟುಂಬವು ತಮಿಳುನಾಡಿನ ಕುಂಭಕೋಣಮ್ ಪ್ರಾಂತ್ಯದ ಬಳಿಯಲ್ಲಿನ

ವೆಲಿಗೈಮಾರ್ ಹಳ್ಳಿಯಿಂದ ಕ್ರಿ.ಶ. 16ನೇ ಶತಮಾನದ ಅಂತ್ಯದಲ್ಲಿ ಅಥವ 17ನೇ ಶತಮಾನದ ಅವಧಿಯಲ್ಲಿ ಕೆಲವು ವಡಮ ಬ್ರಾಹ್ಮಣ ಕುಟುಂಬಗಳು ಆಂಧ್ರಪ್ರದೇಶಕ್ಕೆ ವಲಸೆ ಬಂದು ಗೋದಾವರೀ ತೀರದಲ್ಲಿ ನೆಲೆಸಿದ ಗುಂಪಿಗೆ ಸೇರಿದವರು. ಈ ಕುಟುಂಬಗಳು ದಕ್ಷಿಣದ ದ್ರಾವಿಡ ದೇಶದಿಂದ ಬಂದವರಾದ್ದರಿಂದ ಅವರನ್ನು ದ್ರಾವಿಡ ಬ್ರಾಹ್ಮಣರು ಎಂದು ಗುರುತಿಸಲಾಯಿತು. ಈ ಕುಟುಂಬಗಳಲ್ಲಿ ವಸಿಷ್ಠ, ಮಿತ್ರಾವರುಣ ಮತ್ತು ಕೌಂಡಿಣ್ಯ ಋಷಿಗಳ ಸಂತತಿಯಾದ "ಅಯ್ಯಲ ಸೋಮಯಾಜುಲ" ಕುಟುಂಬವು ಸುಪ್ರಸಿದ್ಧವಾದುದು. ಆ ಕುಟುಂಬದ ಚಿಕ್ಕ ಮಗ, ಎಲ್ಲನ್ನ, ಎಂಬುವನು ಪೂರ್ವ ದಿಕ್ಕಿನ ವಿಜಯನಗರ ಪ್ರಾಂತ್ಯದೆಡೆಗೆ ವಲಸೆ ಹೋದನು. ಕ್ರಮೇಣವಾಗಿ ಅವನ ವಂಶಸ್ಥರು, ಬೊಬ್ಬಿಲಿ, ಸೀತಾನಗರಮ್, ಪಾರ್ವತೀಪುರಮ್ ಮತ್ತು ಪಾಲಕೊಂಡ ಪ್ರಾಂತ್ಯಗಳಲ್ಲಿ ವಾಸಿಸತೊಡಗಿದರು. ಆ ವಂಶದ ಏಳನೇ ತಲೆಮಾರಿನ ನೃಸಿಂಹ ಶಾಸ್ತ್ರಿಗಳ ಕುಟುಂಬವು ಬೊಬ್ಬಿಲಿ ಪ್ರಾಂತ್ಯದ, ಕಲುವರ್ರೈ ಹಳ್ಳಿಯಲ್ಲಿ ನೆಲೆಸಿದರು. ಅವರ ವಂಶದವರು ಆ ಪ್ರದೇಶದಲ್ಲಿ "ಅಯ್ಯಾಲಸೋಮಯಾಜುಲು" ಕುಟುಂಬದವರೆಂದು ಪ್ರಖ್ಯಾತರಾದರು.

ಆಂಧ್ರಪ್ರದೇಶದ ಶ್ರೀಕಾಕುಳಂ ಪಟ್ಟಣದಿಂದ ಎರಡು ಕಿ.ಮೀ ದೂರದಲ್ಲಿ ಅರಸವಲ್ಲಿ ಎಂಬ ಒಂದು ಸಣ್ಣ ಹಳ್ಳಿ ಇರುವುದು. ಈ ಹಳ್ಳಿಯಲ್ಲಿ 7 ಅಥವಾ 8ನೇ ಶತಮಾನದಲ್ಲಿ ಪೂರ್ವ ಕಳಿಂಗ ವಂಶದ ಅರಸರು ನಿರ್ಮಿಸಿದ ಸುಪ್ರಸಿದ್ಧ ಸೂರ್ಯನಾರಾಯಣ ದೇಗುಲವಿರುವುದು. ಈ ದೇಗುಲದಲ್ಲಿರುವ ಕಪ್ಪು ಶಿಲೆಯ ಸೂರ್ಯನಾರಾಯಣ ವಿಗ್ರಹವು ಶಕ್ತಿಯುತ ಕಂಪನಗಳನ್ನೊಳಗೊಂಡಿರುವುದು. ಈ ದೇಗುಲದ ವೈಶಿಷ್ಟವೆಂದರೆ ಪ್ರತಿದಿನವೂ ಮುಂಜಾನೆಯ ಸೂರ್ಯಕಿರಣವು ವಿಗ್ರಹದ ಕಿರೀಟಭಾಗದ ಮೇಲೆ ಬೀಳುವುದು. ಇದನ್ನು ವೀಕ್ಷಿಸಲು ಬಹು ದೂರದಿಂದ ಭಕ್ತಾದಿಗಳು ಬರುವುದರಿಂದ ಇದು ಒಂದು ಬಹು ಮುಖ್ಯವಾದ ತೀರ್ಥಕ್ಷೇತ್ರ.

ಶ್ರೀಕಾಕುಳಂ ಪಟ್ಟಣದಿಂದ ಹದಿನೈದು ಮೈಲಿ ದೂರದಲ್ಲಿರುವ ಕಲುವರ್ರೈ ಹಳ್ಳಿಯಿಂದ ಒಂದು ಬ್ರಾಹ್ಮಣ ಕುಟುಂಬವೊಂದು 1878 ನೇ ಇಸವಿಯ ಮಾಘ (ಫೆಬ್ರವರಿ) ಹುಣ್ಣಿಮೆ ದಿನದಂದು ಅರಸವಲ್ಲಿ ಕ್ಷೇತ್ರಕ್ಕೆ ಎತ್ತಿನ ಬಂಡಿಯಲ್ಲಿ ಪಯಣ ಮಾಡುವ ಮೂಲಕ ಆಗಮಿಸಿತು. ಆ ಕುಟುಂಬದ ಆಗಮನದ ಉದ್ದೇಶವೆಂದರೆ ತಮ್ಮ ಜ್ಯೇಷ್ಠ ಪುತ್ರನ ಚೌಲಕರ್ಮವನ್ನು ನೆರವೇರಿಸುವುದಾಗಿತ್ತು.

ಈ ಕುಂಟುಂಬದ ಮುಖ್ಯಸ್ಥರೇ ಅಯ್ಯಾಲಸೋಮಯಾಜುಲ ನೃಸಿಂಹಶಾಸ್ತ್ರಿ. ಅವರೊಡನೆ ಅವರ ಪತ್ನಿ ನರಸಾಂಬ ಹಾಗೂ ನಾಲ್ಕು ವರ್ಷದ ಭೀಮಾ ಶಾಸ್ತ್ರಿಗಳೂ ಆಗಮಿಸಿದ್ದರು. ನೃಸಿಂಹ ಶಾಸ್ತ್ರಿಯು ಜ್ಯೋತಿಷ್ಯ ಹಾಗೂ ವೈದ್ಯವಿದ್ಯೆಯಲ್ಲಿ ಪರಿಣತರು ಹಾಗೂ ಸುಪ್ರಸಿದ್ಧ ಶ್ರೀವಿದ್ಯಾ ಉಪಾಸಕರು. ಅವರ ಪತ್ನಿಯು ಪರಮ ದೈವಭಕ್ತಳು. ಒಮ್ಮೆ ಅವರ ಮಗು ಭೀಮಾಶಾಸ್ತ್ರಿಗೆ ವಿಪರೀತ ಜ್ವರ ಬಂದಾಗ ಅವನು ಗುಣಮುಖನಾದರೆ

ಕೂಡಲೇ ಅರಸವಲ್ಲಿಯ ಮಂದಿರದಲ್ಲಿ ಅವನ ಚೌಲ ಕರ್ಮಗಳನ್ನು ಮಾಡುವುದಾಗಿ ಅವನ ತಂದೆ ತಾಯಿಗಳು ಹರಸಿಕೊಂಡಿದ್ದರು.

ಚೌಲ ಕರ್ಮಗಳೆಲ್ಲಾ ಮುಗಿದ ನಂತರ ಅವರುಗಳು ಮಂದಿರ ಪ್ರವೇಶ ಮಾಡಿ ಸೂರ್ಯದೇವನ ದರ್ಶನ ಪಡೆದು ಅಲ್ಲೇ ಆ ದಿನ ರಾತ್ರೆ ತಂಗಿದರು. ರಾತ್ರಿ ನರಸಾಂಬಳಿಗೆ ಕನಸಿನಲ್ಲಿ ಒಂದು ದೈವವು ತನ್ನ ಹಸ್ತದಲ್ಲಿ ಅಗ್ನಿಯಿಂದ ಕೂಡಿದ ಒಂದು ಕೊಳಗವನ್ನು ಹಿಡಿದುಕೊಂಡು ಸೂರ್ಯನಾರಾಯಣ ವಿಗ್ರಹದಿಂದ ಹೊರಬಂದು ಮೆಲ್ಲನೆ ನಡೆದು ಬಂದು ನರಸಾಂಬಳ ಕೈಯಲ್ಲಿ ಕೊಳಗವನ್ನು ಇರಿಸಿ ಮಾಯವಾದಂತೆ ಕಾಣಿಸಿತು. ಬೆಳಗಾದೊಡನೇ ಈ ವಿಷಯವನ್ನು ಅವಳು ತನ್ನ ಪತಿಗೆ ವಿವರಿಸಿದಳು. ನೃಸಿಂಹಶಾಸ್ತ್ರಿಯು ಶ್ರೀವಿದ್ಯಾ ಉಪಾಸಕನಾದ್ದರಿಂದ ಅವನಿಗೆ ಇದರ ವಿಶೇಷತೆ ಅರಿವಾಗಿ ಅವನು ದೇಗುಲದಲ್ಲಿನ ಗೋಪುರದ ತುದಿಯನ್ನು ವೀಕ್ಷಿಸಿದನು. ಕನಸಿನಲ್ಲಿ ಸೂರ್ಯನಾರಾಯಣ ವಿಗ್ರಹದಿಂದ ಹೊರಬಂದ ದೈವವೇ "ಹಿರಣ್ಯಗರ್ಭ" ಎಂಬುದು ಅರಿವಾಯಿತು. ಅವನು ತನ್ನ ಪತ್ನಿಗೆ, ತಮಗೆ ಸೂರ್ಯ ಶಕ್ತಿಯನ್ನೊಳಗೊಂಡ ಒಂದು ಮಗುವಾಗುವಂತೆ ಸೂರ್ಯನಾರಾಯಣನು ಆಶೀರ್ವದಿಸಿರುವನೆಂದು ತಿಳಿಸಿದನು. ಸಂತೋಷದಿಂದ ಆ ಕುಟುಂಬವು ತಮ್ಮ ಮನೆಗೆ ಮರಳಿದರು. ಕೆಲವು ದಿನಗಳಲ್ಲೇ ನರಸಾಂಬಳು ಗರ್ಭವತಿಯಾದಳು.

೩

ನವಾಕ್ಷರದ ಸತ್ಯತೆ

ಭಗವತಿ ನಿಜೌ ಸಾಕ್ಷಾತ್ಪುತ್ರೌ ಬೃಹಸ್ಪತಿಪಾವಕೌ
ಗಣಪತಿಗುಹಾವೇತೌ ವೇಷಾಂತರವ್ಯವಹಾರತಃ
ಭರತಧರಣೀಖಂಡೇ ಹೇತೋಃ ಕೃತಸಂಭವೌ
ಕಲಕಲಯತೇ ಕಾಲೇ ದೇವಿ ವ್ಯಧಾಃ ಕಥಯ ದ್ರುತಂ ॥
– ಉಮಾಸಹಸ್ರಮ್ (9–34–7)

"ತಾಯೇ! ನಿನ್ನ ಮಕ್ಕಳೇ ಆದ ಬೃಹಸ್ಪತಿ ಮತ್ತು ಅಗ್ನಿ, ಬೃಹಸ್ಪತಿಯನ್ನು ಗಣಪತಿಯ ವೇಷದಲ್ಲೂ ಪಾವಕನನ್ನು ಗುಹನ ವೇಷದಲ್ಲೂ ಇರುವ – ಭರತಖಂಡದಲ್ಲಿ ಕೋಲಾಹಲವುಳ್ಳ ಈ ಕಾಲದಲ್ಲಿ ಏತಕ್ಕೆ, ಯಾವ ಕಾರಣದಿಂದ ಜನಿಸುವಂತೆ ಮಾಡಿದೆ? ದಯವಿಟ್ಟು ಹೇಳು."

ನೃಸಿಂಹ ಶಾಸ್ತ್ರಿಗಳು ತಮ್ಮ ಪತ್ನಿಗೆ ಗರ್ಭಾವಸ್ಥೆಯ ಏಳು ತಿಂಗಳ ಸಂದರ್ಭದಲ್ಲಿ ಅವಳನ್ನು ಅವಳ ತವರು ಮನೆಗೆ ಹೆರಿಗೆಗಾಗಿ ಕರೆತಂದು ಅವಳ ಯೋಗಕ್ಷೇಮವನ್ನು ತನ್ನ ಸಹೋದರ ಪ್ರಕಾಶ ಶಾಸ್ತ್ರಿಗೆ ವಹಿಸಿ ತಾವು ವಾರಣಾಸಿಗೆ ಕಾರ್ತಿಕ ಮಾಸದಲ್ಲಿ ಗಂಗೆಯಲ್ಲಿ ಮಿಂದು ವಿಶ್ವೇಶ್ವರ ಮಂದಿರಕ್ಕೆ ಭೇಟಿಕೊಡಲು ತೆರಳಿದರು.

ವಾರಣಾಸಿಯನ್ನು ತಲುಪಿ ಗಂಗೆಯಲ್ಲಿ ಮಿಂದು ಅಲ್ಲಿರುವ ಮುಖ್ಯ ದೇವರುಗಳಾದ ವಿಶ್ವೇಶ್ವರ ಹಾಗೂ ಅನ್ನಪೂರ್ಣಾದೇವಿ ಗುಡಿಗೆ ಹೋದರು.

ಭಕ್ತಿ ಎಂದರೆ ತಡೆರಹಿತವಾಗಿ ಹರಿಯುವ ಭಗವಂತನ ಅನುಗ್ರಹ. ಭಕ್ತಿಯು ಅದನ್ನು ಅನುಸರಿಸುವ ಭಕ್ತನ ಆಸೆ ಆಕಾಂಕ್ಷೆಗಳನ್ನು ಅನುಗ್ರಹಿಸುವುದು. ಆದರೆ ಮನುಷ್ಯನು ತನ್ನೆಲ್ಲ ಶಕ್ತಿಯನ್ನೂ ಸ್ವಾರ್ಥಪೂರಿತ ಆಸೆಗಳನ್ನು ಈಡೇರಿಸಿಕೊಳ್ಳುವುದಕ್ಕಾಗಿ ಕಳೆದುಕೊಳ್ಳುವನು.

ನೃಸಿಂಹ ಶಾಸ್ತ್ರಿಗಳು ಸೂಕ್ಷ್ಮದೃಷ್ಟಿಯುಳ್ಳ ಹಾಗೂ ಜೀವನದ ಬೆಲೆಯನ್ನರಿತವರು. ಅವರು ತನ್ನೆಲ್ಲಾ ಜೀವನದಲ್ಲೂ ಭಗವಂತನಲ್ಲಿ ಅನನ್ಯ ಭಕ್ತಿಯನ್ನು ಬೆಳೆಸಿಕೊಂಡವರು ಮತ್ತು ಇದು ಅವರಿಗೆ ಅರಸವಲ್ಲಿಯ ಸೂರ್ಯದೇವ ನೀಡಿದ ಅನುಗ್ರಹ.

ಬಹುಧಾನ್ಯನಾಮ ಸಂವತ್ಸರದ ಕಾರ್ತೀಕ ಮಾಸದ ಶುಕ್ಲಪಕ್ಷದ ಎಂಟನೇ ದಿನದಂದು ನೃಸಿಂಹ ಶಾಸ್ತ್ರಿಗಳು ಕಾಶಿಯಲ್ಲಿನ ವಿಶ್ವೇಶ್ವರ ಮಂದಿರದ ಬಳಿ ದುಮ್ಹಿ ಗಣಪತಿ ವಿಗ್ರಹದೆದುರಿಗೆ ಸೂರ್ಯೋದಯವಾದ ಎರಡು ಘಳಿಗೆಯ ಸಮಯದಲ್ಲಿ ಕುಳಿತು ನವಾಕ್ಷರ ಗಣಪತಿ ಮಂತ್ರವನ್ನು ಜಪಿಸುತ್ತಾ ತದೇಕಚಿತ್ತದಿಂದ ವಿಗ್ರಹವನ್ನೇ ವೀಕ್ಷಿಸುತ್ತಿರುವಾಗ ಅವರಿಗೆ ವಿಗ್ರಹದಿಂದ ಒಂದು ಸಣ್ಣ ಮಗುವು ಅಂಬೆಗಾಲನ್ನು ಇಟ್ಟುಕೊಂಡು ಹೊರಬಂದು ಇವರ ತೊಡೆಯ ಮೇಲೆ ಕುಳಿತಂತೆ ಅನುಭವವಾಯಿತು. ಆಗಲೇ ಶಾಸ್ತ್ರಿಗಳಿಗೆ ತಮ್ಮ ತಪಸ್ಸಿಗೆ ಸಾರ್ಥಕವಾದ ಫಲವು ದೊರಕಿತೆಂದು ಅನಿಸಿತು. ಅವರ ಕಣ್ಣುಗಳಿಂದ ಧಾರಾಕಾರವಾಗಿ ಆನಂದಾಶ್ರುವು ಹೊರಬಂದು ಆ ದರ್ಶನವು ತಮಗೆ ಪುತ್ರ ಜನನವಾಗಿರುವುದರ ಸೂಚನೆಯೆಂದು ಗ್ರಹಿಸಿ ತಮ್ಮೂರಿಗೆ ಹೊರಟರು.

ಅವರು ಕಲುವರ್ರೈ ಪಟ್ಟಣವನ್ನು ತಲುಪುತ್ತಿದ್ದಂತೆ ಪುತ್ರನ ಜನನದ ಸುದ್ದಿ ತಿಳಿದುಬಂದು ಕೂಡಲೇ ಅವರು ಪತ್ನಿ ಪುತ್ರರಿರುವ ಲೋಗೀಶ ಅಗ್ರಹಾರದೆಡೆಗೆ ಪಯಣಿಸಿದರು. ಅವರಿಗೆ ತಿಳಿದು ಬಂದ ಮತ್ತೊಂದು ಆಶ್ಚರ್ಯಕರವಾದ ಸುದ್ದಿಯೆಂದರೆ ತಮ್ಮ ಪುತ್ರನ ಜನನದ ಸಮಯವೂ ಹಾಗೂ ಕಾಶಿಯಲ್ಲಿ ತಮ್ಮ ತೊಡೆಯ ಮೇಲೆ ಒಂದು ಶಿಶುವು ವಿನಾಯಕನ ವಿಗ್ರಹದಿಂದ ಹೊರಬಂದು ಕುಳಿತಂತೆ ಭಾಸವಾದ ಸಮಯವೂ ಒಂದೇ ಎಂಬುದು. ಹೀಗೆ ನೃಸಿಂಹಶಾಸ್ತ್ರಿಯವರಿಗೆ 17–11–1878 ರಂದು ದೈವೀಶಿಶುವಿನ ಜನನವಾಯಿತು.

ಈ ದೈವೀ ಶಿಶುವು ಸೂರ್ಯದೇವನ ಹಾಗೂ ಗಣಪತಿಯ ಅನುಗ್ರಹದಿಂದ ಜನಿಸಿದವನಾದ್ದರಿಂದ ಮಗುವಿಗೆ "ಸೂರ್ಯ ಗಣಪತಿ" ಎಂದು ಶಾಸ್ತ್ರೋಕ್ತವಾಗಿ ನಾಮಕರಣ ಮಾಡಲಾಯಿತು.

"ಗಣಪತಿ ಸೂಕ್ತ" ದಲ್ಲಿ ಈಶಪುತ್ರ ಗಣಪತಿಯನ್ನು ಕಾವ್ಯದ ದೈವ ಮತ್ತು ಸಮಸ್ತ ಜ್ಞಾನದ ದೈವ (ಬ್ರಹ್ಮಣಸ್ಪತಿ ಮತ್ತು ಬೃಹಸ್ಪತಿ)ವೆಂದು ವರ್ಣಿಸಲಾಗಿದೆ. ಗಣಪತಿಯೇ ವ್ಯಾಸಮಹರ್ಷಿಗಳು ವೇದವನ್ನು ವಿಭಾಗಿಸಿ ಹೇಳಿದ್ದನ್ನು ಸ್ಫುಟವಾಗಿ ಬರೆದವನು. ಅದೇ ಗಣಪತಿಯೇ ಸ್ವಯಂ ನೃಸಿಂಹಶಾಸ್ತ್ರಿಗಳ ಪುತ್ರ ಸೂರ್ಯ ಗಣಪತಿಯಾಗಿ ಅವತರಿಸಿ ನಂತರ ವಿಶ್ವಗುರುಗಳಾದ ಭಗವಾನ್ ಶ್ರೀರಮಣ ಮಹರ್ಷಿಗಳ ಶಿಷ್ಯರಾದವರು. ಗಣಪತಿಯು ಯುವ ಮುನಿಗೆ "ಮಹರ್ಷಿ" ಎಂದು ಘೋಷಿಸಿ ಮತ್ತು "ರಮಣ" ಎಂಬ ಹೆಸರನ್ನಿಟ್ಟನು. ಈ ಸಮಯದಲ್ಲಿ ಗಣಪತಿ ಭಗವಾನನು ಗಣಪತಿ ಮುನಿಯ ರೂಪದಲ್ಲಿ ಬಂದು ಶ್ರೀರಮಣರಿಗೆ ಲಿಪಿಕಾರ (ಬರಹಗಾರ)ರಾದರು. ಅವರು "ಶ್ರೀ ರಮಣ ಗೀತ" ಮತ್ತು ಅನೇಕ ಗ್ರಂಥಗಳನ್ನು ರಚಿಸಿದರು.

ಯದ್ದೀ ಪಾದ್ರಮಣಾಖ್ಯಾದೂವ್ಯಾಪ್ತಂ ಗಾಣಪತೀಷು
ವಾಣೀ ಭಿತ್ತಿಷು ಧತ್ತೇ ಗೀತಾ ಚಿತ್ರ ವಿಲಾಸಂ

ಆಲಂಬೇನ ವಿಹೀನಂ ವ್ಯೋಮಾಭಂ ಪರಿಪೂರ್ಣಮ್
ನಿಶ್ಶಬ್ದಂ ಗುರು ರೂಪಂ ತದ್ವಹ ಸ್ಫುರತಾನ್ಮೆ ॥
– ಗುರು ಗೀತಮ್

"ಶ್ರೀ ರಮಣ ಎಂಬ ದೀಪದಿಂದ ಹೊಮ್ಮುವ ಆಧಾರರಹಿತ, ಆಕಾಶದಂತೆ ಸೂಕ್ಷ್ಮ ಮತ್ತು ಸಂಪೂರ್ಣ ನಿಶಬ್ದವಾದ ಮತ್ತು ಗೋಡೆಯ ಮೇಲೆ ಶ್ರೀ ಗಣಪತಿಯ ನುಡಿಗಳ ಭಿತ್ತಿಯ ಮೇಲೆ ಚಿತ್ರಗಳಂತೆ ಮೂಡಿದ ಗುರುವಿನ ಆ ರೂಪವು "ರಮಣ ಗೀತ" ಎಂದು ನನ್ನಲ್ಲಿ ಅಂತರ್‌ದೃಷ್ಟಿಯನ್ನುಂಟು ಮಾಡಲಿ.

೪

ಕುಟುಂಬ

ಏತಾಮಾಹುರವಿದ್ಯಾಂ ಬೀಜಂ ಸಂಸಾರವೃಕ್ಷರಾಜಸ್ಯ
ಸರ್ವರಸಫಲಯುತಸ್ಯ ಪ್ರಾರಬ್ಧಜಲೇನ ದೇವಿ ದೋಹದಿನಃ ॥
– ಉಮಾಸಹಸ್ರಮ್ (1–4–13)

'ಓ, ದೇವಿ! ಜನನ–ಮರಣಗಳ ವೃಕ್ಷದಲ್ಲಿ ಎಲ್ಲ ವಿಧದ ರುಚಿಗಳ ಹಣ್ಣುಗಳಿವೆ. ಈ ವೃಕ್ಷದ ಬೀಜವನ್ನೇ ಅವಿದ್ಯೆ ಎನ್ನುವರು. ಪ್ರಾರಬ್ಧ ಅಥವಾ ಪೂರ್ವ ಕರ್ಮವೆಂಬ ಜಲವು ಈ ವೃಕ್ಷವನ್ನು ಪೋಷಿಸಿದೆ.

ಇಲ್ಲಿ, ಭೂಮಿಯ ಮೇಲಿನ ಜೀವನವನ್ನು ವೃಕ್ಷಕ್ಕೆ ಹೋಲಿಸುವರು. ಅಜ್ಞಾನ (ಅವಿದ್ಯಾ) ಇದರ ಬೀಜ; ಭಾವನೆಗಳಾದ ಶೃಂಗಾರಗಳೇ ಇದರ ರಸ; ಉದ್ದೇಶವೇ ಇದರ ಹಣ್ಣುಗಳು (ಫಲ) ಮತ್ತು ಜಲವು ಇದರ ಪೂರ್ವ ಕರ್ಮಗಳು (ಪ್ರಾರಬ್ಧ ಕರ್ಮ)."


ತಮಿಳುನಾಡಿನ ಕುಂಭಕೋಣಂ ನಗರದ ಬಳಿ ವಲಂಗೈಮನ್ ಎಂಬ ಹಳ್ಳಿ ಇರುವುದು. ಈ ಹಳ್ಳಿಯಿಂದ ಕೆಲವು ವಡಮ ಬ್ರಾಹ್ಮಣರ ಸಂಸಾರಗಳು ಕೆಲವು ಶತಮಾನಗಳ ಹಿಂದೆ ಆಂಧ್ರ ಪ್ರದೇಶದೆಡೆಗೆ ವಲಸೆ ಹೋಗಿ ಅಲ್ಲಿನ ಗೋದಾವರಿ ನದಿ ದಡದಲ್ಲಿ ನೆಲೆಸಿತು. ಅವರು ದ್ರಾವಿಡ ನಾಡಿನಿಂದ (ತಮಿಳು ನಾಡು) ವಲಸೆ ಬಂದಿದ್ದರಿಂದ ಅವರನ್ನು ದ್ರಾವಿಡ ಬ್ರಾಹ್ಮಣರು ಎಂದು ಕರೆಯಲಾಗಿತ್ತು.

ಅವರುಗಳಲ್ಲಿ ವಸಿಷ್ಠ, ಮಿತ್ರವರುಣ ಹಾಗೂ ಕೌಂಡಿನ್ಯ ಗೋತ್ರದ "ಅಯ್ಯಲ ಸೋಮಯಾಜುಲ" ಸಂಸಾರಗಳು ಸುಪ್ರಸಿದ್ಧರಾಗಿದ್ದರು. ಈ ವಂಶದ ಸಂಸ್ಥಾಪಕನು ಅಯ್ಯಲ ಸೋಮಯಾಜುಲು ವಿಸ್ಸಣ್ಣ. ಅವರು ತಮ್ಮ ಕುಲಕಸುಬಿನಿಂದಾಗಿ ನವಾಬ್ ಎಂಬ ಪದವಿಯನ್ನು ಪಡೆದರು. ಆ ವಂಶದವರಲ್ಲಿ ಒಬ್ಬ ಮಗ, ಎಲ್ಲಣ್ಣ ಹಾಗೂ ಅವನ ಸಂಸಾರವು ಪೂರ್ವದಿಕ್ಕಿಗೆ ವಲಸೆ ಹೋಗಿ ಅಲ್ಲಿ ವಿಜಯನಗರಮ್, ಬೊಬ್ಬಿಲಿ, ಸೀತಾನಗರಮ್, ಪಾರ್ವತಿಪುರಂ, ಮತ್ತು ಪಾಲಕೊಂಡ ತಾಲ್ಲೂಕುಗಳಲ್ಲಿ ನೆಲಸಿತು.

ಈ ಪೈಕಿ ಸೋಮಾವಧಾನಿ ನಂದಬಳಗದಲ್ಲಿ ಕೆಲಸ ಮಾಡುತ್ತಿದ್ದು, ಋಗ್ವೇದ ಹಾಗೂ ಯಜುರ್ವೇದಗಳನ್ನು ಅಧ್ಯಯನ ಮಾಡಿದ್ದರು. ಜಗನ್ನಾಥ ಶಾಸ್ತ್ರಿ "ಕಾವ್ಯಗಳಲ್ಲಿ" ಪ್ರಕಾಂಡ

ಪಂಡಿತರು. – ಕಲುವ ರೈ ಹಳ್ಳಿಯ ಗಂಟಿ ಸರ್ವಪ್ಪ ಶಾಸ್ತ್ರಿಯ ಮಗಳನ್ನು ವಿವಾಹವಾಗಿ ಕಲುವ ರೈನಲ್ಲೇ ನೆಲಸಿದರು. ಭೀಮಾ ಶಾಸ್ತ್ರಿ (ಸಾಹಿತ್ಯ, ಜ್ಯೋತಿಷ್ಯ ಹಾಗೂ ವೈದ್ಯಶಾಸ್ತ್ರಗಳಲ್ಲಿ ಪ್ರಕಾಂಡ ಪಂಡಿತರು)

ವಂಶವೃಕ್ಷ



೨೫

ಚಿಕಿತ್ಸೆ

ಯೋಗಿನೋ ಬೋಧಯಂತೀ ಮಾಂ ಯೋಗೇನ ನಿಯತವ್ರತಾಃ
ಸರ್ವಾರ್ಪಕಸ್ಯ ದೇಹೇ ಸಾ ಸ್ವಯಮೇವ ಸಮುಲ್ಲಸೇತ್ ॥
– ಪ್ರಚಂಡ ಚಂಡೀ ತ್ರಿಶತಿ (243)

"ಓ ಮಾತೇ! ಸಂಪೂರ್ಣವಾಗಿ ಶರಣಾಗತರಾದ ಯೋಗಿಗಳು ನಿನ್ನಲ್ಲಿ ಆಶ್ರಯವನ್ನು ಪಡೆದು, ಯೋಗದ ಮೂಲಕ ನಿನ್ನ ಮಾರ್ಗದರ್ಶನವನ್ನು ಪಡೆದು ನಿನ್ನ ಧ್ಯಾನದಲ್ಲಿ ಸ್ಥಿರವಾಗುತ್ತಾರೆ. ಅವರಲ್ಲಿ ನೀನು ನಿನ್ನೆಲ್ಲ ವೈಭವದಿಂದ ಶೋಭಿಸುವೆ."

ಮಹಾತ್ಮರು ಯಾವುದೋ ಉದ್ದೇಶಕ್ಕಾಗಿ ಭೂಮಿಯಲ್ಲಿ ಹುಟ್ಟುವಾಗ ಹಣೆಯ ಮೇಲೆ ಮಹಾತ್ಮರೆಂಬ ಪಟ್ಟಿಯನ್ನು ಅಂಟಿಸಿಕೊಂಡು ಅವತರಿಸುವುದಿಲ್ಲ. ಅವರು ಜನಗಳ ಮಧ್ಯದಲ್ಲಿ ಸಾಮಾನ್ಯರಂತೆ ಓಡಾಡಿಕೊಂಡಿರುತ್ತಾರೆ. ಅಗತ್ಯಬಿದ್ದಲ್ಲಿ ನಿರ್ದಿಷ್ಟ ಸಂದರ್ಭಗಳಲ್ಲಿ ತಮಗೇ ಗೊತ್ತಿಲ್ಲದಂತೆ ತಮ್ಮ ಶಕ್ತಿಯನ್ನು ಪ್ರಕಟಿಸುವರು. ಭಗವಾನ್ ಶ್ರೀ ರಮಣರು ತಮ್ಮ ಹದಿನಾರನೇ ವಯಸ್ಸಿನಲ್ಲಿ ಸಾವಿನ ಅನುಭವವನ್ನು ಅನುಭವಿಸುವವರೆಗೂ ವೆಂಕಟರಮಣ ಎಂಬ ಸಾಧಾರಣ ಬಾಲಕನಾಗಿದ್ದರು. ಆ ಅನುಭವದ ಹಿಂದಿನ ಕಾರಣವು ಯಾರಿಗೂ ಗೊತ್ತಿರಲಿಲ್ಲ. ಇದನ್ನು ಭಗವಂತನ ಇಚ್ಛೆಯೆಂದು ಅರ್ಥೈಸಬೇಕಾಗುವುದು.

ಕೆಲವು ಸಿದ್ಧರು ಯಾರಿಗೂ ತಲುಪಲಾಗದ ಸ್ಥಳದಲ್ಲಿ ಕುಳಿತಿದ್ದು, ಸದಾ ಮೌನಿಯಾಗಿರುತ್ತಾರೆ, ಮತ್ತು ಉಳಿದವರು ವಿಚಿತ್ರವಾದ ವರ್ತನೆಯನ್ನು ಪ್ರಕಟಿಸುತ್ತಿರುತ್ತಾರೆ. ಅವರು ಸದಾ ಯೋಗ ಸ್ಥಿತಿಯಲ್ಲಿರಲಿ ಅಥವಾ ಇಲ್ಲದಿರಲಿ ಅದು ಅವರನ್ನು ಬಿಟ್ಟು ಬೇರಾರಿಗೂ ತಿಳಿಯುವುದಿಲ್ಲ. ಹೀಗಾಗಿ ನಮ್ಮ ಹಿರಿಯರು ಹೇಳುವಂತೆ ಕೇವಲ ಆತ್ಮಜ್ಞಾನಿಗಳಿಗೆ ಮಾತ್ರ ಮತ್ತೊಬ್ಬ ಆತ್ಮಜ್ಞಾನಿಯನ್ನು ಗುರುತಿಸಲು ಸಾಧ್ಯ.

ಸೂರ್ಯ ಗಣಪತಿಯು ಆರು ವರ್ಷಗಳ ತನಕ ಸಾಮಾನ್ಯ ಮಗುವಾಗಿ ಬೆಳೆದನು. ಒಂದೇ ಕೊರತೆಯೆಂದರೆ ಅವನಿಗೆ ಮಾತೇ ಬರಲಿಲ್ಲ. ಎಲ್ಲವೂ ಅರ್ಥವಾಗುತ್ತಿದ್ದರೂ ಉತ್ತರಿಸಲು ಮಾತು ಬಾಯಿಂದ ಹೊರಡುತ್ತಿರಲಿಲ್ಲ. ಅಷ್ಟೇ ಏಕೆ ತಮ್ಮ ತಾಯಿಯನ್ನು "ಅಮ್ಮಾ" ಎಂದು ಕರೆಯಲೂ ಆಗುತ್ತಿರಲಿಲ್ಲ. ಆಟ, ಪಾಠ ಹಾಗೂ ಆಹಾರಗಳ ಬಗ್ಗೆ

ಸ್ವಲ್ಪವೂ ಆಸಕ್ತಿ ಇರಲಿಲ್ಲ. ಸದಾ ಒಂದೆಡೆ ಕಣ್ಣು ಮುಚ್ಚಿ ಕುಳಿತಿರುತ್ತಿದ್ದನು. ಯಾವುದೇ ಕಾರಣವೂ ಇಲ್ಲದೇ ಅವನ ಶರೀರವು ಬಿಸಿಯಾಗುತ್ತಿತ್ತು ಹಾಗೂ ಪ್ರಜ್ಞೆ ತಪ್ಪುತ್ತಿತ್ತು. ಇದರಿಂದ ತಂದೆ ತಾಯಿಗಳಿಗೆ ಅಪಾರವಾದ ವೇದನೆಯಾಗುತ್ತಿತ್ತು.

ಕೆಲವರು ಮಗುವು ಮೂಕನೆಂದು ಅಭಿಪ್ರಾಯಪಟ್ಟರೆ ಮತ್ತೆ ಕೆಲವರು ಅದಕ್ಕೆ ಮೂರ್ಛೆರೋಗವಿರಬಹುದೆಂದು ಹೇಳುತ್ತಿದ್ದಾಗ, ತಾಯಿಗೆ ಅಪಾರ ವೇದನೆ ಆಗುತ್ತಿತ್ತು. ನೃಸಿಂಹ ಶಾಸ್ತ್ರಿಗಳಿಗೂ ತಮ್ಮ ಮಗನ ಸ್ಥಿತಿಯನ್ನು ಅರಿಯಲಾಗಲಿಲ್ಲ. ಅವನಲ್ಲಿ ಯಾವುದೇ ರೋಗಲಕ್ಷಣಗಳು ಇರಲಿಲ್ಲವಾದ್ದರಿಂದ ನೃಸಿಂಹ ಶಾಸ್ತ್ರಿಗಳು ತಮ್ಮ ಮಗನಿಗೆ ಔಷಧ ವಿಜ್ಞಾನದಲ್ಲಿ ನೀಡುವ ನರಗಳ ಶುದ್ಧೀಕರಣ ಚಿಕಿತ್ಸೆಯನ್ನು ಮಾಡಿದರೆ ಸರಿಹೋಗಬಹುದೆಂದು ಆಲೋಚಿಸಿದರು. ಅದರಂತೆ ಒಂದು ಅರಿಶಿನದ ಕೊಂಬನ್ನು ಬೆಂಕಿಯಲ್ಲಿ ಚೆನ್ನಾಗಿ ಕಾಯಿಸಿ ಅದನ್ನು ಮಗುವಿನ ತಲೆಯ ಮೇಲೆ ಅಮೃತನಾಡಿಯು ಇರುವ ಜಾಗದಲ್ಲಿ ಇಟ್ಟರು. ಈ ಚಿಕಿತ್ಸೆಯ ನಂತರ ಮಗುವು "ಅಮ್ಮಾ" ಎಂದು ಮೊಟ್ಟ ಮೊದಲಿಗೆ ಚೀರಿತು. ಇದರಿಂದ ತಾಯಿಗೆ ಅತ್ಯಾನಂದವಾಯಿತು. ಅಲ್ಲಿಂದ ಶುದ್ಧವಾದ ರೀತಿಯಲ್ಲಿ ಮಾತನಾಡುವುದು, ಸುಂದರ ಮತ್ತು ಕಾವ್ಯಾತ್ಮಕ ಮಾತುಗಳು ಗಣಪತಿಯ ಬಾಯಿಂದ ಹೊರಬರತೊಡಗಿತು. ಅವನ ನಾಲಿಗೆಯ ಮೇಲೆ ವೀಣಾಪಾಣಿ ಸರಸ್ವತಿಯು ನಾಟ್ಯವಾಡತೊಡಗಿದಳು.

ಈ ರೀತಿಯ ಶುದ್ಧ ಹಾಗೂ ಕಾವ್ಯಾತ್ಮಕ ಮಾತುಗಳು ಜನರನ್ನು ಈ ಮಗುವು ಮಹಾನ್ ವಿದ್ವಾಂಸನಲ್ಲದೇ ಬೇರಾರೂ ಅಲ್ಲವೆಂದು ಮಾತನಾಡಿಕೊಳ್ಳುವಂತೆ ಮಾಡಿತು. "ಮಗುವಿನ ಹಿಂದಿನ ಪರಿಸ್ಥಿತಿಯು ಮೂರ್ಛೆರೋಗವಾಗಿದ್ದಲ್ಲಿ, ನಾನು ನೀಡಿದ ಚಿಕಿತ್ಸೆಯಿಂದ ಅವನಿಗೆ ಈ ರೀತಿ ಸುಲಲಿತವಾಗಿ ಮಾತನಾಡಲು ಆಗುತ್ತಿರಲಿಲ್ಲ" ಎಂಬುದಾಗಿ ನೃಸಿಂಹ ಶಾಸ್ತ್ರಿಗಳು ಅಲೋಚಿಸಿದರು.

ಅನಂತರ ನೃಸಿಂಹ ಶಾಸ್ತ್ರಿಗಳು ಭಗವಾನ್ ರಮಣ ಮಹರ್ಷಿಗಳ ದರ್ಶನವನ್ನು ಪಡೆದಾಗ, ತಾವು ತಮ್ಮ ಮಗನಿಗೆ ನೀಡಿದ ಚಿಕಿತ್ಸೆಯು ತಪ್ಪಾಗಿದ್ದು ಅದು ತೀವ್ರ ಅಪಾಯಕರವಾದದ್ದೆಂದು ಅರಿವಾಯಿತು. ನಂತರ ಗಣಪತಿಯ ಮೊಮ್ಮಗಳು ವಿಶಾಲಾಕ್ಷಿಯು ತಾವು ರಚಿಸಿದ "ವಾಸಿಷ್ಠ ವಿಜಯಮ್" ಕೃತಿಯಲ್ಲಿ ನೃಸಿಂಹ ಶಾಸ್ತ್ರಿಗಳ ಭಾವನೆಗಳನ್ನು ವಿವರಿಸಿರುವರು. ಶಾಸ್ತ್ರಿಗಳು ತಮ್ಮ ಮಗನಾದ ಗಣಪತಿಯ ಯೋಗಸ್ಥಿತಿಗೆ ತೊಂದರೆಯನ್ನುಂಟು ಮಾಡಿರಬಹುದು. "ಯೋಗಿಗಳು ಕೆಲವು ಬಾರಿ ಮಕ್ಕಳಂತೆ, ಹುಚ್ಚರಂತೆ ಅಥವಾ ಪಿಶಾಚಿಗಳಂತೆ ವರ್ತಿಸುವರು," ಹೀಗೆ ಹಿರಿಯರು ಹೇಳುತ್ತಾರೆ.

ಏನೇ ಆದರೂ ಗಣಪತಿಯು ಅತ್ಯದ್ಭುತ ಕವಿಯಾಗಿ ಪರಿವರ್ತಿತನಾದನು.

೬

ವಿದ್ಯಾಭ್ಯಾಸ

ರಾಧಿತರ ಮಗ ಮಹರ್ಷಿ ಸತ್ಯವಚಸ್. ಸತ್ಯವು ದಿವ್ಯವಾದದ್ದು ಎಂದು ಘೋಷಿಸಿದ್ದಾರೆ. ಪುರುಸಿಷ್ಠಿಯ ಮಗ ಮಹರ್ಷಿ ಪೌರುಸಿಷ್ಟಿಯು ತಪಸ್ಸನ್ನು ಸಾಧಿಸಬೇಕಾದ ಮಹತ್ತರವಾದ ಗುರಿಯೆಂದು ಘೋಷಿಸಿರುವರು. ಮುದ್ಗಲನ ಮಗ ಮಹರ್ಷಿ ನಾಕನು ಸ್ವಾಧ್ಯಾಯ ಹಾಗೂ ಪ್ರವಚನಗಳು (ಜ್ಞಾನಾರ್ಜನೆ ಹಾಗೂ ಜ್ಞಾನಪ್ರಸಾರ) ಜೀವನದಲ್ಲಿ ಸಾಧಿಸಬಹುದಾದ ಗುರಿಯೆಂದು ಪರಿಗಣಿಸಿದ್ದಾನೆ.

ಗುರು ಹಾಗೂ ಶಿಷ್ಯರ ನಡುವಿನ ಸಂಬಂಧಕ್ಕೆ ಸ್ವಾಧ್ಯಾಯ ಹಾಗೂ ಪ್ರವಚನವು ತಳಹದಿ. ವೇದಾಧ್ಯಯನ ಮಾಡುತ್ತಿದ್ದ ಮಹಾ ಸಂತನೊಬ್ಬನು ಅದನ್ನು ಮುಂದುವರೆಸಲು ಮತ್ತೊಂದು ಜನ್ಮವನ್ನು ನೀಡುವಂತೆ ಭಗವಂತನಲ್ಲಿ ಪ್ರಾರ್ಥಿಸಿದನು. ಹೀಗಾಗಿ ವಿದ್ಯೆಯೆಂದರೆ ಅದು ಬಹಳ ದೀರ್ಘಕಾಲದ ಸಾಧನೆ ಪ್ರೊಫೆಸರ್ ಸಿ.ಡಿ.ದೇಶಮುಖ ಅವರು ಶ್ರೀ ಗಣಪತಿ ಮುನಿಗಳನ್ನು ಮಹಾನ್ ಸಾಂಪ್ರದಾಯಿಕ ಸಂಸ್ಕೃತ ಕವಿಗಳಲ್ಲಿ ಕಟ್ಟ ಕಡೆಯವರೆಂದು ಹೇಳಿರುವರು. ಸಂಸ್ಕೃತವನ್ನು ದೇವಭಾಷೆಯೆಂದು ಕರೆಯುವರು ಏಕೆಂದರೆ ವೇದ ಸಂಸ್ಕೃತಿಗಳನ್ನು ಅರ್ಥಮಾಡಿಕೊಳ್ಳಬೇಕಾದರೆ ಅದು ಕೇವಲ ಸಂಸ್ಕೃತ ಅಧ್ಯಯನದಿಂದ ಮಾತ್ರ ಸಾಧ್ಯ.

ಪರಕೀಯರ ಆಡಳಿತ ಹಾಗೂ ವಿದೇಶೀ ಮತ ಪ್ರಚಾರಕರ ಪ್ರಭಾವ ಹಾಗೂ ಪರಧರ್ಮಗಳು ಭಾರತದ ಜನಗಳನ್ನು ವೇದ, ವೇದ ಸಂಸ್ಕೃತಿ ಹಾಗೂ ಸಂಸ್ಕೃತ ಭಾಷೆಗಳಿಂದ ದೂರಮಾಡಿವೆ. ಬ್ರಿಟಿಷರ ಆಳ್ವಿಕೆಯ ಅವಧಿಯಲ್ಲಿ, ಆಂಗ್ಲ ಭಾಷೆಯಲ್ಲಿನ ವಿದ್ಯಾಭ್ಯಾಸದಿಂದ ಹಾಗೂ ಆ ಭಾಷೆಯ ಪ್ರಭಾವದಿಂದ ಪಾಶ್ಚಿಮಾತ್ಯ ಸಂಸ್ಕೃತಿಯು ಭಾರತೀಯರ ಜೀವನ ಶೈಲಿಯಲ್ಲಿ ನುಸುಳಿವೆ. ಗಣಪತಿ ಮುನಿಗಳ ತಂದೆ ನೃಸಿಂಹ ಶಾಸ್ತ್ರಿಗಳಿಗೆ ಸಂಸ್ಕೃತ ಹಾಗೂ ತೆಲುಗು ಭಾಷೆಗಳ ಬಗ್ಗೆ ಅಪಾರ ಪ್ರೀತಿ ಇತ್ತು ಹಾಗೂ ಗುರುಕುಲ ಮಾದರಿಯ ವಿದ್ಯಾಭ್ಯಾಸದಲ್ಲಿ ಪ್ರಾಮಾಣಿಕ ನಂಬಿಕೆಯಿತ್ತು. ಹಾಗೇ ಆಧ್ಯಾತ್ಮಿಕ ಪದ್ಧತಿಗಳು ಹಾಗೂ ಭಾರತದ ಪುರಾತನ ಸಂಸ್ಕೃತಿಗಳ ಬಗ್ಗೆಯೂ ಸಹ ಅವರಿಗೆ ಅಪಾರ ಪ್ರೀತಿ ಇತ್ತು. ಪದ್ಧತಿಯ ಪ್ರಕಾರ ಮೊದಲು ಬಾಲಕನಿಗೆ ಉಪನಯನ ಮಾಡುವುದು, ನಂತರ ಮಂತ್ರದೀಕ್ಷೆಯನ್ನು ಉಪದೇಶಿಸುವುದು ಆನಂತರ ಅವನನ್ನು ಗುರುಕುಲದಲ್ಲಿ

ವಿದ್ಯಾಭ್ಯಾಸಕ್ಕೆ ಕಳಿಸಿಕೊಡುವುದು. ಗುರುಕುಲದಲ್ಲಿ ತಪಸ್ಸನ್ನಾಚರಿಸುವುದೂ ಒಂದು ಪಠ್ಯಕ್ರಮವಾಗಿತ್ತು. ವೇದವು ಘೋಷಿಸುವುದೇನೆಂದರೆ:

ತಪಶ್ಚ ಸ್ವಾಧ್ಯಾಯ ಪ್ರವಚನೇ ಚ
ದಮಶ್ಚ ಸ್ವಾಧ್ಯಾಯ ಪ್ರವಚನೇ ಚ
"ತಪಸ್ಸು ಹಾಗೂ ಆತ್ಮ ಸಂಯಮವು ಸ್ವಾಧ್ಯಾಯ ಮತ್ತು ಬೋಧನೆಯ ಫಲ."

ನೃಸಿಂಹ ಶಾಸ್ತ್ರಿಗಳಿಗೆ ಭವಿಷ್ಯದ ಬಗ್ಗೆ ನಿಖರವಾದ ಅರಿವಿತ್ತು. ಹೀಗಾಗಿ ಅವರು ಸೂರ್ಯಗಣಪತಿಗೆ ಉಪನಯನವನ್ನು ಮಾಡಿದರು ನಂತರ ಅವನಿಗೆ ಗಾಯತ್ರಿ ಮಂತ್ರೋಪದೇಶದ ಜೊತೆಗೆ ಹನ್ನೆರಡು ಮಂತ್ರಗಳನ್ನೂ ಉಪದೇಶಿಸಿದರು. ಹೀಗೆ ತಂದೆಯು ಗಣಪತಿ ಮುನಿಗಳಿಗೆ ಮೊದಲ ಗುರುವಾದರು.

ಶ್ರೀ ಗಣಪತಿ ಮುನಿಗಳು ನಂತರದ ದಿನಗಳಲ್ಲಿ ತಪಸ್ಸನ್ನು ವಿದ್ಯಾಭ್ಯಾಸದ ಒಂದು ಭಾಗವೆಂದು ಘೋಷಿಸಿದರು.

1927ರಲ್ಲಿ ಶ್ರೀ ಕೃಷ್ಣದೇವರಾಯ ಭಾಷಾ ನಿಲಯದ ಬೆಳ್ಳಿ ಮಹೋತ್ಸವದ ಅಧ್ಯಕ್ಷೀಯ ಭಾಷಣದಲ್ಲಿ ಗಣಪತಿ ಮುನಿಗಳು ಭಾಷಾ ವಿಭಾಗದ ವಿದ್ಯಾರ್ಥಿಗಳಿಗೆ ತಪಸ್ಸಿನ ಅಗತ್ಯವನ್ನು ಸವಿವರವಾಗಿ ಪ್ರಸ್ತುತ ಪಡಿಸಿದರು. ಅವರ ಭಾಷಣದ ಸಾರಾಂಶವು ಹೀಗಿದೆ:

ಭಾಷಾ ಜ್ಞಾನದಲ್ಲಿ ಎರಡು ವಿಧಾನಗಳಿವೆ. ಮೊದಲನೆಯದು ಭಾಷೆಯನ್ನು ಕ್ರಮಬದ್ಧವಾಗಿ ಕಲಿಯುವುದು ಹಾಗೂ ಎರಡನೆಯದು ತಪಸ್ಸಿನ ಮೂಲಕ ಕಲಿಯುವುದು. ತೆಲುಗು ಹಾಗೂ ಸಂಸ್ಕೃತ ಭಾಷೆಗಳಲ್ಲಿನ ಮಹಾನ್ ಬರಹಗಾರರು ತಪಸ್ಸಿನ ಮೂಲಕ ತಮಗೆ ಬೇಕಾದ ಭಾಷೆಯಲ್ಲಿ ಪಾಂಡಿತ್ಯವನ್ನು ಸಾಧಿಸಿದರು ಹಾಗೂ ಆ ಭಾಷೆಯಲ್ಲಿ ಅನೇಕ ಮೇರುಕೃತಿಗಳನ್ನು ರಚಿಸಿದರು. ತಪಸ್ಸಿನ ಶಕ್ತಿಯಿಂದ ಮೂಲಾಧಾರದಲ್ಲಿರುವ ಪರವಾಕ್ಕು (ಪದಗಳ ಮಹಾನ್ ಮೂಲ), ಸಕ್ರಿಯವಾಗುತ್ತದೆ ಹಾಗೂ ತನ್ನ ಅನುಗ್ರಹವನ್ನು ಭಕ್ತರ ಮೇಲೆ ಹರಿಸುವುದು. ಹೀಗೆ ಪರಾವಾಕ್‌ನಿಂದ ಅನುಗ್ರಹವನ್ನು ಪಡೆದ ಭಕ್ತನು ಸಮಸ್ತ ಜ್ಞಾನ ಕ್ಷೇತ್ರಗಳಲ್ಲಿ ವಿದ್ವಾಂಸನಾಗುತ್ತಾನೆ. ನಿಯಮಿತ ಹಾಗೂ ಕ್ರಮಬದ್ಧ ಅಧ್ಯಯನದ ಬಗ್ಗೆ ನನಗೆ ಒಳ್ಳೆಯ ಅಭಿಪ್ರಾಯವಿದ್ದರೂ, ನನಗೆ ತಪಸ್ಸಿನ ಮಾರ್ಗದ ಮೇಲೆ ಹೆಚ್ಚಿನ ನಂಬಿಕೆ ಹಾಗೂ ವಿಶ್ವಾಸವಿದೆ. ವ್ಯಕ್ತಿಯೊಬ್ಬನು ವರ್ಷಾನುಗಟ್ಟಲೆ ಕ್ರಮಬದ್ಧವಾಗಿ ಅಧ್ಯಯನ ಮಾಡಿದವನಿಗಿಂತಲೂ ಕೆಲವೇ ತಿಂಗಳುಗಳ ದೀರ್ಘ ತಪಸ್ಸನ್ನಾಚರಿಸಿದವನಿಗೆ ಪದಗಳ ಮೇಲೆ ಹಾಗೂ ಜ್ಞಾನದಲ್ಲಿ ಹೆಚ್ಚಿನ ಶಕ್ತಿಯು ದೊರಕುವುದು. ಮೂಲಾಧಾರದ ಗ್ರಂಥಾಲಯವು ಪ್ರಪಂಚದಲ್ಲಿನ ಮಹಾನ್ ಗ್ರಂಥಾಲಯಕ್ಕಿಂತ ಅಗಲ ಹಾಗೂ ವಿಸ್ತಾರವಾದದ್ದು. ಮೂಲಾಧಾರದ ಗ್ರಂಥಾಲಯವು ಬೀಗಹಾಕಿರುವುದು. ಬೀಗವನ್ನು ಬ್ರಹ್ಮಗ್ರಂಥಿ ಎನ್ನುವರು. ಇದನ್ನು ತೆರೆಯಲು ಬೇಕಾಗುವ ಕೀಲಿಯು ತಪಸ್ಸು. ಹಾಗಾಗಿ ಪ್ರತಿಯೊಬ್ಬ ವಿದ್ಯಾರ್ಥಿಯೂ

ಹಾಗೂ ಕವಿಯು ಮಂತ್ರವನ್ನು ಸತತವಾಗಿ ಪಠಿಸುವ ಮೂಲಕ ತಪಸ್ಸನ್ನಾಚರಿಸಿ ಬ್ರಹ್ಮಗ್ರಂಥಿಗೆ ಹಾಕಿರುವ ಬೀಗವನ್ನು ತೆರೆಯಲು ಪ್ರಯತ್ನಿಸಬೇಕು. ತಪಸ್ಸಿನ ಕೊನೆಯಲ್ಲಿ ಇಡೀ ವಿಶ್ವದ ಜ್ಞಾನವನ್ನು ಹೊಂದಿರುವ ಗ್ರಂಥಾಲಯವು ತಪಸ್ವಿಗೆ ತಂತಾನೇ ತೆರೆದುಕೊಳ್ಳುವುದು."

ಹತ್ತಿರದಲ್ಲೆಲ್ಲೂ ಗುರುಕುಲವಿರಲಿಲ್ಲವಾದ್ದರಿಂದ ಗಣಪತಿ ಮುನಿಗಳನ್ನು ಅವನ ಚಿಕ್ಕಪ್ಪನಾದ ಪ್ರಕಾಶ ಶಾಸ್ತ್ರಿಯ ಬಳಿ ತೆಲುಗು ಹಾಗೂ ಸಂಸ್ಕೃತ ಭಾಷೆಗಳನ್ನು ಕಲಿತುಕೊಳ್ಳಲು ಕಳಿಸಿದರು. ಗಣಪತಿ ಮುನಿಗಳಿಗೆ ಛಾಯಾಚಿತ್ರಗ್ರಹಣದಂತಹ ಜ್ಞಾಪಕಶಕ್ತಿ ಇತ್ತು ಹಾಗೂ ಒಮ್ಮೆ ಹೇಳಿದರೆ ಅದು ಅವರ ಮನದಲ್ಲಿ ಅಚ್ಚೊತ್ತಾಗಿರುತ್ತಿತ್ತು. ಅದನ್ನು ಮನದಲ್ಲಿರಿಸಿಕೊಂಡು ಯಾವಾಗ ಕೇಳಿದರೂ ಆಗ ಅವುಗಳನ್ನು ಸ್ಪಷ್ಟವಾಗಿ ಹೇಳುತ್ತಿದ್ದರು. ಅಲ್ಲಿ ಗಣಪತಿ ಮುನಿಗಳು ಸಂಸ್ಕೃತ, ತೆಲುಗು ಕಲಿತು ತಮ್ಮ ಎಂಟನೇ ವರ್ಷದಲ್ಲೇ "ಅಮರಕೋಶ, ಬಾಲರಾಮಾಯಣ ಮತ್ತು ಶಿವಸಹಸ್ರ" ಗಳನ್ನು ಕರತಲಾಮಲಕವಾಗಿಸಿಕೊಂಡು ತನ್ನ ಅಪ್ರತಿಮ ಜ್ಞಾನವನ್ನು ಪ್ರದರ್ಶಿಸಿದರು.

ಇದೇ ಸಮಯದಲ್ಲಿ ಗಣಪತಿ ಮುನಿಗಳು ತನ್ನ ತಂದೆಯಿಂದ ಜ್ಯೋತಿಷ್ಯ ವಿದ್ಯೆಯನ್ನು ಕಲಿತು ತನ್ನ ಒಂಬತ್ತನೇ ವಯಸ್ಸಿನಲ್ಲೇ ವಿಶೇಷ ಪಂಚಾಂಗವನ್ನು ತಯಾರಿಸಿದರು.

ಬಾಲಕ ಗಣಪತಿ ಮುನಿಗಳಿಗೆ ತನ್ನ ಬಾಲ್ಯದ ದಿನದಿಂದಲೇ ಮುಂದೆ ನಡೆಯುವುದನ್ನು ನಿಖರವಾಗಿ ಮೊದಲೇ ಹೇಳುವ ಶಕ್ತಿ ಇತ್ತು. ಯಾರಿಗೆ ಬೇಕಾದರೂ ಅವರ ಭವಿಷ್ಯದ ಬಗ್ಗೆ ನಿಖರವಾಗಿ ಮೊದಲೇ ತಿಳಿಸುತ್ತಿದ್ದರು. ಈ ಶಕ್ತಿಯು ಪ್ರತಿಯೊಬ್ಬರನ್ನೂ ಆಶ್ಚರ್ಯಗೊಳಿಸಿದ್ದಲ್ಲದೇ ಸುತ್ತ ಮುತ್ತಲಿನ ಹಳ್ಳಿಗಳಿಂದ ಜನಗಳು ಅವರಲ್ಲಿಗೆ ಬಂದು ತಮ್ಮ ಭವಿಷ್ಯದ ಬಗ್ಗೆ ಕೇಳತೊಡಗಿದರು. ಕೆಲವೇ ದಿನಗಳಲ್ಲಿ ಗಣಪತಿ ಮುನಿಗಳ ಖ್ಯಾತಿಯು ಎಲ್ಲೆಡೆ ಹರಡಿತು. ಗಣಪತಿ ಮುನಿಗಳು ಆಟಗಳಲ್ಲಿಯೂ ನಾಯಕರಾಗಿದ್ದರು. ಅವರು ಈಜುವುದು, ಇಸ್ಪೀಟು ಆಟ ಹಾಗೂ ಚದುರಂಗದಾಟಗಳಲ್ಲಿ ಎಲ್ಲರನ್ನೂ ಮೀರಿಸುತ್ತಿದ್ದರು. ಒಂದು ಇಸ್ಪೀಟು ಎಲೆಯ ಕಟ್ಟಿನಿಂದ ಎಲೆಗಳನ್ನು ರಹಸ್ಯವಾಗಿ ಆಟಗಾರರಲ್ಲಿ ಹಂಚಿದ ನಂತರ ಗಣಪತಿ ಮುನಿಗಳು ಬೇರೆ ಆಟಗಾರರ ಬಳಿ ಯಾವ ಎಲೆಗಳಿರುವುದು ಎಂಬುದನ್ನು ನಿಖರವಾಗಿ ಹೇಳುತ್ತಿದ್ದರು.

ಗಣಪತಿ ಮುನಿಗಳಿಗೆ ಹತ್ತು ವರ್ಷವಾಗುವುದರೊಳಗೆ ಅವರು ವ್ಯಾಕರಣ, ತರ್ಕಶಾಸ್ತ್ರ ಹಾಗೂ ನ್ಯಾಯಶಾಸ್ತ್ರಗಳಲ್ಲಿ ಪರಿಣತನಾಗಿದ್ದರು. ಅವರು ಸಂಸ್ಕೃತದಲ್ಲಿ ಪದ್ಯರಚನೆಯನ್ನು ಮಾಡತೊಡಗಿದರು. ಇದನ್ನು ಗಮನಿಸಿದ ಅವರ ಗುರುಗಳಾದ, ಪ್ರಕಾಶ ಶಾಸ್ತ್ರಿ, ವೆಂಕಟೇಶ್ವರ ಶಾಸ್ತ್ರಿ ಹಾಗೂ ವೆಂಕಟೇಶ್ವರ ಘನಪಾಠಿಗಳು ಅವರ ವಿದ್ವತ್ತನ್ನು ಪರೀಕ್ಷಿಸಲು ಪಾಂಡವ ಹಾಗೂ ಕೌರವರ ಜನನ ವೃತ್ತಾಂತವನ್ನು ಸಂಸ್ಕೃತ ಶ್ಲೋಕಗಳಲ್ಲಿ 48 ನಿಮಿಷದಲ್ಲಿ ರಚಿಸಲು ಆಹ್ವಾನಿಸಿದರು. ಗಣಪತಿ ಮುನಿಗಳು ನಿಮಿಷಕ್ಕೊಂದು ಶ್ಲೋಕದಂತೆ ಕೇವಲ 34 ನಿಮಿಷದಲ್ಲೇ ರಚಿಸಿದರು. ಎಲ್ಲ ಗುರುಗಳೂ ಇದರಿಂದ ಸ್ಥಂಭೀಭೂತರಾಗಿ ಅವರನ್ನು

ಹೃದಯಪೂರ್ವಕವಾಗಿ ಹರಸಿದರು. ನಂತರ ಗಣಪತಿಯು ತಮ್ಮ ಬಾಲ್ಯದಲ್ಲೇ "ಸುಕನ್ಯಾ ಚರಿತಮ್" ಎಂಬ ಖಂಡ ಕಾವ್ಯವನ್ನು ರಚಿಸಿ ಅವರ ತಂದೆಯನ್ನು ಸಂತೋಷಪಡಿಸಿದರು.

ಗುರುಕುಲದಲ್ಲಿನ ವಿದ್ಯಾಭ್ಯಾಸವು ಸಮಗ್ರತೆಯಿಂದ ಕೂಡಿತ್ತು. ಎಲ್ಲ ವಿಷಯಗಳ ಜೊತೆಗೇ ನೈತಿಕ ಮೌಲ್ಯಗಳನ್ನೂ ಕಲಿಸಿ ವಿದ್ಯಾರ್ಥಿಗಳಲ್ಲಿ ಉನ್ನತ ಮಟ್ಟದ ನೈತಿಕ ಮೌಲ್ಯಗಳನ್ನು ಕಲಿಸುತ್ತಿದ್ದರು.

೭

ಜಾಗೃತಿ

ಗಣಪತಯೇ ಸ್ತನಘಟಯೋಃ ಪದಕಮಲೇ ಸಪ್ತಲೋಕಭಕ್ತೇಭ್ಯಃ
ಅಧರಪುಟೇ ತ್ರಿಪುರಜಿತೇ ದದಾಸಿ ಪೀಯೂಷಮಂಬ ತ್ವಂ ॥
– ಉಮಾಸಹಸ್ರಮ್ (3–11–20)

"ಓ ಮಾತೇ! ನೀನು ಗಣಪತಿಗಾಗಿ ನಿನ್ನ ಸ್ಥನಕುಂಭಗಳಲ್ಲಿ ಅಮೃತವನ್ನು ಹೊಂದಿರುವೆ; ಸಪ್ತಲೋಕಗಳಲ್ಲಿರುವ ನಿನ್ನ ಭಕ್ತರಿಗಾಗಿ ಆ ಅಮೃತವನ್ನು ನಿನ್ನ ಪಾದಕಮಲದ ಧೂಳಿಯಲ್ಲಿ ಧರಿಸಿರುವೆ ಮತ್ತು ಮೂರುಲೋಕಗಳನ್ನು ಜಯಿಸಿದ ಶಿವನಿಗಾಗಿ ಅದೇ ಅಮೃತವನ್ನು ನಿನ್ನ ತುಟಿಗಳಲ್ಲಿ ಹಿಡಿದಿಟ್ಟುಕೊಂಡಿರುವೆ."

ಅಮೃತವು ಮೃತ ಅಥವಾ ಸಾವಿಗೆ ವಿರುದ್ಧವಾದದ್ದು. ಜ್ಞಾನಕ್ಕೆ ಸಾವಿಲ್ಲವಾದ್ದರಿಂದ ಜ್ಞಾನವನ್ನು ಅಮೃತವೆಂದು ಪರಿಗಣಿಸುವರು. ಕಲೆಯನ್ನು ಜ್ಞಾನದಿಂದ ಸೃಷ್ಟಿಸಿರುವುದರಿಂದ ಕಲೆಯೂ ಅಮೃತ. ಯಾವುದೇ ಕಲೆಯ ಸಾರದ ಅನುಭವವು ಮಕರಂದ. ದೈವೀ ಮಾತೆಯ ಶಕ್ತಿಯಾದ **"ಚಿತ್"** ನಿಂದ ಹೊರಸೂಸುವ ಜ್ಞಾನ ಶಕ್ತಿಯು ಮನಸ್ಸಿನ ಮೂಲಕ ವ್ಯಕ್ತಗೊಳ್ಳುವುದು ಹಾಗೂ ವೈಯುಕ್ತಿಕ ಬುದ್ಧಿಶಕ್ತಿಯು ಕಲೆಯಾಗಿ ಹೊರಹೊಮ್ಮುವುದು. ಕಲೆಯ ರಸವನ್ನು ಅನುಭವಿಸಿದ ಜನರು ಮಕರಂದದ ಆನಂದವನ್ನು ಅನುಭವಿಸುವರು.

ಮೇಲೆ ವಿವರಿಸಿದ ಉಮಾಸಹಸ್ರಮ್ ಕೃತಿಯ ಶ್ಲೋಕದಂತೆ, ತಾನು ದೈವೀ ಮಾತೆಯ ಪುತ್ರನಾದ್ದರಿಂದ ಆ ದೈವೀ ಮಾತೆಯ ಸ್ತನಗಳಿಂದ ಜ್ಞಾನವನ್ನು ಪೋಷಣೆಯ ಹಾಲನ್ನಾಗಿ ಪಡೆಯುತ್ತಿದ್ದೆನೆಂದು ಗಣಪತಿ ಮುನಿಗಳು ತಿಳಿಸಿದರು.

ಶ್ರೀ ಶಿವಪದಹ್ರಿದಯ ಪಿಳ್ಳೆಯಾರ್ ಶ್ರೀಯಾಲಿ ಪಟ್ಟಣದಲ್ಲಿ ವಾಸಿಸುತ್ತಿದ್ದರು. ಅವರ ಪತ್ನಿ ಭಗವತಿಯು ಒಂದು ಗಂಡು ಮಗುವಿಗೆ ಜನ್ಮವಿತ್ತಿದ್ದಳು. ಆ ಮಗುವಿನ ಹೆಸರು ಅಲ್ಲುಡ್ಯೆ ಪಿಳ್ಳೆಯಾರ್. ಮಗುವು ಮೂರು ವರ್ಷದವನಾಗಿದ್ದಾಗ, ತಂದೆಯು ಅವನನ್ನು ತಿರುತ್ತೋಣಿಯಪ್ಪಾರ್ ಮಂದಿರಕ್ಕೆ ಕರೆದುಕೊಂಡು ಹೋದರು. ಮಂದಿರದ ಕೊಳದ ಬಳಿಯಲ್ಲಿನ ಪಾವಟಿಗೆಯ ಬಳಿ ಕುಳ್ಳಿರಿಸಿ ಅವರು ಅಘಮರ್ಶನ ಮಂತ್ರವನ್ನು ಜಪಿಸುತ್ತಾ ಸ್ನಾನವನ್ನು ಮಾಡಲು ಕೊಳವನ್ನು ಪ್ರವೇಶಿಸಿದರು. ಅವರು ಕೊಳದಲ್ಲಿ ಸಂಪೂರ್ಣವಾಗಿ

ಮುಳುಗಿದ್ದರಿಂದ, ಅವರನ್ನು ಕಾಣದೇ ಮಗುವು ಜೋರಾಗಿ "ಅಪ್ಪಾ, ಅಮ್ಮಾ". ಎಂದು ಜೋರಾಗಿ ಅಳತೊಡಗಿತು. ಮಂದಿರದಲ್ಲಿನ ದೈವೀ ದಂಪತಿಗಳಾದ ಶಿವ-ಪಾರ್ವತಿಯರು ಮಗುವು ಅಳುವುದನ್ನು ಕೇಳಿಸಿಕೊಂಡರು. ಶಿವನು ಪಾರ್ವತಿಗೆ ಮಗುವಿಗೆ ಸ್ತನ್ಯಪಾನವನ್ನು ಮಾಡಿಸುವಂತೆ ಹೇಳಿದನು. ಪಾರ್ವತಿ ದೇವಿಯ ಸ್ತನದಿಂದ ಜ್ಞಾನಾಮೃತವನ್ನು ಕುಡಿದ ಮಗುವು ಕೂಡಲೇ ದೈವೀ ಪದ್ಯವನ್ನು ರಚಿಸಿ ಹಾಡಲು ಪ್ರಾರಂಬಿಸಿದನು. ಅ ಮಗುವೇ ಜ್ಞಾನ ಸಂಬಂಧರ್. ಈ ಮಗುವನ್ನು ದ್ರವಿಡ ಶಿಶು ಎಂದೂ ಕರೆಯುತ್ತಿದ್ದರು.

ಹೀಗೆ ದೈವೀ ಮಾತೆಯು ಆ ಬಾಲಕನ ಮೇಲೆ ತನ್ನ ಕರುಣೆಯನ್ನು ತೋರಿದಳು. ಗಣಪತಿ ಮುನಿಗಳನ್ನೂ ಇದೇ ರೀತಿ ಹರಸಿದಳು ಹಾಗೂ ಗಣಪತಿ ಮುನಿಗಳು ತನ್ನ ಬಾಲ್ಯದ ದಿನಗಳಿಂದಲೇ ಅಮೃತದಂತಹ ಕವಿತ್ವಗಳನ್ನು ರಚಿಸತೊಡಗಿದರು. ದೈವೀ ಮಾತೆಯ ಅಮೃತ ಸಮಾನವಾದ ಕರುಣೆಯನ್ನು ತನ್ನ ತಾಯಿಯ ಹಾಲಿನಿಂದ ಗಣಪತಿ ಮುನಿಗಳು ಪಡೆದುಕೊಂಡರು. ಸೂರ್ಯ ಗಣಪತಿ ಮುನಿಗಳು ತನ್ನ ತಾಯಿ ನರಸಾಂಬಳ ಗರ್ಭವನ್ನು ಪ್ರವೇಶಿಸುತ್ತಿದ್ದಂತೆ ಅವಳು ಗಣಪತಿಯ ಮಹಾನ್ ಭಕ್ತೆಯಾಗಿ ಆಧ್ಯಾತ್ಮಿಕ ಜ್ಞಾನಗಳ ಆಗರವಾದಳು. ತನ್ನ ಮಗ ಗಣಪತಿ ಮುನಿಗಳನ್ನು ಅವಳು ಆರಾಧಿಸತೊಡಗಿದಳು. ಈ ಮಗುವಿನ ಜನನವನ್ನು ದೇವರ ವರವೆಂದು ಪರಿಗಣಿಸಿದಳು. ಆ ಮಗುವಿನ ಬಗೆಯ ಪ್ರೀತಿಯು ಪ್ರಾಪಂಚಿಕ ಪ್ರೀತಿಯಾಗದೇ ಅದು ಹೆಚ್ಚು ಹೆಚ್ಚು ಆಧ್ಯಾತ್ಮಿಕ ಪ್ರೀತಿಯಾಗಿತ್ತು.

ದೈವೀ ಉದ್ದೇಶಕ್ಕಾಗಿ ಹುಟ್ಟಿದವನ ಹೃದಯವನ್ನು ಭಗವಂತನು ಎಚ್ಚರಗೊಳಿಸುವನು. ಅವರು ಪ್ರಾಪಂಚಿಕ ಜೀವನಕ್ಕೆ ಬಂಧಿತರಾಗಿರುವುದಿಲ್ಲ. ಮಹಾರಾಜ ಶುದ್ಧೋಧನನು ತನ್ನ ಪುತ್ರ ಗೌತಮನಿಗೆ ಸಮಸ್ತ ರಾಜ ಭೋಗಗಳನ್ನು ನೀಡಿ ಅವನನ್ನು ಅದರಲ್ಲೇ ಮುಳುಗಿಸಲು ಪ್ರಯತ್ನಿಸಿದನು. ಆದರೆ ಗೌತಮನ ಒಂದು ಘಂಟೆಯ ನಗರ ಪ್ರದಕ್ಷಿಣೆ ಮನುಷ್ಯನ ನಶ್ವರ ಜೀವನದ ಬಗ್ಗೆ ಅವನ ಕಣ್ತೆರೆಸಿತು. ಅನಂತರ ಅವನು ಪ್ರಪಂಚದ ಮಹಾನ್ ಆಧ್ಯಾತ್ಮಿಕ ವ್ಯಕ್ತಿಯಾಗಿ, ನಂತರ ಬುದ್ಧನಾದನು. ಅದೇ ರೀತಿ ಬಾಲಕ ಗಣಪತಿ ಮುನಿಗಳಿಗೆ ಸಮಯವು ಪಕ್ವವಾಗಿ ಅವರ ಹೃದಯವನ್ನು ತೆರೆಯುವ ಘಟನೆಯೊಂದು ನಡೆದುಹೋಯಿತು.

ಅಕ್ಟೋಬರ್, 1888, 12ನೇ ತಾರೀಖಿನಂದು ತುಂಬು ಗರ್ಭಿಣಿಯಾದ (ಯಾವ ಸಂದರ್ಭದಲ್ಲಾದರೂ ಹೆರಿಗೆಯಾಗುವ ಸ್ಥಿತಿಯಲ್ಲಿರುವ) ಗಣಪತಿಯ ತಾಯಿ ನರಸಾಂಬಳು ಮುತ್ತುಗದ ಎಲೆಗಳಿಂದ ಊಟದ ಎಲೆಗಳನ್ನು ಜೋಡಿಸುತ್ತಾ ಮನೆಯ ವರಾಂಡದಲ್ಲಿ ಕುಳಿತಿದ್ದರು. ಆಕೆಗೆ ಅತಿಯಾದ ಸುಸ್ತು ಹಾಗೂ ನಿಃಶಕ್ತಿಯಾಗಿತ್ತು. ಯಾರಲ್ಲೂ ಅದನ್ನು ಹೇಳಿಕೊಂಡಿರಲಿಲ್ಲ. ಗಣಪತಿಯು ಅಲ್ಲೇ ಹತ್ತಿರದಲ್ಲಿನ ಒಂದು ಕಂಭವನ್ನೊರಗಿಕೊಂಡು ಯಾವುದೋ ಪುಸ್ತಕವನ್ನು ಓದುತ್ತಿದ್ದನು. ಇದ್ದಕ್ಕಿದ್ದಂತೆ ತಾಯಿಯು "ಸೂರ್ಯಮ್!" ಎಂದು ಕೂಗಿದರು. ಗಣಪತಿಯು ತಲೆಯನ್ನೆತ್ತದೆ ಕೂಗಿಗೆ ಸ್ಪಂದಿಸಿದನು. ಆಗ ತಾಯಿಯು

"ಹೆರಿಗೆಗೆ ಈ ದಿನವು ಪ್ರಶಸ್ತವೇ" ಎಂದು ಕೇಳಿದರು. ತಾಯಿಯ ಈ ಆತಂಕದ ಪ್ರಶ್ನೆಯ ತಲೆ ಬುಡ ಅರಿಯದೆ ಗಣಪತಿಯು ಅನುದ್ದೇಶಿತವಾಗಿ "ಈ ದಿನ ಹೆರಿಗೆಯಾದಲ್ಲಿ ಅವಳಿ ಮಕ್ಕಳಾಗುವುದು, ಹಾಗೂ ತಾಯಿ ಮತ್ತು ಮಕ್ಕಳು ಉಳಿಯುವುದಿಲ್ಲ" ಎಂದನು. ಇದನ್ನು ಆಲಿಸಿದ ಹತ್ತಿರದಲ್ಲೇ ಕುಳಿತಿದ್ದ ಗಣಪತಿಯ ಚಿಕ್ಕಪ್ಪ ಪ್ರಕಾಶ ಶಾಸ್ತ್ರಿಗಳು ಸ್ತಂಭೀಭೂತರಾಗಿ ಗಣಪತಿಯನ್ನು ಹೃದಯಹೀನನಾಗಿ ಹಾಗೂ ಗಮನ ಕೊಡದೇ ತನ್ನ ತಾಯಿಗೆ ಈ ರೀತಿ ಉತ್ತರಿಸಿದ್ದಕ್ಕೆ ಅವನನ್ನು ಗದರಿಸಿದರು. ಗಣಪತಿಯ ತಾಯಿಯು ಇದರಿಂದ ಬಹುವಾಗಿ ನೊಂದುಕೊಂಡು ಭಗವಂತನ ಇಚ್ಛೆಯು ಹೇಗಿರುವುದೋ ಹಾಗೇ ಆಗುವುದೆಂದು ನಿಟ್ಟುಸಿರು ಬಿಟ್ಟರು.

ಗಣಪತಿ ಮುನಿಗಳ ಬಾಯಿಂದ ಹೊರಬಂದ ಮಾತು ದೈವ ವಾಕ್ಯವೇ ಆಗಿತ್ತು. ಅದೇ ರೀತಿ ಅವರ ತಾಯಿಯು ಅವಳಿ ಮಕ್ಕಳಿಗೆ ಜನ್ಮ ನೀಡಿ ಅವುಗಳೊಂದಿಗೆ ತಾನೂ ಇಹ ಯಾತ್ರೆಯನ್ನು ಮುಗಿಸಿದಳು. ಕ್ಷಣಾರ್ಧದಲ್ಲೇ ಇಡೀ ಸಂಸಾರವೇ ಶೋಕಸಾಗರದಲ್ಲಿ ಮುಳುಗಿತು. ಮನೆ ತುಂಬ ನೆಂಟರು ಸೇರಿದರು. ಅವರಲ್ಲಿ ಕೆಲವರು ಗಣಪತಿ ಮುನಿಗಳನ್ನು ಬೈದರು. ಆದರೆ ಗಣಪತಿ ಮುನಿಗಳು ಇದಾವುದನ್ನೂ ಗಮನಿಸುವ ಸ್ಥಿತಿಯಲ್ಲಿ ಇರಲಿಲ್ಲ. ಘಟಿಸಿದ ಅಗೋಚರ ದುಃಖವು ಅವರನ್ನು ಬೇರೊಂದು ಲೋಕಕ್ಕೆ ಕರೆದೊಯ್ದಿತ್ತು. ಅವರು ತನ್ನನ್ನು ತಾನೇ "ನನ್ನ ತಾಯಿಯ ಶರೀರದಿಂದ ಹೊರಗೆ ಹೋದ ವಸ್ತು ಯಾವುದು?, ಜೀವನವು ಇಷ್ಟು ನಶ್ವರವಾದರೆ, ಅದಕ್ಕಾಗಿ ಹಂಬಲಿಸುವ ಮಹತ್ತರವಾದ ಸಾಧನೆ ಯಾವುದು?" ಕೇಳಿಕೊಂಡರು. ಅದಾಗಲೇ ಗಣಪತಿ ಮುನಿಗಳು ಸತ್ಯಾನ್ವೇಷಣೆಯ ಕಾರ್ಯದಲ್ಲಿ ತೊಡಗಿದ್ದರು. ತನ್ನ ತಾಯಿಯ ಪವಿತ್ರವಾದ ಜೀವನ ಹಾಗೂ ಅಕಾಲಿಕ ಮರಣವು ಗಣಪತಿ ಮುನಿಗಳ ಮೊಟ್ಟ ಮೊದಲ ಆಧ್ಯಾತ್ಮಿಕ ಪಾಠವಾಗಿ ಪರಿಣಮಿಸಿ ಅವರನ್ನು ಸತ್ಯವನ್ನು ಅರಸಲು ಪ್ರೇರೇಪಿಸಿತು.

ದೈವೀ ಸಂಗೀತವನ್ನು ಹೊರಡಿಸುತ್ತಿದ್ದ ಕೊಳಲು ನಿಃಶಬ್ದ ಹಾಗೂ ಮೂಕವಾಯಿತು.

೮

ಹಿತೋಪದೇಶ

ಬ್ರಹ್ಮಾಂಡೇ ಯಾವದಸ್ತೀಹ ಹೃದಿತಾವಚ್ಚ ವಿದ್ಯತೇ
ವ್ಯಷ್ಟೇರನುಭವೋ ಯಾವಾಂಸ್ತತೋ ಮನಸಿ ನಾಧಿಕಮ್ ॥
– ವಿಶ್ವಮೀಮಾಂಸಾ

"ವಿಶ್ವದಲ್ಲಿರುವುದೆಲ್ಲವೂ ಹೃದಯದೊಳಗಿರುವುದು. ಮನುಷ್ಯನ ಎಲ್ಲ ಅನುಭವಗಳೂ ಅವನ ಮನಸ್ಸಿನಲ್ಲಿ ನೆಲಸಿರುವುದು. ಹೀಗಾಗಿ ಯಾರಲ್ಲಿ ಅಂತರ್‌ಗರ್ಬಿತ ಜ್ಞಾನವಿರುವುದೋ ಅವನು ಎಲ್ಲವನ್ನೂ ತಿಳಿಯಬಲ್ಲನು."

ಹಿರಿಯರು ಹೇಳುವಂತೆ ಯಾರು ಇಡೀ ವಿಶ್ವವನ್ನು ಒಂದಾಗಿ ನೋಡುವರೋ ಅವರಿಗೆ ಪವಿತ್ರ ದಾರವನ್ನು (ಜನಿವಾರ) ಧರಿಸುವ ರೀತಿಯ ಬಾಹ್ಯ ಚಿಹ್ನೆಗಳ ಅಗತ್ಯ ಇರುವುದಿಲ್ಲ. ನಿಜವಾದ ಋಷಿಯು ತನ್ನ ಜ್ಞಾನದ ಬಗ್ಗೆ ಸ್ಥಿರತೆಯನ್ನು ಹೊಂದಿರಬೇಕು. ಈ ಜ್ಞಾನವನ್ನು "ಪ್ರಜ್ಞಾ" ಅಥವಾ "ಜಾಗೃತಿ" ಎನ್ನಬಹುದು. ಮನಸ್ಸನ್ನು ಹೃದಯದಲ್ಲಿ ನಿಲ್ಲಿಸಿ ಈ ಪ್ರಜ್ಞೆಯನ್ನು ತಲುಪಬಹುದು. ಮಾನಸಿಕ ಅರಿವಿನ ಜ್ಯೋತಿಯು ಸೀಮಿತವಾದದ್ದು. ಅದು ವೈಯುಕ್ತಿಕ ಅನುಭವವನ್ನು ಹೊರತು ಪಡಿಸಿ ಬೇರೇನನ್ನೂ ನೀಡುವುದಿಲ್ಲ. ಜ್ಞಾನದ ಸ್ಥಿರತೆಯನ್ನು ತಲುಪಿದಾಗ ಮಾತ್ರವೇ ಸಾಧಕನು "ಕ್ರಾಂತದರ್ಶಿ", ಲೋಕಾತೀತವನ್ನು ಪಡೆಯುವವನಾಗುವನು. ಅಂಥವನು ಮಾತ್ರ ನಿಜವಾದ ಋಷಿಯಾಗಬಲ್ಲನು. ಯಾರು ಭೂತ, ಭವಿಷ್ಯತ್ ಹಾಗೂ ವರ್ತಮಾನದಲ್ಲಿ ಸಿಲುಕುವುದಿಲ್ಲವೋ ಹಾಗೂ ದೈವೀ ಮಾತೆಯಲ್ಲಿ ಮೀಸಲಾಗಿ, ಆ ಮಾತೆಯ ದೈವೀ ಗುಣಗಳನ್ನು ಸ್ತುತಿಸುವುದರಲ್ಲಿ ತನ್ನನ್ನೇ ತೊಡಗಿಸಿಕೊಳ್ಳುವನೋ ಅವನು, ಅದನ್ನು ಪರಿಶುದ್ಧವಾದ, ವೈಭವದ ಪದಗಳಿಂದ ವ್ಯಕ್ತಪಡಿಸಬಹುದು. ತಮ್ಮ ತಾಯಿಯ ಮರಣಾನಂತರ ಈ ಜ್ಞಾನವನ್ನೇ ಗಣಪತಿ ಮುನಿಗಳು ಪಡೆದರು.

ಮಮ ತು ವಿಮಲಾ ಹೃದ್ಯಾ ವಿದ್ಯಾ ಮಹೇಶ್ವರಿ ಯಾಽಭವ–
ನ್ಮನಸಿ ಚ ಪರಾ ಚಿತ್ರಾ ಶಕ್ತಿಶ್ಚಿರಂತನಿ ಯಾಽಭವತ್

ವಚಸಿ ಚ ಮಹದ್ಭಾಗ್ಯಂ ಶ್ಲಾಘ್ಯಂ ಯದೀಡ್ಯತಮೇಽಭವತ್
ತದಯಿ ಗಲಿತಂ ಮತ್ತೋ ವಿತ್ತತ್ರಯಂ ಭವತೋ ಭುವಿ ॥
– ಉಮಾಸಹಸ್ರಮ್ (9–34–12)

"ಮಹೇಶ್ವರಿಯೇ! ಮೊದಲು ನನಗೆ 'ಹೃದಯವಿದ್ಯೆ' ತಿಳಿದಿತ್ತು. ಅನಾದಿಯಾದ ಮಾತೇ! ಮನದಲ್ಲಿ ಶ್ರೇಷ್ಠವಾದ ಅದ್ಭುತ ಶಕ್ತಿಯಿತ್ತು. ಅತ್ಯಂತ ಸ್ತೋತ್ರಾರ್ಹಳಾದವಳೇ! ಮಾತಿನಲ್ಲಿ ಮಹತ್ತರವಾದ ಭಾಗ್ಯವುಂಟಾಗಿತ್ತು. ಈ ಮೂರೂ ಸಂಪತ್ತುಗಳೂ ನಾನು ಭೂಮಿಯಲ್ಲಿ ಜನ್ಮ ಪಡೆದದ್ದರಿಂದ ನನ್ನಿಂದ ಜಾರಿಹೋಯಿತು."

ಗಣಪತಿ ಮುನಿಗಳು ತನ್ನ ತಾಯಿಯ ಸಾವಿನ ನಂತರ ಎರಡು ತಿಂಗಳುಗಳಾದರೂ ಮೌನಿಯಾಗಿದ್ದರು. ಅವರು ಎಲ್ಲ ಸಮಯದಲ್ಲೂ ದೈವೀ ಮಾತೆಯನ್ನು ಕುರಿತು ಧ್ಯಾನವನ್ನು ಮಾಡುತ್ತಿದ್ದರು ಹಾಗೂ ಆಟ ಪಾಠಗಳಲ್ಲಿ ಯಾವುದೇ ಆಸಕ್ತಿಯನ್ನು ತೋರುತ್ತಿರಲಿಲ್ಲ. ಅವರು ಯಾವಾಗಲೂ ಒಂಟಿತನವನ್ನು ಬಯಸುತ್ತಾ ಯಾವುದೋ ಗುರಿಯನ್ನು ಅರಸುತ್ತಿದ್ದರು. ಜನಗಳು ಗಣಪತಿ ಮುನಿಗಳು ಇನ್ನೂ ಅವರ ತಾಯಿಯ ಸಾವಿನಲ್ಲೇ ದುಃಖಿಸುತ್ತಿರುವರೆಂದು ಭಾವಿಸುತ್ತಿದ್ದರು. ಮತ್ತೆ ಕೆಲವರು ಅವರನ್ನು ದೂಷಿಸಿದ್ದಕ್ಕೆ ಇನ್ನೂ ಕೋಪಗೊಂಡಿರುವರೆಂದು ಭಾವಿಸುತ್ತಿದ್ದರು. ಪ್ರಕಾಶ ಶಾಸ್ತ್ರಿಗಳೇ ಗಣಪತಿ ಮುನಿಗಳನ್ನು ಹೆಚ್ಚಾಗಿ ದೂಷಿಸಿದ್ದು. ಹೀಗಾಗಿ ಪ್ರಕಾಶ ಶಾಸ್ತ್ರಿಗಳು ಗಣಪತಿ ಮುನಿಗಳನ್ನು ಮೃದುವಚನಗಳಿಂದ ಅನುನಯಿಸತೊಡಗಿದರು. ಆದರೆ ಈ ರೀತಿಯ ಮಾತುಗಳಿಗೆ ಗಣಪತಿ ಮುನಿಗಳಿಂದ ಮೌನವೇ ಉತ್ತರವಾಯಿತು. ಗಣಪತಿಯು ಪ್ರಕಾಶ ಶಾಸ್ತ್ರಿಗಳ ಮೃದು ಮಧುರ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದರಾದರೂ, ಅವರು ಬಾಯನ್ನು ತೆರೆಯಲೇ ಇಲ್ಲ.

ತಮ್ಮ ಪತ್ನಿಯು ಅವಳ ಜೀವನದ ಉತ್ಕರ್ಷ ಸ್ಥಿತಿಯಲ್ಲಿರುವಾಗಲೇ ಸಾವನ್ನಪ್ಪಿದ್ದರಿಂದಾಗಿ ನೃಸಿಂಹ ಶಾಸ್ತ್ರಿಗಳು ಹತಾಶರಾಗಿದ್ದರು. ಈ ಮಹಾ ವಿಪತ್ತನ್ನು ಶಾಸ್ತ್ರಿಗಳು ತಮ್ಮ 43ನೇ ವಯಸ್ಸಿನಲ್ಲೇ ಎದುರಿಸಬೇಕಾಯಿತು. ಇಷ್ಟೇ ಸಾಲದಂತೆ, ಮಗ ಗಣಪತಿ ಮುನಿಯು ಅಸ್ವಾಭಾವಿಕವಾಗಿ ವರ್ತಿಸುತ್ತಿದ್ದನು. ಅತ್ಯಂತ ಮನೋಸ್ಥೈರ್ಯದಿಂದ ಶಾಸ್ತ್ರಿಗಳು ಇವೆಲ್ಲವನ್ನೂ ಎದುರಿಸಿದರು.

ಈ ಘಟನೆಯಿಂದ ಸಂಪೂರ್ಣವಾಗಿ ಮನನೊಂದ ಗಣಪತಿ ಮುನಿಗಳು ತಮಗೆ ಹತ್ತು ವರ್ಷಗಳಾಗುವವರೆಗೂ ಮೌನಕ್ಕೆ ಶರಣುಹೋಗಿ ಯಾರೊಂದಿಗೂ ಬೆರೆಯಲಿಲ್ಲ. ಈಗ ಅವರು ತಮ್ಮ ಬಾಲ್ಯವನ್ನು ಹಿಂದಿಕ್ಕಿ ಪ್ರಬುದ್ಧ ಕೌಮಾರ ಹಂತಕ್ಕೆ ಪ್ರವೇಶಿಸಿದರು ಹಾಗೂ ಲೋಕಜ್ಞಾನ ಉಳ್ಳವರಾಗಿದ್ದರು. ಹೀಗಿರುವಾಗ ಶಾಸ್ತ್ರಿಗಳು ತಾವು ಗಣಪತಿಯೊಂದಿಗೆ ಮೆತ್ತಗೆ ಮಾತನಾಡಿದಲ್ಲಿ ಅವನು ಸ್ಪಂದಿಸಬಹುದೆಂದು ಭಾವಿಸಿದರು. ಅವರು ಗಣಪತಿ

ಮುನಿಗಳ ಅಂತರಂಗದಲ್ಲಿ ಏನು ಬಾಧಿಸುತ್ತಿದೆ ಎಂಬುದನ್ನು ಅವನಿಂದ ಹೊರತರಲು ಇಚ್ಛಿಸಿದರು. ಒಂದು ದಿನ ಭೋಜನಾನಂತರ ಶಾಸ್ತ್ರಿಗಳು ಗಣಪತಿಯನ್ನು ಕರೆದು ಮೃದುವಾಗಿ ಅವರ ಸಮಸ್ಯೆ ಏನು ಎಂದು ಕೇಳಿದರು.

ಶಾಸ್ತ್ರಿ, "ಗಣಪತಿ, ಪ್ರೀತಿಯ ಮಗು, ನಿಮ್ಮ ಮಾತೆಯು ತೀರಿಹೋಗಿ ಎರಡು ತಿಂಗಳಾಗಿದೆ. ಅಂದಿನಿಂದ ನೀನು ಮೌನಿಯಾಗಿರುವೆ. ಎಷ್ಟು ದಿನ ಈ ರೀತಿ ಮುಂದುವರೆಯುವೆ? ನಿನ್ನ ವಿದ್ಯಾಭ್ಯಾಸವನ್ನು ಮುಂದುವರೆಸಲು ನಿನ್ನ ಗುರುಗಳು ನಿನಗಾಗಿ ಕಾಯುತ್ತಿರುವರು. ಎಂದಿನಿಂದ ನೀನು ನಿನ್ನ ದುಃಖದ ಸ್ಥಿತಿಯಿಂದ ಹೊರಬಂದು ವಿದ್ಯಾಭ್ಯಾಸವನ್ನು ಮುಂದುವರೆಸುವೆ?"

ಗಣಪತಿ ಮುನಿಗಳು ತನ್ನ ಮುಖವನ್ನು ಮೇಲೆತ್ತಿ ತಂದೆಯನ್ನು ನೇರವಾಗಿ ನಮ್ರತೆಯಿಂದ ನೋಡಿದನು, ಆದರೆ ಉತ್ತರಿಸಲಿಲ್ಲ.

ಶಾಸ್ತ್ರಿ: "ಜನಗಳು ನಿನ್ನನ್ನು ದೂಷಿಸಿದ್ದಕ್ಕೆ ನಿನಗೆ ಕೋಪ ಬಂದಿದೆಯೆ? ನಿನ್ನ ತಾಯಿಯ ಸಾವಿಗೆ ನಿನ್ನನ್ನು ಹೇಗೆ ತಪ್ಪಿತಸ್ಥನನ್ನಾಗಿ ಮಾಡಲು ಸಾಧ್ಯ? ಏನು ಅಗಬೇಕಿತ್ತೋ ಅದು ಆಯಿತು ಅಷ್ಟೇ! ನೀನು ಮೊದಲಿನಂತೆ ಹರ್ಷಚಿತ್ತನಾಗಿದ್ದರೆ ನನ್ನ ಹೃದಯವು ಸಂತೋಷಿಸುವುದು."

ಗಣಪತಿ ಮುನಿಗಳಿಗೆ ಏನೆಂದು ಉತ್ತರಕೊಡುವುದು ಎಂಬುದು ಗೊತ್ತಾಗಲಿಲ್ಲ. ಅವರಿಗೆ ಅವರ ಮನಸ್ಸಿನ ಸ್ಥಿತಿಯೇ ಅರಿವಾಗಿರಲಿಲ್ಲ. ತಂದೆಯವರ ಸಂಕಟವೇನೆಂದು ಗಣಪತಿ ಮುನಿಗಳಿಗೆ ಅರಿವಾಗಿತ್ತು. ಅವರಿಗೆ ಮೌನವನ್ನು ಮುರಿಯಲು ಇಷ್ಟವಾಗಲಿಲ್ಲ. ಹಾಗಾಗಿ ಅವರು ತಂದೆಯವರ ಮಾತುಗಳನ್ನು ಮೌನವಾಗಿ ಕೇಳಿಸಿಕೊಳ್ಳತೊಡಗಿದ್ದರು. ಮಗನ ಈ ರೀತಿಯ ಮುಂದುವರೆದ ಮೌನವನ್ನು ಕಂಡು ಶಾಸ್ತ್ರಿಗಳಿಗೆ ಕೋಪ ಬಂತು.

ಶಾಸ್ತ್ರಿ (ಕಟುವಾದ ದನಿಯಲ್ಲಿ): "ಮೌನವು ತಪಸ್ವಿಗಳ ಹಾಗೂ ಋಷಿಗಳ ವರ್ತನೆ. ಅವರು ಅನುಸರಿಸುವ ಮೌನವು ತಪಸ್ಸು, ಅದು ಯೋಗ. ನೀನು ಅವರಂತಲ್ಲ. ನೀನು ಇನ್ನೂ ಪ್ರಾಪಂಚಿಕ ಜೀವನವನ್ನು ನಡೆಸುತ್ತಿರುವೆ. ನಿನ್ನ ವರ್ತನೆಯು ವಿಚಿತ್ರವಾಗಿದೆ. ಈ ಗುಣವು ಬುದ್ಧಿವಂತರ ಲಕ್ಷಣವಲ್ಲ."

ಗಣಪತಿ ಮುನಿಗಳಿಗೆ ತಂದೆಯು ಹೇಳಿದ ತಪಸ್ಸು ಎಂಬ ಪದವು ಹೃದಯದೊಳಗೆ ಸೇರಿ ಸತ್ಯವನ್ನರಸಲು ಇದೇ ಸರಿಯಾದ ಮಾರ್ಗವೆಂದು ನಿರ್ಧರಿಸಿ "ತಂದೆಯೇ, ನಾನು ತಪಸ್ಸನ್ನಾಚರಿಸಬೇಕು, ದಯವಿಟ್ಟು ಆಶೀರ್ವದಿಸಿ" ಎಂದರು. ಮಗನ ಈ ರೀತಿಯ ವಿಚಿತ್ರವಾದ ಕೋರಿಕೆಯು ಶಾಸ್ತ್ರಿಗಳಿಗೆ ಐದು ವರ್ಷದ ಧ್ರುವಕುಮಾರನ ಕಥೆಯನ್ನು ನೆನಪಿಗೆ ತಂದಿತು. ಮಹಾರಾಜ ಉತ್ತಾನಪಾದನಿಗೆ ಸುನೀತಿ ಹಾಗೂ ಸುರುಚಿ ಎಂಬ

ಇಬ್ಬರು ರಾಣಿಯರಿದ್ದರು. ಒಮ್ಮೆ ಮಹಾರಾಜನು ಸುರುಚಿಯ ಮಗ ಉತ್ತಮನನ್ನು ತೊಡೆಯ ಮೇಲೆ ಕೂರಿಸಿಕೊಂಡು ಮುದ್ದು ಮಾಡುತ್ತಿದ್ದನು. ಸುರುಚಿಯು ಮಗನ ಅದೃಷ್ಟವನ್ನು ಕಂಡು ಆನಂದಿಸುತ್ತಾ ಪಕ್ಕದಲ್ಲೇ ನಿಂತಿದ್ದಳು. ಆ ಸಮಯದಲ್ಲಿ ಸುನೀತಿಯ ಮಗ ಧ್ರುವಕುಮಾರನು ಅಲ್ಲಿಗೆ ಬಂದು ತನ್ನ ಮಲ-ಸಹೋದರನನ್ನು ತಂದೆಯು ತೊಡೆಯ ಮೇಲೆ ಕೂರಿಸಿಕೊಂಡು ಮುದ್ದುಮಾಡುತ್ತಿರುವುದನ್ನು ಕಂಡು ತನ್ನನ್ನೂ ತಂದೆಯು ಅದೇ ರೀತಿ ಮುದ್ದುಮಾಡಬೇಕೆಂದು ತನ್ನ ಆಸೆಯನ್ನು ತಂದೆಯ ಮುಂದೆ ಹೇಳುತ್ತಿದ್ದಂತೆ ಸುರುಚಿಯು ಕಟು ನುಡಿಗಳಿಂದ ಹತಭಾಗ್ಯ ಹೆಣ್ಣಿನ ಗರ್ಭದಲ್ಲಿ ಜನಿಸಿರುವವನು ತನ್ನ ತಂದೆಯ ತೊಡೆಯ ಮೇಲೆ ಕುಳಿತುಕೊಳ್ಳುವ ಭಾಗ್ಯವನ್ನು ಆಶಿಸಬಾರದು ಎಂದು ನುಡಿದಳು. ಧ್ರುವನು ಉತ್ತಮನಂತೆ ತನ್ನ ತಂದೆಯ ತೊಡೆಯ ಮೇಲೆ ಕುಳಿತು ಆನಂದವನ್ನು ಅನುಭವಿಸಬೇಕೆಂದರೆ ಅವನು ಕಾಡಿಗೆ ಹೋಗಿ ವಿಷ್ಣುವನ್ನು ಕುರಿತು ತಪಸ್ಸನ್ನಾಚರಿಸಿ ವರವನ್ನು ಪಡೆದು ಅದನ್ನು ಪೂರೈಸಿಕೊಳ್ಳಲು ತನ್ನ ಗರ್ಭದಲ್ಲಿಯೇ ಮತ್ತೊಂದು ಜನ್ಮವನ್ನು ತಾಳಬೇಕೆಂದಳು.

ಬಾಲಕ ಧ್ರುವನು ಅವಮಾನಿತನಾದನು ಹಾಗೂ ಕ್ಷತ್ರಿಯನಾಗಿ ಹುಟ್ಟಿದ್ದರಿಂದ ಈ ಅವಮಾನವನ್ನು ಸಹಿಸದಾದ. ಹೀಗಾಗಿ ಅವನು ವಿಷ್ಣುವನ್ನು ಕುರಿತು ತಪಸ್ಸನ್ನಾಚರಿಸಲು ಕಾಡಿಗೆ ತೆರಳಿದನು. ಅವನ ದೃಢ ನಿರ್ಧಾರವನ್ನು ಕಂಡು ನಾರದ ಮಹರ್ಷಿಯು ಪ್ರತ್ಯಕ್ಷನಾಗಿ ಅವನಿಗೆ, "ತಪಸ್ಸು ಒಂದು ಪವಿತ್ರವಾದ ಮಹಾನ್ ಯಜ್ಞ ಹಾಗೂ ಅದನ್ನು ಚಿಕ್ಕ ಚಿಕ್ಕ ಆಸೆಗಳನ್ನು ನೆರವೇರಿಸಿಕೊಳ್ಳಲು ಉಪಯೋಗಿಸಬಾರದು. ಮಕ್ಕಳು ಹೊಗಳಿಕೆ ತೆಗಳಿಕೆಗಳಿಂದ ಹೊರತಾಗಿದ್ದು ಅದಕ್ಕಿಂತ ಉನ್ನತ ಮಟ್ಟವನ್ನು ತಲುಪಬೇಕು" ಎಂದರು. ಹೀಗೆ ಹೇಳುವ ಮೂಲಕ ನಾರದರು ಧ್ರುವನನ್ನು ಸಮಾಧಾನ ಪಡಿಸಲು ಪ್ರಯತ್ನಿಸಿದರು. ಆದರೆ ಧ್ರುವನನ್ನು ಅವನ ಮಾರ್ಗದಿಂದ ಬದಲಾಯಿಸಲು ಸಾಧ್ಯವಾಗಲಿಲ್ಲ, ಹಾಗೂ ಅವನು ತನ್ನ ಗುರಿ ಸಾಧಿಸಲು ನಾರದರ ಆಶೀರ್ವಾದವನ್ನು ಬೇಡಿದನು. ಕಡೆಗೆ ನಾರದರು ಧ್ರುವನಿಗೆ ವಿಷ್ಣುವಿನ ಮಂತ್ರವನ್ನು ಉಪದೇಶಿಸಿದರು.

ಆರು ತಿಂಗಳುಗಳ ಕಾಲ ತೀವ್ರವಾದ ತಪಸ್ಸನ್ನಾಚರಿಸಿದ ಧ್ರುವನೆದುರಿಗೆ ವಿಷ್ಣುವು ಪ್ರತ್ಯಕ್ಷನಾದನು. ಧ್ರುವನು ಕಣ್ಣುಗಳನ್ನು ಮುಚ್ಚಿ, ಕೈಮುಗಿದು ವಿಷ್ಣುವನ್ನು ಪ್ರಾರ್ಥಿಸಲು ಪ್ರಾರಂಭಿಸಿದನು. ಆದರೆ ಅವನು ಕೇವಲ ಐದು ವರ್ಷದ ಬಾಲಕನಾದ್ದರಿಂದ ಪ್ರಾರ್ಥಿಸಲಾಗಲಿಲ್ಲ. ಭಗವಾನ್ ವಿಷ್ಣುವು ಮಗುವಿನ ಅಸಹಾಯಕತೆಯನ್ನು ಗಮನಿಸಿ ಅವನ ತಲೆಯನ್ನು ತನ್ನ ಹಸ್ತದಲ್ಲಿದ್ದ ಶಂಖದಿಂದ ಮುಟ್ಟಿದನು. ಕೂಡಲೇ ಧ್ರುವನ ಬಾಯಿಂದ ದೈವೀ ಪದಗಳು ಪ್ರಾರ್ಥನೆಯ ರೂಪದಲ್ಲಿ ಹೊರಬರತೊಡಗಿತು. ಅನಂತರ ಭಗವಾನ್ ವಿಷ್ಣುವು ಅವನ ಕೋರಿಕೆಯನ್ನು ಈಡೇರುವಂತೆ ವರವನ್ನು ನೀಡಿದನು. ಶಂಖವು ಅವನನ್ನು ಮುಟ್ಟಿದ್ದರಿಂದ, ನಂತರ ಕಣ್ತೆರೆದು ಮೂರ್ಖತನದಿಂದ ಸಾಮಾನ್ಯವಾದ ಆಸೆಯನ್ನು ಪೂರೈಸುವಂತೆ ವಿಷ್ಣುವಿನಲ್ಲಿ ವರ ಕೇಳಿದ್ದಕ್ಕೆ ದುಃಖಿಸಿದನು.

ಪವಿತ್ರವಾದ ತಪಸ್ಸನ್ನಾಚರಿಸಲು ಸಾಧಕನು ಪರಿಶುದ್ಧನಾಗಿರಬೇಕು ಹಾಗೂ ಆಧ್ಯಾತ್ಮಿಕವಾಗಿ ಪರಿಪಕ್ವವಾಗಿರಬೇಕು. ಕ್ಷಣಮಾತ್ರದಲ್ಲಿ ಉದ್ಭವಿಸಿದ ತ್ಯಾಗಮನೋಭಾವನೆಯಿಂದ ಪ್ರೇರಿತನಾಗಿ ತಪಸ್ಸನ್ನಾಚರಿಸಿದಲ್ಲಿ ಅದರಿಂದ ಶಾಶ್ವತವಾದ ಒಳಿತಾಗುವುದಿಲ್ಲ.

ಗಣಪತಿ ಮುನಿಗಳೂ ಕೂಡಾ ಧ್ರುವನಂತೆ ಬಾಲಕ. ಅವರು ಮೊದಲಿಗೆ ವಿದ್ಯೆಯಲ್ಲಿ ತಪಸ್ವಿಯು ಆಗಬೇಕು. ಅವರ ವಿದ್ಯೆಯು ಮಾನವ ಕುಲವನ್ನು ಉದ್ಧಾರ ಮಾಡುವುದಕ್ಕೆ ಉಪಯೋಗಿಸಬೇಕು. ಅವರು ಅನಂತರ ತಪಸ್ಸನ್ನಾಚರಿಸಿ ಮಹಾನ್ ಆಧ್ಯಾತ್ಮಿಕ ವ್ಯಕ್ತಿಯಾಗಬಹುದು.

ನೃಸಿಂಹ ಶಾಸ್ತ್ರಿಗೆ ತನ್ನ ಮಗನ ಮನದಲ್ಲಾಗುತ್ತಿದ್ದ ತುಮುಲವು ಅರ್ಥವಾಯಿತು. ಹಾಗಾಗಿ ಅವರು ಮಗನಿಗೆ ಮೊದಲು ವಿದ್ಯೆಯಲ್ಲಿ ಸಂಪೂರ್ಣ ಪ್ರಗತಿ ಸಾಧಿಸಿ, ಅನಂತರ ಸಾಕಷ್ಟು ವಯಸ್ಸಾದ ನಂತರ ತಪಸ್ಸನ್ನಾಚರಿಸಲು ಆಲೋಚಿಸಬಹುದೆಂದು ಬುದ್ಧಿವಾದವನ್ನು ತಿಳಿಹೇಳಿದರು. ಗಣಪತಿ ಮುನಿಗಳು ತನ್ನ ತಂದೆಯವರ ಬುದ್ಧಿವಾದವನ್ನು ಸ್ವೀಕರಿಸಿ ತನ್ನ ಮೌನವನ್ನು ತೊರೆದು ಮೊದಲಿನಂತಾಗಿ ಅವರನ್ನು ಸಂತೋಷಪಡಿಸಿದನು. ಅನಂತರ ಗಣಪತಿ ಮುನಿಗಳು ವಿದ್ಯಾಭ್ಯಾಸದ ಕಡೆಗೆ ಸಂಪೂರ್ಣ ಗಮನ ಕೊಡತೊಡಗಿದರು.

೬

ವಿವಾಹ

ಶ್ರೀಖಂಡಚರ್ಚಾಮಿವ ಕಲ್ಪಯಂತ್ಯೋ
ಮುಹುಃ ಕಪೋಲೇಷು ಸಖೀಜನಸ್ಯ
ಶ್ರೀಕಂಠಕಾಂತಾಹಸಿತಾಂಕುರಾಣಾಂ
ಶ್ರೀಮಂತಿ ಕುರ್ವಂತು ಜಗಂತಿ ಭಾಸಃ ॥

– ಉಮಾಸಹಸ್ರಮ್ (2–5–1)

"ಶ್ರೀಕಂಠನ ಪತ್ನಿಯಾದ ಉಮಾದೇವಿಯ ಮುಖದ ಮೊಗ್ಗಿನಂತಹ ಮುಗುಳ್ನಗೆಯ ಕಾಂತಿಯು ಅವಳ ಸಖಿಯರ ಕೆನ್ನೆಗಳ ಮೇಲೆ ಅಲಂಕಾರಿಕ ಚಂದನದ ಹಿಟ್ಟಿನಂತೆ ಕಂಡುಬಂದಿರುವುದು, ಅದು ಪ್ರಪಂಚವನ್ನು ಸಂಪದ್ಭರಿತವಾಗಿಸಲಿ."

ಇಲ್ಲಿ ಉಮಾದೇವಿಯು ಶಿವನೊಂದಿಗಿನ ತನ್ನ ವಿವಾಹದ ಸಂದರ್ಭದಲ್ಲಿ ಹೇಗೆ ಮುಗುಳ್ನಗುವಳು ಎಂಬುದನ್ನು ವಿವರಿಸಲಾಗಿದೆ. ಈ ಪರಿಶುದ್ಧ, ಮೃದುವಾಗಿರುವ ಹಾಗೂ ಸೂಕ್ಷ್ಮವಾದ ಪದ್ಯದಲ್ಲಿ ಉಮಾ ದೇವಿಯ ಮುಗುಳ್ನಗೆಯನ್ನು ಅಪರೂಪದ ಕಾವ್ಯ ಶೈಲಿಯಲ್ಲಿ ಅದನ್ನು ಬಿಳಿಯ ಬಣ್ಣದ ಚಂದನದ ಲೇಪನಕ್ಕೆ ಹೋಲಿಸಿ ಕವಿಯು ವಿವರಿಸಿರುವನು. ಈ ಬಿಳಿಯ ಚಂದನ ಲೇಪನದ ಗುಣಗಳೆಂದರೆ, ಶುದ್ಧತೆ, ಆಹ್ಲಾದಕತೆ ಹಾಗೂ ಸೌಂದರ್ಯ. ಪಾರ್ವತಿಯ ಮುಗುಳ್ನಗೆಯು ಆಸೆಗಳ ದೇವತೆಯಾದ ಕಾಮನನ್ನು ಜಯಿಸಿದ ಶಿವನನ್ನು ಆಕರ್ಷಿಸುತ್ತದೆ. ಚಂದನ ಲೇಪನವು ಆಸೆಯ ಅಗ್ನಿಯನ್ನು ಹೆಚ್ಚಾಗಿಸುತ್ತದೆ. ವಿಶ್ವದ ಅಧಿಪತಿಯಾದ ಶಿವನಲ್ಲಿ ಪಾರ್ವತಿಯನ್ನು ವಿವಾಹವಾಗುವ ಆಲೋಚನೆಯ ಸ್ಫೂರ್ತಿಯು ಉಂಟಾದುದೇ ಪಾರ್ವತಿಯ ಮುಗುಳ್ನಗೆಯಿಂದಾಗಿ. ಚಂದನ ಲೇಪನಕ್ಕೆ ಹೋಲಿಸಬಹುದಾದ ಮುಗುಳ್ನಗೆಯು ಅಪರೂಪದ್ದು.

ಪರ್ವತರಾಜಪುತ್ರಿಗೆ ಜಯಾ ಮತ್ತು ವಿಜಯಾ ಎಂಬ ಇಬ್ಬರು ಸಖಿಯರು. ಪಾರ್ವತಿದೇವಿಯ ಮುಖದಲ್ಲಿ ಉಂಟಾಗುವ ಮಂದಹಾಸದ ಕಾಂತಿಯು, ಆ ಸಖಿಯರ ಕಪೋಲಗಳಲ್ಲಿ ಗಂಧದ ಲೇಪವನ್ನು ಮಾಡಿದಂತಿರುತ್ತದೆ. ಪಾರ್ವತೀದೇವಿಯ ಸಮೀಪದಲ್ಲಿ

ಜಯಾ ವಿಜಯಾ ಎಂಬ ಇಬ್ಬರು ಸಖಿಯರಿರುವರೆಂದು ಶಿವಪುರಾಣವು ತಿಳಿಸುತ್ತದೆ. ಕಾಳಿದಾಸಾದಿ ಕವಿಗಳೂ ಕೂಡ ಶಿವೆಗೆ ಅನೇಕ ಸಖಿಯರಿರುವರೆಂದು ಹೇಳುತ್ತಾರೆ.

ಗಣಪತಿ ಮುನಿಗಳಿಗೆ ಉಮಾದೇವಿಯ ವೈವಾಹಿಕ ಜೀವನದ ವೈಭವಗಳನ್ನು ವರ್ಣಿಸುವ ಶಕ್ತಿಯಿರುವುದರಿಂದ, ಉಮಾದೇವಿಯು ಗಣಪತಿ ಮುನಿಗಳು ಗೃಹಸ್ಥಾಶ್ರಮವನ್ನು ಸ್ವೀಕರಿಸಿ ವೈವಾಹಿಕ ಜೀವನದ ಸರಿಯಾದ ಅನುಭವಗಳನ್ನು ಹೊಂದಲು ಪ್ರೇರೇಪಿಸಿದಂತೆ ಕಂಡುಬರುವುದು. ಗಣಪತಿ ಮುನಿಗಳು ಸದಾ ತಪಸ್ಸಿನ ಬಗ್ಗೆ ಚಿಂತಿಸುತ್ತಿರುವಾಗಲೇ ಒಂದು ಸುಂದರ, ಸುಶೀಲೆಯಾದ ಹಾಗೂ ವಿನಯವಂತಳಾದ ಕನ್ಯೆಯೊಡನೆ ವಿವಾಹವಾಗುವ ಸಮಯವು ಬಂದೇ ಬಿಟ್ಟಿತು.

ಗಣಪತಿ ಮುನಿಗಳು ವಾಸಿಸುತ್ತಿದ್ದ ಕಲುವರ್ರೈ ಗ್ರಾಮದ ಸಮೀಪದಲ್ಲೇ ಬೊಮ್ಮಿಕಾಪಡು ಎಂಬ ಹಳ್ಳಿಯಲ್ಲಿನ ಸಾಂಪ್ರದಾಯಿಕ ಕುಟುಂಬದ ಕರ್ರಭೂಷಣ ಶರ್ಮನೆಂಬ ಹೆಸರಿನ ಬ್ರಾಹ್ಮಣನಿಗೆ ವಿಶಾಲಾಕ್ಷಿ ಎಂಬ ಪುತ್ರಿ ಇದ್ದಳು. ಅವಳ ಜಾತಕದಲ್ಲಿ ಅವಳು ಮಹಾನ್ ಋಷಿಪತ್ನಿಯಾಗುವಳೆಂದು ತೋರಿಬರುತ್ತಿದ್ದರಿಂದ ಕರ್ರಭೂಷಣ ಶರ್ಮನು ಅವಳ ಜಾತಕದೊಂದಿಗೆ ನೃಸಿಂಹ ಮನೆಗೆ ಬಂದನು. ಇಬ್ಬರೂ ಜಾತಕವನ್ನು ಕೂಲಂಕುಷವಾಗಿ ಪರಿಶೀಲಿಸಿ ವಧೂ–ವರರ ಜಾತಕಗಳು ಸಮರ್ಪಕವಾಗಿ ಕೂಡಿ ಬಂದದ್ದರಿಂದ ಅವರ ವಿವಾಹವನ್ನು ನಿಶ್ಚಯಿಸಿದರು.

ಈ ವಿಷಯವನ್ನರಿತ ಗಣಪತಿ ಮುನಿಗಳು ವೈವಾಹಿಕ ಜೀವನವು ತಪಸ್ಸಿನ ಸಾಧನೆಗೆ ಅಡ್ಡಿಬರಬಹುದೇ ಎಂದು ತಂದೆಯನ್ನು ಕೇಳಿದರು. ಅದಕ್ಕೆ ಅವರು ಎಂದಿಗೂ ಅಡ್ಡಿಯಾಗುವುದಿಲ್ಲವೆಂದೂ, ಹಾಗೂ ಅನೇಕ ಪುರಾತನ ಕಾಲದ ಋಷಿಮುನಿಗಳೂ ಕೂಡಾ ಗೃಹಸ್ಥರಾಗಿದ್ದುಕೊಂಡೇ ತಪಸ್ಸನ್ನಾಚರಿಸಿರುವುದನ್ನು ವಿವರಿಸಿದರು. ಅಲ್ಲದೇ ಗಣಪತಿ ಮುನಿಗಳ ಜಾತಕದಲ್ಲಿ ಅವರು ಸನ್ಯಾಸಿಯಾಗುವ ಯಾವ ಲಕ್ಷಣಗಳೂ ಇಲ್ಲವೆಂದರು. ಅನಂತರ ಗಣಪತಿ ಮುನಿಗಳು ವಿವಾಹ ಮಾಡಿಕೊಳ್ಳಲು ಒಪ್ಪಿಗೆ ಸೂಚಿಸಿದರು.

ಆಗಿನ ಕಾಲದ ಸಂಪ್ರದಾಯದಂತೆ ಕನ್ಯೆಗೆ ಎಂಟು ವರ್ಷವಾಗುತ್ತಿದ್ದಂತೆ ವಿವಾಹ ಕಾರ್ಯವನ್ನು ನಡೆಸುತ್ತಿದ್ದರು. "ಅಷ್ಟವರ್ಷ ಭವೇತ್ ಕನ್ಯಾ" ಶ್ಲೋಕವು ಈ ಪದ್ಧತಿಯನ್ನು ವಿವರಿಸುತ್ತದೆ. ಹೀಗೆ, ಎಂಟು ವರ್ಷದ ವಿಶಾಲಾಕ್ಷಿ ಹಾಗೂ ಹನ್ನೆರಡು ವರ್ಷದ ಗಣಪತಿ ಮುನಿಗಳ ವಿವಾಹವು ನಿರ್ವಿಘ್ನವಾಗಿ ನೆರವೇರಿತು.

ನಂತರದ ದಿನಗಳಲ್ಲಿ ಗಣಪತಿ ಮುನಿಗಳು ಸನ್ಯಾಸತ್ವದ ಪರವಾಗಿ ಎಂದಿಗೂ ವಾದಿಸಲಿಲ್ಲ. ಗಣಪತಿ ಮುನಿಗಳು ತನ್ನ ಮಗನೂ ತಪಸ್ಸನ್ನಾಚರಿಸುವ ಇಚ್ಛೆಯನ್ನು ಪ್ರಕಟಿಸಿದಾಗಲೂ ಅವನಿಗೆ ಮೊದಲು ಮದುವೆಯಾಗಿ ಗೃಹಸ್ಥಾಶ್ರಮವನ್ನು ಅನುಸರಿಸುವಂತೆ ತಿಳಿಸಿದರು. ಥಿಯೊಸಾಫಿಕಲ್ ಸೊಸೈಟಿಯವರು ಗಣಪತಿ ಮುನಿಗಳ ಪುತ್ರ ಮಹಾದೇವನನ್ನು ಶ್ರೀಕೃಷ್ಣನಂತೆ

ಮಂತ್ರ, ತಂತ್ರ ಹಾಗೂ ಯೋಗ ಪದ್ಧತಿಗಳಲ್ಲಿ ಸಿದ್ಧಾಂತಗಳನ್ನಾಗಿ ಕಡೆಗೆ ವೇದಮಾರ್ಗವನ್ನಾಗಿ ತಯಾರು ಮಾಡಲು ಇಚ್ಛಿಸಿದಾಗಲೂ ಗಣಪತಿಯು ಅವರ ಸಲಹೆಯನ್ನು ಸಾರಾ ಸಗಟಾಗಿ ತಿರಸ್ಕರಿಸಿದರು.

ವಿಶಾಲಾಕ್ಷಿಯ ಮರಣದ ನಂತರವೂ ಗಣಪತಿ ಮುನಿಗಳು ಸನ್ಯಾಸವನ್ನು ಸ್ವೀಕರಿಸಲಿಲ್ಲ. ತಪಸ್ವಿಗಳು ಸಮಾಜ ಕಲ್ಯಾಣ ಕಾರ್ಯಕ್ರಮಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಳ್ಳಬೇಕೆಂದು ಅವರ ನಂಬಿಕೆಯಾಗಿತ್ತು, ಅವರು ರಚಿಸಿದ "ಸದಾಚಾರ ಬೋಧಿನಿ" ಹಾಗೂ "ಕರ್ಮ ಸೂತ್ರ" ಎರಡು ಕೃತಿಗಳಲ್ಲೂ ಸಮಾಜದೆಡೆಗಿನ ಅವರ ದೃಷ್ಟಿಕೋನವನ್ನು ವ್ಯಕ್ತೀಕರಿಸುತ್ತದೆ.

೧೦

ಸಾಹಿತ್ಯ ವೈಭವ

ವಂದಾಮಹೇ ಮಹಾದೇವಂ ಯಸ್ಯ ವಂದಾರವೋ ಜನಾಃ
ನವಿಂದತಿ ಪುನರ್ಮಾತುಃ ಕುಚ ಕುಂಭ ಪಯೋರಸಂ ॥

"ಯಾರ ಮುಂದೆ ದೀರ್ಘದಂಡ ನಮಸ್ಕಾರ ಮಾಡಿದರೆ ಅವನಿಗೆ ಮಾತೆಯ ಎದೆಯ ಹಾಲನ್ನು ಕುಡಿಯಲು ಪುನರ್ಜನ್ಮ ಲಭಿಸದೋ ಆ ಮಹಾದೇವನಿಗೆ ನಾನು ನಮಿಸುವೆ."

ಸಾಹಿತ್ಯ ಸಾಧನೆಯ ಕ್ಷೇತ್ರದಲ್ಲಿ ವಿದ್ಯಾಭ್ಯಾಸವು ಅತ್ಯಂತ ಅಗತ್ಯವಾದ ಪ್ರಕ್ರಿಯೆ. ನೈಜ ಮಹತ್ವಾಕಾಂಕ್ಷೆಯು ಅಪರೂಪವಾದ್ದರಿಂದ ಕೇವಲ ಕೆಲವರು ಮಾತ್ರ ಇದರಲ್ಲಿ ಸಾಧನೆಯನ್ನು ಮಾಡುವರು. ವಿದ್ಯಾರ್ಥಿಯು ಸಾಹಿತ್ಯ ಪ್ರಪಂಚದಲ್ಲಿ ನೆಲೆಗೊಳ್ಳಬೇಕಾದರೆ ಅವನಲ್ಲಿ ಭಯರಹಿತ ಮನೋಭಾವವಿರಬೇಕು ಹಾಗೂ ಯಾವುದೇ ವಿಷಯದ ಮೂಲವನ್ನು ಶೋಧಿಸುವ ಗುಣವಿರಬೇಕು. ಅವನಲ್ಲಿ ಸ್ವತಂತ್ರ ಹಾಗೂ ವಿಶ್ಲೇಷಣಾತ್ಮಕ, ನಿಷ್ಪಕ್ಷಪಾತವಾದ ವಿಮರ್ಶಾತ್ಮಕ ದೃಷ್ಟಿ ಹಾಗೂ ಭಾಷಾ ಕ್ಲಿಷ್ಟತೆಗಳಲ್ಲಿ ಸಂಪೂರ್ಣ ಪಾಂಡಿತ್ಯವಿದ್ದಲ್ಲಿ ಅವನು ಪರಿಪೂರ್ಣ ವಿದ್ಯಾರ್ಥಿಯಾಗಬಲ್ಲನು.

ಗಣಪತಿ ಮುನಿಗಳು ತಮ್ಮ ಹದಿನೈದನೇ ವರ್ಷದಲ್ಲೇ ಸಂಸ್ಕೃತದ ಐದು ಮಹಾಕಾವ್ಯಗಳ ಅಧ್ಯಯನವನ್ನು ಮುಗಿಸಿದರು. ಅನಂತರ ಸಂಸ್ಕೃತ ಸಾಹಿತ್ಯದ ಮಹಾನ್ ಗ್ರಂಥಗಳಾದ ಚಂಪೂ ರಾಮಾಯಣ, ಕುವಲಯಾನಂದ, ಪ್ರತಾಪ ರುದ್ರೀಯಮ್ ಹಾಗೂ ಇತರ ಕಾವ್ಯಗಳನ್ನು ಅಧ್ಯಯನ ಮಾಡಿ ದೇವ ಭಾಷೆಯ ಮೇಲೆ ಸಂಪೂರ್ಣ ಹಿಡಿತವನ್ನು ಸಾಧಿಸಿದರು. ತನ್ನದೇ ಆದ ಸಂಸ್ಕೃತ ಶೈಲಿಯನ್ನು ಹೊಂದಿ ಅನೇಕ ವಿದ್ವಾಂಸರ ಹೊಗಳಿಕೆಗೆ ಪಾತ್ರನಾದರು. ಒಮ್ಮೆ ಗಣಪತಿ ಮುನಿಗಳು ತಮ್ಮ ಹದಿನಾಲ್ಕನೇ ವಯಸ್ಸಿನಲ್ಲಿ ಸಾಹಿತ್ಯ ಪ್ರಪಂಚಕ್ಕೆ "ನನ್ನ ನವೀನ ರೀತಿಯ ಸಂಸ್ಕೃತ ಶೈಲಿಯು ಅರ್ಥಶೂನ್ಯ ಮನಸ್ಸುಗಳಿಗೆ ಹಿಡಿಸದಿದ್ದರೆ ನನಗೇನೂ ನಷ್ಟವಾಗುವುದಿಲ್ಲ! ಕೋಗಿಲೆಯು ಎಂದಾದರೂ ಕಾಗೆಯ ಸಂತೋಷಕ್ಕೆ ಹಾಡುವುದೇ?" ಎಂದು ಸವಾಲು ಹಾಕಿದರು. ಇದು ಕೆಲವರ ಪ್ರತೀಕೂಲ ಅಭಿಪ್ರಾಯಕ್ಕೆ ಕೊಟ್ಟ ಉತ್ತರವಾಗಿರದಿದ್ದರೂ ಇದು ಕೇವಲ ಅವರ ಸ್ವತಂತ್ರವಾದ ಆಲೋಚನೆಯ ಬಗೆಗಿನ ಹೇಳಿಕೆಯಾಗಿತ್ತು. ಗಣಪತಿ ಮುನಿಗಳಿಗೆ ಪುರಾಣ ಹಾಗೂ

ಮಹಾಕಾವ್ಯಗಳಲ್ಲಿನ ಓರೆ ಕೋರೆಗಳನ್ನು ತೋರ್ಪಡಿಸುವ ಧೈರ್ಯವಿದ್ದದ್ದು, ಅದು ಅವರ ಸ್ವತಂತ್ರ ಸ್ವಭಾವ ಹಾಗೂ ಸಮಾಜ ಸೇವೆಯ ಅದಮ್ಯ ಬಯಕೆಯಿಂದಾಗಿ ಮಾತ್ರ. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನ ಒಂದು ಸಮ್ಮೇಳನದಲ್ಲಿ ಗಣಪತಿ ಮುನಿಗಳು ಮಹಾತ್ಮಾ ಗಾಂಧಿಯನ್ನು ಭೇಟಿಯಾಗಿ ಸಂಸ್ಕೃತ ಭಾಷೆಯನ್ನು ರಾಷ್ಟ್ರಭಾಷೆಯನ್ನಾಗಿ ಮಾಡಿದರೆ ಅದು ರಾಷ್ಟ್ರದ ಐಕ್ಯತೆಗೆ ಅಪಾರ ಶಕ್ತಿಯನ್ನು ತುಂಬುವುದೆಂದು ತಮ್ಮ ಅಭಿಪ್ರಾಯವನ್ನು ಮಂಡಿಸಿದರು. ಕೇವಲ ಕೆಲವೇ ಜನಗಳಿಗೆ ಸಂಸ್ಕೃತ ಜ್ಞಾನವಿರುವುದೆಂಬ ಕಾರಣದಿಂದ ಗಾಂಧೀಜಿಯವರು ಗಣಪತಿ ಮುನಿಗಳ ಸಲಹೆಯ ಕಾರ್ಯಸಾಧ್ಯತೆಯ ಬಗ್ಗೆ ಅನುಮಾನ ವ್ಯಕ್ತಪಡಿಸಿದರು. ಈ ನಿಟ್ಟಿನಲ್ಲಿ ಗಣಪತಿ ಮುನಿಗಳು "ಲಾಲಿ ಭಾಷಾ" ಎಂಬ ಸಂಸ್ಕೃತವನ್ನು ಸುಲಭವಾಗಿ ಕಲಿಯುವ ವಿಷಯವಾಗಿ ಪುಸ್ತಕವೊಂದನ್ನು ತಯಾರು ಮಾಡಿ ಅದನ್ನು ಕಾಂಗ್ರೆಸ್ ಪಕ್ಷದ ವರಿಷ್ಠರ ಮುಂದೆ ಪ್ರಸ್ತುತಿ ಪಡಿಸಿದರು. ಗಣಪತಿ ಮುನಿಗಳ ಎದೆಗುಂದದ ಅಪಾರ ಉತ್ಸಾಹವನ್ನು ಕಂಡು ವರಿಷ್ಠರೆಲ್ಲರೂ ಅತ್ಯಾಶ್ಚರ್ಯಪಟ್ಟರು.

ಸ್ವಲ್ಪ ದಿನಗಳಲ್ಲೇ ಗಣಪತಿ ಮುನಿಗಳು ಕಾಳಿದಾಸನ "ಮೇಘಸಂದೇಶ"ದ ರೀತಿಯಲ್ಲೇ ತಮ್ಮ ಪತ್ನಿಯ ದಟ್ಟವಾದ ಕೂದಲನ್ನೇ ಸಂದೇಶವಾಹಕನನ್ನಾಗಿ ಆರಿಸಿಕೊಂಡು "ಭೃಂಗ ಸಂದೇಶಮ್" ಎಂಬ ಸುಂದರ ಪದ್ಯವನ್ನು ರಚಿಸಿದರು. ಆದರೆ ಸ್ವಲ್ಪ ಸಮಯದ ನಂತರ ಅದನ್ನು ಹರಿದು ಹಾಕಿದರು.

ಗಣಪತಿ ಮುನಿಗಳ ಕೃತಿಗಳಲ್ಲಿ ಕಾಳಿದಾಸ ಹಾಗೂ ಶಂಕರಾಚಾರ್ಯರ ಪ್ರಭಾವವು ಅಪಾರವಾಗಿ ಬೀರಿರುವುದನ್ನು ಚೆನ್ನಾಗಿ ಗುರುತಿಸಬಹುದು. ಅವರು ರಚಿಸಿದ ಈ ಕೆಳಗಿನ ಶ್ಲೋಕಗಳೇ ಅವರು ಶಂಕರರ ಮಾರ್ಗವನ್ನನುಸರಿಸಿದ ಹಾಗೂ ಅವರ ಕೃತಿಗಳಲ್ಲಿ ಅಪಾರವಾದ ದೈವಭಕ್ತಿಯನ್ನು ಗಮನಿಸಬಹುದು:

ಕೃಪಾವಲೋಕೋ ನಗಕನ್ಯಕಾಯಾಃ ಕರೋತು ಮೇ ನಿರ್ಮಲಮಂತರಂಗಮ್ ।
ಯೇನಾಂಕಿತಃ ಶಂಕರ ಏಕತತ್ತ್ವಂ ವಿಶ್ವಂ ಲುಲೋಕೇ ಜಗತೇ ಜಗೌ ಚ ॥
– ಉಮಾಸಹಸ್ರಮ್ (4–13–3)

"ಯಾವ ಕಟಾಕ್ಷವನ್ನು ಪಡೆದು ಆಚಾರ್ಯರಾದ ಶಂಕರರು ಪ್ರಪಂಚವನ್ನು ಏಕತತ್ತ್ವವನ್ನಾಗಿ ಕಂಡು ಆ ತತ್ತ್ವವನ್ನು ಜಗತ್ತಿಗೆ ಉಪದೇಶಿಸಿದರೋ, ಪಾರ್ವತೀದೇವಿಯ ಆ ಕರುಣಾಪೂರಿತ ಕಟಾಕ್ಷವು ನನ್ನ ಮನಸ್ಸನ್ನು ಶುದ್ಧಗೊಳಿಸಲಿ."

ಕಾಲೀ ಕಟಾಕ್ಷೋ ವಚನಾನಿ ಮಹ್ಯಂ
ದದಾತು ಮೋಚಾಮದಮೋಚನಾನಿ

ಯತ್ಪಾಪಪೂತಂ ರಘುವಂಶಕಾರಂ
ನರಾಕೃತಿಂ ಪ್ರಾಹುರಜಸ್ಯ ಸಾರೀಮ್ ॥

– ಉಮಾಸಹಸ್ರಮ್ (4–13–4)

"ಪಾರ್ವತೀ ದೇವಿಯ ಕಟಾಕ್ಷವು ನನಗೆ ಮೋಚಾ ಎಂಬ ಬಾಳೆ ಹಣ್ಣಿನ ಮಾಧುರ್ಯವನ್ನು ಹೀಗಳೆಯುವ ಮಾತುಗಳನ್ನು ನೀಡಲಿ. ಯಾವ ಕಟಾಕ್ಷವು ರಘುವಂಶಕಾರನಾದ ಕಾಳಿದಾಸನನ್ನು ಸರಸ್ವತಿಯ ಅವತಾರವನ್ನಾಗಿ ಮಾಡಿತೋ ಪಾರ್ವತೀ ದೇವಿಯ ಆ ಕಟಾಕ್ಷವು ನನಗೂ ಮಧುರವಾದ ಮಾತುಗಳನ್ನು ನೀಡಲಿ."

ಗಣಪತಿ ಮುನಿಗಳು ತಮ್ಮ ಹದಿನಾಲ್ಕರಿಂದ ಹದಿನೆಂಟನೇ ವಯಸ್ಸಿನಲ್ಲಿ ಸಂಸ್ಕೃತ ವ್ಯಾಕರಣದ "ಸಿದ್ಧಾಂತ ಕೌಮುದೀ" ಶಾಸ್ತ್ರ ಗ್ರಂಥವನ್ನು ಬೊಬ್ಬಿಲಿ ನಗರದಲ್ಲಿದ್ದ ಸರ್ಕಾರಿ ಶಾಲೆಯಲ್ಲಿ ಅಧ್ಯಯನಮಾಡಿದ್ದಲ್ಲದೆ, ತಮ್ಮ ತಾತನು ವಾಸಿಸುತ್ತಿದ್ದ ಹಳ್ಳಿಯಾದ ಲೋಗೀಶ ಅಗ್ರಹಾರದಲ್ಲಿ ಸುಪ್ರಸಿದ್ಧ ವಿದ್ವಾಂಸರ ಬಳಿ ವ್ಯಾಕರಣ ಹಾಗೂ ಛಂದಃಶಾಸ್ತ್ರಗಳನ್ನು ಅಧ್ಯಯನಮಾಡಿ ನಂತರ ಪುರಾಣಗಳು, ವ್ಯಾಸ, ವಾಲ್ಮೀಕಿಗಳು ರಚಿಸಿದ್ದ ಕೃತಿಗಳನ್ನು ಆಳವಾಗಿ ಅಧ್ಯಯನ ಮಾಡಿ ಅದರ ಬಗೆಗೆ ಪ್ರವಚನ ಮಾಡುವ ಹಂತವನ್ನು ತಲುಪಿದರು.

ಈ ಸಂದರ್ಭದಲ್ಲಿ ಗಣಪತಿ ಮುನಿಗಳ ಪತ್ನಿ ವಿಶಾಲಾಕ್ಷಿಯು ಅವರನ್ನು ಸೇರಿಕೊಂಡಳು. ಪತಿಯ ಧ್ಯೇಯೋದ್ದೇಶಗಳನ್ನು ಅರ್ಥಮಾಡಿಕೊಂಡು ಅವಳು ಅವರ ಎಲ್ಲ ಕಾರ್ಯಗಳಲ್ಲೂ ಹೃದಯಪೂರ್ವಕವಾಗಿ ಸಹಕರಿಸತೊಡಗಿದಳು. ನೃಸಿಂಹ ಶಾಸ್ತ್ರಿ ಹಾಗೂ ಉಳಿದ ಕುಟುಂಬದ ಸದಸ್ಯರೆಲ್ಲರೂ ವಿಶಾಲಾಕ್ಷಿಯ ಪ್ರೀತಿಯ ವರ್ತನೆ ಹಾಗೂ ಸಹಕಾರ ಮನೋಭಾವನೆಯನ್ನು ಕಂಡು ಅತೀವ ಸಂತಸಪಟ್ಟರು.

೧೧

ಅಸಫಲ ಪ್ರಯತ್ನ

ವಿಜ್ಞಾನಿಯನ್ಮುಹುರಿದಂ ಚ ಮನಶ್ಚಲಂ ಯತ್
ಸೌಖ್ಯಂ ನಕಿಂಚಿದಪಿ ಯದ್ಯುದುಪರ್ಯಸೌಖ್ಯಂ
ತ್ವಾ ಮಾಶ್ರಿತಸ್ಯ ಚ ಮಮಾಖಿಲ ಲೋಕ ರಾಜ್ಞಿ
ಮತ್ತಃ ಪರೋ ಜಗತಿ ಕೋ ಮನುಜೇಷು ಕಲ್ಕೀ ॥

– ಉಮಾ ಶತಕಮ್

"ಓ ವಿಶ್ವದ ಸಾಮ್ರಾಜ್ಞಿಯೇ! ನಿನಗೆ ನನ್ನ ಹೃದಯ ಹಾಗೂ ಆತ್ಮವನ್ನು ಅರ್ಪಿಸಿದರೂ ನನ್ನ ಪ್ರಯತ್ನಗಳು ಇನ್ನೂ ಫಲಪ್ರದವಾಗಿಲ್ಲ. ನನ್ನ ಮನಸ್ಸು ಸದಾ ತುಯ್ದಾಡುತ್ತಿರುವುದು. ನನಗಿಂತ ಹತಭಾಗ್ಯರು ಹಾಗೂ ಪಾಪಿಗಳು ಬೇರೆ ಯಾರಾದರೂ ಇರುವರೇ?"

ಗಣಪತಿ ಮುನಿಗಳು ದುಸಿ ಗ್ರಾಮವನ್ನು ತೊರೆದು ತೆಕ್ಕಲಿ ಹಳ್ಳಿಗೆ ಬಂದರು. ಪ್ರಯಾಣದ ಅತಿಯಾದ ಆಯಾಸದಿಂದ ಅವರು ಸಂಪೂರ್ಣ ನಿಃಶಕ್ತನಾಗಿದ್ದರು. ಹಾಗೂ ತುಂಬಾ ಹಸಿದಿದ್ದರು. ಮನೆಯೊಂದರ ಮುಂದೆ ನಿಂತು ಭಿಕ್ಷೆಯನ್ನು ಬೇಡಿದರು. ಮನೆಯೊಡತಿಯು ಹೊರಗೆ ಬಂದು ಗಣಪತಿ ಮುನಿಗಳ ಪರಿಸ್ಥಿತಿಯನ್ನು ನೋಡಿದಳು. ಆದರೆ ಅವರ ಮನೆಯಲ್ಲಿ ಊಟದ ನಂತರ ಉಳಿದ ಒಂದೆರಡು ಹಿಡಿ ಅನ್ನ ಮಾತ್ರ ಉಳಿದಿತ್ತು. ಒಂದು ಕ್ಷಣ ಆಕೆ ಯೋಚಿಸಿದಳು. ಅನಂತರ ಹೇಗೂ ಗಣಪತಿ ಮುನಿಗಳು ಬಾಲಕನಾದ್ದರಿಂದ ಆಕೆಯು ಅವರಿಗೆ ಉಳಿದಿದ್ದ ಆಹಾರವನ್ನು ನೀಡಬಹುದೆಂದು ನಿರ್ಧರಿಸಿದಳು. ಅವಳು ಅತ್ಯಂತ ಪ್ರೀತಿಯಿಂದ ಆ ಆಹಾರವನ್ನು ಗಣಪತಿ ಮುನಿಗಳಿಗೆ ನೀಡಿದಳು. ಗಣಪತಿ ಮುನಿಗಳು ಕೂಡಲೇ ಅದನ್ನು ತಿಂದು ಅಲ್ಲೇ ಅವರ ಮನೆಯ ಪಡಸಾಲೆಯಲ್ಲಿ ಮಲಗಿದರು. ಮಲಗಿದ ಕೂಡಲೇ ಅವರು ನೆನಪಿನಂಗಳಕ್ಕೆ ಜಾರಿದರು.

"ಈಗ ನಾನು ಮನೆಯಿಂದ ಹೊರಬಂದು ಎರಡು ತಿಂಗಳಾಯಿತು. ವಿಶಾಲಾಕ್ಷಿಯು ತನ್ನ ತವರು ಮನೆಗೆ ಶ್ರಾವಣ ಮಾಸದ ವ್ರತವನ್ನು ಆಚರಿಸಲು ಹೋಗಿರುವಳು. ನಾನು ಹಾಗೂ ನನ್ನ ಅಣ್ಣ ಭೀಮಾ ಶಾಸ್ತ್ರಿ ಹಾಗೂ ಸ್ನೇಹಿತ ವೆಂಕಟೇಶ್ವರ ಶಾಸ್ತ್ರಿಗಳು ರಾಜಮಹೇಂದ್ರವರಂ ನಗರಕ್ಕೆ ತಪಸ್ಸನ್ನಾಚರಿಸಲು ಬಂದೆವು. ನಾಲ್ಕು ದಿನಗಳ ತಪಸ್ಸಿನ ನಂತರ ಭೀಮಾ ಶಾಸ್ತ್ರಿಯು ತಪಸ್ಸಿನಿಂದುಂಟಾದ ಆಯಾಸವನ್ನು ತಡೆಯಲಾಗದೇ ಊರಿಗೆ

ಮರಳಿದನು. ಈಗ ವೆಂಕಟೇಶ್ವರನೊಬ್ಬ ಮಾತ್ರ ನನ್ನ ಸಂಗಾತಿಯಾಗಿರುವನು. ನಾವಿಬ್ಬರೂ ಇಲ್ಲಿ ತಪಸ್ಸನ್ನಾಚರಿಸಲು ಸೂಕ್ತ ಸ್ಥಳವನ್ನು ಹುಡುಕಿದೆವು, ಆದರೆ ಈ ಜನಜಂಗುಳಿಯ ತೀರ್ಥಕ್ಷೇತ್ರದಲ್ಲಿ ಸೂಕ್ತ ಸ್ಥಳವು ದೊರಕಲೇ ಇಲ್ಲ."

ಈ ರೀತಿ ಯೋಚಿಸುತ್ತಾ ಗಣಪತಿ ಮುನಿಗಳು ಮೆಲ್ಲನೆ ಶಾಂತವಾದ ನಿದ್ರೆಗೆ ಜಾರಿದರು. ರಾತ್ರೆ 7 ಘಂಟೆಗೆ ಮನೆಯ ಯಜಮಾನನು ರಾತ್ರೆಯ ಊಟವನ್ನು ಮುಗಿಸಿ ಕೈದೀವಿಗೆಯನ್ನು ಹಿಡಿದುಕೊಂಡು ಮನೆಯಿಂದ ಹೊರಬಂದನು. ದೀಪದ ಬೆಳಕಿನಲ್ಲಿ ಅವನು ಗಣಪತಿ ಮುನಿಗಳ ಮುಖವನ್ನು ಸ್ಪಷ್ಟವಾಗಿ ನೋಡಿದನು. ದೀಪದ ಬೆಳಕು ಮುಖದ ಮೇಲೆ ಬಿದ್ದಿದ್ದರಿಂದ ಗಣಪತಿ ಮುನಿಗಳಿಗೆ ಎಚ್ಚರವಾಗಿ ಎದ್ದು ಕುಳಿತರು. ಮನೆಯ ಮಾಲೀಕನು ಅವನಿಗೆ ರಾತ್ರೆಯ ಊಟವನ್ನು ನೀಡಿದನು. ತಡವಾಗಿ ಊಟಮಾಡಿದ್ದರಿಂದ ಗಣಪತಿ ಮುನಿಗಳಿಗೆ ಹಸಿವಾಗಿರಲಿಲ್ಲ. ಅಷ್ಟರಲ್ಲಿ ವಾರಣಾಸಿಗೆ ಪಯಣಿಸುವ ಇಬ್ಬರು ಯಾತ್ರಿಕರು ಅಲ್ಲಿಗೆ ಬಂದರು. ಗಣಪತಿ ಮುನಿಗಳು ತಾವೂ ವಾರಣಾಸಿಗೆ ಹೋಗಬೇಕೆಂದು ಮನಸ್ಸಿನಲ್ಲಿ ಆಲೋಚಿಸುತ್ತಿದ್ದರು. ಈ ವಿಷಯವನ್ನರಿತ ಅವರಿಬ್ಬರಿಗೂ ತಮ್ಮೊಡನೆ ಮೂರನೇ ಯಾತ್ರಿಕನೊಬ್ಬನು ದೊರಕಿದನೆಂದು ಸಂತೋಷಪಟ್ಟರು.

ಸ್ವಲ್ಪ ಹೊತ್ತಿಗೆ ಅವರು ತಮ್ಮಲ್ಲಿದ್ದ ಇಸ್ಪೀಟು ಎಲೆಗಳನ್ನು ತೆಗೆದು ಆಡಲು ತಯಾರಿ ನಡೆಸತೊಡಗಿದರು. ಗಣಪತಿ ಮುನಿಗಳು ಹಾಗೂ ಕಾಶಿಗೆ ಪಯಣಿಸುವ ಇಬ್ಬರು ಅತಿಥಿಗಳು ವರಾಂಡದ ಒಂದು ಮೂಲೆಯಲ್ಲಿ ಇಸ್ಪೀಟನ್ನು ಆಡುತ್ತಿದ್ದರೆ, ಮತ್ತೊಂದು ಮೂಲೆಯಲ್ಲಿ ಕೆಲವು ಹಿರಿಯರು ಹಾಗೂ ಮನೆಯ ಮಾಲೀಕನು ಕುಳಿತಿದ್ದರು. ಮನೆಯ ಮಾಲೀಕ ರಾಮದಾಸನು ಕೆಲವು ಜಾತಕಗಳನ್ನು ಪರಿಶೀಲಿಸಲು ಹಿರಿಯರಲ್ಲಿನ ಒಬ್ಬರಿಗೆ ನೀಡಿದನು. ಆ ಜ್ಯೋತಿಷಿಯು ಅದನ್ನು ಪರಿಶೀಲಿಸಿ ಅದರ ಫಲವನ್ನು ವಿವರಿಸುತ್ತಿದ್ದನು. ಮತ್ತೊಂದು ಮೂಲೆಯಲ್ಲಿ ಕುಳಿತಿದ್ದ ಗಣಪತಿ ಮುನಿಗಳು ಇದನ್ನು ಆಲಿಸಿ ಅದು ತಪ್ಪಾಗಿರುವುದೆಂದು ಗ್ರಹಿಸಿ, ಅಲ್ಲಿಂದಲೇ ಈ ಜ್ಯೋತಿಷಿಗೆ ಜ್ಯೋತಿಷ್ಯದ ಬಗ್ಗೆ ಏನೂ ಗೊತ್ತಿಲ್ಲವೆಂದು ಹೇಳಿದರು. ಆ ಹಿರಿಯ ಜ್ಯೋತಿಷಿಯು ಸ್ವಾಭಾವಿಕವಾಗಿ ಕೋಪಗೊಂಡು ಗಣಪತಿ ಮುನಿಗಳನ್ನು ಹಾಗಿದ್ದಲ್ಲಿ ನೀನೇ ಸರಿಯಾಗಿ ಜಾತಕವನ್ನು ಪರಿಶೀಲಿಸುವಂತೆ ಪಂಥಾಹ್ವಾನವನ್ನು ನೀಡಿದನು. ಗಣಪತಿ ಮುನಿಗಳು ಜಾತಕವನ್ನು ಕೂಲಂಕುಷವಾಗಿ ಪರಿಶೀಲಿಸಿ ಸುಲಭವಾಗಿ ಹಾಗೂ ಸ್ಪಷ್ಟವಾಗಿ ಫಲಗಳನ್ನು ವಿವರಿಸಿದರು. ಮನೆಯ ಮಾಲೀಕನು ಗಣಪತಿ ಮುನಿಗಳನ್ನು ಸಾಮಾನ್ಯನಲ್ಲವೆಂದು ಅರಿತು ಅಂಥವನಿಗೆ ತನ್ನ ಊಟವಾದ ನಂತರ ಉಳಿದ ಆಹಾರವನ್ನು ನೀಡಿದ್ದಕ್ಕೆ ವಿಷಾದಿಸಿದನು. ಅವನು ಗಣಪತಿ ಮುನಿಗಳನ್ನು ಈ ಗ್ರಾಮದಲ್ಲೇ ಕೆಲವು ದಿನ ಉಳಿದುಕೊಳ್ಳುವಂತೆ ಕೇಳಿಕೊಂಡನು. ಆದರೆ ಗಣಪತಿ ಮುನಿಗಳಿಗೆ ಕಾಶಿಗೆ ಹೋಗಲು ಒಳ್ಳೆಯ ಸಹಪ್ರಯಾಣಿಕರು ಸಿಕ್ಕಿದ್ದರಿಂದ ಅವರು ರಾಮದಾಸನ ಕೋರಿಕೆಯನ್ನು ತಿರಸ್ಕರಿಸಿದರು.

ಮಾರನೇ ದಿನ ಬೆಳಗ್ಗೆ ವೆಂಕಟೇಶ್ವರ ಶಾಸ್ತ್ರಿಯು ಊರಿಗೆ ಮರಳಿದನು ಹಾಗೂ ಗಣಪತಿ ಮುನಿಗಳು ಮತ್ತಿಬ್ಬರು ಪ್ರಯಾಣಿಕರು ಕಾಶಿಯೆಡೆಗೆ ಪಯಣಿಸಿದರು. ರಾಮದಾಸನು ಆ ಹಿರಿಯ ಜ್ಯೋತಿಷಿಗೆ ಏನೋ ಗುಟ್ಟಾಗಿ ಹೇಳಿದನು. ಅದರಂತೆ ಆ ಹಿರಿಯ ಜ್ಯೋತಿಷಿಯು ಅವರ ಜೊತೆ ಪಯಣಿಸಿ ಮುಂದಿನ ವಿಶ್ರಾಂತಿಯ ಊರಾದ ನಂದಿಗ್ರಾಮದಲ್ಲಿ ಆ ಮೂವರಿಗೂ ಉಳಿದುಕೊಳ್ಳುವ ಹಾಗೂ ಊಟೋಪಚಾರ ವ್ಯವಸ್ಥೆಯನ್ನು ಮಾಡಿಕೊಟ್ಟನು.

ನಂದಿಗ್ರಾಮದಲ್ಲಿ ಅಚ್ಯುತರಾಮ ಶಾಸ್ತ್ರಿ ಎಂಬ ಮಹಾನ್ ವಿದ್ವಾಂಸರು ವಾಸಿಸುತ್ತಿದ್ದರು. ಹಿರಿಯ ಜ್ಯೋತಿಷಿಯು ಗಣಪತಿ ಮುನಿಗಳನ್ನು ಅವರಿಗೆ ಪರಿಚಯಿಸಿದರು. ಶಾಸ್ತ್ರಿಗಳಿಗೆ ಗಣಪತಿ ಮುನಿಗಳನ್ನು ನೋಡಿ ಅತ್ಯಾಶ್ಚರ್ಯವಾಯಿತು, ಏಕೆಂದರೆ ಹಿಂದಿನ ರಾತ್ರೆ ತಾನೇ ಅವರಿಗೆ ಕನಸಿನಲ್ಲಿ ಒಂದು ದೊಡ್ಡ ಆನೆಯು ಛತ್ರವನ್ನು ಪ್ರವೇಶಿಸುತ್ತಿದ್ದಂತೆ ಕಂಡಿತ್ತು. ಈಗ ಅವರು ಪ್ರಕಾಶಮಾನವಾದ ಬಾಲಕನು ತಾನು ಗಣಪತಿಯೆಂದು ಪರಿಚಯಿಸುತ್ತಾ ತನ್ನೆದುರಿಗೆ ನಿಂತಿರುವನು (ಗಜಮುಖ ದೇವ, ಮಾತೆ ಪಾರ್ವತಿಯ ಪುತ್ರ). ಗಣಪತಿಯ ಜ್ಯೋತಿಷ್ಯದ ಬಗ್ಗೆ ಇರುವ ಅಪಾರ ಜ್ಞಾನವನ್ನು ಅರಿತು ಅತ್ಯಂತ ಸಂತೋಷವುಳ್ಳವರಾಗಿ ಅವನನ್ನು ಶ್ರೀ ಕೃಷ್ಣ ನಾಯ್ಡು ಅವರ ಮನೆಗೆ ಕರೆದೊಯ್ದು ಗಣಪತಿ ಮುನಿಗಳನ್ನು ಅವರಿಗೆ ಪರಿಚಯಿಸಿದರು.

ಕೃಷ್ಣಾ ನಾಯ್ಡು ಅವರು ಬಹಳಷ್ಟು ಶ್ರೀಮಂತರಾಗಿದ್ದರೂ ಅವರು ಬಹಳ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಅವರಿಗೆ ಇಬ್ಬರು ಪತ್ನಿಯರು, ಹಾಗೂ ಮಕ್ಕಳಿರಲಿಲ್ಲ. ಹೀಗಾಗಿ ಮನೆಯಲ್ಲಿ ಸಂತೋಷವಿರಲಿಲ್ಲ. ಕೃಷ್ಣಾ ನಾಯ್ಡು ಗಣಪತಿ ಮುನಿಗಳನ್ನು ಪ್ರೀತಿಯಿಂದ ಬರಮಾಡಿಕೊಂಡು ತನ್ನ ಜಾತಕವನ್ನು ಕೊಟ್ಟು ಅದನ್ನು ಪರೀಕ್ಷಿಸಬೇಕೆಂದು ಕೇಳಿಕೊಂಡರು. ಗಣಪತಿ ಮುನಿಗಳು ಕೂಲಂಕುಷವಾಗಿ ಜಾತಕವನ್ನು ನೋಡಿ ಕೃಷ್ಣಾ ನಾಯ್ಡು ಅವರಿಗೆ ಅವರು ಅನುಭವಿಸುತ್ತಿರುವ ಅನಾರೋಗ್ಯವು ಇನ್ನೂ ಮೂರುತಿಂಗಳವರೆಗೂ ಮುಂದುವರೆದು ಅನಂತರ ಅವರು ಆರೋಗ್ಯವಂತರಾಗುವರೆಂದೂ ಹಾಗೂ ಅವರ ಎರಡನೇ ಪತ್ನಿಯಿಂದ ಒಂದು ಗಂಡು ಮಗುವು ಜನಿಸುವುದೆಂದು ನುಡಿದರು. ಮುಂದುವರೆದು ಗಣಪತಿ ಮುನಿಗಳು ನಾಯ್ಡು ಅವರಿಗೆ ಅವರು ಒಬ್ಬ ಹುಡುಗನನ್ನೂ ದತ್ತು ತೆಗೆದುಕೊಳ್ಳುವರೆಂದು ನುಡಿದರು. ಇದರಿಂದ ಚಿಂತೆಯಿಂದ ಬಿಡುಗಡೆಯಾದ ಹಾಗೂ ಅತ್ಯಂತ ಅನಂದಭರಿತರಾದ ನಾಯ್ಡು ಗಣಪತಿ ಮುನಿಗಳನ್ನು ಅಲ್ಲಿಯವರೆಗೂ ನಂದಿಗ್ರಾಮದಲ್ಲಿ ಇರುವಂತೆ ವಿನಂತಿಸಿಕೊಂಡರು. ಅವರ ಮೇಲಿನ ಕರುಣೆಯಿಂದ ಗಣಪತಿ ಮುನಿಗಳು ಅಲ್ಲೇ ನೆಲಸಲು ಒಪ್ಪಿದರು.

ಗಣಪತಿ ಮುನಿಗಳು ನಾಯ್ಡು ಅವರ ಅತಿಥ್ಯವನ್ನು ಆನಂದಿಸುತ್ತಾ ತನ್ನ ವಿಶೇಷ ಪ್ರತಿಭೆಯನ್ನು ಪ್ರದರ್ಶಿಸುತ್ತಾ ಎಲ್ಲರಿಂದಲೂ ಪ್ರೀತಿಯನ್ನು ಸಂಪಾದಿಸತೊಡಗಿದರು.

ವಿದ್ವಾಂಸರ ಸಭೆಗಳಲ್ಲಿ ನಡೆಯುವ ಚರ್ಚೆಗಳಲ್ಲಿ ಭಾಗವಹಿಸುತ್ತಾ ಹಾಗೂ ನಾಲ್ಕು ಆಟಗಾರರೊಂದಿಗೆ ಏಕಕಾಲದಲ್ಲಿ ಚದುರಂಗದಾಟವನ್ನು ಆಡುತ್ತಾ, ಕವನ / ಪದ್ಯಗಳನ್ನು ಹಿಂದು ಮುಂದಾಗಿ ಓದುತ್ತಾ, ಪುಸ್ತಕವೊಂದರಲ್ಲಿನ ಮೊದಲೇ ನಿರ್ಧರಿಸಿರುವ ಪುಟದಲ್ಲಿರುವ ವಿಷಯವನ್ನು ಅದನ್ನು ನೋಡದೇ ಅದನ್ನು ಮೇಲೆಸದು ಅದು ಕೆಳಗೆ ಬೀಳುವ ಮೊದಲೇ ಹೇಳಿಬಿಡುತ್ತಿದ್ದರು. ಗಣಪತಿ ಮುನಿಗಳ ಈ ರೀತಿಯ ಅನೇಕ ಸಾಹಸ ಕೃತ್ಯಗಳಿಂದಾಗಿ ನಾಯ್ಡು ಅವರ ಮನೆಯು ಸದಾ ಆನಂದದಿಂದ ತುಂಬಿ ತುಳುಕುತ್ತಿತ್ತು. ಹೀಗೆ ಮೂರು ತಿಂಗಳುಗಳು ಮೂರು ಕ್ಷಣದಂತೆ ಕಳೆದುಹೋಯಿತು ಹಾಗೂ ನಾಯ್ಡು ಅವರು ಆರೋಗ್ಯವಂತರಾದರು. ಮೂರು ತಿಂಗಳು ಮುಗಿದನಂತರ ನಾಯ್ಡು ಗಣಪತಿ ಮುನಿಗಳಿಗೆ ತಾನು ಅವರ ತಂದೆಯವರಿಗೆ ಹೇಳಿ ಕಳಿಸಿರುವುದಾಗಿ, ಹಾಗೂ ಅವರು ಒಂದೆರಡು ದಿನದಲ್ಲಿ ಬರುವುದಾಗಿಯೂ ಮತ್ತು ಅವರೊಂದಿಗೆ ಮನೆಗೆ ಹೋಗಬಹುದೆಂದು ತಿಳಿಸಿದರು.

ನಾಯ್ಡುವು, "ಗಣಪತಿ, ನಿನಗೆ ದಿವ್ಯ ಜ್ಞಾನವಿದೆ. ನನ್ನ ಮನೆಯಲ್ಲಿ ಇಷ್ಟುದಿನ ಇದ್ದು ನೀನು ನಮ್ಮನ್ನು ಆಶೀರ್ವದಿಸಿರುವೆ. ನೀನು ಇನ್ನೂ ಚಿಕ್ಕ ವಯಸ್ಸಿನ ಬಾಲಕ. ಈಗಲೇ ವಾರಣಾಸಿಗೆ ಹೋಗಲು ಏತಕ್ಕೆ ಯೋಚಿಸುವೆ? ನಿಮ್ಮ ತಂದೆಯೊಂದಿಗೆ ದಯವಿಟ್ಟು ಮನೆಗೆ ಹೋಗು. ಯಾವ ಸಂದರ್ಭದಲ್ಲಿ ನೀನು ತಪಸ್ಸನ್ನು ಪ್ರಾರಂಭಿಸಬೇಕೆಂದುಕೊಳ್ಳುತ್ತೀಯೋ ಅಂದಿನಿಂದಲೇ ನಾನು ವಾರ್ಷಿಕವಾಗಿ 50 ರೂಪಾಯಿಗಳನ್ನು ಕಳಿಸುವೆ ಹಾಗೂ ನಿನಗಿಷ್ಟವಾದ ಯಾವುದೇ ರೀತಿಯಲ್ಲಾದರೂ ಸಹಾಯ ಮಾಡುವೆ. ನಿನಗೆ ತಪಸ್ಸನ್ನಾಚರಿಸಲು ಬಹಳ ಸಮಯವಿದೆ. ದಯವಿಟ್ಟು ನನ್ನ ಬುದ್ಧಿವಾದವನ್ನು ಆಲಿಸಿ ನಿನ್ನ ತಂದೆಯೊಂದಿಗೆ ಮನೆಗೆ ಹೋಗು."

ಮಾರನೇ ದಿನ ನೃಸಿಂಹ ಶಾಸ್ತ್ರಿಗಳು ನಂದಿಗ್ರಾಮಕ್ಕೆ ಬಂದರು ಹಾಗೂ ಗಣಪತಿ ಮುನಿಗಳು ಅವರೊಂದಿಗೆ ಮನೆಗೆ ಹೋಗಲು ಒಪ್ಪಿದರು.

೧೨

ಭದ್ರಕ

ಭದ್ರತರ ಮೂರ್ತಿಂ ಭದ್ರತಮ ಕೀರ್ತಿಂ
ರುದ್ರ ತನಯಂ ತಂ ಗಾಯತ ಮಹಾಂತಮ್ ॥
– ಗಣಪತಿ ಗೀತಮ್

"ಭವ್ಯವಾದ ರೂಪವುಳ್ಳ ಹಾಗೂ ಪರಮ ಪವಿತ್ರವಾದ ಖ್ಯಾತಿಯನ್ನು ಹೊಂದಿರುವ ರುದ್ರ ಪುತ್ರನಾದ ಗಣಪತಿಯ ವೈಭವವನ್ನು ಹಾಡು."

ಗಾಂಧೀಜಿಯು ಯಾವಾಗಲೂ ಹೊಸ ಕೆಲಸವನ್ನು ಪ್ರಾರಂಭಿಸುವ ಮೊದಲು ಅದನ್ನು ಶ್ರೀ ರಾಮನಿಗೆ ಅರ್ಪಿಸಿ, ಅದರ ಕರ್ತೃತ್ವವು ತಮ್ಮದೇ ಆದರೂ, ಅದರ ಫಲವು ಶ್ರೀರಾಮನದೆ ಎಂದು ಪ್ರಾರ್ಥಿಸುತ್ತಿದ್ದರು. ಹೀಗೆ ಅವರು ಎಲ್ಲ ಕೆಲಸಗಳನ್ನೂ ನಿರ್ಲಿಪ್ತ ಮನೋಭಾವನೆಯಿಂದ ಮಾಡುತ್ತಿದ್ದರು. ಮಹಾತ್ಮರು ಈ ರೀತಿಯಾಗಿ ಕೆಲಸ ಮಾಡುತ್ತಾರೆ ಹಾಗೂ ಏನೇ ಮಾಡಿದರೂ ಅದನ್ನು ಭಗವಂತನ ಇಚ್ಛೆ ಎಂದು ಪರಿಗಣಿಸುತ್ತಾರೆ.

ಮುಕ್ತಿಯನ್ನು ಪಡೆಯುವ ಆಸೆಯಿಂದ ಸಾಮಾನ್ಯವಾಗಿ ತಪಸ್ಸನ್ನಾಚರಿಸುತ್ತಾರೆ. ಆದ ಗಣಪತಿ ಮುನಿಗಳು ತಾವು ಮುಕ್ತಿಯ ಆಸೆಯಿಂದ ತಪಸ್ಸಾನ್ನಾಚರಿಸುವುದಿಲ್ಲವೆಂ ಹೇಳಿದರು. ಅವರ ಏಕೈಕ ಪ್ರಾರ್ಥನೆಯೆಂದರೆ ದೇಶದ ಒಳಿತು ಹಾಗೂ ಪರಕೀಯ ಆಳ್ವಿಕೆಯಿಂದ ಮುಕ್ತಿ. ಅವರ ಬಾಲ್ಯದಿಂದಲೂ ಗಣಪತಿ ಮುನಿಗಳ ಏಕೈಕ ಗುರಿಯೆಂದ ತನ್ನ ದೇಶವು ಪರಕೀಯರ ಆಳ್ವಿಕೆಯಿಂದ ಮುಕ್ತಿಯನ್ನು ಪಡೆಯುವುದು. ಅವರು ಈ ಗುರಿಗಾಗಿಯೇ ತಪಸ್ಸನ್ನಾಚರಿಸಿದರು.

ತಮ್ಮ ಮೊದಲನೇ ಪ್ರಯತ್ನವು ವಿಫಲವಾದರೂ ಗಣಪತಿ ಮುನಿಗಳು ಅದರಿಂದ ವಿಚಲಿತರಾಗಲೂ ಇಲ್ಲ ಹಾಗೂ ಪ್ರಯತ್ನವನ್ನು ಬಿಟ್ಟುಕೊಡಲೂ ಇಲ್ಲ. ಹಾಗೆ ನೋಡಿದರೆ ತಪಸ್ಸನ್ನಾಚರಿಸುವ ಅವರ ಆಸೆಯು ಹೆಚ್ಚಾಯಿತು. ಗಣಪತಿ ಮುನಿಗಳ ತಂದೆಯು ಇದನ್ನು ವಿರೋಧಿಸಲಿಲ್ಲ. ಆದರೆ ಅವರು ಸರಿಯಾದ ರೀತಿಯಲ್ಲಿ ತಪಸ್ಸನ್ನಾಚರಿಸುವ ಮಾರ್ಗವನ್ನು ತೋರಿದರು. ಅವರು ಮಗನಿಗೆ, "ಮಗು, ತಪಸ್ಸು ಪವಿತ್ರವಾದದ್ದು. ಅದನ್ನು ಪ್ರಾರಂಭಿಸಲು ಶುಭ ಸಮಯವು ಒದಗಿ ಬರಬೇಕು. ಸುಮ್ಮನೆ ತೀರ್ಥ ಕ್ಷೇತ್ರಗಳಿಗೆ

ಹೋಗುವುದು. ನದಿ ದಡ ಅಥವಾ ಸಮುದ್ರ ತೀರಗಳಿಗೆ ಹೋಗುವುದಷ್ಟೇ ಸಾಲದು. ಇದಕ್ಕೆ ಭಗವಂತನ ದಯೆ ಇರಬೇಕು. ಅದರ ಬಗ್ಗೆ ನಿರಾಶೆಯನ್ನು ತಳೆಯುವುದಾಗಲಿ ಅಥವಾ ಕ್ಷೋಭೆಗೊಳಗಾಗುವುದಾಗಲಿ ಏನೂ ಉಪಯೋಗವಿಲ್ಲ. ಶಾಂತಚಿತ್ತನಾಗು ಹಾಗೂ ಎಲ್ಲವನ್ನೂ ನಿನಗೆ ಜನ್ಮ ಕೊಟ್ಟ ಗಣಪತಿ ಮತ್ತು ಸೂರ್ಯನಾರಾಯಣ ದೇವರ ಇಚ್ಛೆಗೆ ಬಿಡು. ನೀನು ಶ್ರೀಚಕ್ರ ಪೂಜೆಯನ್ನು ಪ್ರಾರಂಭಿಸು. ನಿನಗೆ ಅರಿವಿರಬಹುದು, ನಮ್ಮ ಕುಟುಂಬವು ಮಾತೆಯನ್ನು ಶ್ರೀವಿದ್ಯಾ ಪದ್ಧತಿಯಂತೆ ಪೂಜಿಸುವುದು. ನಾನು ಈ ಪದ್ಧತಿಯನ್ನು ಹಾಗೂ ಮಂತ್ರವನ್ನು ನಿನಗೆ ಉಪದೇಶಿಸುವೆ. ನೀನು ನಮ್ಮ ಮನೆಯಲ್ಲಿ ನಡೆಯುವ ಪೂಜೆಯಲ್ಲಿ ಭಾಗವಹಿಸಬಹುದು." ಎಂದರು.

ಶಾಸ್ತ್ರಿಗಳು ತಮ್ಮ ಮಗನಿಗೆ ಮಹಾ ಗಣಪತಿ ಮಂತ್ರವನ್ನು ಉಪದೇಶಿಸಿದರು. ತಂದೆಯವರ ಬುದ್ಧಿವಾದವನ್ನು ಸ್ವೀಕರಿಸಿ ಗಣಪತಿ ಮುನಿಗಳು ಶ್ರೀಚಕ್ರ ಪೂಜೆಯನ್ನು ಪ್ರಾರಂಭಿಸಿದರು. ಈ ಮಹಾನ್ ಕಾರ್ಯವು ಮುಂದೆ ಗಣಪತಿ ಮುನಿಗಳ ಜೀವನದಲ್ಲಿ ತಪಸ್ಸಿನ ಮಹಾನ್ ವೃಕ್ಷಕ್ಕೆ ಮೊಳಕೆಯಾಯಿತು.

ಶ್ರೀವಿದ್ಯೆಯನ್ನು ಆತ್ಮವಿದ್ಯಾ ಮತ್ತು ಚಂದ್ರವಿದ್ಯಾ ಎಂದೂ ಕರೆಯುವರು. ಈ ಮಹಾನ್ ಶಕ್ತಿಯನ್ನು ದಿವ್ಯ ಮಾತೆಯನ್ನಾಗಿ ಪೂಜಿಸಲಾಗುವುದು. ಈ ವಿಧದ ಪೂಜೆಯು ಮೂರು ರೀತಿಯದ್ದು – ಕೌಲ, ಸಮಯ ಮತ್ತು ಮಿಸ್ರಮ. ಸನತ್ಕುಮಾರ, ವಸಿಷ್ಠ ಹಾಗೂ ಶುಕ ಮುನಿಗಳು ಸಮಯ ರೀತಿಯಲ್ಲಿ ಪೂಜಿಸುತ್ತಿದ್ದರು. ಸಮಯ ಪದದ ಅರ್ಥವೆಂದರೆ "ಅವನು (ಭಗವಂತ) ನನ್ನೊಡನಿರುವನು" ಎಂದು. ಈ ಪದ್ಧತಿಯನ್ನು ಶಂಕರರು ತಮ್ಮ ಸೌಂದರ್ಯಲಹರಿಯಲ್ಲಿ ವಿವರಿಸಿರುವರು.

ಕುಂಡಲಿನೀ ಶಕ್ತಿಯನ್ನು ಮೂಲಾಧಾರ ಚಕ್ರದಲ್ಲಿ ಜಾಗೃತಿಗೊಳಿಸಬೇಕು ಮತ್ತು ಅದನ್ನು ಮೂಲಾಧಾರ ಹಾಗೂ ಸಹಸ್ರಾರ ಚಕ್ರಗಳ ನಡುವೆ ಇರುವ ಆರು ಚಕ್ರಗಳನ್ನು ದಾಟಿ ಸಹಸ್ರಾರ ಚಕ್ರದಲ್ಲಿ ಕುಂಡಲಿನೀ ಶಕ್ತಿಯನ್ನು ಸೇರಿಸಬೇಕು. ಈ ಸಾಧನೆಯ ಮೂಲಕ ಕಟ್ಟ ಕಡೆಗೆ ಗಣಪತಿ ಮುನಿಗಳು ಕಪಾಲ ಭೇದ ಸಿದ್ಧಿಯನ್ನು ಸಾಧಿಸಿದರು. (ಮೆದುಳಿನ ಹೊರಭಾಗದ ಹೊದಿಕೆಯನ್ನು ಭೇದಿಸಿ ಅದರೊಳಗಿರುವ ಬಂಧನ ಶಕ್ತಿಯನ್ನು ವಿಮೋಚನೆಗೊಳಿಸುವ ಶಕ್ತಿಯೇ ಕಪಾಲ ಭೇದ). ಕುಂಡಲಿನಿಯಿಂದ ಸಹಸ್ರಾರದೆಡೆಗಿನ ಆರೋಹದ ವಿಧಾನವನ್ನು ಗಣಪತಿ ಮುನಿಗಳು "ಗುರು ಗೀತಮ್" ಕೃತಿಯಲ್ಲಿ ವಿವರಿಸಿದ್ದಾರೆ:

ಆಧಾರೆ ಧೃತಮೂಲಂ ಹಾರ್ದಾಬ್ಜೇ ಕೃತವಾಸಂ
ಶ್ರೀಷಾಬ್ಜಾಯ ವಹದ್ಯತ್ ಪಶ್ಚಾತ್ ಇಂದ್ರಿಯ ಶಕ್ತ್ಯೈ ॥

– ಗುರು ಗೀತಮ್

"ಮೂಲಾಧಾರ ಚಕ್ರದಲ್ಲಿ ಭದ್ರವಾಗಿ ಬೇರುಬಿಟ್ಟಿರುವ ಆ ಶಕ್ತಿಯು ಹೃದಯದಲ್ಲಿನ

ಅನಾಹತ ಚಕ್ರದಲ್ಲಿ ನೆಲೆಸಿ ಮುಂದುವರೆದು ಶಿರದಲ್ಲಿನ ಸಹಸ್ರಾರದೆಡೆಗೆ ಆರೋಹಣಮಾಡಿ ನಂತರ ಅವರೋಹಣದ ಮೂಲಕ ಪಂಚೇಂದ್ರಿಯಗಳಲ್ಲಿ ನೆಲೆಸುವುದು. ಇದೇ ಪ್ರಾಣ ರೂಪ."

ಯಾತಾಯಾತ ವಿಹಾರೈ ರಾಧಾರೇಷುಚ ಶಿರೇ
ಸಂಚಾರಂ ವಿದಧಾನಂ ಕಿಂಚಾ ಶೇಷ ವಿಸಾರಿ ॥

– ಗುರು ಗೀತಮ್

"ಷಟ್ಚಕ್ರಗಳಲ್ಲಿ ಒಳಗೆ ಮತ್ತು ಹೊರಗೆ ಚಲಿಸುವ ಹಾಗೂ ಎಲ್ಲೆಡೆ ಪಸರಿಸಿರುವ ಶಕ್ತಿಯು ಶ್ರೀ ರಮಣರ ಮೂಲಕ ನನ್ನಲ್ಲಿ ಸ್ಫೂರ್ತಿಯನ್ನು ತುಂಬಲಿ."

ಅವತರಣಂ ಧ್ಯಾತಂ ಚೇದ್ ಆರೋಹಣ ಮದ್ಭುತಂ ಭವೇಚ್ಛಕ್ತೇಃ
ಯಸ್ಮಿನ್ನಿದಂ ಶರೀರಂ ಭವತಿ ಮಹಾವೈದ್ಯುತಾಗ್ನಿಯಂತ್ರಮಿವ ॥

– ಉಮಾಸಹಸ್ರಮ್ (1–4–10)

"ಶಕ್ತಿಯು ಶೀರ್ಷದ್ವಾರದಿಂದ ಬೆನ್ನು ಹುರಿಯಲ್ಲಿ ಇಳಿಯುವುದನ್ನು ಧ್ಯಾನ ಮಾಡಿದರೆ ಅತಿ ಶಕ್ತಿಯುತವಾದ ಮೋಟಾರಿನಿಂದ ಉಂಟಾಗುವಂಥ ಕಂಪನಗಳ ಅನುಭವ ಉಂಟಾಗುತ್ತದೆ."

1897ರ ಆಶ್ವಯುಜ ಮಾಸದ ನವರಾತ್ರೆಯ ಮೊದಲನೇ ದಿನದಂದು ನೃಸಿಂಹ ಶಾಸ್ತ್ರಿಗಳ ಮನೆಯಲ್ಲಿ ದೇವಿ ಪೂಜೆಗಳು ಪ್ರಾರಂಭವಾದುವು. ಪ್ರತಿದಿನವೂ ಸುತ್ತ ಮುತ್ತಲಿನ ಹಳ್ಳಿಗಳಿಂದ ಭಕ್ತರು ಇವರ ಮನೆಗೆ ಬಂದು ದೇವಿ ದರ್ಶನವನ್ನು ಮಾಡಿ ತೀರ್ಥ ಪ್ರಸಾದಗಳನ್ನು ಪಡೆದು ಹೋಗುತ್ತಿದ್ದರು. ವೇದಿಕೆಯ ಮೇಲೆ ಗುಲಾಬಿ ಬಣ್ಣದ ನೆರಳಿನಲ್ಲಿ ಶ್ರೀಚಕ್ರ ಯಂತ್ರವನ್ನು ಪ್ರತಿಷ್ಠಾಪಿಸಿ ಪೂಜಿಸುತ್ತಿದ್ದರು. ಈ ಯಂತ್ರವನ್ನು ದೇವಿ ಸ್ವರೂಪವೆಂದು ಪರಿಗಣಿಸಲಾಗುವುದು. ಪೂಜಿಸುತ್ತಿದ್ದ ಗಣಪತಿ ಮುನಿಗಳ ಮುಖವು ದೈವೀ ಕಳೆಯಿಂದ ಪ್ರಕಾಶಿಸುತ್ತಿತ್ತು. ಪೂಜಾ ಸಮಯದಲ್ಲಿ ಗಣಪತಿ ಮುನಿಗಳು ಅತೀಂದ್ರಿಯ ಸ್ಥಿತಿಯಲ್ಲಿರುತ್ತಿದ್ದರು. ಹುಣ್ಣಿಮೆಯ ದಿನದಂದು ಒಂಬತ್ತು ರಾತ್ರೆಗಳ ಪೂಜೆಯು ಪರಿಸಮಾಪ್ತಿಯಾಗುವುದು. ಇದಾದನಂತರ ಹದಿನೈದು ದಿನಗಳ ಪರ್ಯಂತವಾಗಿ ಕಠಿಣ ವ್ರತವನ್ನಾಚರಿಸಿ ಅತೀವವಾಗಿ ಸುಸ್ತಾಗಿದ್ದ ಗಣಪತಿ ಮುನಿಗಳು ಹಾಗೇ ಕಣ್ಣು ಮುಚ್ಚಿ ವಿಶ್ರಾಂತ ಸ್ಥಿತಿಗೆ ಜಾರಿದರು.

ಸ್ವಲ್ಪ ಸಮಯದಲ್ಲೇ ಅವರಿಗೆ ಯಾರೋ ಹತ್ತಿರದಲ್ಲೇ ಪ್ರೀತಿ ತುಂಬಿದ ಹಾಗೂ ಅತ್ಯಂತ ಮೃದು ಧ್ವನಿಯಲ್ಲಿ "ಗಣಪತಿ! ಗಣಪತಿ!" ಎಂದು ಕರೆದಂತೆ ಭಾಸವಾಗಿ ಕಣ್ಣು ತೆರೆದು ಸುತ್ತಲೂ ನೋಡಿದಾಗ ವೇದಿಕೆಯಿಂದ ಪ್ರಕಾಶಮಾನವಾದ ರೂಪವೊಂದು ಹೊರಬರುವುದನ್ನು ಗಣಪತಿ ಮುನಿಗಳು ಕಂಡರು. ಅದಕ್ಕೆ ಗಣಪತಿ ಮುನಿಗಳು ಕೈಜೋಡಿಸಿ

ನಮಿಸಿ ಪುರಾತನ ಕಾಲದ ಶ್ವೇತ ಗಡ್ಡವುಳ್ಳ ಋಷಿಯಂತಿರುವ ರೂಪವನ್ನು ಕಂಡು ನಮ್ರತೆಯಿಂದ "ನೀವು ಯಾರು?" ಎಂದು ಪ್ರಶ್ನಿಸಿದಾಗ, ಆ ರೂಪದಿಂದ "ನಾನು ಭದ್ರಕ" ಎಂಬ ಉತ್ತರ ಬಂದಿತು. ಕೆಲವು ಕ್ಷಣ ನೇರವಾಗಿ ಆ ರೂಪವನ್ನು ವೀಕ್ಷಿಸಿ "ನೀವು ಪಾರ್ವತಿ ಪುತ್ರನೇ?" ಎಂದು ಗಣಪತಿ ಮುನಿಗಳು ಪ್ರಶ್ನಿಸಿದರು. "ಹೌದು" ಎಂದು ಭದ್ರಕನು ಉತ್ತರಿಸಿದನು. ಗಣಪತಿ ಮುನಿಗಳು ಕೈಮುಗಿದು "ಓ ದೇವರೆ! ನಿಮ್ಮ ಸನಿಹದಲ್ಲಿರುವ ನಾನೆಂಥ ಭಾಗ್ಯಶಾಲಿ! ದಯಮಾಡಿ ನನ್ನನ್ನು ಆಶೀರ್ವದಿಸಿ" ಎಂದು ಪ್ರಾರ್ಥಿಸಿದರು. ಅದಕ್ಕುತ್ತರವಾಗಿ ಭದ್ರಕನು, "ಮಹಾರಾಷ್ಟ್ರದಲ್ಲಿರುವ ನಾಸಿಕ ತೀರ್ಥ ಕ್ಷೇತ್ರಕ್ಕೆ ಹೋಗು, ಅಲ್ಲಿ ತಪಸ್ಸನ್ನಾಚರಿಸು. ಭಗವಾನ್ ಶಂಕರನು ನಿನಗೆ ಅನೇಕ ವರಗಳನ್ನು ದಯಪಾಲಿಸುವನು" ಎಂದು ಹೇಳಿ ಅಂತರ್ಧಾನನಾದನು. ಮರುದಿನ ಈ ವಿಷಯವನ್ನು ತಂದೆಗೆ ವಿವರಿಸಿ 18-11-1897 ರಂದು ನಾಸಿಕ ಕ್ಷೇತ್ರಕ್ಕೆ ಪಯಣಿಸಿದರು.

೧೩

ನಾಸಿಕ ಕ್ಷೇತ್ರದ ಶುದ್ಧೀಕರಣ

ನಿಜ ವಿಷಯಪರಂ ವಿತ್ತಂ ಶಿವಚರಣ ಪರಂ ಚಿತ್ತಂ
ಇಹ ಜಗತಿ ಸತಾಂ ಏಷಾಂ ಜಯತಿ ಚರಿತಮೇತೇಷಾಂ ॥
– ಶಿವ ಸಹಸ್ರಮ್

"ಜೀವಿಸುವುದಕ್ಕೆ ಎಲ್ಲ ಅನುಕೂಲಗಳಿದ್ದು, ಯಾರು ಭಗವಾನ್ ಶಂಕರನ ಭಕ್ತರಾಗಿರುವರೋ ಅಂಥ ಅದೃಷ್ಟವಂತರೇ ಶ್ಲಾಘನೀಯರು."

ಶ್ರೀರಾಮನು ತನ್ನ ಪತ್ನಿ ಹಾಗೂ ತಮ್ಮ ಲಕ್ಷ್ಮಣರೊಡನೆ ಪಂಚವಟಿಯಲ್ಲಿ ವನವಾಸದ ಅವಧಿಯನ್ನು ಕಳೆಯುತ್ತಿದ್ದಾಗ, ರಾವಣನ ಸಹೋದರಿ ಶೂರ್ಪಣಖಿಯು ರಾಮನ ಬಳಿಬಂದು ತನ್ನನ್ನು ವಿವಾಹವಾಗುವಂತೆ ಕೇಳಿದಳು. ಶ್ರೀರಾಮನು ಹಾಸ್ಯಮಿಶ್ರಿತ ಧ್ವನಿಯಲ್ಲಿ ಅವಳನ್ನು ಆ ಸಮಯದಲ್ಲಿ ಬ್ರಹ್ಮಚಾರಿಯಾಗಿದ್ದ ಲಕ್ಷ್ಮಣನ ಬಳಿಗೆ ಕಳಿಸಿದ. ಲಕ್ಷ್ಮಣನೂ ಅದೇ ಹಾಸ್ಯಮಿಶ್ರಿತ ಧ್ವನಿಯಿಂದ ಅವಳನ್ನು ರಾಮನ ಬಳಿಗೆ ಕಳುಹಿಸಿದ. ರಾಮನು ತಾನು ಈಗಾಗಲೇ ಸೀತೆಯನ್ನು ವಿವಾಹವಾಗಿರುವುದರಿಂದ ಅವಳನ್ನು ವಿವಾಹವಾಗಲು ಅಸಾಧ್ಯವೆಂದ. ಈ ರೀತಿಯ ವರ್ತನೆಯಿಂದ ಕೋಪಗೊಂಡ ಶೂರ್ಪಣಖಿಯು ಸೀತೆಯು ಅಡ್ಡಿಬರುವುದಾದರೆ ಅವಳನ್ನು ಬಿಟ್ಟುಬಿಡು ಎಂದು ಕೂಗಿದಳು. ಪರಿಸ್ಥಿತಿಯು ಕೈಮೀರುತ್ತಿರುವುದೆಂದು ಅರಿತು ರಾಮನು ಲಕ್ಷ್ಮಣನಿಗೆ ಶೂರ್ಪಣಖಿಯ ಮೂಗು ಹಾಗೂ ಕಿವಿಗಳನ್ನು ಕತ್ತರಿಸಿ ಹಾಕುವಂತೆ ಸೂಚಿಸಿದನು. ಲಕ್ಷ್ಮಣನು ಹಾಗೆಯೇ ಮಾಡಿದನು. ಶೂರ್ಪಣಖಿಯ ಮೂಗು ಬಿದ್ದ ಜಾಗವನ್ನು "ನಾಸಿಕ" ಎಂದು ಕರೆಯಲಾಯಿತು. ನಂತರದ ದಿನಗಳಲ್ಲಿ ಅದು ತೀರ್ಥಕ್ಷೇತ್ರವಾಯಿತು. ನಾಸಿಕದಲ್ಲಿ ಲಕ್ಷ್ಮಣನ ಒಂದು ಮಂದಿರವಿರುವುದು.

ನಾಸಿಕ್ ನಗರದಿಂದ ಇಪ್ಪತ್ತೈದು ಕಿಲೋ ಮೀಟರ್ ದೂರದಲ್ಲಿ ಪ್ರಸಿದ್ಧ ತೀರ್ಥಕ್ಷೇತ್ರ ತ್ರಯಂಬಕೇಶ್ವರವು ಇರುವುದು. ಇದು ದ್ವಾದಶ ಜ್ಯೋತಿರ್ಲಿಂಗ ಕ್ಷೇತ್ರಗಳಲ್ಲೊಂದು. ಇಲ್ಲಿ ಒಂದು ದೊಡ್ಡ ಕೊಳವಿರುವುದು, ಇದನ್ನು ಕುಶಾವರ್ತಮ್ ಎಂದು ಕರೆಯುವರು. ಇಲ್ಲಿನ ಬ್ರಹ್ಮಗಿರಿ ಬೆಟ್ಟವು ಗೋದಾವರಿ ನದಿಯ ಉಗಮ ಸ್ಥಾನ. ಈ ನದಿಯ ಉಗಮವು ದ್ಯುಲೋಕದಿಂದ ಗೌತಮ ಮುನಿಗಳಿಂದ ಆಯಿತು. ಹೀಗಾಗಿ ಈ ನದಿಯನ್ನು ಗೌತಮಿ

(ಗೌತಮ ಮುನಿಗಳ ಪುತ್ರಿ) ಎಂದು ಕರೆಯಲಾಗುವುದು. ಅನೇಕ ಋಷಿ ಮುನಿಗಳು ತಪಸ್ಸನ್ನಾಚರಿಸಲು ಈ ಸ್ಥಳವನ್ನೇ ಆಯ್ಕೆ ಮಾಡಿಕೊಳ್ಳುವರು.

ಯೋಗಿಗಳು ಬ್ರಹ್ಮಗಿರಿಯನ್ನು ಬ್ರಹ್ಮರಂಧ್ರವೆಂದು, ಕುಶಾವರ್ತವನ್ನು ಸಹಸ್ರಾರವನ್ನಾಗಿ ಮತ್ತು ತ್ರಿಪುಟಿ ಕ್ಷೇತ್ರವನ್ನು ತ್ರಯಂಬಕವೆಂದು ಕರೆಯುವರು. ಗಣಪತಿ ಮುನಿಗಳು ನಾಸಿಕ ನಗರಕ್ಕೆ ಬಂದಾಗ ಅಲ್ಲಿ ಸಿಡುಬು ಸಾಂಕ್ರಾಮಿಕ ರೋಗವು ಹರಡಿತ್ತು. ಯಾರೇ ನಗರ ಪ್ರವೇಶ ಮಾಡಬೇಕಿದ್ದರೂ ನಗರದ ವೈದ್ಯರು ಅವರನ್ನು ಪರೀಕ್ಷಿಸಿ ಅವರು ಆರೋಗ್ಯವಂತರೆಂದು ಪತ್ರವನ್ನು ನೀಡಬೇಕಿತ್ತು. ಗಣಪತಿ ಮುನಿಗಳು ಊರಿನ ಹೊರವಲಯದಲ್ಲಿ ಒಬ್ಬ ಬ್ರಾಹ್ಮಣನ ಮನೆಯಲ್ಲೇ ಕೆಲವು ದಿನ ಕಳೆಯಬೇಕಾಯಿತು. ಆ ಮನೆಯ ಮಾಲೀಕನಿಗೆ ವಿದ್ವಾಂಸರನ್ನು ಕಂಡರೆ ಅಪಾರವಾದ ಗೌರವ, ಪ್ರೀತ್ಯಾದರಗಳು. ಗಣಪತಿ ಮುನಿಗಳು ತಮ್ಮ ವಿದ್ವತ್ತಿನಿಂದ ಮನೆಯ ಮಾಲೀಕನನ್ನು ಮೆಚ್ಚಿಸಿದರು. ಒಂದು ದಿನ ರಾತ್ರೆಯಾಗುತ್ತಿದ್ದಂತೆ ಗಣಪತಿ ಮುನಿಗಳು ಮನೆಯಿಂದ ಹೊರಬಂದು ಹುಣ್ಣಿಮೆಯ ಚಂದ್ರನನ್ನು ನೋಡುತ್ತಾ ಕಾಳಿದಾಸನು ರಘುವಂಶ ಕಾವ್ಯದಲ್ಲಿ, ಅಜ ಮಹಾರಾಜನು ರಾಜಕುಮಾರಿ ಇಂದುಮತಿಯ ಸ್ವಯಂವರಕ್ಕೆ ಹೋಗುವಾಗ ಮಾರ್ಗಮಧ್ಯದಲ್ಲಿ ಕತ್ತಲಾಯಿತು. ಚಂದ್ರನು ಉದಯಿಸಿದನು ಹಾಗೂ ಅಜನು ತನ್ನ ಬಿಡಾರದಲ್ಲಿ ನಿದ್ರಿಸಿದನು. ಅವನ ವೈತಾಲಿಕರು ಅವನನ್ನು ಎಚ್ಚರಿಸಲು ಹೇಳುವ ಪ್ರಸಿದ್ಧವಾದ ಶ್ಲೋಕವನ್ನು ರಾಗವಾಗಿ ಹಾಡತೊಡಗಿದರು:

ನಿದ್ರಾವಶೇನ ಭವತಾಪ್ಯನವೇಕ್ಷಮಾಣಾ
ಪರ್ಯುತ್ಸುಕತ್ವಮಬಲಾ ನಿಶಿ ಖಂಡಿತೇವ।
ಲಕ್ಷ್ಮೀರ್ವಿನೋದಯತಿ ಯೇನ ದಿಗಂತಲಂಬೀ
ಸೋಽಪಿ ತ್ವದಾನನರುಚಿಂ ವಿಜಹಾತಿ ಚಂದ್ರಃ ॥

– ರಘುವಂಶ

"ಲಕ್ಷ್ಮಿಗೆ (ಸೌಂದರ್ಯಕ್ಕೆ) ರಾಜನ ಮುಖ, ಚಂದ್ರ ಹಾಗೂ ಕಮಲವು ಪ್ರಿಯವಾದ ವಾಸಸ್ಥಾನ. ಈಗ ರಾಜನು ಮಲಗಿ ನಿದ್ರಾದೇವಿಯನ್ನು ಆಶ್ರಯಿಸಿರುವುದನ್ನು ಕಂಡು ಲಕ್ಷ್ಮಿಗೆ ಅಸೂಯೆಯುಂಟಾಗಿ ಚಂದ್ರನಲ್ಲಿ ನೆಲೆಸಲು ಹೋದಳು ಹಾಗೂ ಅವಳನ್ನು ಚಂದ್ರನು ಸಂತೈಸಿದನು. ಆದರೆ, ಅಯ್ಯೋ, ಈಗ ಚಂದ್ರನೂ ಕ್ಷೀಣಿಸತೊಡಗಿರುವನು. ಹಾಗಾಗಿ, ಓ ರಾಜನೇ! ನೀನು ಎಚ್ಚರವಾದಲ್ಲಿ ಲಕ್ಷ್ಮಿಯು ಮರಳಿಬಂದು ನಿನ್ನ ಮುಖದಲ್ಲಿ ನೆಲೆಸುವಳು. ದಯವಿಟ್ಟು ಲಕ್ಷ್ಮಿಗೆ ಕರುಣೆ ತೋರು."

ಈ ಶ್ಲೋಕದಲ್ಲಿ ಕಾವ್ಯಾತ್ಮಕ ಶ್ಲೇಷೆಯಿರುವುದು. ಸ್ತ್ರೀಯೊಬ್ಬಳು ತನ್ನ ಪ್ರಿಯಕರನು ಅವಳ ಬಗ್ಗೆ ನಿರಾಸಕ್ತಿಯನ್ನು ಹೊಂದಿದ್ದರಿಂದ ಕೋಪಗೊಂಡು ಮನೆಯನ್ನು ಬಿಟ್ಟು

ಹೋಗುತ್ತಾಳೆ, ಆದರೆ ಸ್ವಲ್ಪ ದಿನಗಳ ನಂತರ ಮರಳಿ ಬರುತ್ತಾಳೆ. ಪ್ರಿಯಕರನು ತನ್ನ ಪ್ರೇಯಸಿಯ ಕೋಪವನ್ನು ಕ್ಷಮಿಸಿ ಅವಳನ್ನು ಮತ್ತೆ ತನ್ನ ಬಾಹುಗಳಲ್ಲಿ ಬಂಧಿಸುತ್ತಾನೆ.

ಮನೆಯ ಮಾಲೀಕನು ಗಣಪತಿ ಮುನಿಗಳು ಸುಶ್ರಾವ್ಯವಾಗಿ ಹಾಡುತ್ತಿದ್ದ ಶ್ಲೋಕವನ್ನು ಕೇಳಿ, ಅದರ ಅರ್ಥವನ್ನು ಗ್ರಹಿಸಿ ಹೊರಬಂದು ತುಂಟತನದಿಂದ "ಹೇಗೆ ಗಂಡಸು, ಮನೆಯನ್ನು ತೊರೆದು ಬೇರೆಯವರ ಮನೆಗೆ ಹೋದ ಮಡದಿಯನ್ನು ಮತ್ತೆ ಮನೆಗೆ ಸೇರಿಸುವನು?" ಎಂಬುದಾಗಿ ಕೇಳಿದನು.

ಅದಕ್ಕೆ ಗಣಪತಿ ಮುನಿಗಳು ಕ್ಷಣಮಾತ್ರದಲ್ಲಿ, "ಸಮುದ್ರ ಮಥನದಲ್ಲಿ ಲಕ್ಷ್ಮಿಯೊಂದಿಗೆ ಜನ್ಮ ತಾಳಿದ ಚಂದ್ರನು ಅವಳ ಸ್ವಂತ ಸಹೋದರನೆ, ಬೇರೆ ಯಾರೂ ಅಲ್ಲ. ಕಷ್ಟದಲ್ಲಿರುವ ಹೆಂಗಸು ತನ್ನ ತವರು ಮನೆಗೆ ಹೋಗುವುದು ಸಾಮಾನ್ಯವಲ್ಲವೇ?" ಎಂದು ಉತ್ತರಿಸಿದರು. ಇದರಿಂದ ಸಂತಸಪಟ್ಟ ಮಾಲೀಕನು, ದಯಮಾಡಿ ನಿನ್ನ ಪದ್ಯದ ಲಕ್ಷ್ಮಿಯನ್ನು ಮನೆಗೆ ಕಳಿಸಿ ನಿದ್ರಿಸು. ನಾಳೆ ನಿನ್ನನ್ನು ಊರೊಳಗೆ ಹೋಗಲು ಅನುಮತಿ ನೀಡುವೆ." ಎಂದನು.

ಮಾರನೇ ದಿನ ಗಣಪತಿ ಮುನಿಗಳು ನಾಸಿಕ ಪಟ್ಟಣವನ್ನೆಲ್ಲಾ ಸುತ್ತಾಡಿ ತನ್ನ ತಪಸ್ಸಿಗೆ ಸೂಕ್ತ ಸ್ಥಳ ದೊರಕದೇ ಇದ್ದದ್ದರಿಂದ ತ್ರ್ಯಯಂಬಕ ಕ್ಷೇತ್ರದೆಡೆಗೆ ನಡೆದರು. ಅಲ್ಲಿ ಗೋದಾವರಿ ನದಿಯಲ್ಲಿ ಸ್ನಾನ ಮಾಡಿ ಶಿವ ಜ್ಯೋತಿರ್ಲಿಂಗದ ಮಂದಿರದಲ್ಲಿ ದರ್ಶನವನ್ನು ಮಾಡಿ ಅಲ್ಲೆ ಸ್ವಲ್ಪ ಹೊತ್ತು ಧ್ಯಾನಮಗ್ನರಾದರು. ಸಂಜೆಯ ಹೊತ್ತಿಗೆ ಕುಶಾವರ್ತ ಕ್ಷೇತ್ರವನ್ನು ತಲುಪಿ ಅಲ್ಲಿ ಒಬ್ಬ ಬಡ ಬ್ರಾಹ್ಮಣನ ಮನೆಯಲ್ಲಿ ಆ ರಾತ್ರೆ ತಂಗಿದರು. ಮಾರನೇ ದಿನ ಆ ಬ್ರಾಹ್ಮಣನು ವಿದ್ವಾಂಸರನ್ನು ಗೌರವಿಸುವ ಒಬ್ಬ ವೈದ್ಯನ ಬಳಿಗೆ ಕರೆದೊಯ್ದನು. ವೈದ್ಯನು ಗಣಪತಿ ಮುನಿಗಳನ್ನು ಗೌರವದಿಂದ ಬರಮಾಡಿಕೊಂಡು ಅವರಿಗೆ ತಪಸ್ಸಿಗೆ ಅನುಕೂಲವಾದ ನೀಲಾಂಬಿಕೆ ಮಂದಿರವನ್ನು ತೋರಿಸಿ ಅವರಿಗೆ ಪ್ರತಿದಿನವೂ ಸ್ನಾನಕ್ಕೆ ಬಿಸಿ ನೀರನ್ನು ಹಾಗೂ ಊಟೋಪಚಾರಕ್ಕಾಗಿ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟನು. ಗಣಪತಿ ಮುನಿಗಳು ಹಗಲು ಹೊತ್ತಿನಲ್ಲಿ ತಪಸ್ಸನ್ನು ಮಾಡಿ ರಾತ್ರೆ ವೈದ್ಯರ ಮನೆಯಲ್ಲಿ ವಿಶ್ರಾಂತಿಯನ್ನು ಪಡೆಯತೊಡಗಿದರು.

ಹೀಗೆ ಬಹುಬೇಗ ಒಂದು ವಾರ ಕಳೆಯಿತು. ವೈದ್ಯನಿಗೆ ಗಣಪತಿ ಮುನಿಗಳು ಅತ್ಯುತ್ತಮ ಮಟ್ಟದ ಕವಿಯಲ್ಲದೇ ಮಹಾತಪಸ್ವಿ ಎಂದು ಅರಿವಾಯಿತು. ಅವರಿಂದ ಸ್ವತಃ ಸಾಹಿತಿ ಹಾಗೂ ಸಾಹಿತ್ಯಾಸಕ್ತನಾದ ಶ್ರೀಮಂತನೊಬ್ಬನಿಗೆ ಗಣಪತಿ ಮುನಿಗಳ ವಿದ್ವತ್ತಿನ ಬಗ್ಗೆ ತಿಳಿದು ಅವನು ಗಣಪತಿ ಮುನಿಗಳನ್ನು ಭೇಟಿಯಾದನು. ಮೂರೂ ಜನಗಳ ಮಾತುಕಥೆಯ ವೇಳೆ ವೈದ್ಯನ ಕೋರಿಕೆಯ ಮೇರೆಗೆ ಗಣಪತಿ ಮುನಿಗಳು ಒಂದು ರಾತ್ರೆ ವಿದ್ವಾಂಸರ ಸಭೆಯಲ್ಲಿ ಅಷ್ಟಾವಧಾನವನ್ನು ನಡೆಸಿಕೊಡಲು ಸಮ್ಮತಿಸಿದರು. ಈ ಸಭೆಯಲ್ಲಿ ಅನೇಕ ವಿದ್ವಾಂಸರು ಹಾಗೂ ಆಸಕ್ತರು ಭಾಗವಹಿಸಿದರು. ತಪಸ್ಸಿನಿಂದ ನಿಃಶಕ್ತನಾಗಿದ್ದರೂ ಗಣಪತಿ

ಮುನಿಗಳು ತಮ್ಮ ಮೊತ್ತ ಮೊದಲನೇ ಅಷ್ಟಾವಧಾನವನ್ನು ಎಲ್ಲರ ಸಮಕ್ಷಮದಲ್ಲಿ ನಡೆಸಿಕೊಟ್ಟು ಎಲ್ಲರ ಮೆಚ್ಚುಗೆಯನ್ನು ಗಳಿಸಿದರು. ಇದರಿಂದ ಬಹಳವಾಗಿ ಮೆಚ್ಚಿದ (ರಾಂ ಭಾವು ಎಂಬ ಹೆಸರಿನ) ಶ್ರೀಮಂತನು ಗಣಪತಿ ಮುನಿಗಳನ್ನು ನಾಸಿಕಕ್ಕೆ ಅವರ ತಪಸ್ಸಿಗೆ ಸೂಕ್ತ ಸ್ಥಳವನ್ನು ತೋರಿಸಲು ಕರೆದೊಯ್ದನು.

ಅಲ್ಲಿ ಗಣಪತಿ ಮುನಿಗಳನ್ನು ತನ್ನ ಮನೆಯಲ್ಲೇ ಇರಲು ವ್ಯವಸ್ಥೆ ಮಾಡಿ ತನ್ನ ಮನೆಯಲ್ಲೇ ಅನೇಕ ವಿದ್ವತ್ ಸಭೆಗಳನ್ನು ನಡೆಸಿ ಗಣಪತಿ ಮುನಿಗಳಿಗೆ ಅಪಾರ ಮನ್ನಣೆಯನ್ನು ದೊರಕಿಸಿಕೊಡತೊಡಗಿದನು. ಈ ಕಾರ್ಯದಲ್ಲಿ ಗಣಪತಿ ಮುನಿಗಳ ತಪಸ್ಸಿಗೆ ಸೂಕ್ತವಾದ ಸ್ಥಳವನ್ನು ಹುಡುಕುವ ಕೆಲಸವನ್ನು ಮರೆತೇ ಬಿಟ್ಟಿದ್ದ ಆ ಶ್ರೀಮಂತ. ಇದನ್ನು ಗಮನಿಸಿದ ಗಣಪತಿ ಮುನಿಗಳು ತಾವೇ ಸೂಕ್ತ ಸ್ಥಳವನ್ನು ಹುಡುಕಲು ಪ್ರಾರಂಭಿಸಿ ಒಂದು ನಿರ್ಲಕ್ಷಿಸಲ್ಪಟ್ಟ ಊರಾಚೆ ಇರುವ ಪುರಾತನ ಲಕ್ಷ್ಮಣ ಮಂದಿರವನ್ನು ಕಂಡು ಇನ್ನೇನು ಅದನ್ನು ಪ್ರವೇಶಿಸಬೇಕೆನ್ನುವಾಗ ಆ ದೇವಸ್ಥಾನದ ಪೂಜಾರಿಯು "ಕಳ್ಳ, ಕಳ್ಳ!" ಎಂದು ಕಿರುಚುತ್ತಾ ಗಣಪತಿ ಮುನಿಗಳನ್ನು ಒರಟಾಗಿ ಹಿಡಿದುಕೊಂಡು ಅವರನ್ನು ಥಳಿಸತೊಡಗಿ, ಗಣಪತಿ ಮುನಿಗಳ ಸಮಜಾಯಿಷಿಯನ್ನು ಆಲಿಸದೆ ಅವರ ಜುಟ್ಟನ್ನು ಹಿಡಿದುಕೊಂಡು ಅವರನ್ನು ಎಳೆದಾಡುತ್ತಾ ಗ್ರಾಮಾಧಿಕಾರಿಯ ಬಳಿಗೆ ಕೊಂಡೊಯ್ದನು.

ಹೀಗೆ ದಾರಿಯಲ್ಲಿ ಹೋಗುತ್ತಿದ್ದಾಗ ಗಣಪತಿ ಮುನಿಗಳನ್ನು ಶ್ರೀಮಂತನ ಮನೆಯಲ್ಲಿ ಕಂಡಿದ್ದ ಒಬ್ಬನು ಪೂಜಾರಿಯನ್ನು ತಡೆದು ಏಕೆಂದು ವಿಚಾರಿಸಿದನು. ಪೂಜಾರಿಯು ಅದಕ್ಕೆ ಗಣಪತಿ ಮುನಿಗಳು ದೇವಸ್ಥಾನದ ಪಾತ್ರೆಗಳನ್ನು ಕದ್ದಿರುವನೆಂದು ಆಪಾದಿಸಿ ಮತ್ತೆ ಎಲ್ಲರ ಮುಂದೇ ಹೊಡೆಯ ತೊಡಗಿದನು. ಇದರಿಂದ ಬಹಳವಾಗಿ ನೊಂದ ಗಣಪತಿ ಮುನಿಗಳು ಕೋಪೋದ್ರಿಕ್ತನಾಗಿ ಒಂದು ಶ್ಲೋಕದ ಮೂಲಕ ನಾಸಿಕ ಪಟ್ಟಣವನ್ನು ಶಪಿಸಿದರು:

ಧ್ವಸ್ತಪ್ರಧ್ವಸ್ತಮನುಜಾ ಕ್ಷತವಿಕ್ಷತವಿಗ್ರಹಾ
ಕೀರ್ಣಪ್ರಕರ್ಷಪರ್ಯಂತಾ ನಾಸಿಕೇಯಂ ಭವಿಷ್ಯತಿ ॥

"ಈ ನಾಸಿಕ ಪಟ್ಟಣವೆಲ್ಲಾ ನಾಶವಾಗಿ, ಒಡೆದ ವಿಗ್ರಹಗಳಿಂದ ತುಂಬಲಿ. ಜನಗಳು ದುರ್ಬಲರಾಗಲಿ, ರಸ್ತೆಗಳು ನಿರ್ಜನವಾಗಲಿ"

ಇದನ್ನಾಲಿಸಿದ ಪೂಜಾರಿಯು ತಕ್ಷಣವೇ ಗಣಪತಿ ಮುನಿಗಳಿಗೆ ಹೊಡೆಯುವುದನ್ನು ನಿಲ್ಲಿಸಿ ಗಡಗಡನೆ ನಡುಗುತ್ತಾ ಅವರ ಕಾಲಿಗೆರಗಿ ತನ್ನನ್ನು ಕ್ಷಮಿಸಬೇಕೆಂದು ಬೇಡಿಕೊಂಡನು. ಗಣಪತಿಯು ಪೂಜಾರಿಯನ್ನು ಕ್ಷಮಿಸಿ ಅಲ್ಲಿಂದ ಹೊರಟು ನವಚೂರಿ ರಸ್ತೆಯಲ್ಲಿ ಒಂದು ಪಾಳುಗುಡಿಯನ್ನು ಕಂಡು ಅಲ್ಲೇ ನೆಲಸಲು ಪ್ರಾರಂಭಿಸಿ ಶಿವಪಂಚಾಕ್ಷರಿ ಮಂತ್ರದ ಮೂಲಕ ತಮ್ಮ ತಪಸ್ಸನ್ನು ಪ್ರಾರಂಭಿಸಿದರು.

ಗಣಪತಿ ಮುನಿಗಳ ಶಾಪದ ಫಲವಾಗಿಯೋ ಎಂಬಂತೆ ನಾಶಿಕ ಪಟ್ಟಣದಲ್ಲಿ ಹರಡಿದ್ದ ಸಾಂಕ್ರಾಮಿಕ ರೋಗವು ತೀವ್ರವಾಗಿ ನಾಸಿಕದ ಬಹುತೇಕ ಭಾಗವು ಹಾಳಾಗಿಹೋಯಿತು. ಅದರೊಂದಿಗೆ ಇದ್ದಕ್ಕಿದ್ದಂತೆ ಭೀಕರ ಬಿರುಗಾಳಿಯು ಬೀಸತೊಡಗಿ ಮರಗಳು ಧರೆಗಿಳಿದು. ಮನೆಗಳೆಲ್ಲಾ ಕುಸಿದು ಬೀಳತೊಡಗಿ ಇಡೀ ನಗರವನ್ನು ಭೀಕರವಾಗಿ ಅಲ್ಲಾಡಿಸತೊಡಗಿತು. ಸ್ವಲ್ಪ ಸಮಯದಲ್ಲಿ ಬಿರುಗಾಳಿಯು ಶಾಂತವಾಯಿತು ಹಾಗೂ ಸ್ವಲ್ಪ ದಿನದಲ್ಲಿ ಸಾಂಕ್ರಾಮಿಕ ರೋಗವು ಕಡಿಮೆಯಾಗಿ ನಗರದ ಪ್ರಜೆಗಳು ನೆಮ್ಮದಿಯ ನಿಟ್ಟುಸಿರನ್ನು ಬಿಟ್ಟರು.

ನಂತರ ರಾಂಭಾವು ಅವರಿಗೆ ಎಲ್ಲ ಘಟನೆಗಳೂ ತಿಳಿದುಬಂದು ಹಾಳು ದೇಗುಲದಲ್ಲಿದ್ದ ಗಣಪತಿಯೆಡೆಗೆ ಓಡಿಬಂದು ಅವರಲ್ಲಿ ಕ್ಷಮೆಯನ್ನು ಬೇಡಿ ಅವರ ಆಹಾರ ವ್ಯವಸ್ಥೆಯನ್ನು (ಕೇವಲ ಹಾಲನ್ನು) ಮಾಡಿ ಅವರ ಅವಿರತ ತಪಸ್ಸಿಗೆ ಅನುಕೂಲ ಮಾಡಿಕೊಟ್ಟನು. ಇಲ್ಲಿ ಗಣಪತಿ ಮುನಿಗಳು ನಲವತ್ತು ದಿನಗಳ ಕಾಲ ದೀರ್ಘ ತಪಸ್ಸನ್ನಾಚರಿಸಿದರು. ಶಂಕರ ಭಗವಾನನು ಗಣಪತಿ ಮುನಿಗಳ ತಪಸ್ಸಿಗೆ ಮೆಚ್ಚಿ ಒಬ್ಬ ನಗ್ನ ಸಾಧುವಿನ ವೇಷದಲ್ಲಿ ಪ್ರತ್ಯಕ್ಷನಾದನು. ಗಣಪತಿ ಮುನಿಗಳು ಭಕ್ತಿಭಾವದಿಂದ ಅವನಿಗೆ ನಮಸ್ಕರಿಸಿ ಈ ರೀತಿ ಪ್ರಾರ್ಥಿಸಿದನು:

ಕಿಂ ಯಾಗೈರತಿದಾರುಣೇನ ತಪಸಾ ಕಿಂ ವಾ ಕಿಮರ್ಥ್ಯರ್ಚನೈಃ
ಕಿಂ ಸ್ನಾನೇನ ಸುಪರ್ವಪುಣ್ಯಸರಿತೋ ನಾನಾವಿಧೈಃ ಕಿಂ ವ್ರತೈಃ
ಕಾಮಾರೇ ಕರುಣಾನಿಧೇ ಪಶುಪತೇ ಭೂತೇಶ ಗೌರೀಪತೇ
ಶಂಭೋ ಶಂಕರ ಚಂದ್ರಚೂಡ ಜಗತಾಂ ನಾಥೇತಿ ನಾಮಾವಳೀಃ ॥

"ಹೇ ಭಗವಾನ್ ಶಂಕರನೇ! ಆಸೆಗಳ ಶತ್ರುವೇ! ಓ ದಯಾಸಾಗರನೇ! ಸಮಸ್ತ ಜೀವಿಗಳೊಡೆಯನೆ! ಪಾರ್ವತೀ ದೇವಿಯ ಪತಿಯೇ! ಶಂಭೋ ಶಂಕರ! ಜಟೆಯಲ್ಲಿ ಚಂದ್ರನನ್ನೇ ಧರಿಸಿದವನೇ! ವಿಶ್ವೇಶ್ವರನೇ! ನಿನ್ನ ನಾಮಗಳನ್ನು ಸತತವಾಗಿ ಸ್ತುತಿಸುವವನಿಗೆ ಯಾವ ತಪಸ್ಸೂ, ಪೂಜೆಯೂ, ಶಪಥಗಳೂ, ಪವಿತ್ರ ನದಿಗಳ ಸ್ನಾನವೂ ಅಗತ್ಯವಿರುವುದಿಲ್ಲ."

ಭಗವಾನ್ ಶಂಕರನು ಗಣಪತಿ ಮುನಿಗಳಿಗೆ, "ಗಣಪತಿ, ನಿನ್ನ ಮನೆಗೆ ತೆರಳು, ನಿನಗೆ ಪುತ್ರನ ಜನನವಾಗುವುದು" ಎಂದು ಅವನ ತಲೆಯನ್ನು ತನ್ನ ಬೆಳಕಿನ ಕಿರಣದ ಮೂಲಕ ಸವರಿ ಅಂತರ್ಧಾನನಾದನು. ನಂತರ ಗಣಪತಿ ಮುನಿಗಳು ತಪಸ್ಸನ್ನು ಸಮಾಪ್ತಿಗೊಳಿಸಿ ಅಲ್ಲಿಂದ ಮನೆಯ ಕಡೆಗೆ ಪ್ರಯಾಣವನ್ನು ಬೆಳೆಸಿದರು.

೧೪

ನಂದ ಭಗವತಿ

ಬೃಂದಾರಕಾರಾಧಿತ ಪಾದಪದ್ಮಾಂ
ನಂದಾಮಿ ಮಾಮಿಂದುಸಮಾನವಕ್ತ್ರಾಮ್
ಆಲೋಕ್ಯ ವಿಂಧ್ಯಾಚಲನಿವಾಸಿನೀಂ ನಾ
ನಾಲೋಚಯೇತ್ಸಂಸ್ಕೃತಿತೋ ಭಯಾನಿ ॥

– ಉಮಾಸಹಸ್ರಮ್ (7–25–22)

"ವಿಂಧ್ಯಾಚಲದಲ್ಲಿ ವಾಸಿಸುವ ಪೂಜ್ಯಳಾದ ನಂದಾದೇವಿಯನ್ನು ನೋಡಿದವನಿಗೆ ಸಂಸಾರದ ಭಯವಿರುವುದಿಲ್ಲ."

ಶಿವನ ಆಣತಿಯಂತೆ ಮರಳಿ ಮನೆಗೆ ಬಂದ ಗಣಪತಿ ಮುನಿಗಳಿಗೆ ಸ್ವಲ್ಪ ಅಸಮಾಧಾನವಿತ್ತು. ಅದನ್ನು ತಂದೆಯವರೊಂದಿಗೆ, "ಶಿವನು, ನನ್ನನ್ನು ಮನೆಗೆ ಹೋಗಿ ಪ್ರಾಪಂಚಿಕ ಜೀವನವನ್ನು ಮುಂದುವರೆಸೆಂದು ಏಕೆ ಹೇಳಿದನು ಎಂಬುದು ನನಗೆ ಅರ್ಥವಾಗಲಿಲ್ಲ." ಎಂದರು. ಒಟ್ಟಿನಲ್ಲಿ ಗಣಪತಿ ಮುನಿಗಳಿಗೆ ತನ್ನ ಮೊದಲ ತಪಸ್ಸಿನ ಫಲಿತಾಂಶದ ಬಗ್ಗೆ ಸಂತೋಷವಾಗಿರಲಿಲ್ಲ.

ಇದಕ್ಕೆ ಗಣಪತಿ ಮುನಿಗಳ ತಂದೆಯು, "ಕೆಲವು ಅನುಭವಗಳು ಪ್ರಾರಬ್ಧದಿಂದಾಗಿ ಅನಿವಾರ್ಯ. ಮನಸ್ಸು ಪರಿಪಕ್ವವಾಗಿ ಹಾಗೂ ಪರಿಶುದ್ಧವಾಗದ ಹೊರತು ತಪಸ್ಸು ತಕ್ಕ ಫಲವನ್ನು ನೀಡುವುದಿಲ್ಲ. ಭಗವಂತನ ಮಾಯೆಯೂ ಒಂದು ಕಾರಣವಿರಬಹುದು. ಸಾಧಕನ ಆಧ್ಯಾತ್ಮಿಕ ಪ್ರಗತಿಗೆ ಕೆಲವು ಪರೀಕ್ಷೆಗಳು ಅಗತ್ಯ. ಶಿವನ ನಡೆಯನ್ನು ನಾವುಗಳು ಅರ್ಥಮಾಡಿಕೊಳ್ಳುವುದು ಅಸಾಧ್ಯ. ಸಧ್ಯಕ್ಕೆ ನಿನ್ನ ಪೂಜೆ, ಧ್ಯಾನ, ಜಪತಪಗಳನ್ನು, ಮುಂದುವರೆಸು. ಸ್ವಲ್ಪ ಸಮಯದ ನಂತರ ನಿನ್ನ ತಪಸ್ಸಿಗಾಗಿ ಮತ್ತೊಂದು ಯಾತ್ರೆ ಮಾಡುವೆಯಂತೆ." ಎಂದರು.

ಐದು ತಿಂಗಳುಗಳು ಹೀಗೇ ಕಳೆದವು. ಗಣಪತಿ ಮುನಿಗಳ ಪತ್ನಿ ವಿಶಾಲಾಕ್ಷಿಯು ಗರ್ಭಿಣಿಯಾದಳು. ಅವಳನ್ನು ಹೆರಿಗೆಗಾಗಿ ಅವಳ ತವರು ಮನೆಗೆ ಕಳುಹಿಸಲು ಏರ್ಪಾಡು ಮಾಡಲು ಪ್ರಾರಂಭಿಸಿದರು. ಈ ಸಮಯವು ಎರಡನೇ ಬಾರಿಗೆ ತಪಸ್ಸನ್ನಾಚರಿಸಲು

ಸೂಕ್ತ ಸಮಯವೆಂದು ತೀರ್ಮಾನಿಸಿ ಗಣಪತಿ ಮುನಿಗಳು ವಾರಣಾಸಿಗೆ ಹೋಗಲು ತಂದೆಯವರ ಅನುಮತಿಯನ್ನು ಬೇಡಿದರು. ನೃಸಿಂಹ ಶಾಸ್ತ್ರಿಗಳು ಒಪ್ಪಿಗೆ ಸೂಚಿಸಿದರು.

ಮಾರ್ಗ ಮಧ್ಯದಲ್ಲಿ ಗಣಪತಿ ಮುನಿಗಳು ಪ್ರಯಾಗಕ್ಕೆ ತೆರಳಿ ಗಂಗಾ, ಯಮುನಾ, ಸರಸ್ವತಿ, ನದಿಗಳ ಸಂಗಮದಲ್ಲಿ ಸ್ನಾನ ಮಾಡಿ, ಶಂಖ ಮಾಧವ ಮಂದಿರದಲ್ಲಿ ದರ್ಶನವನ್ನು ಮಾಡಿಕೊಂಡು ಮಂದಿರದ ಆವರಣದಲ್ಲಿ ತನ್ನೊಡನೆ ತಂದಿದ್ದ ಗಂಟನ್ನು ಪಕ್ಕದಲ್ಲಿಟ್ಟುಕೊಂಡು ಧ್ಯಾನಕ್ಕೆ ಕುಳಿತರು. ಸಂಜೆಯಾದಾಗ ತನ್ನ ಕಣ್ಣುಗಳನ್ನು ತೆರೆದಾಗ ಅವನ ಪಕ್ಕದಲ್ಲಿದ್ದ ಗಂಟು ಕಾಣೆಯಾಗಿರುವುದು ಅರಿವಾಯಿತು. ಕೇವಲ ಒಂದು ತಂಬಿಗೆ ಹಾಗೂ ಪಂಚೆಯೊಳಗಿದ್ದ ಸ್ವಲ್ಪ ಹಣ ಮಾತ್ರ ಅವರೊಡನಿತ್ತು. ಗಂಗಾ ತೀರದಲ್ಲಿ ಹತ್ತು ದಿನಗಳ ಕಾಲ ತಪಸ್ಸನ್ನಾಚರಿಸಿದರೂ ಗಣಪತಿ ಮುನಿಗಳಿಗೆ ನೆಮ್ಮದಿಯು ದೊರಕಲಿಲ್ಲ. ಯಾರಾದರೂ ತನ್ನ ತಪಸ್ಸಿಗೆ ಮಾರ್ಗದರ್ಶನ ಮಾಡುವ ತಪಸ್ವಿಗಳು ಸಿಗುವರೇನೋ ಎಂದು ಅಲೆದಾಡಿ ಸುಸ್ತಾಗಿ ಬವಳಿ ಬಂದು ನದೀತೀರದಲ್ಲೇ ಮಲಗಿದರು.

ಸ್ವಲ್ಪ ಸಮಯದ ನಂತರ ಯಾರೋ ಒಬ್ಬರು ಮೃದುವಾಗಿ ತನ್ನ ತಲೆಯನ್ನು ತಟ್ಟುತ್ತಿರುವ ಅನುಭವವಾಗಿ ಗಣಪತಿ ಮುನಿಗಳು ಕಣ್ತೆರೆದು ಎದುರಿಗಿರುವ ಒಬ್ಬ ಸಾಧುವನ್ನು ಕಂಡರು. ಸಾಧುವು ಗಣಪತಿ ಮುನಿಗಳಿಗೆ ರೊಟ್ಟಿ ಹಾಗೂ ಹಾಲನ್ನು ನೀಡಿ ಅವುಗಳನ್ನು ತಿನ್ನಲು ಪ್ರೇರೇಪಿಸಿದನು. ಸುತ್ತ ನೋಡಿದ ಗಣಪತಿ ಮುನಿಗಳಿಗೆ ತಾವು ಆಶ್ರಮವೊಂದರಲ್ಲಿರುವುದು ಗೋಚರವಾಯಿತು. ಗಣಪತಿ ಮುನಿಗಳಿಂದ ಎಲ್ಲ ಸಮಾಚಾರ ತಿಳಿದ ಸಾಧುವು ತನ್ನ ಶಿಷ್ಯನನ್ನು ಕರೆದು ಅವನಿಗೆ ಹಂಸತೀರ್ಥಂ ಪ್ರದೇಶವನ್ನು ಗಣಪತಿ ಮುನಿಗಳಿಗೆ ತೋರಿಸಲು ಹೇಳಿ, ಸಾಧುವು ಗಣಪತಿ ಮುನಿಗಳಿಗೆ ಆಹಾರ ಹಾಗೂ ಬಟ್ಟೆಗಳನ್ನು ನೀಡಿದನು. ಹಂಸತೀರ್ಥದಲ್ಲಿ ಉಳಿಯದೇ ಗಣಪತಿ ಮುನಿಗಳು ಕಾಶಿ ನಗರದೆಡೆಗೆ ಪಯಣಿಸುತ್ತಿದ್ದ ಗುಂಪಿನೊಂದಿಗೆ ಸೇರಿಕೊಂಡು ಪ್ರಯಾಣವನ್ನು ಮುಂದುವರೆಸಿದರು.

ಮಾರ್ಗಮಧ್ಯದಲ್ಲಿ ವಿಂಧ್ಯಾಚಲ ಕ್ಷೇತ್ರವನ್ನು ತಲುಪಿ ಅಲ್ಲಿನ ಅಧಿದೇವತೆಯಾದ ನಂದ ಭಗವತಿಯ ದರ್ಶನವನ್ನು ನಂದಾದೇವಿಯ ಮಂದಿರದಲ್ಲಿ ಪಡೆದುಕೊಂಡರು. ಆ ದೇವಿಯ ವಿಗ್ರಹವು ಗಣಪತಿಯ ಕಣ್ಣಿಗೆ ದಿವ್ಯವಾದ ಮಾತೆಯಂತೆ ತನ್ನನ್ನು ಅಮೋಘವಾದ ಮುಗುಳುನಗೆಯೊಂದಿಗೆ ಆಹ್ವಾನಿಸುತ್ತಿರುವಂತೆ ಕಂಡುಬಂದು ಆನಂದ ಪರವಶರಾಗಿ ಅಲ್ಲೆ ದೇವಿಯನ್ನು ಕುರಿತು ಈ ಕೆಳಗಿನ ಶ್ಲೋಕವನ್ನು ರಚಿಸಿ ಹಾಡಿದರು:

ಪಾದಂ ದದಾಸಿ ಮನಸೇ ಕಿಮು? ಪಾಪಿನೋ ಮೇ
ಪಾರಿಪ್ಲವಾಯ ಭುವನಾದಿಕ ವಾಸನಾಯ
ದೂರೇ ಸ ತಾವದಚಲೇಂದ್ರಕುಮಾರಿ ಕಾಮೋ
ದೇವೀ ಪ್ರಣಾಮಮುರಾರಿ ಕುರು ತಾವತಾಲಂ ॥

"ಓ ತಾಯೆ! ಹಿಮವಂತನ ಪುತ್ರಿಯೆ! ನೀನು ಸದಾ ನಿನ್ನ ಪಾದಗಳನ್ನು ನನ್ನ ಹೃದಯದಲ್ಲಿರಿಸಿರುವೆ. ಲೈಂಗಿಕಾಸಕ್ತಿಯಿಲ್ಲದಿದ್ದರೂ ನಾನು ಪ್ರಾಪಂಚಿಕ ವಿಷಯಗಳಲ್ಲಿ ಮುಳುಗಿ, ಸ್ಥಿರಮನಸ್ಸಿಲ್ಲದವನಾಗಿದ್ದೇನೆ. ನಾನು ನಿನ್ನಲ್ಲಿ ಸಂಪೂರ್ಣವಾಗಿ ಶರಣಾಗಿ, ನಿನಗೆ ನಮಸ್ಕರಿಸುವೆ. ನನ್ನ ನಮಸ್ಕಾರವನ್ನು ಸ್ವೀಕರಿಸು, ಅದೇ ನನಗೆ ನಿನ್ನ ಆಶೀರ್ವಾದ."

ದಯಾಮಯಿಯಾದ ದೇವಿಗೆ ಈ ರೀತಿಯ ಪರಿಶುದ್ಧವಾದ ಪ್ರಾರ್ಥನೆಯನ್ನು ತಿರಸ್ಕರಿಸಲು ಸಾಧ್ಯವೇ? ಹೀಗೆ ಮಾತೆಯಲ್ಲಿ ಸಂಪೂರ್ಣವಾಗಿ ಶರಣಾಗಿ ಅಲ್ಲೇ ಧ್ಯಾನಕ್ಕೆ ಕುಳಿತರು. ಆಶ್ಚರ್ಯವೆಂಬಂತೆ ಅವರ ಶರೀರವು ಭೂಮಿಯಿಂದ ಮೂರು ಅಡಿ ಮೇಲೇರಿ ತೇಲತೊಡಗಿತು. ಧ್ಯಾನದಿಂದ ಹೊರಬಂದ ಕೂಡಲೇ ಗಣಪತಿ ಮುನಿಗಳು ಈ ರೀತಿಯಾಗಿ ತಾಯಿಯನ್ನು ಕುರಿತು ಪ್ರಾರ್ಥಿಸಿದರು:

ಅವಂಧ್ಯ ವಿಂಧ್ಯ ಭೂಮಿಭೃತ್ತಟಾಲಯಾ ದಯಾವತೀ
ವಿಚಾರಧೌತಚೇತಸಾ ಮಿಯಂ ಭಯಂ ವ್ಯಪೋಹತು ॥

(ಭಕ್ತರು ಅಪೇಕ್ಷಿಸಿದ ಆಸೆಗಳನ್ನು ವರಗಳ ಮೂಲಕ ಈಡೇರಿಸುವ ವಿಂಧ್ಯಾಚಲವಾಗಿ ದೇವಿಯು ತನ್ನ ಅನಂತ ಕರುಣೆಯಿಂದ) "ಯಾರು ಸರಿಯಾದ ಮಾರ್ಗದಿಂದ ತಮ್ಮ ಹೃದಯವನ್ನು ಪರಿಶುದ್ಧಗೊಳಿಸಿಕೊಂಡಿರುವರೋ ಅವರ ಭೀತಿಯನ್ನು ದೂರಮಾಡಲಿ"

ಅಂತರಂಗದ ಶೋಧನೆಯೂ ಒಂದು ರೀತಿಯ ತಪಸ್ಸು. ಸತತವಾದ ಸ್ವವಿಶ್ಲೇಷಣೆಯಿಂದ ಸಾಧಕನು ತನ್ನ ಹೃದಯವನ್ನು ಶುದ್ಧೀಕರಿಸಿಕೊಳ್ಳುತ್ತಾನೆ. ಮೋಹ, ಕೋಪ ಹಾಗೂ ಭಯಗಳು ಮನಸ್ಸಿನ ಭಾವನೆಗಳು. ಮೋಹ ಹಾಗೂ ಅಹಂಕಾರವು ಕೋಪಕ್ಕೆ ಕಾರಣ. ಅವುಗಳನ್ನು ತೊರೆದಲ್ಲಿ ಸಾಧಕನು ಮುಕ್ತನಾಗುವನು. ಸಾಧಕರು ಶರಣಾಗತಿ ಹಾಗೂ ವಿಶ್ಲೇಷಣೆಯ ಮೂಲಕ ಎಲ್ಲ ಭಯವನ್ನೂ ಹೋಗಲಾಡಿಸಿಕೊಳ್ಳಬಹುದು. ಗಣಪತಿ ಮುನಿಗಳೂ ಸಹ ಇದನ್ನೇ ಪ್ರಾರ್ಥಿಸಿದರು.

ಅನಂತರ ಗಣಪತಿ ಮುನಿಗಳು ಕಾಶೀ ಪಟ್ಟಣದೆಡೆಗೆ ತಮ್ಮ ಪ್ರಯಾಣವನ್ನು ಮುಂದುವರೆಸಿದರು.

೧೫

ದುರ್ಗಾಮಂದಿರದ ಯೋಗಿ

ವಾರಾಣಸೀ ಶುಭ್ರಗಿರೀಶತುಲ್ಯಂ ಕ್ಷೇತ್ರಂ ಪವಿತ್ರಂ ಭುವನತ್ರಯೇಽಪಿ
ಅರ್ಥೇ ಪ್ರಜಾನಾಂ ವಿಧೃತಾನ್ನಪಾತ್ರಾ ಗೌರೀ ಸ್ವಯಂ ಯತ್ರ ವಿಶಾಲನೇತ್ರಾ ॥
– ಉಮಾಸಹಸ್ರಮ್ (7–25–21)

"ವಾರಾಣಸೀ ಕ್ಷೇತ್ರವು ಮೂರೂ ಲೋಕಗಳಲ್ಲಿಯೂ ಪಾವನವಾದ ಕೈಲಾಸಕ್ಕೆ ಸಮಾನಾದ ಕ್ಷೇತ್ರವಾಗಿದೆ. ಈ ಕ್ಷೇತ್ರದಲ್ಲಿ ಗೌರಿಯು ವಿಶಾಲಾಕ್ಷಿಯಾಗಿ, ಪ್ರಜೆಗಳ ಪೋಷಣಾರ್ಥವಾಗಿ ತಾನೇ ಅನ್ನದ ಪಾತ್ರವನ್ನು ಹಿಡಿದವಳಾಗಿ ಬೆಳಗುವಳು."

ಭಗವಂತನ ದಯೆಯು ಕೇವಲ ಮಾನವರಿಗೆ ಮಾತ್ರ ಮೀಸಲಾಗಿಲ್ಲ. ಅದು ಎಲ್ಲ ಜೀವಿಗಳನ್ನೂ, ನದಿಗಳು, ಪರ್ವತಗಳು ಮತ್ತು ಸಮಸ್ತ ನಿರ್ಜೀವ ವಸ್ತುಗಳಿಗೂ ಮೀಸಲಾಗಿರುವುದು. ಕೆಲವು ಕ್ಷೇತ್ರಗಳಲ್ಲಿ ಯೋಗಿಗಳು ಹಾಗೂ ಮುನಿಗಳಲ್ಲಿ ಇರುವಂತೆ, ವಿಶೇಷ ಶಕ್ತಿಯು ಸೇರಿಸಿರುವುದು. ಹೇಗೆ ಭೂ ಮಾತೆಯು, ಹುಟ್ಟು, ಸಾವು, ಭೂಕಂಪ, ಬಿರುಗಾಳಿ, ಪ್ರವಾಹ, ಮತ್ತು ಯುದ್ಧಗಳನ್ನು ಸಹಿಸಿಕೊಳ್ಳುವಳೋ, ಅದೇ ರೀತಿ ಭಾರತದಲ್ಲಿ ಕೆಲವು ಪವಿತ್ರ ಕ್ಷೇತ್ರಗಳು, ಕೊಳಗಳು, ನದಿಗಳು ಮತ್ತು ಪರ್ವತಗಳು ತಮ್ಮ ಪಾವಿತ್ರ್ಯತೆಯನ್ನು ಸದಾ ಹೊಂದಿವೆ. ಈ ಕ್ಷೇತ್ರಗಳನ್ನು ಯೋಗಿಗಳು ಮತ್ತು ಜ್ಞಾನಿಗಳು ತಪಸ್ಸಿಗೆ ಆರಿಸಿಕೊಳ್ಳುವರು. ಅವುಗಳಲ್ಲಿ ಅತ್ಯಂತ ಪವಿತ್ರ ಕ್ಷೇತ್ರವೇ ಗಂಗಾ ತೀರದಲ್ಲಿ ಇರುವ ವಾರಾಣಸಿ. ಈ ಕ್ಷೇತ್ರವು ಮೋಕ್ಷವನ್ನು ಕರುಣಿಸುವ ನಗರವೆಂದು ಕರೆಯಲಾಗುವುದು.

ದರ್ಶನಾದಭ್ರ ಸದಸಿ ಜನನಾತ್ಕಮಲಾಲಯೇ
ಕಾಶ್ಯಾಂತು ಮರಣಾನ್ಮುಕ್ತಿಃ ಸ್ಮರಣಾದರುಣಾಚಲೇ ॥

"ಚಿದಂಬರಮ್ ಕ್ಷೇತ್ರಕ್ಕೆ ಹೋಗುವುದು, ಕಮಲಾಲಯದಲ್ಲಿ ಜನಿಸುವುದು ಅಥವಾ ವಾರಾಣಸಿಯಲ್ಲಿ ಸಾಯುವುದು ಮೋಕ್ಷಕ್ಕೆ ದಾರಿ. ಆದರೆ ಅರುಣಾಚಲ ಕ್ಷೇತ್ರವನ್ನು ಸುಮ್ಮನೆ ನೆನೆಸಿಕೊಂಡರೆ ಸಾಕು ಅದು ಮುಕ್ತಿಯನ್ನು ಕರುಣಿಸುವುದು."

ಇದು ಶ್ಲೋಕದ ಉದ್ದೇಶ. ಭಗವಾನ್ ಶ್ರೀರಮಣರು, "ಸಾವೆಂದರೆ ಆತ್ಮದಲ್ಲಿ ಮನಸ್ಸು ಲಯವಾಗುವುದು." ಎಂದಿರುವರು. ಆತ್ಮದ ಬೆಳಕೇ ವಾರಣಾಸಿ.

ಗಣಪತಿ ಮುನಿಗಳು ಕೊನೆಗೆ ವಾರಣಾಸಿ ಕ್ಷೇತ್ರವನ್ನು ತಲುಪಿದರು. ಅಲ್ಲಿ ಅವರ ಸೋದರಮಾವ ಸೋಮಯಾಜುಲು ಭವಾನಿ ಶಂಕರಂ ವಾಸಿಸುತ್ತಿದ್ದರಿಂದ ಗಣಪತಿ ಮುನಿಗಳ ವಾಸ ಹಾಗೂ ಊಟದ ವ್ಯವಸ್ಥೆಗೆ ಸಮಸ್ಯೆ ಉಂಟಾಗಲಿಲ್ಲ. ಗಂಗಾ ಸ್ನಾನದ ನಂತರ ಶ್ರೀ ವಿಶ್ವೇಶ್ವರ ಮಂದಿರವನ್ನು ಪ್ರವೇಶಿಸಿ ಮೊತ್ತ ಮೊದಲಿಗೆ ಗಣಪತಿ ದೇವರನ್ನು ಈ ರೀತಿಯಾಗಿ ಹೊಗಳಿದರು:

ಏಕಾದಲಾನಾಂ ಪ್ರವರಂ ಸುತಾನಾಂ
ರುದ್ರಸ್ಯ ಮಂತ್ರಾಧಿಪತಿಂ ನಮಾಮಿ
ಶಾಸ್ತ್ರಾಣಿ ಸರ್ವಾಣ್ಯಪಿ ಯಸ್ಯ ಕೀಲಾಃ
ಸೂರ್ಯೋರ್ನಪೋದ್ಯಂ ತಿಮಿರಂ ಹರಂತಿ ॥

"ಓ, ಭಗವನ್ ಗಣಪತಿಯೇ! ಭಗವಾನ್ ರುದ್ರನ ಹನ್ನೊಂದು ಪುತ್ರರಲ್ಲಿ ಮಹೋನ್ನತನೂ ಸೂರ್ಯನೂ ಕೂಡಾ ಹೋಗಲಾಡಿಸಲಾಗದ ಅಜ್ಞಾನದ ಕತ್ತಲೆಯನ್ನು ಧರ್ಮಗ್ರಂಥಗಳ ಜ್ಞಾನಾಗ್ನಿಯ ಮೂಲಕ ನಿವಾರಿಸುವವನೂ, ಎಲ್ಲ ಮಂತ್ರಗಳ ಅಧಿದೈವವೂ ಆದ ಓ ಹೇರಂಬನೇ, ನಿನಗೆ ನನ್ನ ನಮಸ್ಕಾರಗಳು."

ಗಣಪತಿ ಮುನಿಗಳ ಮನಸ್ಸು ತನ್ನ ಜನನದ ಹಿಂದಿನ ಸಮಯ, ಅವರ ತಂದೆಯವರಿಗೆ ದುಂತಿ ಗಣಪತಿಯ ವಿಗ್ರಹದಿಂದ ಮಗುವೊಂದು ಅಂಬೆಗಾಲಿಟ್ಟುಕೊಂಡು ಬಂದು ಅವರ ತೊಡೆಯ ಮೇಲೆ ಕುಳಿತ ದೈವೀ ಘಟನೆಯೆಡೆಗೆ ಹೋಯಿತು. ಗಣಪತಿ ಮುನಿಗಳನ್ನು ತಪಸ್ಸನ್ನು ಮಾಡಲು ಪ್ರೇರೇಪಿಸಿದ ಭದ್ರಕನೂ ಸಹ ಈ ದೈವದ ಅವತಾರ. ಅತೀವ ಭಕ್ತಿಯಿಂದ ಕಣ್ಣೀರಿನ ಮೂಲಕ ದುಂತಿ ಗಣಪತಿಯನ್ನು ಹೊಗಳುವ ಈ ಕೆಳಗಿನ ಶ್ಲೋಕದ ಮೂಲಕ ಗಣಪತಿ ಮುನಿಗಳು ಸ್ತುತಿಸಿದರು.

ಕಾರ್ಯಂ ನ ಮೇ ಕಿಮಪಿ ತತ್ವಲು ನಿರ್ಜರಾಣಾಂ
ರೂಪಂ ನ ಮೇ ಕಿಮಪಿ ತತ್ತವ ಕೋಽಪಿ ವೇಷಃ
ಇಷ್ಟಂನು ಕಷ್ಟ ಮಂಥ ಕಸ್ಯ ಕರೀಂದ್ರವಕ್ತ್ರ
ಶಿಷ್ಟಂತು ಮೇ ಕಿಮಪಿನಾಮ ನರಾಂಗಸಂಗೀ ॥

"ಓ ದೇವನೆ! ಈ ನನ್ನ ಮಾನವ ಶರೀರವು ನಿನ್ನ ಅನೇಕ ಅವತಾರಗಳಲ್ಲೊಂದಾದರೆ, ದಯಮಾಡಿ ಕಾರ್ಯಪ್ರವೃತ್ತನಾಗು. ನಾಟ್ಯಮಾಡು, ದಯವಿಟ್ಟು ಮೌನವಾಗಿರಬೇಡ. ನಿನ್ನ ಗಣಗಳು ನಮ್ಮಿಬ್ಬರ ನಡುವಿನ ಪರದೆಯನ್ನು ತೆಗೆಯಲಿ. ಓ ದೇವನೆ, ಏಕೆ ತಡಮಾಡುತ್ತಿರುವೆ? ದಯವಿಟ್ಟು ನನ್ನಲ್ಲಿ ದಯೆಯಿಡು."

ಗಣಪತಿ ಮುನಿಗಳು ಮೊದಲಿಗೆ ವಿಶ್ವೇಶ್ವರ ಮಂದಿರ ಹಾಗೂ ಅನ್ನಪೂರ್ಣೇಶ್ವರಿಯ ಮಂದಿರಕ್ಕೆ ಹೋಗಿ ನಂತರ ತನ್ನ ಸೋದರ ಮಾವನ ಮನೆಗೆ ಹೋದರು. ವಿಶ್ವೇಶ್ವರ

ಮಂದಿರದ ಮೊದಲನೇ ಭೇಟಿಯು ಗಣಪತಿ ಮುನಿಗಳ ಮನಸ್ಸಿಗೆ ಅತೀವ ಸಂತೋಷ ಹಾಗೂ ಶಾಂತಿಯನ್ನು ನೀಡಿತು. ವಾರಣಾಸಿಯಲ್ಲಿ ಗಣಪತಿ ಮುನಿಗಳ ನಿತ್ಯ ಕಾರ್ಯಗಳೆಂದರೆ – ಬ್ರಾಹ್ಮೀ ಮುಹೂರ್ತದಲ್ಲಿ ಗಂಗಾ ಸ್ನಾನ, ವಿಶ್ವದ ಮಾತಾ ಪಿತೃಗಳ ಮಂದಿರ ದರ್ಶನ, ಅನಂತರ ದುಂತಿ ಗಣಪತಿ ವಿಗ್ರಹದೆದುರು ತಾನು ಜನ್ಮಿಸುವ ಮೊದಲು ತನ್ನ ತಂದೆಯವರು ಮಾಡಿದಂತೆ ಧ್ಯಾನ ಮಾಡುವುದು. ಗಣಪತಿ ಮುನಿಗಳು ಇದೇ ರೀತಿ ಎರಡು ತಿಂಗಳು ತಪಸ್ಸನ್ನಾಚರಿಸಿದರು.

ಒಂದು ದಿನ ಗಣಪತಿ ಮುನಿಗಳು ತನ್ನ ಧ್ಯಾನವನ್ನು ಮುಗಿಸಿಕೊಂಡು ಮರಳಿ ಸೋದರ ಮಾವನ ಮನೆಗೆ ಹೋಗುವ ಹಾದಿಯಲ್ಲಿ ಕೆಲವು ವಿದ್ವಾಂಸರು ಎಲ್ಲೋ ಒಂದೆಡೆ ನಡೆಯಲಿರುವ ವಿದ್ವಾಂಸರ ಸಭೆಯಲ್ಲಿ ಭಾಗವಹಿಸುವುದರ ಬಗ್ಗೆ ಚರ್ಚಿಸುತ್ತಿದ್ದರು. ಗಣಪತಿ ಮುನಿಗಳು ಅವರ ಬಳಿ ತೆರಳಿ ತಮ್ಮ ಪರಿಚಯ ಮಾಡಿಕೊಂಡು ಅವರು ಭಾಗವಹಿಸಲಿರುವ ಸಭೆಯ ಬಗೆಗೆ ವಿಚಾರಿಸಿದರು. ವಿದ್ವತ್ ಶಿರೋಮಣಿ ಶ್ರೀ.ಶಿವಕುಮಾರ ದತ್ತರವರು ಕಾಶಿಯಲ್ಲಿನ ತಮ್ಮ ಮನೆಯಲ್ಲಿ ವಿದ್ವಾಂಸರ ಪೂರ್ವಭಾವಿ ಸಭೆಯನ್ನು ನಡೆಸಲಿರುವ ವಿಷಯ ತಿಳಿಯಿತು. ಶ್ರೀ ಶಿವಕುಮಾರರು ಬಿಹಾರದ ದರ್ಭಾಂಗ ನಗರದಲ್ಲಿನ ಶಾಲೆಯ ಮುಖ್ಯೋಪಾಧ್ಯಾಯರು ಹಾಗೂ ಅವರು ಆಂಧ್ರಪ್ರದೇಶದ ಸುಪ್ರಸಿದ್ಧ ವಿದ್ವಾಂಸರಾದ ಬಾಲ ಶಾಸ್ತ್ರಿಯವರ ಶಿಷ್ಯರು, ಇಂಥಹ ಸುಪ್ರಸಿದ್ಧ ವಿದ್ವಾಂಸರನ್ನು ಭೇಟಿಯಾಗುವ ಕುತೂಹಲವುಳ್ಳ ಗಣಪತಿ ಮುನಿಗಳು ಆ ಸಭೆಗೆ ಹೋದರು. ತಮ್ಮ ವಿದ್ವತ್ ಪ್ರತಿಭೆಯನ್ನು ಆ ಸಭೆಯಲ್ಲಿ ಪ್ರಕಟಿಸಿ ಶಿವಕುಮಾರ ದತ್ತರ ಗಮನ ಸೆಳೆದರು. ದತ್ತರು ಗಣಪತಿ ಮುನಿಗಳ ಉಜ್ವಲ ಭವಿಷ್ಯವನ್ನು ಗುರುತಿಸಿದರು. ಅವರು ಗಣಪತಿ ಮುನಿಗಳಿಗೆ ಬಂಗಾಲ ಪ್ರಾಂತ್ಯದ ನವದ್ವೀಪದಲ್ಲಿ ನಡೆಯುವ ವಿದ್ವತ್ ಸಭೆಯಲ್ಲಿ ಭಾಗವಹಿಸಲು ಅನುಮತಿಸಿದರು. ಗಣಪತಿ ಮುನಿಗಳಿಗೆ ಆ ಸಭೆಗೆ ಹೋಗಲು ಅನುಮತಿಯು ಹೇಗೆ ಸಿಗುವುದು ಎಂಬುದರ ಬಗ್ಗೆ ಆತಂಕವಾಗಿ ಶಿವಕುಮಾರರ ಸಹಾಯವನ್ನು ಕೋರಿದರು.

ಶಿವಕುಮಾರರು "ಯೋಚಿಸಬೇಡ, ಗಣಪತಿ, ನೀನು ಆ ಸಭೆಯಲ್ಲಿ ಭಾಗವಹಿಸಲು ಆ ಸಭೆಯ ಕಾರ್ಯದರ್ಶಿಗೆ ನಿನ್ನ ಬಗೆಗಿನ ಪರಿಚಯ ಪತ್ರವನ್ನು ಕೊಡುವೆ. ಇದು ನಿನಗೆ ಸಭೆಯಲ್ಲಿ ಭಾಗವಹಿಸಲು ಅನುಕೂಲವನ್ನು ಕಲ್ಪಿಸುತ್ತದೆ."

ಗಣಪತಿ ಮುನಿಗಳಿಗೆ ಇಂಥಹ ಮಹಾನ್ ಪಂಡಿತರಿಂದ ಇಷ್ಟೊಂದು ಪ್ರೋತ್ಸಾಹ ದೊರೆತದ್ದು ಅತೀವ ಆನಂದವನ್ನುಂಟು ಮಾಡಿತು ಹಾಗೂ ತಾವು ದುಂತಿ ಗಣಪತಿಗೆ ಸಲ್ಲಿಸಿದ್ದ ಪ್ರಾರ್ಥನೆಗೆ ಸೂಕ್ತ ಫಲ ದೊರಕಿತೆಂದು ಅರಿವಾಯಿತು. ಮಾನಸಿಕವಾಗಿ ದೈವಕ್ಕೆ ನಮಿಸಿ ನವದ್ವೀಪಕ್ಕೆ ಸಕಾಲದಲ್ಲಿ ತಲುಪಲು ಪ್ರಯಾಣಕ್ಕೆ ಏರ್ಪಾಟು ಮಾಡಿಕೊಳ್ಳತೊಡಗಿದರು.

ಮಾರನೇ ದಿನ ಗಣಪತಿ ಮುನಿಗಳು ದೇವಸ್ಥಾನಕ್ಕೆ ಹೋಗದೆ, ತನ್ನ ದೈನಂದಿನ

ಪೂಜೆಯನ್ನು ಮುಗಿಸಿ ಗ್ರಂಥವೊಂದನ್ನು ಓದಲು ತೊಡಗುತ್ತಿದ್ದಂತೆ ಹೊರಬಾಗಿಲ ಬಳಿ ಯಾರೋ ತನ್ನ ಹೆಸರನ್ನು ಕೂಗುತ್ತಿರುವಂತೆ ಭಾಸವಾಯಿತು. ಒಬ್ಬ ಸಾಧುವು ಇವರ ಕೋಣೆಯನ್ನು ಪ್ರವೇಶಿಸುತ್ತಾ, "ನೀನು ಇಲ್ಲಿರುವುದು ಭವಾನಿ ಶಂಕರರಿಂದ ತಿಳಿಯಿತು. ನಾನು ನಿನ್ನ ಹಳೇ ಪರಿಚಯಸ್ಥ. ನೀನು ನನ್ನನ್ನು ಗುರುತು ಹಿಡಿಯಲಿಲ್ಲವಲ್ಲಾ?" ಎಂದನು.

ಗಣಪತಿ ಮುನಿಗಳಿಗೆ ಈ ಸಾಧುವನ್ನು ಹಿಂದೆಂದೂ ಕಂಡ ನೆನಪು ಬರಲಿಲ್ಲ. ಅವರಿಗೆ ತನ್ನ ಬಗ್ಗೆ ಹೇಗೆ ತಿಳಿಯಿತೆಂದು ಆಶ್ಚರ್ಯಪಟ್ಟು ನಮ್ರನಾಗಿ, "ನನಗೆ ನೆನಪು ಬರುತ್ತಿಲ್ಲ. ನಿಮ್ಮನ್ನು ಗುರುತು ಹಿಡಿಯಲು ಆಗುತ್ತಿಲ್ಲ" ಎಂದರು.

ಸಾಧು: "ನಾನು ಸೋಮಯಾಜುಲು ಸೂರ್ಯನಾರಾಯಣ. ಜನಗಳು ನನ್ನನ್ನು ದುರ್ಗಾ ಮಂದಿರ ಯೋಗಿಯೆಂದು ಕರೆಯುವರು. ದುರ್ಗಾ ಮಂದಿರವು ರಾಮನಗರದಲ್ಲಿರುವುದು, ನಾನು ಅಲ್ಲೇ ವಾಸಿಸುವುದು."

ಗಣಪತಿ: "ನಿಮ್ಮ ಮೂಲಸ್ಥಳ ಯಾವುದು, ಸ್ವಾಮಿ?"

ಸಾಧು: "ಅದು ನಿಮ್ಮ ಊರಿನ ಸಮೀಪದಲ್ಲಿದೆ. ಈಗ ನಾನು ನಿಮ್ಮ ಮಾತಾ ಪಿತೃಗಳನ್ನು ಭೇಟಿಯಾಗಿ ಇಲ್ಲಿಗೇ ನೇರವಾಗಿ ಬಂದೆ."

ಗಣಪತಿ: "ನಿಮಗೆ ನನ್ನ ಬಗ್ಗೆ ಇದಕ್ಕೆ ಮೊದಲು ಹೇಗೆ ತಿಳಿದಿತ್ತು?"

ಸಾಧು: "ನಾನು ನಿನ್ನ ಶ್ರೇಯೋಭಿಲಾಷಿ. ಹಾಗಾಗಿ ನೀನು ನನಗೆ ಬಹಳ ಹತ್ತಿರದವನು. ನಿನಗೆ ಭದ್ರಕನು ಗೊತ್ತಿಲ್ಲವೆ?"

ಅತ್ಯಾಶ್ಚರ್ಯದಿಂದ ಗಣಪತಿ ಮುನಿಗಳು ನನ್ನ ಕನಸಿನಲ್ಲಿ ಭದ್ರಕನು ಬಂದ ವಿಷಯವು ನಿಮಗೆ ಹೇಗೆ ಗೊತ್ತಾಯಿತೆಂದು ಸಾಧುವನ್ನು ಕೇಳಿದರು.

ಸಾಧು: "ಅವನು ಭದ್ರಕ ಮತ್ತು ನಾನು ಸುಕೇತು. ಸದ್ಯದಲ್ಲಿ ಹದಿನಾಲ್ಕು ದೈವಾಂಶ ಸಂಭೂತರು ಭೂಮಿಯ ಮೇಲೆ ಅವತರಿಸಿರುವರು. ನೀನು ಅವರಲ್ಲಿ ಒಬ್ಬನು."

ಈ ಸಾಧುವು ಬಹಳ ಕುತೂಹಲಕಾರಿ ವ್ಯಕ್ತಿಯೆಂದರಿತ ಗಣಪತಿ ಮುನಿಗಳು ತಮ್ಮ ಭವಿಷ್ಯದ ಬಗ್ಗೆ ಕೇಳಿದರು.

ಸಾಧು: "ನೀನು ಸಹಜವಾಗಿ ಒಬ್ಬ ಮಹಾ ತಪಸ್ವಿ, ನಿನ್ನ ಎಲ್ಲ ಕಾರ್ಯಗಳೂ ಸ್ಥೂಲ ಸಿರಸ್ ಎಂಬುವನಿಂದ ಈಡೇರುವುದು. ಇದಕ್ಕೆ ಮೊದಲು ನೀನು ಸಾಹಿತ್ಯ ಕ್ಷೇತ್ರದಲ್ಲಿ ದೈವೀ ಮಾತೆಯ ಅನುಗ್ರಹದಿಂದ ಸಂಪೂರ್ಣ ಸಿದ್ಧಿಯನ್ನು ಹೊಂದುವೆ."

ಗಣಪತಿ ಮುನಿಗಳಿಗೆ ಈ ಸಾಧುವು ತನ್ನ ಬಗ್ಗೆ ಇಷ್ಟು ಅಧಿಕೃತವಾಗಿ ಭವಿಷ್ಯವನ್ನು ನುಡಿದ ಬಗ್ಗೆ ಅತೀವ ವಿಸ್ಮಯವುಂಟಾಗಿ ಅವನಿಗೆ ನಮಸ್ಕರಿಸಿ ತನ್ನ ತಂದೆಗೆ ಒಂದು ಪತ್ರವನ್ನು ಬರೆಯುವುದಾಗಿ ತಿಳಿಸಿದರು.

ಸಾಧು: "ಹಾಗೇ ಆಗಲಿ. ಆ ಪತ್ರದಲ್ಲಿ ನಾನು ಕೆಲವು ಸಾಲುಗಳನ್ನು ಸೇರಿಸುವೆ."

ಗಣಪತಿ ಮುನಿಗಳು ಕೂಡಲೇ ತಂದೆಗೆ ಪತ್ರವನ್ನು ಬರೆದು ಸಾಧುವಿಗೆ ನೀಡಿದರು. ಸಾಧುವು ಆ ಪತ್ರದಲ್ಲಿ, "ಸ್ವಾಮಿ, ನಿಮ್ಮ ಮಗನು ತಪಸ್ಸನ್ನಾಚರಿಸುತ್ತಿರುವನು. ದಯವಿಟ್ಟು ಅವನನ್ನು ಸಾಂಸಾರಿಕ ವಿಷಯಗಳಲ್ಲಿ ತೊಡಗಿಸದಿರಿ."

ಸಾಧುವು ಪತ್ರದಲ್ಲಿ ಗಣಪತಿ ಮುನಿಗಳ ಮನೆಯ ವಿಳಾಸವನ್ನು ಆಂಗ್ಲಭಾಷೆಯಲ್ಲಿ ಬರೆದು ಅದನ್ನು ಟಪಾಲು ಡಬ್ಬಿಯಲ್ಲಿ ಹಾಕುವುದಾಗಿ ತಿಳಿಸಿ ಹೊರನಡೆದನು.

ಮಾರನೇ ದಿನ ಗಣಪತಿ ಮುನಿಗಳು ಸಾಧುವನ್ನು ಭೇಟಿಯಾಗಲು ರಾಮನಗರಕ್ಕೆ ಹೋಗಿ ಅಲ್ಲಿ ವಿಚಾರಿಸಿದಾಗ ಅಲ್ಲಿನ ಜನಗಳು ಆ ಹೆಸರಿನ ಯಾರೂ ಇಲ್ಲವೆಂದು ತಿಳಿಸಿದರು. ಗಣಪತಿಗೆ ಈ ಸಾಧುವು ಯಾರಿರಬಹುದೆಂದು ಆಶ್ಚರ್ಯವಾಯಿತು.

೧೬

ದಿವ್ಯಾಮೃತದ ದೈವಾನುಗ್ರಹ

ಗೋಪಾಲಿನೀವೇಷಭೃತಂ ಭಜಸ್ವ ಲೀಲಾಸಖೀ ತಾಂ ಭುವನೇಶ್ವರಸ್ಯ
ಇಷ್ಟಂ ಹೃದಿಸ್ಥಂ ತವ ಹಸ್ತಗಂ ಸ್ಯಾತ್ ಕಷ್ಟಂ ಚ ಸಂಸಾರಭವಂ ನ ಭೂಯಃ ॥
– ಉಮಾಸಹಸ್ರಮ್ (7–25–16)

"ಮಾತೆ ಭುವನೇಶ್ವರಿ, ಗೋಪಾಲಿನಿಯಾಗಿ ಪ್ರಕಟವಾದವಳು ಮತ್ತು ಭುವನೇಶ್ವರನ ಜೊತೆಯಾಟಗಾರ್ತಿಯನ್ನು ಪೂಜಿಸಿದರೆ ಅವಳು ನಿಮ್ಮ ಹೃದಯಾಂತರಾಳದಲ್ಲಿನ ಆಸೆ ಆಕಾಂಕ್ಷೆಗಳನ್ನು ಈಡೇರಿಸುವಳು. ನಿಮ್ಮನ್ನು ಪ್ರಾಪಂಚಿಕ ತೊಂದರೆಗಳ ಭಯದಿಂದ ಪಾರುಮಾಡುವಳು."

ದಶ ಮಹಾ ವಿದ್ಯೆಯು ದೇವಿಯನ್ನು ಹತ್ತು ಮಾರ್ಗಗಳಲ್ಲಿ ಪೂಜಿಸುವ ಮಾರ್ಗಗಳು. ಗಣಪತಿ ಮುನಿಗಳು ತಮ್ಮ "ಸೂರ್ಯ ಕಾವ್ಯ" ದಲ್ಲಿ ಇದನ್ನು ವಿವರಿಸಿರುವರು. ದಶ ವಿದ್ಯೆಗಳು – ಕಾಳಿ, ತಾರಾ, ಸುಂದರಿ, ಭುವನೇಶ್ವರಿ, ಭೈರವಿ, ಪ್ರಚಂಡ ಚಂಡಿ, ಧೂಮವತಿ, ಬಗಲಾಮುಖಿ, ಮಾತಂಗಿ ಮತ್ತು ಕಮಲಾತ್ಮಿಕಾ. ಮಾತೆಯು ಒಬ್ಬಳೇ ಆದರೂ, ಅವಳನ್ನು ಅನೇಕ ರೂಪದಲ್ಲಿ ಭಕ್ತರು ಪೂಜಿಸುವರು.

ಭುವನೇಶ್ವರಿ ವಿದ್ಯೆಯು ನಾಲ್ಕನೇ ಪೂಜಾ ಮಾರ್ಗ. ನಮ್ಮ ಎಲ್ಲಾ ಆಲೋಚನೆಗಳೂ ಹೃದಯಾಕಾಶದಲ್ಲಿ ಉದಯಿಸುವುದು. ಅದೇ ರೀತಿ ಸೃಷ್ಟಿ ಹಾಗೂ ಅದಕ್ಕೆ ಸಂಬಂಧಿಸಿದ ಯೋಚನೆಗಳನ್ನು ಮಾಯೆ ಎಂದು ಕರೆಯಲಾಗುತ್ತದೆ. ಭುವನೇಶ್ವರಿ ಎಂದರೆ ಮಾಯೆ ಹಾಗೂ ಪರಮಾಕಾಶ ಎಂದರ್ಥ. ಈ ರೂಪದ ಮಹಾನ್ ದೇವಿಯು ತನ್ನ ಭಕ್ತರ ಎಲ್ಲ ಆಸೆಗಳನ್ನೂ ಈಡೇರಿಸುವವಳು. ಹಾಗಾಗಿ ಭಕ್ತರು ಅವಳನ್ನು "ಓಂ ಹ್ರೀಂ ಓಂ" ಎಂಬ ಬೀಜಾಕ್ಷರದೊಂದಿಗೆ ಪೂಜಿಸುವರು.

ಗಣಪತಿ ಮುನಿಗಳ ಕಿವಿಗಳಲ್ಲಿ ದುರ್ಗಾ ಮಂದಿರದ ಯೋಗಿಯ, "ನಿನ್ನ ತಪಸ್ಸು ಸಂಪೂರ್ಣವಾಗಿ ಸಿದ್ಧಿಸುವುದು" ಎಂಬ ಮಾತುಗಳು ಕೇಳಿಬರತೊಡಗಿದವು. ಶಕ್ತಿಯುತವಾದ ಪೂಜಾಸ್ಥಳದಲ್ಲಿ ತಪಸ್ಸನ್ನಾಚರಿಸುವ ಇಚ್ಛೆಯಿಂದ ಗಣಪತಿ ಮುನಿಗಳು ತನ್ನ ಸೋದರಮಾವನಿಂದ ಅನುಮತಿ ಪಡೆದು ಭುವನೇಶ್ವರದೆಡೆಗೆ ಪ್ರಯಾಣವನ್ನು ಬೆಳೆಸಿದರು.

ಗಣಪತಿ ಮುನಿಗಳು ಭುವನೇಶ್ವರಕ್ಕೆ ತಪಸ್ಸಿಗಾಗಿ ಬಂದ ಸಮಯದಲ್ಲಿ ಅದು ಒಂದು ಹಳ್ಳಿಯಾಗಿತ್ತು. ಇಲ್ಲಿ ಆ ಕಾಲದಲ್ಲಿ ಸುಮಾರು ಐನೂರು ಮಂದಿರಗಳಿದ್ದು ತಪಸ್ಸನ್ನಾಚರಿಸುವವರಿಗೆ ಸೂಕ್ತ ಸ್ಥಳವಾಗಿತ್ತು. ಇಲ್ಲಿ ಸುಪ್ರಸಿದ್ಧ ಲಿಂಗರಾಜ ಮಂದಿರವನ್ನು ಉತ್ಕಲ ಶೈಲಿಯ ಶಿಲ್ಪವಿನ್ಯಾಸದಲ್ಲಿ ನಿರ್ಮಿಸಲಾಗಿದೆ. ಇದರ ಪಕ್ಕದಲ್ಲಿರುವುದೇ ಮಾತಾ ಭುವನೇಶ್ವರಿ ಮಂದಿರ. ಮೊದಲೆರಡು ದಿನಗಳಲ್ಲಿ ಗಣಪತಿಯು ಮಂದಿರದ ಸುತ್ತಲೆಲ್ಲ ಅಲ್ಲಿಯ ಶಿಲ್ಪಕಲೆ, ವಿನ್ಯಾಸಗಳನ್ನು ಕೂಲಂಕುಶವಾಗಿ ವೀಕ್ಷಿಸಿ ನಂತರ ಮೂರನೇ ದಿನ ಕೆಲವು ಬಾಳೆ ಹಣ್ಣುಗಳನ್ನು ಖರೀದಿಸಿ ತನ್ನ ಗಂಟಿನಲ್ಲಿ ಇಟ್ಟುಕೊಂಡು ಮಾತಾ ಭುವನೇಶ್ವರಿಯ ವಿಗ್ರಹದ ಮುಂದೆ ಧ್ಯಾನಕ್ಕೆ ಕುಳಿತರು.

ಗಣಪತಿ ಮುನಿಗಳು ಪ್ರತಿ ನಿತ್ಯವೂ ಸ್ನಾನಾದಿ ಕಾರ್ಯಕ್ರಮಗಳನ್ನು ಮುಗಿಸಿ ಹನ್ನೊಂದು ಘಂಟೆಯವರೆಗೂ ದೇವಿಯ ಮುಂದೆ ಕುಳಿತು ಧ್ಯಾನಾಸಕ್ತನಾಗಿದ್ದು ಹನ್ನೊಂದು ಘಂಟೆಗೆ ಸರಿಯಾಗಿ ಗಂಟಿನಿಂದ ಒಂದು ಬಾಳೆಹಣ್ಣನ್ನು ಹೊರತೆಗೆದು ಅದನ್ನು ತಿಂದು ಸಿಪ್ಪೆಯನ್ನು ಪಕ್ಕದಲ್ಲಿರಿಸಿಕೊಂಡು ಮತ್ತೆ ಧ್ಯಾನ ಮಾಡತೊಡಗಿದರು. ಆರು ದಿನಗಳವರೆಗೆ ಇದೇ ರೀತಿ ದಿನಕ್ಕೊಂದು ಬಾಳೆಹಣ್ಣನ್ನು ಮಾತ್ರ ತಿಂದು ಧ್ಯಾನಮಾಡುತ್ತಿದ್ದು, ಏಳನೇ ದಿನ ಹನ್ನೊಂದು ಘಂಟೆಗೆ ಬಾಳೆಹಣ್ಣಿಗಾಗಿ ಗಂಟಿನೊಳಗೆ ಕೈ ಹಾಕಿದಾಗ ಅಲ್ಲಿ ಅದು ಇಲ್ಲದ್ದನ್ನು ಕಂಡು ಪಕ್ಕದಲ್ಲಿದ್ದ ಬಾಳೆಹಣ್ಣಿನ ಸಿಪ್ಪೆಯೊಂದನ್ನೇ ತಿಂದು ಮತ್ತೆ ಧ್ಯಾನ ಮಾಡತೊಡಗಿದರು.

ಗೌರಿ ಶಂಕರ ಪಂಡ, ಭುವನೇಶ್ವರಿ ಮಂದಿರದ ಅರ್ಚಕರು. ಅವರು ಗಣಪತಿ ಮುನಿಗಳ ತೀವ್ರವಾದ ಕಠಿಣ ತಪಸ್ಸನ್ನು ಮೊದಲನೇ ದಿನದಿಂದಲೇ ನೋಡುತ್ತಿದ್ದರು. ಅವರಿಗೆ ಗಣಪತಿಯ ಈ ವಿಧದ ಕಠಿಣ ತಪಸ್ಸನ್ನು ಕಂಡು ಇವರಿಗೆ ಸೇವೆಮಾಡುವುದು ಪುಣ್ಯದ ಕೆಲಸವೆಂದರಿತು ಎಂಟನೇ ದಿನ ಗಣಪತಿ ಮುನಿಗಳು ಹನ್ನೊಂದು ಘಂಟೆಗೆ ಕಣ್ತೆರೆಯುವ ಮೊದಲೇ ಅವರೆದುರಿಗೆ ಒಂದು ಲೋಟ ಹಾಲನ್ನು ಇಟ್ಟಿದ್ದರು. ಗಣಪತಿಯು ಕಣ್ತೆರೆದು ಮುಂದಿದ್ದ ಹಾಲನ್ನು ನೋಡಿ ಅದನ್ನು ಕುಡಿದು ಮತ್ತೆ ಧ್ಯಾನದಲ್ಲಿ ಮುಳುಗಿದರು. ಈ ರೀತಿಯಾಗಿ ಗಣಪತಿ ಮುನಿಗಳು ಇಪ್ಪತ್ತು ದಿನಗಳವರೆಗೂ ದೀರ್ಘ ತಪಸ್ಸನ್ನಾಚರಿಸಿದರು. ಇಪ್ಪತ್ತೊಂದನೇ ದಿನ ಮಾತೆ ಭುವನೇಶ್ವರಿಯು ತನ್ನ ಹಸ್ತದಲ್ಲಿ ಅಮೃತದಿಂದ ತುಂಬಿರುವ ಕಲಶವನ್ನು ಹಿಡಿದು ಮಂದಹಾಸದಿಂದ ಪ್ರತ್ಯಕ್ಷಳಾಗಿ ಕಲಶದಿಂದ ಕೆಲವು ಹನಿ ಅಮೃತವನ್ನು ಗಣಪತಿ ಮುನಿಗಳ ನಾಲಿಗೆಯ ಮೇಲೆ ಸುರಿಸಿದಳು.

ಮಾತಾ ಭುವನೇಶ್ವರಿಯ ವದನವು ಚಂದ್ರನಂತೆ ಶೀತಲವಾಗಿ; ಅವಳ ಮಂದಹಾಸವು ಅಮೃತದ ಚಿಲುಮೆಯಂತೆ; ಅವಳ ಹೃದಯವು ಕಾರುಣ್ಯದಿಂದ ತುಂಬಿದ್ದು; ಅವಳ ಕಣ್ಣುಗಳು ಸಂಪೂರ್ಣ ರಕ್ಷಣೆಯ ಭರವಸೆಯನ್ನು ನೀಡುತ್ತಿತ್ತು. ಈ ರೀತಿಯ ಮಾತೆಯ ಭವ್ಯ ರೂಪವನ್ನು ನೋಡುತ್ತಾ ಗಣಪತಿ ಮುನಿಗಳು ಸಂಪೂರ್ಣವಾಗಿ ಆನಂದದ ಕಡಲಿನಲ್ಲಿ ಮುಳುಗಿಹೋಗಿದ್ದರು. ಎಚ್ಚರಗೊಂಡ ನಂತರವೂ ಅವರು ತಮ್ಮ ನಾಲಿಗೆಯ

ಮೇಲಿದ್ದ ಅಮೃತ ಬಿಂದುಗಳ ರುಚಿಯನ್ನು ಆಸ್ವಾದಿಸುತ್ತಿದ್ದರು. ಅವರಿಗೆ ಮಾತೆಯ ದರ್ಶನವು ಕನಸಲ್ಲವೆಂದು ಅರ್ಥವಾಯಿತು. ಅವಳು ನೈಜವಾಗೇ ಎದುರಿಗೆ ನಿಂತಿರುವಳೆಂದು ಅರಿವಾಯಿತು. ಈ ವಿಧದ ಆನಂದವನ್ನು ಗಣಪತಿ ಮುನಿಗಳು ಹಿಂದೆಂದೂ ಅನುಭವಿಸಿರಲಿಲ್ಲ.

ಮಾತಾ ಭುವನೇಶ್ವರಿಯ ಅಭೂತಪೂರ್ವ ರೂಪವು ಗಣಪತಿ ಮುನಿಗಳ ಮನಸ್ಸಿನಲ್ಲಿ ಎಷ್ಟರಮಟ್ಟಿಗೆ ಅಚ್ಚೊತ್ತಿತ್ತೆಂದರೆ ಅಲ್ಲಿಂದ ತನ್ನೆಲ್ಲಾ ಕೃತಿಗಳಲ್ಲೂ ದೇವಿಯನ್ನು ಸ್ತುತಿಸಲು ಪ್ರಾರಂಭಿಸಿದರು. ಗಣಪತಿ ಮುನಿಗಳು ತನ್ನ ಮೇರು ಕೃತಿಯಾದ ಸಾವಿರ ಶ್ಲೋಕಗಳಿಂದ ಕೂಡಿದ "ಉಮಾಸಹಸ್ರಮ್" ಸ್ತೋತ್ರದಲ್ಲಿ ಮಾತೆಯ ಮಂದಹಾಸವನ್ನು ಕುರಿತು ಅನೇಕ ಶ್ಲೋಕಗಳನ್ನು ರಚಿಸಿದರು.

ಅಖಿಲಜಗನ್ಮಾತೋಮಾ ತಮಸಾ ತಾಪೇನ ಚಾಕುಲಾನಸ್ಮಾನ್
ಅನುಗೃಹ್ಣಾತ್ವನುಕಂಪಾಸುಧಾರ್ದ್ರಯಾ ಹಸಿತಚಂದ್ರಿಕಯಾ
– ಉಮಾಸಹಸ್ರಮ್ (1–1–1)

"ಹೇ ಸಮಸ್ತ ವಿಶ್ವದ ಮಾತೆ, ಉಮಾ! ನಾವೆಲ್ಲರೂ ಅಜ್ಞಾನ ಹಾಗೂ ಮೂರು ವಿಧವಾದ ದುಃಖಗಳಿಂದ ಪರಿತಪಿಸುತ್ತಿರುವೆವು. ದಯೆಯೆಂಬ ಅಮೃತದಿಂದ ತೊಯ್ದಿರುವ ತಂಪಾದ ಚಂದ್ರನ ಬೆಳಕನ್ನೂ ನಾಚಿಸುವ ನಿನ್ನ ಮಂದಹಾಸದಿಂದ ನಮ್ಮನ್ನು ಅನುಗ್ರಹಿಸು."

ಗಣಪತಿ ಮುನಿಗಳು ಅನುಭವಿಸಿದ ಈ ದೈವೀ ಅನುಭವವು, ಕಾಳಿದಾಸ ಮತ್ತು ತೆನಾಲಿ ರಾಮಲಿಂಗರು ದೇವಿಯ ಅನುಗ್ರಹದ ಮೂಲಕ ತಮ್ಮ ಹೃದಯದಲ್ಲಿ ದೈವೀ ಕಾವ್ಯರಚನೆಯ ಶಕ್ತಿಯನ್ನು ಪಡೆದುಕೊಂಡ ರೀತಿಯಂತೇ ಇತ್ತು.

೧೭

ಪುತ್ರ ಸೌಭಾಗ್ಯ

ಜೀವನ ಹಾಗೂ ಸಮಾಜದಲ್ಲಿನ ಹಂತಗಳ ಸಂಬಂಧವಾಗಿ ಭಗವಾನ್ ರಮಣ ಮಹರ್ಷಿಗಳು ಈ ರೀತಿಯಾಗಿ ಹೇಳಿದ್ದಾರೆ:

"ಗೃಹಸ್ಥಾಶ್ರಮ, ವಾನಪ್ರಸ್ಥಾಶ್ರಮ, ಸಂನ್ಯಾಸಾಶ್ರಮಗಳು ಸಾಮಾನ್ಯ ಅನುಸರಿಸಬೇಕಾದ ಸಾಮಾಜಿಕ ನಿಯಮ. ಆದರೆ, ಆಧ್ಯಾತ್ಮಿಕ ಜೀವನದಲ್ಲಿ ಸಾಕಷ್ಟು ಸಾಧನೆ ಮಾಡಿದ ಹಾಗೂ ಪರಿಪಕ್ವರಾದ ಸಾಧಕರಿಗೆ ಈ ನಿಯಮಗಳು ಅನ್ವಯಿಸುವುದಿಲ್ಲ. ಚಿಕ್ಕವನೇ ಅಥವಾ ದೊಡ್ಡವನೇ ಆಗಲಿ, ಗಂಡು ಅಥವಾ ಹೆಣ್ಣು, ವಿದ್ಯಾವಂತ ಅಥವಾ ಅನಕ್ಷರಸ್ಥನಾಗಲಿ, ಪರಿಪಕ್ವರಾದ ಸಾಧಕರಿಗೆ ಈ ಯಾವುದೇ ನಿಯಮವನ್ನು ಪಾಲಿಸದೇ ನೇರವಾಗಿ ಆ ಗುರಿಯನ್ನು ತಲುಪಬಹುದು. ಸಂನ್ಯಾಸವೆಂದರೆ ಭಿಕ್ಷಾಪಾತ್ರೆಯನ್ನು ಹಿಡಿಯುವುದಾಗಲೀ ಅಥವಾ ತಲೆಯ ಕೂದಲನ್ನು ತೆಗೆಸಿಕೊಳ್ಳುವುದಾಗಲಿ ಅಥವಾ ಕಾವಿ ವಸ್ತ್ರಧರಿಸುವುದಾಗಲೀ ಅಲ್ಲ.

ತಪಸ್ಸಿನ ಮಾರ್ಗವನ್ನನುಸರಿಸುವ ಉದ್ದೇಶವುಳ್ಳ ಸಾಧಕರು ನೇರವಾಗಿ ವಾನಪ್ರಸ್ಥಾಶ್ರಮವನ್ನು ಅನುಸರಿಸಬಹುದು. ತಪಸ್ಸಿಂದ ಪರಿಪಕ್ವರಾದ ಸಾಧಕರಿಗೆ ಸಂನ್ಯಾಸಾಶ್ರಮವು ತಂತಾನೆ ಬರುವುದು. ಈ ಆಶ್ರಮಗಳು ಹೊರಗಿನಿಂದ ಬರುವಂಥದ್ದಲ್ಲ."

ಸತ್-ದರ್ಶನ ಭಾಷ್ಯ ಹಾಗೂ ರಮಣ ಮಹರ್ಷಿಗಳೊಂದಿಗಿನ ಸಂವಾದಗಳು

ಈ ನಿಟ್ಟಿನಲ್ಲಿ, ಗಣಪತಿ ಮುನಿಗಳು ಈ ನಿಯಮಗಳಿಗೆ ಹೊರತಾದವರು. ಅವರು ಯಾವುದೇ ನಿಗದಿತ ವಸ್ತ್ರಗಳನ್ನು ಧರಿಸದ ತಪಸ್ವಿ. ಅವರು ಪಕ್ಕಾ ಬ್ರಾಹ್ಮಣ ಹಾಗೂ ಗೃಹಸ್ಥರು. ಅವರ ತಂದೆಯವರು ಸದಾ ಗಣಪತಿ ಮುನಿಗಳ ತಪಸ್ಸಿನ ಕಾರ್ಯದಲ್ಲಿ ಸಹಕರಿಸುತ್ತಿದ್ದದ್ದರಿಂದ, ಮನೆಯ ಬಂಧಗಳು ಅವರನ್ನು ಎಂದೂ ಅಡ್ಡಿಯಾಗಲಿಲ್ಲ. ಅವರ ಪತ್ನಿ ವಿಶಾಲಾಕ್ಷಿಯೂ ಅವರ ತಪಸ್ಸಿಗೆ ಎಂದೂ ಅಡ್ಡಿಬರಲಿಲ್ಲ. ಆಕೆಯು ಗಂಡನಿಂದ ಮಂತ್ರದೀಕ್ಷೆ ಪಡೆದು ತಾನೂ ತಪಸ್ಸಿನಲ್ಲಿ ಮಗ್ನಳಾಗಿರುತ್ತಿದ್ದಳು. ಗಣಪತಿ ಮುನಿಗಳು ತಪಸ್ಸಿಗಾಗಿ ಬೇರೆ ಕ್ಷೇತ್ರಗಳಿಗೆ ಹೋದಾಗ ತಾನೂ ಸಹ ಮಂತ್ರ ಜಪ ಹಾಗೂ ಧ್ಯಾನಗಳಲ್ಲಿ ಸಂಪೂರ್ಣವಾಗಿ ಮಗ್ನಳಾಗಿರುತ್ತಿದ್ದಳು.

ದಿನಾಂಕ 14-02-1899 ರಂದು ವಿಶಾಲಾಕ್ಷಿಯು ಗಂಡು ಮಗುವಿಗೆ ಜನ್ಮವಿತ್ತಳು. ಆ ಸಮಯದಲ್ಲಿ ಗಣಪತಿ ಮುನಿಗಳು ಭುವನೇಶ್ವರದಲ್ಲಿ ತಪಸ್ಸಿನಲ್ಲಿ ತೊಡಗಿದ್ದರು. ಮಗುವಿನ ಜನನದ ಹಿಂದಿನ ದಿವಸ, ಅಂದರೆ, 13-02-1899 ರ ರಾತ್ರಿ ಗಣಪತಿ ಮುನಿಗಳು ತಮ್ಮ ನಿದ್ರೆಯಲ್ಲಿ ಒಂದು ಹಸುವು ಕರುವಿಗೆ ಜನ್ಮಕೊಡುವುದನ್ನು ಕನಸು ಕಂಡರು. ಜ್ಞಾನಿಯಾದ ಗಣಪತಿ ಮುನಿಗಳಿಗೆ ಇದರ ಹಿಂದಿನ ಅರ್ಥವನ್ನು ಗ್ರಹಿಸಿ ಮಾರನೇ ದಿನ ಅಲ್ಲಿಂದ ಮನೆಯ ಕಡೆಗೆ ಪಯಣಿಸಿದರು. ದಾರಿಯಲ್ಲಿ ಭುವನೇಶ್ವರದ ಹತ್ತಿರದಲ್ಲೇ ಇರುವ ವೈತರಣಿ ನದಿಯ ತೀರದಲ್ಲಿನ ವಿರಜಾಪುರಮ್ ಕ್ಷೇತ್ರಕ್ಕೆ ಭೇಟಿಕೊಟ್ಟು ನಂತರ ಮನೆಯ ಕಡೆಗೆ ಹೊರಟರು. ಗಣಪತಿ ಮುನಿಗಳ ತಂದೆ ಹಾಗೂ ಬಂಧು ಮಿತ್ರರು ಗಣಪತಿ ಮುನಿಗಳ ತಪಸ್ಸು ಫಲ ನೀಡಿದ್ದಕ್ಕೆ ಸಂತಸ ಪಟ್ಟರು.

ಮನೆಗೆ ಮರಳಿ ಬಂದ ನಂತರ ಗಣಪತಿ ಮುನಿಗಳು ಒಂದು ವಾರ ಪೂರ್ತಿ ತನ್ನ ತೀರ್ಥಯಾತ್ರೆ ಹಾಗೂ ತಪಸ್ಸಿನ ಸಮಯದಲ್ಲಿ ನಡೆದ ಘಟನೆಗಳನ್ನು ತಂದೆಯವರಲ್ಲಿ ಹೇಳಿಕೊಂಡು ದುರ್ಗಾ ಮಂದಿರದ ಯೋಗಿಯ ಬಗ್ಗೆ ಕೇಳಿದರು. ನೃಸಿಂಹಶಾಸ್ತ್ರಿಗಳು ತನಗೆ ಕಾಶಿಯಿಂದ ಬಂದ ಪತ್ರವನ್ನು ಗಣಪತಿ ಮುನಿಗಳಿಗೆ ಕೊಡುತ್ತಾ, "ಈ ಪತ್ರದಲ್ಲಿ ನಿನ್ನ ಚಿತ್ರವನ್ನು ಬಿಡಿಸಲಾಗಿದೆ. ಯಾರು ಈ ಕೆಲಸ ಮಾಡಿರುಬಹುದು?" ಎಂದು ಕೇಳಿದರು. ಗಣಪತಿ ಮುನಿಗಳು ಆ ಪತ್ರದಲ್ಲಿರುವುದನ್ನು ಓದಿ ಹಾಗೂ ಪತ್ರವನ್ನು ನೋಡಿ ಆಶ್ಚರ್ಯಪಟ್ಟರು. ಅವರಿಗೆ ತಾನು ಬರೆದ ಪತ್ರವು ಹಳದಿ ಕಾಗದದ ಮೇಲೆ ಎಂಬುದು ಚೆನ್ನಾಗಿ ನೆನಪಿತ್ತು. ಆದರೆ ಈಗ ಅವರ ಕೈಯಲ್ಲಿರುವ ಪತ್ರವು ಬಿಳಿಹಾಳೆಯ ಮೇಲೆ ಬರೆದದ್ದು. ತಾನು ಬರೆದ ಪತ್ರದ ಸಾಲುಗಳನ್ನು ಕೆಳಕ್ಕೆ ದೂಡಿದಂತೆ ಭಾಸವಾಗಿ ಆ ಸ್ಥಳದಲ್ಲಿ ತನ್ನ ಚಿತ್ರವಿರುವುದನ್ನು ಗಮನಿಸಿದರು. ಅಷ್ಟಲ್ಲದೇ ಆ ಪತ್ರದಲ್ಲಿ ಯೋಗಿಯ ಸಂದೇಶವೊಂದಿತ್ತು. ಈ ಪತ್ರವನ್ನು ಯೋಗಿಯೇ ಟಪಾಲಿನ ಡಬ್ಬಿಗೆ ಹಾಕಿದ್ದರಿಂದ ತನ್ನ ಚಿತ್ರವನ್ನೂ ಅವರೇ ಬರೆದಿರಬಹುದೆಂದು ಗಣಪತಿ ಮುನಿಗಳು ಯೋಚಿಸಿದರು.

"ಅಪ್ಪ, ಈ ಯೋಗಿಯು ತನ್ನ ಹೆಸರನ್ನು ಸೋಮಯಾಜುಲು ಸೂರ್ಯನಾರಾಯಣ ಎಂದು ತಿಳಿಸಿದ್ದರು. ಅವರಿಗೆ ನನ್ನ ಕನಸ್ಸಿನಲ್ಲಿ ಬಂದ ಭದ್ರಕನ ಬಗ್ಗೆ ಗೊತ್ತಿರುವುದೆಂದರು. ಅವರು ತಮ್ಮನ್ನು ಸುಕೇತು ಎಂದು ತಿಳಿಸಿದ್ದಲ್ಲದೆ, ನನ್ನ ಪೂರ್ವಜನ್ಮದ ಮಾತಾ ಪಿತೃಗಳೂ ಗೊತ್ತಿರುವುದೆಂದರು. ಈಗ ಈ ಪತ್ರವನ್ನು ನೋಡಿದರೆ ಇವರು ಸಾಮಾನ್ಯ ವ್ಯಕ್ತಿಯಲ್ಲ. ಬದಲಾಗಿ ಇವರು ದೈವಾಂಶ ಸಂಭೂತರೇ ಇರಬೇಕು."

ಸ್ವಲ್ಪ ಯೋಚಿಸಿದ ನಂತರ ನೃಸಿಂಹಶಾಸ್ತ್ರಿಗಳು ಗಣಪತಿ ಮುನಿಗಳ ಮಾತಿಗೆ ಒಪ್ಪಿ, "ನೀನು ಹುಟ್ಟುವುದಕ್ಕೆ ಮುಂಚೆ, ನಿನ್ನ ಅಮ್ಮ ಹಾಗೂ ನಾನು ಅರಸವಲ್ಲಿ ಕ್ಷೇತ್ರಕ್ಕೆ ಹೋಗಿ ಅಲ್ಲಿ ಸೂರ್ಯನಾರಾಯಣ ದೇವನ ದರ್ಶನವನ್ನು ಮಾಡಿದೆವು. ದುರ್ಗಾ ಮಂದಿರದ ಯೋಗಿಯು ಹೇಳಿರುವ ಹೆಸರು (ಸೋಮಯಾಜುಲು ಸೂರ್ಯನಾರಾಯಣ) ಸೂರ್ಯ

ಭಗವಾನ್ ಸೂರ್ಯನಾರಾಯಣನಿಗೆ ಹೋಲುತ್ತದೆ. ಬಹುಷಃ ನಿನ್ನ ಬಳಿಗೆ ಬಂದ ಯೋಗಿಯು ಭಗವಾನ್ ಸೂರ್ಯನಾರಾಯಣನೇ ಇರಬೇಕು." ಗಣಪತಿ ಮುನಿಗಳೂ ಸಹ ತಂದೆಯವರ ಊಹೆಗೆ ಸಮ್ಮತಿಸಿದರು.

ಗಣಪತಿ ಮುನಿಗಳ ಮಗುವಿಗೆ ಮೂರು ತಿಂಗಳು ತುಂಬಿದ ಮೇಲೆ, ಗಣಪತಿ ಮುನಿಗಳು ಸಂಸಾರ ಸಮೇತ ವಿಶಾಲಾಕ್ಷಿಯ ತವರು ಮನೆಗೆ ಮಗನ ಜನನದ ಶುದ್ಧೀಕರಣ ಕ್ರಿಯೆಗಳನ್ನು ಮಾಡಲು ತೆರಳಿದರು. ಗಣಪತಿ ಮುನಿಗಳಿಗೆ ಶಿವನ ವರದಿಂದ ಜನಿಸಿದ ಮಗುವಿಗೆ ಮಹದೇವ ಶಾಸ್ತ್ರಿ ಎಂದು ನಾಮಕರಣ ಮಾಡಿದರು.

೧೮

ರಾಜಾಶ್ರಯ

ಹಿಂದಿನ ಕಾಲದಲ್ಲಿ, ರಾಜನನ್ನು ವಿಷ್ಣುವಿನ ಅಭಿವ್ಯಕ್ತಿಯೆಂದು ಪರಿಗಣಿಸಲಾಗಿತ್ತು. ಅವನ ಕರ್ತವ್ಯವು ಭೂಮಿಯನ್ನು ಹಾಗೂ ಸಂಸ್ಕೃತಿಯನ್ನು ರಕ್ಷಿಸುವುದಾಗಿತ್ತು. ಕವಿಯು ಒಬ್ಬ ಮುನಿ. ಅವನ ಜೀವನ ಹಾಗೂ ಬರವಣಿಗೆಗಳು ದೇಶದ ಸಂಸ್ಕೃತಿಯ ಸ್ವಭಾವವನ್ನು ಪ್ರತಿನಿಧಿಸಬೇಕು. ಹೀಗಾಗಿ ರಾಜ ಮತ್ತು ಕವಿಗಳ ಸ್ನೇಹವು ದೇಶಕ್ಕೆ ಒಳಿತನ್ನು ನೀಡುತ್ತಿತ್ತು. ಭಾರತದ ಪುರಾತನ ಪದ್ಧತಿಯ ಪ್ರಕಾರ ವಿದ್ವಾಂಸರು, ಕವಿಗಳು ಹಾಗಾ ಕಲಾಕಾರರನ್ನು ಪ್ರೋತ್ಸಾಹಿಸುವುದೇ ರಾಜ ಮನೆತನದವರ ಕರ್ತವ್ಯವಾಗಿತ್ತು.

ಶ್ರೀಕಾಕುಲಂ ನಗರದ ಬಳಿ ಮಂಡಸ ಎಂಬ ಒಂದು ಬೃಹತ್ ಜಮೀನಿತ್ತು. ಅದರ ಜಮೀನ್ದಾರನು ಒಳ್ಳೆಯ ವ್ಯಕ್ತಿ ಹಾಗೂ ಅವನಿಗೆ ವಿದ್ವಾಂಸರು, ಕವಿಗಳು, ಮತ್ತು ಕಲಾಕಾರರ ಬಗೆಗೆ ಅಪಾರವಾದ ಗೌರವವಿತ್ತು. 1900 ನೇ ಇಸವಿಯ ಉಗಾದಿ ಹಬ್ಬದ ಸಮಯದಲ್ಲಿ ಜಮೀನ್ದಾರನು ಸುತ್ತ ಮುತ್ತ ಇರುವ ಕವಿಗಳನ್ನು ಸನ್ಮಾನಿಸಲು ಒಂದು ಸಭೆಯನ್ನು ಮಾಡಲು ತೀರ್ಮನಿಸಿ ಎಲ್ಲರಿಗೂ ಆಹ್ವಾನ ಪತ್ರವನ್ನು ಕಳುಹಿಸಿಕೊಟ್ಟನು. ಗಣಪತಿ ಮುನಿಗಳಿಗೂ ಆಹ್ವಾನವನ್ನು ನೀಡಲಾಗಿತ್ತು. ಸಭಾಂಗಣವನ್ನು ಭವ್ಯವಾಗಿ ಅಲಂಕರಿಸಿ ವಾತಾವರಣವನ್ನು ಅದ್ಭುತ ವಸಂತೋತ್ಸವವನ್ನಾಗಿ ಮಾಡಲಾಗಿತ್ತು. ಗಣಪತಿ ಮುನಿಗಳಿಗೆ ತೆಲುಗು ಹಾಗೂ ಸಂಸ್ಕೃತ ಭಾಷೆಯಲ್ಲಿ ಪಾಂಡಿತ್ಯವಿತ್ತು. ಸಭೆಯಲ್ಲಿ ತೆಲುಗು ಹಾಗೂ ಸಂಸ್ಕೃತ ಭಾಷೆಗಳ ಶ್ರೀಮಂತಿಕೆಯು ಸಂಪೂರ್ಣವಾಗಿ ವಿಜೃಂಭಿಸಿತು. ವಿದ್ವಾಂಸರು ತಮ್ಮ ತಮ್ಮ ಕೃತಿಗಳನ್ನು ಪ್ರಸ್ತುತ ಪಡಿಸಿದ್ದೇ ಅಲ್ಲದೆ ತಾವು ಕಲಿತ ಬೇರೆಯವರ ಕೃತಿಗಳನ್ನೂ ಪ್ರಸ್ತುತ ಪಡಿಸಿದರು. ಕವಿತೆ, ಕಾವ್ಯ, ಕವನಗಳ ರಸದೌತಣವನ್ನು ಮಾಡಿದ ಪ್ರೇಕ್ಷಕರು ಆನಂದಿತರಾದರು.

ಗಣಪತಿ ಮುನಿಗಳು ಸಭೆಯಲ್ಲಿ ಅಷ್ಟಾವಧಾನವನ್ನು ಯಶಸ್ವಿಯಾಗಿ ಪ್ರದರ್ಶಿಸಿ ಪ್ರೇಕ್ಷಕರ ಮನಸ್ಸನ್ನು ಸೂರೆಗೊಂಡರು. ಅಷ್ಟಾವಧಾನವೆಂದರೆ ಎಂಟು ವಿಷಯಗಳ ಬಗ್ಗೆ ಪ್ರೇಕ್ಷಕರು ಏಕಕಾಲದಲ್ಲಿ ಕೇಳುವ ಪ್ರಶ್ನೆಗಳಿಗೆ ಕ್ಷಣಾರ್ಧದಲ್ಲಿ ಉತ್ತರಿಸುವ ಕಲೆ. ಮಂಡಸದ ಜಮೀನ್ದಾರನು ಗಣಪತಿ ಮುನಿಗಳ ವಿದ್ವತ್ತಿಗೆ ಸಂಪೂರ್ಣವಾಗಿ ಮನಸೋತು ಗಣಪತಿ ಮುನಿಗಳನ್ನು ತನ್ನ ಆಸ್ಥಾನದಲ್ಲೇ ಇರಬೇಕೆಂದು ವಿನಂತಿಸಿಕೊಂಡನು.

ಜಮೀನ್ದಾರನ ಮಗನು ತನಗೆ ಶಿವಪಂಚಾಕ್ಷರಿ ಮಂತ್ರವನ್ನು ಬೋಧಿಸಬೇಕೆಂದು ಗಣಪತಿ ಮುನಿಗಳನ್ನು ಕೇಳಿಕೊಂಡನು. ಗಣಪತಿ ಮುನಿಗಳು ಮೊದಲು ರಾಜ್ಯದ ಮುಖ್ಯ ಪುರೋಹಿತರ ಅನುಮತಿ ಪಡೆಯಬೇಕೆಂದು ತಿಳಿಸಿದರು. ಮುಖ್ಯ ಪುರೋಹಿತನು ವೈಷ್ಣವ ಪಂಥದ ಅನುಯಾಯಿ, ಹೀಗಾಗಿ ಅವನು ಅನುಮತಿಯನ್ನು ನಿರಾಕರಿಸಿದನು. ಒಂದು ದಿನ ರಾಜಸಭೆಯಲ್ಲಿ ಮುಖ್ಯ ಪುರೋಹಿತನು ಗಣಪತಿ ಮುನಿಗಳೊಂದಿಗೆ ವಾದಕ್ಕೆ ಇಳಿದನು. ವಾದದಲ್ಲಿ ಮುಖ್ಯ ಪುರೋಹಿತನು ಸಂಪೂರ್ಣವಾಗಿ ಸೋಲುವ ಸ್ಥಿತಿಗೆ ಬಂದಾಗ ಅವನು ಗಣಪತಿ ಮುನಿಗಳನ್ನು ಮೂಕನನ್ನಾಗಿ ಮಾಡಲು ಒಂದು ಮಂತ್ರವನ್ನು ಪಠಿಸಿದನು. ಆದರೆ ಅದು ಗಣಪತಿ ಮುನಿಗಳ ಮೇಲೆ ಏನೂ ಪರಿಣಾಮ ಬೀರಲಿಲ್ಲ. ಆದರೆ ಗಣಪತಿ ಮುನಿಗಳಿಗೆ ಪುರೋಹಿತನ ಮೇಲೆ ಅಪಾರ ಕ್ರೋಧವುಂಟಾಯಿತು, ಏಕೆಂದರೆ, ವಾಗ್ವಾದವು ನಡೆಯುವುದು ಕೇವಲ ಪರಸ್ಪರರ ಅನುಮಾನಗಳನ್ನು ಕುರಿತಾಗೇ ಹೊರತು ಮನಸ್ಥಿತಿಯನ್ನು ಉದ್ದೀಪನಗೊಳಿಸುವುದಲ್ಲ. ಹಾಗೆ ಮಾಡಿದಲ್ಲಿ ಅದು ಅಕಾರ್ಯವಾಗುತ್ತದೆಂದು ಮುಖ್ಯ ಪುರೋಹಿತನನ್ನು ಅಂಥ ತಂತ್ರವನ್ನು ಉಪಯೋಗಿಸುವುದು ಅವರ ಘನತೆಗೆ ತಕ್ಕದ್ದಲ್ಲ ಎಂದು ನೇರವಾಗಿ ಹಾಗೂ ಖಡಾಖಂಡಿತವಾಗಿ ಹೇಳಿ ಪುರೋಹಿತರನ್ನು ಇಂತಹ ಮೋಸಕೃತ್ಯಕ್ಕೆ ಕೈಹಾಕಿದ್ದಕ್ಕೆ ಛೀಮಾರಿಹಾಕಿದನು. ಸಭಾಸದರೆಲ್ಲರೂ ಪುರೋಹಿತನು ಮಾಡಿದ್ದ ಈ ಕೃತ್ಯವನ್ನರಿತು ದಂಗಾದರು. ಜಮೀನ್ದಾರನು ಮಧ್ಯೆ ಪ್ರವೇಶಿಸಿ ವಾತಾವರಣವನ್ನು ತಿಳಿಗೊಳಿಸಿದನು. ನಂತರ ಪುರೋಹಿತನು ಕ್ಷಮೆಯಾಚಿಸಿದನು.

ಒಂದು ದಿನ ಒಬ್ಬ ಯೋಗಿಯು ಮಂಡಸ ಪ್ರಾಂತ್ಯಕ್ಕೆ ಬಂದನು. ಅವನು ಧ್ಯಾನವನ್ನು ಪ್ರಾರಂಭಿಸುತ್ತಿದ್ದಂತೆ ಅವನು ಭೂಮಿಯಿಂದ ನಾಲ್ಕು ಅಡಿ ಮೇಲೆ ತೇಲಾಡುವನೆಂಬ ವದಂತಿಯು ಊರತುಂಬ ಹರಡಿತು. ಅರ್ಧ ಕತ್ತಲಿನ ಅಥವಾ ಸಂಪೂರ್ಣ ಕತ್ತಲಿನ ಕೋಣೆಯಲ್ಲಿ ಕಿಟಕಿಯ ಮೂಲಕ ತನ್ನ ತೇಲಾಡುತ್ತಿರುವ ಸ್ಥಿತಿಯನ್ನು ನೋಡಲು ಅನುಮತಿಯನ್ನು ನೀಡುತ್ತಿದ್ದನು. ಯಾರನ್ನೂ ಸಹ ಕೋಣೆಯೊಳಗೆ ಪ್ರವೇಶಿಸಲು ಬಿಡುತ್ತಿರಲಿಲ್ಲ. ಜನಗಳು ಕೇವಲ ಕಿಟಕಿಯ ಮೂಲಕ ಮಾತ್ರ ನೋಡಬಹುದಿತ್ತು. ಯೋಗಿಯ ಇಬ್ಬರು ಶಿಷ್ಯರು ಕೋಣೆಯಿಂದ ಹೊರಗಿದ್ದು ಯೋಗಿಯ ಪವಾಡಗಳ ಬಗ್ಗೆ ಜನರಿಗೆ ತಿಳಿಸುತ್ತಿದ್ದರು. ಜನಗಳು ಗುಂಪು ಗುಂಪಾಗಿ ಬಂದು ಈ ಪವಾಡವನ್ನು ವೀಕ್ಷಿಸಿ ಹಣ ಹಾಗೂ ಇತರೇ ಪದಾರ್ಥಗಳನ್ನು ಕಾಣಿಕೆಯಾಗಿ ನೀಡಿ ಹೋಗುತ್ತಿದ್ದರು.

ಮಂಡಸದ ಜಮೀನ್ದಾರನಿಗೆ ಕುತೂಹಲವುಂಟಾಗಿ ಒಂದು ದಿನ ಗಣಪತಿ ಮುನಿಗಳೊಂದಿಗೆ ಆ ಯೋಗಿಯನ್ನು ನೋಡಲು ಹೋದನು. ಅವರು ಯೋಗಿಯ ದರ್ಶನವನ್ನು ಕಿಟಕಿಯ ಮೂಲಕ ಮಾಡಿ ಅವನನ್ನು ಭೇಟಿಯಾಗಲು ಅಪೇಕ್ಷಿಸಿದರು. ಆದರೆ ಯೋಗಿಯ ಭಕ್ತರು ಅದಕ್ಕೆ ಒಪ್ಪಲಿಲ್ಲ. ಯೋಗಿಯು ಯೋಗಾಭ್ಯಾಸದಲ್ಲಿರುವಾಗ ಯಾರನ್ನೂ ಭೇಟಿಯಾಗುವುದಿಲ್ಲವೆಂದು ತಿಳಿಸಿದರು. ಕೆಲವು ವೇಳೆ ತಪಸ್ಸಿನಲ್ಲಿರುವವರು ಬೇರೆ ಯಾರೂ

ತಮ್ಮನ್ನು ಭೇಟಿಯಾಗಲು ಇಷ್ಟಪಡುವುದಿಲ್ಲ. ಆದರೆ ಕೇವಲ ಈ ಕಾರಣದಿಂದಾಗಿ ಮಾತ್ರ ತಮ್ಮ ಇರವನ್ನು ಗುಟ್ಟಾಗಿಡುವುದು ಸರಿಯಲ್ಲ. ಗಣಪತಿ ಮುನಿಗಳಿಗೆ ಈ ವಿಧದ ಗುಟ್ಟಿನ ವಿಷಯವು ತಿಳಿದಾಗ ಅವರಿಗೆ ಇದರಲ್ಲಿ ಏನೋ ರಹಸ್ಯ ಅಡಗಿದೆ ಎಂಬ ಅನುಮಾನ ಉಂಟಾಯಿತು. ಗಣಪತಿ ಮುನಿಗಳು ಜಮೀನ್ದಾರನಿಗೆ ಬಾಗಿಲನ್ನು ತೆರೆಸಲು ಕೋರಿದರು. ಯೋಗಿಯ ಭಕ್ತರು ಇದಕ್ಕೆ ಒಪ್ಪಲಿಲ್ಲ ಹಾಗೂ ಜಮೀನ್ದಾರನೂ ಸಹ ಸ್ವಲ್ಪ ಹಿಂದೇಟು ಹಾಕಿದನು. ಆದರೆ ಗಣಪತಿ ಮುನಿಗಳ ಒತ್ತಡದಿಂದಾಗಿ ಜಮೀನ್ದಾರನು ಬಾಗಿಲನ್ನು ಒಡೆಸಬೇಕಾಯಿತು. ಒಳಗೆ ಎಲ್ಲರಿಗೂ ಆಶ್ಚರ್ಯವಾಗುವಂತೆ ಕಪ್ಪು ಬಣ್ಣದಿಂದ ಬಳಿದಿದ್ದ ಒಂದು ದೊಡ್ಡ ತಕ್ಕಡಿ ಇತ್ತು. ಅದು ಹೊರಗಡೆಯಿಂದ ಕಾಣುತ್ತಿರಲಿಲ್ಲ. ಏಕೆಂದರೆ ಕೋಣೆಯೊಳಗೆ ಕಗ್ಗತ್ತಲಿತ್ತು. ಅದರ ಒಂದೆಡೆ ಯೋಗಿಯು ಕುಳಿತಿದ್ದನು ಹಾಗೂ ಮತ್ತೊಂದು ಭಾಗದಲ್ಲಿ ಯೋಗಿಯ ತೂಕಕ್ಕಿಂತ ಹೆಚ್ಚಿನ ತೂಕವನ್ನು ಇಡಲಾಗಿತ್ತು. ಹೀಗಾಗಿ ಯೋಗಿಯು ಒಂದು ಭಾಗದ ತಕ್ಕಡಿಯಲ್ಲಿ ನಾಲ್ಕು ಅಡಿ ಎತ್ತರದಲ್ಲಿ ಕಿಟಕಿಯಿಂದ ಕಾಣುವಂತೆ ಕುಳಿತಿದ್ದನು.

ಈ ಮೋಸದಿಂದ ಜಮೀನ್ದಾರನಿಗೆ ಕೋಪ ಬಂದಿತು. ಆದರೆ ಗಣಪತಿ ಮುನಿಗಳು ಅವನನ್ನು ಸಮಾಧಾನ ಪಡಿಸಿ ಯೋಗಿಯು ಕೇವಲ ಹಣ ಸಂಪಾದನೆಗಾಗಿ ಈ ರೀತಿ ಮಾಡಿರುವನೆಂದು ವಿವರಿಸಿ ಅವನನ್ನು ಕ್ಷಮಿಸುವಂತೆ ಕೇಳಿಕೊಂಡರು ಹಾಗೂ ಜಮೀನ್ದಾರನನ್ನು ಆ ಯೋಗಿಗೆ ಸ್ವಲ್ಪ ಹಣವನ್ನು ನೀಡುವಂತೆ ವಿನಂತಿಸಿಕೊಂಡರು. ತಪ್ಪು ಮಾಡುವವರನ್ನು ಈ ರೀತಿಯಿಂದ ನೋಡುವುದರಿಂದಾಗಿ ಗಣಪತಿ ಮುನಿಗಳು ಮತ್ತಷ್ಟು ಜನಾನುರಾಗಿಯಾಗಿ ಜಮೀನ್ದಾರನ ದೃಷ್ಟಿಯಲ್ಲಿ ಹೆಚ್ಚಿನ ಗೌರವವು ಉಂಟಾಯಿತು.

ಗಣಪತಿ ಮುನಿಗಳಿಗೆ ನವದ್ವೀಪಕ್ಕೆ ಹೊರಡುವ ಸಮಯ ಬಂದದ್ದರಿಂದ ಜಮೀನ್ದಾರನ ಅನುಮತಿ ಪಡೆದು ಇಬ್ಬರು ಸಹಪ್ರಯಾಣಿಕರೊಂದಿಗೆ ಮಂಡಸದಿಂದ ನವದ್ವೀಪದೆಡೆಗೆ ಪಯಣಿಸಿದರು.

೧೯

ಸದಾಚಾರ ಬೋಧಿನಿ

ಸತ್ಯಂ ಸ್ವರ್ಗಸ್ಯ ಸೋಪಾನಂ ಸತ್ಯಂ ಪುಣ್ಯಂ ಪರಂ ಮತಮ್
ಸತ್ಯೇ ರಮನ್ತೇ ಧೀಮಂತಸ್ತಸ್ಮಾತ್ಸತ್ಯಂ ವಚೋ ವದೇತ್ ।

"ಸತ್ಯವು ಸ್ವರ್ಗಕ್ಕೆ ಸೋಪಾನ. ಸತ್ಯವು ಮಹತ್ತರವಾದ ಸದ್ಗುಣ. ಜ್ಞಾನಿಗಳು ಸದಾ ಸತ್ಯವನ್ನೇ ಎತ್ತಿಹಿಡಿಯುವರು. ಯಾರೇ ಆದರೂ ಸದಾ ಸತ್ಯವನ್ನೇ ನುಡಿಯಬೇಕು."

ನ ಕಿಂಚಿದವಮನ್ಯೇತ್ ಮನಸಾ ದೇಹಧಾರಿಣಂ
ದೇಹೇ ಸರ್ವಸ್ಯ ಜೀವಾಖ್ಯೋ ಲೋಕನಾಥೋ ಹ್ಯವಸ್ಥಿತಃ ।

"ಯಾರೂ ಅತಿ ಸಣ್ಣ ಪ್ರಾಣಿಯನ್ನೂ ಸಹ ಕೀಳಾಗಿ ಕಾಣಬಾರದು. ಏಕೆಂದರೆ ಭಗವಂತನು ಎಲ್ಲರಲ್ಲೂ ನೆಲೆಸಿರುವನು."

ಆಚಾರಹೀನಃ ಪುರುಷಸ್ಸಂಪದಾ ಪರಿಹೀಯತೆ
ಆಚಾರ ಏವ ಪಾಂಡಿತ್ಯಂ ನ ಶಾಸ್ತ್ರೇಷು ಪ್ರವೀಣತಾ ।

"ಯಾರು ನಿಯಮಗಳನ್ನು ಪಾಲಿಸುವುದಿಲ್ಲವೋ ಅವನು ಎಲ್ಲ ಅಭ್ಯುದಯಗಳಿಂದ ವಂಚಿತನಾಗುವನು. ಏಕೆಂದರೆ ಆಚಾರವೇ ಬುದ್ಧಿವಂತರ ಲಕ್ಷಣ, ಧರ್ಮಗ್ರಂಥಗಳ ಹಾಗೂ ವಿಜ್ಞಾನದ ಪಾಂಡಿತ್ಯವಲ್ಲ."

ಯಾನ್ಯಾಚರಂತಿ ಕರ್ಮಾಣಿ ಸನ್ತೋ ಲೋಕಹಿತಂಕರಾಃ
ಭಜಂತೇ ತಾನಿ ಸರ್ವಾಣ್ಯಪ್ಯಾಚಾರಪದವಾಚ್ಯತಾಮ್ ।
ಸಂತರ ಪವಿತ್ರವಾದ ನಡೆ ನುಡಿಗಳನ್ನೇ ಆಚಾರ ಎನ್ನುವರು.

– ಸದಾಚಾರ ಬೋಧಿನಿ

ಭಾರತದ ಪೂರ್ವಭಾಗವನ್ನು ವಂಗದೇಶ ಎಂದು ಕರೆಯುತ್ತಿದ್ದರು. ಈಗಿನ ಬಂಗಾಳ ಪ್ರಾಂತ್ಯವು ಅದರ ಒಂದು ಭಾಗ. ಈ ಪವಿತ್ರ ಭೂಮಿಯು ಇತ್ತೀಚಿನ ಶತಮಾನದಲ್ಲಿ ಶ್ರೀ ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ರವೀಂದ್ರನಾಥ ಟಾಗೋರ್ ಹಾಗೂ ಅನೇಕ ಮಂದಿ ನಾಯಕರು, ಸಂತರುಗಳು, ಸಮಾಜಸುಧಾರಕರಿಗೆ ಜನ್ಮ ನೀಡಿದೆ. ಇದು ಜ್ಞಾನಭೂಮಿ. ಹಾಗೂ ಇದು ಕಾಳೀ ಮಾತೆಯ ಭೂಮಿ. ಎಲ್ಲ ಪ್ರಜೆಗಳೂ ಈ

ಮಾತೆಯ ಭಕ್ತರು. ಮಹಾನ್ ನವರಾತ್ರಿ ಹಬ್ಬಗಳನ್ನು ಅತ್ಯಂತ ಶ್ರದ್ಧಾ ಭಕ್ತಿಗಳಿಂದ ಅದ್ದೂರಿಯಾಗಿ ಆಚರಿಸುವರು.

ಪಶ್ಚಿಮ ಬಂಗಾಳದ ರಾಜಧಾನಿ ಕೊಲ್ಕತ್ತದಲ್ಲಿ ಎರಡು ಸುಪ್ರಸಿದ್ಧ ಕಾಳಿ ಮಂದಿರಗಳಿವೆ. ಗಣಪತಿ ಮುನಿಗಳು ನವದ್ವೀಪಕ್ಕೆ ಹೋಗುವ ಮೊದಲು ಕೊಲ್ಕತ್ತ ನಗರಕ್ಕೆ ಭೇಟಿಕೊಟ್ಟರು. ಈ ನಗರವು ದಶ ಮಹಾವಿದ್ಯೆಯ ಪ್ರಮುಖ ಕೇಂದ್ರ.

ಮಹಾಮಾತೆ ಕಾಳಿಯನ್ನು ಗಣಪತಿ ಮುನಿಗಳು ಈ ಆಶು-ಶ್ಲೋಕದ ಮೂಲಕ ಪ್ರಾರ್ಥಿಸಿದರು:

ಸಂಗೀಯಮಾನಂ ಸ್ಥಲ ಮಾರ್ಯಬೃಂದೈಃ
ಬೃಂದಾರಕಾಣಾಂ ಸರಿತಸ್ತಟೇऽಸ್ತಿ
ಯಃ ಕಾಲಿಕಾಂ ಪಶ್ಯತಿ ಕಾಲಕೇಶೀಂ
ತತ್ರಾಸ್ಯ ಕಾಲಾದಪಿ ನೈವ ಭೀತಿಃ ॥

"ಪವಿತ್ರ ಗಂಗಾನದಿಯ ದಡದಲ್ಲಿರುವ ಈ ಮಹಿಮಾನೆತ ಸ್ಥಳವನ್ನು ಹಲವಾರು ಶ್ರೇಷ್ಠ ವ್ಯಕ್ತಿಗಳು ಬಹುವಾಗಿ ಹೊಗಳಿರುವರು. ಯಾರು ಕಡುಗಪ್ಪು ಕೂದಲನ್ನುಳ್ಳ ಕಾಳಿಯನ್ನು ನೋಡುವರೋ ಅವರು ಯಮನಿಗೂ ಹೆದರಬೇಕಿಲ್ಲ."

ಎರಡು ರೂಪಗಳ ಕಾಳಿಯು ಭಿನ್ನವಾದದ್ದು. ಕಾಳಿಘಾಟಿನಲ್ಲಿ ಪೂಜಿಸುವ ಕಾಳಿಯು ಘೋರರೂಪವುಳ್ಳವಳು ಹಾಗೂ ಪ್ರಾಣಿ ಬಲಿಯನ್ನು ಅಪೇಕ್ಷಿಸುವವಳು. ದಕ್ಷಿಣೇಶ್ವರದಲ್ಲಿರುವ ಕಾಳಿಯು ಶ್ರೀರಾಮಕೃಷ್ಣ ಪರಮಹಂಸರ ನೈವೇದ್ಯವನ್ನು ಸ್ವೀಕರಿಸಿ ಕರುಣಾಮಯಿ ದೇವತೆಯಾಗಿ ಭಕ್ತರ ಮಾನಸಿಕ ಸಂಕಷ್ಟಗಳನ್ನು ನಿವಾರಿಸುವವಳಾಗಿದ್ದಳು. ಅವಳ ರೂಪವು ಸುಂದರ ಹಾಗೂ ಮನೋಹರವಾಗಿ ಮುಗುಳು ನಗುತ್ತಿರುವ ರೂಪ. ಕಾಳಿಯ ಎರಡು ರೂಪಗಳೂ ತನ್ನ ಭಕ್ತರಿಗೆ ಕರುಣಾಮಯಿಯಾಗಿ ಅವರಿಗೆ ವರವನ್ನು ಕರುಣಿಸುವುದು.

ಗಣಪತಿ ಮುನಿಗಳು ಮೊದಲಿಗೆ ಕಾಳಿಘಾಟಿನಲ್ಲಿರುವ ಕಾಳಿ ಮಂದಿರಕ್ಕೆ ತೆರಳಿ ಕಾಳಿದಾಸನ ನಾಲಗೆಯ ಮೇಲೆ ಬೀಜಾಕ್ಷರಿ ಮಂತ್ರವನ್ನು ಬರೆದು ಅವನನ್ನು ವಿಶ್ವದ ಮಹಾನ್ ಕವಿಯನ್ನಾಗಿ ಮಾಡಿದ ಕಾಳಿ ಮಾತೆಯ ಮುಂದೆ ನಿಂತು ಕಣ್ಣು ಮುಚ್ಚಿ ಪ್ರಾರ್ಥಿಸಿದರು. ಕಣ್ತೆರೆದಾಗ ಅವರ ಕಣ್ಣು ಮುಂದೆ ಕಂಡದ್ದು ಎಮ್ಮೆಯೊಂದಕ್ಕೆ ಕೆಂಪು ಹೂವಿನ ಹಾರವನ್ನು ಹಾಕಿ ಅದನ್ನು ಬಲಿ ಪೀಠದಲ್ಲಿ ಕಟ್ಟಿರುವ ದೃಶ್ಯ. ಕೆಲವು ಜನಗಳು ಮಂತ್ರವನ್ನು ಪಠಿಸುತ್ತಾ ಬಲಿಕೊಡುವುದಕ್ಕೆ ಮುಂಚಿತವಾಗಿನ ಕೆಲವು ಕಾರ್ಯಗಳನ್ನು ಮಾಡುತ್ತಿದ್ದರು. ಆ ಪ್ರಾಣಿಯು ದೈನ್ಯವಾಗಿ ತನ್ನನ್ನು ರಕ್ಷಿಸುವಂತೆ ಬೇಡುತ್ತಿರುವಂತೆ ಗಣಪತಿ ಮುನಿಗಳಿಗೆ ಭಾಸವಾಗಿ ಜೋರಾಗಿ

"ಓ, ವಿಶ್ವಮಾತೆ! ಇದೆಂತಹ ಕ್ರೌರ್ಯ? ಎಲ್ಲ ಜೀವಿಗಳಿಗೂ ನೀನೇ ಕರುಣಾಮಯಿಯಾದ ಮಾತೆಯಲ್ಲವೆ? ಅಮಾಯಕ ಪ್ರಾಣಿಗಳ ರಕ್ತವನ್ನು ಕೇಳುವುದು ನಿನಗುಚಿತವೇ? ಈ ರೀತಿಯ ಪ್ರಾಣಿಗಳ ಮೇಲಿನ ಕ್ರೌರ್ಯವನ್ನು ನೀನು ಒಪ್ಪಿಕೊಳ್ಳುವೆಯ? ಈ ರೀತಿಯ ಮೂಢನಂಬಿಕೆಯಿಂದ ಕೂಡಿದ ಕಾರ್ಯದಲ್ಲಿ ತೊಡಗಿರುವ ಈ ಮೂರ್ಖರಿಗೆ ಸರಿಯಾದ ಜ್ಞಾನವನ್ನು ನೀಡು."

ಗಣಪತಿ ಮುನಿಗಳು ಈ ರೀತಿಯಾಗಿ ಕೂಗುತ್ತಾ ಬಲಿಪೀಠದಲ್ಲಿ ಕಾರ್ಯವನ್ನು ನಡೆಸುತ್ತಿರುವ ಜನಗಳ ಬಳಿಗೆ ಧಾವಿಸಿ ಬಂದು, "ದಯವಿಟ್ಟು ಈ ಕಾರ್ಯವನ್ನು ನಿಲ್ಲಿಸಿ. ವಿಶ್ವದ ಮಾತೆಯನ್ನು ತೃಪ್ತಿಪಡಿಸಲು ಈ ರೀತಿಯ ಪ್ರಾಣಿಹತ್ಯೆ ಮಾಡುವಿರಾ? ಪ್ರಾಣಿಹಿಂಸೆ ಮಹಾಪಾಪವಲ್ಲವೇ? ದಯವಿಟ್ಟು ಈ ಬಲಿಯನ್ನು ನಿಲ್ಲಿಸಿ!" ಎಂದರು. ಮಂತ್ರವನ್ನು ಪಠಿಸುತ್ತಿದ್ದ ತಾಂತ್ರಿಕನು ನಿಲ್ಲಿಸಿ ಗಣಪತಿ ಮುನಿಗಳೆಡೆಗೆ ಕೋಪದಿಂದ ನೋಡಿದ. ಎಲ್ಲರೂ ಗಣಪತಿ ಮುನಿಗಳನ್ನು ಆತಂಕದಿಂದ ನೋಡತೊಡಗಿದರು. ಗಣಪತಿ ಮುನಿಗಳ ಈ ಕಾರ್ಯದಲ್ಲಿ ಮಧ್ಯಪ್ರವೇಶಿಸಿದ್ದರ ಪರಿಣಾಮದ ಬಗ್ಗೆ ಭಯಭೀತರಾಗಿದ್ದರು. ಗಣಪತಿ ಮುನಿಗಳು ಮುಂದುವರೆದು ಬಲಿಪೀಠದ ಮೇಲೇರಿ ಕೈಮುಗಿಯುತ್ತಾ ತಾಂತ್ರಿಕನಿಗೆ ನಿಮ್ಮ ಇಚ್ಛೆಯು ಈಡೇರುವುದಾದರೆ ನನ್ನನ್ನೇ ಬಲಿಕೊಡಿ ಎಂದು ಪ್ರಾರ್ಥಿಸಿದರು. ಗಣಪತಿ ಮುನಿಗಳ ಪರಿಣಾಮಕಾರಿ ಮಧ್ಯಸ್ಥಿಕೆಯಿಂದಾಗಿ ಬಲಿಕೊಡುವ ಕಾರ್ಯವು ಅಂದಿನ ಮಟ್ಟಿಗೆ ನಿಂತಿತು. ನೆರೆದಿದ್ದ ಕೆಲವರು ಗಣಪತಿ ಮುನಿಗಳನ್ನು ಹೊಗಳಿದರೆ ಮತ್ತೆ ಕೆಲವರು ಅವರನ್ನು ದೂಷಿಸಿದರು.

ಈ ಕಾರ್ಯವು ಗಣಪತಿ ಮುನಿಗಳ ಮೊಟ್ಟ ಮೊದಲನೆಯ ಸಮಾಜಸುಧಾರಣೆಯ ಕೆಲಸವಾಗಿತ್ತು. ಅಲ್ಲಿಯವರೆಗೂ ಅವರಿಗೆ ತಪಸ್ಸನ್ನಾಚರಿಸುವುದರಲ್ಲಿ ಮಾತ್ರ ಆಸಕ್ತಿಯಿತ್ತು. ಧಾರ್ಮಿಕ ಗ್ರಂಥಗಳಲ್ಲಿ ವೇದ ಕ್ರಿಯೆಗಳ ಪ್ರಕಾರ ದೇವರಿಗೆ ಕೇವಲ ಕಾಳುಗಳನ್ನು ಮಾತ್ರ ನೈವೇದ್ಯವನ್ನಾಗಿ ಅರ್ಪಿಸಲು ತಿಳಿಸಲಾಗಿದೆ ಹಾಗೂ ಎಲ್ಲೂ ಪ್ರಾಣಿಬಲಿಯ ಬಗ್ಗೆ ವಿವರಗಳಿಲ್ಲ. ಯಾವುದು ಎಲ್ಲರಿಗೂ ಒಳಿತಾಗುವುದೋ ಅದನ್ನು ಮಾತ್ರ ದೇವರಿಗೆ ಅರ್ಪಿಸಲು ತಿಳಿಸಲಾಗಿದೆ ಹಾಗೂ ಯಾವುದೇ ಹಾನಿಕಾರಕವಾದ ಪ್ರಾಣಿಬಲಿ ಇತ್ಯಾದಿಗಳನ್ನು ಅರ್ಪಿಸಕೂಡದೆಂದು ವಿವರಿಸಲಾಗಿದೆ. ಈ ವಿಷಯವನ್ನು ಅಂದು ಗಣಪತಿ ಮುನಿಗಳು ಎಲ್ಲರಿಗೂ ಅರ್ಥವಾಗುವ ಹಾಗೆ ವಾದಮಾಡಿದರು.

ಗಣಪತಿ ಮುನಿಗಳ ಕ್ರಾಂತಿಕಾರಿ ಮಾರ್ಗವು ಅವರ ಹದಿನಾಲ್ಕನೇ ವಯಸ್ಸಿನಲ್ಲೇ ಪ್ರಕಟವಾಗಿತ್ತು. ಆ ಸಮಯದಲ್ಲಿ ಗಣಪತಿ ಮುನಿಗಳು 102 ಶ್ಲೋಕಗಳಿಂದ ಕೂಡಿದ "ಸದಾಚಾರ ಬೋಧಿನಿ" ಎಂಬ ಕೃತಿಯನ್ನು ರಚಿಸಿ ಅದನ್ನು ಐದು ಭಾಗಗಳನ್ನಾಗಿ ವಿಂಗಡಿಸಿ ಪುರಾತನ ಕಡುಸಾಂಪ್ರದಾಯಿಕ ಪದ್ಧತಿಗಳಿಗೆ ಆ ಕೃತಿಯ ಮೂಲಕ ಸವಾಲು

ಹಾಕಿದ್ದರು. ನಮ್ಮ ಪದ್ಧತಿಗಳನ್ನು ಮೂರು ಭಾಗವಾಗಿ: ಕರ್ಮಾಚಾರ, ಜ್ಞಾನಾಚಾರ ಮತ್ತು ಮನ ಆಚಾರವನ್ನಾಗಿ ವಿಂಗಡಿಸಿದ್ದರು.

ಕರ್ಮಾಚಾರವು ವಿವಾಹ, ಗೃಹಸ್ಥ ಧರ್ಮ, ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳುವ ವಿಧಾನ ಮತ್ತು ಜೀವನವನ್ನು ಪೂಜೆ, ಜಪ ಹಾಗೂ ಧ್ಯಾನದ ಮೂಲಕ ನಡೆಸಿಕೊಂಡು ಹೋಗುವುದು.

ಜ್ಞಾನಾಚಾರವು ಹೇಗೆ ಸಮಸ್ತವನ್ನೂ ಭಗವಂತನ ಸೃಷ್ಟಿಯೆಂದು ಪ್ರೀತಿಸುವುದು, ಮಾತಿನಲ್ಲಿ ಮೃದುತ್ವ, ಜ್ಞಾನಿಗಳನ್ನು ಸೇವಿಸುವುದು, ಮಹಾತ್ಮರ ಜೀವನ ಚರಿತ್ರೆಯನ್ನು ಕೇಳುವುದು ಹಾಗೂ ಸತ್ಯಾನ್ವೇಷಣೆಯ ಮಾರ್ಗವನ್ನನುಸರಿಸುವುದು.

ಮಾನಸಿಕ ಆಚಾರವು ಎಲ್ಲರ ಅಭ್ಯುದಯವನ್ನು ಹೇಗೆ ಉಂಟುಮಾಡುವುದು, ಎಲ್ಲ ಸ್ತ್ರೀಯರನ್ನು ಹೇಗೆ ಗೌರವಿಸುವುದು, ಇಷ್ಟಾನಿಷ್ಟಗಳಿಂದ ಕಲುಷಿತವಾಗದಂತೆ ಹೇಗೆ ಮನಸ್ಸನ್ನು ಹತೋಟಿಯಲ್ಲಿಟ್ಟುಕೊಳ್ಳುವುದರ ಬಗ್ಗೆ ವಿವರಿಸುವುದು.

"ನಾವು ಈ ಎಲ್ಲ ವಿಷಯಗಳನ್ನೂ ಧಾರ್ಮಿಕ ಗ್ರಂಥಗಳಿಂದ ಸಾರವಾಗಿ ಸಂಗ್ರಹಿಸಿರುವೆವು" ಎಂದು ಗಣಪತಿ ಮುನಿಗಳು ತಿಳಿಸಿದರು. ಈಗಲೂ ಈ ಪುಸ್ತಕವನ್ನು ವಿದ್ವಾಂಸರು ಬಹಳವಾಗಿ ಪ್ರಶಂಶಿಸುತ್ತಾರೆ.

ಕೊಲ್ಕತ್ತದಲ್ಲಿದ್ದಾಗ ಗಣಪತಿ ಮುನಿಗಳು ದಕ್ಷಿಣೇಶ್ವರದಲ್ಲಿನ ಶ್ರೀ ರಾಮಕೃಷ್ಣ ಪರಮಹಂಸರ ಮನೆಗೆ ಹೋಗಿ ಅಲ್ಲಿದ್ದ ಕಾಳಿಯ ಸೌಮ್ಯರೂಪವನ್ನು ಕಂಡು ಅದರಿಂದ ಪ್ರೇರಿತರಾಗಿ ಈ ಶ್ಲೋಕವನ್ನು ರಚಿಸಿದರು:

ಸುಧಾಕರಾಲಂಕೃತಚಾರುಚೂಲೀ ಶಿವಂ ಮತಿಂ ನಃ ಪ್ರದದಾತುಕಾಲೀ
ಯನ್ನಾಮಗಾಯೀ ಕಿಲ ರಾಮಕೃಷ್ಣೋ ಧೀರಾಗ್ರಗಣ್ಯಃ ಯ ಪರಮಾಲು ಲೋಕೇ ॥

"ಚಂದ್ರನಿಂದ ಶೋಭೆಗೊಂಡ ಕೇಶಗಳುಳ್ಳ ಯಾರ ವೈಭವವನ್ನು ಪೂಜಿಸಿ ಶ್ರೀರಾಮಕೃಷ್ಣ ಪರಮಹಂಸರು ಮುಕ್ತಿಯನ್ನು ಪಡೆದರೋ ಆ ಕಾಳಿಯು ನಮ್ಮ ಮೇಲೆ ಪರಿಶುದ್ಧ ಜ್ಞಾನವನ್ನು ಕರುಣಿಸಲಿ."

೨೦

ವಿಜಯ ಪತಾಕೆ

ಸುಧಾಂ ಹಸಂತೀ ಮಧು ಚಾಕ್ಷಿಪಂತೀ
ಯಶೋ ಹರಂತೀ ವನಿತಾಧರಸ್ಯ
ಪರಿಷ್ಕರೋತ್ಯಸ್ಯ ಕವಿತ್ವಧಾರಾ
ಮುಖಂ ಹರಪ್ರೇಯಸಿ ಲೋಕಸೇ ಯಮ್

– ಉಮಾಸಹಸ್ರಮ್ (4–13–19)

"ಪರಶಿವನ ಕಾಂತೆಯೇ! ನಿನ್ನ ಅವಲೋಕನಕ್ಕೆ ಪಾತ್ರನಾದವನ ಮಾತು ಕಾವ್ಯಸಮೂಹದಂತೆ ಅಲಂಕಾರಯುಕ್ತವಾಗುತ್ತದೆ. ಅವನ ಕಾವ್ಯದ ಸವಿಯು ಅಮೃತದ ರುಚಿಯನ್ನು ಅಣಕಿಸುವಂತಹದ್ದಾಗಿರುತ್ತದೆ. ಜೇನಿಗೆ ಸಮಸಮನಾಗಿ ನಿಲ್ಲುತ್ತದೆ. ಮಧುರವಾದ ಪದಾರ್ಥಗಳಲ್ಲಿ ಮಧುರವಾದುದು ಎಂದು ಸ್ತ್ರೀಯರ ಅಧರಕ್ಕೆ ಇರುವ ಯಶಸ್ಸನ್ನು ಅಪಹರಿಸುತ್ತದೆ. ಇಂತಹ ರುಚಿಯಿಂದ ಕೂಡಿದ ಕಾವ್ಯರಸವು ನಿನ್ನ ಅನುಗ್ರಹಕ್ಕೆ ಪಾತ್ರನಾದವನ ಮಾತನ್ನು ಅಲಂಕರಿಸುತ್ತದೆ."

ಭಾರತೀಯ ಸಂಸ್ಕೃತಿಯು ಸಂಸ್ಕೃತದ ಪಾಂಡಿತ್ಯದಲ್ಲಿ ಅಚ್ಚೊತ್ತಿದೆ. ದೇವಭಾಷೆಯೆಂದೇ ಪರಿಗಣಿಸಲಾದ ಸಂಸ್ಕೃತಭಾಷೆಯು ಭಾರತದಲ್ಲಿನ ಅನೇಕ ಭಾಷೆಗಳಿಗೆ ತಳಹದಿಯಾಗಿದೆ. ಸಂಸ್ಕೃತ ಭಾಷೆಯು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಅನೇಕ ಕಲಿಕಾ ಕೇಂದ್ರಗಳಿದ್ದವು. ಅವುಗಳಲ್ಲಿ ಅಮರಾವತಿ, ಉಜ್ಜೈನಿ, ನಳಂದ, ಮತ್ತು ನವದ್ವೀಪ ಕೇಂದ್ರಗಳು ಬಹು ಮುಖ್ಯವಾದವು. ಪಾಶ್ಚಿಮಾತ್ಯರ ಆಳ್ವಿಕೆಯ ಸಮಯದಲ್ಲಿ ಇವುಗಳಲ್ಲಿ ಮೂರು ಕೇಂದ್ರಗಳು ತಮ್ಮ ಭವ್ಯತೆಯನ್ನು ಕಳೆದುಕೊಂಡವು. ಬಂಗಾಳ ರಾಜ್ಯದಲ್ಲಿನ ನವದ್ವೀಪ ಕೇಂದ್ರ ಮಾತ್ರ ತನ್ನ ವೈಭವವನ್ನು ಉಳಿಸಿಕೊಂಡು ಸಂಸ್ಕೃತ ಭಾಷೆಗೆ ಗೌರವವನ್ನು ನೀಡುತ್ತಿತ್ತು. ಇತ್ತೀಚಿನವರೆಗೂ ಈ ಕೇಂದ್ರವು ಉಚ್ಛ್ರಾಯ ಸ್ಥಿತಿಯಲ್ಲಿತ್ತು. ವಿದ್ವತ್ ಸಮ್ಮೇಳನಗಳನ್ನು ನಿಗದಿತ ಕಾಲದಲ್ಲಿ ನಡೆಸಲಾಗುತ್ತಿತ್ತು. ಈ ಸಮ್ಮೇಳನಕ್ಕೆ ದೇಶದಾದ್ಯಂತ ಅನೇಕ ವಿದ್ವಾಂಸರುಗಳು ಭಾಗವಹಿಸುತ್ತಿದ್ದರು. ಸಮ್ಮೇಳನದಲ್ಲಿ ಸ್ಪರ್ಧೆಗಳನ್ನು ಪರೀಕ್ಷಿಸಲಾಗುತ್ತಿತ್ತು, ಚರ್ಚಾಕೂಟಗಳನ್ನು ಏರ್ಪಡಿಸಲಾಗುತ್ತಿತ್ತು. ವಿಜೇತರಾದ ವಿದ್ವಾಂಸರಿಗೆ ಪ್ರಮಾಣ ಪತ್ರಗಳನ್ನು ನವದ್ವೀಪ ವಿದ್ಯಾಪೀಠದಲ್ಲಿ (ಸರಸ್ವತಿಯು ವಾಸಿಸುವ ಸ್ಥಳವೆಂದು) ವಿತರಿಸಲಾಗುತ್ತಿತ್ತು.

ಕಲಾಭಿಜ್ಞರು ಹಾಗೂ ಸಾಮಾನ್ಯರೂ ಸಹ ಈ ವಿದ್ವತ್ ಸಭೆಯಲ್ಲಿ ಭಾಗವಹಿಸಿ ಆನಂದಿಸುತ್ತಿದ್ದರು. ಕೇವಲ ಹೆಸರಾಂತ ವಿದ್ವಾಂಸರಿಗೆ ಮಾತ್ರ ಈ ಸಭೆಯಲ್ಲಿ ಭಾಗವಹಿಸಲು ಅವಕಾಶ ಸಿಗುತ್ತಿತ್ತು. ಅದು ಕೇವಲ ಹಿರಿಯ ಹಾಗೂ ಈಗಾಗಲೇ ಅನೇಕ ಪ್ರಶಸ್ತಿಗಳನ್ನು ಪಡೆದಿರುವ ವಿದ್ವಾಂಸರಿಗೆ ಮಾತ್ರ ಅವಕಾಶವಿರುತ್ತಿತ್ತು. ಗಣಪತಿ ಮುನಿಗಳು ಭಾಗವಹಿಸುವ ಸಮಯದವರೆಗೂ ದಕ್ಷಿಣ ಭಾರತದಿಂದ ಯಾವ ವಿದ್ವಾಂಸರೂ ಈ ಸಭೆಗೆ ಬಂದಿರಲಿಲ್ಲ. ಸಾಮಾನ್ಯ ಅಭಿಪ್ರಾಯದ ಪ್ರಕಾರ ಕೇವಲ ಉತ್ತರಭಾರತದ ವಿದ್ವಾಂಸರು ಮಾತ್ರ ಸಂಸ್ಕೃತದಲ್ಲಿ ಪಾಂಡಿತ್ಯವುಳ್ಳವರೆಂದಿತ್ತು.

ಗಣಪತಿ ಮುನಿಗಳಿಗೆ ಈ ಸುಪ್ರಸಿದ್ಧ ಸಭೆಗೆ ತನ್ನ ಸ್ನೇಹಿತರೊಂದಿಗೆ ಭಾಗವಹಿಸಬೇಕೆಂಬ ಆಸೆಯಿತ್ತು. ಕಾಶೀ ಪಟ್ಟಣದಿಂದ ನವದ್ವೀಪದೆಡೆಗೆ ಹೊರಡುವ ಮೊದಲು ಗಣಪತಿ ಮುನಿಗಳು ಕಾಶೀ ಪಂಡಿತರಾದ ಶಿವಕುಮಾರ ದತ್ತ ಅವರಿಂದ ಸಭೆಯಲ್ಲಿ ಭಾಗವಹಿಸುವವರ ಪ್ರವೇಶಕ್ಕೆ ಸಂಬಂಧಿಸಿದ ಕೆಲಸಗಳ ಕಾರ್ಯದರ್ಶಿಗಳಾದ ಸಿತಿಕಂಠ ವಾಚಸ್ಪತಿ ಅವರಿಗೆ ಬರೆದ ಪರಿಚಯ ಪತ್ರವನ್ನು ಪಡೆದಿದ್ದರು. ಸಿತಿಕಂಠ ವಾಚಸ್ಪತಿಯು ನವದ್ವೀಪದಲ್ಲಿನ ಶಾಲೆಯೊಂದರಲ್ಲಿ ವ್ಯಾಕರಣ ಶಾಸ್ತ್ರವನ್ನು ಕಲಿಸುತ್ತಿದ್ದರು. ಗಣಪತಿ ಮುನಿಗಳು ನವದ್ವೀಪವನ್ನು ತಲುಪಿದ ಕೂಡಲೇ ಈ ವ್ಯಾಕರಣ ಶಾಲೆಯನ್ನು ಹುಡುಕಲು ಪ್ರಾರಂಭಿಸಿದರು. ಪ್ರತಿಯೊಂದು ಮನೆಯೂ ಶಾಲೆಯಂತೇ ಕಾಣಿಸುತ್ತಿತ್ತು ಹಾಗೂ ಅವರಿಗೆ ಮಾರ್ಗದರ್ಶನವನ್ನು ನೀಡಲು ಯಾರೂ ಸಿದ್ಧರಿರಲಿಲ್ಲ. ಅದ್ದೂರಿಯಾಗಿ ಶೃಂಗಗೊಂಡ ನಗರದ ಎಲ್ಲೆಡೆ ವಿದ್ವಾಂಸರು ಹಾಗೂ ಪಾಮರರು ತುಂಬಿದ್ದರು. ಯಾರೂ ಇಷ್ಟು ಚಿಕ್ಕ ವಯಸ್ಸಿನ ಗಣಪತಿ ಮುನಿಗಳನ್ನು ವಿದ್ವಾಂಸರೆಂದು ನಂಬಲು ಸಿದ್ಧರಿರಲಿಲ್ಲ.

ಅವರ ಹುಡುಕಾಟವು ವ್ಯರ್ಥವೆನಿಸತೊಡಗಿತ್ತು; ಗಣಪತಿ ಮುನಿಗಳು, ಅವರ ಸ್ನೇಹಿತರು ಹಸಿವಿನಿಂದ ಹಾಗೂ ನಡೆದಾಟದಿಂದ ಬಹುವಾಗಿ ಬಳಲಿದ್ದರು. ಅವರು ಒಂದು ಮನೆಯ ಮುಂದಿನ ಜಗಲಿಕಟ್ಟೆಯ ಮೇಲೆ ಕುಳಿತು ತಾವು ತಂದಿದ್ದ ಅವಲಕ್ಕಿಯ ಬುತ್ತಿಯನ್ನು ಬಿಚ್ಚಿ ತಿನ್ನಲು ತೊಡಗಿದರು. ಆಗ ಗಣಪತಿ ಮುನಿಗಳಿಗೆ "ಯಾಕೆ ದೇವಿಯು ಇಷ್ಟೊಂದು ಪರೀಕ್ಷಿಸುತ್ತಿರುವಳು? ಇಂತಹ ಸಣ್ಣ ನಗರದಲ್ಲಿ ಯಾಕೆ ಯಾರೂ ಕಾರ್ಯದರ್ಶಿಯ ಮನೆಯ ಮಾರ್ಗವನ್ನು ತಿಳಿಸುತ್ತಿಲ್ಲ", ಎಂದು ಆಲೋಚಿಸತೊಡಗಿದರು. ಈ ಆಲೋಚನೆಯೊಂದಿಗೆ ದೇವಿಯನ್ನು ಕುರಿತು ಕೆಳಗಿನ ಶ್ಲೋಕದ ಮೂಲಕ ಪ್ರಾರ್ಥಿಸಿದರು:

ದೇವಲೋಕ ಪೂಜಿತಾಂಘ್ರಿರೀಶ್ವರಸ್ಯ ಭಾಮಿನೀ
ಮಾನಸಾಭಿಧಾನ ವಾರಿ ಸಂಭವಾರ್ಪಣ ಪ್ರಿಯಾ
ಸಾಧುಕಾಮದಾಯಿನೀ ದುರಾತ್ಮ ಕಾಮ ಘಾತಿನೀ
ವೀರಲೋಕ ಮಾನನೀಯ ಮಾದಧಾತು ಮಾಮುಮಾ ॥

"ಶಂಕರ ಭಗವಾನನ ಪ್ರೀತಿಯ ಪತ್ನಿಯೇ! ಸಮಸ್ತ ದೇವತೆಗಳೂ ನಿನ್ನ ಪಾದವನ್ನು ಪೂಜಿಸುವರು, ಮನಸ್ಸು ನಿನ್ನಲ್ಲಿ ಶರಣಾದಾಗ ಸುಪ್ರೀತಳಾಗುವ, ಭಕ್ತರ ಆಶೋತ್ತರಗಳನ್ನು ಈಡೇರಿಸುವ ಹಾಗೂ ದುರ್ಬುದ್ಧಿಯುಳ್ಳವರ ಆಸೆಗಳನ್ನು ನಾಶಮಾಡುವ ದೇವಿಯೇ, ನನ್ನಲ್ಲಿ ಧೈರ್ಯವನ್ನು ತುಂಬುವುದರ ಮೂಲಕ ಗೌರವವನ್ನುಂಟು ಮಾಡು."

ಗಣಪತಿ ಮುನಿಗಳು ಕುಳಿತಿದ್ದ ಮನೆಯ ಮಾಲೀಕನು ದೇವಿಯನ್ನು ಕುರಿತ ಈ ಶ್ಲೋಕವನ್ನು ಆಲಿಸಿದನು. ಅವನು ಬಾಗಿಲನ್ನು ತೆರೆದು ಗಣಪತಿ ಮುನಿಗಳು ಹಾಗೂ ಅವರ ಸ್ನೇಹಿತರನ್ನು ಕಂಡು ಅವರಲ್ಲಿ ತಾನು ಮಿಥಿಲಾ ನಗರದ ವಿದ್ವಾಂಸ ಕಲಾಭಿಜ್ಞ ಎಂದೂ ಅಲ್ಲದೇ ವಿದ್ವಾಂಸರ ಸಭೆಯಲ್ಲಿ ಭಾಗವಹಿಸಲು ಬಂದಿರುವುದಾಗಿ ತಿಳಿಸಿದನು. ಅವನು ಗಣಪತಿ ಮುನಿಗಳನ್ನು ಕುರಿತು, "ನೀವು ವಿದ್ವಾಂಸರಂತೆ ಕಾಣುವಿರಿ. ಈ ಮನೆಯನ್ನು ನನಗೆ ಇಳಿದುಕೊಳ್ಳಲು ನೀಡಿರುವರು. ನಿಮ್ಮದು ಊಟವಾಯಿತೆ? ದಯವಿಟ್ಟು ನನ್ನ ಆತಿಥ್ಯವನ್ನು ಸ್ವೀಕರಿಸಿ" ಎಂದರು.

ಈ ರೀತಿಯ ಬದಲಾದ ಪರಿಸ್ಥಿತಿಯಿಂದ ಗಣಪತಿ ಹಾಗೂ ಅವರ ಸ್ನೇಹಿತರಿಗೆ ಸಂತೋಷವಾಯಿತು. ಗಣಪತಿ ಮುನಿಗಳು ಹಾಗೂ ಕಲಾಭಿಜ್ಞರು ಸಾಹಿತ್ಯದ ಬಗ್ಗೆ ಬಹಳ ಹೊತ್ತು ಚರ್ಚಿಸಿದರು. ಗಣಪತಿ ಮುನಿಗಳು ಕಲಾಭಿಜ್ಞರಿಗೆ ತಾನು ವಿದ್ವತ್ ಸಭೆಯಲ್ಲಿ ಭಾಗವಹಿಸುವ ಇಂಗಿತವನ್ನು ವ್ಯಕ್ತಪಡಿಸಿದರು. ಕಲಾಭಿಜ್ಞರು ತಮಗೆ ಸಿತಿಕಂಠ ವಾಚಸ್ಪತಿಯವರ ಪರಿಚಯವಿರುವುದಾಗಿಯೂ ಹಾಗೂ ಮರುದಿನ ಮುಂಜಾನೆಯೇ ಅವರ ಪರಿಚಯ ಮಾಡಿಕೊಡುವುದಾಗಿ ತಿಳಿಸಿದರು. ರಾತ್ರೆಯ ಸುಖ ನಿದ್ರೆಯಿಂದಾಗಿ ಎಲ್ಲರೂ ಬಹಳಷ್ಟು ಲವಲವಿಕೆಯನ್ನು ಪಡೆದು ಮುಂಜಾನೆ ಸಿದ್ಧರಾದರು.

ಮಾರನೇ ದಿನ ನಸುಕಿನಲ್ಲೇ ಕಲಾಭಿಜ್ಞರು ಗಣಪತಿ ಮುನಿಗಳನ್ನು ವಾಚಸ್ಪತಿಯ ಮನೆಗೆ ಕರೆದೊಯ್ದು ಪರಿಚಯ ಮಾಡಿಕೊಟ್ಟರು. ವಾಚಸ್ಪತಿಯು ಗಣಪತಿ ಮುನಿಗಳು ನೀಡಿದ ಪರಿಚಯ ಪತ್ರವನ್ನು ಓದಿದರು. ಅದರಲ್ಲಿ ಗಣಪತಿ ಮುನಿಗಳನ್ನು ವಿದ್ವತ್ತಿನಲ್ಲಿ ಹನುಮಂತನಿಗೆ ಸಮ ಎಂದು ರಾಮಾಯಣದ ಒಂದು ಶ್ಲೋಕದ ಮೂಲಕ ಹೊಗಳಿದ್ದರು. ಇದು ವಾಚಸ್ಪತಿಗೆ ಗಣಪತಿ ಮುನಿಗಳ ವಿದ್ವತ್ತಿನ ಬಗ್ಗೆ ವಿಶ್ವಾಸ ಮೂಡಿ ಅವರನ್ನು ಸಭೆಯಲ್ಲಿ ಮಾತನಾಡಲು ತಮ್ಮ ಅನುಮತಿಯನ್ನು ನೀಡಿದರು.

ವಿದ್ವಾಂಸರ ವಿದ್ವತ್ತಿನ ಬಗ್ಗೆ ಕೂಲಂಕುಶವಾಗಿ ಪರಿಶೀಲಿಸುವ ಕೆಲಸವು ನಿಗದಿತ ವೇಳೆಯಲ್ಲಿ ಪ್ರಾರಂಭವಾಯಿತು. ಸಭೆಯನ್ನು "ಹರಿ ಸಭಾ" ಎಂಬುದಾಗಿ ಹೆಸರಿಸಲಾಗಿತ್ತು. ಸಭೆಯ ಅಧ್ಯಕ್ಷರಾಗಿ ಶ್ರೀ ಅಂಬಿಕಾ ದತ್ತ ಅವರು ವೇದಘೋಷಗಳೊಂದಿಗೆ ಪೀಠವನ್ನಲಂಕರಿಸಿದರು. ಅಂಬಿಕಾ ದತ್ತರು ಹೆಸರಾಂತ ಆಶು ಕವಿಗಳು. ಅವರು ಪೀಠವನ್ನಲಂಕರಿಸುತ್ತಿದ್ದಂತೆ ಸಭೆಯಲ್ಲಿ ಮೌನವಾತಾವರಣವು ನೆಲೆಸಿತು.

ಸಿತಿಕಂಠ ವಾಚಸ್ಪತಿಗಳು ಗಣಪತಿ ಮುನಿಗಳೊಂದಿಗೆ ಸಭೆಯನ್ನು ಪ್ರವೇಶಿಸಿ ಮುಂದಿನ ಸಾಲಿನಲ್ಲಿ ಗಣಪತಿ ಮುನಿಗಳನ್ನು ತಮ್ಮ ಪಕ್ಕದಲ್ಲೇ ಕೂರಿಸಿಕೊಂಡು ಆಸೀನರಾದರು. ನಂತರ ಗಣಪತಿ ಮುನಿಗಳು ವಾಚಸ್ಪತಿಯವರನ್ನು ವೇದಿಕೆಯ ಮೇಲೆ ಕುಳಿತಿದ್ದ ಅಧ್ಯಕ್ಷರನ್ನು ಕುರಿತು ಸಂಸ್ಕೃತದಲ್ಲಿ "ಯಾರೀ ಮಹನೀಯರು?" ಎಂದು ಕೇಳಿದರು. ಸಭೆಯಲ್ಲಿ ಸಂಪೂರ್ಣ ಮೌನವಾವರಿಸಿದ್ದರಿಂದ ಗಣಪತಿ ಮುನಿಗಳ ಪ್ರಶ್ನೆಯು ಸ್ಪಷ್ಟವಾಗಿ ಎಲ್ಲರಿಗೂ ಕೇಳಿಸುವಂತಿತ್ತು. ಅಧ್ಯಕ್ಷರಿಗೂ ಇದು ಕೇಳಿಸಿ ಅವರಿಗೆ ಇದು ಹಾಸ್ಯಾಸ್ಪದವಾಗಿ ಕಂಡುಬಂದು ಹೀಗೆ ಉತ್ತರಿಸಿದರು:

ಸತ್ವರ ಕವಿತಾ ಸವಿತಾ ಗೌಡೋಹಂ ಕಶ್ಚಿದಂಬಿಕಾದತ್ತಃ ॥

"ನಾನು ಗೌಡದೇಶದ ಅಂಬಿಕಾ ದತ್ತ, ಆಶುಕವಿಗಳಲ್ಲಿ ಸೂರ್ಯ ಸಮಾನನು."

ಪದ್ಯವು ಸಂಪೂರ್ಣವಾಗದೇ ಅಧ್ಯಕ್ಷರು ಉತ್ತರಿಸಿದ್ದರು. ಗಣಪತಿ ಮುನಿಗಳು ಈ ಆಹ್ವಾನವನ್ನು ಅಂಗೀಕರಿಸಿ ತಮ್ಮ ಪರಿಚಯದ ಮೂಲಕ ಪದ್ಯವನ್ನು ಈ ರೀತಿ ಪೂರ್ಣಗೊಳಿಸಿದರು:

ಗಣಪತಿರಿತಿ ಕವಿಕುಲಪತಿರತಿ ದಕ್ಷೋ ದಾಕ್ಷಿಣಾತ್ಯೋಽಹಮ್ ॥

"ನಾನು ಕವಿಗಳ ನಾಯಕನು, ಕವಿತಾರಚನೆಯಲ್ಲಿ ಅತ್ಯಂತ ದಕ್ಷನು. ನಾನು ದಕ್ಷಿಣಾಪಥದ ಗಣಪತಿ."

ಅಂಬಿಕಾ ದತ್ತರು ರಚಿಸಿದ ಶ್ಲೋಕದ ಪೂರ್ವಾರ್ಧದಲ್ಲಿ ಕವಿತ ಮತ್ತು ಸವಿತ ಎಂಬ ಎರಡು ಪದಗಳ ವರ್ಣನೆ ಇತ್ತು. ಗಣಪತಿ ಮುನಿಗಳು ಶ್ಲೋಕದ ಉತ್ತರಾರ್ಧದಲ್ಲಿ ಇನ್ನೂ ಹೆಚ್ಚಿನ ವರ್ಣನೆಗಳೊಂದಿಗೆ ಶ್ಲೋಕವನ್ನು ಪೂರ್ಣಗೊಳಿಸಿದ್ದರು. ಇಷ್ಟಕ್ಕೇ ನಿಲ್ಲಿಸದೆ ಗಣಪತಿ ಮುನಿಗಳು "ಅಂಬಿಕ ದತ್ತರು ಮಾತೆ ಅಂಬಿಕೆಯ ಮಾನಸ ಪುತ್ರರು ಮಾತ್ರವಾದರೆ ನಾನು ಮಾತೆಯ ಔರಸ ಪುತ್ರ" ಎಂಬುದಾಗಿ ಹೀಗೆ ಉತ್ತರಿಸಿದರು:

ಭವಾನ್ ದತ್ತಃ ಅಹಂತ್ವೌರಸಃ ।

ಯುವಕ ಗಣಪತಿ ಮುನಿಗಳ ಧಾರ್ಷ್ಟ್ಯದಿಂದ ಕೂಡಿದ ಉತ್ತರವು ಸಭಿಕರನ್ನು ಭೀತಿಗೊಳಪಡಿಸಿತು. ಚಿಕ್ಕ ವಯಸ್ಸಿನ ಬಾಲಕನೋರ್ವನು ಮಧ್ಯ ವಯಸ್ಸಿನ ಮಹಾನ್ ವಿದ್ವಾಂಸರನ್ನು ಪಂಥಾಹ್ವಾನಿಸಿದ್ದು ಅವನ ಉದ್ಧಟತನವೆಂದೇ ಸಭಿಕರು ಹಾಗೂ ಉಳಿದ ವಿದ್ವಾಂಸರು ಭಾವಿಸಿದರು. ಆದರೆ ಅಂಬಿಕಾ ದತ್ತರಿಗೆ ಈ ಬಾಲಕನು ಧೈರ್ಯಸ್ಥನೆಂದು ಅರಿವಾಗಿ ಕೂಡಲೇ ಅವನನ್ನು ಪರೀಕ್ಷಿಸಲು ಪ್ರಾರಂಭಿಸಿದರು. ಗಣಪತಿ ಮುನಿಗಳಿಗೆ ನಾಲ್ಕು ಸಮಸ್ಯೆಗಳನ್ನು ಬಿಡಿಸಲು ಮೊದಲಿಗೆ ನೀಡಲಾಯಿತು:

ಸ್ತನವಸ್ತ್ರಂ ಪರಿತ್ಯಜ್ಯ ವಧೂಃ ಶ್ವಶುರಮಿಚ್ಛತಿ ।

"ಮೇಲ್ವಸ್ತ್ರವನ್ನು ತೆಗೆದು, ಮಹಿಳೆಯು ತನ್ನ ಮಾವನವರನ್ನು ಬಯಸಿದಳು."

ವತ್ಸರಸ್ಯೈಕದಾ ಗೌರೀ ಪತಿವಕ್ತ್ರಂ ನಪಶ್ಯತಿ ।

"ವರ್ಷಕ್ಕೊಮ್ಮೆ ಪಾರ್ವತಿಯು ತನ್ನ ಪತಿಯ ಮುಖವನ್ನು ನೋಡುವುದಿಲ್ಲ."

ಸೂರ್ಯಃ ಶಶಾಂಕೇನ ಸಮಂ ವಿನಷ್ಟಃ ।

"ಸೂರ್ಯನು ಚಂದ್ರನೊಂದಿಗೆ ಕಾಣೆಯಾದನು."

ಪಿಪೀಲಿಕಾ ಚುಂಬತಿ ಚಂದ್ರ ಮಂಡಲಮ್।

"ಇರುವೆಯು ಚಂದ್ರನನ್ನು ಚುಂಬಿಸಿತು."

ಗಣಪತಿ ಮುನಿಗಳು ಈ ಸಮಸ್ಯೆಗಳನ್ನು ಪದ್ಯ ಪೂರಣಗೊಳಿಸುವ ಮೂಲಕ ಸುಲಭವಾಗಿ ಬಿಡಿಸಿದರು:

ಹಿಡಿಂಬಾ ಭೀಮದಯಿತಾ ನಿದಾಘೇ ಘರ್ಮ ಪೀಡಿತಾ
ಸ್ತನ ವಸ್ತ್ರಂ ಪರಿತ್ಯಜ್ಯ ವಧೂಃ ಶ್ವಶುರಮಿಚ್ಛತಿ ॥

"ಭೀಮನ ಪತ್ನಿ ಹಿಡಿಂಬೆಯು ಬೇಸಿಗೆಯ ಧಗೆಯನ್ನು ತಾಳಲಾರದೆ, ತನ್ನ ಮಾವನವರಾದ ವಾಯುವನ್ನು ಬಯಸಿ ತನ್ನ ಮೇಲ್ವಸ್ತ್ರವನ್ನು ತೆಗೆದಳು."

ಗಣಪತಿ ಮುನಿಗಳು ಮುಂದುವರೆದು ಭೀಮನ ಹೆಂಡತಿಯನ್ನು ದ್ರೌಪದಿಯ ಬದಲಾಗಿ ಹಿಡಿಂಬೆಯನ್ನು ಈ ಶ್ಲೋಕದಲ್ಲಿ ಆರಿಸಿಕೊಂಡಿದ್ದಕ್ಕೆ ಹೆಚ್ಚಿನ ವಿವರಣೆಯ ಮೂಲಕ – ರಾಕ್ಷಸ ಕುಲದ ಮತ್ತು ನಾಗರಿಕತೆಯಲ್ಲಿ ಹಿಂದುಳಿದವಳು ಹಿಡಿಂಬೆ, ಆದರೆ ದ್ರೌಪದಿಯು ಕ್ಷತ್ರಿಯ ಕುಲದ ಸುಸಂಸ್ಕೃತಳು, ಹಾಗಾಗಿ ಅವಳು ತನ್ನ ಮೇಲ್ವಸ್ತ್ರವನ್ನು ತೆಗೆಯಲಸಾಧ್ಯ – ಎಂಬ ವಿವರಣೆಯನ್ನು ಕ್ಷಣಾರ್ಧದಲ್ಲಿ ನೀಡಿದರು.

ಚತುರ್ಥ್ಯಾಂ ಭಾದ್ರ ಶುಕ್ಲಸ್ಯ ಚಂದ್ರ ದರ್ಶನ ಶಂಕಯಾ
ವತ್ಸರಸ್ಯೈಕದಾ ಗೌರೀ ಪತಿ ವಕ್ತ್ರಂ ನ ಪಶ್ಯತಿ ॥

"ಭಾದ್ರಪದ ಮಾಸದ ನಾಲ್ಕನೇ ದಿನವಾದ ವಿನಾಯಕ ಚತುರ್ಥಿಯ ದಿನದಂದು ಗೌರಿಯು ತನ್ನ ಪತಿಯಾದ ಶಿವನ ಮುಖವನ್ನು ದರ್ಶಿಸುವುದಿಲ್ಲವೇಕೆಂದರೆ ಶಿವನು ತನ್ನ ಜಟೆಯಲ್ಲಿ ಚಂದ್ರನನ್ನು ಧರಿಸಿರುವನು. (ಚಂದ್ರನಿಗೆ ಗಣಪತಿಯಿಂದ ಒದಗಿದ ಶಾಪದ ಕಾರಣ ಆ ದಿನ ಚಂದ್ರ ದರ್ಶನವು ನಿಷಿದ್ಧ)."

ರಾಹು ಸ್ತ್ರಿಕೋಣೇಚ ಗುರುಸ್ತುತೀಯೇ ಕಲತ್ರ ಭಾವೇಚ ಧರಾ ತನೂಜಃ
ಲಗ್ನೇ ಚ ಕೋಷ್ಟೇ ಯದಿ ಬಾಲಕಃ ಸ್ಯಾತ್ ಸೂರ್ಯಃ ಶಶಾಂಕೇನ ಸಮಂ ವಿನಷ್ಟಃ ॥

"ಮಗುವಿನ ಜಾತಕ ಕುಂಡಲಿಯಲ್ಲಿ ರಾಹು ಗ್ರಹವು 5 ಅಥವಾ 9 ನೇ ಮನೆಗಳಲ್ಲಿದ್ದು, ಹಾಗೂ ಗುರುವು 3 ನೇ ಮನೆಯಲ್ಲಿದ್ದು, ಕುಜನು ಕುಲತ್ರಭಾವವಾದ 7 ನೇ ಮನೆಯಲ್ಲಿದ್ದರೆ, ಸೂರ್ಯ ಮತ್ತು ಚಂದ್ರರು ಲಗ್ನದಲ್ಲಿದ್ದರೂ, ಅದು ಶುಭಸೂಚಕವಾಗಿದ್ದರೂ, ಅವರು ತಮ್ಮ ಪ್ರಕಾಶವನ್ನು ಕಳೆದುಕೊಂಡು ಅಸ್ತಿತ್ವವಿಲ್ಲದಂತಾಗುತ್ತಾರೆ.

ಸತೀ ವಿಯೋಗೇನ ವಿಷಣ್ಣ ಚೇತಸಃ ಪ್ರಭೋಃ ಶಯಾನಸ್ಯ ಹಿಮಾಲಯೇ ಗಿರೌ
ಶಿವಸ್ಯ ಚೂಡಾಕಲಿತಂ ಸುಧಾಶಯಾ ಪಿಪೀಲಿಕಾ ಚುಂಬತಿ ಚಂದ್ರ ಮಂಡಲಮ್ ।

"ಶಿವನು ತನ್ನ ಪತ್ನಿ ಸತಿಯಿಂದ ಬೇರ್ಪಟ್ಟು ನಿರಾಶೆಯಿಂದ ಖಿನ್ನನಾಗಿದ್ದನು. ಅವನು ಹಿಮಾಲಯ ಪರ್ವತದಲ್ಲಿ ಮಲಗಿದನು. ಶಿವನ ಜಟೆಯಲ್ಲಿರುವ ಚಂದ್ರನನ್ನು ಅಮೃತವೆಂದು ಭಾವಿಸಿ ಇರುವೆಯೊಂದು ತನ್ನನ್ನು ತೃಪ್ತಿಪಡಿಸಿಕೊಳ್ಳಲು ಚಂದ್ರನನ್ನು ನೆಕ್ಕಿತು."

ಅಸಾಧ್ಯವಾದ ಸಮಸ್ಯೆಗಳಿಗೆ ಚತುರತೆಯಿಂದ ಹಾಗೂ ಸರಿಯಾದ ಉತ್ತರವನ್ನು ಗಣಪತಿ ಮುನಿಗಳು ಕೂಡಲೇ ನೀಡಿದ್ದನ್ನು ಸಭಿಕರೆಲ್ಲರೂ ಕರತಾಡನದ ಮೂಲಕ ಮೆಚ್ಚಿಕೊಂಡರು.

ಗಣಪತಿ ಮುನಿಗಳನ್ನು ಪರೀಕ್ಷಿಸುವುದು ಮುಂದುವರೆದು, ಕಾಳಿದಾಸನ "ರಘುವಂಶ" ಮತ್ತು "ಕಾವ್ಯ ಪ್ರಕಾಶ" ಕೃತಿಗಳಿಂದ ಒಂದೊಂದು ಶ್ಲೋಕಗಳನ್ನು ಯುವಕವಿ ಗಣಪತಿ ಮುನಿಗಳಿಗೆ ನೀಡಿ ಅದರ ವಿವರಣೆಯನ್ನು ನೀಡುವಂತೆ ತಿಳಿಸಲಾಯಿತು. ಕಾವ್ಯ ಪ್ರಕಾಶದಲ್ಲಿನ ಶ್ಲೋಕವನ್ನು ಅರ್ಥಸಹಿತವಾಗಿ ನೀಡಲಾಗಿತ್ತು. ಆ ಶ್ಲೋಕದ ಹಿಂದಿರುವ ಭಾವನೆಗಳು ಹಾಗೂ ಸಂಪೂರ್ಣವಾದ ಸೌಂದರ್ಯವನ್ನು ವಿವರಿಸಿ, ಅದರ ಜೊತೆಯಲ್ಲೇ ಆ ವಿವರಣೆಗಳಿಗೆ ವಿರುದ್ಧವಾದ ಅರ್ಥವನ್ನು ನೀಡಲು ತಿಳಿಸಲಾಗಿತ್ತು. ಕೊನೆಗೆ ಯುವ ಕವಿಯು ಆ ಅರ್ಥದಲ್ಲಿ ಯಾವುದೇ ವೈರುಧ್ಯತೆ ಇಲ್ಲವೆಂದು ವಿವರಿಸಬೇಕಿತ್ತು. ಎರಡು ಶ್ಲೋಕಗಳು ಈ ರೀತಿಯಾಗಿತ್ತು:

ನ ಮೃಗಯಾಭಿರತಿರ್ನ ದುರೋದರಂ ನ ಚ ಶಶಿಪ್ರತಿಮಾಭರಣಂ ಮಧು
ತಮುದಯಾಯ ನವಾ ನವಯೌವನ ಪ್ರಿಯತಮಾಯತಮಾನಮಪಾಹರತ್ ।

– ರಘುವಂಶ

ಸ್ತುಮಃ ಕಂ ವಾಮಾಕ್ಷಿ ಕ್ಷಣಮಪಿ ವಿನಾ ಯಂ ನ ರಮಸೇ
ವಿಲೇಭೇ ಕಃ ಪ್ರಾಣಾನ್ ರಣಮಖ ಮುಖೇ ಯಂ ಮೃಗಯಸೇ
ಸುಲಗ್ನೇ ಕೋ ಜಾತಃ ಶಶಿಮುಖಿ ಯ ಮಾಲಿಂಗಸಿ ಬಲಾತ್
ತಪಃ ಶ್ರೀಃ ಕಸ್ಯೈಷಾ ಮದನನಗರಿ ಧ್ಯಾಯಸಿ ತು ಯಮ್ ॥

– ಕಾವ್ಯ ಪ್ರಕಾಶ

ಗಣಪತಿ ಮುನಿಗಳು ಎರಡೂ ಶ್ಲೋಕಗಳಿಗೆ ಅದರಲ್ಲಡಗಿರುವ ಭಾವನೆಗಳ ಸಹಿತ ವಿವರವಾದ ವಿವರಣೆಯನ್ನು ನೀಡಿ ನಂತರ ಎರಡನೇ ಶ್ಲೋಕದ ಸೌಂದರ್ಯ ಹಾಗೂ ಯೋಗ್ಯತೆಯ ಬಗೆಗೆ ಮೊದಲಿಗೆ ಹೊಗಳಿ ಅದೇ ಧಾಟಿಯಲ್ಲೇ ಕೂಡಲೇ ತಾವು ನೀಡಿದ ವಿವರಗಳನ್ನು ವಿರೋಧಿಸಿ, ಶ್ಲೋಕದ ಕಡೆಯಲ್ಲಿ ಕವಿಯು "ಯಮ್" ಪದವನ್ನು ಉಪಯೋಗಿಸಿರುವುದರಿಂದ ಎಲ್ಲ ವಿವರಗಳೂ ಮಹಿಳೆಯ ವಿಷಯದಲ್ಲಿ ಕಾಲ್ಪನಿಕವಾಗಿ ಈ ವಿಧದ ಕಾಲ್ಪನಿಕ ಭಾವನೆಗಳು ನೈಜ ಭಾವನೆಗಳನ್ನು ಹೊರತರಲಸಾಧ್ಯವೆಂದು ವಿವರಿಸಿದರು. ಹೀಗೆ ಈ ಎರಡೂ ಶ್ಲೋಕಗಳ ಬಗ್ಗೆ ವಿವರವಾಗಿ ಮಾತನಾಡುತ್ತಾ ಗಣಪತಿ ಮುನಿಗಳು ಒಂದು ಹಂತದಲ್ಲಿ ತಡವರಿಸಿ "ಸರ್ವೇಶಾಂ" ಎಂಬ ಪದದ ಬದಲು "ಸರ್ವಾಸಾಂ" ಪದವನ್ನು ಬಳಸಿದರು.

ಅಂಬಿಕಾದತ್ತರು ಈ ಸಮಯಕ್ಕೇ ಕಾಯುತ್ತಿದ್ದವರಂತೆ ಗಣಪತಿ ಮುನಿಗಳನ್ನು ನಿಲ್ಲಿಸುವಂತೆ ಗುಡುಗಿ ಹೀಗೆ ಹೇಳಿದರು:

ಅನವದ್ಯೇ ನನು ಪದ್ಯೇ ಗದ್ಯೇ ಹೃದ್ಯೋಽಪಿ ತೇ ಸ್ಖಲತಿ ವಾಣೀ
ತತ್ಕಿಂ ತ್ರಿಭುವನಸಾರಾ ತಾರಾ ನಾರಾಧಿತಾ ಭವತಾ ॥

"ನಿನ್ನ ಶ್ಲೋಕಗಳು ಕಳಂಕರಹಿತ. ನಿನ್ನ ಗದ್ಯವು ಸುಂದರವಾಗಿದೆ. ಆದರೆ ನಿನ್ನ ಮಾತುಗಳು ತಡವರಿಸುತ್ತಿವೆ. ಯಾಕೆ ನೀನು ಮೂರು ಲೋಕದ ಸತ್ತ್ವವಾದ ತಾರಾದೇವಿಯ ಪಾದದಲ್ಲಿ ಪೂಜಿಸಲಿಲ್ಲ?"

ಈ ವಿಧದ ಹಠಾತ್ ಅಡ್ಡಬಾಯಿಹಾಕುವುದರಿಂದ ಸ್ವಲ್ಪವೂ ವಿಚಲಿತರಾಗದ ಗಣಪತಿ ಮುನಿಗಳು ಅಂಬಿಕಾದತ್ತರ ಶ್ಲೋಕದಲ್ಲಿ ತಪ್ಪನ್ನು ಗುರುತಿಸಿ ತನ್ನ ತೊದಲುವಿಕೆಯಲ್ಲಿನ ತಪ್ಪನ್ನು ತೋರಿಸುವ ಭರದಲ್ಲಿ ಅವರು "ತಾರಾಃ ಸಾರಾ" ಎನ್ನುವುದರ ಬದಲಾಗಿ "ಸಾರಾ ತಾರಾ" ಎಂದಿದ್ದನ್ನು ಅವರಿಗೇ ವಿವರಿಸಿ ಅವರನ್ನು ಈ ರೀತಿಯಾಗಿ ಎದುರಿಸಿದರು:

ಸುಧಾಂ ಹಸಂತೀ ಮಧು ಚಾಕ್ಷಿಪಂತೀ ಯಶೋ ಹರಂತೀ ದಯಿತಾಧರಸ್ಯ
ನ ತೇಲಮಾಸ್ಯಂ ಕವಿತಾಕರೋತಿ ನೋಪಾಸ್ಯತೇ ಕಿಂ ದಯಿತಾರ್ಧ ದೇಹಃ ॥

"ಕವಿತೆಯು ನಿಜವಾಗಲೂ ಸಿಹಿಯಾಗಿದ್ದು, ಅದು ಅಮೃತವನ್ನು ಕಂಡು ನಗುವುದು, ಹಾಗೂ ಜೇನಿಗೆ ಸವಾಲನ್ನು ಒಡ್ಡಿ, ಹೆಣ್ಣಿನ ತುಟಿಗಳಲ್ಲಿನ ಖ್ಯಾತಿಯನ್ನು ಕಡಿಮೆಗೊಳಿಸುವುದು. ಅಂತಹ ಕವಿತೆಯು ನಿಮ್ಮ ಬಾಯಲ್ಲಿ ಶೋಭಿತರುವಂಥದ್ದಲ್ಲ. ನೀವು ತನ್ನ ಅರ್ಧಶರೀರವನ್ನೇ ಮಹಿಳೆಗೆ ನೀಡಿದ ದೇವಾಧಿದೇವನನ್ನು ಪೂಜಿಸಲಿಲ್ಲವೇ"

ಈ ರೀತಿಯ ಮೂದಲಿಕೆಯನ್ನು ಆಲಿಸಿದ ಅಂಬಿಕಾದತ್ತರ ಮುಖವು ಕೆಂಪಾಗಿ, ಕೇವಲ ಯುವಕನೋರ್ವನು ತನ್ನಲ್ಲಿನ ತಪ್ಪನ್ನು ತೋರುವ ಧೈರ್ಯವನ್ನು ಹೇಗೆ ಮಾಡುವನು! ಎಂದು ಈ ರೀತಿ ಉತ್ತರಿಸಿದರು:

ಅಚ್ಚೈಃ ಕುಂಜರ ಮಾಕಾರ್ಷೀಃ ಬೃಂಹಿತಾನಿ ಮದೋದ್ಧತಃ
ಕುಂಭೀಕುಂಭಾಮಿಷಾಹಾರೀ ಶೇತೇ ಸಂಪ್ರತಿ ಕೇಸರೀ ॥

"ಓ ಗಜವೆ! ಒರಟಾಗಿ ಈ ರೀತಿಯ ಶಬ್ದವನ್ನು ಮಾಡಬೇಡ. ಆನೆಯ ಗಂಡಸ್ಥಲದ ಮಾಂಸವನ್ನು ತಿನ್ನುವ ಸಿಂಹವು ಸಮೀಪದಲ್ಲೇ ನಿದ್ರಿಸುತ್ತಿರುವುದು."

ಅಂಬಿಕಾ ದತ್ತರು ಅಲಿಪೀಕರಣದ (ಂಟಟುಣಜಡಿಚಿಣುಂಟಿ) ಬಗೆಗಿನ ಅತಿಯಾದ ಮೋಹದಿಂದಾಗಿ ತಮ್ಮ ಶ್ಲೋಕದಲ್ಲಿ ಮತ್ತೊಂದು ತಪ್ಪನ್ನು ಮಾಡಿದ್ದರು. ಅದೇನೆಂದರೆ "ಆಮಿಷಾಹಾರಃ" ಎನ್ನುವುದರ ಬದಲಾಗಿ "ಆಮಿಷಾಹಾರಿ" ಎಂಬ ಪದವನ್ನು ಉಪಯೋಗಿಸಿದ್ದರು. ಗಣಪತಿ ಮುನಿಗಳು ಅದೇ ಭಾವಾವೇಶದಿಂದ ಈ ತಪ್ಪನ್ನು ತೋರಿಸಿ ಮತ್ತೊಂದು ಶ್ಲೋಕದ ಮೂಲಕ ಹೀಗೆಂದರು:

ಸಮಾಸೀನೋ ರಸಾಲೇ ಚೇತು ಮೌನಮಾವಹ ಮೌಕಲೆ
ಲೋಕಃ ಕರೋತು ಸತ್ಕಾರಂ ಮತ್ವಾ ತ್ವಾಮಪಿ ಕೋಕಿಲಮ್ ॥

"ಎಲೌ ಕಾಗೆಯೆ! ನೀನು ಮಾವಿನ ಮರದಮೇಲೆ ಕುಳಿತಿದ್ದರೆ, ಮೌನವಾಗಿರು. ಪ್ರಪಂಚವು ನಿನ್ನನ್ನು ಕೋಗಿಲೆಯೆಂದು ಗೌರವಿಸಲಿ."

ಅಂಬಿಕಾ ದತ್ತರು ಈ ಯುವಕನಿಂದ ಆದ ಅವಮಾನವನ್ನು ತಡೆದುಕೊಳ್ಳಲಾಗದೇ ಅತಿಯಾದ ಕೋಪದಿಂದ ಈ ರೀತಿಯಾಗಿ ಥಟ್ಟನೆ ಹೇಳಿಬಿಟ್ಟರು:

ಜ್ಯೋತಿರಿಂಗಣ ನ ಕಿಂ ನು ಮನ್ಯಸೇ ಯತ್ತ್ವಮೇವ ತಿಮಿರೇಷು ಲಕ್ಷ್ಯಸೇ ।

"ಓ ಪತಂಗವೆ! ನೀನು ಕೇವಲ ಕತ್ತಲಿನಲ್ಲಿ ಮಾತ್ರ ಪ್ರಕಾಶಿಸುವೆ ಎಂಬುದನ್ನು ಅರಿಯಲಾರೆಯಾ? (ಬೇರೆಯವರ ತಪ್ಪನ್ನು ಎತ್ತಿ ತೋರಿಸುವುದರ ಮೂಲಕ ನೀನು ಪ್ರಕಾಶಿಸುತ್ತಿರುವೆ)."

ಈ ರೀತಿಯ ಅವಮಾನವನ್ನು ಸುಮ್ಮನೇ ಸ್ವೀಕರಿಸುವ ಸ್ವಭಾವದವರಲ್ಲದ ಗಣಪತಿ ಮುನಿಗಳು ಅದೇ ಧಾಟಿಯಲ್ಲೇ ಅವರು ಈ ರೀತಿಯಾಗಿ ಮಾರುತ್ತರ ಕೊಟ್ಟರು:

ಕಿಂನು ದೀಪ ಭವನೇ ವಿಭಾಸಸೇ ವಾಯುನಾ ಬಹಿ ರಹೋ ವಿಧೂಯಸೇ ।

"ಹೇ ದೀಪವೆ! ನೀನು ಕೇವಲ ನಾಲ್ಕು ಗೋಡೆಗಳ ಮಧ್ಯೆ ಮಾತ್ರ ಪ್ರಕಾಶಿಸುವೆ. ಹೊರಗೆ ಬಂದರೆ ನೀನು ಆರಿಹೋಗುವೆ. (ನಿನ್ನ ಪಾಂಡಿತ್ಯವು ಈ ರೀತಿಯ ಘನ ವಿದ್ವಾಂಸರ ಸಭೆಗಳಲ್ಲಿ ಬೆಳಗುವುದಿಲ್ಲವೇಕೆಂದರೆ ದಿಗ್ಗಜರ ಪಾಂಡಿತ್ಯವು ನಿನ್ನನ್ನು ಪದಚ್ಯುತಿಗೊಳಿಸುವುದು)."

ಅಷ್ಟಕ್ಕೇ ನಿಲ್ಲಿಸದೆ, ಅಂಬಿಕಾ ದತ್ತರು ತಮ್ಮ ಅಲಿಪೀಕರಣದ ಮೋಹದಿಂದಾಗಿ ತನ್ನ ಶ್ಲೋಕವನ್ನು ಕೆಡಿಸುತ್ತಿರುವುದನ್ನು ಕಂಡು ಗಣಪತಿ ಮುನಿಗಳು ಈ ರೀತಿಯಾಗಿ ಹೇಳಿದರು:

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

"ಹಣ ಅಥವಾ ಜೀವ ಹೋಗುವ ಸಂದರ್ಭ ಉಂಟಾದರೂ ಬಂಗಾಳಿಗಳು ಮೀನು ತಿನ್ನುವುದನ್ನು ನಿಲ್ಲಿಸಲಾರರು."

ಅಂಬಿಕಾ ದತ್ತರು ಸಂತೋಷದಿಂದ ಮೇಲೆದ್ದು ಬಂದು ಗಣಪತಿ ಮುನಿಗಳನ್ನು ತಬ್ಬಿಕೊಂಡು ಅವರ ಹಾಸ್ಯ ಪ್ರವೃತ್ತಿ ಹಾಗೂ ಕಾವ್ಯಕಲೆಗಳ ಬಗ್ಗೆ ಹೃತ್ಪೂರ್ವಕವಾಗಿ ಕೊಂಡಾಡಿದರು. ಸಭಿಕರೆಲ್ಲರೂ ಆನಂದದಿಂದ ಚಪ್ಪಾಳೆ ತಟ್ಟಿದರು. ಗಣಪತಿ ಮುನಿಗಳು ತನ್ನ ಚರ್ಚಾ ವೇಳೆಯಲ್ಲಿ ಆಗಿರಬಹುದಾದ ಅಚಾತುರ್ಯ ಹಾಗೂ ಒರಟು ವರ್ತನೆಗೆ ಅಂಬಿಕಾ ದತ್ತರಲ್ಲಿ ಕ್ಷಮೆ ಯಾಚಿಸಿದರು. ಅಂಬಿಕಾದತ್ತರು ಮುಗುಳ್ನಗುತ್ತಾ ನೀವು "ಅಮೀನಾ, ಮೀನಾ" ಎರಡು ಪದಗಳನ್ನು ಸುಂದರವಾಗಿ ನಿಮ್ಮ ಶ್ಲೋಕದಲ್ಲಿ ಉಪಯೋಗಿಸಿರುವ ರೀತಿಯೇ ನಿಮ್ಮನ್ನು ಕ್ಷಮಿಸಲು ಯೋಗ್ಯವಾಯಿತು.

ಗಣಪತಿ ಮುನಿಗಳ ಪರೀಕ್ಷೆಯು ಇಷ್ಟಕ್ಕೇ ಮುಗಿದಿರಲಿಲ್ಲ. ಅವರನ್ನು ಮಹಾಭಾರತದ ಪ್ರತಿಯೊಂದು ಅಧ್ಯಾಯಕ್ಕೂ ಒಂದೊಂದು ಶ್ಲೋಕಗಳನ್ನು (ಒಟ್ಟು 18 ಶ್ಲೋಕಗಳು) ರಚಿಸಲು ತಿಳಿಸಿ, ಶ್ಲೋಕಗಳಲ್ಲಿ "ಅಪಿ, ಹಿ ಮತ್ತು ಚ ಪದಗಳನ್ನು ಉಪಯೋಗಿಸಕೂಡದೆಂದು ಷರತ್ತನ್ನು ಹಾಕಲಾಯಿತು. ಯಾವುದೇ ವಿದ್ವಾಂಸರಿಗೂ ಈ ಪದಗಳನ್ನು ಹೊರತು ಪಡಿಸಿ ಶ್ಲೋಕ ರಚಿಸುವುದು ಅತ್ಯಂತ ಕಠಿಣವಾದ ಕಾರ್ಯವೇ! ಆದರೆ ಮಾತೆ ಭುವನೇಶ್ವರಿಯಿಂದ ವರ ಪಡೆದಿದ್ದ ಗಣಪತಿ ಮುನಿಗಳಿಗೆ ಈ ಕಾರ್ಯವು ಅತಿ ಸುಲಭವಾಗಿತ್ತು ಹಾಗೂ ಅವರು ಶ್ಲೋಕಗಳನ್ನು ರಚಿಸಿದ್ದಲ್ಲದೇ ಅವುಗಳಿಗೆ ಸುಂದರವಾದ ವ್ಯಾಖ್ಯಾನವನ್ನೂ ನೀಡಿದರು.

ಅಂಬಿಕಾ ದತ್ತರು ಗಣಪತಿ ಮುನಿಗಳನ್ನು ಮುಕ್ತ ಕಂಠದಿಂದ ಶ್ಲಾಘಿಸಿ ಮತ್ತು ಸಭೆಯಲ್ಲಿ ನೆರೆದಿದ್ದ ವಿದ್ವಾಂಸರೆಲ್ಲರೂ ಒಕ್ಕೊರಲಿನಿಂದ ಗಣಪತಿ ಮುನಿಗಳಿಗೆ "ಕಾವ್ಯಕಂಠ" (ಯಾರ ಕಂಠದಲ್ಲೇ ಕಾವ್ಯವಿರುವುದೋ) ಎಂಬ ಬಿರುದನ್ನು ನೀಡಿದರು. ವೇದಘೋಷ ಹಾಗೂ ಸಮಸ್ತ ಸಭಾಸದರ ಕರತಾಡನದ ಮಧ್ಯದಲ್ಲಿ ಗಣಪತಿ ಮುನಿಗಳು ಬಿರುದು ಪತ್ರವನ್ನು ಸ್ವೀಕರಿಸಿದರು. ಅಂದಿನಿಂದ ಸೂರ್ಯಗಣಪತಿಯು ಕಾವ್ಯಕಂಠ ಗಣಪತಿ ಎಂದು ಪ್ರಖ್ಯಾತರಾಗಿ ಅದೇ ಹೆಸರು ಸರ್ವರಿಗೂ ಚಿರಪರಿಚಿತವಾಯಿತು.

೨೧

ತಾರಾ ಮಂತ್ರ

ಭವತಿ ಪರಾ ವಾಗ್ಭೈರವ್ಯಾಖ್ಯಾ
ಪಶ್ಯಂತೀ ಸಾ ಕಥಿತಾ ತಾರಾ
ರಸನಿಧಿಮಾತ್ರಾ ಜಿಹ್ವಾರಂಗಂ
ಮಾತಂಗೀತಿ ಪ್ರಥಿತಾ ಸೇಯಮ್ ॥

– ಉಮಾಸಹಸ್ರಮ್ (10–38–16)

"ಆಧಾರಚಕ್ರದಲ್ಲಿ ವಾಸಿಸುತ್ತ ತ್ರಿಪುರ ಭೈರವೀ ಎಂದು ಪ್ರಸಿದ್ಧಳಾಗಿರುವವಳು. ಅವಳು ಮಣಿಪೂರದಲ್ಲಿರುತ್ತ ಪಶ್ಯಂತೀ ಅಥವಾ ಕಾರಣಾವಸ್ಥೆಯಲ್ಲಿರುವ ವಾಕ್ ಆಗಿ, ತಂತ್ರ ಶಾಸ್ತ್ರಗಳಲ್ಲಿ "ತಾರಾ" ಎಂದು ಪ್ರಸಿದ್ಧಳಾಗಿದ್ದಾಳೆ. ಎಲ್ಲ ರಸಗಳಿಗೂ ಕಾರಣೀಭೂತವಾದ, ನಾಲಿಗೆಯನ್ನು ಸೇರಿದವಳಾಗಿ "ಮಾತಂಗೀ" ಎಂದು ದಶಮಹಾವಿದ್ಯೆಗಳಲ್ಲಿ ಹೇಳಲ್ಪಟ್ಟಿದ್ದಾಳೆ."

ಓಂಕಾರವನ್ನು ಪ್ರಣವ ಅಥವಾ ಆದಿಸ್ವರೂಪದ ಧ್ವನಿ ಎಂದು ಕರೆಯಲಾಗುವುದು. ಈ ಪದವು ಶಬ್ದದಲ್ಲೇ ಆಳವಾಗಿ ಬೇರುಬಿಟ್ಟು ಅದು ಸಮಸ್ತ ಆಲೋಚನೆ ಮತ್ತು ಶಬ್ದಗಳಿಗೆ ಅಡಿಪಾಯವಾಗಿದೆ. ಅದರ ಮೊದಲ ಅಭಿವ್ಯಕ್ತಿಯಲ್ಲಿ ಮೂಲಾಧಾರ ಚಕ್ರದಲ್ಲಿ ನೆಲಸಿ ಪರಾವಾಕ್ ಎಂದು ಕರೆಯಲ್ಪಡುತ್ತದೆ. ಸಮಸ್ತ ಜ್ಞಾನದ ಅಭಿವ್ಯಕ್ತಿಯೇ ಅವಳಾಗಿರುವುದರಿಂದ (ಪರಾದೇವತ), ಅವಳನ್ನು ತ್ರಿಪುರ ಭೈರವಿ ಎಂದು ಕರೆಯಲಾಗುವುದು. ಹೃದಯ ಮಧ್ಯದಲ್ಲಿ (ಅನಾಹತ ಚಕ್ರ) ಈ ಶಬ್ದವು (ಓಂಕಾರನಾದವನ್ನು) ಪಶ್ಯಂತಿ (ವೀಕ್ಷಿಸುವ ಶಕ್ತಿ) ಎಂದು ಮತ್ತು ಮಣಿಪೂರಕದಲ್ಲಿ ತಾರಾ ದೇವಿಯಾಗಿ ಅಭಿವ್ಯಕ್ತವಾಗುವುದು. ಈ ಶಕ್ತಿಯೇ ಎಲ್ಲವನ್ನು ಕಾಣುವ ಬೆಳಕು. ಇದು ಸಮಸ್ತ ಆಲೋಚನೆ ಮತ್ತು ಫಲೋತ್ಪಾದನೆಗಳಿಗೆ ಮೂಲ. ಆಲೋಚನೆಗಳು ಪಶ್ಯಂತಿಯಿಂದ ಉತ್ಪನ್ನವಾಗಿ ಧ್ವನಿಯ ಮಧ್ಯಭಾಗವನ್ನು ತಲುಪಿ (ವೈಖರಿ ಎಂದು ಕರೆಯಲ್ಪಡುವ) ಪದವಾಗುವುದು ಅಥವಾ ವಾಕ್ಕಿನ ವಿಧಾನ ಮತ್ತು ಶಕ್ತಿಯಾಗುವುದು. ಈ ರೂಪದಲ್ಲಿ ದೇವಿಯನ್ನು ಮಾತಂಗಿ ಎಂದು ಕರೆಯಲಾಗುವುದು. ಗಂಟಲಿನಿಂದ ಹೊರಬಂದ ಪದವು ಮೇಲ್ದಾನುವಿನಲ್ಲಿ ಕರಗಿ ಮಧ್ಯಮವಾಗುವುದು. ಯೋಗಿಗಳನ್ನು

ಎಚ್ಚರ, ಸ್ವಪ್ನ ಮತ್ತು ನಿದ್ರಾವಸ್ಥೆಗಳಿಗಿಂತ ಆಚೆಯ ಸ್ಥಿತಿ ಅಥವಾ ತುರೀಯಾವಸ್ಥೆಯಲ್ಲಿ (ಇದನ್ನು ಪರಾ ಮತ್ತು ಪಶ್ಯಂತಿ ರೂಪಗಳಲ್ಲಿ) ನೋಡಬಹುದು.

ವಾಕ್ ಶಕ್ತಿಯ ಮೇಲೆ ಪಾಂಡಿತ್ಯವನ್ನು ಸಾಧಿಸಿದಲ್ಲಿ ಮಾನವನು ಜ್ಞಾನಿಯಾಗಬಹುದು.

ವಾಕ್ ಶಕ್ತಿಯ ಮೇಲೆ ಪಾಂಡಿತ್ಯವನ್ನು ಗಳಿಸಬೇಕಿದ್ದರೆ ಸಾಧಕನು ಆಳವಾದ ಅಧ್ಯಯನದೊಂದಿಗೆ ನಿರಂತರ ಸಾಧನೆಯನ್ನ ಮಾಡಬೇಕು. ತಾಂತ್ರಿಕ ಸಾಧಕರು ದೈವೀ ಮಾತೆಯನ್ನು ಪೂಜಿಸುವುದರ ಮೂಲಕ ವಾಕ್ ಶಕ್ತಿಯ ಮೇಲೆ ಪಾಂಡಿತ್ಯವನ್ನು ಸಾಧಿಸುವರು. ನವದ್ವೀಪದ ವಿದ್ವಾಂಸರ ಸಭೆಯಲ್ಲಿ ಅಧ್ಯಕ್ಷರಾದ ಅಂಬಿಕಾ ದತ್ತರು ಗಣಪತಿ ಮುನಿಗಳು ತೊದಲಿದಾಗ ಅವರನ್ನು ಛೇಡಿಸಿ ತಾರಾ ದೇವಿಯ ಪೂಜೆಯನ್ನು ಇನ್ನೂ ಮಾಡಲಿಲ್ಲವೇ ಎಂದಿದ್ದನ್ನು ನೆನೆಸಿಕೊಂಡ ಗಣಪತಿ ಮುನಿಗಳ ಹೃದಯದೊಳಗೆ ಆಳವಾಗಿ ಸೇರಿಬಿಟ್ಟಿತ್ತು. ದಕ್ಷಿಣ ಭಾರತದಲ್ಲಿನ ಜನಗಳಿಗೆ ಈ ವಿಧದ ಪೂಜೆಯು ತಿಳಿದಿರಲ್ಲಿಲ್ಲ ಹಾಗೂ ಗಣಪತಿ ಮುನಿಗಳಿಗೆ ಇದರ ಬಗ್ಗೆ ಯಾವುದೇ ತರಬೇತಿಯೂ ಆಗಿರಲ್ಲಿಲ್ಲ. ಈ ವಿಧದ ಪೂಜೆಯನ್ನು ಬಂಗಾಳ ಪ್ರಾಂತ್ಯದಲ್ಲಿ ಮಾತ್ರ ಅನುಸರಿಸುವುದರಿಂದ ತಾವು ಬಂಗಾಳ ಪ್ರಾಂತ್ಯದಲ್ಲಿರುವಾಗಲೇ ಈ ವಿಧದ ಪೂಜಾ ಪದ್ಧತಿಯಲ್ಲಿ ಪಾಂಡಿತ್ಯವನ್ನು ಪಡೆಯಬೇಕೆಂದು ನಿರ್ಧರಿಸಿದರು.

ಗಣಪತಿ ಮುನಿಗಳು ತನ್ನೊಡನೆ ಬಂದಿದ್ದ ಸ್ನೇಹಿತರು ಹಾಗೂ ಅನುಯಾಯಿಗಳನ್ನು ಮನೆಯೆಡೆಗೆ ಕಳುಹಿಸಿ ಕುಲಭಿಘ್ನರೊಂದಿಗೆ ಮುರ್ಷಿದಾಬಾದ್ ನಗರಕ್ಕೆ ಪಯಣಿಸಿದರು. ಕೆಲವು ದಿವಸ ಅಲ್ಲಿದ್ದು ಅಲ್ಲಿನ ರಾಜನನ್ನು ಸಂಧಿಸಿ ಅಲ್ಲಿ ತನ್ನ ವಿದ್ವತ್ತನ್ನು ಪ್ರದರ್ಶಿಸಿ ಅವರಿಂದ ಗೌರವವನ್ನು ಪಡೆದರು. ಅಲ್ಲಿಂದ ಪವಿತ್ರ ಶೈವ ಕ್ಷೇತ್ರವಾದ ವೈದ್ಯನಾಥಂ ಕಡೆಗೆ ಪಯಣಿಸಿದರು.

ಅಲ್ಲಿನ ಮಂದಿರದ ಒಂದು ಮೂಲೆಯಲ್ಲಿ ತಪಸ್ಸಿಗೆ ಕುಳಿತರು. ಸ್ವಲ್ಪ ಸಮಯದ ನಂತರ ಕಣ್ತೆರೆದಾಗ ಕತ್ತಲಾವರಿಸಿತ್ತು. ಕತ್ತಲಿನಲ್ಲಿ ಇವರಿಗಾಗಿ ಕಾಯುತ್ತಾ ನಿಂತಿದ್ದ ವ್ಯಕ್ತಿಯೊಬ್ಬನು ಇವರ ಬಳಿ ಬಂದು ಗಣಪತಿ ಮುನಿಗಳನ್ನು ತನ್ನ ಮನೆಗೆ ಬಂದು ಅಲ್ಲೆ ಅವರ ತಪಸ್ಸನ್ನಾಚರಿಸಲು ಎಲ್ಲ ಸೌಕರ್ಯವನ್ನು ನೀಡುವುದಾಗಿ ಆಹ್ವಾನಿಸಿದನು. ಆತನ ಹೆಸರು ಸುರೇಶ್ ಮಿತ್ರ. ಅವರು ಗಣಪತಿ ಮುನಿಗಳು ಮಂದಿರದಲ್ಲಿ ತಪಸ್ಸಿಗೆ ಕುಳಿತ ಸ್ವಲ್ಪ ಸಮಯದಲ್ಲೇ ಅವರೊಂದಿಗಿದ್ದ ಬಟ್ಟೆಯ ಗಂಟನ್ನು ತೆರೆದು ಅದರಲ್ಲಿದ್ದ ಹಣವನ್ನು ಯಾರೋ ಅಪಹರಿಸಿದ್ದನ್ನು ನೋಡಿ, ನಂತರ ಗಣಪತಿ ಮುನಿಗಳಿಗೆ ಅದನ್ನು ತಿಳಿಸಿ ಇಂತಹ ಅಪರಿಚಿತ ಸ್ಥಳವು ತಪಸ್ಸಿಗೆ ಸೂಕ್ತವಲ್ಲವೆಂದು ತಿಳಿಸಿದರು. ಗಣಪತಿ ಮುನಿಗಳು ಸುರೇಶ್ ಮಿತ್ರ ಅವರ ಸಲಹೆಯನ್ನು ಸ್ವೀಕರಿಸಿ ಅವರ ಮನೆಗೆ ಹೊರಟರು.

ಸುರೇಶ್ ಮಿತ್ರ ಅವರು ಗಣಪತಿ ಮುನಿಗಳನ್ನು ಪ್ರೀತಿಯಿಂದ ಸ್ವೀಕರಿಸಿಕೊಂಡರು. ಕೆಲವು ದಿನಗಳಲ್ಲಿ ಗಣಪತಿ ಮುನಿಗಳಿಗೆ ಸುರೇಶ್ ಮಿತ್ರ ಅವರು ತಾರಾ ಮಂತ್ರದಲ್ಲಿ ಸಿದ್ಧಿಯನ್ನು ಪಡೆದವರೆಂದು ತಿಳಿದು ಸಾಕ್ಷಾತ್ ದೇವಿಯೇ ಈ ಸಂದರ್ಭವನ್ನು ತನಗೊದಗಿಸಿರುವಳೆಂದು ಭಾವಿಸಿದರು. ಗಣಪತಿ ಮುನಿಗಳ ಕೋರಿಕೆಯ ಮೇರೆಗೆ ಮಿತ್ರ ಅವರು ತಾರಾ ಮಂತ್ರವನ್ನು ಬೋಧಿಸಲು ಒಪ್ಪಿದರು. ತಾರಾ ಮಂತ್ರವನ್ನು ಮಹಿಳೆಯೊಬ್ಬಳ ಮೂಲಕ ಮಾತ್ರ ಬೋಧಿಸಬೇಕು. ಹಾಗಾಗಿ ಮಿತ್ರ ಅವರು ಗಣಪತಿ ಮುನಿಗಳನ್ನು ಹತ್ತಿರದಲ್ಲಿದ್ದ ಒಂದು ಕೊಳದೆಡೆಗೆ ಕರೆದೊಯ್ದು ಮಹಿಳೆಯೊಬ್ಬಳನ್ನು ಮಾಧ್ಯಮವನ್ನಾಗಿ ಮಾಡಿ ತಾರಾ ಮಂತ್ರವನ್ನು ಬೋಧಿಸಿದರು.

ಗಣಪತಿ ಮುನಿಗಳು ಈ ಮಂತ್ರವನ್ನು ಸತತವಾಗಿ ಹತ್ತು ದಿವಗಳವರೆಗೂ ಪಠಿಸಿ ಅದರ ಮೇಲೆ ಪಾಂಡಿತ್ಯವನ್ನು ಸಾಧಿಸಿದರು. ಇದಾದ ನಂತರ ಗಣಪತಿ ಮುನಿಗಳು "ದಶ ಮಹಾವಿದ್ಯೆ"ಯ ಮೇಲೆ ಪ್ರಕರಣ ಗ್ರಂಥವನ್ನು ರಚಿಸಿದರು. ಅದರಲ್ಲಿ ತಾರಾ ವಿದ್ಯೆಯು ಒಂದು. ದೇವಿಯ ಪೂಜೆಯ ದಶ ಮಹಾ ವಿದ್ಯೆಗಳಲ್ಲಿ ತಾರಾ ವಿದ್ಯೆಯು ಎರಡನೆಯದು. ತಾರಾ ಎಂದರೆ ಪ್ರಣವ. ಈ ವಿದ್ಯೆಯ ಮೂಲಕ ಆರಾಧಿಸುವವರಿಗೆ ದೇವಿಯು ಪಶ್ಯಂತಿ ಶಕ್ತಿಯನ್ನು ನೀಡುವಳು. ಮಂತ್ರದಲ್ಲಿ ಓಂ ಅಕ್ಷರವು ಪುರುಷ ರೂಪವಾದರೆ ತಾರಾ ಪದವು ಸ್ತ್ರೀರೂಪ. ವಿದ್ಯಾಧಿದೇವತೆಯಾದ ಸರಸ್ವತಿಗೆ ತಾರಾ ಮತ್ತು ನೀಲಾ ಎಂಬ ಎರಡು ಹೆಸರುಗಳೂ ಇರುವುದು. "ಓಂ, ಹ್ರೀಂ, ಹ್ರೂಮ್, ಫಟ್", ಅಥವಾ "ಹ್ರೀಮ್, ಶ್ರೀಮ್, ಹ್ರೂಮ್" ಅಥವಾ ಬರೇ "ಓಂ" ಮಂತ್ರವನ್ನು ಆ ಮಂತ್ರದ ನಾದವು ಅದರ ಮೂಲವಾದ ಪ್ರಣವದೊಂದಿಗೆ ಐಕ್ಯವಾಗುವವರೆಗೂ ಪಠಿಸಬೇಕು. ಹೀಗಾದಾಗ ಮಂತ್ರ ಸಿದ್ಧಿ ಅಥವಾ ಜಪ ಸಿದ್ಧಿಯಾದಂತೆ.

ಗಣಪತಿ ಮುನಿಗಳು ಇಷ್ಟಕ್ಕೇ ನಿಲ್ಲಿಸದೇ ಅವರು ವೇದ ಪದ್ಧತಿಯಲ್ಲಿನ "ಉದ್ಗೀತ ವಿದ್ಯ" ಎಂಬುದನ್ನು ನೆನಪಿಸಿಕೊಂಡು ಅದನ್ನು ತನ್ನ "ವಿಶ್ವಮೀಮಾಂಸ" ಕೃತಿಯಲ್ಲಿ ಅಳವಡಿಸಿಕೊಂಡು ಎರಡೂ ವಿದ್ಯೆಗಳನ್ನು (ಉದ್ಗೀತ ವಿದ್ಯ ಮತ್ತು ತಾರಾ ವಿದ್ಯ) ಒಂದರಲ್ಲೊಂದಾಗಿ ಸೇರಿಸಿ ಅದಕ್ಕೆ ಈ ಕೆಳಗಿನ ಶ್ಲೋಕದ ಮೂಲಕ ತತ್ತೋಕ್ತಿಯನ್ನು ನೀಡಿದರು:

ಮೂಲೇ ಸ್ಥಿತ್ವಾ ಭೈರವ್ಯಾಖ್ಯಾಂ
ತಾರಾಂ ದೇವಿಮುದ್ಗೀಥೇನ
ಸೇವೇತಾರ್ಯೋ ವಿದಿತರಹಸ್ಯೋ
ಮಾತಂಗೀಂ ತಾಂ ಗುಣಗಾನೇನ ।

– ಉಮಾಸಹಸ್ರಮ್ (10–38–23)

"ಈ ಉಪಾಸನೆಯ ರಹಸ್ಯದ ತಿಳುವಳಿಕೆಯುಳ್ಳ ಆರ್ಯನು ಮೂಲಾಧಾರದಲ್ಲಿರುವ ತ್ರಿಪುರಭೈರವಿಯನ್ನು ಭಜಿಸಬೇಕು. ಎಲ್ಲ ನಾದಗಳಿಗೂ ಮೂಲಭೂತವಾಗಿರುವ ಕೇವಲವಾದ ಸ್ವರದಿಂದ "ಓಂ" ಎಂದು ಉಪಾಸಿಸಲ್ಪಡುವ ತಾರಾದೇವಿಯನ್ನು 'ಉದ್ಗೀಥ' ಮತ್ತು 'ಮಾತಂಗಿ' ಎಂದು ಸೇವಿಸಬೇಕು."

ಅನಂತರದ ದಿನಗಳಲ್ಲಿ ಗಣಪತಿ ಮುನಿಗಳು ತಾರಾ ಮಂತ್ರವನ್ನು ತನ್ನ ಪತ್ನಿಗೆ ಉಪದೇಶಿಸಿದರು. ಅವಳ ಮೂಲಕ ಅನೇಕರಿಗೆ ಉಪದೇಶಿಸಿ ದಕ್ಷಿಣ ಭಾರತದಲ್ಲಿ ತಾರಾವಿದ್ಯೆಯನ್ನು ಮೊತ್ತ ಮೊದಲ ಬಾರಿಗೆ ಗಣಪತಿ ಮುನಿಗಳೇ ಪ್ರಚಾರ ಮಾಡಿದರು.

೨೨

ಮಿಂಚಿನ ಮಾತೆ

ಮನ್ಯಂತೇ ಕೇಽಪಿ ಘನಂ ಪರ್ವತಮುಕ್ತಂ ನಿಗೂಢಯಾ ವಾಚಾ
ಪ್ರಾದುರ್ಭವತಿ ಗಭೀರಧ್ವನಿರವಿಷಹ್ಯಾ ಯತಃ ಶಕ್ತಿಃ ॥
– ಉಮಾಸಹಸ್ರಮ್ (1–1–20)

"ವೇದಗಳ ಅತೀಂದ್ರಿಯ ಭಾಷೆಯಲ್ಲಿ ಮಳೆತರುವ ಕಪ್ಪು ಮೋಡಗಳನ್ನು ಪರ್ವತ ಎಂದು ಬಣ್ಣಿಸಲಾಗಿದೆ. ಈ ಮೋಡಗಳಿಂದ ಉತ್ಪತ್ತಿಯಾಗುವ ಭಾರಿ ಶಬ್ದ ಅಥವಾ ಗುಡುಗು ಹಾಗೂ ಅಸಾಧಾರಣ ಶಕ್ತಿ, ವಿದ್ಯುತ್ ಶಕ್ತಿಯನ್ನು ಪರ್ವತದ ಪುತ್ರಿ, ಪಾರ್ವತಿಯೆಂದು ಗುರುತಿಸುವರು."

ಪಾರ್ವತಿಯನ್ನು ಪರ್ವತ ರಾಜನ ಮಗಳೆಂದು ಹೇಳುವರು ಹಾಗೂ ಈ ಪರ್ವತಗಳ ರಾಜನೇ ಹಿಮಾಲಯ ಪರ್ವತ ಶ್ರೇಣಿಗಳು. ಪಾರ್ವತಿಯು ಸಮಸ್ತ ವಿಶ್ವದ ಮಾತೆಯಾದರೆ ಅವಳು ಹೇಗೆ ಪರ್ವತ ರಾಜನ ಪುತ್ರಿ? ಆದ್ದರಿಂದ ಈ ಕಥೆಗೆ ಮತ್ಯಾವುದಾದರೂ ಗಹನವಾದ ಅರ್ಥವಿರಬೇಕು.

ಒರಿಸ್ಸಾದ ರೈಲು ಮಾರ್ಗದಲ್ಲಿ ಭುವನೇಶ್ವರ ಹಾಗೂ ಬಾಲೇಶ್ವರ ನಿಲ್ದಾಣಗಳ ನಡುವೆ, ಧನ–ಮಂಡಲ್ ಎಂಬ ರೈಲು ನಿಲ್ದಾಣವಿರುವುದು. ಅಲ್ಲಿಂದ 5 ಕಿ.ಮೀ ದೂರದಲ್ಲಿ ದಂತವನಿ ಎಂಬ ಎಸ್ಟೇಟ್ ಇರುವುದು. ಅಲ್ಲಿಯ ಜಮೀನ್ದಾರನು ಮಂದಸದ ರಾಜನಿಂದ ಗಣಪತಿ ಮುನಿಗಳ ಅಸಾಧಾರಣ ವಿದ್ವತ್ತು ಹಾಗೂ ಶಕ್ತಿಯ ಬಗ್ಗೆ ಕೇಳಿದ್ದನು. ಅವನು ಗಣಪತಿ ಮುನಿಗಳನ್ನು ಭೇಟಿಯಾಗಲು ಕಾಯುತ್ತಿದ್ದನು. ಜಮೀನ್ದಾರನು ತನ್ನ ಎಸ್ಟೇಟಿನಲ್ಲಿ ಒಂದು ವಿದ್ವಾಂಸರ ಸಭೆಯನ್ನು ಕರೆದು ಅದರಲ್ಲಿ ಭಾಗವಹಿಸಲು ಗಣಪತಿ ಮುನಿಗಳನ್ನೂ ಮಂದಸದ ರಾಜನ ಮುಖಾಂತರ ಆಹ್ವಾನಿಸಿದನು. ಗಣಪತಿ ಮುನಿಗಳು ತನ್ನ ಕಿರಿಯ ಸಹೋದರ ಶಿವರಾಮ ಶಾಸ್ತ್ರಿಯೊಂದಿಗೆ ದಂತವನಿ ಎಸ್ಟೇಟಿಗೆ ಹೋದರು. ಅಲ್ಲಿ ಅನೇಕ ವಿದ್ವಾಂಸರ ಸಭೆಯಲ್ಲಿ ತನ್ನ ಜ್ಞಾನ ಪ್ರದರ್ಶಿಸಿದರು. ಇದರಿಂದ ಜಮೀನ್ದಾರನಿಗೆ ಅಪಾರ ಆನಂದವಾಯಿತು. ಜಮೀನ್ದಾರನಿಂದ ಗೌರವ ಸ್ವೀಕರಿಸಿದ ನಂತರ ಸಂಜೆಗೆ ಜಮೀನ್ದಾರನು ಮಾಡಿಕೊಟ್ಟ ಎತ್ತಿನಗಾಡಿಯಲ್ಲಿ ಶಿವರಾಮ ಶಾಸ್ತ್ರಿಯೊಂದಿಗೆ ಐದು ಕಿಲೋ ಮೀಟರ್

ದೂರದಲ್ಲಿನ ಧನ-ಮಂಡಲ ರೈಲ್ವೇ ನಿಲ್ದಾಣದೆಡೆಗೆ ನಿಧಾನವಾಗಿ ಪ್ರಯಾಣವನ್ನು ಪ್ರಾರಂಭಿಸಿದರು. ಜಮೀನ್ದಾರನು ಎತ್ತಿನಗಾಡಿಯನ್ನು ನಡೆಸುವವನಿಗೆ ಅತಿಥಿಗಳನ್ನು ಸುರಕ್ಷಿತವಾಗಿ ರೈಲು ನಿಲ್ದಾಣಕ್ಕೆ ಕರೆದೊಯ್ಯುವಂತೆ ಹೇಳಿದನು. ಎತ್ತಿನ ಬಂಡಿಯು ದಂತವನ ಊರಾಚೆಗೆ ಬರುತ್ತಿದ್ದಂತೆ ಸಿಡಿಲು ಗುಡುಗುಗಳ ಸಹಿತ ಭಾರಿ ಮಳೆಯು ಇದ್ದಕ್ಕಿದ್ದಂತೆ ಪ್ರಾರಂಭವಾಯಿತು. ಈ ರೀತಿಯ ಕುಂಭ-ದ್ರೋಣ ಮಳೆಯಲ್ಲಿ, ಕತ್ತಲಿನಲ್ಲಿ ಮುಂದುವರೆಯುವುದೇ ಅಸಾಧ್ಯವಾಗಿ ಎತ್ತಿನ ಗಾಡಿಯಲ್ಲಿದ್ದವರೆಲ್ಲರೂ ನೀರಿನಲ್ಲಿ ಸಂಪೂರ್ಣವಾಗಿ ನೆನೆದರು. ಎತ್ತುಗಳಿಗೂ ಆ ಕಗ್ಗತ್ತಲಿನಲ್ಲಿ ದಾರಿಕಾಣದೆ ಮುಂದುವರೆಯಲು ಅಸಾಧ್ಯವಾಯಿತು. ಗಾಡಿಯನ್ನು ನಡೆಸುತ್ತಿದ್ದ ಸೇವಕನು ಮುಂದೆ ಯಾವ ಅಪಾಯ ಕಾದಿದೆಯೋ ಎಂದು ಸಂಪೂರ್ಣವಾಗಿ ಅಧೀರನಾದನು. ಆ ಸಂದರ್ಭದಲ್ಲಿ ಗಣಪತಿ ಮುನಿಗಳು ಉಮಾ ದೇವಿಯನ್ನು ಕುರಿತು ಕಣ್ಣುಗಳನ್ನು ಮುಚ್ಚಿ ಪ್ರಾರ್ಥಿಸತೊಡಗಿದರು. ಕ್ಷಣ ಮಾತ್ರದಲ್ಲಿ ಕಪ್ಪು ಮೋಡಗಳಿಂದ ಕಣ್ಣು ಕೋರೈಸುವ ಮಿಂಚು ಅವರೆದುರು ಬಡಿಯಿತು. ಅದರ ಪ್ರಭಾವದಿಂದ ಎತ್ತುಗಳ ಕಣ್ಣುಗಳು ಕ್ಷಣ ಮಾತ್ರ ಕುರುಡಾಯಿತು ಹಾಗೂ ಎತ್ತಿನ ಗಾಡಿ ನಡೆಸುತ್ತಿದ್ದ ಸೇವಕನಿಗೆ ಮಿಂಚಿನ ಬೆಳಕಿನಲ್ಲಿ ಮುಂದಿರುವ ಅಗಾಧವಾದ ಪ್ರಪಾತವು ಗೋಚರಿಸಿ ಅವನು ಗಾಡಿಯನ್ನು ಕೂಡಲೇ ನಿಲ್ಲಿಸಿ ಅಲ್ಲಿಂದ ನಿಧಾನವಾಗಿ ಮುಖ್ಯ ರಸ್ತೆಗೆ ಗಾಡಿಯನ್ನು ತಿರುಗಿಸಿದನು. ಹೀಗಾಗಿ ಕೋರೈಸುವ ಮಿಂಚು ಎಲ್ಲರನ್ನೂ ಪ್ರಾಣಾಪಾಯದಿಂದ ಪಾರುಮಾಡಿತು. ಅಲ್ಲಿಂದ ಅವರುಗಳು ರೈಲ್ವೆ ನಿಲ್ದಾಣವನ್ನು ತಲುಪುವವರೆಗೂ ಆಗಾಗ್ಗೆ ಮಿಂಚು ಬಂದು ಅವರಿಗೆ ಮಾರ್ಗವನ್ನು ತೋರಿಸುತ್ತಿತ್ತು. ಇಷ್ಟೆಲ್ಲದರ ಮಧ್ಯೆ ಗಣಪತಿ ಮುನಿಗಳು ಧ್ಯಾನದಿಂದ ಹೊರಬಂದಿರಲೇ ಇಲ್ಲ. ಅವರು ಮಾತೆ ಉಮಾದೇವಿಯ ಪ್ರಾರ್ಥನೆಯಲ್ಲೇ ಸಂಪೂರ್ಣವಾಗಿ ಮಗ್ನರಾಗಿದ್ದರು. ಹೀಗೆ ಮಾತೆ ಉಮಾದೇವಿಯ ಕರುಣೆಯಿಂದ ಅವಳ ಮಿಂಚಿನ ರೂಪದಲ್ಲಿ ಭಯಂಕರ ಅಪಾಯವು ದೂರಾಯಿತು.

ಪರ್ವತಶ್ಚ ಪುಲೋಮಾಚಯಃ ಸಜಲೋಯಂ ಘನಾಘನಃ
ಪಾರ್ವತೀತಿ ತಟಿದ್ದೇವೀಂ ಪೌಲೋಮೀತಿ ಚ ತಾಂ ವಿದುಃ ॥

"ಪರ್ವತ ಮತ್ತು ಪುಲೋಮ ಪದಗಳು ಮಳೆ-ತರುವ ಮೋಡಗಳನ್ನು ಅರ್ಥೈಸುತ್ತವೆ. ಆದ್ದರಿಂದ, ಈ ಮೋಡಗಳಿಂದ ಉದ್ಭವಿಸುವ ಮಿಂಚನ್ನು ಪಾರ್ವತಿ ಮತ್ತು ಪೌಲೋಮಿ ಎಂದು ಕರೆಯಲಾಗುವುದು."

ಶೈವಾನಾಂ ಭಾಷಯಾ ದೇವಿ ತ್ವಂ ತಟಿದ್ದೇವಿ ಪಾರ್ವತೀ
ಇಂದ್ರಾಣಾಂ ಭಾಷಯಾ ಮಾತಃ ಪೌಲೋಮಿ ತ್ವಮನಾಮಯೆ ॥

– ಪ್ರಚಂಡ ಚಂಡೀ ತ್ರಿಶತಿ (231, 232)

"ಹೇ ತಟಿತ್ ದೇವಿ! ಶೈವರು ನಿನ್ನನ್ನು ಪಾರ್ವತಿ ಎಂದೂ ಮತ್ತು ಇಂದ್ರನ ಆರಾಧಕರು ಪೌಲೋಮಿ ಎಂದೂ ಕರೆಯುತ್ತಾರೆ."

ಸಂಸ್ಕೃತದಲ್ಲಿ ಮೋಡಕ್ಕೆ 33 ಹೆಸರುಗಳಿವೆ. ಅದರಲ್ಲಿ ಹದಿಮೂರನೇ ಹೆಸರು "ಪರ್ವತ" ಎಂದು. ಈ ಮೋಡಗಳಿಂದ ಹೊರಬರುವ ಶಕ್ತಿಯೇ ಮಿಂಚು ಅಥವಾ ವಿದ್ಯುತ್ ಶಕ್ತಿ. ಈ ಶಕ್ತಿಯೇ ಆಕಾಶ, ಭೂಮಿ, ಗಾಳಿ, ನೀರು ಮತ್ತು ಎಲ್ಲ ಶಕ್ತಿಗಳು.

ಮಾತೆ ಪಾರ್ವತಿ ದೇವಿಯ ಜನನ ಹಾಗೂ ಕಲ್ಯಾಣವನ್ನು ಅದ್ದೂರಿಯಾಗಿ ಆಚರಿಸುವುದು ಭಾರತ ದೇಶದ ಸಂಪ್ರದಾಯಗಳಲ್ಲಿ ಅತಿಮುಖ್ಯವಾದದ್ದು. ಯಾವುದೇ ಸೃಷ್ಟಿಗೂ ಒಂದು ಆಕಾರವಿರಲೇಬೇಕು. ಆ ಆಕಾರವೇ "ತಟಿತ್" ಅಥವಾ ಮಿಂಚು. ವಿದ್ಯುತ್ ಶಕ್ತಿಯಲ್ಲಿ ಬೆಂಕಿಯು ಇರಲೇ ಬೇಕು. ಇದರಿಂದ ಹೊರಹೊಮ್ಮುವುದೇ ಶಬ್ದ. ಗಣಪತಿಯು ಶಬ್ದಗಳ ದೈವ. ಹೀಗಾಗಿ ಅವನು ಮಿಂಚಿನ ಅಥವಾ ವಿದ್ಯುತ್ ಶಕ್ತಿಯಿಂದ ಜನಿಸುವ ಶಬ್ದ ಬ್ರಹ್ಮ. ಹೀಗಾಗಿ ಅವನು "ವೈದ್ಯುತಾಗ್ನಿ". ಇವುಗಳೇ ಜಗನ್ಮಾತೆಯ ಹಾಗೂ ಅವಳ ಪುತ್ರ ಗಣೇಶನ ಅತೀಂದ್ರಿಯ ರೂಪಗಳು.

ಎತ್ತಿನ ಗಾಡಿಯು ರೈಲ್ವೆ ನಿಲ್ದಾಣವನ್ನು ತಲುಪಿ ಅಲ್ಲಿದ್ದ ರೈಲ್ವೆ ಲೆವೆಲ್ ಕ್ರಾಸಿಂಗ್ ಬಾಗಿಲು ತೆರೆದಿದ್ದರಿಂದ ಇನ್ನೇನು ಹಳಿಯನ್ನು ದಾಟಬೇಕೆನ್ನುವಾಗ ಇದ್ದಕ್ಕಿದ್ದಂತೆ ಅತಿ ದೊಡ್ಡದಾದ ಮಿಂಚಿನ ಬೆಳಕು ಬಂದು ಅದರ ಬೆಳಕಿನಲ್ಲಿ ಎತ್ತಿನ ಗಾಡಿಯನ್ನು ನಡೆಸುವವನಿಗೆ ತನ್ನ ಕಣ್ಣೆದುರಲ್ಲೇ ರಭಸದಿಂದ ಒಂದು ಗೂಡ್ಸ್ ರೈಲು ವೇಗವಾಗಿ ಗಾಡಿಯ ಕಡೆಗೇ ಬರುತ್ತಿತ್ತು. ಸರಿಯಾದ ಸಮಯದಲ್ಲಿ ಅವನು ಎತ್ತಿನ ಗಾಡಿಯನ್ನು ನಿಲ್ಲಿಸಿದನು. ಹೀಗಾಗಿ ಮತ್ತೊಂದು ಭೀಕರ ಅಪಘಾತವಾಗುವುದನ್ನು ತಪ್ಪಿಸಿದನು. ಎತ್ತಿನ ಗಾಡಿ ನಡೆಸುವವನು ಮಿಂಚಿನ ದೇವತೆಗೆ ತಮ್ಮ ಜೀವಗಳನ್ನು ಮತ್ತೊಮ್ಮೆ ಉಳಿಸಿದ್ದಕ್ಕೆ ವಂದಿಸಿದನು. ಕೊನೆಗೆ ಅವರು ರೈಲ್ವೆ ನಿಲ್ದಾಣಕ್ಕೆ ಬಂದ ಮೇಲೆ ಶಿವರಾಮನು ಗಣಪತಿ ಮುನಿಗಳನ್ನು ಧ್ಯಾನದಿಂದ ಎಬ್ಬಿಸಿದನು. ಅವರು ಟಿಕೆಟ್ಟನ್ನು ಖರೀದಿಸಿ ಶ್ರೀಕಾಕುಳಂಗೆ ಹೋಗುವ ರೈಲನ್ನು ಹತ್ತಿದರು.

ಮಾತೆಯ ಅನಂತ ರೂಪವನ್ನು ಅರಿಯಲು ನಾವು ಅಂತವನ್ನು ದಾಟಿ ಮಾತೆಯನ್ನು ಕೇವಲ ಪರ್ವತ ರಾಜಕುಮಾರಿಯನ್ನಾಗಿ ನೋಡದೆ ವಿಶ್ವಮಾತೆಯನ್ನಾಗಿ ಅರಿಯಬೇಕು. ನಮ್ಮ ದೃಷ್ಟಿಯು ವೈಯುಕ್ತಿಕದಿಂದ ಹೊರಬಂದು ವಿಸ್ತಾರವನ್ನು ಹೊಂದಿ ವಿಶ್ವದ ದೃಷ್ಟಿಯನ್ನು ಹೊಂದಬೇಕು. ಗಣಪತಿ ಮುನಿಗಳಿಗೆ ಇದುವರೆಗೂ ಮಾತೆಯನ್ನು ವೈಯುಕ್ತಿಕವಾಗಿ ಬಲ್ಲವರಾಗಿದ್ದು ಈ ಅನುಭವದಿಂದ ಅವಳ ವಿಶ್ವಾತ್ಮಕತೆಯನ್ನು ವಿದ್ಯುತ್ ಶಕ್ತಿಯ ಮೂಲಕ ಮಿಂಚಿನ ರೂಪವನ್ನು ಸಂಪೂರ್ಣವಾಗಿ ಮನಗಂಡು ಅವಳ ಬಗೆಗಿನ ಅಚಲವಾದ ವಿಶ್ವಾಸವು ಮತ್ತಷ್ಟು ಆಳವಾಯಿತು.

೨೩

ಕಾಂಚೀಪುರಮ್

ಕಾಂಚೀ ರಮಣ್ಯಾಃ ಕುರುತಾಂ ಗೃಹಸ್ಥೇ
ಕ್ವಾಣೈರ್ಮುದಂ ಕಾಮಪಿ ಕಿಂಕಿಣೀನಾಮ್
ಕಾಂಚೀ ಭುವಃ ಪುಣ್ಯಪುರೀ ಯತೀಂದ್ರ
ತ್ವಾಮಂಬಿಕಾ ನಾಮರವೈರ್ಧಿನೋತು ॥
– ಉಮಾಸಹಸ್ರಮ್ (7–25–10)

"ಗೃಹಸ್ಥನಾದ ಪುರುಷನಿಗೆ ತನ್ನ ಪತ್ನಿಯ ಒಡ್ಯಾಣವು ಕಿರುಘಂಟೆಗಳ ಧ್ವನಿಯಿಂದ ಸಂತೋಷವನ್ನುಂಟು ಮಾಡುತ್ತದೆ. ಸಂನ್ಯಾಸಿಯೇ! ಭೂಲೋಕದ ಸೊಂಟಪಟ್ಟಿಯಾಗಿರುವ ಪುಣ್ಯಸ್ಥಳವಾದ ಕಾಂಚೀಪುರವು "ಕಾಮಾಕ್ಷೀ" ಎಂಬ ಹೆಸರಿನ ನಾದದಿಂದ ನಿನ್ನನ್ನು ಸಂತೋಷಿಸಲಿ."

ತಟಿತ್ ದೇವಿಯನ್ನು ಮಿಂಚಿನ ರೂಪದಲ್ಲಿ ಅವಳ ದಯೆಯನ್ನರಿತು ಮತ್ತು ಅವಳ ಆಶೀರ್ವಾದವನ್ನು ಪಡೆದ ನಂತರದ ದಿನಗಳಲ್ಲಿ ಗಣಪತಿ ಮುನಿಗಳು ಸಂಪೂರ್ಣವಾಗಿ ಅಂತರ್ಮುಖಿಯಾಗಿದ್ದರು. ರೈಲುಪ್ರಯಾಣದಲ್ಲೂ ಅವರು ಸಂಪೂರ್ಣ ಧ್ಯಾನದಲ್ಲಿ ಮುಳುಗಿದ್ದರು. ರೈಲು ಶ್ರೀಕಾಕುಳಂ ನಿಲ್ದಾಣವನ್ನು ತಲುಪಿದಾಗ ಅವರ ಸಹೋದರ ಶಿವರಾಮನು ಅಲ್ಲೇ ಇಳಿಯಬೇಕೇ ಬೇಡವೇ ಎಂದು ಗಣಪತಿ ಮುನಿಗಳನ್ನು ಕೇಳಿದಾಗ ಧ್ಯಾನದಲ್ಲಿದ್ದ ಗಣಪತಿ ಮುನಿಗಳು ಕಷ್ಟಪಟ್ಟು ಕಣ್ತೆರೆದು ತಮ್ಮಲ್ಲಿದ್ದ ಹಣವು ಎಲ್ಲಿಯವರೆಗೆ ಕರೆದುಕೊಂಡು ಹೋಗುವುದೋ ಅಲ್ಲಿಯವರೆಗೆ ಹೋಗೋಣವೆಂದರು. ಶಿವರಾಮನು ತನ್ನಣ್ಣನ ಪರಿಸ್ಥಿತಿಯನ್ನರಿತು ವಿಜಯವಾಡ ನಿಲ್ದಾಣಕ್ಕೆ ಎರಡು ಟಿಕೆಟ್ ಖರೀದಿಸಿದನು. ಸಂಜೆಯ ಹೊತ್ತಿಗೆ ವಿಜಯವಾಡ ತಲುಪಿದರು. ರೈಲಿನಿಂದ ಇಳಿದು ಅಲ್ಲಿನ ಕೃಷ್ಣವೇಣಿ ನದಿಯಲ್ಲಿ ಸ್ನಾನ ಮುಗಿಸಿ ಕನಕದುರ್ಗ ದೇವಿಯನ್ನು ದರ್ಶನ ಮಾಡಿ ಅಲ್ಲೇ ಒಂದು ಛತ್ರದಲ್ಲಿ ಆ ದಿನ ರಾತ್ರೆ ತಂಗಿದ್ದು ಮಾರನೇ ದಿನ ಮತ್ತೊಂದು ರೈಲಿನಲ್ಲಿ ರೇಣಿಗುಂಟದೆಡೆಗೆ ಪಯಣಿಸಿದರು. ಅಲ್ಲಿಂದ ಅವರು ಕಾಂಚೀಪುರಮ್ ನಗರವನ್ನು ತಲುಪಿದರು.

ಈ ಪವಿತ್ರ ನಗರವನ್ನು ವಿಷ್ಣು ಮತ್ತು ಶಿವ ದೇವರುಗಳು ಹಂಚಿಕೊಂಡಿರುವರು. ನಗರದ ಒಂದು ತುದಿಯಲ್ಲಿ ವಿಷ್ಣುವನ್ನು ವರದರಾಜ ದೈವವನ್ನಾಗಿ ಪೂಜಿಸಿದರೆ ಮತ್ತೊಂದು

ಭಾಗದಲ್ಲಿ ಶಿವನನ್ನು ಏಕಾಂಬರನಾಥನ ರೂಪದಲ್ಲಿ ಪೂಜಿಸುವರು. ಶಿವನ ಪತ್ನಿಯನ
ಕಾಮಾಕ್ಷಿದೇವಿಯನ್ನಾಗಿ ಪೂಜಿಸುವರು.

ಕಾಂಚೀಪುರಮ್ ಪ್ರದೇಶವನ್ನು ಭೂಮಿಯ ಸೊಂಟಪಟ್ಟಿಯನ್ನಾಗಿ ಗುರುತಿಸುವ ಹಾಗೂ ಆ ಪಟ್ಟಿಯಲ್ಲಿ ಕಟ್ಟಿರುವ ಘಂಟೆಗಳಿಂದ ಉದ್ಭವವಾಗುವ ನಾದವು ಭಕ್ತರ ಆನಂದಸಾಗರದಲ್ಲಿ ಮುಳುಗಿಸುವುದು. ಶಂಕರ ಭಗವತ್ಪಾದರು ಸ್ಥಾಪಿಸಿರುವ ಶಂಕರಮಠ ಸುಪ್ರಸಿದ್ಧವಾಗಿರುವುದು.

ಗಣಪತಿ ಮುನಿಗಳು ಹಾಗೂ ಶಿವರಾಮರು ತಮ್ಮಲ್ಲಿದ್ದ ಉಳಿದ ಸ್ವಲ್ಪವೇ ಹಣದಿಂ ಬಾಳೆಹಣ್ಣನ್ನು ಖರೀದಿಸಿ ನಂತರ ನಗರ ಪ್ರದಕ್ಷಿಣೆಗೆ ಹೊರಟರು. ಆ ರಾತ್ರೆ ತಂಗ ಯಾವುದಾದರೂ ಮನೆಯು ಅನುಕೂಲವಾಗಿದ್ದರೂ ಅದನ್ನು ಹುಡುಕಲು ಶ್ರಮಪಡ ಮರದ ಕೆಳಗೆ ತಂಗಲು ಯೋಚಿಸಿದ್ದರು. ಒಂದು ರಸ್ತೆಯಲ್ಲಿ ಹೋಗುತ್ತಿದ್ದಾಗ ಮನೆಯೊಂ ಗೋಡೆಯಮೇಲೆ "ಜ್ಯೋತಿಷ್ಯ ಕೇಂದ್ರ" ಎಂಬ ಫಲಕವನ್ನು ನೋಡಿ, ಆ ಮನೆಯೊ ಪ್ರವೇಶಿಸಿ ತಮ್ಮ ಪರಿಚಯವನ್ನು ಮನೆಯ ಮಾಲೀಕ ಹಾಗೂ ಜ್ಯೋತಿಷಿ ನಾರಾಯ ಜ್ಯೋತಿಷ್ಕನಲ್ಲಿ ಮಾಡಿಕೊಂಡರು. ಗಣಪತಿ ಮುನಿಗಳು ಅವರೊಂದಿಗೆ ಜ್ಯೋತಿಷ ಬಗ್ಗೆ ಮಾತನಾಡುತ್ತಾ ಅವರ ಜಾತಕವನ್ನೂ ಪರೀಕ್ಷಿಸತೊಡಗಿದರು. ನಾರಾಯ ಜ್ಯೋತಿಷ್ಕರಿಗೆ ಗಣಪತಿ ಮುನಿಗಳಲ್ಲಿ ವಿಶೇಷವಾದ ಆಸಕ್ತಿ ಮೂಡಿ ಅವರನ್ನು ತ ಮನೆಯಲ್ಲೇ ಕೆಲವು ದಿನ ತಂಗುವಂತೆ ವಿನಂತಿಸಿಕೊಂಡು ಜ್ಯೋತಿಷ್ಯದಲ್ಲಿನ ರಹಸ್ಯಗಳ ಹೇಳಿಕೊಡಲು ಪ್ರಾರ್ಥಿಸಿದರು. ಇದರಿಂದಾಗಿ ಗಣಪತಿ ಮುನಿಗಳು ಹಾಗೂ ಶಿವರಾವ ಒಂದು ತಿಂಗಳು ಕಾಂಚೀಪುರಂನಲ್ಲಿ ಉಳಿಯಬೇಕಾಯಿತು. ಗಣಪತಿ ಮುನಿಗಳು ಹಾ ಹೊತ್ತಿನಲ್ಲಿ ನಾರಾಯಣ ಜ್ಯೋತಿಷ್ಕ ಹಾಗೂ ಶಿವರಾಮನಿಗೆ ಜ್ಯೋತಿಷ್ಯವನ್ನು ಕಲಿಸು ರಾತ್ರೆಹೊತ್ತು ಹತ್ತಿರದಲ್ಲೇ ಇದ್ದ ಕ್ಷೀರಾವತಿ ಮತ್ತು ವೇಗವತಿ ನದಿಗಳ ಮಧ್ಯದ ಒಂದು ಪಾಳುಬಿದ್ದ ಹನುಮಂತನ ಮಂದಿರದಲ್ಲಿ ತಪಸ್ಸನ್ನಾಚರಿಸತೊಡಗಿದರು.

ಒಂದು ದಿನ ಗಣಪತಿ ಮುನಿಗಳಿಗೆ ಅವರ ತಂದೆಯಿಂದ ಒಂದು ಪತ್ರ ಹಾಗೂ ಹಣವು ಬಂದಿತು. ಪತ್ರದಲ್ಲಿ ತಂದೆಯವರು ಇಬ್ಬರನ್ನೂ ಮನೆಗೆ ಬರಬೇಕೆಂದು ತಿಳಿಸಿದ್ದ ಗಣಪತಿ ಮುನಿಗಳು ಈ ವಿಷಯವನ್ನು ನಾರಾಯಣ ಜ್ಯೋತಿಷ್ಕರಿಗೆ ವಿವರಿಸಿ, ತಾ ಹೊರಡುವುದಾಗಿ ತಿಳಿಸಿದರು. ಜ್ಯೋತಿಷ್ಕರು "ನೀವು ನಿಮ್ಮ ಮನೆಗೆ ಹೋಗುವ ಮಾರ್ಗ ಅರುಣಾಚಲ ಎಂಬ ಪ್ರಸಿದ್ಧ ಪುಣ್ಯಕ್ಷೇತ್ರವಿರುವುದು. ಶಂಕರ ಭಗವಾನನು ಸ್ವಯಂ ಆಗಿ ಜ್ಯೋತಿರ್ಲಿಂಗ ರೂಪದಲ್ಲಿ ನೆಲೆಸಿರುವನು. ನಿಮ್ಮಂತಹ ತಪಸ್ವಿಗಳು ನೋಡ ಬೇಕಾದ ಕ್ಷೇತ್ರವು. ಅಲ್ಲಿಂದ ನೀವು ನಿಮ್ಮೂರಿಗೆ ಹೋಗಬಹುದು. ದಯವಿಟ್ಟು ಅರುಣಾ ಕ್ಷೇತ್ರಕ್ಕೆ ತಪ್ಪದೇ ಹೋಗಿ" ಎಂದರು.

ನಾರಾಯಣರ ಸಲಹೆಯು ಗಣಪತಿ ಮುನಿಗಳ ಹೃದಯಕ್ಕೆ ನೇರವಾಗಿ ತಟ್ಟಿತು. ಅರುಣಾಚಲ ಎಂಬ ಪದವನ್ನು ಕೇಳಿದೊಡನೆ ಗಣಪತಿ ಮುನಿಗಳಿಗೆ ಆ ಸ್ಥಳಕ್ಕೂ ಹಾಗೂ ತಮಗೂ ಜನ್ಮ ಜನ್ಮಾಂತರದ ಸಂಬಂಧವಿರುವ ಹಾಗೆ ರೋಮಾಂಚನವಾಯಿತು. ಕೆಲಕಾಲ ಅಲ್ಲೇ ಕಣ್ಣುಚ್ಚಿ ಧ್ಯಾನಾಸಕ್ತರಾಗಿ ನಂತರ ಕಣ್ತೆರೆದು "ಹೌದು. ಅರುಣಾಚಲಕ್ಕೆ ನಾನು ಹೋಗಲೇಬೇಕು" ಎಂದರು.

ಕಂಚಿಮಠದ ಪೀಠಾಧಿಪತಿಗಳಾದ ಶ್ರೀ ಚಂದ್ರಶೇಖರೇಂದ್ರ ಸರಸ್ವತಿಯವರಿಗೆ ಗಣಪತಿಯ ಮೇಲೆ ವಿಶೇಷವಾದ ಮಮತೆಯಿತ್ತು. ಗಣಪತಿ ಮುನಿಗಳನ್ನು ಅವರು ಒಂದು ಸಮಾರಂಭದಲ್ಲಿ ಗೌರವಿಸಿ ಕೆಲವು ಉಡುಗೊರೆಯನ್ನು ನೀಡಿ ಬೀಳ್ಕೊಟ್ಟರು.

ಒಮ್ಮೆ ಕಂಚಿಮಠದ ಆಚಾರ್ಯರು ಮದ್ರಾಸಿನ ರಸ್ತೆಯೊಂದರಲ್ಲಿ ನಡೆದುಹೋಗುತ್ತಿರುವಾಗ ಅವರಿಗೆ ಒಂದು ಹೆಣ್ಣು ಮಗುವು ಈ ಕೆಳಗಿನ ಶ್ಲೋಕವನ್ನು ರಾಗವಾಗಿ ಹೇಳುತ್ತಿರುವುದು ಕೇಳಿಸಿತು:

ಸೇವಕ ಪಾತಕ ಶಮನಂ ದೈವಂ
ಮಾನಸ ವಾಂಛಿತ ಫಲದಂ ದೈವಂ
ಸಜ್ಜನ ರಕ್ಷಣ ಚತುರಂ ದೈವಂ
ದುರ್ಜನ ಮರ್ದನ ಪುರುಷಂ ದೈವಂ ॥

"ಯಾರು ತನ್ನ ಸೇವಕನ ಪಾಪಗಳನ್ನು ನಾಶಮಾಡುವನೋ, ಆಸೆಗಳ ಫಲವನ್ನು ನೀಡುವನೋ, ಸಜ್ಜನರನ್ನು ರಕ್ಷಿಸುವುದರಲ್ಲಿ ನಿಸ್ಸೀಮನೋ ಮತ್ತು ದುರ್ಜನರನ್ನು ದಯೆಯಿಲ್ಲದೇ ನಾಶಮಾಡುವನೋ ಅವನಿಗೆ ನಾವು ನಮಸ್ಕರಿಸುವೆವು",

ಆಚಾರ್ಯರಿಗೆ ಈ ಶ್ಲೋಕವನ್ನು ರಚಿಸಿದವರು ಗಣಪತಿ ಮುನಿಗಳೆಂದರಿವಾಯಿತು. ಅವರು ಆ ಮಗುವನ್ನು ತಮ್ಮ ಮಠಕ್ಕೆ ಬಂದು ಆ ಪದ್ಯವನ್ನು ಹೇಳಲು ಕರೆದುಕೊಂಡು ಹೋದರು.

ಭಾಗ - ೨

೧

ಅರುಣಾಚಲ

ತಂತ್ರವಿದೋ ನವಯೋನಿ ತು ಚಕ್ರಂ
ಶೋಣಧರಾಧರರೂಪಮುಶಂತಿ
ಅರ್ಧಮಮುಷ್ಯ ವಪುರ್ಮದನಾರೇ–
ರರ್ಧನಗೇಂದ್ರಸುತೇ ತವ ಗಾತ್ರಂ ॥

– ಉಮಾಸಹಸ್ರಮ್ (7–26–14)

"ತಂತ್ರಶಾಸ್ತ್ರದಲ್ಲಿ ಪ್ರಸಿದ್ಧವಾದ ತ್ರಿಪುರ ಎಂಬುದು ಶ್ರೀಚಕ್ರವಾಗಿದೆ. ಆ ಚಕ್ರವೇ ಅರುಣಾಚಲವಾಗಿದೆ ಎನ್ನುತ್ತಾರೆ. ಅಲ್ಲೂ ಕೂಡಾ ಶಿವರಾದ ನಿಮ್ಮಿಬ್ಬರ ಶರೀರವು ಅವಿಭಕ್ತವಾಗಿದೆ. ಪತಿಯಾದ ಶಿವನು ಅರ್ಧ, ನೀನು ಅರ್ಧ ಎಂದು ಹೇಳಬೇಕು. ಸಂಪೂರ್ಣ ಗಿರಿಯು ಶಿವಶರೀರವಲ್ಲ. ಸಂಪೂರ್ಣವಾದ ಶ್ರೀಚಕ್ರವೂ ಅವನ ಶರೀರವಲ್ಲ. ಆದ್ದರಿಂದಲೇ ಹೀಗೆ ಹೇಳುತ್ತಾರೆ:

ಚತುರ್ಭಿಃ ಶಿವಚಕ್ರೈಶ್ಚ ಪಂಚಭಿಃ
ನವ ಯೋಣ್ಯಾತ್ಮಕಂ ಚಕ್ರಂ ಶ್ರೀಚಕ್ರಂ ಶಿವಯೋರ್ವಪುಃ ॥

ಆದ್ದರಿಂದ ಸಂಪೂರ್ಣ ಅರುಣಾಚಲವು ಶಿವಶರೀರವೆಂಬುದು ಸತ್ಯವಲ್ಲ. ಅಲ್ಲಿ ದೇವಿಯ ಶರೀರದ ಅರ್ಧ ಭಾಗವೂ ಇದೆ ಎಂದರ್ಥ."

ತಿರುವಣ್ಣಾಮಲೈ ತೀರ್ಥಕ್ಷೇತ್ರವು ಮದ್ರಾಸಿನಿಂದ 200 ಕಿ.ಮೀ. ದೂರದಲ್ಲಿರುವುದು. ಇದು ಬಹು ಮುಖ್ಯವಾದ ಶಿವ ಕ್ಷೇತ್ರ. ಪುರಾಣದ ಪ್ರಕಾರ, ಅರುಣಾಚಲೇಶ್ವರನು ಮೂರು ರೂಪಗಳಲ್ಲಿ ಅಭಿವ್ಯಕ್ತಿಗೊಂಡಿದ್ದಾನೆ. ಅದರ ಒಂದು ರೂಪವೇ ಸ್ಥಿರವಾಗಿರುವ ಅರುಣಾಚಲ ಪರ್ವತ. ರಮಣ ಮಹರ್ಷಿಗಳು ಇದನ್ನು ಪ್ರಕಾಶಮಾನವಾದ ಜ್ಞಾನ ಜ್ಯೋತಿ ಎಂದು ವರ್ಣಿಸಿದ್ದಾರೆ. ಇದು ಶಿವ ಮತ್ತು ಶಕ್ತಿಯರ ಏಕ ರೂಪ. ಈ ಪರ್ವತಕ್ಕೆ ಶ್ರೀಚಕ್ರದಲ್ಲಿರುವಂತೆ ಒಂಬತ್ತು ಮೂಲೆಗಳಿವೆ ಹಾಗೂ ಗಣಪತಿ ಮುನಿಗಳು ವಿಚಾರಿಸಿರುವಂತೆ ಈ ಪರ್ವತವನ್ನು ಅದ್ವೈತಿಗಳು ಹಾಗೂ ಶಾಕ್ತ ಪಂಥದವರೂ ಪೂಜಿಸುತ್ತಾರೆ. ದೇವಾನುದೇವತೆಗಳು, ಸಿದ್ಧರು ಈ ಪರ್ವತಕ್ಕೆ ಪ್ರದಕ್ಷಿಣೆಯನ್ನು ಸದಾ ಮಾಡುತ್ತಿರುವರೆಂಬ ನಂಬಿಕೆ.

ಈ ಪರ್ವತವು ರಮಣ ಮಹರ್ಷಿಗಳ ವಾಸಸ್ಥಾನ, ಹಾಗಾಗಿ ಇದನ್ನು ಪವಿತ್ರ ಪ್ರದೇಶವೆಂದು ಪರಿಗಣಿಸುತ್ತಾರೆ. ಈ ಪರ್ವತದ ಬಗ್ಗೆ ಗಣಪತಿ ಮುನಿಗಳು ಈ ರೀತಿ ಹೇಳುತ್ತಾರೆ:

ತದ್ಭಾಗಧೇಯಮಸಮಾನಮನೇಕಮೌನಿ
ವಾಸಾರ್ಜಿತಂ ಕ್ಷಿತಿಭೃತಃ ಖಲು ಲೋಹಿತಸ್ಯ
ಅಂಗೀಚಕಾರ ಭಗವಾನ್ ರಮಣೋ ಮಹರ್ಷಿಃ
ಅನ್ಯೇಷು ಸತ್ಸು ಯದಿಮಂ ಬಹುಷು ಸ್ಥಲೇಷು ॥

"ಅರುಣಾಚಲವು ಅಸಾಮಾನ್ಯವಾದ ವೈಭವವನ್ನು ಹೊಂದಿದೆ ಹಾಗೂ ಇಲ್ಲಿ ಅನೇಕ ಋಷಿಗಳು ನೆಲೆಸಿದ್ದಾರೆ. ಹಾಗಾಗಿ ಶ್ರೀ ಭಗವಾನ್ ರಮಣಮಹರ್ಷಿಗಳು ಅನೇಕ ಪವಿತ್ರ ಕ್ಷೇತ್ರಗಳಿದ್ದರೂ, ಈ ಪರ್ವತವನ್ನೇ ತಮ್ಮ ವಾಸಸ್ಥಳವನ್ನಾಗಿ ಆರಿಸಿಕೊಂಡರು."

ಪರ್ವತದ ಒಂದು ಸುತ್ತು 14 ಕಿ.ಮೀ ಇರುವುದು. ಸಿದ್ಧರು, ಯೋಗಿಗಳು ಯಾರ ದೃಷ್ಟಿಗೂ ಬೀಳದೆ ಈ ಪರ್ವತದಲ್ಲಿ ವಾಸಿಸುತ್ತಿರುವರು.

ಅರುಣಾಚಲೇಶ್ವರನ ಎರಡನೇ ರೂಪವು ಪರ್ವತದ ಕೆಳಗೆ ಪೂರ್ವದಿಕ್ಕಿನಲ್ಲಿರುವ ದೇವಸ್ಥಾನದಲ್ಲಿರುವ ಲಿಂಗರೂಪಿ. ಇದು ಶಿವ ಮತ್ತು ಶಕ್ತಿಯರ ಏಕರೂಪ (ಅರ್ಧನಾರೀಶ್ವರ ರೂಪ):

ಅಸ್ತು ನಗೇಶ್ವರನಂದಿನಿ ಲಿಂಗಂ ತೈಜಸಮೇತದಿಹಾಪಿ ತವಾಂಶಃ
ವೀತಗುಣಸ್ಯ ವಿನಾ ತವ ಯೋಗಂ ದೇವಿ ಶಿವಸ್ಯ ಕುತಃ ಖಲು ತೇಜಃ ॥

– ಉಮಾಸಹಸ್ರಮ್ (7–26–15)

"ಹೇ, ಮಾತೆ! ಅರುಣಾಚಲನನ್ನು ಅಗ್ನಿ ಲಿಂಗವೆಂದು ಕರೆಯಬಹುದು. (ಪಂಚಭೂತಗಳನ್ನು ಪೂಜಿಸುವ ಕ್ಷೇತ್ರಗಳಲ್ಲಿ ಒಂದು). ಆದರೆ ನೀನು ಈ ಲಿಂಗದ ಒಂದು ಭಾಗ ಹಾಗೂ ಪರ್ವತದ ಭಾಗವೂ ಹೌದು. ನಿನ್ನೊಂದಿಗೆ ಇರದೇ ನಿರ್ಗುಣಾಕಾರನಾದ ಶಿವನು ಜ್ಯೋತಿಯನ್ನು ಹೊಂದಲು ಸಾಧ್ಯವೇ?"

ಪುರಾಣದಲ್ಲಿ ವಿವರಿಸಿರುವಂತೆ ಬ್ರಹ್ಮ ಮತ್ತು ವಿಷ್ಣುವು ಪ್ರಪಂಚದಲ್ಲಿ ಶ್ರೇಷ್ಠರಾರೆಂದು ವಾದಿಸುತ್ತಿದ್ದಾಗ ಬೆಂಕಿಯ ಕಂಭವು ಅವರೆದುರಿಗೆ ಕಂಡುಬಂದು ಅದರ (ಅರುಣಾಚಲನ) ಶಿರ ಮತ್ತು ಪಾದವನ್ನು ಕಂಡುಹಿಡಿಯಲು ಅಸಮರ್ಥರಾದರು.

ಅರುಣಾಚಲೇಶ್ವರನ ಮೂರನೇ ರೂಪವು ಸಿದ್ಧರ ರೂಪ. ಶಂಕರ ಭಗವಾನನು ಅರುಣಗಿರಿ ಯೋಗಿಯ ರೂಪದಲ್ಲಿ ಈ ಪ್ರದೇಶದೆಲ್ಲೆಡೆಗೆ ಹೋಗಿ ತನ್ನ ಭಕ್ತರಿಗೆ ನೆರವನ್ನು ನೀಡುವನು.

ತಿರುವಣ್ಣಾಮಲೈ ಕ್ಷೇತ್ರದಲ್ಲಿ ಕಾರ್ತಿಕ ಮಾಸದಲ್ಲಿ ಬ್ರಹ್ಮೋತ್ಸವವು ಜರುಗುವುದು. ಕೃತ್ತಿಕಾ ನಕ್ಷತ್ರವು ಉದಯಿಸಿದ ರಾತ್ರೆಯಂದು ಅರುಣಾಚಲ ಬೆಟ್ಟದ ಮೇಲೆ ಅಗಾಧವಾದ ಜ್ಯೋತಿಯನ್ನು ಬೆಳಗಿಸುವರು. ಭಗವಾನ್ ರಮಣ ಮಹರ್ಷಿಗಳು ಈ ಜ್ಯೋತಿಯ ದರ್ಶನದ ವಿಶೇಷತೆಯನ್ನು ಭಕ್ತರಿಗೆ ಈ ಮೂಲಕ ವಿವರಿಸಿರುವರು:

"ನಾನೇ ಶರೀರ" ಎಂಬ ಆಲೋಚನೆಯಿಂದ ಹೊರಬಂದು, ಮನಸ್ಸನ್ನು ಹೃದಯದೊಡನೆ ಐಕ್ಯವಾಗಿಸಿ ಆತ್ಮವು ಅದ್ವಯಂತಿ ಎಂಬುದನ್ನರಿತು ಮತ್ತು ಸಮಸ್ತ ಜ್ಯೋತಿಯಾಗಿ, ವಿಶ್ವದ ಮಧ್ಯದಲ್ಲಿರುವ ಅಣ್ಣಾಮಲೈ ಜ್ಯೋತಿಯ ದರ್ಶನವನ್ನು ನೋಡುವುದೇ ನಿಜವಾದ ವೈಶಿಷ್ಟ್ಯ."

ಮುಸ್ಲಿಮ್ ಭಕ್ತನೊಬ್ಬನೊಡನೆ ರಮಣಮಹರ್ಷಿಗಳ ಈ ಕೆಳಗಿನ ಸಂವಾದವು ಅರುಣಾಚಲದ ಮಹಿಮೆಯ ಬಗ್ಗೆ ಮತ್ತಷ್ಟು ಬೆಳಕನ್ನು ಚೆಲ್ಲುವುದು:

ಡಾ.ಸೈಯ್ಯದ್ ಎಂಬ ಮುಸ್ಲಿಮ್ ಭಕ್ತನು ಭಗವಾನರನ್ನು:

ಡಾ.ಸೈಯ್ಯದ್: ನಾನು ಪಂಚ ಸ್ತೋತ್ರಗಳನ್ನು ಓದುತ್ತಿರುವೆ. ಅದರಲ್ಲಿ ನೀವು ಸ್ತೋತ್ರವನ್ನು ಅರುಣಾಚಲನಿಗೆ ಸಂಬೋಧಿಸುತ್ತೀರಿ. ನೀವು ಅದ್ವೈತಿಗಳು. ಹಾಗಿದ್ದಾಗ ನೀವು ದೇವರನ್ನು ಬೇರೆಯಾಗಿ ಹೇಗೆ ಸಂಬೋಧಿಸುವಿರಿ?

ಮಹರ್ಷಿಗಳು: ಭಕ್ತ, ಭಗವಂತ ಹಾಗೂ ಸ್ತೋತ್ರವೆಲ್ಲವೂ ನಾನೇ.

ಡಾ.ಸೈಯ್ಯದ್: ಆದರೆ ನೀವು ಭಗವಂತನಿಗೆ ಸಂಬೋಧಿಸುವಿರಿ. ನೀವು ಅರುಣಾಚಲ ಪರ್ವತವನ್ನು ದೇವರೆಂದು ಪರಿಗಣಿಸುವಿರಿ.

ಮಹರ್ಷಿಗಳು: ನೀವು ಆತ್ಮವನ್ನು ಶರೀರದೊಂದಿಗೆ ಗುರುತಿಸುವಿರಿ. ಹಾಗಿದ್ದಲ್ಲಿ ಭಕ್ತನು ಆತ್ಮವನ್ನು ಅರುಣಾಚಲದೊಂದಿಗೆ ಏಕೆ ಗುರುತಿಸಬಾರದು?

ಡಾ.ಸೈಯ್ಯದ್: ಅರುಣಾಚಲವು ನಾನೇ (ಆತ್ಮ)ಆದಲ್ಲಿ ಅನೇಕ ಪರ್ವತಗಳಲ್ಲಿ ಇದನ್ನೇ ಏಕೆ ವಿಶೇಷವಾಗಿ ಪರಿಗಣಿಸಲಾಗಿದೆ? ದೇವರು ಸರ್ವಾಂತರ್ಯಾಮಿ. ಅವನನ್ನು ಅರುಣಾಚಲ ಎಂದೇ ಏಕೆ ಗುರುತಿಸುವಿರಿ?

ಮಹರ್ಷಿಗಳು: ಯಾವ ಆಕರ್ಷಣೆಯು ನಿಮ್ಮನ್ನು ಅಲಹಾಬಾದಿನಿಂದ ಇಲ್ಲಿಗೆ ಬರಲು ಪ್ರೇರೇಪಿಸಿತು? ಸುತ್ತ ಮುತ್ತಲಿನ ಅನೇಕ ಮಂದಿಯನ್ನು ಇಲ್ಲಿಗೆ ಬರಲು ಯಾವ ಆಕರ್ಷಣೆ ಇರಬಹುದು?

ಡಾ.ಸೈಯ್ಯದ್: ಶ್ರೀ ಭಗವಾನ್.

ಮಹರ್ಷಿಗಳು: ನಾನು ಹೇಗೆ ಇಲ್ಲಿಗೆ ಆಕರ್ಷಿತನಾದೆ? ಅರುಣಾಚಲನಿಂದಾಗಿ. ಈ

ಶಕ್ತಿಯನ್ನು ಅಲ್ಲಗಳೆಯುವಂತಿಲ್ಲ. ಮತ್ತೆ ಅರುಣಾಚಲನು ನಮ್ಮೊಳಗೆ ಮತ್ತು ನಮ್ಮಿಂದ ಹೊರಗಲ್ಲ. ಅರುಣಾಚಲನೆ ಆತ್ಮ (ನಾನು).

ಸಭಿಕರೊಬ್ಬರ ಹೇಳಿಕೆ: ಅರುಣಾಚಲದ 30 ಮೈಲಿ ಸುತ್ತಮುತ್ತಲಿನ ಪ್ರದೇಶದಲ್ಲಿ ಜೀವಿಸಿದರೆ ಅಥವಾ ಸತ್ತರೆ ಅವರಿಗೆ ಮುಕ್ತಿ ದೊರಕುವುದೆಂದು ಹೇಳುವರು. ಕೇವಲ ಜ್ಞಾನದಿಂದ ಮಾತ್ರ ಮುಕ್ತಿ ದೊರಕುವುದೆಂದೂ ಪರಿಗಣಿಸುವರು. ವೇದಾಂತ ವಿಜ್ಞಾನವನ್ನು ಅರಿಯುವುದು ಕಷ್ಟವೆಂದು ಪುರಾಣವು ಹೇಳುತ್ತದೆ. ಹಾಗಾಗಿ ಮುಕ್ತಿಯು ದೊರಕುವುದು ಕಷ್ಟ. ಆದರೆ ಅರುಣಾಚಲದ ಸುತ್ತ ಮುತ್ತ ಜೀವಿಸಿದರೆ ಅಥವಾ ಸತ್ತರೆ ಸುಲಭವಾಗಿ ಮುಕ್ತಿದೊರಕುವುದೆನ್ನುತ್ತಾರೆ. ಅದು ಹೇಗೆ?

ಮಹರ್ಷಿಗಳು: ಶಿವ ಹೇಳುವನು, "ನನ್ನ ಆಜ್ಞೆಯಂತೆ". ಯಾರು ಇಲ್ಲಿ ವಾಸಿಸುವರೋ ಅವರಿಗೆ ಯಾವುದೇ ಆರಂಭ ದೀಕ್ಷೆಗಳ ಅಗತ್ಯವಿಲ್ಲ. ಆದರೆ ಕೇವಲ ಅಷ್ಟರಮಟ್ಟಿಗೆ ಶಿವನ ಆಜ್ಞೆ.

ಡಾ.ಸೈಯ್ಯದ್: ಪುರಾಣದಲ್ಲಿ ಇಲ್ಲಿ ಯಾರು ಜನಿಸುವರೋ ಅವರು ಶಿವಗಣಗಳ ಅನುಯಾಯಿಗಳು ಅಂದರೆ ದೆವ್ವಗಳು, ಪಿಶಾಚಿಗಳು, ಬೇರ್ಪಡಿಸಲಾದ ಶರೀರವುಳ್ಳವರು ಇತ್ಯಾದಿ ಎಂದು ಹೇಳುತ್ತದೆ.

ಮಹರ್ಷಿಗಳು: ಬೇರೆ ಕ್ಷೇತ್ರಗಳಿಗೂ ಇದೇ ರೀತಿಯಾಗಿ ಹೇಳಲಾಗಿದೆ. ಉದಾ: ತಿರುವರೂರ್, ಚಿದಂಬರಂ.

ಡಾ.ಸೈಯ್ಯದ್: ಕೇವಲ ಇಲ್ಲಿನ ಜನನ ಅಥವಾ ಮರಣವು ಹೇಗೆ ಮುಕ್ತಿಯನ್ನು ನೀಡುವುದು? ಇದು ಅರ್ಥಮಾಡಿಕೊಳ್ಳಲು ಕಷ್ಟ.

ಮಹರ್ಷಿಗಳು:

ದರ್ಶನಾದಭ್ರ ಸದಸಿ ಜನನಾತ್ಕಮಲಾಲಯೇ
ಕಾಶ್ಯಂತು ಮರಣಾನ್ಮುಕ್ತಿಃ ಸ್ಮರಣಾದರುಣಾಚಲೇ ॥

"ಚಿದಂಬರಂ ಕ್ಷೇತ್ರವನ್ನು ನೋಡಿದರೆ, ತಿರುವರೂರಿನಲ್ಲಿ ಜನಿಸಿದರೆ, ವಾರಣಾಸಿಯಲ್ಲಿ ಮರಣಿಸದರೆ ಅಥವಾ ಕೇವಲ ಅರುಣಾಚಲವನ್ನು ಸ್ಮರಿಸಿದರೆ ಸಾಕು ಮುಕ್ತಿಯನ್ನು ಪಡೆಯುವುದು ಖಚಿತ."

ಜರಿನನಾತ್ ಕಮಲಾಲಯೇ ಎಂದರೆ "ಕಮಲಾಲಯದಲ್ಲಿ ಜನಿಸುವುದು." ಏನಿದು? ಅದೇ ಹೃದಯ.

ಅದೇ ರೀತಿ, ಅಭ್ರಸದಸಿ – ಜ್ಞಾನ ಪೀಠದಲ್ಲಿ.

[illegible]

[illegible]
[illegible]

[illegible]
[illegible]

೨

ಹಿರಣ್ಯಗರ್ಭ

ಜಿಹ್ವಾ ತು ವೇದಿಸ್ತವ ತೋಯಪೂತಾ
ಲೋಕಪ್ರಸಂಗ ಸ್ತವ ತತ್ರ ಧೂಮಃ
ಜ್ವಾಲಾ ಜಗನ್ನಾಥಕಥಾ ಪವಿತ್ರಾ
ಚೇತೋಘೃತಂ ಜುಹ್ವತಿ ಯತ್ರ ಸಂತಃ ॥

– ಹೇರಂಭೋಪಾಸನಮ್

"ಓ, ಹೇರಂಬ! ಜ್ಞಾನಿಗಳು ನಿನ್ನನ್ನು ಯಜ್ಞಪುರುಷನೆಂದು ಧ್ಯಾನಿಸುತ್ತಾರೆ. ಅವರು ಪರಿಶುದ್ಧವಾದ ಧ್ವನಿಯನ್ನು ಮೂಲವಸ್ತುವನ್ನಾಗಿ, ನೀರನ್ನು ವೇದಿಯಾಗಿ, ಪ್ರಾಪಂಚಿಕ ಆಸೆಗಳ ಬೀಜವನ್ನೇ ಧೂಮವನ್ನಾಗಿ, ಶಿವ ಕಥೆಗಳನ್ನೇ ಬೆಂಕಿಯ ನಾಲಗೆಯನ್ನಾಗಿ ಮತ್ತು ತಮ್ಮ ಮನಸ್ಸನ್ನೇ ತುಪ್ಪವನ್ನಾಗಿ ಮಾಡಿಕೊಂಡು ಯಜ್ಞವನ್ನು ಮಾಡುವರು. ಅದೇ ಆತ್ಮ ದರ್ಶನದ ಯಜ್ಞ."

ಶಿವನ ಕ್ರಿಯಾತ್ಮಕ ಅಂಶವೇ ಮಹಾ ಮಾಯ. ಅವಳು ಶಿವನಲ್ಲಿ ಐಕ್ಯವಾಗಿ ಬೆಳಕಿನಂತೆ ಪ್ರಕಾಶಿಸುತ್ತಾಳೆ. ಅವಳನ್ನೇ ಅರುಣಾಚಲದಲ್ಲಿ ಅಪಿತ ಕುಚಂಬ ಎಂದು ಪೂಜಿಸಲಾಗುವುದು. ಅಪಿತ ಕುಚಂಬ ಎಂದರೆ "ಕುಡಿಯದೇ ಇರುವ ಎದೆಯಹಾಲನ್ನುಳ್ಳ ಮಾತೆ" ಎಂದು. ತಾಯಿಯು ತನ್ನ ಮಗುವಿಗೆ ತನ್ನ ಎದೆಯ ಹಾಲನ್ನು ಕುಡಿಸುವಳು ಹಾಗೂ ಆ ಮಗುವು ಅದರಿಂದ ಬೆಳೆಯುವುದು. ಇದು ಪ್ರಕೃತಿ ಮಾತೆಯ ಪೋಷಣೆಯ ಅಂಶ ಹಾಗೂ ಇದನ್ನು "ಅನ್ನ ಶಕ್ತಿ" ಎಂದು ಕರೆಯುವರು. ಅಪಿತ ಕುಚುಂಬಳು ಈ ರೀತಿಯ ಅನ್ನವನ್ನು (ಆಹಾರ) ಕೊಡುವುದಿಲ್ಲ, ಬದಲಾಗಿ ಅವಳು ತನ್ನ ಭಕ್ತರಿಗೆ ಜ್ಞಾನಾಮೃತವನ್ನು ಉಣಿಸುವಳು, ಹಾಗಾಗಿ ಅವಳನ್ನು ಅಪಿತ ಕುಚಂಬ ಎಂದು ಕರೆಯಲಾಗುವುದು.

ದೈವೀ ಮಾತಾ ಪಿತೃಗಳಾದ ಶಿವ-ಪಾರ್ವತಿಯರ ಕಿರಿಯ ಮಗ ಸ್ಕಂದ. ಅವನು ಹೃದಯ ವಿದ್ಯೆಯಲ್ಲಿ ನಿಪುಣ. ಅವನು ಸದಾ ಆತ್ಮ ಜ್ಞಾನದಲ್ಲೇ ಮುಳುಗಿದ್ದು ಅದನ್ನು ಮೌನದ ಮೂಲಕ ಪಸರಿಸುತ್ತಾನೆ. ಈ ಮಾರ್ಗವು ಮಾತಿನ ಮೂಲಕ ಜ್ಞಾನ ಪ್ರಸಾರಕ್ಕಿಂತ ಅತ್ಯಂತ ಉತ್ತಮವಾದದ್ದು.

ಈ ದೈವೀ ಮಾತಾ–ಪಿತೃಗಳ ಹಿರಿಯ ಮಗನೇ ಹೇರಂಭ ಅಥವಾ ಗಣಪತಿ. ಅವನ ಕಾರ್ಯವೆಂದರೆ ಮಾತಿನ ಮೂಲಕ ಜ್ಞಾನಪ್ರಸಾರ. ನಿಃಶಬ್ದ ವಾತಾವರಣದಲ್ಲಿ ಅವನು ಹೇಗೆ ಕಾರ್ಯ ಸಾಧಿಸಲು ಸಾಧ್ಯ? ಪ್ರತಿಯೊಬ್ಬರೂ ಮೌನದ ಮೂಲಕವೇ ಜ್ಞಾನಪ್ರಸಾರ ಮಾಡಲು ತೊಡಗಿದರೆ ಜ್ಞಾನವನ್ನು ಮಾತಿನ ಮೂಲಕ ಪ್ರಸಾರ ಮಾಡುವವರು ಯಾರು? ಈಶ್ವರನು ಮೌನಿಯಾದರೂ, ಅವನು ಪ್ರಣವ ಸ್ವರೂಪನೂ ಹೌದು, ಅಂದರೆ, "ಓಂ" ಪದ. ಹೇರಂಭನು ಈ ಓಂ ಕಾರ ಪದದ ಶಕ್ತಿಯನ್ನು ಅರುಣಾಚಲ ಪರ್ವತದೆಲ್ಲೆಡೆ ಪ್ರತಿಧ್ವನಿಸುವಂತೆ ಮಾಡುವ ಉದಾತ್ತ ಹಾಗೂ ಅನಾಕ್ರಮಣೀಯ ಶಕ್ತಿಯನ್ನು ಪಡೆದುಕೊಂಡಿರುವನು.

ಸಂಜೆಯ ಹೊತ್ತಿಗೆ ಗಣಪತಿ ಮುನಿಗಳು ಮತ್ತು ಶಿವರಾಮರು ಕಾಂಚೀಪುರಂನಿಂದ ಅರುಣಾಚಲಕ್ಕೆ ಬಂದರು. ದಾಕ್ಷಿಣಾತ್ಯರ ಪದ್ಧತಿಯೇನೆಂದರೆ ಅವರು ಯಾವುದೇ ಪುಣ್ಯಕ್ಷೇತ್ರ ತಲುಪಿದ ಕೂಡಲೇ ಸ್ನಾನ ಮಾಡುವುದಕ್ಕೂ ಮುಂಚಿತವಾಗಿ ಮಂದಿರಕ್ಕೆ ಹೋಗಿ ದೇವರ ದರ್ಶನವನ್ನು ತೆಗೆದುಕೊಳ್ಳುವುದು. ಈ ದರ್ಶನವನ್ನು "ಧೂಳೀ ದರ್ಶನ" ಎನ್ನುತ್ತಾರೆ. ಗಣಪತಿ ಮುನಿಗಳು ಮತ್ತು ಅವರ ಸಹೋದರರು ನೇರವಾಗಿ ದೇವಸ್ಥಾನಕ್ಕೆ ಹೋಗಿ ಅಲ್ಲೇ ರಾತ್ರೆ 8 ಘಂಟೆಯವರೆಗೂ ಉಳಿದರು. ಊರು ಪ್ರಶಾಂತವಾಗಿದ್ದು ರಸ್ತೆಯಲ್ಲಿ ಕಡಿಮೆ ಸಂಚಾರವಿತ್ತು. ಆ ದಿನ ಏಕಾದಶಿಯಾದ್ದರಿಂದ ಅವರು ಒಂದೆರಡು ಮನೆಗಳಲ್ಲಿ ಭಿಕ್ಷೆ ಬೇಡಿದರಾದರೂ, ಅದರಲ್ಲಿ ವಿಫಲರಾದರೇಕೆಂದರೆ, ಆ ದಿನ ರಾತ್ರೆ ಯಾರ ಮನೆಯಲ್ಲೂ ಅಡಿಗೆಯನ್ನು ಮಾಡಿರಲಿಲ್ಲ.

ಗಣಪತಿ ಮುನಿಗಳು ಮತ್ತು ಶಿವರಾಮರಿಗೆ ವಿಪರೀತ ಆಯಾಸ ಹಾಗೂ ಹಸಿವಾಗಿತ್ತು. ಅವರು ಯಾವುದೋ ಒಂದು ಮನೆಯ ಮುಂಭಾಗದ ಜಗಲಿಯನ್ನರಸಿ ಅಲ್ಲೇ ಮಲಗಲು ಯೋಚಿಸಿದರು. ಅದೇ ರೀತಿ ಅವರು ಒಂದು ಮನೆಯ ಮುಂದಿನ ಜಗಲಿಯ ಮೇಲೆ ಮಲಗಲು ಸಿದ್ಧತೆ ಮಾಡಿಕೊಳ್ಳುತ್ತಿರುವಾಗ ಇದ್ದಕ್ಕಿದ್ದಂತೆ ಒಬ್ಬ ಪ್ರಕಾಶಮಾನ ಮುಖವುಳ್ಳ ಬ್ರಾಹ್ಮಣನು ಎಲ್ಲಿಂದಲೋ ಇವರ ಮುಂದೆ ಬಂದು, ಆ ದಿನ ಏಕಾದಶಿಯಾದ್ದರಿಂದ ಅವನ ವ್ರತವು ಪೂರ್ಣವಾಗಬೇಕಾದರೆ ಯಾರಾದರೂ ಇಬ್ಬರು ಬ್ರಾಹ್ಮಣರಿಗೆ ರುಚಿಯಾದ ಆಹಾರವನ್ನು ಕೂಡಲೇ ನೀಡಬೇಕೆಂದು ಅವರನ್ನು ತನ್ನ ಮನೆಗೆ ಬಂದು ಆಹಾರವನ್ನು ಸ್ವೀಕರಿಸಬೇಕೆಂದು ವಿನಂತಿಸಿಕೊಂಡನು. ಆಗ ರಾತ್ರೆ 10 ಘಂಟೆಯಾಗಿತ್ತು. ಆ ಸಮಯದಲ್ಲಿ ಏಕಾದಶಿ, ದ್ವಾದಶಿ ತಿಥಿಗಳ ಬಗ್ಗೆ ಯೋಚಿಸುವುದು ಮೂರ್ಖತನವಾಗುವುದು. ಅಲ್ಲದೇ ಸಹೋದರರಿಬ್ಬರೂ ಅತಿಯಾಗಿ ಹಸಿದಿದ್ದರಿಂದ ಅವರು ಆ ಬ್ರಾಹ್ಮಣನ ಆತಿಥ್ಯವನ್ನು ಸ್ವೀಕರಿಸಿ ಅವನ ಮನೆಗೆ ಹೋಗಿ ಪುಷ್ಕಳವಾಗಿ ಉಂಡು ಮತ್ತೆ ಅದೇ ಜಗಲಿಗೆ ಬಂದು ನಿದ್ರಿಸಿದರು. ಆ ಬ್ರಾಹ್ಮಣನು ಅವರಿಗೆ ವೀಳೆಯದೆಲೆ ಹಾಗೂ ಅಡಿಕೆಯನ್ನು ನೀಡಿದ್ದನು. ಸಹೋದರರು ವೀಳೆಯದೆಲೆಯ ತೊಟ್ಟುಗಳನ್ನು ಜಗಲಿಯ ಮೇಲೆ ಇಟ್ಟು ವೀಳೆಯದೆಲೆಯನ್ನು ಜಗಿದು ಮಲಗಿದ್ದರು. ಬೆಳಗಾದ ಮೇಲೆ ಅವರು ಆ ಬ್ರಾಹ್ಮಣನಿಗೆ

ಹಿಂದಿನ ರಾತ್ರೆ ಪುಷ್ಕಳವಾದ ಭೋಜನವನ್ನು ನೀಡಿದ್ದಕ್ಕೆ ಧನ್ಯವಾದವನ್ನು ತಿಳಿಸಲು ಅವನ ಮನೆಯೆಡೆಗೆ ನೋಡಿದಾಗ ಅವರಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ! ಅದು ಮನೆಯೇ ಆಗಿರಲಿಲ್ಲ. ಬದಲಾಗಿ ಅದು ವಿನಾಯಕನ ಮಂದಿರವಾಗಿತ್ತು! ಗಣಪತಿ ಮುನಿಗಳು ಜಗಲಿಯ ಮೇಲೆ ಇಟ್ಟಿದ್ದ ವೀಳೆಯದೆಲೆಯ ತೊಟ್ಟುಗಳನ್ನೂ ಗಮನಿಸಿದರು. ಅಲ್ಲದೇ ಅವರಿಗೆ ಬ್ರಾಹ್ಮಣನಾಗಲೀ ಅವನ ಪತ್ನಿಯಾಗಲೀ ಕಾಣಿಸಲಿಲ್ಲ ಹಾಗೂ ತಾವು ಮಲಗಿದ್ದ ಜಾಗವು ದೇವಸ್ಥಾನದ ಹೊರಭಾಗವಾಗಿತ್ತು. ಆಗ ಗಣಪತಿ ಮುನಿಗಳಿಗೆ ಅರ್ಥವಾಗಿದ್ದು ಇದು ಪವಾಡವೆಂದು.

ಗಣಪತಿ ಮುನಿಗಳು ಶಿವರಾಮನನ್ನು ಎಬ್ಬಿಸಿ, "ನೋಡು, ದೇವರ ಕರುಣೆಯು ಎಷ್ಟು ಸುಂದರವಾದದ್ದು. ನಿನ್ನೆ ರಾತ್ರೆ ನಮಗೆ ಭೋಜನವನ್ನು ನೀಡಿದ ಬ್ರಾಹ್ಮಣನ ಹೆಸರನ್ನೂ ನಾವು ಕೇಳಲಿಲ್ಲ. ಅಲ್ಲಿ ನೋಡು ಹೇರಂಬನ ವಿಗ್ರಹ. ಅವನು ನಮ್ಮೆಡೆಗೆ ಮುಗುಳುನಗೆಯಿಂದ ನೋಡುತ್ತಿರುವನು."

ಮಾಹಾತ್ಮ್ಯಂ ನನು ವಕ್ತುಂ ಕಶಶಕ್ತಃ ಪುರುಷಸ್ತೇ
ಹಸ್ತೀಂದ್ರಾನನ ಭಾಗ್ಯಂ ಸರ್ವೇಷಾಂ ತವ ಹಸ್ತೇ ॥

"ಹೇ ಗಣೇಶ ದೇವನೆ! ನಿನ್ನ ಮಹಿಮೆಯನ್ನು ಯಾರು ಬಣ್ಣಿಸಲು ಸಾಧ್ಯ! ಎಲ್ಲರ ಅಭ್ಯುದಯವೂ ನಿನ್ನ ಕೈಯಲ್ಲಿರುವುದು."

ಗಣಪತಿ ಮುನಿಗಳು; ಶಿವರಾಮರು ಗಣೇಶನಿಗೆ ಭಕ್ತಿಯಿಂದ ವಂದಿಸಿದರು. ಗಣೇಶನಾದರೊ ಇವರೆಡೆಗೆ ಆಶೀರ್ವದಿಸುವಂತೆ ಕಂಡನು.

೩

ಭಕ್ತಿ ಮತ್ತು ಅನುಗ್ರಹ

ಭಾರತಭೂವಲಯೇತ್ರ ವಿಶಾಲೇ
ಸಂತ್ವನಘಾನಿ ಬಹೂನಿ ಗೃಹಾಣಿ
ಆಸ್ಯವಿಗೀತಸುಧಾಕರಬಿಂಬಾ
ಶೋಣಗಿರೌ ರಮತೇತ್ರ ಮದಂಬಾ ॥

– ಉಮಾಸಹಸ್ರಮ್ (7–26–6)

"ಭಾರತ ಭೂಮಿಯ ಮೇಲೆ ಅನೇಕ ಕಳಂಕರಹಿತ ಭವನಗಳಿರಬಹುದು. ಆದರೆ, ಹೇ ಮಾತೆ! ಚಂದ್ರನ ಪ್ರಭೆಯನ್ನು ತಿರಸ್ಕರಿಸುವ ಕಾಂತಿಯುತ ಮುಖವುಳ್ಳ ನೀನು ಈ ಅರುಣಾಚಲವನ್ನು ನಿನ್ನ ವಾಸಸ್ಥಳವನ್ನಾಗಿ ಸ್ವೀಕರಿಸಿರುವೆ."

ಗಣಪತಿ ಮುನಿಗಳ ಹೃದಯ ದೇವತೆಯಾದ ಉಮಾ ದೇವಿಯು ಭುವನೇಶ್ವರದಲ್ಲಿ ಗಣಪತಿ ಮುನಿಗೆ ಅಮೃತವನ್ನು ನೀಡುವುದರ ಮೂಲಕ ಹರಸಿರುವಳು. ಗಣಪತಿ ಮುನಿಗಳು ಉಮಾ ಹೆಸರನ್ನು "ಉ" = ಶಿವ ಮತ್ತು "ಮ"= ಶಿವನನ್ನು ಅಳೆಯುವ ಶಕ್ತಿಯ ಶಕ್ತಿ ಎಂಬುದಾಗಿ ಅರ್ಥೈಸಿರುವರು. ಅವರು ದೇವಿಯನ್ನು ನಾಮ ರೂಪಗಳ ಹೊರತಾದ ಶಕ್ತಿಯೆಂದು ವರ್ಣಿಸಿರುವರು. ಈ ಉಮಾ ದೇವತೆಯೇ ಅರುಣಾಚಲದಲ್ಲಿ ಅಭಿವ್ಯಕ್ತವಾಗಿರುವ "ಅಪಿತ ಕುಚಂಬಾ". ಈ ಮಹಾನ್ ಶಕ್ತಿಯು ಗಣಪತಿಯನ್ನು ಬೇರೆ ರೂಪಗಳಲ್ಲೂ ಹರಸಿರುವಳು. ಆದರೆ ಅವಳು ಅಪಿತ ಕುಚಂಬಳಾಗಿ ಹರಸಿರುವುದು ಬೇರೆಯದೇ ಆದ ರೀತಿಯಲ್ಲಿ. ಅವಳನ್ನು ಕುರಿತು ಗಣಪತಿ ಮುನಿಗಳು ರಚಿಸಿರುವ ಅನೇಕ ಸ್ತೋತ್ರಗಳು ಇದಕ್ಕೆ ಸಾಕ್ಷಿಯಾಗಿವೆ.

ವಿನಾಯಕನಿಂದ ರಾತ್ರೆಯ ಭೋಜನದ ಮೂಲಕ ಕೊಡಲ್ಪಟ್ಟ ಪ್ರಸಾದವನ್ನು ಸ್ವೀಕರಿಸಿದ ನಂತರ ಮಾರನೇ ದಿನ ಗಣಪತಿ ಸಹೋದರರು ಛತ್ರವೊಂದರಲ್ಲಿ ತಮ್ಮ ನೆಲೆಯನ್ನು ಕಂಡುಕೊಂಡರು. ಮೂರು ದಿನಗಳ ಮಟ್ಟಿಗೆ ಊಟ, ತಿಂಡಿ ಹಾಗೂ ವಾಸ್ತವ್ಯದ ಬಗ್ಗೆ ಸಮಸ್ಯೆ ಇರಲಿಲ್ಲ. ಗಣಪತಿ ಮುನಿಗಳು ಈ ಸಮಯದಲ್ಲಿ ಮಾತೆ ಅಪಿತ ಕುಚಂಬಳ ಆರಾಧನೆಯಲ್ಲಿ ತೊಡಗಿದ್ದರು. ಮಾತೆಯು ಗಣಪತಿ ಮುನಿಗಳಿಗೆ ವಿವಿಧ ರೂಪಗಳಲ್ಲಿ

ದರ್ಶನವನ್ನು ನೀಡುತ್ತಿದ್ದು ಭಕ್ತಿಯ ಉನ್ಮಾದಾವಸ್ಥೆಯಲ್ಲಿ ಗಣಪತಿ ಮುನಿಗಳು ಸ್ತೋತ್ರಗಳನ್ನು ರಚಿಸತೊಡಗಿದರು. ಮಂದಿರದೊಳಗಿನ ಮಾತೆಯ ರೂಪವನ್ನು ಈ ರೀತಿಯಾಗಿ ಹೊಗಳಿದರು:

ಶಿಲ್ಪವಿದಃ ಪ್ರತಿಮಾಂ ಪ್ರವಿಶಂತೀ ಸ್ವಲ್ಪವಿದಾಂ ತರಣಾಯ ಚಕಾಸ್ತಿ
ಶೋಣಧರಾಭೃತಿ ಸಂಪ್ರತಿ ಲಬ್ಧಾ ಹಂತ ಚಿರಾದಿಯಮೇವ ಮದಂಬಾ ॥

"ಕಡೆದ ವಿಗ್ರಹದೊಳಗೆ ಪ್ರವೇಶಿಸಿದ ದೈವೀ ಮಾತೆಯು ತನ್ನ ಕರುಣಾಪೂರಿತ ದೃಷ್ಟಿಯಿಂದ ಅತಿಸ್ವಲ್ಪ ಬುದ್ಧಿಯುಳ್ಳವರನ್ನೂ ಹರಸುವಳು. ಅವಳು ಅರುಣಾಚಲದಲ್ಲಿ ತನ್ನ ದರ್ಶನದಿಂದ ನನ್ನನ್ನು ಹರಸಿದಳು."

ಸ್ಥಾಪಿತ ಮೂರ್ತಿರಿಯಂ ತವ ನಮ್ಯಾ ಪೂಜಯಿತುಂ ಜಗದೀಶ್ವರಿ ರಮ್ಯಾ
ಶೋಣನಗಾರ್ಧ ಮಿದಂ ತವ ರೂಪಮ್ ಕೀರ್ತಯಿತುಂ ನಗಜೇ ಧುತಪಾಪಮ್ ॥

"ವಿಶ್ವಮಾತೆಯೇ! ನೀನು ಪೂಜಿಸಲ್ಪಡುವ ನಿನ್ನ ಶಿಲ್ಪದ ರೂಪವೂ ಪೂಜೆಗೆ ಅರ್ಹವಾಗುವಂತೆ ಅತ್ಯಂತ ಸುಂದರವಾದದ್ದು. ನಿನ್ನ ರೂಪವೂ ಕೂಡ ಅರುಣಗಿರಿಯ ಅರ್ಧದಷ್ಟಿದ್ದು ಅದನ್ನು ಹೊಗಳಿದಾಗ ನಿನ್ನ ಭಕ್ತರ ಎಲ್ಲ ಪಾಪಗಳನ್ನೂ ನಿವಾರಿಸುತ್ತದೆ."

ವೇದಗಳು ಶಿವನ ಅಶ್ವಗಳು. ಉಪನಿಷತ್ತುಗಳು ವೇದಗಳ ಸಾರ. ಅವು ಆತ್ಮದ ಬಗ್ಗೆ ಸಂಪೂರ್ಣ ಜ್ಞಾನವನ್ನು ನೀಡುವುದು. ಆದರೆ ಅರುಣಾಚಲದ ದೈವೀ ದಂಪತಿಗಳು ಈ ಜೀವನದ ರಹಸ್ಯ ಮತ್ತು ಇನ್ನೂ ಹೆಚ್ಚಿನ ಜ್ಞಾನವನ್ನು ಕರುಣಿಸುವರು. ಅದನ್ನು ವರ್ಣಿಸಲಾಗುವುದಿಲ್ಲ, ಬದಲಾಗಿ ಅನುಭವಿಸಿಯೇ ತೀರಬೇಕು. ಅಪಿತ ಕುಚಂಬ ದೇವಿಯು ಗಣಪತಿ ಮುನಿಗಳಿಗೆ ಈ ಜ್ಞಾನವನ್ನು ಆಶೀರ್ವಾದದ ಮೂಲಕ ನೀಡಿದಳು.

ವೇದತುರಂಗವಿಲೋಚನಭಾಗ್ಯಂ ವೇದಶಿರೋನಿಚಯ್ಯೆರಪಿ ಮೃಗ್ಯಂ
ಶೋಕವಿದಾರಿ ಸುಧಾಕಿರಣಾಸ್ಯಂ ಶೋಣಗಿರೌ ಸಮಲೋಕಿ ರಹಸ್ಯಮ್ ॥

"ನನ್ನ ತೀವ್ರವಾದ ಅದೃಷ್ಟದಿಂದ ನನಗೆ ಅರುಣಾಚಲದಲ್ಲಿ ಮಾತೆಯ ದರ್ಶನವಾಯಿತು. ಅವಳು ವೇದಗಳನ್ನು ಕುದುರೆಗಳನ್ನಾಗಿ ಹೊಂದಿರುವ ಶಿವನ ಕಣ್ಮಣಿ. ಅವನ ಚಂದ್ರವದನದಿಂದ ಹೊರಸೂಸುವ ಬೆಳಕು ಕತ್ತಲನ್ನು ನಿವಾರಿಸುವುದು. ವೇದಗಳಿಂದಲೂ ಅವನನ್ನು ಅರಿಯಲಸಾಧ್ಯ."

"ಭಾಗ್ಯಮ್" ಪದವು ಅರ್ಹತೆಗಳ ಫಲವನ್ನು ಸೂಚಿಸುವುದು ಮತ್ತು "ಮೃಗ್ಯಮ್" ಪದವು ಅದನ್ನು ಹುಡುಕುವುದು ಎಂದು ಸೂಚಿಸುವುದು. ಜೀವನದ ರಹಸ್ಯವೇ ಮಾತೆಯ ರೂಪ. ಪೂರ್ತಿ ಶ್ಲೋಕದ ಅರ್ಥವೆಂದರೆ ಯೋಗಿ ಗಣಪತಿ ಮುನಿಗಳಿಗೆ ವೈಭವಯುತವಾದ ದೈವೀ ಮಾತೆಯ ದರ್ಶನದಿಂದ ಅದೃಷ್ಟವುಂಟಾಗಿದೆ ಎಂಬುದಾಗಿ.

ನಿಜವಾದ ತಪಸ್ವಿಗಳು ತಮಗಾಗಿ ಏನನ್ನೂ ಬಯಸುವುದಿಲ್ಲ. ಅವರ ಏಕಮೇವ ಆಸೆಯೇನೆಂದರೆ ಪ್ರಪಂಚದ ಒಳಿತು ಹಾಗೂ ಧರ್ಮ ರಕ್ಷಣೆ. ದೈವೀ ಮಾತೆಯ ಮಂದಹಾಸದಲ್ಲಿ ಜ್ಞಾನವನ್ನು ಕರುಣಿಸುವ ಶಕ್ತಿ ಇದೆಯೆಂದು ಗಣಪತಿ ಮುನಿಗಳಿಗೆ ಅರಿವಾಯಿತು. ಆದ್ದರಿಂದ ಅವರು ಭಾರತದ ವಿದ್ವಾಂಸರನ್ನು ಉಳಿಸುವಂತೆ ಪ್ರಾರ್ಥಿಸಿದರು.

ಆಗಮವಿನ್ಮತಿ ಕೈರವಣೀನಾಂ ಬೋಧ ಮಜಸ್ರ ಮಸೌ ವಿದಧಾನಃ
ಪಾತು ಮಹೇಶವಧೂ ವದನಾಂಶೋೀ ಹಾಸಶಶೀ ಸಕಲಾನಿ ಕಲಾನಿ ॥

"ವೈಭವದಿಂದ ಪ್ರಕಾಶಿಸುವ ಮಹೇಶ್ವರಿಯ ಶೀತಲ ಚಂದ್ರನಂತಹ ಮಂದಹಾಸವು ಜ್ಞಾನಿಗಳ ಹೃದಯಕಮಲಗಳನ್ನು ಬ್ರಹ್ಮನ ಬಗೆಗಿನ ಜ್ಞಾನದಿಂದ ತುಂಬಿ ಭಾರತದ ನಿವಾಸಿಗಳನ್ನು ಉಳಿಸಲಿ."

ಆಯತಲೋಚನಚುಂಬಿತಕರ್ಣಾ ದಾನಯಶೋಜಿತ ತೋಯದಕರ್ಣಾ
ಶೋಣನಗೇಶಮನಃ ಪ್ರಿಯವರ್ಣಾ ನಾಶಯತಾಜ್ಜಗದಾರ್ತಿ ಮಪರ್ಣಾ ॥

"ಮಾತೆ ಅಪರ್ಣಾಳ ಕಣ್ಣುಗಳು ಕಿವಿಗಳನ್ನು ಬಹುತೇಕವಾಗಿ ತಲುಪುವ, ಮಹಾಭಾರತದ ಕರ್ಣನಿಗಿಂತ ಹೆಚ್ಚಾಗಿ ವರಗಳ ವರ್ಷಧಾರೆಯನ್ನೇ ಹರಿಸುವ, ಮತ್ತು ಶಿವನನ್ನು ತನ್ನ ಅಪರಿಮಿತ ಸೌಂದರ್ಯದಿಂದ ಸಂತೋಷಪಡಿಸುವ ದೇವಿಯು ಜಗತ್ತಿನ ದುಃಖಗಳನ್ನು ನಾಶಗೊಳಿಸಲಿ."

ಇದೇ ರೀತಿಯ ಅನೇಕ ಸ್ತೋತ್ರಗಳನ್ನು ಗಣಪತಿ ಮುನಿಗಳು ರಚಿಸಿರುವರು.

ಶಿವರಾಮನು ತನ್ನ ಸಹೋದರನಿಗೆ ಛತ್ರದಲ್ಲಿರುವ ಮೂರು ದಿನಗಳು ಮುಗಿದವೆಂದು ಹಾಗಾಗಿ ಬೇರೆ ಕಡೆ ಉಳಿದುಕೊಳ್ಳಲು ಬದಲಿ ವ್ಯವಸ್ಥೆಯನ್ನು ಮಾಡಬೇಕೆಂದು ವಿವರಿಸಿದನು.

೪

ಹರ ಸಹಸ್ರ ಮಾಲಾ

ಅರುಣಾಚಲರೂಪೇಣ ಪರಿಣಾಮ ಮುಪಾಗತಂ
ಜ್ಯೋತಿರ್ಮಯಂ ಪರಬ್ರಹ್ಮ ಜ್ಞಾನಾಯ ಮಮ ಕಲ್ಪತಾಂ ॥
- ಹರಸಹಸ್ರಮ್

"ಅರುಣಾಚಲನೆಂದು ಅಭಿವ್ಯಕ್ತಿಗೊಂಡ ಜ್ಯೋತಿರ್ಮಯ ಪರಬ್ರಹ್ಮನು ಜ್ಞಾನವಿತ್ತು ನನ್ನನ್ನು ಹರಸಲಿ."

ಗಣಪತಿ ಸಹೋದರರು ಛತ್ರವನ್ನು ಖಾಲಿ ಮಾಡಿದರು. ಎಲ್ಲಿ ಉಳಿದುಕೊಳ್ಳುವುದೆಂಬುದರ ಬಗ್ಗೆ ಅಷ್ಟು ಚಿಂತೆ ಇರಲಿಲ್ಲ. ಆದರೆ ಸಮಸ್ಯೆ ಎಂದರೆ ಹಸಿವಿನದ್ದು. ಅವರು ಕೆಲವು ದಿನ ಮಧ್ಯಾಹ್ನದ ಊಟದ ಸಮಯದಲ್ಲಿ ಯಾರ ಮನೆಯ ಮುಂದೋ ಭಿಕ್ಷೆ ಬೇಡಬಹುದು. ಆದರೆ ರಾತ್ರೆ ಹೊತ್ತು ಉಪವಾಸವಿರಬೇಕಿತ್ತು. ಗಣಪತಿಗೆ ಇದು ಅಭ್ಯಾಸವಿದ್ದರೂ, ಶಿವರಾಮನಿಗೆ ಇದು ಕಷ್ಟವಾಗುತ್ತಿತ್ತು. ಅವರು ಮನೆಯಿಂದ ಹೊರಬಂದು ಅನೇಕ ತಿಂಗಳುಗಳಾಗಿದ್ದರಿಂದ, ಶಿವರಾಮನು ಗಣಪತಿಗೆ ಮನೆಗೆ ಹೋಗಬಹುದೆಂದೂ, ಅಲ್ಲದೇ ತಂದೆಯವರು ತಮ್ಮ ಬರುವಿಗಾಗಿ ಕಾಯುತ್ತಿರುವರೆಂದು ಸೂಚಿಸಿದನು. ಆದರೆ ಗಣಪತಿ ಮುನಿಗಳಿಗೆ ಅರುಣಾಚಲವನ್ನು ಬಿಡುವುದಕ್ಕೆ ಮನಸ್ಸಿರಲಿಲ್ಲ. ಮಾತೆ ಅಪಿತಳು ಗಣಪತಿ ಮುನಿಗಳಿಗೆ ಆಗಾಗ್ಗೆ ದರ್ಶನವನ್ನು ನೀಡುತ್ತಿದ್ದಳು, ಹಾಗಾಗಿ ಗಣಪತಿ ಮುನಿಗಳು ಈ ಅದೃಷ್ಟವನ್ನು ಕಳೆದುಕೊಳ್ಳಲು ಇಷ್ಟವಿರಲಿಲ್ಲ. ಅವರು ಶಿವರಾಮನಿಗೆ, "ಯಾವುದೋ ಅದೃಶ್ಯ ಶಕ್ತಿಯು ನಮ್ಮನ್ನು ಇಲ್ಲಿಗೆ ಕರೆತಂದಿದೆ ಹಾಗೂ ಅದು ನಮ್ಮನ್ನು ಬಿಡುವ ಸೂಚನೆ ಇಲ್ಲ. ನಿನಗೆ ಒಪ್ಪಿಗೆಯಾದಲ್ಲಿ ನೀನೊಬ್ಬನೇ ಮನೆಗೆ ಹಿಂದಿರುಗು" ಎಂದರು.

ಇದಕ್ಕೆ ಶಿವರಾಮನು ಪ್ರತಿಭಟಿಸಿ, "ನಿನ್ನನ್ನು ಬಿಟ್ಟು ನಾನೊಬ್ಬನೇ ಹೇಗೆ ಹಿಂದಿರುಗಲಿ? ಮನೆಯವರು ನನ್ನನ್ನು ಹೇಗೆ ನಿನ್ನನ್ನು ಬಿಟ್ಟು ಬಂದೆ ಎಂದು ಕೇಳಿದರೆ ಏನೆಂದು ಉತ್ತರಿಸಲಿ? ಅಲ್ಲದೇ ನಿನ್ನ ಪತ್ನಿಯು ನಿನಗಾಗಿ ಕಾಯುತ್ತಿರುವಳೆಂದು ನಿನಗೂ ಚೆನ್ನಾಗಿ ತಿಳಿದಿದೆ".

ಗಣಪತಿ ಮುನಿಗಳಿಗೆ ಅರುಣಾಚಲದಲ್ಲೇ ಇದ್ದು ಒಂದು ಉದ್ಯೋಗವನ್ನು ಹುಡುಕಿಕೊಂಡು ತನ್ನ ಸಂಸಾರವನ್ನು ಇಲ್ಲಿಗೇ ಕರೆತರಬೇಕೆಂಬ ಹಂಬಲವಿತ್ತು. ಈ ಯೋಚನೆಯೊಂದಿಗೆ ಗಣಪತಿ ಮುನಿಗಳು ಅರುಣಾಚಲ ಪರ್ವತವನ್ನು ವೀಕ್ಷಿಸುತ್ತಾ "ಪ್ರತಿಯೊಬ್ಬರೂ ನಿನ್ನನ್ನು ನಿತ್ಯ ಸಂತೋಷವನ್ನು ನೀಡುವವನೆಂದು ಹೊಗಳುವರು. ಆದರೆ ನೀನು ನನಗೆ ಹೊಟ್ಟೆ ಪೂರ್ತಿ ಊಟವನ್ನೂ ಸಹ ಕರುಣಿಸುತ್ತಿಲ್ಲ. ಹೇಗೆ ನೀನು ನಿನ್ನ ಭಕ್ತರಿಗೆ ಸಂತೋಷವನ್ನು ನೀಡುವೆ?" ಇದೇ ಭಾವನೆಯಲ್ಲಿ ಈ ಸ್ತೋತ್ರವನ್ನು ರಚಿಸಿದರು:

ವೃತ್ತಿದಾನವಿಮುಖೇನ ಕಿಂ ತ್ವಯಾ ದೀಯತೆ ನಿಜಮನಾಮಯಂ ಪದಂ
ಕಿಂ ದದಾತಿ ಹರ ಸರ್ವಸಮರ್ಪಣಂ ವಿಣ್ಣಿಶಾಶಕಲದಾನ ದುರ್ಮನಾಃ ॥

"ಓ ಅರುಣಾಚಲ ದೇವನೆ! ನೀನು ನನಗೆ ಜೀವನ ನಿರ್ವಹಣೆಗಾಗಿ ಒಂದು ಉದ್ಯೋಗವನ್ನೂ ಕರುಣಿಸದವನು ಶಾಶ್ವತ ಜ್ಞಾನವನ್ನು ಕರುಣಿಸಬಲ್ಲೆಯಾ? ಒಂದು ಚೂರು ಅರಿಷಿಣದ ಕೊಂಬನ್ನು ನೀಡದ ಅಂಗಡಿಯ ಮಾಲೀಕನು ಯಾರಿಗಾದರೂ ಭೂಮಿಯನ್ನು ದಾನಮಾಡಬಲ್ಲನೇ?"

ತಕ್ಷಣವೇ ಗಣಪತಿ ಮುನಿಗಳಿಗೆ ತಾನು ಮಾಡಿದ್ದು ತಪ್ಪೆಂದು ಅರಿವಾಗಿ ಕೂಡಲೇ ಹೀಗೆ ಪ್ರಾರ್ಥಿಸಿದರು – "ಓ ದೇವನೆ! ನಾನು ಏನನ್ನಾದರೂ ಬೇಡಿದೆನೆ? ವಿನಾಯಕನಾಗಿ ನೀನು ನನಗೆ ಆಹಾರವನ್ನು ನೀಡಲಿಲ್ಲವೇ? ನಾನು ಸನ್ನಿಧಿ ರಸ್ತೆಯಲ್ಲಿ ಬ್ರಾಹ್ಮಣರ ಮನೆಗಳಲ್ಲಿ ಬೇಡಿದೆ ಮತ್ತು ನೀನು ಈ ಎಲ್ಲ ದಿನಗಳಲ್ಲೂ ಆಹಾರವನ್ನು ಕರುಣಿಸಿದೆ. ಓ ಶಿವಾ ನಿನ್ನನ್ನು ದೂಷಿಸಿದ್ದು ಅಕ್ಷಮ್ಯ ಅಪರಾಧವಾಯಿತು. ಆಯಿತು, ಈಗ ನಾನು ನಿನ್ನನ್ನು ನಿನ್ನ ಕರುಣಾಳುವಾಗಿ ನೋಡಬಯಸುವೆ."

ನಿಂತ ನಿಲುವಲ್ಲೇ ಗಣಪತಿ ಮುನಿಗಳು ಪದ್ಯ ಮಾಲೆಯನ್ನು ರಚಿಸಿ ಶಿವನಿಗೆ ಅರ್ಪಿಸಲು ನಿರ್ಧರಿಸಿದರು. ಈ ರೀತಿಯಾಗಿ ಯೋಚಿಸಿ ಗಣಪತಿ ಮುನಿಗಳು ಶಿವರಾಮನಿಗೆ ನವರಾತ್ರೆಯು ಮುಗಿಯುವವರೆಗೂ ಕಾಯೋಣವೆಂದು ಹಾಗೂ ಅನಂತರ ಮನೆಗೆ ಹೋಗೋಣವೆಂದು ತಿಳಿಸಿದರು.

ಮಾರನೇ ದಿನ ಸಂಜೆಯೊಳಗೆ ಗಣಪತಿ ಮುನಿಗಳು 36 ಸ್ತೋತ್ರಗಳನ್ನು ರಚಿಸಿ ಅದನ್ನು ತಮ್ಮ ಕೈಗಳಲ್ಲಿ ಹಿಡಿದುಕೊಂಡು ಶಿವರಾಮನನ್ನೂ ಕೂಡಿಕೊಂಡು ದೇವಸ್ಥಾನಕ್ಕೆ ಹೋಗಿ ನಂದಿಯ ಹಿಂದೆ ಶಿವನೆಡೆಗೆ ಮುಖಮಾಡಿ ಕಣ್ಣುಗಳನ್ನು ಮುಚ್ಚಿ ಸ್ತೋತ್ರಗಳನ್ನು ಅರ್ಪಿಸಲು ಪ್ರಾರಂಭಿಸಿದರು:

ಅರುಣಾಚಲರೂಪೋವಃ ಕರುಣಾವರುಣಾಲಯಃ
ಭುವನಾಧಿಪತಿಃ ಕಶ್ಚಿದವನಾಯ ಪ್ರಕಲ್ಪತಾಮ್ ॥

ಇಹಾಲಂಕಾರಮಾಧುರ್ಯಧ್ವನಯೋ ಸಂತಿವಾ ನ ವಾ
ಏಕೋ ನಾಮಧ್ವನಿಃ ಶಂಭೋರಸ್ವಾದಾತುಂ ವಿದಾಂ ಮನಃ ॥
ಅಲಿಂಗ್ಯತಾಂ ಚಿತ್ರಾರ್ಥೈಃ ಪ್ರಾಚಾಂ ವಾಚೋ ವಿಪಶ್ಚಿತಾಂ
ಯಶ ಏವ ಮಹೇಶಸ್ಯ ಭಾಷಯಾ ಮಧುಭೂಷಣಮ್ ॥

ಒಂದಾದ ಮೇಲೆ ಒಂದರಂತೆ ಎಲ್ಲ ಸ್ತೋತ್ರಗಳನ್ನೂ ಶಿವನ ಪಾದಗಳಿಗೆ ಗಣಪತಿ ಮುನಿಗಳು ಅರ್ಪಿಸಿದರು. ಗಣಪತಿ ಮುನಿಗಳು ಹಾಗೂ ಶಿವರಾಮರು ಭಕ್ತಿ ಸಾಗರದಲ್ಲಿ ಮುಳುಗಿ ಹೋಗಿದ್ದರು ಹಾಗೂ ಅವರ ಕಣ್ಣುಗಳಿಂದ ಧಾರಾಕಾರವಾಗಿ ಕಣ್ಣೀರು ಹರಿಯುತ್ತಿತ್ತು. ಗಣಪತಿ ಮುನಿಗಳ ಬಾಯಿಂದ ಹರಿದುಬರುತ್ತಿದ್ದ ಸುಶ್ರಾವ್ಯವಾದ ಸ್ತೋತ್ರಗಳನ್ನು ಆಲಿಸಿದ ಸುತ್ತಲಿನ ಜನಗಳು ಸಂಪೂರ್ಣವಾಗಿ ಆಕರ್ಷಿತರಾದರು. ಸ್ತೋತ್ರವನ್ನು ಆಲಿಸಿದ ಎಲ್ಲರ ಕಣ್ಣುಗಳಿಂದಲೂ ಕಣ್ಣೀರು ಹರಿಯತೊಡಗಿತು. ಆ ಗುಂಪಿನಲ್ಲಿ ಸಾಧುಗಳು ಹಾಗೂ ಬೆಟ್ಟದಲ್ಲಿ ವಾಸಿಸುವವರೂ ಇದ್ದರು.

ಮಾರನೇ ದಿನ ಗಣಪತಿ ಮುನಿಗಳು ಮಂದಿರದಲ್ಲಿ ಶಿವನ ಮುಂದೆ ಸ್ತೋತ್ರ ಮಾಡುತ್ತಿದ್ದಂತೆ ನೂರಾರು ಭಕ್ತರು ಜಮಾಯಿಸತೊಡಗಿದರು. ಅನಂತರ ಜನಗಳು ಗಣಪತಿ ಸಹೋದರರನ್ನು ತಮ್ಮ ಮನೆಗಳಿಗೆ ಬಂದು ಆತಿಥ್ಯವನ್ನು ಸ್ವೀಕರಿಸಲು ಬೇಡಿಕೊಳ್ಳತೊಡಗಿದರು. ಪ್ರತಿ ನಿತ್ಯವೂ ಗಣಪತಿ ಮುನಿಗಳು ಹೊಸ ಹೊಸ ಸ್ತೋತ್ರಗಳನ್ನು ರಚಿಸಿ ಸ್ತುತಿಸತೊಡಗಿದರು. ಇದು ಭಕ್ತರಿಗೆ, ವಿದ್ವಾಂಸರಿಗೆ ಹಾಗೂ ಕವಿಗಳಿಗೆ ಅತ್ಯಂತ ನೆಚ್ಚಿನ ಕಾರ್ಯಕ್ರಮವಾಯಿತು. ಅರುಣಾಚಲ ಪರ್ವತದಿಂದ ಯೋಗಿಗಳು, ತಪಸ್ವಿಗಳೂ ಭಾಗವಹಿಸಿ, ಗಣಪತಿ ಮುನಿಗಳನ್ನು ಆಶೀರ್ವದಿಸಿದರು. ಇವರಲ್ಲಿ ಶೇಷಾದ್ರಿ ಸ್ವಾಮಿಯೂ ಒಬ್ಬರಾಗಿದ್ದರು.

ನವರಾತ್ರೆಯ ಹತ್ತನೇ ದಿನದಂದು ಗಣಪತಿ ಮುನಿಗಳು ಶಿವನಿಗೆ ತಾನು ರಚಿಸಿದ ಸಾವಿರ ಸ್ತೋತ್ರಗಳ ಮಾಲೆಯನ್ನು ಅರ್ಪಿಸಿದರು. ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಸ್ತೋತ್ರಗಳನ್ನು ಆಲಿಸಿದ ನಗರದ ಗಣ್ಯರು ಗಣಪತಿ ಮುನಿಗಳಿಗೆ ತಿರುವಣ್ಣಾಮಲೈ ಸಂಸ್ಕೃತ ಶಾಲೆಯಲ್ಲಿ ಸಂಸ್ಕೃತ ಬೋಧಕರ ಹುದ್ದೆಯನ್ನು ನೀಡಿದರು.

೨೫

ನಾನು ನಿನ್ನ ಮುಂದೆ ನಮಸ್ಕರಿಸುವೆ

ತ್ವಯ್ಯಾರ್ಪಿತ ಮನಸಾ ತ್ವಾಂ ಪಶ್ಯನ್ ಸರ್ವಂ ತವಾಕೃತಿತಯಾ ಸತತಂ
ಭಜತೇನನ್ಯಪ್ರೀತ್ಯಾ ಸ ಜಯತ್ಯರುಣಾಚಲ ತ್ವಯಿ ಸುಖೇ ಮಗ್ನಃ ॥
– ಅರುಣಾಚಲ ಪಂಚರತ್ನ, ಶ್ರೀ ರಮಣ ಮಹರ್ಷಿ

"ಓ ಅರುಣಾಚಲ! ನಿನ್ನಲ್ಲಿ ನನ್ನ ಮನಸ್ಸನ್ನು ಶರಣಾಗಿಸಿ, ಎಲ್ಲವನ್ನೂ ನಿನ್ನ ರೂಪವೆಂದೇ ಭಾವಿಸಿ ಯಾರು ನಿನ್ನನ್ನು ಸಂಪೂರ್ಣ ಪ್ರೀತಿಯಿಂದ ಪೂಜಿಸುವರೋ ಅವರು ಶಾಶ್ವತ ಆನಂದದಲ್ಲಿ ಲೀನವಾಗುವರು."

ಗಣಪತಿ ಮುನಿಗಳು ಪತ್ನಿ ಹಾಗೂ ಮಗನೊಂದಿಗೆ ತಿರುವಣ್ಣಾಮಲೈಯಲ್ಲಿ ವಾಸಿಸಲು ಬಂದ ಕೆಲವೇ ದಿನಗಳಲ್ಲಿ ತಮ್ಮ ಸಂಸಾರದೊಂದಿಗೆ ಅರುಣಾಚಲ ಬೆಟ್ಟವನ್ನು ಹತ್ತಿ ಅಲ್ಲಿದ್ದ ಮೌನಿ ಸ್ವಾಮಿಗಳ (ಆಗ ರಮಣ ಭಗವಾನರನ್ನು ಆ ರೀತಿ ಸಂಬೋಧಿಸುತ್ತಿದ್ದರು) ದರ್ಶನವನ್ನು ಮಾಡಲು ಬಂದರು. ಅವರುಗಳು ಸ್ವಾಮಿಯ ಮುಂದೆ ಕುಳಿತು, ಗಣಪತಿ ಮುನಿಗಳು, "ದೇವ, ಸ್ವಾಮಿಗಳ ಮುಂದೆ ನಮಸ್ಕಾರ ಮಾಡು," ಎಂದು ಮಗನಿಗೆ ಹೇಳಿದರು. ಆದರೆ ಮಗುವು ಅದಕ್ಕೆ ಬೆಲೆ ಕೊಡದೆ ದೂರದಲ್ಲಿ ಆಡತೊಡಗಿತು. ಈ ಮಧ್ಯೆ ಜಟಾ ಸ್ವಾಮಿಯು ಮೌನಿ ಸ್ವಾಮಿಗಳನ್ನು ಭೇಟಿಯಾಗಲು ಬಂದರು. ಅವರು ಗಣಪತಿ ಮುನಿಗಳನ್ನು ಕುರಿತು, "ಸರ್, ನೀವು ವಿದ್ವಾಂಸರು. ಶುಕ್ಲಾಂಬರ ಧರಮ್ ಶ್ಲೋಕವನ್ನು ವಿಷ್ಣುವನ್ನು ಕುರಿತು ವಿವರಿಸುವಂತೆ ವ್ಯಾಖ್ಯಾನ ಮಾಡಬಲ್ಲಿರಾ?"

ಗಣಪತಿ ಮುನಿಗಳು ತಕ್ಷಣವೇ ಪಂಥವನ್ನು ಸ್ವೀಕರಿಸಿ, "ಬರೀ ವಿಷ್ಣುವನ್ನು ವಿವರಿಸುವುದೇ? ನಾನು ಮೌನಿ ಸ್ವಾಮಿಯನ್ನೂ ಈ ಶ್ಲೋಕದ ಮೂಲಕ ವಿವರಿಸುವೆ" ಎಂದರು. ಹೀಗೆ ಹೇಳಿ ಗಣಪತಿ ಮುನಿಗಳು ಶ್ಲೋಕವನ್ನು ಮೌನಿ ಸ್ವಾಮಿಗಳನ್ನು ಕುರಿತು ವಿವರಿಸ ತೊಡಗಿದರು:

ಶುಕ್ಲಾಂಬರಧರಂ – ಶ್ವೇತ ವಸ್ತ್ರವನ್ನು ಧರಿಸಿರುವ
ವಿಷ್ಣುಂ – ಸರ್ವಾಂತರ್ಯಾಮಿ
ಶಶಿವರ್ಣಂ – ಚಂದ್ರನಂಥ ಬಣ್ಣವುಳ್ಳವನನ್ನು.

ಚತುರ್ಭುಜಂ – ನಾಲ್ಕು ಶತ್ರುಗಳನ್ನು ಕಬಳಿಸಿರುವ – ಕಾಮ, ಕ್ರೋಧ, ಮದ ಹಾಗೂ ಮಾತ್ಸರ್ಯ.

ಪ್ರಸನ್ನ ವದನಂ – ಶಾಂತ ಮುದ್ರೆಯುಳ್ಳವನನ್ನು.

ಸರ್ವವಿಘ್ನೋಪಶಾಂತಯೇ – ಸಮಸ್ತ ವಿಘ್ನಗಳ ನಿವಾರಣೆಗಾಗಿ.

ಧ್ಯಾಯೇತ್ – ಧ್ಯಾನಿಸಬೇಕು

ಗಣಪತಿ ಮುನಿಗಳ ಮೌನಿಸ್ವಾಮಿಗಳ ಹೊಗಳಿಕೆಯು ಜಟಾಸ್ವಾಮಿಗೆ ಕಸಿವಿಸಿಯಾಗಿ ಅಷ್ಟಾಗಿ ಹಿಡಿಸಲಿಲ್ಲ. ಅಲ್ಲದೇ, ಗಣಪತಿ ಮುನಿಗಳಿಗೆ ತಾನು ನಾಲ್ಕು ವರ್ಷಗಳ ನಂತರ ಇದೇ ಮೌನಿ ಸ್ವಾಮಿಗೆ ಶರಣಾಗಿ ಅವರನ್ನು ತನ್ನ ಸದ್ಗುರುಗಳೆಂದು ಸ್ವೀಕರಿಸುವುದರ ಬಗ್ಗೆ ಕಿಂಚಿತ್ತೂ ಸುಳಿವಿರಲಿಲ್ಲ.

ಇದ್ದಕ್ಕಿದ್ದಂತೆ ಸ್ವಲ್ಪ ದೂರದಲ್ಲಿ ಆಟವಾಡುತ್ತಿದ್ದ ಪುತ್ರ ಮಹಾದೇವನು ಮೌನಿ ಸ್ವಾಮಿಗಳ ಬಳಿಗೆ ಓಡಿ ಬಂದು ಅವರಿಗೆ "ಮಹಾದೇವ ಶರ್ಮನಾದ ನಾನು ನಿಮ್ಮ ಪಾದಗಳಿಗೆ ನಮಸ್ಕರಿಸುವೆ" ಎಂದು ಹೇಳುತ್ತಾ ಅವರ ಪಾದಕ್ಕೆ ದೀರ್ಘದಂಡ ನಮಸ್ಕಾರವನ್ನು ಮಾಡಿದ. ಮೌನಿ ಸ್ವಾಮಿಯು ಅವನನ್ನು ಪ್ರೀತಿಯಿಂದ ಎತ್ತಿ ತನ್ನ ತೊಡೆಯ ಮೇಲೆ ಕೂರಿಸಿಕೊಂಡರು. ಅನಂತರ ಸ್ವಾಮಿಯು ಹೇಗೆ ನಾಲ್ಕು ವರ್ಷದ ಇಷ್ಟು ಸಣ್ಣ ಮಗುವು ಇಷ್ಟು ಸ್ಪಷ್ಟವಾಗಿ ನಮಸ್ಕರಿಸಿದನೆಂದು ಆಶ್ಚರ್ಯಪಟ್ಟರು. ಅಲ್ಲಿಂದ ಮೌನಿ ಸ್ವಾಮಿ ಮತ್ತು ಬಾಲಕ ಮಹಾದೇವನ ನಡುವೆ ಗೆಳೆತನವೇರ್ಪಟ್ಟಿತು. ನಂತರದ ದಿನಗಳಲ್ಲಿ ಬೆಳೆದ ಮಹಾದೇವ ಶರ್ಮನು, "ಭಗವಾನರು ನನ್ನ ಮೇಲೆ ದಯೆಯನ್ನಿಟ್ಟಿದ್ದ ರೀತಿಯು ಮರೆಯಲಾಗದ್ದು" ಎಂದು ಹೇಳುತ್ತಿದ್ದನು. ಮಹಾದೇವನು ತನ್ನ ಜೀವನದುದ್ದಕ್ಕೂ ಶಾಂತ ಹಾಗೂ ಅಂತರ್ಮುಖಿಯಾಗೇ ಇದ್ದನು. ಅವನನ್ನು "ದೇವುದಣ್ಣ" ಅಂದರೆ ದೇವನಂತಹ ಮನುಷ್ಯ ಎಂಬುದಾಗಿ ಕರೆಯುತ್ತಿದ್ದರು.

೭

ನನ್ನ ದೇಶ, ನನ್ನ ಜನ

ಆತ್ಮೀಯದೇಶರಕ್ಷಣೇ ಶಕ್ತಂ ಕರೋತು ಸರ್ವದಾ
ಪಾಪದ್ವಿಷಾಂ ಪ್ರಿಯಂಕರಿ ವಾಸಿಷ್ಠಮಿಂದ್ರಸುಂದರೀ ॥
– ಇಂದ್ರಾಣಿ ಸಪ್ತಶತಿ (299)

"ಓ ಇಂದ್ರಾಣಿ ಮಾತೆಯೇ! ಓ ಪಾಪಿಗಳ ಶತ್ರುಗಳನ್ನು ಪ್ರೀತಿಸುವವಳೇ! ನನ್ನ ದೇಶವನ್ನು ರಕ್ಷಿಸಲು ನನ್ನನ್ನು ಸದಾ ಶಕ್ತಿವಂತನನ್ನಾಗಿ ಮಾಡು."

ಗಣಪತಿ ಮುನಿಗಳು ತಿರುವಣ್ಣಾಮಲೈ ಬೆಟ್ಟದಲ್ಲಾಗಲೀ ಅಥವಾ ದೇವಸ್ಥಾನದಲ್ಲಾಗಲೀ ತಪಸ್ಸಿಗೆ ಕೂರಲಿಲ್ಲ. ಅವರ ಗಮನವೆಲ್ಲಾ ಈಗ ವೇದಗಳ ಬಗ್ಗೆ ಆಳವಾದ ಅಧ್ಯಯನ ಮಾಡಿ, ಅವುಗಳ ರಹಸ್ಯವನ್ನು ವಿಮರ್ಶಾತ್ಮಕ ಮೆಚ್ಚುಗೆಯ ಮೂಲಕ ಅರಿಯುವುದೇ ಆಗಿತ್ತು. ವೇದ ಮಂತ್ರಗಳನ್ನು ಸಸ್ವರ ರೀತಿಯಲ್ಲಿ ಪಠಿಸುವುದೇ ಅವರ ತಪಸ್ಸಾಯಿತು. ವೇದಗಳನ್ನು ವೇದಕಾಲದ ಸಂಸ್ಕೃತಿಯಲ್ಲಿ ಅರಸುತ್ತಾ ಈ ಅಧ್ಯಯನದಲ್ಲಿ ಗಣಪತಿ ಮುನಿಗಳು ತಮ್ಮನ್ನೇ ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರು. ಜೈಮಿನಿ ಋಷಿಗಳ ಶಾಲೆಯಲ್ಲಿನ ತರ್ಕ ಹಾಗೂ ವಾರ್ತಿಕಗಳನ್ನು ಗಣಪತಿ ಮುನಿಗಳು ಆಳವಾಗಿ ಅಧ್ಯಯನ ಮಾಡಿದರು.

ಸತ್ಯಾನ್ವೇಷಣೆಯಲ್ಲಿ ಮನಸ್ಸನ್ನು ನೆಟ್ಟಗೆ ಇರಿಸಿಕೊಂಡು, ಮೂಲಾಧಾರ ಚಕ್ರದ ಅಂತರಂಗದ ಗ್ರಂಥಾಲಯವನ್ನು ತೆರೆದು ಹಾಗೂ ಋಷಿಗಳ ಭೌತಿಕ ಮತ್ತು ಆಧ್ಯಾತ್ಮಿಕ ಸತ್ಯವನ್ನು ಅರಸುತ್ತಾ, ಗಣಪತಿ ಮುನಿಗಳು ವೇದಗಳ ಬಗ್ಗೆ ಗಹನವಾದ ಅರ್ಥಗಳನ್ನು ಪಡೆದುಕೊಂಡರು. ಆಧುನಿಕ ವಿಜ್ಞಾನಿಗಳಂತೆ ಋಷಿಮುನಿಗಳು ಪಂಚಧಾತುಗಳ ಬಗ್ಗೆ ರಹಸ್ಯವನ್ನು ಕೂಲಂಕುಷವಾಗಿ ತನಿಖೆಮಾಡಿದರು. ಅಸಾಮಾನ್ಯ ಪ್ರಪಂಚದ ಜ್ಞಾನವನ್ನು ಆಧುನಿಕ ವಿಜ್ಞಾನಿಗಳು ಪಡೆದದ್ದನ್ನು ವೇದಗಳಲ್ಲಿ ಆಗಲೇ ಅಳವಡಿಸಲಾಗಿದೆ.

ಸೃಷ್ಟಿಯ ಮೂಲಭೂತ ಧಾತುವಾದ ಸತ್ಯವನ್ನು ಋಷಿಮುನಿಗಳು ಹುಡುಕಿ ಕಂಡುಹಿಡಿದರು ಮತ್ತು ತಮ್ಮ ಅನುಭವ ಜ್ಞಾನವನ್ನು ವೇದಗಳಲ್ಲಿ ವಿವರಿಸಿರುವರು. ಹೀಗಾಗಿ ವೇದಗಳು ಜ್ಞಾನವನ್ನು ವಿವರಿಸುವ ದಾರಿ ದೀಪವಾಗಿದೆ. ಭಾರತದ ಚರಿತ್ರೆಯಲ್ಲಿ

ಋಷಿಮುನಿಗಳ ಸಂಸ್ಕೃತಿಯು ಭವ್ಯವಾದ ಕಾಲವಾಗಿದೆ. ಯಾವಾಗ ಇಲ್ಲಿನ ಜನಗಳು ವೇದ ಜ್ಞಾನವನ್ನು ಮರೆಯಲು ಪ್ರಾರಂಭಿಸಿದರೋ ಅಲ್ಲಿಂದಲೇ ಹಿಂದೂ ಸಂಸ್ಕೃತಿಯ ಅವನತಿಯು ಪ್ರಾರಂಭವಾಯಿತು. ಆಧ್ಯಾತ್ಮಿಕ ಅವನತಿ ಹಾಗೂ ಭಾರತೀಯರ ದಾಸ್ಯತ್ವದ ಭಾವನೆಗಳು ಪಾಶ್ಚಿಮಾತ್ಯರ ಪ್ರಾಬಲ್ಯಕ್ಕೆ ಮುಖ್ಯ ಕಾರಣಗಳಾದವು. ವೇದಗಳ ಕ್ರಮಬದ್ಧ ಅಧ್ಯಯನದಿಂದ ಗಣಪತಿ ಮುನಿಗಳಿಗೆ ಈ ಜ್ಞಾನವು ಅರಿವಾಯಿತು.

ಭಾರತದ ವೇದ ಸಂಸ್ಕೃತಿಯ ಪುನರುತ್ಥಾನವು ತುರ್ತಾಗಿ ಆಗಬೇಕೆಂದು ಗಣಪತಿ ಮುನಿಗಳು ಆಲೋಚಿಸಿದರು. ಅವರು ವೇದ ಮತ್ತು ವೇದ ಸಾಹಿತ್ಯಗಳ ಬಗೆಗೆ ಅನೇಕ ಉಪನ್ಯಾಸಗಳನ್ನು ಮಾಡುತ್ತಾ ಈ ಮಾರ್ಗದಿಂದ ಜನಗಳಲ್ಲಿ ದೇಶಭಕ್ತಿ ಹಾಗೂ ಧರ್ಮ ಮಾರ್ಗದಲ್ಲಿ ಜೀವನ ನಡೆಸಲು ಪ್ರೇರೇಪಿಸತೊಡಗಿದರು. ಇಲ್ಲಿಯವರೆಗೂ ಜನಸಾಮಾನ್ಯರ ದೃಷ್ಟಿಯಲ್ಲಿ ಮಂದಿರಗಳಿಗೆ ಭೇಟಿನೀಡುವುದು ಮತ್ತು ಸಾಧು ಸಂತರ ಸಹವಾಸ ಮಾತ್ರವೇ ಉತ್ತಮ ಮಾರ್ಗವೆಂಬ ಭಾವನೆ ಇತ್ತು. ಆದರೆ ಈಗ ಗಣಪತಿ ಮುನಿಗಳ ವ್ಯಕ್ತಿತ್ವ ಮತ್ತು ಸತತವಾದ ಭಾಷಣಗಳು ಅರುಣಾಚಲದ ಜನಸಾಮಾನ್ಯರಲ್ಲಿ ವೇದಗಳಲ್ಲಿನ ಮೌಲ್ಯಗಳ ಬಗ್ಗೆ ಹಾಗೂ· ಅವುಗಳು ತೋರಿರುವ ಜೀವನ ಶೈಲಿಯ ಬಗ್ಗೆ ಹೆಚ್ಚು ಹೆಚ್ಚು ಅರಿವಾಗತೊಡಗಿತು. ಗಣಪತಿ ಮುನಿಗಳ ಕ್ರಿಯಾತ್ಮಕ ವ್ಯಕ್ತಿತ್ವಕ್ಕೆ ಆಕರ್ಷಿತರಾಗಿ ಸಾವಿರಾರು ಜನಗಳು ಅವರನ್ನು ನಿತ್ಯವೂ ಭೇಟಿಯಾಗ ತೊಡಗಿದರು. ಕೆಲವರು ಅವರಲ್ಲಿ ತಮ್ಮ ಸಂದೇಹಗಳನ್ನು ನಿವಾರಿಸಿಕೊಳ್ಳಲು ಬಂದರೆ ಇನ್ನು ಕೆಲವರು ವೇದಗಳ ಅಧ್ಯಯನವನ್ನು ಅರಸುತ್ತಾ ಬರತೊಡಗಿದರು ಹಾಗೂ ಮತ್ತೆ ಕೆಲವರು ಅವರಿಂದ ಮಂತ್ರೋಪದೇಶವನ್ನು ಪಡೆಯಲು ಬರತೊಡಗಿದರು.

ಗಣಪತಿ ಮುನಿಗಳ ಖ್ಯಾತಿಯು ತಿರುವಣ್ಣಾಮಲೈಯನ್ನು ದಾಟಿ ದಕ್ಷಿಣ ಭಾರತದೆಲ್ಲೆಡೆಗೂ ಪಸರಿಸತೊಡಗಿತು. ಅನೇಕರು ಅವರ ಶಿಷ್ಯರಾದರು. ಅವರಲ್ಲಿ ಪ್ರಮುಖರಾದವರೇ ಮದರಾಸಿನ ಸತಂಜೇರಿ ರಾಮಸ್ವಾಮಿ ಐಯ್ಯರ್. ಐಯ್ಯರ್ ಅವರು ಸುಪ್ರಸಿದ್ಧ ಸಂತ ಉಪನಿಷದ್ ಬ್ರಹ್ಮರ ಸಂತತಿಗೆ ಸೇರಿದವರು ಮತ್ತು ಅವರು ತಮ್ಮ ಕುಟುಂಬದ ಪದ್ಧತಿಯನ್ನು ಅನುಸರಿಸುತ್ತಾ ಕಟ್ಟುನಿಟ್ಟಾದ ಆಡಂಬರರಹಿತ ಜೀವನವನ್ನು ನಡೆಸುತ್ತಿದ್ದರು. ಐಯ್ಯರ್ ಅವರು ಮದ್ರಾಸ್ ಹೈಕೋರ್ಟ್‌ನಲ್ಲಿ ಕ್ಲರ್ಕ್ ಆಗಿದ್ದರು. ಗಣಪತಿ ಮುನಿಗಳ ಪ್ರವಚನದಿಂದ ಅಪಾರ ಪ್ರಭಾವಿತರಾಗಿ ಅವರನ್ನು ಮದ್ರಾಸಿಗೆ ಆಹ್ವಾನಿಸಿದರು. ತಮ್ಮ ಶಿಷ್ಯರ ಕೋರಿಕೆಯನ್ನು ಮನ್ನಿಸಿ ಗಣಪತಿಮುನಿಗಳು ಶಾಲೆಯ ಬೇಸಿಗೆ ರಜಾದಿನಗಳಲ್ಲಿ ಮದ್ರಾಸಿಗೆ ಹೋಗಿ ಅವರ ಮನೆಯಲ್ಲೇ ವಾಸ್ತವ್ಯ ಮಾಡಿದರು. ಐಯ್ಯರ್ ಮನೆಯವರೆಲ್ಲರೂ ಗಣಪತಿ ಮುನಿಗಳ ಭೇಟಿಯಿಂದ ಅತೀವ ಸಂತಸಪಟ್ಟರು.

ಗಣಪತಿ ಮುನಿಗಳು ಮದ್ರಾಸ್‌ನಲ್ಲಿದ್ದಾಗ ಸಂಸ್ಕೃತ ಭಾಷಾ ಪಂಡಿತರ ಸಮಾವೇಶವನ್ನು ಐಯ್ಯರ್ ಅವರು ನಡೆಸಿದರು. ಆಹ್ವಾನಿತರಲ್ಲಿ ಅನೇಕರು ಪ್ರಭಾವೀ ರಾಜಕಾರಣಿಗಳಿದ್ದರು.

ಕಾವ್ಯಕಂಠ ಗಣಪತಿ ಮುನಿಗಳ ಅಸಾಧಾರಣ ವಿದ್ವತ್ತಿನ ಬಗ್ಗೆ ಅರಿತಿದ್ದ ಕೆಲವು ವಿದ್ಯಾರ್ಥಿಗಳೂ ಸಭೆಯಲ್ಲಿದ್ದರು. ಇಷ್ಟರಲ್ಲಾಗಲೇ ಗಣಪತಿ ಮುನಿಗಳಿಗೆ ನವದ್ವೀಪದ ವಿದ್ವಾಂಸರ ಸಮ್ಮೇಳನದಲ್ಲಿ ಕಾವ್ಯಕಂಠ ಬಿರುದನ್ನು ನೀಡಿದ್ದನ್ನು ಅರಿತ ಅನೇಕ ಆಹ್ವಾನಿತರು ಅವರನ್ನು ನೋಡುವ ಸಲುವಾಗೇ ಬಂದಿದ್ದರು.

ಸಮ್ಮೇಳನದಲ್ಲಿ ಗಣಪತಿ ಮುನಿಗಳು ತುಂಬುನಾದದ ಧ್ವನಿಯಲ್ಲಿ ಪ್ರಾಚೀನಕಾಲದ ಋಷಿಮುನಿಗಳ ಸಂಸ್ಕೃತಿ ಹಾಗೂ ಈಗಿನ ಹದಗೆಡುತ್ತಿರುವ ಸಮಾಜದ ಅವಸ್ಥೆಯನ್ನು ವಿವರಿಸತೊಡಗಿದರು. ಆದರೆ ಇದ್ದಕ್ಕಿದ್ದಂತೆ ಗಣಪತಿ ಮುನಿಗಳು ಮೌನವಹಿಸಿ, ಅವರ ಮನಸ್ಸು ಅಂತರ್ಮುಖಿಯಾಗಿ ಧ್ಯಾನೋನ್ಮುಖರಾದರು.

ಸಭಿಕರು ಸ್ವಲ್ಪ ವೇಳೆ ಸಹನೆಯಿಂದ ಕಾಯ್ದರು. ಗಣಪತಿ ಮುನಿಗಳು ಮಾತನಾಡದೇ ಇರುವುದನ್ನು ಗಮನಿಸಿ ಒಬ್ಬರು ಅವರ ಹತ್ತಿರ ಬಂದು "ಯಾತರ ಬಗ್ಗೆ ಧ್ಯಾನಿಸುತ್ತಿರುವಿರಿ ಸ್ವಾಮಿ?" ಎಂದು ಪ್ರಶ್ನಿಸಿದರು. ಗಣಪತಿ ಮುನಿಗಳು ದುಃಖದಿಂದ, "ದಶಾಂ ದೇಶಸ್ಯೈತಾಂ ಪ್ರತಿಪದಮಯಂ ಧ್ಯಾಯತಿ ಜನಃ" (ನನ್ನಾತ್ಮವು ದೇಶದ ಸ್ಥಿತಿಯ ಬಗ್ಗೆ ಚಿಂತಿಸುತ್ತಿದೆ) ಎಂದರು. ಇದರ ಅರ್ಥವು ಸಭಿಕರಿಗೆ ಆಗಲಿಲ್ಲ. ಕ್ರಮೇಣ ಗಣಪತಿ ಮುನಿಗಳು ಧ್ಯಾನದಿಂದ ಹೊರಬಂದು ಈ ರೀತಿ ವಿವರಿಸಿದರು:

ಕುಲೀನಃ ಕ್ಷುದ್ರಾಯ ಪ್ರವರ ಇತಿ ದತ್ತೇ ನಿಜಸುತಾಂ
ಅನಾರ್ಯಾನ್ ವಿಜ್ಞಾಶ್ಚ ಪ್ರಭವ ಇತಿ ಗಾಯಂತಿ ಶತಶಃ
ಬಲಂ ಬಾಹ್ವೋರ್ಲುಪ್ತಂ ಹೃತಮಪಿ ಚ ವಾಗ್ವೀರ್ಯಮರಿಭಿಃ
ದಶಾಂ ದೇಶಸ್ಯೈತಾಂ ಪ್ರತಿಪದಮಯಂ ಧ್ಯಾಯತಿ ಜನಃ ॥

"ಕುಲೀನ ವಂಶಸ್ಥ ಗೃಹಸ್ಥನೊಬ್ಬನು ತನ್ನ ಮಗಳನ್ನು ಕೀಳ್ಮಟ್ಟದ ವರನಿಗೆ ಅವನು ಸುಸಂಸ್ಕೃತ ವರನೆಂದು ಭಾವಿಸಿ ವಿವಾಹ ಮಾಡಿದನು; ಕೆಲವರು ಕೀಳ್ಮಟ್ಟದ ಜನರನ್ನು ಸಭ್ಯರೆಂದು ಹೊಗಳುವರು; ದೈಹಿಕ ಶಕ್ತಿಯು ಕುಂದಿದೆ. ಶತ್ರುಗಳು ಮಾತನಾಡುವ ಶಕ್ತಿಯನ್ನು ಮೊಟಕುಗೊಳಿಸಿರುವರು. ಈ ನತದೃಷ್ಟ ಮನುಷ್ಯನು (ನಾನು) ತನ್ನ ದೇಶದ ಇಂತಹ ಸ್ಥಿತಿಯನ್ನು ದುಃಖದಿಂದ ಯೋಚಿಸುತ್ತಿರುವನು."

ಅರಿಭಿರಧ ಯೈಃ ಕ್ರಾಂತಾ ಏತೇ ಮುಹುರ್ಮುಹುರುದ್ವತೈಃ
ಕರಾಮವಿಕಲಂ ದಾತುಂ ಧೀರೋ ನ ಕೋಽಪಿ ವಿಲೋಕ್ಯತೇ
ಕ್ವ ತವ ದಯಿತಾಸ್ತೇ ತೇ ಪೂರ್ವೇ ಧರೇ ಭರತಾದಯೋ
ಯದಜಿತ ಭುಜಾದುರ್ಗಸ್ಥಾ ಯಾ ತವಾಂಬ ನ ಭೀರಭೂತ್ ॥

"ಓ ನನ್ನ ಭಾರತ ಮಾತೆ! ದುರಹಂಕಾರೀ ಶತ್ರುಗಳು ನಿನ್ನನ್ನು ಆಕ್ರಮಿಸಿ ದಬ್ಬಾಳಿಕೆಯಿಂದ ಸತತವಾಗಿ ಹಿಂಸಿಸುತ್ತಿದ್ದರೂ ಇದರಿಂದ ನಿನ್ನನ್ನು ರಕ್ಷಿಸಲು ಧೈರ್ಯವಂತ ವೀರೋಚಿತ

ವ್ಯಕ್ತಿ ಯಾರೂ ಇಲ್ಲ. ಯಾರ ಆಳ್ವಿಕೆಯಲ್ಲಿ ನೀನು ಸುರಕ್ಷಿತ ಹಾಗೂ ಸಂತೋಷವಾಗಿದ್ದೆಯೋ ಆ ಭರತ ಚಕ್ರವರ್ತಿಯಂಥವರು ಎಲ್ಲಿ?"

ಬ್ರಿಟಿಷರ ಆಳ್ವಿಕೆಯಲ್ಲಿ ದೇಶವು ನರಳುತ್ತಿದ್ದು ಅಲ್ಲಲ್ಲಿ ಸ್ವಾತಂತ್ರ್ಯದ ಕೂಗು ಕೇಳಿ ಬರುತ್ತಿದ್ದ ಕಾಲವದು. ಕಾವ್ಯಕಂಠರಲ್ಲಿ ಮದ್ರಾಸಿನ ಜನತೆ ಭಾರತದ ಸ್ವಾತಾಂತ್ರ್ಯಕ್ಕಾಗಿ ಹೋರಾಡಲು ಸೊಂಟಕಟ್ಟಿ ಸಿದ್ಧನಾಗಿರುವ ನೇತಾರನನ್ನು ಕಂಡರು. ಕಾವ್ಯಕಂಠರ ಉತ್ಸಾಹ ತುಂಬುವ ಹಾಗೂ ಶಕ್ತಿಯುತ ಪ್ರವಚನಗಳು ಜನರ ಮನಸ್ಸಿನಲ್ಲಿ ಬ್ರಿಟಿಷರ ವಿರುದ್ಧ ಧ್ವನಿಯೆತ್ತಲು ಹೊಸ ಧೈರ್ಯವನ್ನುಂಟು ಮಾಡಲು ತೊಡಗಿತು.

ಗಣಪತಿ ಮುನಿಗಳ ಪ್ರವಚನದ ಎರಡು ದಿನಗಳ ನಂತರ ಹೆಸರಾಂತ ವಿದ್ವಾಂಸರುಗಳು ಗಣಪತಿ ಮುನಿಗಳನ್ನು ಭೇಟಿಯಾಗಲು ಬಂದರು. ಅವರುಗಳಲ್ಲಿ ಪ್ರಮುಖರೆಂದರೆ – ವೇದಂ ವೆಂಕಟರಾಯ ಶಾಸ್ತ್ರಿ, ತಂಡುಲಂ ಸುಬ್ರಹ್ಮಣ್ಯ ಐಯ್ಯರ್, ಪಂಚಾಪಕೇಶ ಶಾಸ್ತ್ರಿ ಹಾಗೂ ರಂಗಯ್ಯ ನಾಯ್ಡು. ವೆಂಕಟರಾಯ ಶಾಸ್ತ್ರಿಗಳು ತಮ್ಮಲ್ಲಿನ ಸಂದೇಹವೊಂದರ ಪರಿಹಾರಕ್ಕೋಸ್ಕರ ಬಂದಿದ್ದರು. ಅವರು "ನನಗೆ ಒಂದು ಸಂದೇಹವಿದೆ" ಎನ್ನುತ್ತಿದ್ದಂತೆ, ಗಣಪತಿ ಮುನಿಗಳು ಎರಡರ್ಥವನ್ನು ನೀಡುವ ಒಂದು ಆಶು ಶ್ಲೋಕವನ್ನು ಕೂಡಲೇ ರಚಿಸಿದರು:

ಸ್ಯ ತು ಸರ್ವಜ್ಞಶಿರೋಮಣಿ ದೀಧಿತಿ ದೋಷ ಪ್ರದರ್ಶನೇಽಪಿ ಪಟುಃ
ಭವತಾಂ ಶಂಕಾಃ ಶಂಕರಹರಿಣದೃಶೋಹಾಸನವಶಾಸ್ತ್ರಿ ॥

"1. ಮಾತೆ ಪಾರ್ವತಿಯ ಸದಾ ಆನಂದಕರ ಮಂದಹಾಸವಾದ ಈ ಗಣಪತಿಗೆ ಭಟ್ಟಾಚಾರ್ಯನ ಕೃತಿಯಾದ "ದೀಧಿತಿ" ಯಲ್ಲೂ ತಪ್ಪನ್ನು ತೋರಿಸುವ ಶಕ್ತಿ ಇದೆ. ಅಂತಹ ಅತ್ಯುತ್ತಮ ಜ್ಞಾನಿಯು ನಿಮ್ಮಲ್ಲಿರಬಹುದಾದ ಸಂದೇಹವನ್ನು ನಿವಾರಿಸಬಲ್ಲನು.

2. ಪಾರ್ವತಿಯ ಸದಾ ಹಸಿರಾದ ಆನಂದಕರ ಮಂದಹಾಸದ ರೂಪವಾದ ಈ ಗಣಪತಿಯು, ಸಮಸ್ತ ಜ್ಞಾನಗಳ ಮೂರ್ತೀಕೃತ ರೂಪವಾದ ಶಿವನ ಶಿರದಲ್ಲಿ ಅಲಂಕಾರವಾಗಿರುವ ಚಂದ್ರನಲ್ಲಿರುವ ಕಪ್ಪುಕಲೆಗಳನ್ನು ತೋರಬಲ್ಲನು."

ಈ ಶ್ಲೋಕದಲ್ಲಿ ಎರಡರ್ಥಗಳಿರುವುದಲ್ಲದೇ, ಇದರಲ್ಲಿ ಗಣಪತಿ ಮುನಿಗಳು ಮಾತೆ ಪಾರ್ವತಿಯ ಪುತ್ರನೆಂಬ ಧೈರ್ಯಪೂರಿತ ಹೇಳಿಕೆ. ಅಲ್ಲಿ ನೆರೆದಿದ್ದ ಘನ ವಿದ್ವಾಂಸರಿಗೆಲ್ಲರಿಗೂ ಗಣಪತಿ ಮುನಿಗಳು ಸಾಮಾನ್ಯ ವಿದ್ವಾಂಸರಲ್ಲ, ಬದಲಿಗೆ ಅವರು ಜ್ಞಾನವೇ ಮೂರ್ತಿವೆತ್ತಂತ ನಿಜವಾದ ಕಾವ್ಯಕಂಠರೆಂದು ಅರ್ಥವಾಯಿತು. ಅವರುಗಳು ಹೃದಯಾಂತರಾಳದಿಂದ ಅನೇಕ ವಿಷಯಗಳ ಬಗ್ಗೆ ಮಾತನಾಡಿದರು. ತಂದುಲಂ ಸುಬ್ರಹ್ಮಣ್ಯ ಐಯ್ಯರ್ ಅವರಿಗೆ ಗಣಪತಿ ಮುನಿಗಳಿಂದ ಮತ್ತೊಂದು ಆಶು ಶ್ಲೋಕವನ್ನು ಕೇಳುವ ಇಚ್ಛೆಯಾಯಿತು. ಅವರು ಗಣಪತಿ ಮುನಿಗಳನ್ನು, ಶಿವನ ಪರಿವಾರವೆಲ್ಲವನ್ನೂ ಒಳಗೊಂಡಿರುವ ಶ್ಲೋಕವನ್ನು

ರಚಿಸಲು ಕೇಳಿಕೊಂಡರು. ಕೂಡಲೇ ಕಾವ್ಯಕಂಠರು ಶ್ಲೋಕವನ್ನು ಉಚ್ಚರಿಸಿದರು:

ಜಗತೀಧರಜಾಮಾತಾ ಭವತಾಂ ಭವ್ಯಾಯ ಭೂಯಸೇ ಭವತು
ಕಂಚಿದಪಿ ಕಿಂಚನಮಪಿ ಯದ್ವೀಕ್ಷಾ ವಿದಧಾತಿ ಶಕ್ರಸಮಮ್ ॥

ಜಗತೀಧರ ಜಾಮಾತಾ – ಪರ್ವತರಾಜನ ಅಳಿಯ, ಶಿವ.

ಜಗತಿಧರಜಾ + ಮಾತಾ – ಪರ್ವತ ಕುಮಾರಿ, ಪಾರ್ವತಿ, ದೈವೀ ಮಾತೆ.

ಜಗತೀ ಧರಜಾ + ಮಾತಾ – ಯಾರಿಗೆ (ಗಣಪತಿ ಮತ್ತು ಸ್ಕಂದರಿಗೆ) ಪರ್ವತ ಪುತ್ರಿಯು ಮಾತೆಯೋ

ಭಿಕ್ಷುಕನನ್ನೂ ಇಂದ್ರನನ್ನಾಗಿಸಬಲ್ಲ ಅವರ ಕರುಣಾಪೂರಿತ ದೃಷ್ಟಿಯು ನಿಮಗೆ ಅಭ್ಯುದಯವನ್ನುಂಟುಮಾಡಲಿ.

ಈ ರೀತಿಯಿಂದ ಕೂಡಿದ ಗಣಪತಿ ಮುನಿಗಳ ಅತ್ಯುತ್ತಮ ಜ್ಞಾನ ಪ್ರದರ್ಶನದಿಂದ ಸಭಿಕರೆಲ್ಲರೂ ಗಣಪತಿ ಮುನಿಗಳನ್ನು ತಮ್ಮ ಗುರುಗಳೆಂದು ಪರಿಗ್ರಹಿಸಿ ಅವರಿಗೆ ವಂದಿಸಿ ಅಲ್ಲಿಂದ ನಿರ್ಗಮಿಸಿದರು.

೭

ಮದ್ರಾಸಿನಲ್ಲಿನ ಸಾಹಿತ್ಯ ಸಭೆ

ಮದ್ರಾಸಿನ ವಿದ್ವಾಂಸರು ಗಣಪತಿ ಮುನಿಗಳಲ್ಲಿ ಒಬ್ಬ ಕಾಳಿದಾಸ ಮತ್ತು ಒಬ್ಬ ಶಂಕರನನ್ನು ಕಂಡು ಅವರಿಂದ ಪದೇ ಪದೇ ಮೃದು ಮಧುರವಾದ ಪ್ರವಚನವನ್ನು ಆಲಿಸಲು ಅವರನ್ನು ಆಹ್ವಾನಿಸತೊಡಗಿದರು. ಅವರೆಲ್ಲೇ ಹೋದರೂ ಅವರ ಆಧುನಿಕ ವಿಧಾನವನ್ನು ಇಷ್ಟಪಡುವ ವಿದ್ಯಾರ್ಥಿಗಳ ಒಂದು ದೊಡ್ಡ ಗುಂಪೇ ಅವರನ್ನು ಹಿಂಬಾಲಿಸುತ್ತಿತ್ತು. ಗಣಪತಿ ಮುನಿಗಳು ಎಲ್ಲರೊಂದಿಗೂ ಹೊಂದಿಕೊಂಡು ಹೋಗುತ್ತಿದ್ದದ್ದರಿಂದ ಅವರು ವಯಸ್ಕರಿಗೂ ಹಾಗೂ ಯುವಕರಿಗೂ ಗುರುಗಳಾಗಿದ್ದರು. ಅನೇಕರು ಅವರ ಶಿಷ್ಯರಾದರು ಹಾಗೂ ಅನೇಕರಿಗೆ ವಿವಿಧ ಮಂತ್ರೋಪದೇಶಗಳನ್ನು ಮಾಡುತ್ತಿದ್ದರು. ಅವರ ಮಾರ್ಗದರ್ಶನದಲ್ಲಿ ಮಾಡುವ ಮಂತ್ರಜಪದಿಂದ ಅವರುಗಳಿಗಾಗುತ್ತಿದ್ದ ಶಾಂತಿ ಹಾಗೂ ನೆಮ್ಮದಿಯ ಅನುಭವಗಳನ್ನು ಹೇಳಿಕೊಳ್ಳುತ್ತಿದ್ದರು.

ಬೆಳೆಯುತ್ತಿರುವ ಜನಪ್ರಿಯತೆಯು ಗಣಪತಿ ಮುನಿಗಳ ಏಕಾಂತಕ್ಕೆ ಅಡ್ಡಿಯಾಗತೊಡಗಿತು. ಈ ರೀತಿಯ ವಾತಾವರಣದಲ್ಲಿ ತಪಸ್ಸಿಗೆ ಅವಕಾಶವಾಗುತ್ತಿರಲಿಲ್ಲ. ಬಹುತೇಕ ಸಮಯವನ್ನು ಸಾಹಿತ್ಯ ಚಟುವಟಿಕೆಗಳಲ್ಲೇ ಕಳೆಯಬೇಕಿತ್ತು. ಅನಂತರ ಅವರ ಶಿಷ್ಯರ ಬೇಡಿಕೆಯ ಮೇರೆಗೆ ಗಣಪತಿ ಮುನಿಗಳು ಮತ್ತೊಮ್ಮೆ ಮದ್ರಾಸಿಗೆ ತೆರಳಬೇಕಾಯಿತು. ಈ ಬಾರಿ ಅವರಿಗೆ ಅವರ ಶಿಷ್ಯರಾದ ದೊರೆಸ್ವಾಮಿ ಐಯ್ಯರ್ ಅವರ ಮನೆಯಲ್ಲಿ ಇರುವ ವ್ಯವಸ್ಥೆಯನ್ನು ಮಾಡಲಾಯಿತು. ಹೀಗಾಗಿ ಅಧಿಕ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಅಲ್ಲಿಗೆ ಬರತೊಡಗಿದರು.

ಒಬ್ಬ ವಿದ್ಯಾರ್ಥಿಯು, "ಗುರುಗಳೇ! ನೀವು ಆಂಗ್ಲ ಸಾಹಿತ್ಯವನ್ನು ಅಭ್ಯಸಿಸಿದ್ದೀರಾ? ಎಂದು ಕೇಳಿದನು.

"ನಾನು ಆಂಗ್ಲ ಭಾಷೆಯನ್ನು ಅಭ್ಯಸಿಸಿಲ್ಲ. ಆದರೆ ನೀವು ಅದರಲ್ಲಿನ ಯಾವುದೇ ಕಥೆಯನ್ನು ಸ್ಪಷ್ಟವಾಗಿ ತಿಳಿಸಿದಲ್ಲಿ, ಅದರಲ್ಲಿರುವ ಕಾವ್ಯಾತ್ಮಕತೆಯ ಬಗ್ಗೆ ವಿವರಿಸಬಲ್ಲೆ", ಎಂದರು ಗಣಪತಿ ಮುನಿಗಳು. ದೊರೆಸ್ವಾಮಿಯು ಶೇಕ್ಸಪಿಯರನ ಮ್ಯಾಕ್‌ಬೆತ್ ಕಥನವನ್ನು ವಿವರಿಸಿದರು. ಕೂಡಲೇ ಗಣಪತಿಮುನಿಗಳು ತಮ್ಮ ರಚನೆಯನ್ನು ನೀಡಲು ಪ್ರಾರಂಭಿಸಿದರು.

ಮ್ಯಾಕ್‌ಬೆತ್‌ನ ಕಥನವು ಸಂಸ್ಕೃತದಲ್ಲಿ ಗಣಪತಿ ಮುನಿಗಳ ಬಾಯಿಂದ ಓತ ಪ್ರೋತವಾಗಿ

ಆಶ್ಚರ್ಯಕರ ರೀತಿಯಲ್ಲಿ ಹರಿದು ಬರತೊಡಗಿತು. ಸಭಿಕರೆಲ್ಲರೂ ಗಣಪತಿ ಮುನಿಗಳ ಅಸಾಧಾರಣ ಕಾವ್ಯ ಶಕ್ತಿಯ ಬಗ್ಗೆ ರೋಮಾಂಚಿತರಾದರು. ಕಾವ್ಯಕಂಠರು ಶೇಕ್ಸಪಿಯರನ ಕಥೆಯ ಶೈಲಿಯ ಬಗ್ಗೆ ವಿವರಿಸತೊಡಗಿದರು. ಅಲ್ಲಿ ಸೇರಿದ್ದ ಆಂಗ್ಲ ಭಾಷೆಯಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು ಸಂಸ್ಕೃತವು ಶಕ್ತಿಶಾಲಿ ಮತ್ತು ಸುಂದರವಾದ ವ್ಯಕ್ತಪಡಿಸುವ ಮಾಧ್ಯಮವೆಂಬುದನ್ನು ಮನಸಾರೆ ಒಪ್ಪಿಕೊಂಡರು.

ಅದೇ ದಿನ ಸಂಜೆ ತಿರುವಲ್ಲಿಕೆನಿಯಲ್ಲಿ ಒಂದು ಸಭೆಯನ್ನು ಹೆಸರಾಂತ ವಿದ್ವಾಂಸರಾದ ಶ್ರೀ ಶ್ರೀನಿವಾಸ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿತ್ತು. ಆ ಸಭೆಯಲ್ಲಿ ಹಲವಾರು ಪ್ರಖ್ಯಾತ ವಿದ್ವಾಂಸರುಗಳಾದ ಹಲಸ್ಯ ಶಾಸ್ತ್ರಿ, ವಿ.ವೆಂಕಟರಾಯ ಶಾಸ್ತ್ರಿ ಮತ್ತು ನೀಲಮೇಘ ಶಾಸ್ತ್ರಿಗಳು ಪ್ರಮುಖರು. ಇವರೆಲ್ಲರೂ ಒಗಟುಗಳನ್ನು ಬಿಡಿಸುವ ಪರೀಕ್ಷೆಯನ್ನು ನಡೆಸುವವರಾಗಿದ್ದರು.

ಗಣಪತಿ ಮುನಿಗಳು ವೇದಿಕೆಯ ಮೇಲೆ ಪರೀಕ್ಷೆಗೆ ಸಿದ್ಧರಾಗಿ ಬಂದು ನಿಂತರು. ಅವರಿಗೆ ಅನೇಕ ಒಗಟುಗಳನ್ನು ಒಂದಾದಮೇಲೆ ಒಂದರಂತೆ ವೇಗವಾಗಿ ಕೇಳಲಾಯಿತು. ಅಷ್ಟೇ ವೇಗದಲ್ಲಿ ಮುನಿಗಳು ಸಮಸ್ಯೆಗೆ ಉತ್ತರವನ್ನು ನೀಡತೊಡಗಿ, ಕೊನೆಗೆ ಪರಿಕ್ಷಾಕಾರರ ಬಳಿ ಒಗಟುಗಳೇ ಇಲ್ಲವಾಗಿ, ಶ್ರೀವೆಂಕಟರಾಯ ಶಾಸ್ತ್ರಿಗಳು "ವಾಸಿಷ್ಠ ಮಹಾಶಯ, ನೀವು ನಮ್ಮೆಲ್ಲರ ಸಮಸ್ಯೆಗಳನ್ನೂ ನಿವಾರಿಸಿದಿರಿ" ಎಂದರು.

ವಿದ್ವಾಂಸರ ಸಭೆಗಳಲ್ಲಿ ನಡೆಯುವ ನಿಯಮಬಾಹಿರ ಸಂಚಿನ ಬಗ್ಗೆ ಗಣಪತಿ ಮುನಿಗಳಿಗೆ ಸ್ವಲ್ಪವೂ ಅರಿವಿರಲಿಲ್ಲ. ಅವರು ಬೆಳ್ಳಗಿರುವುದೆಲ್ಲ ಹಾಲೆಂದೇ ನಂಬಿದ್ದರು. ಅವರಿಗೆ ಒಮ್ಮೆ ಇದರ ಅರಿವಾದದ್ದು ಅವರು ಭಾಗವಹಿಸಿದ್ದ ಅವಧಾನ ಸಭೆಯಲ್ಲಿ. ಈ ಸಭೆಯು ಮೈಲಾಪುರದಲ್ಲಿ ಶ್ರೀನಾರಾಯಣ ಸುದರ್ಶನರ ನೇತೃತ್ವದಲ್ಲಿ ಕವಿ ಹಾಗೂ ಲೇಖಕರ ನಡುವೆ ನಡೆದ ಸಭೆ. ಇದರಲ್ಲಿನ ಕವಿಯೇ ಗಣಪತಿ ಮುನಿಗಳು. ಅವರಿಗೆ ಕೃಷ್ಣ-ರುಕ್ಮಿಣಿಯರ ವಿವಾಹದ ಸಂದರ್ಭವನ್ನು ಕಾವ್ಯಾತ್ಮಕವಾಗಿ ವಿವರಿಸಲು ಕೇಳಿಕೊಳ್ಳಲಾಯಿತು. ಅದು ಗಣಪತಿ ಮುನಿಗಳಿಗೆ ಮಕ್ಕಳಾಟವಾಗಿತ್ತು, ಹಾಗೆ ಅವರು ನಿಂತ ಸ್ಥಳದಲ್ಲೇ ಆಶು ಕವಿತೆಯನ್ನು ರಚಿಸಿದರು. ಅವರು ವೇಗವಾಗಿ ಕವಿತೆಯನ್ನು ರಚಿಸುತ್ತಿದ್ದರೆ, ಲೇಖಕರು ಅವರಿಗಿಂತ ವೇಗವಾಗಿ ಬರೆದುಕೊಳ್ಳುತ್ತಿರುವಂತೆ ನಟಿಸುತ್ತಾ ಇನ್ನೂ ವೇಗವಾಗಿ ಕವಿತೆಯನ್ನು ನೀಡಿ ಎಂದು ಕೂಗುತ್ತಿದ್ದರು. ಸ್ವಲ್ಪ ಸಮಯ ಹೀಗೇ ಕಳೆದನಂತರ ಗಣಪತಿ ಮುನಿಗಳಿಗೆ ಇಲ್ಲಿ ಏನೋ ಚೇಷ್ಟೆ ನಡೆಯುತ್ತಿದೆ ಎಂದು ಅನುಮಾನ ಬಂದು ಅವರು ಲೇಖಕರಿಗೆ ತಾವು ಬರೆದುಕೊಂಡದ್ದನ್ನು ಓದಲು ವಿನಂತಿಸಿಕೊಂಡರು. ಲೇಖಕರು ಸ್ವಲ್ಪ ಸ್ವಲ್ಪ ಓದಿದರೂ ಅದು ಗಣಪತಿ ಮುನಿಗಳು ರಚಿಸಿದ್ದ ಕವಿತೆಯಾಗಿರಲಿಲ್ಲ. ಅವರು ಬರೆದ ಶ್ಲೋಕದ ಶೈಲಿಯು ನಾರಾಯಣ ಸುದರ್ಶನರ ಕವಿತೆಯ ಶೈಲಿಯಾಗಿತ್ತು. ಸಭಿಕರಿಗೆ ಇದು ಅರಿವಾಗಿ ಅವರು ಕೋಪೋದ್ರಿಕ್ತರಾಗಿ ಸಭೆಯ ಅಧ್ಯಕ್ಷ ನಾರಾಯಣ ಸುದರ್ಶನರನ್ನು ತರಾಟೆಗೆ

ತೆಗೆದುಕೊಂಡರು. ಕಟ್ಟ ಕಡೆಯಲ್ಲಿ ಲೇಖಕರು ತಾವು ಮಾಡಿದ ಮೋಸವನ್ನು ಒಪ್ಪಿಕೊಂಡು ಸೋಲನ್ನನುಭವಿಸಿದರು. ಈ ಪರೀಕ್ಷೆಯು ಮುಗಿದ ನಂತರ ಮತ್ತೊಂದು "ನ್ಯಸ್ತಾಕ್ಷರಿ" ಪರೀಕ್ಷೆಯನ್ನು ನಡೆಸಲಾಯಿತು.

ನ್ಯಸ್ತಾಕ್ಷರಿ ಪರೀಕ್ಷೆಯಲ್ಲಿ ಒಂದು ಶ್ಲೋಕವನ್ನು ಆರಿಸಿಕೊಂಡು ಅದನ್ನು ಸಣ್ಣ ಸಣ್ಣ ಭಾಗಗಳನ್ನಾಗಿ ಮಾಡಿಕೊಂಡು ಪ್ರತಿಯೊಂದು ಭಾಗಕ್ಕೂ ಒಂದೊಂದು ಸಂಖ್ಯೆಯನ್ನು ಶ್ಲೋಕದಲ್ಲಿನ ಕ್ರಮದಂತೆ ನೀಡಿ, ಅವುಗಳನ್ನು ಒಂದೊಂದಾಗಿ ಭಾಗವಹಿಸುವವರಿಗೆ ನೀಡುವರು. ಅವರು ಅದರಲ್ಲಿರುವ ಪದವನ್ನು ನೆನಪಿನಲ್ಲಿಟ್ಟುಕೊಂಡು ಕಡೆಯಲ್ಲಿ ಸ್ತೋತ್ರವನ್ನು ರಚಿಸಬೇಕು. ಈ ಪರೀಕ್ಷೆಯಲ್ಲೂ ಮೋಸವಿತ್ತು. ಪರೀಕ್ಷೆಯ ಸರಿಯಾದ ಕ್ರಮದಂತೆ ಒಂದೊಂದಾಗಿ ಸಂಖ್ಯೆಗಳನ್ನು ನೀಡುವುದರ ಬದಲು ಗಣಪತಿ ಮುನಿಗಳಿಗೆ ಎಲ್ಲವನ್ನೂ ಒಮ್ಮೆಲೇ ಕೊಡಲಾಯಿತು. ಹೀಗಾಗಿ ಸ್ತೋತ್ರವನ್ನು ರಚಿಸಲು ಗಣಪತಿ ಮುನಿಗಳಿಗೆ ಸಮಯವನ್ನೇ ನೀಡಿರಲಿಲ್ಲ. ಆದರೂ ಗಣಪತಿ ಮುನಿಗಳು ತಮ್ಮ ಅಸಾಧಾರಣ ವಿದ್ವತ್ತಿನಿಂದ ಪದಗಳನ್ನು ಸರಿಯಾಗಿ ಜೋಡಿಸಿ ಸ್ತೋತ್ರವನ್ನು ದಾಖಲೆಯ ವೇಗದಲ್ಲಿ ರಚಿಸಿ ಸ್ತುತಿಸಿದ್ದಲ್ಲದೇ ಎಲ್ಲ ಶ್ಲೋಕಗಳನ್ನು ಹಿಂದು ಮುಂದಾಗಿಯೂ ಪಠಿಸಿದರು. ಗಣಪತಿ ಮುನಿಗಳ ಈ ಅಸಾಮಾನ್ಯ ಕಾರ್ಯವನ್ನು ಮುಕ್ತಕಂಠದಿಂದ ಹೊಗಳಿ ಹಾರ್ದಿಕವಾಗಿ ಚಪ್ಪಾಳೆಯನ್ನು ತಟ್ಟಿದರು.

ಮುಂದುವರೆದು, ಗಣಪತಿ ಮುನಿಗಳು ಆ ಸ್ತೋತ್ರದಮೇಲೆ ವ್ಯಾಖ್ಯಾನವನ್ನು ನೀಡಿದ್ದಲ್ಲದೇ ಅದರಲ್ಲಿದ್ದ ತಪ್ಪುಗಳನ್ನೂ ತೋರಿಸಿಕೊಟ್ಟರು. ಈ ಸ್ತೋತ್ರವನ್ನು ರಚಿಸಿದ್ದವರು ಅಧ್ಯಕ್ಷರಾದ ನಾರಾಯಣ ಸುದರ್ಶನರು. ಕಡೆಯಲ್ಲಿ ಗಣಪತಿ ಮುನಿಗಳು ಸ್ತೋತ್ರವನ್ನು ಹೊಗಳಿ ನಾರಾಯಣ ಸುದರ್ಶನರೆಡೆಗೆ ನೋಡಿದರು. ಗಣಪತಿ ಮುನಿಗಳ ದೊಡ್ಡ ಗುಣವನ್ನು ಕಂಡು ನಾರಾಯಣ ಸುದರ್ಶನರಿಗೆ ನಾಚಿಕೆಯಾಗಿ ತಲೆ ತಗ್ಗಿಸಿ ತಾವು ಮಾಡಿದ ಮೋಸದ ಕೃತ್ಯಕ್ಕೆ ಕ್ಷಮೆಯನ್ನು ಕೋರಿದರು. ಸಭೆಯು ಗಣಪತಿ ಮುನಿಗಳನ್ನು ಒಕ್ಕೊರಲಿನಿಂದ ಹೊಗಳಿ ಅವರನ್ನು ಗೌರವಿಸಿದರು.

ಗಣಪತಿ ಮುನಿಗಳು ಮದ್ರಾಸಿನಲ್ಲಿನ ತಮ್ಮ ಸಾಹಿತ್ಯ ಯಾತ್ರೆಯನ್ನು ಮುಗಿಸಿ ತಿರುವಣ್ಣಾಮಲೈಗೆ ಮರಳಿದರು. ಅಲ್ಲಿ ಅವರಿಗೆ ವೆಲ್ಲೂರಿನ ಕ್ರಿಶ್ಚಿಯನ್ ಕಾಲೇಜಿನಲ್ಲಿ ತೆಲುಗು ಪಂಡಿತರ ಹುದ್ದೆಗೆ ಆಹ್ವಾನವು ಕಾಯುತ್ತಿತ್ತು. ಮದ್ರಾಸಿನ ಶಿಷ್ಯರು ಈ ಹುದ್ದೆಯನ್ನು ಇವರಿಗೇ ಕೊಡುವುದರ ಬಗ್ಗೆ ಕೆಲಸವನ್ನು ಮಾಡಿದ್ದರು. ಮೊದಲಿಗೆ ಗಣಪತಿ ಮುನಿಗಳಿಗೆ ಇದನ್ನು ಸ್ವೀಕರಿಸಲು ಒಪ್ಪಿಗೆ ಇರಲಿಲ್ಲ. ಆದರೆ ಅವರ ಅಭಿಮಾನಿಗಳ ಒತ್ತಾಯದ ಮೇರೆಗೆ ಒಪ್ಪಿ ತಮ್ಮ ಸಂಸಾರವನ್ನು ವೆಲ್ಲೂರಿಗೆ ಬದಲಾಯಿಸಿದರು.

೮

ಇಂದ್ರ ಸೇನೆ

ಶಕ್ತಾಂ ದೇವಿ ವಿಧೇಹ್ಯಾರ್ತಾನಾಮವನೇ
ಇಂದ್ರಸ್ಯೇವ ಭುಜಾಂ ವಾಸಿಷ್ಠಸ್ಯ ಮತಿಮ್ ॥
– ಇಂದ್ರಾಣಿ ಸಪ್ತಶತಿ (74)

"ಓ ಇಂದ್ರಾಣಿ ಮಾತೆ! ಇಂದ್ರನ ತೋಳುಗಳಿಗೆ ಶಕ್ತಿ ನೀಡಿದಂತೆ, ಭಕ್ತರ ದುಃಖವನ್ನು ದೂರಮಾಡಲು ವಾಸಿಷ್ಠನ ಜ್ಞಾನವನ್ನೂ ಹರಸು."

ಭಿನ್ನಾಂ ಸಂಘಸಹಸ್ರೈಃ ಖಿನ್ನಾಂ ಶತ್ರುಭರೇಣ
ಪಾತುಂ ಭಾರತಭೂಮಿಂ ಮಾತರ್ದೇಹಿ ಬಲಂ ನಃ ॥
– ಇಂದ್ರಾಣಿ ಸಪ್ತಶತಿ (149)

"ಓ ಮಾತೆ! ಸಾವಿರಾರು ಗುಂಪುಗಳಿಂದ ಮತ್ತು ಶತ್ರು ಬಾಧೆಯಿಂದಾಗಿ ಮಹಾನ್ ಸಂಕಷ್ಟದಲ್ಲಿರುವ ಭರತಭೂಮಿಯನ್ನು ಉಳಿಸಲು ನಮ್ಮಲ್ಲಿ ಶಕ್ತಿಯನ್ನು ತುಂಬು."

ಭಾರತದಲ್ಲಿ ವೇದಗಳ ಬಗ್ಗೆ ಜ್ಞಾನವನ್ನು ಪ್ರಚಾರಮಾಡಲು ಅತ್ಯಂತ ಅಗತ್ಯವಿದೆ ಎಂಬುದಾಗಿ ಗಣಪತಿ ಮುನಿಗಳಿಗೆ ಅನಿಸಿತು. ದೇಶದಲ್ಲಿನ ಸಮಾಜವು ಭಾರತದ ಪುರಾತನ ಸಂಪ್ರದಾಯಗಳನ್ನು ಪಾಲಿಸಿದರೆ ದೇಶವು ಮತ್ತೊಮ್ಮೆ ಮಹಾನ್ ನಾಗರಿಕತೆಯ ಹಂತವನ್ನು ತಲುಪಬಹುದೆಂದು ಗಣಪತಿ ಮುನಿಗಳು ಆಶಿಸಿದರು.

ದೈವೀ ಕಳೆಯಿಂದ ಕೂಡಿದ, ಹೊಳೆಯುವ ಕಣ್ಣುಗಳುಳ್ಳ ಗಣಪತಿ ಮುನಿಗಳು ವೆಲ್ಲೂರಿನ ಕ್ರಿಶ್ಚಿಯನ್ ಕಾಲೇಜು ತಮಗೆ ನೀಡಿದ್ದ ತೆಲುಗು ಪಂಡಿತ ಹುದ್ದೆಗೆ ಸೇರಲು ಪ್ರವೇಶಿಸಿದಾಗ, ಕಾಲೇಜಿನ ಪ್ರಾಂಶುಪಾಲರೇ ಎದ್ದು ನಿಂತು ತುಂಬು ಗೌರವದೊಂದಿಗೆ ಕೈಗಳನ್ನು ಜೋಡಿಸಿ ಹಿಂದೂ ಪದ್ಧತಿಯಂತೆ ಇವರಿಗೆ ನಮಸ್ಕರಿಸಿ ಸ್ವಾಗತಿಸಿದರು. ಕಾಲೇಜಿನ ಚರಿತ್ರೆಯಲ್ಲೇ ಈ ರೀತಿಯಾಗಿ ಯಾರನ್ನೂ ಸ್ವಾಗತಿಸಿರಲಿಲ್ಲ. ನಂತರದ ದಿನಗಳಲ್ಲಿ ಪ್ರಾಂಶುಪಾಲರೇ, "ಗಣಪತಿ ಮುನಿಗಳು ಬಂದಾಗ ನಾನು ಪ್ರವಾದಿ ಡೇವಿಡ್‌ನನ್ನೇ ಅವರಲ್ಲಿ ನೋಡಿದೆ" ಎಂದು ಹೇಳಿದರು.

ಧಾರ್ಮಿಕ ಪ್ರಚಾರವು ಬ್ರಿಟಿಷರಿಗೆ ಹೊಸದೇನಾಗಿರಲಿಲ್ಲ. ಅವರ ಕಾಲೇಜಿನ ಪಠ್ಯ ಪುಸ್ತಕಗಳ ತುಂಬಾ ಕ್ರೈಸ್ತನ ಮಹತ್ವವನ್ನು ಹೊಗಳುವ ಅನೇಕ ಹೇಳಿಕೆಗಳಿದ್ದವು. ಆಂಗ್ಲ ಪ್ರಾಧ್ಯಾಪಕರು ಸಮಸ್ತ ಗೌರವವನ್ನೂ ತಮಗೇ ಸಲ್ಲಬೇಕೆಂದು ವಾದಿಸುತ್ತಿದ್ದರು ಹಾಗೂ ಪಡೆದುಕೊಳ್ಳುತ್ತಿದ್ದರು. ಭಾರತೀಯರು ಹಾಗೂ ಅವರ ಮತವನ್ನು ಅಷ್ಟಾಗಿ ಗೌರವಿಸುತ್ತಿರಲಿಲ್ಲ. ಭಾರತೀಯ ಸಂಸ್ಕೃತಿಯ ಬಗ್ಗೆ ಏನೂ ಅರಿಯದ ಹಾಗೂ ಸಂಸ್ಕೃತ ಭಾಷೆಯ ಬಗ್ಗೆ ಎಳ್ಳಷ್ಟೂ ಜ್ಞಾನವಿಲ್ಲದ ವಿದ್ಯಾರ್ಥಿಗಳು ಆಂಗ್ಲಭಾಷೆಯನ್ನು ಕಲಿಯಲು ಹೆಚ್ಚಿನ ಮಹತ್ವವನ್ನು ನೀಡುತ್ತಿದ್ದರು. ಭಾರತೀಯ ಸಂಸ್ಕೃತಿಯ ಬಗ್ಗೆ ಅಲ್ಪ ಸ್ವಲ್ಪ ಅರಿವಿದ್ದ ವಿದ್ಯಾರ್ಥಿಗಳೂ ಅದನ್ನು ತೋರ್ಪಡಿಸಲು ಅಂಜುತ್ತಿದ್ದರು. ಗಣಪತಿ ಮುನಿಗಳಿಗೆ ವಿದ್ಯಾ ಸಂಸ್ಥೆಗಳು ಮತೀಯ ಪ್ರಚಾರ ಕೇಂದ್ರಗಳಾಗುವುದು ಇಷ್ಟವಿರಲಿಲ್ಲ. "ವಿದ್ಯಾಸಂಸ್ಥೆಗಳು ಜ್ಞಾನಪ್ರಸಾರ ಕೇಂದ್ರಗಳಾಗಬೇಕೇ ಹೊರತು ಧರ್ಮ ಪ್ರಚಾರ ಕೇಂದ್ರಗಳಾಗಬಾರದು. ಧಾರ್ಮಿಕ ಕಟ್ಟುಪಾಡುಗಳಿಲ್ಲದ ಜ್ಞಾನವನ್ನು ಸ್ವತಂತ್ರ ವಾತಾವರಣದಲ್ಲಿ ಮಾತ್ರ ಪ್ರಸಾರಮಾಡಲು ಸಾಧ್ಯ. ಕಾಲೇಜುಗಳಲ್ಲಿ ಅಂತಹ ಸ್ವತಂತ್ರ ವಾತಾವರಣ ಇರಬೇಕು," ಎಂಬುದಾಗಿ ಗಣಪತಿ ಮುನಿಗಳು ಯೋಚಿಸಿದರು. ಕಾಲೇಜಿನಲ್ಲಿನ ಸಹೋದ್ಯೋಗಿ ಹಾಗೂ ವಿದ್ಯಾರ್ಥಿಗಳಲ್ಲಿ ಈ ಭಾವನೆಯನ್ನು ಉಂಟುಮಾಡಲು ಗಣಪತಿ ಮುನಿಗಳು ಪ್ರಯತ್ನಿಸುತ್ತಿದ್ದರು. ಹಿಂದೂ ಸಂಸ್ಕೃತಿ ಹಾಗೂ ವೇದಗಳ ಬಗೆಗಿನ ಜ್ಞಾನಪ್ರಸಾರದ ಬಗ್ಗೆ ಭಾಷಣ ಮಾಡತೊಡಗಿದರು.

ಕೆಲವು ಕ್ರಿಶ್ಚಿಯನ್ನರು ಗಣಪತಿ ಮುನಿಗಳನ್ನು ಭೇಟಿಯಾಗಿ, "ಶಾಸ್ತ್ರಿಗಳೇ, ನೀವು ಬೈಬಲ್ಲನ್ನು ಅಧ್ಯಯನ ಮಾಡಿದರೆ ಕ್ರೈಸ್ತ ಧರ್ಮದ ಮಹತ್ವವನ್ನು ಅರಿಯುವಿರಿ." ಎಂದರು. ಅದಕ್ಕೆ ಗಣಪತಿ ಮುನಿಗಳು, "ಪ್ರವಾದಿಯಾಗಿ ಕ್ರಿಸ್ತನ ಬಗ್ಗೆ ಅಪಾರ ಗೌರವವಿದೆ. ಬೈಬಲ್ಲಿನಲ್ಲಿರುವಂತೆ ಬೇರೆ ಧರ್ಮ ಗ್ರಂಥಗಳಲ್ಲೂ ತತ್ವೋಕ್ತಿಗಳಿರುವುದು. ಅವೆಲ್ಲಾ ವೈಯುಕ್ತಿಕ ಏಳ್ಗೆಗಾಗಿ ಇರುವುದು. ನಿಮಗೆ ನಿಜವಾದ ಜ್ಞಾನವನ್ನು ಅರಸುವ ಉದ್ದೇಶವಿದ್ದಲ್ಲಿ, ನೀವು ಯಾಕೆ ಬೇರೆ ಧರ್ಮ ಗ್ರಂಥಗಳನ್ನೂ ಅಧ್ಯಯನ ಮಾಡಬಾರದು? ಕೇವಲ ಬೈಬಲ್ಲಿಗೆ ಮಾತ್ರ ಆ ಜ್ಞಾನವನ್ನು ನೀಡಲು ಆಗುವುದಿಲ್ಲ. ಬೇರೆ ಧರ್ಮಗಳಲ್ಲಿ ಮಹತ್ತರವಾದ ತತ್ತ್ವಗಳಿಲ್ಲವೇ? ನಾವು ಭಾರತೀಯರು. ನಮ್ಮ ಸಂಸ್ಕೃತಿಯು ವೇದ ಸಂಸ್ಕೃತಿ. ಅದು ಒಬ್ಬ ಪ್ರವಾದಿಯ ಆಧ್ಯಾತ್ಮಿಕ ಉನ್ನತಿಯಿಂದ ಹುಟ್ಟಿದ್ದಲ್ಲ. ಅನೇಕ ಋಷಿಮುನಿಗಳಿಂದ ಧ್ಯಾನದ ಮೂಲಕ ಕಂಡುಕೊಂಡ ಆಧ್ಯಾತ್ಮಿಕ ಜ್ಞಾನ ಭಂಡಾರ. ಅದರಲ್ಲಿ ಸಂಕುಚಿತ ಸಿದ್ಧಾಂತಗಳಿಲ್ಲ. ನೀವು ನಮ್ಮ ದೇಶಕ್ಕೆ ಬಂದಿರುವಿರಿ. ನಮ್ಮ ನಾಡಿನ ಸಂಸ್ಕೃತಿಯನ್ನು ಸ್ವೀಕರಿಸುವುದು ಒಳ್ಳೆಯದು. ನಮಗೆ ನಮ್ಮ ದೇಶದಮೇಲೆ ಅಪಾರವಾದ ವಿಶ್ವಾಸವಿದೆ. ನಮ್ಮ ದೇಶದ ಸಂಸ್ಕೃತಿಯೇ ನಮ್ಮ ಸಂಸ್ಕೃತಿ. ಅದನ್ನು ಟೀಕಿಸುವುದು ತಪ್ಪು." ಎಂದು ಉತ್ತರಿಸಿದರು. ಅಲ್ಲಿ ನೆರೆದಿದ್ದ ಕ್ರಿಶ್ಚಿಯನ್ನರು ಗಣಪತಿ ಮುನಿಗಳ ಈ ರೀತಿಯ ನೇರ ನುಡಿಗಳಿಂದ ದಂಗಾದರು.

ದಿನದಿಂದ ದಿನಕ್ಕೆ ವಿದ್ಯಾರ್ಥಿಗಳು ಗಣಪತಿ ಮುನಿಗಳ ಉತ್ತೇಜನಕಾರಿ ಭಾಷಣದಿಂದ ಪುನರುಜ್ಜೀವಿತರಾಗತೊಡಗಿ ತಮ್ಮಲ್ಲಿದ್ದ ದೇಶದ ಬಗೆಗಿನ ಹಾಗೂ ದೇಶದ ಸಂಪ್ರದಾಯಗಳ ಬಗೆಗಿನ ತಾತ್ಸಾರ ಭಾವದಿಂದ ಹೊರಬಂದು ಅಭಿಮಾನವನ್ನು ಬೆಳೆಸಿಕೊಳ್ಳತೊಡಗಿದರು. ಸಹೋಪಾಧ್ಯಾಯರುಗಳಾದ ಶಿವಸುಬ್ರಹ್ಮಣ್ಯಂ ಹಾಗೂ ಸರ್ವೆಪಲ್ಲಿ ನರಸಿಂಹನ್ (ಪ್ರಣವಾನಂದ) ಗಣಪತಿ ಮುನಿಗಳ ಶಿಷ್ಯರಾದರು. ಗಣಪತಿ ಮುನಿಗಳು "ಇಂದ್ರ ಸೇನಾ" ಎಂಬ ಸಂಸ್ಥೆಯನ್ನು ಪ್ರಾರಂಭಮಾಡಿದರು. ಅದರಲ್ಲಿ ಆಸಕ್ತಿಯುಳ್ಳ ಹಾಗೂ ಸಮರ್ಪಣಾ ಭಾವವುಳ್ಳ ವಿದ್ಯಾರ್ಥಿಗಳನ್ನು ನೋಂದಾಯಿಸಿಕೊಳ್ಳತೊಡಗಿದರು. ಇವರುಗಳು ತಮ್ಮ ಕರ್ಮದ ಫಲವನ್ನು ದೇವರಿಗೆ ಅರ್ಪಿಸುವಂತಿದ್ದರು. ಈ ಸಂಸ್ಥೆಯು ತಮ್ಮ ಧ್ಯೇಯದಲ್ಲಿ ಸಮಾಜ ಸುಧಾರಣೆ, ಆಧ್ಯಾತ್ಮಿಕ ವಿಕಸನಗಳನ್ನು ಸೇರಿಸಿಕೊಂಡಿತು. ಸೇನೆಯ ಧ್ಯೇಯೋದ್ದೇಶಗಳು ಈ ಕೆಳಗಿನಂತೆ ಇತ್ತು:

1. ವಿದ್ಯಾಭ್ಯಾಸವು ಧಾರ್ಮಿಕ ಪ್ರಚಾರಗಳಿಂದ ಹೊರತಾಗಿರಬೇಕು.
2. ಭಾರತೀಯರ ನಂಬಿಕೆಗಳನ್ನು ಕುಂಠಿತಗೊಳಿಸಲು ಆಂಗ್ಲರಿಗೆ ಯಾವುದೇ ಅಧಿಕಾರವಿಲ್ಲ
3. ಭಾರತೀಯರಲ್ಲಿ ವೇದ ಜ್ಞಾನವನ್ನು ಪ್ರಸಾರ ಮಾಡಬೇಕು
4. ಪ್ರತಿಯೊಬ್ಬರೂ ಜ್ಞಾನವನ್ನು ಪಡೆಯಲು ಅರ್ಹರು. ಜಾತಿ, ಮತ, ಧರ್ಮಗಳ ಆಧಾರದ ಮೇಲೆ ವಿದ್ಯೆಯು ಅವಲಂಬಿತವಾಗಿರಕೂಡದು. ಅಂದರೆ ಸಮಸ್ತರೂ ವಿದ್ಯೆಯನ್ನು ಕಲಿಯಲು ಅರ್ಹರು.
5. ಪ್ರತಿಯೊಬ್ಬ ಸದಸ್ಯನೂ ಹೃದಯಪೂರ್ವಕವಾಗಿ ಧ್ಯಾನ ಮಾಡತಕ್ಕದ್ದು ಹಾಗೂ ತನ್ನಂತರಂಗದಲ್ಲಿರುವ ಇಂದ್ರ ಶಕ್ತಿಯನ್ನು ಉದ್ದೀಪನಗೊಳಿಸಿಕೊಳ್ಳಬೇಕು.

ವೇದ ಜ್ಞಾನವನ್ನು ಪ್ರಸಾರಮಾಡುವುದು ಸಂಸ್ಥೆಯ ಮೂಲ ಉದ್ದೇಶ. ಪಾಠ ಪ್ರವಚನಗಳಲ್ಲಿ ವೇದಕಾಲದ ಸಂಸ್ಕೃತಿ, ಗಂಡು ಹೆಣ್ಣುಗಳ ನಡುವೆ ಸಮಾನತೆ ಮತ್ತು ನಿಃಸ್ವಾರ್ಥ ಸೇವೆಗಳೇ ಮುಖ್ಯ ವಿಷಯಗಳಾಗಿದ್ದವು. ಗಣಪತಿ ಮುನಿಗಳ ಭಾಷಣದ ಮೂಲಕ ಹಿಂದೂ ಸಂಸ್ಕೃತಿಯ ಮಹತ್ವ ಇತ್ಯಾದಿ ವಿಷಯಗಳು ವಿದ್ಯಾರ್ಥಿಗಳ ಮನಸ್ಸಿನಲ್ಲಿ ನಾಟತೊಡಗಿತು.

ಭಗವಂತನ ದೈವೀ ಶಕ್ತಿಯ ಸಹಾಯವಿಲ್ಲದೇ ಭಾರತ ದೇಶವು ಸಂಪೂರ್ಣವಾಗಿ ಸ್ವತಂತ್ರವಾಗುವುದು ಅಸಾಧ್ಯವೆಂದು ಗಣಪತಿ ಮುನಿಗಳ ಬಲವಾದ ನಂಬಿಕೆಯಾಗಿತ್ತು. ದೈಹಿಕ ಹಾಗೂ ಆಧ್ಯಾತ್ಮಿಕ ಸ್ವಾತಂತ್ರ್ಯವನ್ನು ಹೊಂದದೇ, ದೇಶಕ್ಕೆ ರಾಜಕೀಯ ಸ್ವಾತಂತ್ರ್ಯವೊಂದೇ ಬಂದಲ್ಲಿ ಅದು ಅಸ್ಥಿರವಾದ ಸ್ವಾತಂತ್ರ್ಯವೆಂದು ಪದೇ ಪದೇ ವಾದಿಸುತ್ತಿದ್ದರು. ಹಾಗಾಗಿ ಅವರು ಕ್ರಾಂತಿಕಾರಿ ಮಾರ್ಗಗಳನ್ನು ಬೋಧಿಸುವುದಕ್ಕೆ ಮೊದಲು ವೈಯುಕ್ತಿಕ ಅಭಿವೃದ್ಧಿಗಾಗಿ ಯೋಜನೆಗಳನ್ನು ತಯಾರು ಮಾಡಲು ತೊಡಗಿದರು.

"ಇಂದ್ರೋ ವಿಶ್ವಸ್ಯ ರಾಜತಿ" (ಪ್ರಪಂಚವನ್ನಾಳುವವನು ಇಂದ್ರ) ಎಂಬ ಒಂದು ಸಾಲಿನ ಮಂತ್ರವನ್ನು ಇಂದ್ರ ಸೇನೆಯ ಸದಸ್ಯರಿಗೆ ಶಪಥವನ್ನಾಗಿ ಸ್ವೀಕರಿಸಲು ನೀಡಲಾಯಿತು. "ಉಮಾಮ್ ವಂದೇ ಮಾತರಂ" ಎಂಬುದು ಅವರ ಘೋಷಣೆಯಾಯಿತು. ಸಮಾಜವು ವಿಶ್ವಮಾತೆಯಾದ ಉಮಾದೇವಿಯನ್ನು ಭಾರತ ಮಾತೆ, ಭಾರತೀಯರ ತಾಯಿನಾಡು ಎಂಬುದಾಗಿ ಪರಿಗಣಿಸಿತು.

ಗಣಪತಿ ಮುನಿಗಳ ನೇತೃತ್ವದಲ್ಲಿ ಅನೇಕರು ಈ ಸಮಾಜದ ಸದಸ್ಯರಾದರು. ಮದ್ರಾಸ್, ಚಿತ್ತೂರು ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಅನೇಕ ಶಾಖೆಗಳು ಹುಟ್ಟಿಕೊಂಡವು.

ಈ ಸಮಾಜವು ತಮ್ಮ ಸದಸ್ಯರ ಕೇವಲ ಆಧ್ಯಾತ್ಮಿಕ ಜ್ಞಾನಾರ್ಜನೆಯನ್ನು ಮಾತ್ರ ಮುಖ್ಯ ಉದ್ದೇಶವನ್ನಾಗಿಸಿಕೊಂಡಿದ್ದರೂ, ಬ್ರಿಟಿಷ್ ಸರ್ಕಾರವು ತಮಗೆ ದೇಶದ ಸ್ವಾತಂತ್ರ್ಯದ ಬಗ್ಗೆ ಅಲ್ಲಲ್ಲಿ ಘೋಷಣೆಗಳು ಆಗುತ್ತಿರುವುದರ ಬಗ್ಗೆ ವರದಿಗಳು ಬರುತ್ತಿದ್ದರಿಂದ ಅವರು ಗಣಪತಿ ಮುನಿಗಳ ಚಲನವಲನಗಳ ಮೇಲೆ ನಿಗಾ ಇಟ್ಟಿದ್ದರು.

೬

ರೇಣುಕಾ ಮಾತೆಯ ದೈವೀ ದರ್ಶನ

ಯಃ ಕುಂಡಲೀಪಟ್ಟಣರಾಜಧಾನೀ-
ಮಾಲೋಕತೇ ಕಾಮಪಿ ಕೃತ್ತಮಸ್ತಾಂ
ನಿಸ್ಸಾರಮಾನಂದಕಲಾವಿಹೀನಂ
ಸಂಸಾರಮೇತಂ ಸ ಜಹಾತಿ ಬುದ್ಧ್ಯಾ ॥
– ಉಮಾಸಹಸ್ರಮ್ (7–25–8)

"ಕುಂಡಲೀಪುರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿರುವ ಹಾಗೂ ತನ್ನ ಶಿರವನ್ನು ಕಡಿದಿರುವ ರೇಣುಕಾ ದೇವಿಯನ್ನು ಯಾರು ಈ ಸ್ಥಿತಿಯಲ್ಲಿ ದರ್ಶನ ಮಾಡುತ್ತಾರೋ ಅವರು ಯಾವುದೇ ಆಸಕ್ತಿಯಿರದ ಮತ್ತು ಸಂತೋಷರಹಿತವಾದ ಪ್ರಾಪಂಚಿಕ ಜೀವನವನ್ನು ತ್ಯಜಿಸಿ ಅದರ ಬಗ್ಗೆ ನಿರಾಸಕ್ತಿಯನ್ನು ಬೆಳೆಸಿಕೊಳ್ಳುವರು."

ಪಾದ್ಯೆ ವೀಡು ಒಂದು ತೀರ್ಥಕ್ಷೇತ್ರ. ಇದು ವೆಲ್ಲೂರಿನ ಕಮಂಡಲು ನದಿಯ ದಡಲ್ಲಿರುವುದು. ಈ ಕ್ಷೇತ್ರದಲ್ಲಿ ದೇವತೆಗಳು ಪೂಜಿಸುವ ಹಾಗೂ ದಶ ಮಹಾವಿದ್ಯೆಗಳ ಮೂರ್ತಿವೆತ್ತ ಮತ್ತು ಪರಶುರಾಮರ ಮಾತೆಯಾದ ರೇಣುಕಾದೇವಿಯು ನೆಲಸಿರುವಳು. ಪಾದ್ಯೆ ಅಂದರೆ ಹಾವಿನ ಹೆಡೆ ಎಂದರ್ಥ. ವೀಡು ಅಂದರೆ ಮನೆ ಎಂದು. ಇದರ ಸಂಸ್ಕೃತ ರೂಪವೇ ಕುಂಡಲೀಪುರಂ. ಇಂದ್ರನ ಶಕ್ತಿಗೆ ಮತ್ತೊಂದು ಹೆಸರೇ ಕುಂಡಲಿನಿ ಶಕ್ತಿ. ಈ ಶಕ್ತಿಯು ಮನುಷ್ಯನ ಮೂಲಾಧಾರ ಚಕ್ರದಲ್ಲಿ ಹಾವಿನಂತೆ ಸುತ್ತಿಕೊಂಡಿರುತ್ತದೆ. ಯೋಗಿಗಳು ಅದನ್ನು ಎಬ್ಬಿಸಿ ಸಹಸ್ರಾರ ಚಕ್ರದೆಡೆಗೆ ಏರಿಸುವರು. ಈ ಹಂತದಲ್ಲಿ ಶಕ್ತಿಯು ತನ್ನ ಶಿರವನ್ನು ಹಾವಿನ ಹೆಡೆಯಂತೆ ಮೇಲೆದ್ದು ವೀಣಾದಂಡವೆಂದು ಕರೆಯುವ ಬೆನ್ನುಹುರಿಯ ಮೂಲಕ ಹರಿದು ಶಿರವನ್ನು ತಲುಪುವುದು. ಇದನ್ನು ಕುಂಡಲಿನಿ ಎಂದು ಕರೆಯುವುದೇಕೆಂದರೆ ಅದು ಸುಪ್ತ ಸ್ಥಿತಿಯಿಂದ ತಂತಾನೇ ಸುರಳಿ ಬಿಚ್ಚಿಕೊಂಡು ಹಾವಿನ ಹೆಡೆಯಂತೆ ಮೇಲೇರುವುದು. ಅದು ಯೋಗಿಗಳಲ್ಲಿ ಅಭಿವ್ಯಕ್ತಗೊಂಡಾಗ ಯೋಗಿಯ ಕಪಾಲವು ಭೇದಿಸುವುದು. ರೇಣುಕಾ ದೇವಿಯ ಶಿರವನ್ನು ಭೇದಿಸಿದ ಶಕ್ತಿಯನ್ನು ಛಿನ್ನಮಸ್ತ ಶಕ್ತಿ ಎನ್ನುವರು. ಆದ್ದರಿಂದ ಕುಂಡಲಿನಿಯು ಕಪಾಲವನ್ನು ಒಡೆದು ತೆರೆದಾಗ ಅದನ್ನು ಛಿನ್ನಮಸ್ತಾ ದೇವಿ ಎನ್ನುವರು.

1906 ರ ನವರಾತ್ರಿ ಉತ್ಸವದಲ್ಲಿ ಗಣಪತಿ ಮುನಿಗಳು ತಮ್ಮ ಸಂಸಾರದೊಂದಿಗೆ ಪಾದ್ಯೆವೀಡು ಊರಿಗೆ ಬಂದರು. ಅಲ್ಲಿ ರೇಣುಕಾ ದೇವಿಯನ್ನು ದರ್ಶಿಸಿದ ಕೂಡಲೇ ಅವರಿಗೆ ದೇವಿಯ ಶಕ್ತಿಯ ಅರಿವಾಗಿ ಅಲ್ಲೇ ತಪಸ್ಸನ್ನು ಮಾಡಲು ತೀರ್ಮಾನಿಸಿದರು. ಡಿಸೆಂಬರ್ ತಿಂಗಳಿನ ರಜೆಯಲ್ಲಿ ಇಲ್ಲಿ ಬಂದು ನಲವತ್ತು ದಿನಗಳ ತಪಸ್ಸನ್ನಾಚರಿಸಲು ಪ್ರಾರಂಭಿಸಿದರು. ಮುವ್ವತ್ತೊಂಬತ್ತು ದಿನಗಳ ತಪಸ್ಸು ಯಾವ ಅಡೆ ತಡೆಗಳಿಲ್ಲದೆ ಸಾಗಿತು ಹಾಗೂ ಅವರ ದೇಹವು ನಿಃಶಕ್ತಿಯಿಂದ ಸಾಕಷ್ಟು ಕುಗ್ಗಿತ್ತು. ಆದರೆ ಪದೇ ಪದೇ ಕುಂಡಲಿನೀ ಶಕ್ತಿಯು ಜಾಗೃತವಾಗುತ್ತಿದ್ದದ್ದರಿಂದ ಅವರ ಮುಖವು ದಿವ್ಯ ಕಾಂತಿಯಿಂದ ಹೊಳೆಯುತ್ತಿತ್ತು. ಕಡೇ ದಿನದ ತಪಸ್ಸಿನ ಸಮಯದಲ್ಲಿ ಗಣಪತಿ ಮುನಿಗಳು ಮಂದಿರದಲ್ಲಿ ಕುಳಿತು ಆಳವಾದ ಧ್ಯಾನದಲ್ಲಿ ಮಗ್ನರಾಗಿದ್ದರು. ಮಧ್ಯರಾತ್ರಿಯ ಹೊತ್ತಿಗೆ ಅವರ ಬೆನ್ನುಮೂಳೆಯಲ್ಲಿ ವಿಪರೀತ ನೋವಾಗತೊಡಗಿತು. ನೋವನ್ನು ತಡೆಯಲಾರದೇ ಅವರು ನೆಲದಮೇಲೆ ಅಂಗಾತವಾಗಿ ಮಲಗಿ ಧ್ಯಾನವನ್ನು ಮುಂದುವರೆಸಿದರು. ಇದ್ದಕ್ಕಿದ್ದಂತೆ ಅವರ ಶರೀರವು ತಾಳೆ ಮರದಂತೆ ಉದ್ದವಾಗಿ ಬೆಳೆಯಿತು. ಅವರಿಗೆ ಗೆಜ್ಜೆಯ ಧ್ವನಿಯು ಕೇಳಿಸತೊಡಗಿತು. ಮಧುರವಾದ ಮುಗುಳ್ನಗೆಯ ಮುಖದೊಂದಿಗೆ ರೇಣುಕಾದೇವಿಯು ಗಣಪತಿ ಮುನಿಗಳ ಮುಂದೆ ಪ್ರತ್ಯಕ್ಷಳಾದಳು. ಅವಳ ನಗುಮುಖವು ಗಣಪತಿ ಮುನಿಗಳ ಹೃದಯದೊಳಗೆ ಆಗುತ್ತಿದ್ದ ತಳಮಳವನ್ನು ಕಡಿಮೆ ಮಾಡಿತು. ನಡುಗುತ್ತಿರುವ ಕೈಗಳಿಂದ ಅವಳ ಪಾದಗಳನ್ನು ಮುಟ್ಟಿದರು. ಕಣ್ಣುಗಳಿಂದ ಧಾರಾಕಾರವಾಗಿ ಅಶ್ರುವು ಹರಿದುಬರುತ್ತಿದ್ದರೂ ಮಾತೆಯನ್ನು ಈ ಶ್ಲೋಕದ ಮೂಲಕ ಹೊಗಳಿದರು:

ಭಾಹಿ ವಿವಿಧಾಕೃತಿಮತೀ ದ್ವಿಜಸಮೂಹೇ
ಪಾಹಿ ಗತಿಹೀನಮಖಿಲೇಶ್ವರಿ ಕುಲಂ ನಃ
ದೇಹಿ ಬಹುಕಾಲಭಜಕಾಯ ವರಮೇತಂ
ಯಾಹಿ ನಗನಂದಿನಿ ಯಶಃ ಶಶಿವಲಕ್ಷಂ ॥

– ಉಮಾಸಹಸ್ರಮ್ (9–35–2)

"ಓ ಪಾರ್ವತಿ ಮಾತೇ! ನಮ್ಮ ಜನಗಳಲ್ಲಿ ಒಳ್ಳೆಯ ಆಲೋಚನೆಗಳನ್ನು ದಯಪಾಲಿಸು. ಅನಾಥವಾದ ನಮ್ಮ ಭರತ ವಂಶವನ್ನು ರಕ್ಷಿಸು. ಅನೇಕ ಕಾಲದಿಂದ ನಿನ್ನ ಭಕ್ತನಾದ ನನಗೆ ವರವನ್ನು ನೀಡು. ಚಂದ್ರನಂತೆ ತಂಪಾಗಿರುವ ನಿನ್ನ ಖ್ಯಾತಿಯನ್ನು ಹೀಗೆಯೇ ಉಳಿಸಿಕೊ.

ವಾರಯತಿ ಘೋರತರಪಾತಕಸಮೂಹಂ
ವರ್ಧಯತಿ ಧರ್ಮಮಪಿ ಶರ್ಮಕರಮಂತೇ
ಕಿಂಕರಜನಸ್ಯ ನ ಕಿಮಾವಹತಿ ಭವ್ಯಂ
ಶಂಕರಪುರಂಧ್ರಿ ತವ ಪಾದಪರಿಚರ್ಯಾ ॥

ಉಮಾಸಹಸ್ರಮ್ (9–35–3)

"ಶಿವನ ಮಹಿಷಿಯೇ, ನಿನ್ನ ಅಡಿದಾವರೆಗಳ ಶುಶ್ರೂಷೆಯು ಮಹಾಪಾಪಗಳ ಸಮೂಹವನ್ನು ನಿವಾರಣ ಮಾಡುತ್ತದೆ. ಕೊನೆಯಲ್ಲಿ ಮಂಗಳವನ್ನುಂಟುಮಾಡುವ ಧರ್ಮವನ್ನು ಅಭಿವೃದ್ಧಿಗೊಳಿಸುತ್ತದೆ. ಶಂಕರನ ಸತಿಯೇ, ನಿನ್ನ ಪಾದಸೇವೆಯು ಭಕ್ತ ಜನರಿಗೆ ಯಾವ ಒಳಿತನ್ನು ತಾನೇ ಮಾಡುವುದಿಲ್ಲ?"

ತನ್ನ ಉತ್ಕಟ ಭಕ್ತನ ಈ ವಿಧದ ಪ್ರಾರ್ಥನೆಯಿಂದ ಸಂಪೂರ್ಣವಾಗಿ ಕರಗಿದ ರೇಣುಕಾ ದೇವಿಯು ತನ್ನ ಕೈಗಳನ್ನು ಮೇಲೆತ್ತಿ ಗಣಪತಿ ಮುನಿಗಳನ್ನು ಹರಸಿ ತನ್ನನ್ನು ಹಿಂಬಾಲಿಸುವಂತೆ ತಿಳಿಸಿದಳು. ದೇವಿಯು ಗಣಪತಿ ಮುನಿಗಳ ಎಡ ತೊಡೆಯಮೇಲೆ ಗೀರಿದಳು. ಅದರಿಂದ ಅವರ ಮೈಯಲ್ಲಿ ವಿದ್ಯುತ್ ಸಂಚಾರವಾಗಿ ಬೆನ್ನು ನೋವು ಮಾಯವಾಯಿತು. ಎದ್ದು ನಿಂತ ಗಣಪತಿ ಮುನಿಗಳು ದೇವಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿದರು. ಗಣಪತಿ ಮುನಿಗಳನ್ನು ಹಿಂದಿಟ್ಟುಕೊಂಡು ದೇವಿಯು ಮಂದಿರದ ಹಿಂಭಾಗದಲ್ಲಿರುವ ಬಿಲ್ವ ವೃಕ್ಷದೆಡೆಗೆ ನಡೆದಳು. ದೇವಿಯು ಆ ವೃಕ್ಷದ ಬುಡದಲ್ಲಿ ಕುಳಿತಳು ಹಾಗೂ ಗಣಪತಿ ಮುನಿಗಳು ದೇವಿಯ ಪಾದದಡಿಯಲ್ಲಿ ಕುಳಿತರು. ಸ್ವಲ್ಪ ಸಮಯದ ನಂತರ ದೇವಿಯು ಅಲ್ಲಿಂದ ಎದ್ದು ಗಣಪತಿಯೊಡನೆ ಪಕ್ಕದಲ್ಲಿದ್ದ ಏಕಮುಖ ಕುಮಾರಸ್ವಾಮಿಯ ಮಂದಿರವನ್ನು ಪ್ರವೇಶಿಸಿದಳು. ಅಲ್ಲಿ ದೇವಿಯು ಕುಮಾರಸ್ವಾಮಿಯ ಹಸ್ತದಲ್ಲಿದ್ದ ಶಕ್ತ್ಯಾಯುಧವನ್ನು ತೆಗೆದುಕೊಂಡು ಗಣಪತಿ ಮುನಿಗಳಿಗೆ ನೀಡಿ ಅಲ್ಲಿಂದ ನೇರವಾಗಿ ತನ್ನ ಮಂದಿರವನ್ನು ಪ್ರವೇಶಿಸಿ ಅಂತರ್ಧಾನಳಾದಳು.

ಗಣಪತಿ ಮುನಿಗಳು ಈ ಪವಾಡರೂಪದ ದೃಶ್ಯದಿಂದ ಹೊರಬಂದು ತನ್ನ ಕಣ್ಣುಗಳನ್ನು ತೆರೆದಾಗ ಅವರು ಯಾವ ಸ್ಥಿತಿಯಲ್ಲಿ ಮಲಗಿದ್ದರೋ ಅದೇ ಸ್ಥಿತಿಯಲ್ಲಿದ್ದರು. ಆದರೆ ರೇಣುಕಾ ದೇವಿಯು ಇವರ ತೊಡೆಯನ್ನು ಗೀರಿದ್ದ ಸ್ಥಳದಲ್ಲಿ ರಕ್ತದ ಗುರುತುಗಳಿದ್ದವು. ಇದರಿಂದ ಗಣಪತಿ ಮುನಿಗಳು ಆನಂದತುಂದಿಲರಾಗಿ ಮತ್ತೆ ಧ್ಯಾನದಲ್ಲಿ ಮುಳುಗಿದರು.

ಮತ್ತೆ ಅದೇ ದೃಶ್ಯವು ಕಾಣಿಸತೊಡಗಿತು. ಈ ಬಾರಿ ದೇವಿಯು ಗಣಪತಿ ಮುನಿಗಳ ಬಲ ತೊಡೆಯನ್ನು ಗೀಚಿ, ನಂತರ ಮಂದಿರವನ್ನು ಸುತ್ತಿ ಬಳಸಿ ಮಂದಿರದ ಉತ್ತರ ದಿಕ್ಕಿಗೆ ಹೋಗಿ, ಮರಳಿ ಮಂದಿರದೊಳಗೆ ಬಂದು ಅದೃಶ್ಯಳಾದಳು.

ಗಣಪತಿ ಮುನಿಗಳು ರೇಣುಕಾ ದೇವಿಯ ತೀವ್ರವಾದ ದಯೆ ಹಾಗೂ ಕರುಣೆಯನ್ನು ಕಂಡು ಅತೀವ ಆನಂದವನ್ನು ಅನುಭವಿಸಿದರು. ಕುಮಾರಸ್ವಾಮಿಯ ಆಯುಧವನ್ನು ತನಗೆ ನೀಡಿದ್ದು ದಿವ್ಯಾಸ್ತ್ರವೆಂದೇ ಭಾವಿಸಿ, ನಂತರ ವೆಲ್ಲೂರಿಗೆ ಮರಳಿದರು.

೧೦

ಕಾಲೇಜಿನ ಹುದ್ದೆಯಿಂದ ನಿವೃತ್ತಿ

ಕಿನ್ನು ಸುಕೃತಂ ಮಯಾ ಕೃತಮಖಿಲೇಶ್ವರಿ ಕಿಂ ತಪಸ್ತಪ್ತಂ
ಕ್ರೀಡಯಸಿ ಮಾಂ ಪ್ರತಿಕ್ಷಣಮಾನಂದಸುಧಾನಿಧಾವಂತಃ ॥
– ಉಮಾಸಹಸ್ರಮ್ (4–14–12)

“ಓ ಸಮಸ್ತರ ಸಾಮ್ರಾಜ್ಞಿಯೇ! ನೀನು ನನ್ನನ್ನು ಆನಂದ ಸಾಗರದಲ್ಲಿ ಈಜುವಂತೆ ಮಾಡಿದ್ದೀಯೆ. ಇದಕ್ಕಾಗಿ ನಾನು ಯಾವ ಅರ್ಹತೆಯನ್ನು ಪಡೆದುಕೊಂಡೆ? ಯಾವ ತಪಸ್ಸನ್ನು ಆಚರಿಸಿದೆ?”

ಸಮಸ್ತ ಮಂತ್ರಗಳ ದೇವತೆಯಾದ ರೇಣುಕಾದೇವಿಯು ಸಾಕ್ಷಾತ್ಕಾರ ಮಾಡಿಕೊಂಡ ನಂತರ ಗಣಪತಿ ಮುನಿಗಳು ಎಲ್ಲ ಮಂತ್ರಗಳನ್ನೂ ಕರತಲಾಮಲಕ ಮಾಡಿಕೊಂಡರು. ಮಾತೆಯು ರೇಣುಕಾದೇವಿಯ ರೂಪದಲ್ಲಿ ಇವರಿಗೆ ಹರಸಿ, ಅವರ ಕುಂಡಲಿನಿಯನ್ನು ಜಾಗೃತಿಗೊಳಿಸಿ ಅವರನ್ನು ಆನಂದಸಾಗರದಲ್ಲಿ ಈಜುವಂತೆ ಮಾಡಿದಳು. ಇಲ್ಲಿಯವರೆಗೂ ದೇವಿಯು ಗಣಪತಿ ಮುನಿಗಳ ಮನೆಯ ಸದಸ್ಯರ ಕರೆಗೆ ಓಗೊಡುತ್ತಿದ್ದಳು. ಅವರ ತಂದೆ ಹಾಗೂ ಗುರುಗಳೆಂದು ಗಣಪತಿ ಮುನಿಗಳು ಪರಿಗಣಿಸಿದ ನೃಸಿಂಹಶಾಸ್ತ್ರಿಗಳು ಅವರಿಗೆ ಮಂತ್ರವನ್ನು ನೀಡಿ, ಶ್ರೀವಿದ್ಯಾ ಮಂತ್ರವನ್ನು ಉಪದೇಶಿಸಿ ವಿಶ್ವ ದೇವಿಯ ಅನುಗ್ರಹವನ್ನು ಪ್ರಚೋದಿಸಿದರು.

2–11–1907 ರಾತ್ರೆಯ ಮೂರನೇ ಝಾವದಲ್ಲಿ ಗಣಪತಿ ಮುನಿಗಳಿಗೆ ವಿಚಿತ್ರ ಅನುಭವವಾಗಿ ಅವರನ್ನು ನಡುಗಿಸಿತು. ಗಣಪತಿ ಮುನಿಗಳು ಮಲಗಿದ್ದಲ್ಲೇ ಧ್ಯಾನದ ಸ್ಥಿತಿಯಲ್ಲಿ ದೇವಿಯ ಅನುಗ್ರಹವನ್ನು ಮೆಲುಕು ಹಾಕುತ್ತಿದ್ದಾಗ ಇದ್ದಕ್ಕಿದ್ದಂತೆ ಒಬ್ಬ ಶ್ವೇತ ವಸ್ತ್ರಧಾರಿ ವ್ಯಕ್ತಿಯು ಇವರೆದುರಿಗೆ ಬಂದು, “ನಾನು ನನ್ನ ಶರೀರವನ್ನು ತ್ಯಜಿಸುತ್ತಿರುವೆ. ನೀನು ನನ್ನ ನಂತರ ದೇಶದ ಒಳಿತಾಗುವ ಕಾರ್ಯವನ್ನು ತೆಗೆದುಕೊಳ್ಳಬೇಕು. ಏಳು, ಎದ್ದೇಳು, ನಿನ್ನ ತಪೋ–ಯಾತ್ರೆಯನ್ನು ಪ್ರಾರಂಭಿಸು,” ಎಂದು ಹೇಳಿ ಅಂತರ್ಧಾನವಾದಂತೆ ಭಾಸವಾಯಿತು.

ಮಾರನೇ ದಿನದ ದಿನಪತ್ರಿಕೆಗಳಲ್ಲಿ ಥಿಯೊಸಾಫಿಕಲ್ ಸೊಸೈಟಿಯ ಕರ್ನಲ್ ಅಲ್ಕಾಟ್ ಅವರ ನಿಧನದ ವಾರ್ತೆಯು ಪ್ರಕಟಿಸಲಾಗಿತ್ತು. ಕರ್ನಲ್ ಅಲ್ಕಾಟ್ ಅವರು ಅಮೆರಿಕಾದಲ್ಲಿ

ತಮ್ಮ ತಪಸ್ಸಿನ ಮೊದಲನೇ ಮಧ್ಯ ರಾತ್ರಿಯಲ್ಲಿ ಗಣಪತಿ ಮುನಿಗಳು ಶ್ಯಾಮಲಾಂಬ ಮಂದಿರದಿಂದ ಗೆಜ್ಜೆಯ ಧ್ವನಿಯನ್ನು ಕೇಳಿಸಿಕೊಂಡರು. ಆ ಸಮಯದಲ್ಲಿ ಬಹುಶಃ ಶಂಕರ ಭಗವಾನನು ನಟರಾಜನಾಗಿ ನಾಟ್ಯಮಾಡುವ ಸಮಯವಿರಬೇಕು. ಶ್ರೀ ರಮಣ ಮಹರ್ಷಿಗಳು ಶಿವನ ನಾಟ್ಯವನ್ನು ಒಮ್ಮೆ ಈ ರೀತಿ ವರ್ಣಿಸಿರುವರು –"ಅವನ ಸ್ವಭಾವವು ಸ್ಥಿರವಾಗಿರುವುದಾದರೂ, ಸ್ಥಿರವಾದ ಪರ್ವತದ ಪುತ್ರಿಯಾದ ಪಾರ್ವತಿಯು ಶಿವನ ನಾಟ್ಯ ಶಕ್ತಿಯನ್ನು ವೀಕ್ಷಿಸುತ್ತಿರುವಾಗ, ಶಿವನು ಚಿದಂಬರಂನಲ್ಲಿನ ಕನಕ ಸಭೆಯಲ್ಲಿ ನಾಟ್ಯ ಮಾಡುವನು. ಆದರೆ ಅರುಣಾಚಲದಲ್ಲಿ ಶಿವನು ತನ್ನ ಎತ್ತರದ ಹಾಗೂ ಭವ್ಯತೆಯಿಂದ ಕೂಡಿದ ರೀತಿಯಲ್ಲಿ ಸ್ಥಿರನಾಗಿ ನಿಂತಿದ್ದರೆ, ಪಾರ್ವತಿಯು ಅವನ ಅಚಲ ಮೂರ್ತಿಯೊಂದಿಗೆ ಐಕ್ಯಳಾಗುವಳು."

ಗಣಪತಿ ಮುನಿಗಳು ಈ ಭವ್ಯವಾದ ನಾಟ್ಯವನ್ನು ನೋಡುತ್ತಾ ಆನಂದ ಸಾಗರದಲ್ಲಿ ಮುಳುಗಿದ್ದರು. ಇದ್ದಕ್ಕಿದ್ದಂತೆ ನಾಟ್ಯದ ಸದ್ದು ನಿಂತಿತು. ಪಿಶಾಚಗ್ರಸ್ಥ ನಗೆ ಹಾಗೂ ಮತ್ತೊಂದು ಘೋರ ನಾಟ್ಯವು ಪ್ರಾರಂಭವಾಯಿತು. "ಓ ದೇವರೇ! ಭಾರತ ದೇಶದಲ್ಲಿ ಎಂಥ ಭಯಂಕರ ಪರಿಸ್ಥಿತಿಯು ಉಂಟಾಗಿದೆ. ಆ ಸ್ಥಿತಿಯನ್ನು ಎದುರಿಸಲು ನಾನು ಈ ತಪಸ್ಸನ್ನು ಪ್ರಾರಂಭಿಸಿರುವೆ. ದೈವೀ ದಂಪತಿಗಳು ಆನಂದದಿಂದ ನಾಟ್ಯವಾಡುವ ದೇಶದಲ್ಲಿ ಈ ಪೈಶಾಚಿಕ ಶಕ್ತಿಗಳು ದೇಶದ ಭವ್ಯ ವೇದ ಸಂಸ್ಕೃತಿಯನ್ನು ನಾಶಮಾಡುತ್ತಿವೆ. ಹಾಗಾಗಿ ಈ ಶಕ್ತಿಗಳು ನನ್ನನ್ನು ಇನ್ನೂ ಹಿಂಬಾಲಿಸುತ್ತಿರುವಂತಿದೆ." ಎಂದು ಗಣಪತಿ ಮುನಿಗಳು ಯೋಚಿಸಿದರು ಮತ್ತು ಮಾತೆ ಶ್ಯಾಮಲಾಂಬೆಯನ್ನು ಈ ರೀತಿಯಾಗಿ ಸ್ತುತಿಸಿದರು:

ಉಕ್ಷರಾಜವಾಹನಸ್ಯ ಜೀವಿತಾದ್ ಗರೀಯಸಿ
ಪಕ್ಷಿರಾಜವಾಹನಾದಿವರ್ಣ್ಯಮಾನವೈಭವಾ
ಕೇಕಿಲೋಕಚಕ್ರವರ್ತಿವಾಹನೇನ ಪುತ್ರಿಣೀ
ವಾರಣಾರಿಸಾರ್ವಭೌಮವಾಹನಾ ಗತಿರ್ಮಮ ॥

– ಉಮಾಸಹಸ್ರಮ್ (9–35–4)

"ಋಷಭವಾಹನನಾದ ಶಿವನಿಗೆ ಪ್ರಾಣಕ್ಕಿಂತಲೂ ಹೆಚ್ಚಾದ, ಗರುಡವಾಹನನಾದ ವಿಷ್ಣುವೇ ಮೊದಲಾದವರಿಂದ ವರ್ಣಿಸಲ್ಪಡುವ ಐಶ್ವರ್ಯವುಳ್ಳ, ನವಿಲುಗಳ ರಾಜನನ್ನು ವಾಹನವಾಗಿ ಉಳ್ಳ ಗುಹನ ಮಾತೆಯಾದ, ಆನೆಗಳಿಗೆ ಶತ್ರುವಾದ ಸಿಂಹವನ್ನು ವಾಹನವಾಗುಳ್ಳ ದುರ್ಗಾದೇವಿಯು ನನ್ನನ್ನು ರಕ್ಷಿಸಲಿ."

ಗಣಪತಿ ಮುನಿಗಳು ತಪಸ್ಸಿನ ಸ್ಥಳವನ್ನು ಬದಲಿಸಲಿಚ್ಛಿಸಿದರು. ಮಾರನೇ ದಿನ ಅವರು ಅರುಣಾಚಲದ ನೈಋತ್ಯ ಭಾಗದಲ್ಲಿರುವ ನೈರುತ್ತಿ ಲಿಂಗಂ ಮಂದಿರದಲ್ಲೇ ಒಂದು ಸಣ್ಣ ಕೋಣೆಯಲ್ಲಿ ತಪಸ್ಸನ್ನು ಪ್ರಾರಂಭಿಸಿದರು. ಅಂದು ಅರುಣಾಚಲದ ಬ್ರಹ್ಮೋತ್ಸವ

ಅಥವಾ ಕಾರ್ತಿಕ ದೀಪೋತ್ಸವದ ಏಳನೇ ದಿನ. ಅರುಣಾಚಲನು ತನ್ನ ಭವ್ಯ ರಥದಲ್ಲಿ ಕುಳಿತು ನಗರ ಪ್ರದಕ್ಷಿಣೆಗೆ ಹೊರಟನು. ಮಂದಿರದ ದಕ್ಷಿಣ ಭಾಗದಲ್ಲಿನ ಛತ್ರವನ್ನು ರಥವು ತಲುಪಿತು. ಗಣಪತಿ ಮುನಿಗಳು ತಮ್ಮ ಸಹೋದರನೊಂದಿಗೆ ಮೊದಲಬಾರಿಗೆ ಅರುಣಾಚಲಕ್ಕೆ ಬಂದಿದ್ದಾಗ ಇದೇ ಛತ್ರದಲ್ಲಿ ತಂಗಿದ್ದರು. ಆಗ ಅವರಿಗೆ ಭೋಜನ ಹಾಗೂ ರಾತ್ರೆ ಮಲಗಲು ವಸತಿಯನ್ನು ನೀಡಿದ್ದ ಗಣಪತಿ ಮಂದಿರವು ಹತ್ತಿರದಲ್ಲೇ ಇತ್ತು. ಬಹುಶಃ ಶಂಕರ ಭಗವಾನನು ತನ್ನ ಜ್ಯೇಷ್ಠ ಪುತ್ರನನ್ನು ನೆನಸಿಕೊಂಡನೋ ಎಂಬಂತೆ ನಗರದ ಮಧ್ಯ ಭಾಗದಲ್ಲಿ ರಥವು ಸಿಕ್ಕಿಹಾಕಿಕೊಂಡಿತು. ಜನಗಳು ಎಷ್ಟು ಪ್ರಯತ್ನಿಸಿದರೂ ರಥವು ಜರುಗಲೇ ಇಲ್ಲ. ಈ ರೀತಿ ರಥವು ಚಲಿಸದೇ ಇರುವುದಕ್ಕೆ ಯಾವ ಕಾರಣವೂ ಇರಲಿಲ್ಲ. ವಿಶೇಷ ಪೂಜೆ, ಭಜನೆಗಳೂ ಉಪಯೋಗಕ್ಕೆ ಬರಲಿಲ್ಲ. ಇಡೀ ನಗರವು ಭಯಭೀತವಾಗಿ ಜನಗಳು ಚಿಂತಾಕ್ರಾಂತರಾದರು. ಕೆಲವರು ಏನೋ ಅಪಚಾರವಾಗಿರುವುದೆಂದು ಮಾತನಾಡಿಕೊಳ್ಳತೊಡಗಿದರು. ಕೆಲವರು ಯಾರೋ ಮಹಾತ್ಮರನ್ನು ಅವಮಾನಿಸಿದ್ದರಿಂದ ಹೀಗಾಗಿರಬಹುದೆಂದು ಹಾಗೂ ಮತ್ತೆ ಕೆಲವರು ನಗರಕ್ಕೆ ಯಾವುದೋ ಅಪಾಯದ ಮುನ್ಸೂಚನೆ ಇದೆಯೆಂದು ಮಾತನಾಡಿಕೊಳ್ಳತೊಡಗಿದರು.

ರಾತ್ರೆ 10 ಘಂಟೆಗೆ ಅರ್ಚಕರು ಏನು ಮಾಡಲೂ ತೋಚದೆ ರಥದಿಂದಿಳಿದು ತಮ್ಮ ಮನೆಗೆ ತೆರಳಿದರು. ರಥವನ್ನು ಬೀದಿಯ ಮಧ್ಯದಲ್ಲೇ ಬಿಟ್ಟು ಎಲ್ಲರೂ ಮನೆಗಳಿಗೆ ತೆರಳಿದರು.

ನೈರುತಿ ಲಿಂಗಂ ಮಂದಿರದ ಸಣ್ಣ ಕೋಣೆಯೊಳಗೆ ಗಣಪತಿ ಮುನಿಗಳು ದೀರ್ಘ ಧ್ಯಾನದಲ್ಲಿದ್ದರು. ಇದ್ದಕ್ಕಿದ್ದಂತೆ ಒಂದು ರೂಪವು ಗಣಪತಿ ಮುನಿಗಳ ಮುಂದೆ ಪ್ರತ್ಯಕ್ಷವಾಯಿತು. ಅದು ಅರುಣಾಚಲೇಶ್ವರ ಮಂದಿರದ ಪ್ರಧಾನ ಅರ್ಚಕರು. ಅವರು, "ಆಚಾರ್ಯ! ದೇವರು ನಿಮ್ಮನ್ನು ಕರೆಯುತ್ತಿರುವನು. ರಥವು ನಡುರಸ್ತೆಯಲ್ಲಿ ಸಿಕ್ಕಿಹಾಕಿಕೊಂಡಿದೆ. ನೀವು ಅಲ್ಲಿಗೆ ಬಂದು ದೇವರ ದರ್ಶನವನ್ನು ಮಾಡುವವರೆಗೂ ಅದು ಚಲಿಸುವುದಿಲ್ಲ." ಎಂದು ಹೇಳಿದರು. ಗಣಪತಿ ಮುನಿಗಳು ಕಣ್ತೆರೆದರು. ಅಲ್ಲಿ ಯಾರೂ ಇರಲಿಲ್ಲ. ಹಾಗಾಗಿ ಅವರು ಮತ್ತೆ ಕಣ್ಮುಚ್ಚಿ ಧ್ಯಾನಾಸಕ್ತರಾದರು. ಮತ್ತೆ ಅದೇ ಧ್ವನಿಯು ಎಲ್ಲಿಂದಲೋ ಬರುವಂತೆ ಕೇಳಿಸಿ, "ಗಣಪತಿ! ದೇವರು ನಿಮ್ಮನ್ನು ಕರೆಯುತ್ತಿರುವನು, ಎದ್ದೇಳಿ." ಗಣಪತಿ ಮುನಿಗಳಿಗೆ ಭಗವಂತನ ಆಜ್ಞೆಯು ಅರ್ಥವಾಯಿತು. ಕೂಡಲೇ ಎದ್ದು ರಥವಿದ್ದೆಡೆಗೆ ಬಂದು ಅದು ಸಿಕ್ಕಿಹಾಕಿಕೊಂಡ ಪರಿಯನ್ನು ವಿಚಾರಿಸಿದರು ಹಾಗೂ ರಥವನ್ನು ಎಳೆಯಲು ಅದು ಸರಿಯಾದ ಸಮಯವಾಗಿರಲಿಲ್ಲವಾದ್ದರಿಂದ ಅವರು ಮರಳಿ ನೈರುತಿ ಲಿಂಗಂ ಮಂದಿರಕ್ಕೆ ಮರಳಿದರು.

ಕಿಂ ಯಾಗೈರತಿದಾರುಣೇನ ತಪಸಾ ಕಿಂ ವಾ ಕಿಮಭ್ಯರ್ಚನ್ಯೈಃ
ಕಿಂ ಸ್ನಾನೇನ ಸುಪರ್ವಪುಣ್ಯಸರಿತೋ ನಾನಾವಿಧೈಃ ಕಿಂ ವ್ರತೈಃ

ಕಾಮಾರೇ ಕರುಣಾನಿಧೇ ಪಶುಪತೇ ಭೂತೇಶ ಗೌರೀಪತೇ
ಶಂಭೋ ಶಂಕರ ಚಂದ್ರಚೂಡ ಜಗತಾಂ ನಾಥೇತಿ ನಾಮಾವಲೀ ॥

"ಓ ಭಗವಾನ್ ಶಂಕರನೆ! ನಿನ್ನ ನಾಮವಾದ ಶಂಭು, ಶಂಕರ, ಚಂದ್ರಚೂಡ, ಜಗನ್ನಾಥ, ಪಶುಪತಿ, ಭೂತೇಶ, ಗೌರೀಪತಿ ಮುಂತಾದವನ್ನು ಮತ್ತೆ ಮತ್ತೆ ಸ್ತುತಿಸುವುದರಿಂದ ಎಲ್ಲ ಅಭ್ಯುದಯವೂ ಉಂಟಾಗಿ ಶಾಶ್ವತ ಆನಂದವು ಲಭಿಸುವುದು. ಹೀಗಿರುವಾಗ ಯಾಗ, ಯಜ್ಞ, ಕಠಿಣ ವ್ರತಾಚಾರಣೆಗಳು, ಪವಿತ್ರ ನದಿಗಳಲ್ಲಿನ ಸ್ನಾನಗಳು ಮತ್ತು ಶಪಥಗಳಿಂದ ಏನು ಫಲ?"

ಮಾರನೇ ದಿನ ಮುಂಜಾನೆಯೇ ಗಣಪತಿ ಮುನಿಗಳು ಶಿವನ ನಾಮವನ್ನು ಉಚ್ಚರಿಸುತ್ತಾ ರಥವನ್ನು ತಲುಪಿ ಅದನ್ನೇರಿ ಅರುಣಾಚಲನ ಪಾದವನ್ನು ಸ್ಪರ್ಶಿಸಿದರು. ಅರುಣಾಚಲನು ಗಣಪತಿ ಮುನಿಗಳ ಪ್ರಾರ್ಥನೆಯನ್ನು ಸ್ವೀಕರಿಸಿದನೋ ಎಂಬಂತೆ ಅವನ ಪಾದದಿಂದ ಪುಷ್ಪವೊಂದು ಗಣಪತಿ ಮುನಿಗಳ ಶಿರದ ಮೇಲೆ ಬಿದ್ದಿತು. ಗಣಪತಿ ಮುನಿಗಳ ಆನಂದಕ್ಕೆ ಪಾರವೇ ಇರಲಿಲ್ಲ. ಭಾವೋದ್ವೇಗದಿಂದ ಅವರ ಸಮಸ್ತ ಶರೀರವೂ ಕಂಪಿಸಿತು. ಅವರ ಧ್ವನಿಯು ಗಂಟಲಿನಲ್ಲೇ ಸಿಕ್ಕಿಕೊಂಡಿತು. ಆನಂದಾಶ್ರುಗಳು ಕೆನ್ನೆಯಿಂದ ಕೆಳಗಿಳಿಯಿತು. ಗಣಪತಿ ಮುನಿಗಳು ಊರಿನ ಜನರಿಗೆ, "ಭಗವಂತನು ನಮ್ಮನ್ನು ಹರಸಿರುವನು. ಭಯ ಪಡುವುದಕ್ಕೆ ಕಾರಣವಿಲ್ಲ. ರಥವನ್ನು ಎಳೆಯಿರಿ." ಎಂದು ತಾವೂ ಸಹ ರಥವನ್ನೆಳೆಯಲು ಅವರೊಂದಿಗೆ ಸೇರಿಕೊಂಡರು. ಹಿಂದಿನ ರಾತ್ರೆ ಚಲಿಸದೇ ನಿಂತಿದ್ದ ರಥವು ತಂತಾನೇ ಸರಾಗವಾಗಿ ಚಲಿಸತೊಡಗಿತು. ಎಲ್ಲ ಭಕ್ತರೂ ಸಂತೋಷದಿಂದ, "ದೇವರಿಗೆ ಜಯವಾಗಲಿ" ಎಂದು ಜೋರಾಗಿ ಘೋಷಿಸತೊಡಗಿದರು.

ಈ ಪವಾಡಕ್ಕೆ ಕಾರಣರಾದ ಗಣಪತಿ ಮುನಿಗಳನ್ನು ಜನಗಳು ಸುತ್ತುವರೆಯತೊಡಗಿದರು. ಆದರೆ ಗಣಪತಿ ಮುನಿಗಳ ಭಕ್ತಿಪೂರಿತ ಉತ್ಸಾಹವು ಕಡಿಮೆಯಾಗಿರಲಿಲ್ಲ. ಅವರು ಜನಗಳಿಂದ ತಪ್ಪಿಸಿಕೊಂಡು ಬೆಟ್ಟವನ್ನು ವೇಗವಾಗಿ ಹತ್ತಿಕೊಂಡು ವಿರೂಪಾಕ್ಷ ಗುಹೆಯನ್ನು ತಲುಪಿದರು. ಗುಹೆಯ ಹೊರಭಾಗದಲ್ಲಿ ಮೌನಿ ಸ್ವಾಮಿಯು ನಗುತ್ತಾ ಗಣಪತಿ ಮುನಿಗಳ ಬರವನ್ನು ನಿರೀಕ್ಷಿಸುತ್ತಿದ್ದರೋ ಎಂಬಂತೆ ಕುಳಿತಿದ್ದರು. ಆ ಶಾಂತವಾದ, ಶುದ್ಧವಾದ, ಸ್ಥಿರವಾದ ವದನದಿಂದ ಶೀತಲವಾದ ಚಂದ್ರಬೆಳಕನ್ನು ಹೊರಸೂಸುತ್ತಿರುವ ಅವರನ್ನು ನೋಡಿ ಗಣಪತಿ ಮುನಿಗಳ ಉತ್ಸಾಹವು ಇಳಿಯಿತು. ಮೌನಿ ಸ್ವಾಮಿಯು ಕಾವ್ಯಕಂಠ ಗಣಪತಿ ಶಾಸ್ತ್ರಿಯು ನಾಲ್ಕು ವರ್ಷಗಳ ಹಿಂದೆ ಇದೇ ಸ್ಥಳದಲ್ಲಿ "ಶುಕ್ಲಾಂಬರಧರಮ್" ಶ್ಲೋಕವನ್ನು ಬೇರೆ ರೀತಿಯಲ್ಲಿ ವಿವರಿಸಿದ್ದನ್ನು ಗುರುತಿಸಿದರು.

ಮೌನಿ ಸ್ವಾಮಿಯೆದುರಿಗೆ ಕುಳಿತು ಗಣಪತಿ ಮುನಿಗಳು ತನಗೆ, ಮಾತೆ ರೇಣುಕಾ ದೇವಿಯು ಪ್ರತ್ಯಕ್ಷವಾಗಿ ದೈವೀ ಅಸ್ತ್ರವನ್ನು ಕರುಣಿಸಿದ್ದನ್ನು ಅವರಲ್ಲಿ ನಿವೇದಿಸಿಕೊಂಡರು. ಅವರು ಮೌನ ಸ್ವಾಮಿಗಳಲ್ಲಿ ಕುಮಾರನ ಮುಖವನ್ನು ಕಂಡರು, ಆಗ ಅವರಿಗೆ ದುರ್ಗಾ

ಮಂದಿರದ ಯೋಗಿಯು ಹೇಳಿದ ಪದಗಳು, "ನಿನಗೆ ತಪಸ್ಸಿನ ಸಿದ್ಧಿಯನ್ನು ಕರುಣಿಸುವ ಸ್ಥೂಲ ಶರೀರ ಇದೇ", ಎಂಬುದು ನೆನಪಾಯಿತು. ಒಮ್ಮೆಲೇ ಅವರಲ್ಲಿ ವಿನೀತ ಭಾವ, ವಿನಯ ಮತ್ತು ಗುರುವಿನಲ್ಲಿ ತನ್ನ ಆತ್ಮದ ಸಂಪೂರ್ಣ ಶರಣಾಗತಿಯ ಭಾವವು ಉಂಟಾಯಿತು. ಮೌನಿಸ್ವಾಮಿಗೆ ನಮಸ್ಕರಿಸಿ ಅವರ ಪಾದಗಳೆರಡನ್ನೂ (ಬಲಪಾದವನ್ನು ಬಲಗೈಯಲ್ಲಿ, ಎಡ ಪಾದವನ್ನು ಎಡಗೈಯಲ್ಲಿ) ಗಟ್ಟಿಯಾಗಿ ಹಿಡಿದು ಸಂಪೂರ್ಣ ಶರಣಾಗತಿಯಿಂದ, "ನಾನು ಎಲ್ಲ ಶಾಸ್ತ್ರಗಳನ್ನೂ ಅಧ್ಯಯನ ಮಾಡಿರುವೆ, ಪ್ರಸಿದ್ಧ ಮಂತ್ರವನ್ನು ನನ್ನ ಹೃದಯ ತೃಪ್ತಿಯಾಗುವವರೆಗೂ ಜಪಿಸಿರುವೆ, ನೂರಾರು ಬಾರಿ ತಪಸ್ಸನ್ನಾಚರಿಸಿರುವೆ ಮತ್ತು ಸಂಯಮವನ್ನು ಪಾಲಿಸಿರುವೆ. ಆದರೂ ನನಗೆ ಜ್ಞಾನೋದಯವಾಗಲಿಲ್ಲ. ನನ್ನ ತಪಸ್ಸು ಕಳಂಕದಿಂದ ಕೂಡಿತ್ತೇ, ಏನಾದರೂ ತಪ್ಪಾಗಿದೆಯೇ ಅಥವಾ ನನಗೆ ಆಚರಿಸುವ ರೀತಿಯು ಗೊತ್ತಿಲ್ಲದೇ ಇರಬಹುದು. ನನ್ನನ್ನು ವಿದ್ವಾಂಸನೆಂದು ಕರೆಯುವರು, ಆದರೂ ನನಗೇನು ಅರಿವಾಗದು. ನಾನು ನಿಮ್ಮಲ್ಲಿ ಶರಣು ಬಂದಿರುವೆ. ದಯವಿಟ್ಟು ತಪಸ್ಸು ಎಂದರೆ ಏನೆಂದು ತಿಳಿಸಿ. ಸಹಾಯ ಮಾಡಿ." ಎಂದರು.

ಈ ಎರಡು ಮಹಾನ್ ಚೇತನಗಳ ಸಮ್ಮಿಲನವನ್ನು ತಂದ ಅರುಣಾಚಲವು ಎಷ್ಟು ಮಹತ್ತರವಾದದ್ದು! ಆ ದಿನ ಸೋಮವಾರ 18–11–1907 (ಕಾರ್ತಿಕ ಶುಕ್ಲ ಚತುರ್ದಶಿ, ಅಶ್ವಿನಿ ನಕ್ಷತ್ರ).

೧೨

ಗುರುವಿನ ಬೋಧನೆ

ವಂದೇ ಶ್ರೀರಮಣರ್ಷೇರಾಚಾರ್ಯಸ್ಯ ಪದಾಬ್ಜಮ್
ಯೋ ಮೇಽದರ್ಶಯದೀಶಂ ಭಾಂತಂ ಧ್ವಾಂತ ಮತೀತ್ಯ ॥
– ಶ್ರೀರಮಣ ಚತ್ವಾರಿಂಷತ್

"ನನಗೆ ಭಗವಂತನನ್ನು ತೋರಿದ, ಅಜ್ಞಾನದ ಅಂಧಕಾರದಾಚೆ ಪ್ರಕಾಶಿಸುವ ಗುರು, ಋಷಿ ಶ್ರೀರಮಣರ ಪಾದಗಳಿಗೆ ನಾನು ನಮಸ್ಕರಿಸುವೆ."

ಅರುಣಾಚಲದ ಬೆಟ್ಟದ ಮೇಲೆ ಗಣಪತಿ ಮುನಿಗಳಿಗೆ ರಮಣರ ಬೋಧನೆಯಾದ ರಮಣೋಪದೇಶವನ್ನು ನೀಡಲಾಯಿತು. ರಮಣಮಹರ್ಷಿಗಳು ಆಚಾರ್ಯರು ಹಾಗೂ ಕಾವ್ಯಕಂಠ ಗಣಪತಿ ಶಾಸ್ತ್ರಿಗಳು ಶಿಷ್ಯ. ರಮಣಮಹರ್ಷಿಗಳು ಜ್ಞಾನೋದಯದ ನೇರ ಮಾರ್ಗವನ್ನು ಬೋಧಿಸಿದಾಗ, ಹಿಂದೂಗಳು ಸಾಂಪ್ರದಾಯಿಕತೆಯ ಮೌಢ್ಯದಲ್ಲಿ ಮುಳುಗಿದ್ದು ಪವಿತ್ರವಾದ ಆತ್ಮಜ್ಞಾನದಿಂದ ದೂರ ಹೋಗುತ್ತಿದ್ದರು.

ಮೌನಿ ಸ್ವಾಮಿಗಳು ಕಾವ್ಯಕಂಠರನ್ನು ಅನುಗ್ರಹಿಸಿ ಅವರಿಗೆ ತಪಸ್ಸಿನ ಎಲ್ಲ ರೀತಿ ನೀತಿಗಳನ್ನು ಮೃದುವಾದ ಮಾತುಗಳಲ್ಲಿ ವಿವರಿಸಿದರು. ಗಣಪತಿ ಮುನಿಗಳ ಹೃದಯವು ಅಸಾಮಾನ್ಯವಾದ ಆನಂದದಿಂದ ತುಂಬಿಕೊಂಡಿತ್ತು. ವಿರೂಪಾಕ್ಷ ಗುಹೆಯಲ್ಲಿ ಕುಳಿತು ಅವರು ಗುರುಗಳ ಈ ಮಹತ್ತರವಾದ ಬೋಧನೆಯ ಕುರಿತಾಗಿ ಆಳವಾಗಿ ಧ್ಯಾನಿಸಿ ಮಾನವ ಜನಾಂಗದ ಒಳಿತಿಗಾಗಿ ಈ ಕೆಳಗಿನ ಸಂಸ್ಕೃತ ಶ್ಲೋಕವನ್ನು ರಚಿಸಿದರು:

ಅಹಮಹಮಿತಿ ಕೃತ ಆಯಾತೀತಿ ವಿಚಾರಯನ್ನುದಯಸ್ಥಾನೇ ಲೀನಂ ಮನಃ ತದೇವ ತಪಃ
ಜಪ್ಯಮಾನಸ್ಯ ಮಂತ್ರಸ್ಯ ಧ್ವನಿಃ ಕೃತ ಉದೇತೀತಿ ವಿಚಾರಯನ್ ಯಸ್ಥಾನೆ ಲೀನಂ ಭವೇತ್ ಮನಃ ತದೇವ ತಪಃ ॥

'ನಾನು–ನಾನು' ಎಂಬ ಆಲೋಚನೆ ಹುಟ್ಟುವ ಸ್ಥಳವನ್ನು ಅಂತರಂಗದೊಳಗೆ ಹುಡುಕು ಮನಸ್ಸು ಅಲ್ಲೇ ನೆಲೆಸುವುದು, ಅದೇ ತಪಸ್ಸು., ಮಂತ್ರವನ್ನು ಪುನರುಚ್ಚರಿಸುತ್ತಾ, ಮಂತ್ರದ ಶಬ್ದದ ಮೂಲವನ್ನು ಹುಡುಕುತ್ತಾ ಮನಸ್ಸು ನೆಲಸುವುದು. ಹೋಗುವುದು, ಅದೇ ತಪಸ್ಸು."

ರಮಣ ಮಹರ್ಷಿಗಳ ಅವತಾರಕ್ಕೆ ಕಾರಣವನ್ನು ಗಣಪತಿ ಮುನಿಗಳು ಈ ಶ್ಲೋಕದ ಮೂಲಕ ವಿವರಿಸಿದ್ದಾರೆ:

ಅಧುನಾ ತ್ವಂ ಮಹಾಭಾಗ ಬ್ರಹ್ಮಜ್ಞಾನಸ್ಯ ಗುಪ್ತಯೇ
ಶಾಸ್ತ್ರಜ್ಞಾನೇನ ಸಂತೃಪ್ತೈಃ ನಿರುದ್ ಧಸ್ಯಾಗತೋ ಧರಾಮ್ ॥
– ರಮಣ ಗೀತ

"ಓ ಮಹಾತ್ಮನೇ! ಕೇವಲ ಧರ್ಮ ಗ್ರಂಥಗಳನ್ನು ಓದುವುದರಲ್ಲೇ ತೃಪ್ತರಾದವರನ್ನು ಉದ್ಧರಿಸಲು ಹಾಗೂ ನಿಜವಾದ ಆತ್ಮಜ್ಞಾನವನ್ನು ಅನುಗ್ರಹಿಸಲು ನೀನು ಸ್ವತಃ ಅವತರಿಸಿದೆ."

ಗಣಪತಿ ಮುನಿಗಳು ಮೌನಿ ಸ್ವಾಮಿಗೆ ತಾನು ಮಂತ್ರ ಜಪವನ್ನು ಮಾಡಿದೆ ಎಂದು ತಿಳಿಸಿದರು. ಆದ್ದರಿಂದ ಸ್ವಾಮಿಯ ಸೂಚನೆಗಳನ್ನು ಅಹಂ ಬಗೆಗಿನ ಮೂಲವನ್ನು ಹುಡುಕಿ ಮತ್ತು ಮಂತ್ರದ ಶಬ್ದವನ್ನು ಅರಸಿ, ಆತ್ಮದ ಆನಂದವನ್ನು ಅನುಭವಿಸಲು ಅನುಕೂಲವಾಗುವಂತೆ ರೂಪಿಸಲಾಯಿತು.

ಗಣಪತಿ ಮುನಿಗಳಿಗೆ ರೋಮಾಂಚನವಾಯಿತು. ಅವರ ಶರೀರವನ್ನು ಒಂದಾದರೊಂದಂತೆ ಆನಂದದ ಅಲೆಗಳೆದ್ದು ತೋಯಿಸಿತು. ಅವರು ಅಲ್ಲೇ ರಮಣ ಮಹರ್ಷಿಗಳ ಪಾದದಡಿಯಲ್ಲಿ ಕುಳಿತು ಸಂಜೆಯವರೆಗೂ ಧ್ಯಾನ ಮಾಡಿದರು. ಅವರಿಗೆ ಸಂಪೂರ್ಣ ತೃಪ್ತಿಯಾಯಿತು. ಬೇರೆ ಯಾರೇ ಸಾಮಾನ್ಯ ವಿದ್ವಾಂಸನೂ ತನಗೆ ಈ ರೀತಿಯಾಗಿ ಅಂತಹ ಸಂದೇಶವನ್ನು ಕಲಿಸುವುದಕ್ಕಾಗುತ್ತಿರಲಿಲ್ಲ ಎಂಬುದರ ಬಗ್ಗೆ ಅವರಿಗೆ ಸಂಪೂರ್ಣವಾಗಿ ಮನವರಿಕೆಯಾಯಿತು. ಅವರು ಅಲ್ಲಿಯ ಸೇವಕರಿಂದ ಮೌನಿ ಸ್ವಾಮಿಯ ಹಿಂದಿನ ಹೆಸರನ್ನು ಕೇಳಿ ಅವರ ಹೆಸರು ವೆಂಕಟರಾಮನ್ ಎಂಬುದನ್ನರಿತು ಅದನ್ನು ಸಂಕ್ಷಿಪ್ತವಾಗಿ ರಮಣ ಎಂದು ಕರೆದು ಮೌನ ಸ್ವಾಮಿಗಳನ್ನು ಮಹರ್ಷಿ (ಮಹಾನ್ ಋಷಿ) ಎಂಬುದಾಗಿ ಕರೆದರು.

ಮಾರನೇ ದಿನ ಗಣಪತಿ ಮುನಿಗಳು ತಮ್ಮ ಅಂತರಂಗದ ಶಿಷ್ಯರಿಗೆ ಹೀಗೆ ಬರೆದರು, "ನಾನು ನನ್ನ ಗುರುಗಳನ್ನು ಕಂಡುಕೊಂಡೆ. ಅವರೇ ಅರುಣಾಚಲದ ಋಷಿಗಳಾದ ಬ್ರಾಹ್ಮಣಸ್ವಾಮಿ. ಅವರು ಸಾಮಾನ್ಯ ಸ್ವಾಮಿಗಳಲ್ಲ. ಅವರು ಮಹಾನ್ ಋಷಿಗಳು ಹಾಗೂ ಶಕ್ತಿಶಾಲಿ ವ್ಯಕ್ತಿತ್ವ. ನನಗೆ ಹಾಗೂ ನಿಮಗೆಲ್ಲರಿಗೂ ಅವರು "ಭಗವಾನ್ ಶ್ರೀ ರಮಣ ಮಹರ್ಷಿ"ಗಳು. ಇಡೀ ಪ್ರಪಂಚವು ಅವರನ್ನು ಆ ಹೆಸರಿನಲ್ಲಿ ನೋಡಲಿ.

ಗಣಪತಿ ಮುನಿಗಳು ಭಗವಾನ್ ಅವರೊಂದಿಗೆ ಇರುವಾಗ ಅವರು ಗಣಪತಿ ಮುನಿಗಳನ್ನು ಹಿರಿಯರನ್ನು ಸಂಬೋಧಿಸುವಂತೆ ಗೌರವಯುತವಾಗಿ ಮಾತನಾಡಿಸುತ್ತಿದ್ದರು. ಅವರು ಗುಹೆಯ ಬಳಿ ಆಗಾಗ್ಗೆ ಬರುತ್ತಿದ್ದ ಕೋತಿಗಳನ್ನೂ ಗೌರವಯುತವಾಗಿ

ಮಾತನಾಡಿಸುತ್ತಿದ್ದರು. ಭಗವಾನರ ಈ ವಿಧದ ವರ್ತನೆಯು ಗಣಪತಿ ಮುನಿಗಳನ್ನು ಬಹಳವಾಗಿ ನೋಯಿಸುತ್ತಿತ್ತು. ಅವರು ಭಗವಾನರನ್ನು "ನೀವು ಈ ರೀತಿಯಾಗಿ ನನ್ನನ್ನು ಸಂಬೋಧಿಸಬೇಡಿ. ನನ್ನನ್ನು "ನೀನು" ಎಂದೇ ಸಂಬೋಧಿಸಿ". ಆಗ ಭಗವಾನರು ಸ್ವಲ್ಪ ಹೊತ್ತು ಯೋಚಿಸಿ ಅವರನ್ನು "ನಾಯನ" ಎಂದು ಕರೆಯುವೆನೆಂದರು. ಇದು ಮಗು ಅಥವಾ ತಂದೆ ಎಂಬ ಎರಡರ್ಥವನ್ನು ನೀಡುವುದು. ಈ ಪರಿಹಾರವು ಇಬ್ಬರಿಗೂ ಒಪ್ಪಿಗೆಯಾಗಿ ಸಮಾಧಾನವಾಯಿತು.

೧೩

ಒಳ್ಳೆಯ ಉದ್ದೇಶ

ದಿವ್ಯಂ ಘನತೇಜಃ ಕುರ್ವನ್ ಧ್ವನಿಮಂತಃ
ಸಂಪಶ್ಯದಶೇಷಂ ಮೂರ್ತಿಃ ಪ್ರಣವಾತ್ಮಾ ।

– ಉಮಾಸಹಸ್ರಮ್ (1–3–19)

"ಪ್ರಣವದ ಕೇಂದ್ರವಾದ ಓಂ ಕಾರವು ಸಮಸ್ತ ಜೀವಿಗಳನ್ನು ಉತ್ತೇಜಿಸುವ ಶಬ್ದ. ಅದು ಸೃಷ್ಟಿಗೆ ಸಾಕ್ಷಿಯಾದ ದೈವೀ ಕಿರಣ. ವಿಶ್ವದಲ್ಲಿ ಅಭಿವ್ಯಕ್ತವಾಗದ ಶಬ್ದವೇ ಈ ಕಿರಣ. ಇದು ಶಿವ ಮತ್ತು ಅವನ ಶಕ್ತಿ ಒಂದಾದ ರೂಪ."

ಗಣಪತಿ ಮುನಿಗಳು ತನಗೆ ದೊರಕಿದ ಮಹಾನ್ ಗುರುಗಳ ಬಗೆಗೆ ತನ್ನ ಪತ್ನಿ ಹಾಗೂ ತಂದೆಯವರಿಗೆ ತಿಳಿಸಿ ತಾವು ಈ ವಿಷಯದಲ್ಲಿ ನಿಜಕ್ಕೂ ಅದೃಷ್ಟವಂತರೆಂದು ತಿಳಿಸಿದರು. ಮಹಾತ್ಮರನ್ನು ಹಾಗೂ ಸಂತರನ್ನು ಕಾಲ ಕಾಲಕ್ಕೆ ಕಾಣಬಹುದು, ಆದರೆ, ಜ್ಞಾನಿಗಳ ದರ್ಶನವು ಅಪರೂಪ. ಅರುಣಾಚಲದ ನಾಗರೀಕರು ನಿಜಕ್ಕೂ ಅದೃಷ್ಟವಂತರೇಕೆಂದರೆ ಅವರ ನಡುವೆಯೇ ಅರುಣಾಚಲದ ಬೆಟ್ಟದ ಮೇಲೆ ಅಂತಹ ಒಬ್ಬ ಮಹಾ ಜ್ಞಾನಿಯು ವಾಸಿಸುತ್ತಿದ್ದದ್ದು. ಗಣಪತಿ ಮುನಿಗಳ ಪತ್ನಿ ವಿಶಾಲಾಕ್ಷಿಯು ತನ್ನ ಪುತ್ರನೊಡನೆ ಮಹರ್ಷಿಯ ದರ್ಶನಕ್ಕಾಗಿ ಬಂದಳು. ಭಗವಾನರು ಅವರನ್ನು ನೋಡಿದ ಕೂಡಲೇ, "ಅಮ್ಮಾ ಬಂದಳು" ಎಂದರು. ಅಂದಿನಿಂದ ಎಲ್ಲರೂ ವಿಶಾಲಕ್ಷಿಯನ್ನು ಅಮ್ಮಾ ಎಂದೇ ಸಂಬೋಧಿಸತೊಡಗಿದರು. ಗಣಪತಿ ಮುನಿಗಳು ಭಗವಾನರ ಸನ್ನಿಧಿಯಲ್ಲೇ ತಪಸ್ಸನ್ನು ಮಾಡಲು ನಿರ್ಧರಿಸಿದರು. ಭಗವಾನರು ಅವರನ್ನು ತಾವು ಈ ಹಿಂದೆ ವಾಸಿಸುತ್ತಿದ್ದ ಹತ್ತಿರದಲ್ಲೇ ಇದ್ದ ಮಾವಿನ ಮರದ ನೆರಳಿನಲ್ಲಿರುವ ಗುಹೆಯಲ್ಲಿ ತಪಸ್ಸನ್ನಾಚರಿಸಲು ತಿಳಿಸಿದರು. ಗಣಪತಿ ಮುನಿಗಳು ಅದನ್ನು "ಚೂತಗೃಹಾ" (ಮಾವಿನ ಮರದ ಗುಹೆ) ಎಂದು ಹೆಸರಿಸಿದರು.

ಪುಣ್ಯಾ ಚೂತಗುಹಾ ಸೇಯಂ ರಮಣೇನ ಮಹರ್ಷಿಣಾ
ಅಧಿಷ್ಠಿತಾ ಸೇವಕಾನಾಂ ಪಾಪಹಂತ್ರೀ ವಿರಾಜತೇ ।

"ಪ್ರಶಂಸನೀಯವಾದ ಮಾವಿನ ಮರದ ಗುಹೆಯು ರಮಣಮಹರ್ಷಿಗಳ ವಾಸಸ್ಥಾನವಾಗಿದ್ದು ಅವರ ಸೇವಕರ ಪಾಪಗಳನ್ನು ನಾಶಮಾಡುತ್ತ ಬೆಳಗುತ್ತಿದೆ."

ಗಣಪತಿ ಮುನಿಗಳು ಮೊದಲಿಗೆ ಗುಹೆಯನ್ನು ಪೂಜಿಸಿ, ನಂತರ ಅಲ್ಲಿ ವಾಸಮಾಡಲು ಪ್ರಾರಂಭಿಸಿದರು. ಎಚಮ್ಮಾಳ್ ಎಂಬ ಮಹಿಳೆಯು ಭಗವಾನರಿಗೆ ಪ್ರತಿ ನಿತ್ಯವೂ ಊಟವನ್ನು ತರುತ್ತಿದ್ದಳು. ಅವಳಿಗೆ ಗಣಪತಿ ಮುನಿಗಳೂ ಅಲ್ಲಿರುವುದನ್ನರಿತು ಅವರಿಗೂ ನಿತ್ಯ ಊಟ ತರಲು ಪ್ರಾರಂಭಿಸಿದಳು. ಈ ಅನುಕೂಲದಿಂದಾಗಿ ಅವರು ಸದಾ ಕಾಲವೂ ತಪಸ್ಸಿನಲ್ಲಿ ಮಗ್ನರಾಗಿರುತ್ತಿದ್ದರು.

ಆತ್ಮದ ಮೂಲದ ಬಗೆಗಿನ ಆಲೋಚನೆಯಲ್ಲಿ ಗಣಪತಿ ಮುನಿಗಳು ಮೂರು ದಿನ ಆಳವಾದ ಧ್ಯಾನದಲ್ಲಿ ಮಗ್ನರಾಗಿದ್ದರು. ಹೊರ ಪ್ರಪಂಚದ ಅರಿವೇ ಇಲ್ಲದೆ ಅವರು ಜ್ಞಾನ ಸಾಗರದಲ್ಲಿ ಈಜುತ್ತಿದ್ದರು. ದೈವೀ ಮಾತೆ ಅಪಿತ ಕುಚಾಂಬೆಯು ಶ್ವೇತ ವರ್ಣದ ರೇಷ್ಮೆ ಸೀರೆಯನ್ನು ಧರಿಸಿ, ಮುತ್ತಿನ ಕಿರೀಟವನ್ನು ಧರಿಸಿ, ಪಾರಿಜಾತ ಪುಷ್ಪದ ಹಾರವನ್ನು ಧರಿಸಿ, ತಂಪಾದ ಚಂದ್ರನ ಬೆಳಕನ್ನು ಚೆಲ್ಲುವಂತೆ ಮಂದಹಾಸವನ್ನು ಬೀರುತ್ತಾ ಗಣಪತಿ ಮುನಿಗಳ ಮುಂದೆ ಪ್ರತ್ಯಕ್ಷಳಾದಳು. ಕಣ್ಣುಕುಕ್ಕುವ ಶ್ವೇತವರ್ಣದಿಂದ ಕೂಡಿದ ಎಂಥಹ ಭವ್ಯ ನೋಟ! ಮಾತೆಯ ವಸ್ತ್ರವು ಬಿಳಿ, ಪಾರಿಜಾತ ಮಾಲೆಯು ಬಿಳಿ, ಅವಳ ಮೈಕಾಂತಿಯು ಬಿಳಿ, ನಿಃಶಬ್ದವಾಗಿ ಜ್ಞಾನವನ್ನು ಪಸರಿಸುತ್ತಿರುವ ಮಾತೆಯ ಮಂದಹಾಸವೂ ಬಿಳಿ, ಆಹಾ ವರ್ಣಿಸಲಸದಳವಾದ ದೃಶ್ಯವು! ಆನಂದತುಂದಿಲರಾದ ಗಣಪತಿ ಮುನಿಗಳು ಭಾವೋದ್ವೇಗದಿಂದ ಕೂಡಿ, ಅವರ ಬಾಯಿಂದ ತಂತಾನೇ ಈ ಶ್ಲೋಕವು ಭೋರ್ಗರೆಯುತ್ತಾ ಹೊರಬಂದಿತು:

ಸಹಾದರೇಣ ಯೋ ವಲಕ್ಷಪಾರಿಜಾತಮಾಲಯಾ
ಗಲಸ್ಥಲೀವಿಭೂಷಯಾ ಧ್ವನಿಂ ವಿನೈವ ಭಾಷತೇ
ಮಹೇಶಪುಣ್ಯಯೋಷಿತೋ ಮನೋಜ್ಞಹಾಸ ಏಷ ಮೇ
ವಿಭೂತಯೇ ಪ್ರಕಲ್ಪತಾಂ ವಿಧೂತಯೇ ಚ ಪಾಪ್ಮನಾಮ್ ॥

"ಬಿಳಿಯ ಬಣ್ಣದ ಪಾರಿಜಾತ ಪುಷ್ಪಗಳ ಮಾಲೆಯನ್ನು ಧರಿಸಿರುವ ಮತ್ತು ಶಬ್ದರಹಿತವಾಗಿ ಪ್ರೀತಿಯಿಂದ ಮಾತನಾಡುವ ಮಹಾದೇವನ ದೈವೀ ಪತ್ನಿಯಾದ ಉಮಾದೇವಿಯು ನಮಗೆ ಅಭ್ಯುದಯವನ್ನು ದಯಪಾಲಿಸಿ ನಮ್ಮ ಪಾಪಗಳನ್ನು ಸುಡಲಿ."

ಮಾತೆಯು ತನ್ನ ಹಸ್ತವನ್ನೆತ್ತಿ ಗಣಪತಿ ಮುನಿಗಳನ್ನು ಆಶೀರ್ವದಿಸುತ್ತಾ, "ಗಣಪತಿ! ರೂಪರಹಿತವಾದದ್ದನ್ನು ನೀನು ಅರಿತುಕೊಂಡಿರುವೆ. ನಾನು ಹೊರಡಲೇ?" ಎಂದಳು.

ಕೂಡಲೇ, ಗಣಪತಿ ಮುನಿಗಳು ಪ್ರತಿಭಟಿಸುತ್ತಾ,

ತವಾರ್ಚನಂ ನಿರಂತರಂ ಯತೋ ವಿಧಾತುಮಸ್ಪೃಹಂ
ನ ವಿಶ್ವನಾಥ ಪತ್ನಿ ತೇ ವಿಸರ್ಜನಂ ವಿಧೀಯತೇ ॥

"ಓ ಮಾತೇ! ನಾನು ನಿನ್ನನ್ನು ಸತತವಾಗಿ ಪೂಜಿಸಲು ನಿರ್ಧರಿಸಿರುವೆ. ಹಾಗಾಗಿ ನೀನು ಹೋಗಲಾರೆ."

ಮಾತೆ: "ಜನಗಳು ಅವರವರ ಪ್ರಾರಬ್ಧಕ್ಕನುಸಾರವಾಗಿ (ಹಿಂದಿನ ಕರ್ಮದ ಫಲವಾಗಿ) ದೈವೀ ದೃಷ್ಟಿಯನ್ನು ಹೊಂದಿರುತ್ತಾರೆ. ನಿನಗೂ ಅದೇ ರೀತಿಯ ಪ್ರಾರಬ್ಧವು ಇರುವುದು. ಮಗುವೇ ಈಗ ನಾನು ನಿನ್ನನ್ನು ಬಿಟ್ಟು ತೆರಳಲೇ?"

ಗಣಪತಿ: "ಮಾತೆ! ನನ್ನನ್ನು ಬಿಟ್ಟು ನೀನು ಹೀಗೆ ಹೇಗೆ ಹೋಗುವೆ? ದಯಮಾಡಿ ನನಗೆ ಆದೇಶಿಸು. ನಾನು ನನ್ನ ದೇಶವನ್ನು ಸೇವಿಸುವೆನೆಂದು ಶಪಥ ಮಾಡಿರುವೆ. ನಾನು ಏನು ಮಾಡಬೇಕು?"

ಮಾತೆ: "ಮಗುವೇ! ಧರ್ಮ ಗ್ರಂಥಗಳಲ್ಲಿನ ಜ್ಞಾನಗಳೆಲ್ಲವನ್ನೊಳಗೊಂಡ ಪುಸ್ತಕವನ್ನು ರಚಿಸು. ಅದು ಸಗುಣ ಹಾಗೂ ನಿರ್ಗುಣಗಳ ವಿವಾದಗಳಿರದಂತೆ ಮತ್ತು ಮಂತ್ರ ತಂತ್ರ ಮಾರ್ಗಗಳಲ್ಲಿ ನಿಷ್ಣಾತರಾದವರಿಗೆ ಒಪ್ಪಿಗೆಯಾಗುವಂತಿರಬೇಕು. ಆ ಪುಸ್ತಕವು ದೇಶಕ್ಕೆ ಧಾರ್ಮಿಕ ಮಾರ್ಗದರ್ಶಕವಾಗುವುದು."

ಸಂತೋಷಭರಿತರಾದ ಗಣಪತಿ ಮುನಿಗಳು, "ಹಾಗೇ ಆಗಲಿ ಮಾತೆ! ಇಪ್ಪತ್ತು ದಿನಗಳೊಳಗೆ ಆ ಗ್ರಂಥವನ್ನು ರಚಿಸಲು ನನಗೆ ಶಕ್ತಿಯನ್ನು ದಯಪಾಲಿಸು." ಎಂದು ಬೇಡಿದರು.

ಮಾತೆಯು, "ಹಾಗೇ ಆಗಲಿ", ಎಂದು ಮಾಯವಾದಳು. ಗಣಪತಿ ಮುನಿಗಳು ಈ ರೀತಿ ಪ್ರಾರ್ಥಿಸಿದರು:

ಅರ್ಚನಕಾಲೇ ರೂಪಗತಾ ಸಂಸ್ತುತಿಕಾಲೇ ಶಬ್ದಗತಾ
ಚಿಂತನಕಾಲೇ ಪ್ರಾಣಗತಾ ತತ್ತ್ವವಿಚಾರೇ ಸರ್ವಗತಾ ॥

"ಪೂಜೆಯ ಕಾಲದಲ್ಲಿ ಅವಳ ರೂಪವನ್ನು ಧರಿಸುವಳು, ಅವಳನ್ನು ಪದಗಳಿಂದ ವರ್ಣಿಸಿದಾಗ ಅವಳು ಶಬ್ದವಾಗಿರುವಳು, ಧ್ಯಾನಮಾಡುವಾಗ ಅವಳು ಜೀವಶಕ್ತಿ ಮತ್ತು ತತ್ತ್ವ ಚಿಂತನೆ ಮಾಡುವಾಗ ಅವಳು ಸರ್ವಾಂತರ್ಯಾಮಿಯಾಗಿರುವಳು".

೧೪

ಉಮಾಸಹಸ್ರಮ್ ಕೃತಿಯ ರಚನೆ

ಏನಾಮ ಶಾಂತಿಂ ಪರಮಾಂ ವಹನ್ತೋ ನಾಮಾನಿ ಶೀತಾಚಲಪುತ್ರಿಕಾಯಾಃ
ಸಂಕೀರ್ತಯಂತೋ ವಿಜನೇ ವಸನ್ತಿ ಜಯಂತತಾತಾದಪಿ ತೇ ಜಯಂತಿ ॥
– ಉಮಾ ಸಹಸ್ರಮ್ (8–31–6)

"ಎಲ್ಲವನ್ನೂ ತ್ಯಾಗಮಾಡಿ ಒಂಟಿಯಾಗಿ ಜೀವಿಸಿ, ಹಿಮಾಲಯದ ಪುತ್ರಿಯ ನಾಮವನ್ನು ಭಜಿಸುವವರು ಜಯಂತನ ಪಿತನಾದ ಇಂದ್ರನ ಪದವಿಯ ಅನಂದಕ್ಕಿಂತ ಹೆಚ್ಚಿನ ಆನಂದವನ್ನು ಹೊಂದುವರು."

ದೈವೀ ಮಾತೆಗೆ ಹಲವಾರು ಹೆಸರುಗಳಿವೆ. ಆದರೆ ಗಣಪತಿ ಮುನಿಗಳು, ಸಾವಿರ ಶ್ಲೋಕಗಳನ್ನೊಳಗೊಂಡ ತಮ್ಮ ಮೇರು ಕೃತಿಯಾದ "ಉಮಾ ಸಹಸ್ರಮ್"ಗೆ ದೇವಿಯ ಹೆಸರನ್ನು "ಉಮಾ" ಎಂಬ ಹೆಸರನ್ನೇ ಆರಿಸಿಕೊಂಡರು. "ಉ" ಎಂದರೆ ಶಿವ ಮತ್ತು "ಮ" ಎಂದರೆ ಸೀಮಿತವಾದ ಅಥವಾ ಶಕ್ತಿಯನ್ನು ಅಳೆಯುವ ಎಂದು. ಹೀಗಾಗಿ ದೇವಿಯು ಶಿವನ ಸೀಮಿತ ಶಕ್ತಿ. ಇದು ಗಣಪತಿ ಮುನಿಗಳ ಉಮಾ ಪದಕ್ಕೆ ವಿವರಣೆ. "ಈಶ್ವರ" ಎಂದರೆ ಆತ್ಮದ ಅಲೋಚನೆಯೊಂದಿಗೆ ಪ್ರಪಂಚವನ್ನು ಸೃಷ್ಟಿಸುವವ. "ಉಮಾ"ದೇವಿಯು ಅವನ ಶಕ್ತಿ, ಅದು ಸಮಸ್ತವನ್ನೂ ಅಳೆಯುವುದು ಮತ್ತು ಸೃಷ್ಟಿಯಾದ ಪ್ರಪಂಚದ ಗುಣಬದಲಾವಣೆ. ಸ್ಪಷ್ಟವಾದ ಪ್ರಪಂಚವು ಮನೋ ಬುಧ್ಯಹಂಕಾರಗಳೊಂದಿಗೆ ಚಲಿಸುವ ಜಗತ್ತಿನ ತತ್ತ್ವದೊಂದಿಗೆ ಬರುವುದು. ಈ ಶಕ್ತಿಯ ಕರುಣೆಯಿಂದ ಸಾಧಕನು ತನ್ನ ಆಧ್ಯಾತ್ಮಿಕ ಪ್ರಗತಿಯಲ್ಲಿ ಮುಂದುವರೆಯಬಹುದು. ಪರಾಶಕ್ತಿಯ ಗುಣಾತ್ಮಕ ರೂಪವೇ ಉಮಾ ದೇವಿ. ಸಾಧುಗಳಲ್ಲಿ ಅವಳು ತಪಸ್ಸಿನ ಶಕ್ತಿಯಾಗಿ ಅಭಿವ್ಯಕ್ತಗೊಳ್ಳುವಳು. ಈ ಶಕ್ತಿಯನ್ನು ಗಣಪತಿ ಮುನಿಗಳು ಈಗಾಗಲೇ ಅನುಭವಿಸಿದ್ದರಿಂದ ಅವರು ತಮ್ಮ ಕೃತಿಗೆ "ಉಮಾಸಹಸ್ರಮ್" ಎಂದು ಶೀರ್ಷಿಕೆಯನ್ನು ಆಯ್ದುಕೊಂಡರು.

ಬೌದ್ಧಿಕ ಪ್ರಯತ್ನದಿಂದ ರಚಿಸಿದ ಕೃತಿಗೂ, ಸ್ವಂತ ಅನುಭವದಿಂದ ರಚಿಸಿದ ಕೃತಿಗೂ ವ್ಯತ್ಯಾಸವಿರುವುದು. ಅನುಭವ ಜ್ಞಾನದಿಂದ ರಚಿಸಿದ ಕೃತಿಯಲ್ಲಿ ದೈವೀ ಶಕ್ತಿಯನ್ನು ಅಳವಡಿಸಲಾಗುವುದು. ಗಣಪತಿ ಮುನಿಗಳು ತಾವು ಹೇಗೆ ಉಮಾಸಹಸ್ರಮ್ ಕೃತಿಯನ್ನು ರಚಿಸಿದರೆಂದು ಈ ರೀತಿ ವಿವರಿಸಿರುವರು:

ದರ್ಶಿತಂ ರಮಣಃ ಸರ್ವೇರ್ಯಾವದ್ವಾಕ್ಯೈರ್ಮಿತಾಕ್ಷರೈಃ
ಯಾವಚ್ಚ ಪಿತೃಪಾದಾನಾಂ ವಿಜ್ಞಾತಮುಪದೇಶತಃ ॥
ತಂತ್ರೇಭ್ಯೋSವಗತಂ ಯಾವತ್ಪ್ರಾಚಾಮಾಚಾರಶಾಸಿನಾಂ
ಯಾವತ್ಪರಮಪುಣ್ಯಾಸು ಕುಲಗೋಷ್ಠಿಷು ಚ ಶ್ರುತಮ್ ॥
ವಿದಿತಂ ವಿವಿಧಂ ಯಾವದಿತಿಹಾಸವಿಲೋಕನಾತ್
ಯಾವದಪ್ಯಾತ್ಮನಾ ದೃಷ್ಟಂ ತಪತಾ ವಿಪುಲಂ ತಪಃ ॥
ಅಧಿಕೃತ್ಯ ಮಹಾಮಾಯಾಂ ಭುವನಾನಾಮಧೀಶ್ವರೀಂ
ಅತ್ರ ಸ್ತೋತ್ರೇ ಪ್ರಸಂಗೇಷು ಸಮಸ್ತಂ ತತ್ಪ್ರದರ್ಶಿತಮ್ ॥

"ಈ ಸ್ತೋತ್ರವನ್ನು ವಿಶ್ವಮಾತೆ, ಮಹಾಮಾಯಾ ದೇವಿಯನ್ನು ಸ್ತುತಿಸುವಂತೆ ರಚಿಸಿರುವೆನು. ರಮಣಮಹರ್ಷಿಗಳು ನೀಡಿದ ಸಂಕ್ಷಿಪ್ತ ಪದಗಳ ಸಹಾಯದಿಂದ; ನನ್ನ ಪೂಜ್ಯ ತಂದೆಯವರಿಂದ ಪಡೆದ ಪಾಠಗಳು ಹಾಗೂ ಸಾಂಪ್ರದಾಯಿಕ ಜ್ಞಾನದಿಂದ ಪಡೆದ ಮತ್ತು ಮಂತ್ರ ಹಾಗೂ ತಂತ್ರಗಳಿಂದ ನಾನು ಗ್ರಹಿಸಿದ ಸಾರದಿಂದ, ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತದ ನೆರವಿನಿಂದ ನನ್ನ ತಪಸ್ಸಿನಿಂದ ಬೆಳಕು ಚೆಲ್ಲಿ, ಈ ಕೃತಿಯನ್ನು ರಚಿಸಿರುವೆ."

ಗಣಪತಿ ಮುನಿಗಳು ಈ ಕೃತಿಯನ್ನು ಕೇವಲ ಇಪ್ಪತ್ತು ದಿನಗಳಲ್ಲಿ ರಚಿಸಲು ಉದ್ದೇಶಿಸಿದ್ದರು. ಮಂಗಳವಾರ, ನವೆಂಬರ್, 26, 1907, ಪ್ಲವಂಗ ನಾಮ ಸಂವತ್ಸರ, ಕಾರ್ತಿಕ ಮಾಸ, ಕೃಷ್ಣ ಪಕ್ಷ, ಷಷ್ಠಿ ತಿಥಿಯಂದು ಭಗವಾನ್ ರಮಣ ಮಹರ್ಷಿಗಳ ಸಮ್ಮುಖದಲ್ಲಿ ಕೃತಿ ರಚನೆಯನ್ನು ಪ್ರಾರಂಭಿಸಿದರು. ಪ್ರತಿ ದಿನದ ಕೊನೆಯಲ್ಲಿ ಗಣಪತಿ ಮುನಿಗಳು ಭಗವಾನರ ಮುಂದೆ ಆ ದಿನ ಬರೆದ ಶ್ಲೋಕಗಳನ್ನು ಓದುತ್ತಿದ್ದರು. ಭಗವಾನರು ಹಾಗೂ ನೆರೆದಿದ್ದ ಎಲ್ಲ ಶಿಷ್ಯರೂ ಅದನ್ನು ಆಲಿಸಿ ಸಂತೋಷಪಡುತ್ತಿದ್ದರು.

ಒಂದು ಸಂಜೆ ಏಳು ಘಂಟೆಗೆ ಗಣಪತಿ ಮುನಿಗಳು ಈ ಶ್ಲೋಕವನ್ನು ಪ್ರಸ್ತುತ ಪಡಿಸುತ್ತಿದ್ದರು:

ಛಿನ್ನಾಂ ಭಿನ್ನಾಂ ಸುತರಾಂ ಸನ್ನಾಮನ್ನಾಭಾವಾದಭಿತಃ ಖಿನ್ನಾಂ
ಏತಾಂ ಪಾತುಂ ಭರತಕ್ಷೋಣೀಂ ಜಾಯೇ ಜಿಷ್ಣೋಃ ಕುರು ಮಾಂ ಶಕ್ತಂ ॥

"ಓ ಮಾತೇ! ಚಿಂದಿಚಿಂದಿಯಾದ ಮತ್ತು ಆಹಾರದ ಕೊರತೆಯಿಂದ ಬಳಲುತ್ತಿರುವ ಭರತ ಭೂಮಿಯನ್ನು ಉಳಿಸಲು ನನಗೆ ಶಕ್ತಿಯನ್ನು ನೀಡು."

ಇಲ್ಲಿ ಆಹಾರವೆಂದರೆ ಶಕ್ತಿ ಮತ್ತು ಮಾನಸಿಕ ಕುಶಾಗ್ರಮತಿ. ಪ್ರಸ್ತುತ ಭಾರತದಲ್ಲಿ ಇವುಗಳ ಕೊರತೆಯಿರುವುದರಿಂದ ಭಾರತ ಮಾತೆಯು ಚೂರು ಚೂರಾಗಿ ಹಸಿವಿನಿಂದ ಬಳಲುತ್ತಿರುವಳು. ಹೀಗೆ ಗಣಪತಿ ಮುನಿಗಳು ಭಾರತವು ಎದುರಿಸುತ್ತಿರುವ ಕೊರತೆಯನ್ನು ಸರಿಪಡಿಸಲು ಶಕ್ತಿಯನ್ನು ನೀಡೆಂದು ಪ್ರಾರ್ಥಿಸುತ್ತಿದ್ದರು.

ಮಾತೆ ಉಮಾ ದೇವಿಯೂ ಸಹ ಗಣಪತಿ ಮುನಿಗಳ ಕಾವ್ಯವನ್ನು ಆಲಿಸುತ್ತಾ ಸಂತೋಷಿಸುತ್ತಾ ಸಣ್ಣ ಕೀಟಲೆಯನ್ನು ಮಾಡಿದಳು. ಈ ಶ್ಲೋಕವನ್ನು ಓದಿದನಂತರ ಗಣಪತಿ ಮುನಿಗಳಿಗೆ ತೀವ್ರವಾದ ಹಸಿವುಂಟಾಯಿತು. ಪ್ರತಿನಿತ್ಯವೂ ಊಟವನ್ನು ತರುತ್ತಿದ್ದ ಎಚ್ಚಮ್ಮಾಳ್ ಎಂಟು ಘಂಟೆಗೆ ಮುಂಚೆ ಬರುವ ಹಾಗಿರಲಿಲ್ಲ. ಗಣಪತಿಯು ಶ್ಲೋಕವನ್ನು ಓದುವ ಸಮಯಕ್ಕೆ ಎಚ್ಚಮ್ಮಾಳ್ ಅಡಿಗೆಯನ್ನು ಪ್ರಾರಂಭಿಸಿದ್ದಳು. ಅವಳು ಒಂದು ಕೊಳಗದೊಳಗೆ ಅಕ್ಕಿ ಹಾಗೂ ಬೇಳೆಯನ್ನು ಹಾಕಿ ಅದನ್ನು ಒಲೆಯ ಮೇಲಿಟ್ಟು ಒಲೆಯನ್ನು ಹೊತ್ತಿಸಿದಳು. ಏತನ್ಮಧ್ಯೆ ಒಬ್ಬ ಹೆಂಗಸು ಬಂದು ಗಣಪತಿ ಮುನಿಗಳು ಬಹಳ ಹಸಿವಿನಿಂದ ಬಳಲುತ್ತಿದ್ದು ಅವರಿಗೆ ಕೂಡಲೇ ಊಟವನ್ನು ನೀಡಬೇಕೆಂದು ಹೇಳಿದಳು. ಎಚ್ಚಮ್ಮಾಳ್ ಅವಳಿಗೆ ಈಗ ತಾನೇ ಅಡಿಗೆಗೆ ಇಟ್ಟಿರುವುದಾಗಿ, ಅದು ಮುಗಿಯಲು ಸ್ವಲ್ಪ ಹೊತ್ತು ಆಗುವುದೆಂದು ಹೇಳಿದಳು. ಕೊಳಗವನ್ನು ನೋಡಿದ ಹೆಂಗಸು ಅಡಿಗೆಯು ಆಗಿರುವುದೆಂದು ಎಚ್ಚಮ್ಮಾಳ್ಳಿಗೆ ಪಾತ್ರೆಯ ಮುಚ್ಚಳವನ್ನು ತೆಗೆದು ನೋಡುವಂತೆ ತಿಳಿಸಿದಳು. ಎಚ್ಚಮ್ಮಾಳಿಗೆ ಆಶ್ಚರ್ಯವಾಗುವಂತೆ ಆಹಾರವು ಸಿದ್ಧವಾಗಿತ್ತು. ಕೂಡಲೇ ಅವಳು ಆಹಾರವನ್ನು ತೆಗೆದುಕೊಂಡು ಹೋಗಿ ಗಣಪತಿ ಮುನಿಗಳಿಗೆ ಕೊಡುತ್ತಾ ಅಲ್ಲಿ ನಡೆದ ಅದ್ಭುತ ಘಟನೆಯನ್ನು ವಿವರಿಸಿದಳು. ಗಣಪತಿ ಮುನಿಗಳು ಮುಗುಳ್ನಕ್ಕು ದೈವೀ ಮಾತೆಯ ಕಾರ್ಯದ ಬಗ್ಗೆ ಆಶ್ಚರ್ಯಪಟ್ಟರು.

ಹತ್ತು ದಿನಗಳ ಕಾಲ ಸತತವಾಗಿ ಬರೆದೂ ಬರೆದೂ ಗಣಪತಿ ಮುನಿಗಳ ಬಲಗೈಯಿನ ಹೆಬ್ಬೆಟ್ಟು ಊದಿಕೊಂಡಿತು. ಆದರೂ ಬಿಡದೇ ಬರೆಯುವುದನ್ನು ಮುಂದುವರೆಸಿದರು. ಹತ್ತೊಂಬತ್ತನೇ ದಿವಸದ ಹೊತ್ತಿಗೆ 700 ಶ್ಲೋಕಗಳ ರಚನೆಯನ್ನು ಮುಗಿಸಿದ್ದರು. ಹೆಬ್ಬೆಟ್ಟು ಅತಿಯಾಗಿ ಊದಿಕೊಂಡು ಬರೆಯುವುದು ಅಸಾಧ್ಯವಾಗತೊಡಗಿತು. ಇನ್ನೂ 300 ಶ್ಲೋಕಗಳನ್ನು ರಚಿಸಬೇಕಿತ್ತು, ಅದೂ ಕೇವಲ ಒಂದು ದಿನದೊಳಗೆ ಮಾತ್ರ. ಆದರೆ ಗಣಪತಿ ಮುನಿಗಳ ಮುಖದಲ್ಲಿ ಯಾವುದೇ ಆತಂಕವೂ ಇರಲಿಲ್ಲವೇಕೆಂದರೆ ಅವರು ತಮ್ಮ ಎಲ್ಲ ಭಾರವನ್ನೂ ಮಾತೆಯ ಮೇಲ್ಲೆ ಹಾಕಿ ತಾವು ಶಾಂತಿಯಿಂದಿದ್ದರು. ಈಗ ಸ್ತೋತ್ರ ರಚನೆಯನ್ನು ಮುಗಿಸುವ ಜವಾಬ್ದಾರಿಯು ಮಾತೆಯದಾಗಿತ್ತು.

ಆ ರಾತ್ರೆ ತಿರುವಣ್ಣಾಮಲೈನಲ್ಲಿನ ವೈದ್ಯ ಪುಣ್ಯಕೋಟಿಯ ಕನಸಿನಲ್ಲಿ ಬ್ರಾಹ್ಮಣನು ಪ್ರತ್ಯಕ್ಷನಾಗಿ ಅವರಿಗೆ, "ಅರುಣಗಿರಿಯಲ್ಲಿರುವ ಮುನೀಶ್ವರನಿಗೆ ಹೆಬ್ಬೆಟ್ಟು ಊದಿಕೊಂಡಿದೆ. ಅಲ್ಲಿ ಹೋಗಿ ಅವರಿಗೆ ಔಷಧವನ್ನು ಕೂಡಲೇ ನೀಡು!" ಎಂದಂತಾಯಿತು. ಮಾರನೇ ದಿನ ಬೆಳಗಿನ ಝಾವವೇ ವೈದ್ಯರು ಅಲ್ಲಿಗೆ ಹೋಗಿ ಭಗವಾನರ ಹೆಬ್ಬೆಟ್ಟನ್ನು ಪರೀಕ್ಷಿಸತೊಡಗಿದರು. ವೈದ್ಯರು ಅವರ ಊದಿಕೊಂಡ ಹೆಬ್ಬೆಟ್ಟಿನ ಭಾಗವನ್ನು ತೆರೆದು ಔಷಧವನ್ನು ಹಚ್ಚಿ, ಬೆರಳಿಗೆ ಬಟ್ಟೆಯನ್ನು ಕಟ್ಟಿ, ನೋವನ್ನು ಕಡಿಮೆ ಮಾಡಲು ನೋವು ನಿವಾರಕ ಮಾತ್ರೆಯನ್ನು ಕೊಟ್ಟರು.

ಬೆರಳಿಗೆ ಔಷಧವನ್ನು ಕೊಟ್ಟಿದ್ದರೂ ಬರೆಯುವುದು ಕಷ್ಟವಾಗಿತ್ತು. ಗಣಪತಿ ಮುನಿಗಳ ಶಿಷ್ಯರು ಅವರು ಹೇಳುವುದನ್ನು ಬರೆಯಲು ತಮ್ಮ ಇಂಗಿತವನ್ನು ವ್ಯಕ್ತಪಡಿಸಿದರು. ಗಣಪತಿ ಮುನಿಗಳು ಸಂಪೂರ್ಣವಾಗಿ ನಿಃಶಕ್ತರಾಗಿದ್ದರಿಂದ ಅವರು ಐದು ಶಿಷ್ಯರಿಗೆ ಆ ದಿನ ರಾತ್ರೆ 8 ಘಂಟೆಗೆ ಬರಲು ತಿಳಿಸಿದರು. ಆ ದಿನ 15-12-1907, ಭಾನುವಾರ, ಮಾರ್ಗಶಿರ ಮಾಸ ಶುಕ್ಲ ಪಕ್ಷದ ಪ್ರಥಮಿ ತಿಥಿ, ಸ್ತೋತ್ರವನ್ನು ಮುಗಿಸುವ ಇಪ್ಪತ್ತನೇ ಕೊನೆಯ ದಿನ. ರಮಣ ಮಹರ್ಷಿಗಳು ಹತ್ತಿರದಲ್ಲಿದ್ದ ಎತ್ತರದ ಕುರ್ಚಿಯ ಮೇಲೆ ಸಮಾಧಿ ಸ್ಥಿತಿಯಲ್ಲಿ ಕುಳಿತಿದ್ದರು. ಗಣಪತಿ ಮುನಿಗಳು ಅವರ ಪಾದದಡಿಯಲ್ಲಿ ಕುಳಿತು, ಅವರ ಶಿಷ್ಯರು ಪೆನ್ನು ಹಾಗೂ ಕಾಗದದೊಂದಿಗೆ ಅವರ ಸುತ್ತಲೂ ಕುಳಿತಿದ್ದರು. ಮುನಿಗಳು ಐದು ಶ್ಲೋಕಗಳನ್ನು ಏಕಕಾಲದಲ್ಲಿ ಪ್ರತಿಯೊಬ್ಬ ಶಿಷ್ಯನಿಗೂ ಒಂದೊಂದು ಸಾಲನ್ನು ಹೇಳಲು ತೊಡಗಿದರು. ಐದೂ ಶಿಷ್ಯರಿಗೆ ಕ್ರಮವಾಗಿ ಬೇರೆ ಬೇರೆ ಶ್ಲೋಕಗಳ ಮೊದಲನೇ ಸಾಲನ್ನು ಹೇಳಿದ ನಂತರ ಮೊದಲನೇ ಶಿಷ್ಯನ ಕಡೆ ತಿರುಗಿ ಆ ಶ್ಲೋಕದ ಎರಡನೇ ಸಾಲನ್ನು ಹೇಳತೊಡಗಿದರು. ಇದೇ ರೀತಿ ಎಲ್ಲರಿಗೂ ಹೇಳುವುದನ್ನು ಮುಂದುವರೆಸಿದರು. ಪ್ರತಿಯೊಂದು ಶ್ಲೋಕಗಳೂ ವಿವಿಧ ಛಂದಸ್ಸಿನಿಂದ ಕೂಡಿದ್ದು, ಐದು ಶ್ಲೋಕಗಳು ಐದು ಛಂದಸ್ಸಿನಿಂದ ಕೂಡಿದ್ದು ಏಕಕಾಲದಲ್ಲಿ ಹೇಳುತ್ತಿದ್ದರು. ಶ್ಲೋಕಗಳು ಏಕಕಾಲದಲ್ಲಿ ತಂತಾನೇ ಹರಿದು ಬರುತ್ತಿತ್ತು. ಈ ಅದ್ಭುತ ಕಾರ್ಯವನ್ನು ಕಾವ್ಯ ರಚನೆಯ ಪ್ರಪಂಚದಲ್ಲಿ ಯಾರೂ ಮಾಡಿರಲಿಲ್ಲ ಹಾಗೂ ಗಣಪತಿ ಮುನಿಗಳನ್ನು ಬಿಟ್ಟು ಯಾರಿಗೂ ಮಾಡಲು ಅಸಾಧ್ಯ!

ಮಧ್ಯರಾತ್ರಿಯಾಯಿತು ಮತ್ತು ಕಡೆಯ ಐದು ಶ್ಲೋಕಗಳನ್ನು ಬರೆದು ಮುಗಿಸಲಾಯಿತು. ಕೇವಲ ನಾಲ್ಕೇ ಘಂಟೆಗಳಲ್ಲಿ ಮುನ್ನೂರು ಶ್ಲೋಕಗಳನ್ನು ರಚಿಸಿ, ಬರೆದು ಮುಗಿಸಲಾಯಿತು. ಬರೆದುಕೊಳ್ಳುತ್ತಿದ್ದ ಶಿಷ್ಯರು ದೀರ್ಘ ನಿಟ್ಟುಸಿರನ್ನು ಬಿಟ್ಟು ಗಣಪತಿ ಮುನಿಗಳನ್ನು ನೋಡಿದರು. ಮುನಿಗಳು ಅರೆ ಎಚ್ಚರ ಸ್ಥಿತಿಯಲ್ಲಿದ್ದರು. ಭಗವಾನ್ ರಮಣ ಮಹರ್ಷಿಗಳು ಸಂಪೂರ್ಣವಾಗಿ ಸಮಾಧಿ ಸ್ಥಿತಿಯಲ್ಲಿ ಪ್ರಾರಂಭದಿಂದಲೂ ಮುಳುಗಿದ್ದರು. ಐದು ನಿಮಿಷಗಳು ಅಲ್ಲಿ ಸಂಪೂರ್ಣ ಶಾಂತಿಯು ನೆಲೆಸಿತ್ತು. ಇದ್ದಕ್ಕಿದ್ದಂತೆ ಭಗವಾನರು ಕಣ್ತೆರೆದು "ನಾಯನಾ! ನಾನು ಹೇಳಿದ್ದೆಲ್ಲವನ್ನೂ ಬರೆದುಕೊಂಡೆಯಾ?" ಎಂದರು.

ಆ ಪದಗಳು ನಾಯನರ (ಗಣಪತಿ ಮುನಿಗಳ) ಅರೆ ಎಚ್ಚರ ಸ್ಥಿತಿಯನ್ನು ಹೋಗಲಾಡಿಸಿತು ಹಾಗೂ ತಮ್ಮ ತೇವವಾದ ಕಣ್ಣುಗಳಿಂದ, ಭಕ್ತಿಭಾವದಿಂದ ಹಾಗೂ ತೇಜಸ್ಸಿನಿಂದ ಕೂಡಿದ ಮುಖದಿಂದ ಅವರು ತಮ್ಮೆರಡು ಕೈಗಳಿಂದಲೂ ಭಗವಾನರ ಪಾದಗಳನ್ನು ಮುಟ್ಟಿ, "ಹೌದು, ಭಗವನ್! ನೀವು ಹೇಳಿದ್ದೆಲ್ಲವನ್ನೂ ಪಡೆದುಕೊಂಡೆ."

೧೫

ಆನೆಯ ಮೇಲೆ

"ಓ ಭಗವಂತನೇ! ಅರ್ಜುನನ ದೈವೀ ಸಾರಥಿಯೇ! ನಿನ್ನ ಉಳಿವಿನ ಗುಣಮಟ್ಟವನ್ನು ಋಷಿಮುನಿಗಳು ಬಹಿರಂಗ ಪಡಿಸಿರುವರು. ನೀನು ಜೀವಿಗಳಲ್ಲಿ ಶಿಸ್ತನ್ನು ತಂದು ಅವರನ್ನು ಉಳಿಸಿದೆ. ನೀನು ಸದಾ ಗುಣರಹಿತ ಆತ್ಮ. ನಿನ್ನ ಗುಣಗಳನ್ನು ಆರಾಧಿಸುವುದೇ ಯೋಗ ಮತ್ತು ಸಂತೋಷ" – **ವಾಸಿಷ್ಠ ಮಹಾದೇವ ಶಾಸ್ತ್ರಿ**

ಒಂದೆಡೆ ನಾಯನರು ಭಗವಾನರಿಗೆ ಸಂಪೂರ್ಣವಾಗಿ ತಮ್ಮ ಗಮನವನ್ನು ನೀಡುತ್ತಿದ್ದರೆ, ಅವರ ಮಗ ಬಾಲಕ, ಮಹಾದೇವನು ಭಗವಾನರೊಂದಿಗೆ ಸ್ನೇಹ ಬೆಳೆಸಿಕೊಂಡು ಅವರೊಂದಿಗೆ ಆಟವಾಡುತ್ತ ತನ್ನ ಗುರುಭಕ್ತಿಯನ್ನು ತನ್ನದೇ ಆದ ರೀತಿಯಲ್ಲಿ ತೋರುತ್ತಿದ್ದನು.

ನಾಯನರು ಅಪರೂಪದ ಹಾಗೂ ಮಹಾನ್ ಕೃತಿಯನ್ನು ತಡೆರಹಿತ ಸಂಯಮದಿಂದ (ತಪಸ್ಸಿನಂತೆ) ಇಪ್ಪತ್ತು ದಿನಗಳಲ್ಲಿ ರಚಿಸಿದ್ದರು. ಭಗವಾನರಿಗೆ ತಮ್ಮ ಶಿಷ್ಯನಿಗೆ ಆಯಾಸವಾಗಿರುವುದು ಹಾಗೂ ಅವರಿಗೆ ವಿಶ್ರಾಂತಿಯ ಅಗತ್ಯ ಮತ್ತು ಚೇತರಿಸಿಕೊಳ್ಳಲು ಸಮಯ ಬೇಕೆಂಬುದು ಅರಿವಾಗಿತ್ತು. ಗಣಪತಿ ಮುನಿಗಳ ನರಗಳೆಲ್ಲವೂ ಅತಿಯಾಗಿ ಬಿಸಿಯಾಗಿತ್ತು, ಹಾಗಾಗಿ ಅದನ್ನು ತಂಪಾಗಿಸಲು ಭಗವಾನರು ಅವರನ್ನು ಬೆಟ್ಟದ ಮೇಲಿರುವ ಸಪ್ತ ಝರಿಗೆ ಕರೆದುಕೊಂಡು ಹೋಗಿ ಅಲ್ಲೇ ಒಂದು ವಾರ ಇರುವಂತೆ ವ್ಯವಸ್ಥೆಯನ್ನು ಮಾಡಿದ್ದರಿಂದಾಗಿ ಅವರು ಸಂಪೂರ್ಣವಾಗಿ ಚೇತರಿಸಿಕೊಂಡರು. ದೇವಿಯ ಕೃಪೆಯಿಂದ ನಾಯನರು ಅತೀಂದ್ರಿಯ ದೃಷ್ಟಿ, ಅತೀಂದ್ರಿಯ ಶ್ರವಣ ಶಕ್ತಿ ಮತ್ತು ಮನಸ್ಸನ್ನು ಓದುವ ಶಕ್ತಿಗಳು ಅವರಿಗೆ ಒಲಿದವು.

ನಾಯನರ ಹೊಸ ಕೃತಿಯ ರಚನೆಯ ಸುದ್ದಿಯು ನಾಡಿನುದ್ದಗಲಗಳಿಗೂ ಹರಡಿತು. ನಾಯನರ ಶಿಷ್ಯರು ಅವರನ್ನು ಉಮಾಸಹಸ್ರಮ್ ಕೃತಿಯನ್ನು ಎಲ್ಲರೆದುರಿಗೂ ಓದಿ ಅದರ ಅರ್ಥಗಳನ್ನು ವಿವರಿಸುವಂತೆ ಬೇಡಿಕೊಂಡರು. ನಾಯನರು ಅದಕ್ಕೆ ಒಪ್ಪಿ, ಸಭೆಗೆ ದೂರದಿಂದ ಬರುವವರಿಗೆ ಸೂಕ್ತ ವಸತಿ ವ್ಯವಸ್ಥೆಯನ್ನು ಹಾಗೂ ಸಭೆಯನ್ನು ನಡೆಸಲು ಬೇಕಾದ ವ್ಯವಸ್ಥೆಗಳನ್ನು ಮಾಡಲು ಸೂಚಿಸಿದರು. ಉಮಾಸಹಸ್ರಮ್ ಪ್ರವಚನಕ್ಕಾಗಿ ಪಚ್ಚೆಯಮ್ಮನ್ ಮಂದಿರ (ಮರಕತ ಶ್ಯಾಮಲಾಂಬ)ವನ್ನು ಅರಿಸಿಕೊಳ್ಳಲಾಯಿತು.

ಅದೇ ರೀತಿ, ಶಿಷ್ಯರು ಎಲ್ಲ ಆಸಕ್ತರಿಗೂ ಆಹ್ವಾನ ಪತ್ರಿಕೆಯನ್ನು ಕಳಿಸಿದರು. ವೆಲ್ಲೂರಿನಿಂದ ಗಣಪತಿ ಮುನಿಗಳ ಪತ್ನಿ ವಿಶಾಲಾಕ್ಷಮ್ಮ ಹಾಗೂ ಪುತ್ರ ಮಹಾದೇವರೂ ಬಂದರು. ಮಹಾದೇವನನ್ನು ನೋಡಿದ ಭಗವಾನರು ಪ್ರೀತಿಯಿಂದ ಅವನಿಗೆ ತನ್ನ ನೆನಪಿದೆಯೇ ಎಂದು ಕೇಳಿದರು. ಮಹಾದೇವನಿಗೆ ಅವರ ನೆನಪುಂಟಾಗದೇ ಇದ್ದದ್ದರಿಂದ ಅವನು ಏನೂ ಹೇಳಲಿಲ್ಲ. ಅವನು ಭಗವಾನರಿಗೆ, "ಅಹಂ ಭೋ ಅಭಿವಾದಯೇ" ಎಂದು ಹೇಳಿ ನಮಸ್ಕರಿಸಿ ದೂರ ಹೋಗಿ ಆಟವಾಡತೊಡಗಿದ. ಈ ಮಧ್ಯೆ ಕೆಲವು ಭಕ್ತರು ಭಗವಾನರ ಬಳಿ ಬಂದು ನಮಸ್ಕರಿಸಿ ತಮ್ಮ ನೆನಪಿದೆಯೇ ಎಂದು ಕೇಳತೊಡಗಿದರು. ಭಗವಾನರಿಗೆ ಅವರ ನೆನಪು ಆಗದೇ ಇದ್ದದ್ದರಿಂದ ಅವರು ಯಾವುದೇ ಪ್ರತಿಕ್ರಿಯೆಯನ್ನು ನೀಡಲಿಲ್ಲ.

ಈಗ ಮಹಾದೇವನು ಭಗವಾನರ ಬಳಿಗೆ ಓಡಿ ಬಂದು, "ನಿಮ್ಮನ್ನು ನೋಡಲು ಬಂದ ಅವರು ಏನನ್ನು ಕೇಳಿದರು ಭಗವಾನ್?" ಎಂದು ಕೇಳಿದನು.

ಭಗವಾನರು, "ಅವರು ನನಗೆ ಅವರ ನೆನಪಿದೆಯಾ ಎಂದು ಕೇಳಿದರು." ಎಂದರು.

ಅದಕ್ಕೆ ಮಹಾದೇವನು, "ನೀವು ಏನೆಂದು ಉತ್ತರಿಸಿದಿರಿ ಭಗವಾನ್?" ಎಂದನು.

ಭಗವಾನ್ – "ನನಗೆ ಅವರ ನೆನಪಿಲ್ಲದ್ದರಿಂದ ನಾನು ಸುಮ್ಮನಿದ್ದೆ."

ಮಹಾದೇವ – "ನಾನೂ ಸಹ ನಿಮಗೆ ಅದೇ ಮಾಡಿದ್ದು." ಎಂದು ಹೇಳಿ ಅಲ್ಲಿಂದ ಓಡಿಹೋದನು. ನೆರೆದಿದ್ದವರೆಲ್ಲ ಘೊಳ್ಳೆಂದು ನಕ್ಕರು.

ನಾಯನರ ವಿನಂತಿಯ ಮೇರೆಗೆ ಭಗವಾನರು ತಮ್ಮ ವಾಸಸ್ಥಾನವನ್ನು ಪಚ್ಚೆಯಮ್ಮನ್ ಮಂದಿರಕ್ಕೆ ಬದಲಾಯಿಸಿಕೊಂಡರು. ನಾಯನ ಹಾಗೂ ಅವರ ಪತ್ನಿಯು ಪದೇ ಪದೇ ಕೆಲಸದ ಪ್ರಯುಕ್ತ ಊರೊಳಗೆ ಹೋಗಬೇಕಾದ್ದರಿಂದ ಅವರು ಮಹಾದೇವನನ್ನು ಭಗವಾನರ ಬಳಿ ಬಿಟ್ಟು ಹೋಗುತ್ತಿದ್ದರು. ಮಹಾದೇವನು ದಷ್ಟ ಪುಷ್ಟವಾಗಿ ಬೆಳೆದಿದ್ದು ತಲೆಯಲ್ಲಿ ಹೇರಳವಾಗಿ ಗುಂಗುರು ಕೂದಲಿತ್ತು. ಎರಡೂ ತೋಳುಗಳ ಮೇಲೆ ಹಾಗೂ ಹಣೆಯ ಮೇಲೆ ಚೆನ್ನಾಗಿ ಕಾಣುವಂತೆ ವಿಭೂತಿ ಧರಿಸಿ ಹಣೆಯ ಮಧ್ಯದಲ್ಲಿ ಕುಂಕುಮವನ್ನು ಹಚ್ಚಿಕೊಂಡಿರುತ್ತಿದ್ದನು. ಅವನು ಬಾಲ ಯೋಗಿಯಂತೆ ಕಂಗೊಳಿಸುತ್ತಿದ್ದು ಭಗವಾನರ ದರ್ಶನಕ್ಕೆ ಬರುತ್ತಿದ್ದ ಜನಗಳನ್ನು ತನ್ನೆಡೆಗೆ ಆಕರ್ಷಿಸುತ್ತಿದ್ದ. ಭಗವಾನರು ಅವನೊಂದಿಗೆ ಪ್ರೀತಿಯಿಂದ ಮಾತನಾಡಿಸುತ್ತಾ ಅವನೊಂದಿಗೆ ಆಡುತ್ತಿದ್ದರಿಂದ ಅವರಿಬ್ಬರೂ ಗೆಳೆಯರಾದರು.

ಒಂದು ದಿನ ಭಗವಾನರು ಪಚ್ಚೆಯಮ್ಮನ್ ಮಂದಿರದ ಬಳಿಯಿರುವ ಕೊಳದಲ್ಲಿ ಮಹಾದೇವನನ್ನು ತಮ್ಮ ಬೆನ್ನಮೇಲೆ ಕೂರಿಸಿಕೊಂಡು ಈಜುತ್ತಿರುವಾಗ ಮಹಾದೇವನಿಗೆ ಇದು ಆನಂದವನ್ನುಂಟು ಮಾಡಿ ಅವರ ಬೆನ್ನಿನ ಮೇಲೆ ಕುಣಿದು ಕುಪ್ಪಳಿಸುತ್ತಾ, "ಹೋಗು, ಹೋಗು, ಹೇ, ಹೇ!" ಎಂದು ಕೂಗತೊಡಗಿದನು. ಭಗವಾನರಿಗೆ ಮಹಾದೇವನು ತಮ್ಮ

ಬೆನ್ನ ಮೇಲೆ ಪದೇ ಪದೇ ಕುಣಿದು ಕುಪ್ಪಳಿಸುತ್ತಿದ್ದರಿಂದ ನೀರಿನಲ್ಲಿ ತೇಲುವುದು ಕಷ್ಟವಾಗತೊಡಗಿತು. ಅವರು ಮಹಾದೇವನಿಗೆ ಕುಣಿಯುವುದನ್ನು ನಿಲ್ಲಿಸಲು ಕೂಗಿಕೊಂಡರು, ಅವನು ಅದನ್ನು ಕೇಳಲಿಲ್ಲ. ಬಹಳ ಕಷ್ಟದಿಂದ ಅವನನ್ನು ದಡಕ್ಕೆ ಕರೆತಂದು, ಮೆಲ್ಲಗೆ ಅವನನ್ನು, "ದೇವ, ನಿನಗೆ ಈಜಲು ಬರದು, ಅಲ್ಲದೆ ನನಗೂ ನಿನ್ನನ್ನು ತಡೆದುಕೊಳ್ಳಲು ಕಷ್ಟವನ್ನು ಮಾಡಿದೆ. ಇದು ಸರಿಯೇ? ನಾವಿಬ್ಬರೂ ಮುಳುಗೇ ಬಿಡುತ್ತೇವೆನೋ ಎಂದು ಭಯವಾಯಿತು." ಎಂದರು.

ಮಹಾದೇವನು ಮುಗ್ಧತೆಯಿಂದ, "ಏಕೆ ಭಗವಾನ್? ನನಗೆ ಈಜಲು ಬಾರದೇ ಇದ್ದರೂ, ನಿಮಗೆ ಬರುತ್ತಲ್ಲಾ! ಅಷ್ಟು ಸಾಕಲ್ಲವೇ?" ಎಂದನು.

ಮಹಾದೇವನ ಚೇಷ್ಟೆಗಳು ಬೇರೆ ವಿಷಯಗಳಿಗೂ ಹರಡತೊಡಗಿತು. ಒಮ್ಮೆ ಅವನು ಭಗವಾನರನ್ನು ನೋಡಲು ಬರುವ ಭಕ್ತರನ್ನು ಅವರ ಕೊಠಡಿಯ ಹೊರಗೇ ತಡೆದು, ಭಗವಾನರು ಸಮಾಧಿ ಸ್ಥಿತಿಯಲ್ಲಿರುವುದರಿಂದ ಅವರು ಯಾರನ್ನೂ ನೋಡುವುದಿಲ್ಲವೆಂದು, ಅವರಲ್ಲಿ ಕೇಳುವ ಪ್ರಶ್ನೆಗಳೇನಾದರೂ ಇದ್ದಲ್ಲಿ ಅದನ್ನು ತನ್ನ ಬಳಿಯೇ ಕೇಳಬಹುದೆಂದು ಹಾಗೂ ಅದಕ್ಕೆ ತಾನೇ ಉತ್ತರಿಸುವುದಾಗಿ ಹೇಳಿದನು. ಭಗವಾನರೇ ಸ್ವತಃ ಅವರನ್ನು ಒಳಗೆ ಬಿಡುವಂತೆ ಹೇಳುವವರೆಗೂ ಯಾರನ್ನೂ ಬಿಡುತ್ತಿರಲಿಲ್ಲ. ಒಳಗೆ ಬಂದ ಭಕ್ತರು ಭಗವಾನರೊಂದಿಗೆ ಮಾತನಾಡಿದ ನಂತರ ಅವರು ಮಹಾದೇವನ ಬಗ್ಗೆ ಹಾಗೂ ಅವನಿಗೆ ತಮ್ಮ ಪ್ರಶ್ನೆಗೆ ಉತ್ತರಿಸುವ ಶಕ್ತಿ ಉಂಟೇ ಎಂಬುದಾಗಿ ಕೇಳಿದಾಗ, ಭಗವಾನರು ಮುಗುಳ್ನಗುತ್ತಾ ಅವನಲ್ಲಿ ಸಾಕಷ್ಟು ಸಾಮರ್ಥ್ಯ ಉಂಟೆಂದು ಹೇಳಿದರು.

ಭಕ್ತರು ಸಂಪೂರ್ಣ ಸಂತೋಷಭರಿತರಾಗಿ ಮಹಾದೇವನನ್ನು ತಮ್ಮೊಂದಿಗೆ ದೇವಸ್ಥಾನಕ್ಕೆ ಕರೆದುಕೊಂಡು ಹೋದರು. ಸಂಜೆಯಾದಾಗ ಮಹಾದೇವನು ಭಗವಾನರ ಬಳಿ ಬಂದು ಹೆಮ್ಮೆಯಿಂದ ತಾನು ಆನೆಯ ಮೇಲೆ ಕುಳಿತು ಅದನ್ನು ಸವಾರಿ ಮಾಡಿದೆನೆಂದು ವಿವರಿಸಿದನು.

ಜ್ಞಾನಿಗಳ ಕಾರ್ಯವನ್ನು ಒಳಹೊಕ್ಕು ನೋಡಲಾಗುವುದಿಲ್ಲ. ತನ್ನ ಬೆನ್ನಿನ ಮೇಲೆ ಸವಾರಿ ಮಾಡಿದ ಮಗುವೊಂದು (ಮಹಾದೇವ ಶಾಸ್ತ್ರಿ) ಆನೆಯ ಮೇಲೂ ಸವಾರಿ ಮಾಡಿತು. ಭಗವಾನರು ಮಹಾದೇವನನ್ನು ತಮ್ಮ ತೊಡೆಯ ಮೇಲೆ ಮಲಗಿಸಿಕೊಂಡು ಅವನು ಸಾಕಷ್ಟು ಸುಸ್ತಾಗಿದ್ದದ್ದರಿಂದ ಮಲಗುವಂತೆ ಹೇಳಿದರು. ನಾಯನ ಹಾಗೂ ಅವರ ಪತ್ನಿ ನಗರಕ್ಕೆ ಹೋಗಿದ್ದವರು ಮರಳಿ ಬಂದು ತಮ್ಮ ಮಗನು ಭಗವಾನರ ತೊಡೆಯ ಮೇಲೆ ಆನಂದದಿಂದ ಆಡುತ್ತಿರುವುದನ್ನು ನೋಡಿ ಆನಂದಪರವಶರಾದರು. ತುಂಟ ಮಗು ಮತ್ತು ಮನೋಹರವಾದ ಗುರು!

೧೬

ಇವನೇ ಕಾರ್ತಿಕೇಯ

ಅಂಕಜುಷೇ ರಮಣಾಯ ನು ದಾತುಂ
ಮಾನವವೇಷಧರಾಯ ಗುಹಾಯ
ಶೋಣನಗಾರ್ಧತನೋ ಬಹು ದುಗ್ಧಂ
ಮಾತರಪೀತಕುಚೇಹ ವಿಭಾಸಿ ॥

– ಉಮಾಸಹಸ್ರಮ್ (7–26–18)

"ಓ ಮಾತೇ, ಅರುಣಾಚಲೇಶ್ವರನ ಅರ್ಧಾಂಗಿಯೇ! ಮನುಷ್ಯರೂಪವನ್ನು ಧರಿಸಿರುವ, ನಿನ್ನ ಮಡಿಲಲ್ಲಿರುವ ರಮಣ ಮಹರ್ಷಿಯಾದ ಸ್ಕಂದನಿಗೆ ಹೆಚ್ಚು ಹಾಲನ್ನು ಕೊಡಲು ಕುಡಿಯಲ್ಪಡದಿರುವ ಸ್ತನವುಳ್ಳವಳಾಗಿ ಪ್ರಕಾಶಿಸುತ್ತಿರುವೆ."

ನಾಯನರು ಉಮಾಸಹಸ್ರಮ್ ಪಠಣವನ್ನು ನಿಗದಿತ ವೇಳೆಯಲ್ಲೇ ಪ್ರಾರಂಭಿಸಿದರು. ಒಂದು ಎತ್ತರದ ಆಸನದ ಮೇಲೆ ಭಗವಾನರು ಕುಳಿತು ಅದನ್ನು ಕೇಳತೊಡಗಿದರು. ಸ್ತೋತ್ರದ ಫಲಶ್ರುತಿಯನ್ನು ಓದಲಾಯಿತು:

ಯದಿ ಗಾಯನ್ನಿಮಂ ಗ್ರಂಥಮುತ್ತರೇದಾಪದಃ ಕೃತೀ
ಮಹಿಮಾ ಸ ಮಹೇಶ್ವರ್ಯಾಃ ಶೀರ್ಷಂ ಸ್ಯಾದುನ್ನತಂ ನ ಮೇ
ಅಯಮಂಬಾಪರಪ್ರೀತೇ ರುದ್ಗಾರೋ ವಾಙ್ಮಯಾಕೃತೀ
ಅರ್ಥಃ ಕಶ್ಚಿದನೇನಾಪಿ ನತಾಂ ಯದಿ ಮಯಾ ಜಿತಮ್ ॥

"ಯಾರು ಈ ಮೇರು ಕೃತಿಯನ್ನು ಓದುವರೋ ಅವರು ಎಲ್ಲ ಕಷ್ಟಗಳನ್ನೂ ಮಾತೆಯ ಕರುಣೆಯಿಂದ (ನನ್ನಿಂದ ಅಲ್ಲ) ನಿವಾರಿಸಿಕೊಳ್ಳುವರು. ಈ ನಿರೂಪಣೆಯು ಮಾತೆಯ ಚರಣದಲ್ಲಿನ ನನ್ನ ಭಕ್ತಿಯನ್ನು ತಿಳಿಯಪಡಿಸುವುದೇ ಉದ್ದೇಶ. ಹೀಗೆ ಇದು ಸಜ್ಜನರಿಗೆ ಲಾಭವಾಗುವುದಾದರೆ ನಾನು ವಿಶ್ವಾಸ ಲಾಭವನ್ನು ಪಡೆಯುವೆ."

ನಾಯನರ ಕಂಠದಿಂದ ಜೇನು ಉದುರಿ ಸಭೆಯಲ್ಲಿನ ವಾತಾವರಣವು ಸಿಹಿಯಿಂದ ಕೂಡಿತ್ತು. ಉಮಾ ಸಹಸ್ರಮ್ ನಿಂದ ದೈವೀ ಶಬ್ದವು ಸಭೆಯಲ್ಲಿ ಪ್ರತಿಧ್ವನಿತವಾಗಿ ಹಾಗೂ ಸಭಿಕರಿಗೆ ನಾಯನರು ಸಾಕ್ಷಾತ್ ವಿನಾಯಕ ಭಗವಂತನಂತೆ ಕಂಡುಬಂದರು. ಆನಂದ

ಹಾಗೂ ಉದ್ವೇಗದಿಂದಾಗಿ ಸಭಿಕರಿಗೆ ಸಮಯದ ಪರಿವೇ ಆಗಿರಲಿಲ್ಲ. ಕೆಲವರಿಗೆ ದೈವೀ ದೃಷ್ಟಿಯ ದರ್ಶನವಾಯಿತು. ಸ್ತೋತ್ರದ ಪ್ರಸ್ತುತಿ ಮುಗಿದ ನಂತರವೂ ಅನೇಕ ಭಕ್ತರು ದರ್ಶನವನ್ನು ಅನುಭವಿಸಿ ಅನಂತರವೂ ತಮ್ಮ ಕನಸಿನಲ್ಲಿ ದೈವೀ ಮಾತೆಯನ್ನು ಕಂಡರು.

ಒಂದು ದಿನ ಪಾರ್ವತಿ ಮಾತೆಯು ನಾರಾಯಣ ಘನಪಾಠಿಯ (ನಾಯನರ ಶಿಷ್ಯ) ಕನಸಿನಲ್ಲಿ ಬಂದು ಉಮಾ ಸಹಸ್ರಮ್ ಕೃತಿಯಿಂದ ಕೆಲವು ಶ್ಲೋಕಗಳನ್ನು ಪಠಿಸುವಂತೆ ಕೇಳಿದಳು. ಅವರು ಸ್ತೋತ್ರವೊಂದನ್ನು ಹೇಳುತ್ತಿರುವಾಗ ದೇವಿಯು ಮಧ್ಯದಲ್ಲೇ ಅದನ್ನು ತಡೆದು, "ಗಣಪತಯೇ ಸ್ಥನಘಟಯೋಃ" ಶ್ಲೋಕವನ್ನು ಹೇಳಲು ಕೇಳಿದಳು. ನಾರಾಯಣರು ಆ ಶ್ಲೋಕವನ್ನು ಪಠಿಸಿದ್ದನ್ನು ಸಂತೋಷದಿಂದ ಕೇಳಿ ಮಂದಹಾಸವನ್ನು ಬೀರುತ್ತಾ ಅದೃಶ್ಯಳಾದಳು.

ಗಣಪತಯೇ ಸ್ತನಘಟಯೋಃ ಪದಕಮಲೇ ಸಪ್ತಲೋಕಭಕ್ತೇಭ್ಯಃ
ಆಧರಪುಟೇ ತ್ರಿಪುರಜಿತೇ ದದಾಸಿ ಪೀಯೂಷ ಮಂಬ ತ್ವಮ್ ॥

"ಓ ಮಾತೇ! ನೀನು ಗಣಪತಿಗೆ ನಿನ್ನ ಸ್ತನಗಳಿಂದ, ನಿನ್ನ ಎಲ್ಲ ಭಕ್ತರಿಗೆ ನಿನ್ನ ಪಾದ ಕಮಲಗಳಿಂದ ಮತ್ತು ಭಗವಾನ್ ಶಂಕರನಿಗೆ ನಿನ್ನ ತುಟಿಗಳಿಂದ ಅಮೃತವನ್ನು ನೀಡುತ್ತಿರುವೆ."

ನಾರಾಯಣ ಘನಪಾಠಿಯು ನಿದ್ರೆಯಿಂದ ಎಚ್ಚೆತ್ತ ನಂತರ ಈ ಸ್ತೋತ್ರದ ಅರ್ಥದ ಬಗ್ಗೆ ಯೋಚಿಸಿ, ಅನಂತರ ಅವರಿಗೆ ನಾಯನರು ನವದ್ವಿಪದಲ್ಲಿ ತಾನು ಮಾತೆಯ ಪುತ್ರನೆಂದು ಹೇಳಿದ್ದನ್ನು ಅರಿತು, ಮಾತೆಗೆ ಬೇರೆಲ್ಲಾ ಶ್ಲೋಕಗಳಿಗಿಂತ ಈ ಸ್ತೋತ್ರವು ಇಷ್ಟವಾಗಿರಬೇಕೆಂದು ಅರಿತರು. ಘನಪಾಠಿಯು ರಮಣ ಮಹರ್ಷಿ ಹಾಗೂ ನಾಯನರ ಬಳಿ ಬಂದು ತನ್ನ ಕನಸಿನ ವೃತ್ತಾಂತವನ್ನು ವಿವರಿಸಿದರು.

ಉಮಾ ದೇವಿಯು ತನ್ನ ಹಿರಿಯ ಮಗನನ್ನು ಪ್ರಪಂಚಕ್ಕೆ ಪರಿಚಯಿಸಿದುದಲ್ಲದೇ ಅಷ್ಟಕ್ಕೇ ನಿಲ್ಲಿಸದೆ, ಮಾರನೇ ದಿನ ಅವಳು ತನ್ನ ಕಿರಿಯ ಪುತ್ರನಾದ ಕಾರ್ತಿಕ (ಸ್ಕಂದ)ನನ್ನೂ ಪ್ರಪಂಚಕ್ಕೆ ಪರಿಚಯಿಸಿದಳು. ಭಗವಾನರು ದೂರದಲ್ಲಿ ತಮ್ಮ ದೃಷ್ಟಿಯನ್ನು ಕೇಂದ್ರೀಕರಿಸಿ ಕುಳಿತಿದ್ದರು. ಅವರ ಪಾದದಡಿಯಲ್ಲಿ ನಾಯನರು ಕುಳಿತಿದ್ದರು. ಕೆಲವು ಭಕ್ತರು ನಾಯನರ ಸುತ್ತ ಕುಳಿತಿದ್ದರು. ಇದ್ದಕ್ಕಿದ್ದಂತೆ ಮಹರ್ಷಿಯ ತಲೆಯ ಸುತ್ತ ಪ್ರಖರವಾದ ಹೊಳಪು ಮೂಡಿತು. ಈ ಹೊಳಪಿನಿಂದ ಆರು ನಕ್ಷತ್ರಗಳು ಉದಯಿಸಿ ಒಂದಾದ ಮೇಲೆ ಒಂದರಂತೆ ನಿಧಾನವಾಗಿ ಬಂದು ಮಹರ್ಷಿಯ ಹಣೆಯನ್ನು ಮುಟ್ಟಿ ನಂತರ ಹೊಳಪಿನೊಂದಿಗೆ ವಿಲೀನವಾಯಿತು. ನಂತರ ಆ ಹೊಳಪು ಕ್ರಮೇಣ ಮಹರ್ಷಿಯಲ್ಲಿ ಐಕ್ಯವಾಯಿತು. ಕೆಲವು ಕ್ಷಣಗಳ ನಂತರ ಮಹರ್ಷಿಗಳ ಬಾಯಿಂದ "ನಾನು ಯಾರು?" ಎಂಬ ವಾಕ್ಯವು ಕೆಳ ಧ್ವನಿಯಲ್ಲಿ ಅಸ್ಪಷ್ಟವಾಗಿ ಹೊರಬಂದಿತು. ನಾಯನರು ಈ ಪದಗಳನ್ನು ಕೇಳಿ ಅತಿಯಾದ ಸಂತೋಷ ಹಾಗೂ ಉತ್ಸಾಹದಿಂದ, "ಯಾಕೆ, ಭಗವನ್, ನೀವು ಭಗವಾನ್ ಕಾರ್ತಿಕೇಯ,"

ಎಂದು ಹೇಳಿ ಅವರ ಪಾದಗಳಿಗೆ ದೀರ್ಘದಂಡ ನಮಸ್ಕಾರವನ್ನು ಮಾಡಿದರು. ಸುತ್ತ ಕುಳಿತಿದ್ದ ಭಕ್ತರಿಗೆ ಭಗವಾನರೇ ಸ್ಕಂದ ಅಂದರೆ ಕಾರ್ತಿಕೇಯ ಎಂಬುದರ ಬಗ್ಗೆ ವಿವರಣೆ ನೀಡತೊಡಗಿದರು:

ಯಾನಾಯಾತ್ರ ನ ಕೇಕಿನಾಂ ಕುಲಪತಿಃ ಸ್ನಾನಾಯ ನ ಸ್ವರ್ಣದೀ
ಪಾನಾಯ ಕ್ಷಿತಿಭೃನ್ಮಹೇಂದ್ರದುಹಿತುರ್ನ ಸ್ತನ್ಯ ದುಗ್ಧಾಮೃತಮ್
ಗಾನಾಯ ಪ್ರಮಥೇಶ್ವರಾ ಸ್ಸವಯಸೋ ನೈವಾತ್ರ ವೀಣಾಭೃತೋ
ವಾಸಂ ಶೋಣಗಿರೌ ಕರೋಷಿ ಭಗವನ್ ಕ್ರೌಂಚಾದ್ರಿಭೇತ್ತಃ ಕುತಃ ।

"ಓ ಕಾರ್ತಿಕೇಯ ಭಗವನ್! ಇಲ್ಲಿ ನಿನ್ನ ಬಳಿ ನಿನ್ನ ವಾಹನವಾದ ನವಿಲು ಇಲ್ಲ. ಸ್ನಾನ ಮಾಡಲು ದಿವ್ಯವಾದ ಗಂಗಾನದಿಯಿಲ್ಲ. ಕುಡಿಯಲು ಪರ್ವತರಾಜ ಪುತ್ರಿಯ ಸ್ತನಗಳಿಂದ ಹೊರಬಂದ ಅಮೃತವೂ ಇಲ್ಲ. ಆಡಲು ಪ್ರಮಥಗಣಗಳ ಮುಖ್ಯರೂ ಇಲ್ಲ ಮತ್ತು ಕೊಳಲಿನೊಂದಿಗೆ ಸಂಗೀತವನ್ನು ನುಡಿಸಲು ದೈವೀ ಪುರುಷರೂ ಇಲ್ಲ. ಹಾಗಿದ್ದಾಗ, ಭಗವನ್, ನಿನ್ನ ವಾಸಸ್ಥಾನವನ್ನು ಏಕೆ ಅರುಣಾಚಲದಲ್ಲಿ ಮಾಡಿಕೊಂಡಿರುವೆ?"

ನಾಯನರು ಮಹರ್ಷಿಗಳನ್ನು ಹೊಗಳುತ್ತಾ ಹತ್ತು ಶ್ಲೋಕಗಳನ್ನು ಅಲ್ಲೇ ರಚಿಸಿದರು. ಅವುಗಳನ್ನು ನಂತರದಲ್ಲಿ ತಮ್ಮ "ಶ್ರೀ ರಮಣ ಚತ್ವಾರಿಂಶತ್" ಯಲ್ಲಿ ಸೇರಿಸಿದರು. ಅವರ ದಯೆಯಿಂದ ಹಾಗೂ ಕಾರ್ತಿಕೇಯನ ದರ್ಶನದಿಂದ ನಾಯನರಿಗೆ "ಓಂ ವಚದ್ಭುವೇ ನಮಃ" ಎಂಬ ಮಂತ್ರವು ಜಪಿಸಲು ಅಂತಃಪ್ರಜ್ಞೆಯು ಉಂಟಾಯಿತು ಹಾಗೂ ಆ ಮಂತ್ರವನ್ನು ನಂತರದಲ್ಲಿ "ಶ್ರೀ ರಮಣ ಗೀತ" ದಲ್ಲಿ ವಿವರಿಸಿರುವರು.

೧೭

ಸಂಸ್ಕೃತಿಯ ಸೃಷ್ಟಿಕರ್ತ – ಕವಿ

ಕ್ಷಾಂತಂ ಕಿಂ ಮಮ ದುರಿತಂ ಶಾಂತಂ ಕಿಂ ದೇವಿ ತೇ ಸ್ವಾಂತಂ
ಅನುಗೃಹ್ಣಾಸಿ ವಿಚಿತ್ರಂ ಮಾಮಪ್ಯಪರಾಧೀನಾಂ ಪ್ರಥಮಂ
– ಉಮಾಸಹಸ್ರಮ್ (4–14–13)

"ಓ ದೈವೀ ಮಾತೇ! ನಾನು ಅತ್ಯಂತ ಪಾಪಿಷ್ಟನಾದರೂ, ನೀನು ನನ್ನನ್ನು ಕ್ಷಮಿಸಿರುವಂತಿದೆ. ನನ್ನನ್ನು ಸಹಿಸಿಕೊಳ್ಳಲು ನೀನು ಶಾಂತಳೂ ಮೃದು ಹೃದಯದವಳೂ ಆಗಿರುವೆ. ಇಲ್ಲದಿದ್ದಲ್ಲಿ ಹೇಗೆ ನಾನು ನಿನ್ನಿಂದ ವಿಶೇಷ ಅನುಗ್ರಹವನ್ನು ಪಡೆಯಲು ಸಾಧ್ಯ?"

ಇದು ಸ್ವಲ್ಪ ಆಶ್ಚರ್ಯವೇ ಸರಿ. ತಪಸ್ಸಿಗೆ ಮತ್ತೊಂದು ಹೆಸರೇ ಆದ ನಾಯನರು (ಗಣಪತಿ ಮುನಿಗಳು) ಹೇಗೆ ಪಾಪಾತ್ಮರಾಗಲು ಸಾಧ್ಯ? ಸಂಸ್ಕೃತದಲ್ಲಿ ಒಂದು ಮಹಾನ್ ಉಕ್ತಿಯಿದೆ –"ಉದಾರಚರಿತಾನಾಂ ತು ವಸುಧೈವ ಕುಟುಂಬಕಮ್", ಅಂದರೆ, "ಮಹಾತ್ಮರಿಗೆ ಇಡೀ ವಿಶ್ವವೇ ಅವರ ಕುಟುಂಬ". ಅವರ ಅಭಿಪ್ರಾಯವು ಸದಾ ವಿಶ್ವಾತ್ಮಕವಾದದ್ದು. ಇಡೀ ಮಾನವ ಕುಲದ ಸುಖ ಸಂತೋಷಗಳು ಹಾಗೂ ಕಷ್ಟಕಾರ್ಪಣ್ಯಗಳನ್ನು ತಮ್ಮದೇ ಎಂದು ಭಾವಿಸುವರು. ಸಮಸ್ತ ವಿಶ್ವದ ಜೀವಶಕ್ತಿ, ಕ್ರಿಯಾತ್ಮಕ ಶಕ್ತಿಯು ಪ್ರಾಪಂಚಿಕ ವಿಷಯಗಳಲ್ಲಿ ಹುದುಗಿ ಅಜ್ಞಾನದಲ್ಲಿ ಮರೆಯಾಗಿದೆ ಮತ್ತು ಹೊರಬರಲು ಒದ್ದಾಡುತ್ತಿದೆ, ಹೀಗಾಗಿ ಶಾಂತಿಯನ್ನು ಕಳೆದುಕೊಂಡಿದೆ. ಆ ದೈವೀ ಶಕ್ತಿಯು ಶಾಂತಿಯುತವಾದಾಗ ಪಾಪ ಕಾರ್ಯಗಳಿಗೆ ಕೊನೆಯಾಗುವುದು. ನಾಯನರ ತಪಸ್ಸು ಸಮಸ್ತ ಸೃಷ್ಟಿಗೆ ಒಳಿತಾಗುವ ಉದ್ದೇಶವನ್ನು ಹೊಂದಿತ್ತು. ಅವರು ಪಾಪಾತ್ಮ ಎಂಬ ಪದವನ್ನು ಪ್ರಪಂಚದ ಪಾಪ ಎಂಬ ಅರ್ಥದಲ್ಲಿ ಉಪಯೋಗಿಸುತ್ತಿದ್ದರು. ಹೀಗಾಗಿ ಅವರನ್ನು ದೈವೀ ಮಾತೆಯು ಕ್ಷಮಿಸಿದರೆ, ಸಮಸ್ತ ಪ್ರಪಂಚವನ್ನೇ ಕ್ಷಮಿಸಿದಂತೆ ಹಾಗೂ ಎಲ್ಲೆಲ್ಲೂ ಶಾಂತಿಯು ನೆಲೆಸುವುದು. ಈ ಶ್ಲೋಕದಲ್ಲಿ ನಾಯನರ ರಾಷ್ಟ್ರೀಯ ಅಲ್ಲದೇ ಸಮಸ್ತ ವಿಶ್ವಾತ್ಮಕ ದೃಷ್ಟಿಯನ್ನು ಬಿಂಬಿಸಲಾಗಿದೆ.

1908ರ ಮಾರ್ಚ್ ತಿಂಗಳಿನಲ್ಲಿ ನಾಯನರು ಭಗವಾನರನ್ನು ವಿಶ್ವಗುರುವೆಂದು ಘೋಷಿಸಿದರು ಹಾಗೂ ಮಹಾನ್ ವೇದ ವೇದಾಂತಿಕ, ತತ್ತ್ವಮೀಮಾಂಸ ಮತ್ತು ಆಧ್ಯಾತ್ಮಿಕ ಹೊಳಹುಗಳಿರುವ ಮಹಾನ್ ಕೃತಿಯಾದ ಉಮಾಸಹಸ್ರಮ್ ಸ್ತೋತ್ರ ರಚಿಸಿದ ನಂತರ

ಭಗವಾನರ ಬಳಿಗೆ ಬಂದು ವಿನಯದಿಂದ ಅವರಲ್ಲಿ "ನನಗೆ ಈಗಲೂ ದೇಶದ ಸ್ವಾತಂತ್ರವೇ ನನ್ನ ಹೃದಯದಲ್ಲಿರುವುದು. ಮದ್ರಾಸಿನಲ್ಲಿರುವ ನನ್ನ ಶಿಷ್ಯರು ಅಲ್ಲಿಗೆ ಬಂದು ಉಮಾಸಹಸ್ರಮ್ ಕೃತಿಯ ಬಗ್ಗೆ ಸಭೆಗಳನ್ನು ನಡೆಸಿ ಅವರ ಜ್ಞಾನವನ್ನು ಹೆಚ್ಚಿಸಬೇಕೆಂದು ಕೇಳಿಕೊಳ್ಳುತ್ತಿರುವರು. ನಾನು ಮದ್ರಾಸಿಗೆ ಹೋಗಲು ನಿಮ್ಮ ಅಪ್ಪಣೆಯನ್ನು ಬೇಡುವೆ." ಎಂದರು.

ಭಗವಾನರಿಂದ ಬೀಳ್ಕೊಡುವ ಮೊದಲು ನಾಯನರು, "ಆತ್ಮದ ಆಲೋಚನೆಯ ಮೂಲವನ್ನು ಅರಸುವುದಷ್ಟೇ ನನ್ನ ಎಲ್ಲ ಧ್ಯೇಯಗಳನ್ನು ತಲುಪಲು ಸಾಕೋ ಅಥವಾ ಅದಕ್ಕಾಗಿ ಯಾವುದಾದರೂ ಮಂತ್ರ ಧ್ಯಾನ ಬೇಕೋ" ಎಂದು ಕೇಳಿದರು. ಭಗವಾನರು ಮೊದಲು ತಿಳಿಸಿದಷ್ಟೇ ಸಾಕೆಂದರು. ಮತ್ತೆ ಅವರ ಧ್ಯೇಯವನ್ನು ತಲುಪುವುದರ ಬಗ್ಗೆ ಮಹರ್ಷಿಯು, "ನೀನು ನಿನ್ನ ಎಲ್ಲ ಭಾರವನ್ನೂ ಈಶ್ವರನ ಮೇಲೆ ಹಾಕು. ಅವನೇ ಎಲ್ಲವನ್ನೂ ನೋಡಿಕೊಳ್ಳುವನು ಹಾಗೂ ನೀನು ಎಲ್ಲ ಭಾರಗಳಿಂದಲೂ ಬಿಡುಗಡೆಯನ್ನು ಪಡೆಯುವೆ. ಅವನ ಇಚ್ಛೆಯೇ ನಡೆಯಲಿ." ಎಂದರು.

ನ್ಯಸ್ಯತಾಂ ಭರಃ ಸಕಲ ಜಿತ್ವರೇ
ಕಾರ್ಯ ಸತ್ಕರೇ ಜಗದಧೀಶ್ವರೇ ॥

"ವಿಶ್ವವನ್ನು ಗೆದ್ದ ಹಾಗೂ ಸಮಸ್ತ ಶುಭ ಕಾರ್ಯಗಳನ್ನು ನಡೆಸಿಕೊಡುವ ಭಗವಂತನ ಮೇಲೆ ನಿಮ್ಮೆಲ್ಲ ಭಾರವನ್ನು ಹಾಕಿ."

ನಿತ್ಯಯಾ ಧಿಯಾ ನಿಹಿತಯಾ ಸ್ವಯಂ
ಸ್ಥೀಯತಾಂ ತ್ವಯಾ ಹೃದಿ ಪರಾತ್ಪರೇ ॥

"ನಿನ್ನ ಮನಸ್ಸನ್ನು ಸ್ಥಿಮಿತದಲ್ಲಿಟ್ಟುಕೊಂಡು ಎಲ್ಲವನ್ನೂ ಭಗವಂತನಿಗೆ (ದೇವರಿಗೆ) ಬಿಟ್ಟುಕೊಡು; ಅಚಲವಾದ ಹೃದಯವನ್ನು ಹೊಂದು."

ಭಾವ ನಿರ್ಣಯಪ್ರಭು ರಸೌ ಪುಮಾನ್
ಕಾರ್ಯಸಾಧನೇ ಭವತಿ ಶಕ್ತಿಮಾನ್ ॥

"ಯಾರು ತಾನೇ ತೀರ್ಮಾನವನ್ನು ತೆಗೆದುಕೊಳ್ಳುವನೋ ಅವನಿಗೆ ಅದನ್ನು ಪೂರೈಸುವ ಶಕ್ತಿಯೂ ಇರುವುದು."

ಭೂತಭವ್ಯಕೃತ್ ಭುವನಭೂಪತಿಃ
ಕಾರಯೇ ದಯಂ ಕುಶಲಕಾರಿಣಃ ॥

"ವಿಶ್ವದ ಅಧಿಪತಿಯೂ ಭೂತ, ಭವಿಷ್ಯತ್, ವರ್ತಮಾನಗಳನ್ನು ವಿನಿಯೋಗ ಮಾಡುವವನೂ ಆದ ಭಗವಂತನು ಸರಿಯಾದ ಕಾರ್ಯ ಶಕ್ತಿಯ ವ್ಯವಸ್ಥೆ ಮಾಡುವನು."

ಸಾಧ್ಯ ಮುತ್ತಮಂ ಸಮಯತಶ್ಚರೇತ್
ಮಾಸ್ತು ಸಂಶಯ ಸ್ತವ ವಿದಾಂಮತೇ ॥

"ಓ ವಿದ್ವಾಂಸನೇ! ಯಾವುದೇ ಒಳ್ಳೆಯದಾಗಬೇಕಿದ್ದಲ್ಲಿ ಅದನ್ನು ಭಗವಂತನು ಸರಿಯಾದ ಸಮಯದಲ್ಲಿ ಆಗುವಂತೆ ನೋಡಿಕೊಳ್ಳುವನು. ಪ್ರಶ್ನಾತೀತ ನಂಬಿಕೆಯಿಂದ ಎಲ್ಲವನ್ನೂ ಭಗವಂತನಿಗೆ ಬಿಟ್ಟು ಶಾಂತಿಯಿಂದಿರು."

ಈ ಬುದ್ಧಿವಾದವನ್ನು ಭಗವಾನರಿಂದ ಸ್ವೀಕರಿಸಿ, ನಾಯನರು ವಾಸುದೇವ ಶಾಸ್ತ್ರಿಗಳೊಂದಿಗೆ ಮದ್ರಾಸಿಗೆ ತೆರಳಿದರು.

ಮದ್ರಾಸಿನ ನಾಗರೀಕರು ನಾಯನರಿಗೆ ಹಾರ್ದಿಕ ಸ್ವಾಗತವನ್ನು ಕೋರಿದರು. ಉಮಾಸಹಸ್ರಮ್ ಮಹಾ ಕಾವ್ಯದ ಕರ್ತೃವಾದ ನಾಯನರನ್ನು ಕಾಳಿದಾಸನಿಗೆ ಸರಿಸಮಾನವಾಗಿ ಪರಿಗಣಿಸಿ, ಅವರನ್ನು ಅತ್ಯಂತ ಭಕ್ತಿಯಿಂದ ಸೇವಿಸಿದರು. ಉಮಾಸಹಸ್ರಮ್‌ನ ಅನೇಕ ವಿಷಯಗಳ ಬಗ್ಗೆ ಪ್ರತಿದಿನವೂ ನಾಯನರು ಉಪನ್ಯಾಸ ಮಾಡತೊಡಗಿದರು. ಅವರು ತಮ್ಮ ಪ್ರವಚನಗಳಲ್ಲಿ ರಮಣ ಮಹರ್ಷಿಗಳ ಬಗ್ಗೆ ಅವರು ಮಹಾನ್ ಋಷಿಗಳಾಗಿದ್ದರು ಹಾಗೂ ಅವರು ಮಾನವ ಜನ್ಮ ತಾಳಿ ಮಾನವರಿಗೆ ತಮ್ಮ ಸರಳತೆ ಮತ್ತು ತಮ್ಮನ್ನರಿಯಲು ಸುಲಭವಾದ ಹಾಗೂ ನೇರವಾದ ಮಾರ್ಗವನ್ನು ಬೋಧಿಸಿದರು ಹಾಗೂ ಇದರಿಂದ ಆತ್ಮಜ್ಞಾನ ಮತ್ತು ಮೋಕ್ಷವನ್ನರಿಯಲು ಸರಿಯಾದ ಮಾರ್ಗವನ್ನು ತೋರಿಸಿಕೊಟ್ಟರು ಎಂಬ ವಿಷಯಗಳನ್ನು ಪ್ರಚಾರ ಮಾಡುತ್ತಿದ್ದರು.

ಮದ್ರಾಸಿನ ಸಮೀಪದಲ್ಲಿದ್ದ ಪವಿತ್ರ ಕ್ಷೇತ್ರವಾದ ತಿರುವತ್ತಿಯೂರಿಗೆ ನಾಯನರು ಹೋದರು. ಅಲ್ಲಿನ ಸುಪ್ರಸಿದ್ಧ ತ್ರಿಪುರಸುಂದರಿ ಅಮ್ಮನವರ ಮಂದಿರಕ್ಕೆ ಹೋಗಿ ಅವರು ದೇವಿಯನ್ನು ಭಕ್ತಿಯಿಂದ ಆಹ್ವಾನಿಸುತ್ತಿದ್ದಾಗ ಒಬ್ಬ ವಿದ್ಯಾರ್ಥಿಯು ಅವರ ಪಾದವನ್ನು ಮುಟ್ಟಿ ನಮಸ್ಕರಿಸಿದನು.

ತಮ್ಮ ಧ್ಯಾನವನ್ನು ಮುಗಿಸಿದ ನಂತರ ನಾಯನರು ಆ ವಿದ್ಯಾರ್ಥಿಯನ್ನು ತಮ್ಮ ಪಕ್ಕದಲ್ಲಿ ಕುಳ್ಳಿರಿಸಿಕೊಂಡು ಅವನ ವಿದ್ಯಾ ಪ್ರಗತಿ ಮತ್ತು ಇತರ ವಿಷಯಗಳನ್ನು ಕೇಳಿದರು.

ಆ ವಿದ್ಯಾರ್ಥಿಯು, "ಗುರುಗಳೇ! ನನ್ನ ಹೆಸರು ಕಪಾಲಿ ಶಾಸ್ತ್ರಿ. ನಾನು ಸಂಸ್ಕೃತ ವ್ಯಾಸಂಗ ಮಾಡುತ್ತಿರುವೆ. ನೀವು ಮಾತೆಯನ್ನು ಆಹ್ವಾನಿಸುತ್ತಿರುವುದನ್ನು ಕೇಳಿ, ನನಗೆ ಬಹಳವಾಗಿ ಮೆಚ್ಚುಗೆಯಾಯಿತು. ನೀವೇ ಮಹಾ ತಪಸ್ವಿ ಮತ್ತು ಕಾವ್ಯಕಂಠರೆಂದು ಗೊತ್ತಾಗಿ, ನಿಮ್ಮನ್ನು ಸೇವಿಸಿದರೆ, ಮುಕ್ತಿದೊರಕುವುದೆಂಬ ನಂಬಿಕೆಯಿಂದ ನೀವು ನನ್ನ ಮೇಲೆ ದಯೆ ತೋರಿ ನನ್ನನ್ನು ನಿಮ್ಮ ಶಿಷ್ಯನನ್ನಾಗಿ ಸ್ವೀಕರಿಸಿರೆಂದು ಪ್ರಾರ್ಥಿಸುತ್ತೇನೆ." ಎಂದರು.

ಈ ಹುಡುಗನ ವಿನಯಪೂರ್ವಕ ಕೋರಿಕೆಯನ್ನು ಆಲಿಸಿ, ನಾಯನರು ತಮ್ಮ ಕಣ್ಣುಗಳನ್ನು ಮುಚ್ಚಿ ಕೆಲವು ನಿಮಿಷ ಧ್ಯಾನಾಸಕ್ತರಾದರು. ಧ್ಯಾನದಲ್ಲಿ ಅವರು ಈ ಹುಡುಗನಿಗೆ ಉಜ್ವಲ ಭವಿಷ್ಯ ಇರುವುದನ್ನು ಮನಗಂಡರು. ಅವರು, ಹುಡುಗನ ಕಡೆಗೆ ಒಪ್ಪಿಗೆ ಸೂಚಿಸುವ ರೀತಿಯಲ್ಲಿ ಹಾಗೂ ತ್ರಿಪುರಸುಂದರಿ ಅಮ್ಮನವರು ಮಂದಹಾಸ ಬೀರುತ್ತಿರುವ ಮುಖವನ್ನು ನೋಡಿ ಅರ್ಥಮಾಡಿಕೊಂಡರು. ನಾಯನರು ಸಂತೋಷಭರಿತರಾಗಿ ತಂದೆಯ ಪ್ರೀತಿಯಿಂದ ಕಪಾಲಿಯನ್ನು ನೋಡಿದರು. ನಾಯನರು ಕಪಾಲಿಯನ್ನು ಆಶೀರ್ವದಿಸಿದರು.

ಇಬ್ಬರೂ ಒಟ್ಟಿಗೆ ಮಂದಿರ ಪ್ರದಕ್ಷಿಣೆಯನ್ನು ಮಾಡಿ ಅಲ್ಲಿದ್ದ ಹಳೇ ಭಾವಿಯನ್ನು ನೋಡಿದರು. ಆ ಭಾವಿಗೆ ಸಂಬಂಧಿಸಿದ ಕಥೆಯನ್ನು ಕಪಾಲಿಯು ಹೇಳತೊಡಗಿದನು. "ಈ ಮಂದಿರವು ಪೂರ್ವದಲ್ಲಿ ಒಂದು ಕಾಳಿಕಾ ಮಾತೆಯ ಮಂದಿರವಾಗಿತ್ತು. ಯಾವುದೋ ಕಾರಣಕ್ಕೆ ಮಾತೆಗೆ ಕೋಪಬಂದು ಈ ಭಾವಿಯನ್ನು ಪ್ರವೇಶಿಸಿದಳು. ಇದೇ ಈ ಭಾವಿಯ ಹಿಂದಿನ ಕಥೆ." ಎಂದನು. ತಕ್ಷಣವೇ ನಾಯನರು ಕಾಲಿಮಾತೆಯನ್ನು ಕುರಿತು ಈ ಶ್ಲೋಕವನ್ನು ರಚಿಸಿದರು:

ಕೂಪೇ ವಿಭಾಸಿ ಕಿಲ ಕೋಪವತೀ ತ್ರಿಯಾಮಾ
ಚಾರಿಣ್ಯಶೇಷಜಗದೀಶ್ವರಿ ಕಾಲಿ ಭದ್ರೆ
ವಿಭ್ರಾಜದಾದಿಪುರವಾಸಿನಿ ದಾಸಮಾಪತ್
ಕೂಪಾದುದಂಚಯ ಪದಾಂಬುಜ ಭಕ್ತಮೇನಮ್ ॥

"ಓ ಕಾಳೀ, ಓ ಭದ್ರಾ! ಓ ಆದಿಪುರವಾಸಿನೀ! ನೀನು ಕೋಪಗೊಂಡು ಈ ಬಾವಿಯನ್ನು ನಿನ್ನ ವಾಸಸ್ಥಾನವನ್ನಾಗಿಸಿಕೊಂಡೆಯೆಂಬುದನ್ನು ಅರಿತೆ. ದಯಮಾಡಿ ಹೊರಬಂದು ಈ ನಿನ್ನ ಭಕ್ತನನ್ನು ವಿಪತ್ತೆಂಬ ಬಾವಿಯಿಂದ ಮೇಲೆತ್ತು!"

ಗುರು ಶಿಷ್ಯರಿಬ್ಬರೂ ಕಥೆಗೆ ಈ ರೀತಿಯ ತಿರುವುಂಟಾಗಿದ್ದಕ್ಕೆ ಮನಃಪೂರ್ತಿ ನಕ್ಕರು.

ರಮಣ ಮಹರ್ಷಿಗಳನ್ನು ಭೇಟಿಯಾದ ನಂತರ ನಾಯನರು ಸಾಹಿತ್ಯದೆಡೆಗಿನ ಒಲವಾದ ವಿದ್ವಾಂಸರೊಂದಿಗಿನ ಚರ್ಚೆ ಮತ್ತು ಅವಧಾನಗಳನ್ನು ಬಿಟ್ಟುಬಿಟ್ಟಿದ್ದರು. ಅವರು ಹೆಚ್ಚು ಹೆಚ್ಚು ಅಂತರ್ಮುಖಿಗಳಾಗಿ ಮತ್ತು ತಪಸ್ಸಿನೆಡೆಗೆ ಹೆಚ್ಚಿನ ಒಲವನ್ನು ತೋರತೊಡಗಿದ್ದರು. ಸತ್ಯದ ಅಸ್ತಿತ್ವ ಹಾಗೂ ಅದನ್ನು ಪಡೆಯುವ ಸಾಧ್ಯತೆಗೆ ಭಗವಾನರು ಸರಿಯಾದ ಉದಾಹರಣೆಯಾಗಿದ್ದರು.

ಆದರೆ ಕಪಾಲಿಯು ನಾಯನರ ಹಿಂದಿನ ಭವ್ಯವಾದ ಕಾವ್ಯ ಪರಾಕ್ರಮವನ್ನು ಮತ್ತೆ ವೀಕ್ಷಿಸಲು ಆಶಿಸಿದರು. ಅವರು ನಾಯನರಲ್ಲಿ ಮತ್ತೊಮ್ಮೆ ನ್ಯಸ್ತಾಕ್ಷರಿ ಪದ್ಧತಿಯಲ್ಲಿ (ಒಂದು ರೀತಿಯ ಸಾಹಿತ್ಯ ಪ್ರದರ್ಶನ) ಪ್ರದರ್ಶನವನ್ನು ಕೊಡುವಂತೆ ಒತ್ತಾಯಿಸಿದರು. ಈ ಸಭೆಗೆ

ಅನೇಕ ವಿದ್ವಾಂಸರು ಆಗಮಿಸಿದರು. ಕಪ್ಪುಹಲಗೆಯ ಮೇಲೆ 56 ಚೌಕಗಳನ್ನು ನಾಲ್ಕು ಸಾಲುಗಳಲ್ಲಿ ರಚಿಸಲಾಯಿತು. ನಾಯನರನ್ನು ಆ ಚೌಕಗಳಲ್ಲಿ ಸಮಾಂತರ ಶ್ರೇಣಿಯಲ್ಲಿ ಸಂಖ್ಯೆಗಳನ್ನು ತುಂಬಿ ಹಾಗೂ ವಸಂತತಿಲಕ ಛಂದಸ್ಸಿನಲ್ಲಿ ಶ್ಲೋಕವನ್ನು ರಚಿಸಲು ಕೋರಲಾಯಿತು. ನಾಯನರು ಶ್ಲೋಕರಚನೆಯನ್ನು ಪ್ರಾರಂಭಿಸುತ್ತಿದ್ದಂತೆ ಒಬ್ಬ ವಿದ್ವಾಂಸನು ಅಕ್ಷರಗಳನ್ನು ಕೊಡತೊಡಗಿದನು. ನಾಯನರು ಅದಕ್ಕೆ ತಕ್ಕಂತೆ ಅತ್ಯಂತ ಸುಂದರವಾದ ಶ್ಲೋಕವನ್ನು ರಚಿಸಿದರು. ಅದು:

ಪ್ರೀತಿಂ ದದಾತಿ ವಿಪುಲಾಂ ಶ್ರಿಯಮಾತನೋತಿ
ನಿರ್ಮಾತಿ ನೂತ್ನಸಮಯಂ ದುರಿತಂ ಧುನೋತಿ
ಆರ್ದ್ರೀಕರೋತಿ ಹೃದಯಾನ್ಯಪಿ ದೇವತಾನಾಂ
ಕಸ್ಮೈ ಶುಭಾಯ ನ ಭವೇತ್ಕವಿತಾ ವಿದೋಷಾ ॥

"ಕವಿತೆಯು ಆನಂದ ಹಾಗೂ ಅಪಾರವಾದ ಅಭ್ಯುದಯವನ್ನು ನೀಡುತ್ತದೆ, ಹೊಸ ಕಾಲವನ್ನು ಸೃಷ್ಟಿಸುತ್ತದೆ, ಪಾಪವನ್ನು ನಿವಾರಿಸುತ್ತದೆ, ದೇವರ ಹೃದಯವನ್ನೂ ಕರಗಿಸುತ್ತದೆ. ಕವಿತೆಯು ಯಾವ ಅರ್ಹತೆಯನ್ನು ನೀಡದೇ ಇರುವುದಿಲ್ಲ?"

ಕವಿಯು ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ಪುನರುಜ್ಜೀವನಗೊಳಿಸುವವನು, ಜೀವನಕ್ಕೆ ಒಂದು ಮಾರ್ಗ ಹಾಗೂ ಅರ್ಥವನ್ನು ನೀಡುವವನು, ಸಮಸ್ತರಲ್ಲೂ ಸ್ಫೂರ್ತಿ ಹಾಗೂ ಆನಂದವನ್ನು ಸೃಷ್ಟಿಸುವವನು. ನಾಯನರಿಗೆ ಇದು ಗೊತ್ತಿತ್ತು ಹಾಗೂ ಅವರು ಅದನ್ನು ದೇಶ ಹಾಗೂ ದೇಶವಾಸಿಗಳ ಸೇವೆಗಾಗಿ ಬಳುವಳಿಯನ್ನಾಗಿ ನೀಡಿದರು.

೧೮

ಗುರುವಿನ ಸಹಾಯ ಹಸ್ತ

ಯಾತಾಯಾತವಿಹಾರೇ ರಾಧಾರೇಷು ಚ ಶೀರ್ಷೇ
ಸಂಚಾರಂ ವಿದಧಾನಂ ಕಿಂ ಚಾಶೇಷವಿಸಾರಿ
ಆಲಂಬೇನ ವಿಹೀನಂ ವ್ಯೋಮಾಭಂ ಪರಿಪೂರ್ಣಂ
ನಿಶ್ಶಬ್ದಂ ಗುರುರೂಪಂ ತದ್ವಹ್ನಾ ಸ್ಫುರತಾನ್ಮೇ ॥

– ಗುರು ಗೀತ

"ಷಟ್ಚಕ್ರ ಮತ್ತು ಸಹಸ್ರಾರದಲ್ಲಿ ಮೇಲಿನಿಂದ ಕೆಳಗೆ ಹಾಗೂ ಕೆಳಗಿನಿಂದ ಮೇಲೆ ಸಂಚರಿಸುವ ಅವಲಂಬನರಹಿತವಾದ ಹಾಗೂ ನಿರ್ಮಲಾಕಾಶದಂತೆ ಸಂಪೂರ್ಣವೂ ನಿಃಶಬ್ದವೂ ಆದ ಗುರುವಿನ ರೂಪವು ನನ್ನಲ್ಲಿ ಸ್ಫೂರ್ತಿಯನ್ನುಂಟುಮಾಡಲಿ."

ಶಿಷ್ಯನು ಗುರುವಿನಲ್ಲಿ ಸಂಪೂರ್ಣವಾಗಿ ಶರಣಾಗತನಾಗುತ್ತಾನೆ. ಅವನಲ್ಲಿ ಯಾವುದೇ ವಿಧವಾದ ವೈಯುಕ್ತಿಕತೆ ಇರುವುದಿಲ್ಲ. ಹಾಗಾಗಿ ಯಾವುದೇ ದುಃಖಗಳಿರುವುದಿಲ್ಲ, ಬದಲಾಗಿ ಸಂಪೂರ್ಣ ಅನಂದವೇ ಉಂಟಾಗುವುದು. ಶರಣಾಗತಿಯ ಈ ರಹಸ್ಯವನ್ನು ಭಗವಾನರು ಘೋಷಿಸಿರುವರು.

ಉಮಾಸಹಸ್ರಮ್ ಕೃತಿಯ ರಚನೆಯು ಮುಗಿದಾಗ ಭಗವಾನರು ತಮ್ಮ ಕಣ್ತೆರೆದು, "ನಾನು ಹೇಳಿದ್ದನ್ನೆಲ್ಲ ಬರೆದುಕೊಂಡೆಯಾ?" ಎಂದು ಕೇಳಿದರು. ಕೂಡಲೇ ನಾಯನರು, "ಹೌದು ಭಗವನ್, ನೀವು ದಯೆಯಿಂದ ಹೇಳಿದ್ದನ್ನೆಲ್ಲಾ ಬರೆದುಕೊಂಡೆ" ಎಂದರು. ಇಲ್ಲಿ ಎರಡು ರೂಪಗಳಿದ್ದರೂ, ಅಂದರೆ ನಾಯನರು ಹಾಗೂ ಭಗವಾನರ ರೂಪಗಳಿದ್ದರೂ, ಅವರ ಮೂಲಕ ಮಾತನಾಡುತ್ತಿದ್ದ "ನಾನು" ಎಂಬುದು ಗುರು, ಈಶ್ವರ ಅಥವಾ ಆತ್ಮ.

ಪ್ರಣವಾನಂದರು ಗುರುವನ್ನು ಹೊಗಳಿ "ಗುರುಸ್ತುತಿ"ಯನ್ನು ರಚಿಸುವಂತೆ ನಾಯನರನ್ನು ಕೇಳಿಕೊಂಡರು. ಆಧುನಿಕ ಕಾಲದ ಮಹಾನ್ ಕವಿ ಮತ್ತು ದೇವದೂತನೆಂದು ಶ್ಲಾಘಿಸಿದ ನಾಯನರು, ಒಂದು ದಿನ ತಿರುವತ್ತಿಯೂರಿನ ತ್ರಿಪುರಸುಂದರಿ ಅಮ್ಮನವರ ಮಂದಿರವನ್ನು ಪ್ರವೇಶಿಸಿ ಅಲ್ಲಿನ ತೋಟದ ಒಂದು ಮೂಲೆಯಲ್ಲಿ ಗಣಪತಿಯ ಸಣ್ಣ ದೇಗುಲವನ್ನು

ನೋಡಿದರು. ಅಲ್ಲಿನ ವಾತಾವರಣವು ಆಹ್ಲಾದಕರವಾಗಿದ್ದರಿಂದ ಅವರು ಕೂಡಲೇ ಆ ದೇಗುಲವನ್ನು ಪ್ರವೇಶಿಸಿದರು. ಪ್ರವೇಶಿಸಿದ ಕೂಡಲೇ ಅವರು ಅಂತರ್ಮುಖಿಯಾದರು. ಅವರು ಅದೇ ಸ್ಥಿತಿಯಲ್ಲಿ ಮಂದಿರದೊಳಗೆ ಹದಿನಾರು ದಿನಗಳು ಬಾಹ್ಯ ಪ್ರಪಂಚದ ಅರಿವೇ ಇಲ್ಲದಂತೆ ಇದ್ದರು.

ಮಾತೆ ಶಕ್ತಿಯು ನಾಯನರ ಚಕ್ರಗಳಲ್ಲಿ ಸೂಕ್ಷ್ಮವಾಗಿ ಚಲಿಸತೊಡಗಿದಳು. ಅವರ ಶರೀರವು ಮಂದಿರವಾಯಿತು. ಅವರು ಪರಮಾನಂದದಲ್ಲಿ ಸಂಪೂರ್ಣವಾಗಿ ಮುಳುಗಿದ್ದರು. ಇದ್ದಕ್ಕಿದ್ದಂತೆ ಯಾವುದೋ ತಡೆಯುಂಟಾಗಿ ಅವರ ಬೆನ್ನಿನಲ್ಲಿ ವಿಪರೀತವಾದ ನೋವು ಕಾಣಿಸಿಕೊಂಡಿತು. ಅವರು ನೆಟ್ಟಗೆ ಕುಳಿತುಕೊಳ್ಳಲಾಗದೇ ಅಂಗಾತವಾಗಿ ಮಲಗಬೇಕಾಯಿತು. ನಿಧಾನವಾಗಿ ತಾವೇ ನೆಲದಮೇಲೆ ಮಲಗಿದರು. ಮಂದಿರದೊಳಗಿನ ಗಣೇಶನು ಗಣಪತಿ ಮುನಿಗಳು ಪ್ರಾರ್ಥಿಸುವುದನ್ನು ನೋಡುತ್ತಿರುವಂತೆ ಭಾಸವಾಗುತ್ತಿತ್ತು:

ನಾಖೇಯಾತಿ ಸುರೋ ವಾ ತ್ವಂ ಚೇತ್ಕಿಂಚಿದುದಾಸ್ಯಮ್
ಆಧಾರೇ ವಿದಧಾಸಿ ಸ್ಕಂದಸ್ಯಾಗ್ರಜ ಲಾಸ್ಯಮ್ ॥

"ಓ ಸ್ಕಂದನ ಅಣ್ಣನಾದ ಗಣೇಶನೆ! ಮೂಲಾಧಾರದಲ್ಲಿನ ನಿನ್ನ ನಾಟ್ಯವನ್ನು ಸ್ವಲ್ಪ ನಿಧಾನವಾಗಿ ಮಾಡು. ಆಗ ಈ ಮಾನವನು ಎದ್ದೇಳುವುದಕ್ಕಾಗುವುದು."

ಆಶ್ಚರ್ಯವೆಂದರೆ, ಅಲೌಕಿಕ ರೀತಿಯಲ್ಲಿ ಈ ಪ್ರಾರ್ಥನೆಯು ವಿರೂಪಾಕ್ಷ ಗುಹೆಯಲ್ಲಿ ಕುಳಿತಿದ್ದ ಭಗವಾನ್ ರಮಣಮಹರ್ಷಿಗಳಿಗೆ ಕೇಳಿಸಿತು. ಕ್ಷಣಾರ್ಧದಲ್ಲಿ ಅವರು ನಾಯನರ ಮುಂದೆ ನಿಂತಿದ್ದರು. ಅವರ ಹಸ್ತದಿಂದ ನಾಯನರನ್ನು ಮುಟ್ಟುತ್ತಿದ್ದಂತೆ ನಾಯನರಲ್ಲಿದ್ದ ನೋವು ಮಾಯವಾಯಿತು. ನಾಯನರ ಕಣ್ಣುಗಳಿಂದ ಆನಂದ ಬಾಷ್ಪವು ಧಾರಾಕಾರವಾಗಿ ಹರಿದುಬರುತ್ತಿದ್ದಂತೆ ಅವರು ಭಗವಾನರ ಪಾದಗಳನ್ನು ಗಟ್ಟಿಯಾಗಿ ಹಿಡಿದುಕೊಂಡು ನಮಸ್ಕರಿಸಿದರು.

ನಂತರ ನಾಯನರು 1929, ಆಕ್ಟೋಬರ್, 17ರಂದು ಅರುಣಾಚಲಕ್ಕೆ ಬಂದಾಗ ಭಗವಾನರ ಕರುಣೆಯಿಂದ ತನಗುಂಟಾದ ಅನುಭವಗಳನ್ನು ಭಗವಾನರ ಬಳಿ ವಿವರಿಸಿದರು. ಭಗವಾನರು ಅದನ್ನು ಖಚಿತಪಡಿಸಿ, "ಅನೇಕ ವರ್ಷಗಳ ಹಿಂದೆ ಒಂದು ದಿನ ನಾನು ವಿರೂಪಾಕ್ಷ ಗುಹೆಯಲ್ಲಿ ವಾಸಮಾಡುತ್ತಿದ್ದಾಗ, ನಾನು ಎಚ್ಚರದ ಸ್ಥಿತಿಯಲ್ಲೇ ಮಲಗಿದ್ದಾಗ, ಇದ್ದಕ್ಕಿದ್ದಂತೆ ನನ್ನ ಶರೀರವನ್ನು ಯಾರೋ ಎತ್ತರಕ್ಕೆ ಮತ್ತೂ ಎತ್ತರಕ್ಕೆ ಅಂದರೆ ಎಲ್ಲಿ ಎಲ್ಲ ವಸ್ತುಗಳೂ ಮಾಯವಾಗುವುದೋ ಅಲ್ಲಿಯವರೆಗೆ ಕೊಂಡೊಯ್ದಂತೆ ಭಾಸವಾಯಿತು ಮತ್ತು ಅಲ್ಲಿ ಸುತ್ತ ಮುತ್ತ ಕೇವಲ ಶ್ವೇತವರ್ಣದ ದಿವ್ಯವಾದ ಬೆಳಕನ್ನು ಬಿಟ್ಟು ಬೇರೇನೂ ಇರಲಿಲ್ಲ. ಆಗ ನಾನು ನನ್ನಲ್ಲೇ, 'ಹೀಗೇ ಸಿದ್ಧರು ತಮ್ಮ ಇಚ್ಛೆಯಂತೆ ಪಯಣಿಸುವರು', ಎಂದುಕೊಂಡೆ. ನಾನು ತಿರುವತ್ತಿಯೂರಿನಲ್ಲಿರುವೆನೆಂಬ ಕಲ್ಪನೆಯುಂಟಾಯಿತು. ನಾನು

ಅಲ್ಲಿನ ಹೆದ್ದಾರಿಯಲ್ಲಿ ಹೋಗುತ್ತಿದ್ದೆ. ಅಲ್ಲಿಂದ ಒಂದು ಪಕ್ಕದಲ್ಲಿ ಸ್ವಲ್ಪ ದೂರದಲ್ಲಿ ಒಂದು ಗಣಪತಿ ಮಂದಿರವಿತ್ತು. ಅದರೊಳಗೆ ಹೋಗಿ ಅಲ್ಲಿ ಒಬ್ಬರ ಬಳಿ ಮಾತನಾಡಿದೆ. ಯಾರಬಳಿ ಎಂಬುದು ತಿಳಿಯಲಿಲ್ಲ. ಇದ್ದಕ್ಕಿದ್ದಂತೆ ನಾನು ವಿರೂಪಾಕ್ಷ ಗುಹೆಯಲ್ಲಿ ಮಲಗಿದ್ದೆ. ಈ ವಿಷಯವನ್ನು ನಾನು ನನ್ನ ಬಳಿ ಸದಾ ಇರುತ್ತಿದ್ದ ಪಳನಿಸ್ವಾಮಿಗಳ ಬಳಿ ಕೂಡಲೇ ಹೇಳಿದೆ."

ನಾಯನರಿಗೆ ಮಹರ್ಷಿಗಳು ಸ್ವಲ್ಪ ದಿನಗಳ ನಂತರ ಕಪಾಲಿ ಶಾಸ್ತ್ರಿಯ ಬಳಿ ವಿವರಿಸಿದ ಘಟನೆಯು ತಾವು ತಪಸ್ಸನ್ನಾಚರಿಸುತ್ತಿದ್ದ ಗಣಪತಿ ಮಂದಿರ ಹಾಗೂ ತಾವು ಅನುಭವಿಸಿದ ಬೆನ್ನು ನೋವು. ನಂತರ ಸ್ಕಂದನನ್ನು ಕುರಿತು ಪ್ರಾರ್ಥಿಸಿದ್ದು ಹಾಗೂ ಕೂಡಲೇ ತಮ್ಮ ನೋವು ಮಾಯವಾಗಿದ್ದು ಎಲ್ಲವೂ ಒಂದಕ್ಕೊಂದು ತಾಳೆಯಾಯಿತು.

ಗುರುವಿನ ಅನುಗ್ರಹವನ್ನು ಈ ರೀತಿಯಾಗಿ ಪಡೆದನಂತರ ನಾಯನರು ವೆಲ್ಲೂರಿಗೆ ಮರಳಿದರು.

೧೯

ರೇಣುಕಾ ದೇವಿಯ ಕಥೆ

ಪಾಪಾನಿ ಮೇ ಹರತು ಕಾಚನ ಕೃತ್ತಶೀರ್ಷಾ
ಮಾತಾ ಪದಾಂಬುಜಭುಜಿಶ್ಯವಿತೀರ್ಣಹರ್ಷಾ
ಯಾ ಭಕ್ತಲೋಕವರದಾನವಿಧೌ ವಿನಿದ್ರಾ
ವಾಸಂ ಕಮಂಡಲುಧುನೀಪುಲಿನೇ ಕರೋತು ॥

– ಉಮಾಸಹಸ್ರಮ್ (7–28–3)

"ಹರ್ಷ ನೀಡುವ ಅಡಿದಾವರೆಗಳಲ್ಲಿ ಭಕ್ತರಿಗೆ ಇಷ್ಟಾರ್ಥಗಳನ್ನು ನೀಡುವ ವಿಷಯದಲ್ಲಿ ಜಾಗರೂಕಳಾಗಿ ಯಾವ ದೇವಿಯು ಕಮಂಡಲು ನದಿಯ ತೀರದಲ್ಲಿನ ಕುಂಡಲೀಪುರದಲ್ಲಿ ವಾಸಿಸುವಳೋ (ಪಾದೈವೀಡು) ಕತ್ತರಿಸಲ್ಪಟ್ಟ ತಲೆಯುಳ್ಳ ಆ ತಾಯಿಯು ನನ್ನ ಪಾಪಗಳನ್ನು ಹೋಗಲಾಡಿಸಲಿ; ಅವಳ ಪಾದಗಳಲ್ಲಿ ನಾನು ಶರಣಾಗಿದ್ದೇನೆ."

ರೇಣುಕಾ ಮಾತೆಯು ಪರಾಶಕ್ತಿಯ ಆರನೇ ಅವತಾರ. ವೇದದಲ್ಲಿ ಅವಳನ್ನು ವಜ್ರವೈರೋಚನಿ ಎಂಬುದಾಗಿ ವಿವರಿಸಲಾಗಿದೆ.

ಆಕಾಶವೇ ಪರಾಶಕ್ತಿ. ಈ ಆಕಾಶದಲ್ಲಿ ಧೂಳಿನ ಕಣದಂತೆ ಪ್ರಕಾಶಿಸುವುದೇ ರೇಣುಕಾ ಮಾತೆ. ಋಷಿಮುನಿಗಳು ಆಕಾಶವನ್ನು "ಬೃಹತ್ತಾದ ಧೂಳು" ಎಂಬುದಾಗಿ ವಿವರಿಸುತ್ತಾರೆ. ತಾಂತ್ರಿಕರ ಪ್ರಕಾರ ಪರಾಶಕ್ತಿಯು ಈ ದೂಳಿನ ಕಣಗಳ ವಿವಿಧ ಗುಂಪುಗಳ ಮೇಲೆ ಬೆಳಕನ್ನು ಚೆಲ್ಲಿರುವಳು ಹಾಗಾಗಿ ಅವುಗಳನ್ನು ರೇಣುಕಾ ಎನ್ನುವರು. ಅವಳಿಗೆ ಶಿರವಿಲ್ಲವಾದ್ದರಿಂದ ಅವಳನ್ನು "ಅಶಿರಾ" ಎಂದು ಕರೆಯಲಾಗುವುದು. ಪುರಾಣದಲ್ಲಿ ರೇಣುಕಾ ದೇವಿಯ ಕಥೆಯಲ್ಲಿ ರೇಣುಕಾ ಮಾತೆಯ ಶಿರವನ್ನು ಕಡಿದ ಘಟನೆಯನ್ನು ಅಹಂಕಾರದ ನಾಶಕ್ಕೆ ಹೋಲಿಸಲಾಗಿದೆ. ನಾಯನರು ತಮ್ಮದೇ ಆದ ರೀತಿಯಲ್ಲಿ ಈ ಶಿರಚ್ಛೇದನವನ್ನು ಯೋಗಿಯ ಕಪಾಲ–ಭೇದಕ್ಕೆ ಹೋಲಿಸುವರು. ನಾಯನರಿಗೆ ಕಪಾಲ-ಭೇದದ ಅನುಭವವಾಗಿದ್ದರಿಂದ ಅವರ ಈ ರೀತಿಯ ಹೋಲಿಕೆಯು ಅಧಿಕೃತವಾದದ್ದು.

ನಾಯನರು ಪುರಾಣದಲ್ಲಿನ ರೇಣುಕಾ ದೇವಿಯ ಕಥನವನ್ನು ಹಾದಿತಪ್ಪಿಸುವುದೆಂದು, ಅವರು ಆ ಘಟನೆಯನ್ನು ಬೇರೆ ರೀತಿಯಲ್ಲಿ ಪುನರ್ರಚಿಸಿದರು. ಮದ್ರಾಸಿನಿಂದ ತಮ್ಮ

ವಾಸಸ್ಥಳವನ್ನು ಮತ್ತೆ ವೆಲ್ಲೂರಿಗೆ ಬದಲಾಯಿಸಿದ ನಂತರ ನಾಯನರು ಈ ಘಟನೆಯನ್ನು ಪುನರ್ರಚಿಸುವ ಕಾರ್ಯವನ್ನು ಪ್ರಾರಂಭಿಸಿದರು. ನಾಯನರ ಪತ್ನಿ, ವಿಶಾಲಾಕ್ಷಮ್ಮನವರ ಹೆರಿಗೆ ದಿನವು ಹತ್ತಿರವಾಗುತ್ತಿದ್ದರಿಂದ ಅವರು ಬಹಳಷ್ಟು ಸಮಯವನ್ನು ಮನೆಯಲ್ಲೇ ಕಳೆಯುತ್ತಿದ್ದರು. ಪಾದ್ಯೈವೀಡು ಗ್ರಂಥಾಲಯದಿಂದ ಕಡತಂದ ಕೆಲವು ಗ್ರಂಥಗಳಿದ್ದವು ಮತ್ತು ರೇಣುಕಾ ಮಾತೆಯ ಕಥೆಯನ್ನು ಪುನರ್ರಚಿಸಲು ಪ್ರಾರಂಭಿಸಿದರು.

ಪುರಾಣದಲ್ಲಿನ ರೇಣುಕಾದೇವಿಯ ಕಥೆಯು ಈ ರೀತಿ ಇರುವುದು:

ರೇಣುಕಾಳು ಜಮದಗ್ನಿ ಮುನಿಗಳ ಪತ್ನಿ. ಅವಳು ಮಹಾನ್ ಪತಿವ್ರತೆ, ಪರಿಶುದ್ಧ ಹಾಗೂ ನಿಷ್ಠಳಾದ ಪತ್ನಿ. ಒಮ್ಮೆ ಅವಳು ಗಂಧರ್ವನೋರ್ವನ ಪ್ರತಿಬಿಂಬವನ್ನು ಕೊಳದಲ್ಲಿ ನೋಡಿದಳು. ಅವನು ಆಕಾಶದಲ್ಲಿ ದಿವ್ಯರಥದಲ್ಲಿ ಪಯಣಿಸುತ್ತಿದ್ದನು. ಕ್ಷಣಮಾತ್ರ ರೇಣುಕಾ ಅವನ ಹೊಳೆಯುತ್ತಿರುವ ರೂಪವನ್ನು ಕಂಡು ವಿಸ್ಮಯಗೊಂಡಳು. ಜಮದಗ್ನಿಗೆ ಈ ತಪ್ಪು ಅರಿವಾಗಿ ಅವರು ತಮ್ಮ ಮಗ ಪರಶುರಾಮನಿಗೆ ಅವಳ ಶಿರವನ್ನು ಕತ್ತರಿಸುವಂತೆ ಅಜ್ಞಾಪಿಸಿದನು. ಮಗನು ತಂದೆಯ ಆಜ್ಞೆಯನ್ನು ಪಾಲಿಸಿದನು. ರೇಣುಕಳು ತನ್ನ ಶಿರವನ್ನು ಭೂಮಿಯ ಮೇಲೆ ಬೀಳಲು ಬಿಡದೇ ತನ್ನ ಹಸ್ತದಲ್ಲಿ ಹಿಡಿದುಕೊಂಡಳು.

ನಾಯನರು ತಮ್ಮ ಉಮಾಸಹಸ್ರಮ್ ಕೃತಿಯಲ್ಲಿ ಕಥೆಯನ್ನು ಈ ರೀತಿಯಾಗಿ ಹೊಗಳಿರುವರು:

ಛೇದಾಯ ಚೇದ್ ಗತರಜಾ ಮುನಿರಾದಿದೇಶ
ಚಿಚ್ಛೇದ ಚೇದ್ಬಹುಗುಣಸ್ತನಯಃ ಸವಿತ್ರೀಂ
ದಾಹ್ಯಂ ಶರೀರಮಖಿಲಪ್ರಭುರೀಶಶಕ್ತಿಃ
ಯದ್ಯಾವಿವೇಶ ಚ ಕಥಾ ಪರಮಾದ್ಭುತೇಯಂ ॥

– ಉಮಾಸಹಸ್ರಮ್ (7–28–5)

"ಕೋಪೋದ್ರಿಕ್ತನಾದ ಋಷಿಯು ತನ್ನ ಮಗನಿಗೆ ಅವನ ತಾಯಿಯ ಶಿರವನ್ನು ಕತ್ತರಿಸುವಂತೆ ಅಜ್ಞಾಪಿಸಿದನು. ಕರ್ತವ್ಯಪರಾಯಣನಾದ ಮಗನು ತಂದೆಯ ಆಜ್ಞೆಯನ್ನು ಪಾಲಿಸಿದನು. ಯಾವ ಶರೀರದಿಂದ ಶಿರವನ್ನು ಕತ್ತರಿಸಲಾಯಿತೋ ಅದರ ಶಕ್ತಿಯು ಹರಡಿತು. ಈ ಕಥೆಯು ಅಪರೂಪದ ಆಶ್ಚರ್ಯದ್ದು."

ಪುತ್ರಃ ಪ್ರಿಯಸ್ತವ ಶಿರಃ ಸಹಸಾ ಚಕರ್ತ
ಕೃತ್ತಾ ಚ ಹರ್ಷಭರಿತಾ ಭವತೀನನರ್ತ
ನೋ ತಸ್ಯ ಪಾಪಮಪಿ ನೋ ತವ ಕಾಪಿ ಹಾನಿಃ
ನಾಶೋಽಸ್ಯ ಹಾ ಭುಜಭುವಾಮಭವದ್ವಿಪಾಕಃ ॥

– ಉಮಾಸಹಸ್ರಮ್ (7–28–6)

"ನಿನ್ನ ಪ್ರೀತಿಯ ಮಗನು ನಿನ್ನ ಶರೀರವನ್ನು ಕತ್ತರಿಸಿದ. ಅವನಿಗೆ ಯಾವ ಪಾಪವೂ ಅಂಟಲಿಲ್ಲ. ತಲೆಯನ್ನು ಕತ್ತರಿಸಿದ ಮೇಲೆ ನೀನು ನಾಟ್ಯವಾಡಿದೆ. ನಿನಗೆ ಯಾವುದೇ ಅಪಾಯವಾಗಲಿಲ್ಲ. ಓ! ಆದರೆ ಈ ಘಟನೆಯು ಕ್ಷತ್ರಿಯ ಕುಲವು ನಾಶವಾಗುವುದಕ್ಕೆ ಕಾರಣವಾಯಿತು.

ಅಂಬೈವ ಸಾ ಸುರಭಿರರ್ಜುನಭೂಪತಿರ್ಯಾಂ
ವೀರ್ಯಾಜ್ಜಹಾರ ಸ ಚ ಭಾರ್ಗವ ಆಜಹಾರ
ತಸ್ಯಾ ಹತೇಃ ಪರಗೃಹಸ್ಥಿತಿರೇವ ಹೇತುಃ
ಗಂಧರ್ವದರ್ಶನಕಥಾ ರಿಪುಕಲ್ಪಿತೈವ ॥
– ಉಮಾಸಹಸ್ರಮ್ (7–24–7)

"ರೇಣುಕಾಳ ಗಮನವನ್ನು ಗಂಧರ್ವನೋರ್ವನು ತನ್ನೆಡೆಗೆ ಸೆಳೆದ ಕಥೆಯು ಶತ್ರುಗಳ ಕಲ್ಪನೆ. ನಿಜವಾಗಿ ನೋಡಿದರೆ ಕಾರ್ತವೀರ್ಯನು ಕದ್ದೊಯ್ಯಬೇಕಿದ್ದ ನಂದಿನಿ ಹಸುವು ಬೇರಾವುದೂ ಅಲ್ಲ, ಅದೇ ರೇಣುಕಾ. ಪರಶುರಾಮನು ಈ ದುಷ್ಟ ರಾಜನನ್ನು ಕೊಂದು ಅವಳನ್ನು ಮನೆಗೆ ಕರೆತಂದ. ಶತ್ರುವಿನ ಗೃಹದಲ್ಲಿದ್ದದ್ದೇ ಅವಳ ಶಿರವನ್ನು ಕಡಿಯಲು ಕಾರಣ. ರೇಣುಕಳು ಪರಿಶುದ್ಧಳು. ಹಾಗಿಲ್ಲದಿದ್ದಲ್ಲಿ ಅವಳನ್ನು ಪೂಜಿಸುತ್ತಿರಲಿಲ್ಲ."

ನಾಯನರು ಈ ಕಥೆಯನ್ನು ಹೀಗೆ ಪುನರ್ರಚಿಸಿದರು:

ಕಾರ್ತವೀರ್ಯನು ಹೈಹಯ ವಂಶದ ರಾಜ. ದತ್ತಾತ್ರೇಯರಿಂದ ಅವನು ಅನೇಕ ಸಿದ್ಧಿಗಳನ್ನು ಪಡೆದಿದ್ದನು. ಅವನು ದಕ್ಷನಾದ ರಾಜನಾಗಿದ್ದನು, ಆದರೆ ನಂತರದ ದಿನಗಳಲ್ಲಿ ಅವನು ದುರಹಂಕಾರಿಯಾದನು. ರೇಣುಕಾಳ ಸಹೋದರಿ ಸತ್ಯಳು ಇವನ ಪತ್ನಿ. ಈ ಸಹೋದರಿಯರ ತಂದೆಯೇ ಪ್ರಸೇನಜಿತ್ ರಾಜ.

ಕಾಲಾನುಕ್ರಮದಲ್ಲಿ, ಕಾರ್ತವೀರ್ಯನ ಅಹಂಕಾರದಿಂದಾಗಿ ಸದ್ಗುಣಶೀಲರನ್ನು ತೊಂದರೆಗೊಳಪಡಿಸತೊಡಗಿದನು. ಪ್ರಜೆಗಳು ಅವನನ್ನು ಕಂಡರೆ ಭಯಭೀತರಾಗುತ್ತಿದ್ದರು. ದತ್ತಾತ್ರೇಯರನ್ನು ಹೊರತುಪಡಿಸಿ ಬೇರಾರಿಗೂ ಅವನನ್ನು ಸಂಹರಿಸಲು ಆಗುತ್ತಿರಲಿಲ್ಲ. ಪರಶುರಾಮನು ಅವರಲ್ಲಿ ಒಬ್ಬನು. ಜಮದಗ್ನಿ ಹಾಗೂ ರೇಣುಕರು ಅವನಿಗೆ ತಮ್ಮೆಲ್ಲಾ ತಪಃಶಕ್ತಿಯನ್ನು ಧಾರೆಯೆರೆದು ಅವನು ಕಾರ್ತವೀರ್ಯನನ್ನು ಸಂಹರಿಸಲು ಸಹಕಾರಿಯಾದರು.

ಒಮ್ಮೆ ರೇಣುಕಳು ತನ್ನ ಸಹೋದರಿ ಸತ್ಯಳ ಮನೆಗೆ ಹೋಗಿದ್ದಳು. ಸತ್ಯಳ ಉಪಚಾರದಿಂದ ಸುಪ್ರೀತಳಾದ ರೇಣುಕಳು ಅವಳನ್ನು ತನ್ನ ಮನೆಗೆ ಆಹ್ವಾನಿಸಿದಳು. ಸ್ವಲ್ಪ ದಿನಗಳ ನಂತರ ಕಾರ್ತವೀರ್ಯನು ತನ್ನ ಪರಿವಾರದೊಂದಿಗೆ ಕಾಡಿನಲ್ಲಿ ಬೇಟೆಯಾಡಲು ಹೊರಟನು.

ತನ್ನ ರಾಜ್ಯದ ಸೀಮೆಯನ್ನು ದಾಟಿ ಅವನು ಕಾಡಿನೊಳಗೆ ಬಹಳ ದೂರ ಹೋಗಿ, ಜಮದಗ್ನಿಯ ಆಶ್ರಮವನ್ನು ಪ್ರವೇಶಿಸಿದನು. ಈ ಮಧ್ಯೆ ಅವರು ತಮ್ಮೊಂದಿಗೆ ತಂದಿದ್ದ ಆಹಾರ ಪದಾರ್ಥಗಳು ಮುಗಿಯತೊಡಗಿದ್ದರಿಂದ ಅವರು ಗಾಬರಿಯಾದರು. ಅದೃಷ್ಟವಶಾತ್ ಅವರು ಜಮದಗ್ನಿಯ ಆಶ್ರಮವನ್ನು ಕಂಡರು ಹಾಗೂ ಕಾರ್ತೀವೀರ್ಯನಿಗೆ ಜಮದಗ್ನಿಯ ಪತ್ನಿ ರೇಣುಕಳು ತನ್ನ ಪತ್ನಿ ಸತ್ಯಳ ಸಹೋದರಿ ಎಂದು ತಿಳಿಯಿತು. ತನ್ನ ಸಹೋದರಿ ಸತ್ಯ ಹಾಗೂ ಅವಳ ಪತಿ ಕಾರ್ತೀವೀರ್ಯರು ತಮ್ಮ ಆಶ್ರಮದ ಬಳಿಯೇ ಬಂದಿರುವುದನ್ನು ಅರಿತು ರೇಣುಕಾಳು ಅವರನ್ನು ತಮ್ಮ ಆಶ್ರಮಕ್ಕೆ ಆಹ್ವಾನಿಸಿದಳು. ಅವಳು ತನ್ನ ಕಮಂಡಲುವಿನಿಂದ ನೀರನ್ನು ಪ್ರೋಕ್ಷಿಸಿ ಅವರೆಲ್ಲರನ್ನೂ ರುಚಿಕರವಾದ ಭೋಜನದೊಂದಿಗೆ ತೃಪ್ತಿಪಡಿಸಿದಳು. ಅವಳ ಈ ಶಕ್ತಿಯನ್ನು ವೀಕ್ಷಿಸಿ ಕಾರ್ತಿವೀರ್ಯನು ಅವಳನ್ನು ತನ್ನವಳನ್ನಾಗಿ ಮಾಡಿಕೊಳ್ಳಲು ಆಸೆಪಟ್ಟನು. ಅವನು ಜಮದಗ್ನಿಗೆ ಜೋರಾಗಿ ಹೊಡೆದು ಅವನು ಪ್ರಜ್ಞೆತಪ್ಪಿ ಬಿದ್ದಿದ್ದಾಗ ರೇಣುಕಾಳನ್ನು ಅಪಹರಿಸಿಕೊಂಡು ಹೋದನು. ಅವಳನ್ನು ಮುಟ್ಟಲು ಹೆದರಿ ಅವಳನ್ನು ತನ್ನ ಅರಮನೆಯಲ್ಲಿ ತನ್ನ ಅಂತಃಪುರದ ಹೆಂಗಸರ ಕಾವಲಿನಲ್ಲಿ ಬಂಧಿಯಾಗಿರಿಸಿದನು. ಪ್ರಜ್ಞೆಯಿಂದ ಎಚ್ಚೆತ್ತ ಜಮದಗ್ನಿಯು ತನ್ನ ಪುತ್ರ ಪರಶುರಾಮನಿಗೆ ಕಾರ್ತಿವೀರ್ಯನು ನಡೆಸಿದ ದೌರ್ಜನ್ಯವನ್ನು ವಿವರಿಸಿದನು. ಜಮದಗ್ನಿಯು ತಮ್ಮೆಲ್ಲಾ ಶಕ್ತಿಯನ್ನೂ ಹಾಗೂ ತಮ್ಮ ಬಳಿಯಿದ್ದ ಎಲ್ಲ ಅಸ್ತ್ರಗಳನ್ನೂ ಪರಶುರಾಮನಿಗೆ ಧಾರೆಯೆರೆದು, ಅವನನ್ನು ಕೂಡಲೇ ಹೋಗಿ ತಾಯಿಯನ್ನು ಬಿಡಿಸಿಕೊಂಡು ಬರಲು ಆದೇಶಿಸಿದರು. ಅದೇ ರೀತಿ ಪರಶುರಾಮರು ಕಾರ್ತಿವೀರ್ಯನನ್ನು ಸಂಹರಿಸಿ ಮಾತೆಯನ್ನು ಮರಳಿ ಕರೆತಂದನು. ರೇಣುಕಳು ಶತ್ರುವಿನ ಮನೆಯಲ್ಲಿದ್ದದ್ದರಿಂದ ಅವಳ ಶಿರವನ್ನು ಕತ್ತರಿಸಲು ಪರಶುರಾಮನಿಗೆ ಜಮದಗ್ನಿಯು ಆದೇಶಿಸಿದರು. ಹಾಗಾಗಿ ರೇಣುಕಾದೇವಿಯು ದುಷ್ಟ ಕ್ಷತ್ರಿಯ ವಂಶದ ನಾಶಕ್ಕೆ ಕಾರಣಳಾಗಿ ಮತ್ತು ಅವಳನ್ನು ಕೃತ್ತಿಕಾ ಶಕ್ತಿ (ಕೆಟ್ಟದ್ದನ್ನು ನಾಶಪಡಿಸುವ) ಹಾಗೂ ಪರಶುರಾಮನನ್ನು ಕಾರ್ತಿಕೇಯನ್ (ಕೃತ್ತಿಕಳ ಮಗ) ಎಂದು ನಂತರದ ದಿನಗಳಲ್ಲಿ ಕರೆಯಲಾಯಿತು.

ನಾಯನರು ರೇಣುಕಾಳ ಕಥೆಯನ್ನು ಪುನರ್ರಚಿಸುತ್ತಿದ್ದಾಗ ಅವರ ಪತ್ನಿ ವಿಶಾಲಾಕ್ಷಿಯು ಒಂದು ಹೆಣ್ಣು ಮಗುವಿಗೆ ಜನ್ಮವಿತ್ತಳು. ಆ ಮಗುವಿಗೆ ವಜ್ರೇಶ್ವರಿ (ರೇಣುಕಾ ದೇವಿಯ ಮತ್ತೊಂದು ಹೆಸರು) ಎಂದು ನಾಮಕರಣ ಮಾಡಲಾಯಿತು.

೨೦

ಮತ್ತೊಂದು ಮಂತ್ರ ಬಹಿರಂಗವಾದದ್ದು

ಸಂಹೋತ್ರಮಿತ್ಯದ್ಭುತ ಶಕ್ತಿಯುಕ್ತಂ
ವೃಷಾ ಕಪೇರ್ದರ್ಶನ ಮಂಬ ಮಂತ್ರಮ್
ಯಾ ವೈದಿಕಂ ತೇ ಮನುಜೋ ಭಜೇತ
ಕಿಂಚಿನ್ನ ತಸ್ಯೇಹ ಜಗತ್ಯಸಾಧ್ಯಮ್ ॥

– ಇಂದ್ರಾಣಿ ಸಪ್ತ ಶತಿ (523)

"ಓ ಮಾತೇ! "ಸಂಹೋತ್ರ" ಮಂತ್ರವನ್ನು ಜಪಿಸುವವನಿಗೆ ಯಾವುದೂ ಅಸಾಧ್ಯವಲ್ಲ. ಈ ಮಂತ್ರದಲ್ಲಿ ಅದ್ಭುತವಾದ ಶಕ್ತಿಯು ಅಡಗಿದೆ. ವೇದಗಳಿಂದ ಬಂದ ಈ ಮಂತ್ರವು ನಿನ್ನ ಮಂತ್ರವೇ ತಾಯಿ!"

ಈ ಶ್ಲೋಕದಲ್ಲಿ ನಾಯನರು ತಮಗೆ ಈ ಮಂತ್ರದ ದರ್ಶನವಾಗಿದೆಯೆಂದೂ ಹಾಗೂ ಈ ಮಂತ್ರವು ವೇದಪಾಠಕ್ಕೆ ಸೇರಿದ್ದೆಂದು ಘೋಷಿಸಿರುವರು. ಕೇವಲ ಮಂತ್ರ ದ್ರಷ್ಟಾರರಾದ ಋಷಿಮುನಿಗಳಿಗೆ ಮಾತ್ರ ಈ ರೀತಿಯ ಮಂತ್ರಗಳು ಒಲಿಯುವುದು. ನಮ್ಮ ಎಲ್ಲ ವೇದಗಳ ತುಂಬಾ ಋಷಿಗಳು ಕಂಡುಕೊಂಡ ಮಂತ್ರಗಳಿರುವುದು. ಮಂತ್ರವು ಸಾಧಕನಿಗೆ ಜಯವನ್ನು ತಂದುಕೊಡುವುದು. ವೇದ ಮಂತ್ರಗಳು ಸಂಪೂರ್ಣವಾಗಿ ಅರ್ಥವುಳ್ಳದ್ದು. ಏಕಾಗ್ರತೆಯಿಂದ ಈ ಮಂತ್ರಗಳನ್ನು ಜಪಿಸಿದಲ್ಲಿ ಎಲ್ಲ ಕಾರ್ಯಗಳೂ ಯಶಸ್ವಿಯಾಗುವುದು. ನಾಯನರು ಋಷಿ ಸಂಪ್ರದಾಯಕ್ಕೆ ಸೇರಿದ್ದರಿಂದ ಅವರಿಗೆ ಈ ಮಂತ್ರವು ಧ್ಯಾನದಲ್ಲಿ ಗೋಚರಿಸಿತು.

ಭಗವಂತನಿಗೆ ತಮ್ಮನ್ನೇ ಶರಣಾಗತಿಗೊಳಿಸಿದ ರಮಣ ಮಹರ್ಷಿಗಳು, "ಓ ನನ್ನ ದೇವರೇ! ನಿನ್ನಾಜ್ಞೆಯಂತೆ ನಾನು ಬಂದಿರುವೆ." "ಅಪ್ಪ ವಕ್ಕು ಪಿಳ್ಳೈ ಅದಕ್ಕಮ್" (ಮಗನು ತಂದೆಗೆ ವಿಧೇಯನು), ಎಂದು ಅರುಣಾಚಲೇಶ್ವರನಿಂದ ಪ್ರಸಾದವನ್ನು ಸ್ವೀಕರಿಸುವಾಗ ಹೇಳಿದರು. ಇವೆಲ್ಲವೂ ಕೇವಲ ಒಂದೇ ಸತ್ಯದೆಡೆಗೆ ಬೊಟ್ಟು ಮಾಡುತ್ತದೆ. ವಿಶ್ವದ ಸೃಷ್ಟಿಕರ್ತನಾದ ಇಂದ್ರನು ಎಲ್ಲರಿಗೂ ತಂದೆ ಹಾಗೂ ವಿಶ್ವದ ಏಕಮೇವ ಚಲಿಸುವ ಶಕ್ತಿ. ಎಲ್ಲ ಜೀವಿಗಳಲ್ಲಿ ನೆಲೆಸಿರುವ ಆತ್ಮವೇ ಇಂದ್ರ. ಅವನ ಎಲ್ಲ ಮಕ್ಕಳಿಗೂ ಅವನನ್ನು ಸಮೀಪಿಸಲು ಹಕ್ಕುಂಟು. ಯಾರು ತನ್ನ ಶುದ್ಧವಾದ ಹೃದಯದಲ್ಲಿ ತಂದೆಯನ್ನು ಕಾಣುವರೋ

ಅವರು ತಂದೆಯೊಂದಿಗೆ ಸೇರಿ, ಅವರಲ್ಲಿ ಐಕ್ಯವಾಗುವರು. ಮಂತ್ರ, ಧ್ಯಾನ ಹಾಗೂ ಸ್ಥಿರತೆಗಳೇ ಮಂತ್ರದ ಸತ್ಯತೆ.

ನಾಯನರಿಗೆ ಹೆಣ್ಣುಮಗುವಾದ ನಂತರ ಅವರು ತಮ್ಮ ನಿವಾಸವನ್ನು ರೇಣುಕಾದೇವಿಯ ಮಂದಿರವಿರುವ ಪಾದ್ಯೆವೀಡು ಪಟ್ಟಣಕ್ಕೆ ಸ್ಥಳಾಂತರಿಸಿದರು. ರೇಣುಕಾದೇವಿಯ ಪೂಜೆ, ತಪಸ್ಸು ಹಾಗೂ ಉಮಾಸಹಸ್ರಮ್ ಪಠಣಗಳೇ ಅವರ ದಿನಚರಿಯಾಯಿತು. ರೇಣುಕಾದೇವಿಯು ಸದಾ ಅವರ ನಾಲಿಗೆಯ ಮೇಲೆ ಹಾಗೂ ಕಣ್ಮುಂದೆ ನರ್ತಿಸುತ್ತಿದ್ದಳು. ನಾಯನರ ಬೆನ್ನೆಲುಬುಗಳಲ್ಲಿ ಕುಂಡಲಿನೀ ಶಕ್ತಿಯು ಮೇಲಿನಿಂದ ಕೆಳಗೆ ಹಾಗೂ ಕೆಳಗಿನಿಂದ ಮೇಲೆ ಚಲಿಸುತ್ತಿತ್ತು. ಭಗವಾನರಿಂದ ಪಡೆದ ಹೃದಯ ವಿದ್ಯಾ ರಹಸ್ಯವು ನಾಯನರನ್ನು ಹುರಿದುಂಬಿಸುತ್ತಿತ್ತು.

ಒಂದು ದಿನ ನಾಯನರು ಏಕಮುಖ ಗಣಪತಿ ಮಂದಿರದಲ್ಲಿ ಕುಳಿತಿದ್ದರು, ಜಟಾಧಾರಿಯಾದ ಒಬ್ಬ ಯೋಗಿಯು ನೇರವಾಗಿ ಗಣಪತಿಮುನಿಗಳನ್ನು ದಾಟಿ ಮಂದಿರವನ್ನು ಪ್ರವೇಶಿಸಿ ವಿಗ್ರಹದಲ್ಲಿದ್ದ ತ್ರಿಶೂಲವನ್ನು ತೆಗೆದುಕೊಂಡು ಅದನ್ನು ಹೆಗಲಿನ ಮೇಲಿಟ್ಟುಕೊಂಡು ಹೊರಬಂದು ನಾಯನರನ್ನು ನೋಡಿ ಸ್ವಲ್ಪ ಮುಂದೆ ಹೋಗಿ ಅಂತರ್ಧಾನನಾದನು. ಮೊದಲಿಗೆ ನಾಯನರು ಆಶ್ಚರ್ಯಚಕಿತರಾದರೂ, ನಂತರ ಅವರಿಗೆ ಆ ಜಟಾಧಾರಿಯು ರೇಣುಕಾ ದೇವಿಯ ಪುತ್ರ, ಪರಶುರಾಮ ಇರಬಹುದೆಂದುಕೊಂಡರು. ಹಾಗೇ ಕುಮಾರಸ್ವಾಮಿಯು ರಮಣ ಮಹರ್ಷಿಗಳ ರೂಪದಲ್ಲಿ ಕಂಡವರು, ಪರಶುರಾಮರಂತೇ ನಾಯನರಿಗೆ ಗೋಚರಿಸಿದರು. ನಾಯನರಿಗೆ ಅವರಿಬ್ಬರೂ ಒಂದೇ ಆತ್ಮ ಆದರೆ ವಿವಿಧ ರೂಪ ಹಾಗೂ ಒಂದೇ ಶಕ್ತಿಯ ಭಾವ ಎನಿಸಿತು.

ನಾಯನರು ಈ ರೀತಿಯಾಗಿ ಸಂತೋಷದಿಂದ ಧ್ಯಾನಿಸುತ್ತಿದ್ದಾಗ ಅವರಿಗೆ ಋಗ್ವೇದದ ಸೂಕ್ತವೊಂದು ನೆನಪಿಗೆ ಬಂದಿತು:

ರಾಯಸ್ಕಾಮೋ ವಜ್ರಹಸ್ತಂ ಸುದಕ್ಷಿಣಂ ಪುತ್ರೋ ನ ಪಿತರಂ ಹುವೇ ।

– ಋಗ್ವೇದ (7; ಸೂಕ್ತ–32)

ಈ ಸೂಕ್ತವು ಬೃಹತೀ ಛಂದಸ್ಸಿನಲ್ಲಿ 27 ಪಾದಗಳನ್ನೊಳಗೊಂಡಿದ್ದರೆ, ಈ ಮಂತ್ರವು ಮಾತ್ರ ವಿರಾಟ್ ಛಂದಸ್ಸಿನಲ್ಲಿದ್ದು ಸಂಪೂರ್ಣ ಸೂಕ್ತಕ್ಕೆ ಆಯುಧದಂತಿರುವುದು. ಈ ಮಂತ್ರವು ಮೊದಲಿಗೆ ವಾಸಿಷ್ಠಮುನಿಗಳಿಗೆ ಗೋಚರಿಸಿ ನಂತರ ಅವರ ಪುತ್ರ ಶಕ್ತಿ ಮುನಿಗಳಿಗೆ ಗೋಚರಿಸಿತು. ಹೀಗಾಗಿ ಈ ಮಂತ್ರವು ಅವರುಗಳ ಹೆಸರಿನಲ್ಲಿರುವುದು. ಅವರ ನಂತರದಲ್ಲಿ ನಾಯನರಿಗೆ ಮಾತ್ರ ಇದು ಗೋಚರಿಸಿತು. ಈ ಮಂತ್ರಕ್ಕೆ ನಾಯನರು ಅತೀವ ಮಹತ್ವವನ್ನು ನೀಡಿದರು:

ರಾಯಸ್ – ಪ್ರಪಂಚದ ಹಾಗೂ ಸ್ವರ್ಗದ ಸಂಪತ್ತು

ಕಾಮಃ – ಅದನ್ನು ಆಸೆಪಟ್ಟ

ವಜ್ರಹಸ್ತಂ – (ಅವನ) ವಜ್ರಾಯುಧವನ್ನು ತನ್ನ ಹಸ್ತದಲ್ಲಿ ಹಿಡಿದುಕೊಂಡಿರುವ ಇಂದ್ರ

ಸುದಕ್ಷಣಂ – ಶರೀರದ ಬಲಭಾಗದಲ್ಲಿರುವವನು.

ಪುತ್ರೋ ನ ಪಿತರಮ್ ಹುವೇ – ಮಗನು ತನ್ನ ತಂದೆಯನ್ನು ಕರೆಯುವಂತೆ ಹಾಗೆ ಕರೆಯುವೆ.

ಪರಶುರಾಮನು ತನ್ನ ತಾಯಿಯ ತಲೆಯನ್ನು ಕಡಿಯುತ್ತಿದ್ದಾಗ ಅವಳಿಂದ ಈ ಮಂತ್ರವು ಬೋಧನೆಯ ರೂಪದಲ್ಲಿ ಹೊರಬಂದಿತು. ಈ ಮಂತ್ರದಲ್ಲಿ 20 ಅಕ್ಷರಗಳಿವೆ. ಪುರಾಣದಲ್ಲಿ ಇದನ್ನು ರೇಣುಕಾದೇವಿಯು ಈ ಸಂದರ್ಭದಲ್ಲಿ ಇಪ್ಪತ್ತು ಬಾರಿ ತನ್ನ ಎದೆಯನ್ನು ಹೊಡೆದುಕೊಂಡಳೆಂದು ವಿವರಿಸಲಾಗಿದೆ, ಆದರೆ ಇದು ಈ ಮಂತ್ರದ ಬೋಧನೆಯನ್ನು ವಿಕೃತಗೊಳಿಸಿದೆ. ಈ ಮಂತ್ರವು ಅಸ್ತ್ರ ವಿದ್ಯೆಗೆ ಸಂಬಂಧಿಸಿದುದು. ಈ ಮಂತ್ರವನ್ನು ಸ್ವೀಕರಿಸಿದವನು ಪರಶುರಾಮನು. ಈ ಮಂತ್ರದ ಅರ್ಥವನ್ನು – ಪರಶುರಾಮನು ಪ್ರಪಂಚವನ್ನು ಇಪ್ಪತ್ತು ಬಾರಿ ಗೆದ್ದನೆಂದು ವಿಕೃತಗೊಳಿಸಲಾಗಿದೆ. ಈ ಮಂತ್ರದ ಅಂತರಂಗದ ಅರ್ಥವು ಈ ಹುರುಳಿಲ್ಲದ ವ್ಯಾಖ್ಯಾನಕ್ಕಿಂತ ಮಹತ್ತರವಾದದ್ದು.

ಪರಾದೇವತೆಯು ಶಕ್ತಿಯ ರೂಪದಲ್ಲಿ ನಮ್ಮ ಶರೀರದಲ್ಲಿರುವಳು. ಅವಳು ಎಲ್ಲ ಆರು ಚಕ್ರಗಳಲ್ಲೂ ಸಕ್ರಿಯವಾಗಿದ್ದು ಹಾಗೂ ಹೃದಯದೊಳಗಿರುವ ಹೊಳೆಯುತ್ತಿರುವ ಆತ್ಮವಾದ ಪುರುಷನ ಮಾತೆಯಂತೆ ಶ್ಲಾಘಿಸಲಾಗಿದೆ. ಈ ಶಕ್ತಿಯು ಆಲೋಚನೆಗಳ ಮೂಲ ಅಂದರೆ ಮನಸ್ಸು. ಶರೀರಾಭಿಮಾನಿಗಳಲ್ಲಿ ಮನಸ್ಸೇ ಅಹಂಕಾರಕ್ಕೆ ಕಾರಣ. ಕಾರ್ತವೀರ್ಯಾರ್ಜುನನು ಆ ಅಹಂಕಾರದ ಸಾಕಾರಮೂರ್ತಿ. ಅವನಿಗೆ ಬೆನ್ನೆಲುಬೇ ವಜ್ರದಂಡ.

ಸುಷುಮ್ನಾದಲ್ಲಿ ಸರ್ಪದಂತೆ ಏಳುವ ಶಕ್ತಿಯು ಬೆನ್ನೆಲುಬಿನ ಮುಖಾಂತರ ಚಲಿಸುವುದನ್ನು ರೇಣುಕ ಎಂದು ಕರೆಯಲಾಗುವುದು. ಮನಸ್ಸು ಪರಿಶುದ್ಧವಾಗಬೇಕಾದರೆ ನಾಡಿಯಲ್ಲಿ ಎಚ್ಚರ (ಮುರಿಯುವುದು) (ನಾಡಿಭೇದನ) ಆಗಬೇಕು. ಸರ್ಪವೊಂದನ್ನು ದೊಣ್ಣೆಯಿಂದ ಹೊಡೆದರೆ ಅದು ಸಾಯುವುದು. ಆದರೆ ಅದನ್ನು ಹರಿತವಾದ ಆಯುಧದಿಂದ ಕತ್ತರಿಸಿದರೆ ಅದು ನಿಖರವಾಗಿ ಭಾಗಗಳಾಗುವುದು. ಯೋಗಿಗಳಲ್ಲಿ ನಾಡಿಯ ಮುರಿತವು ಅಚ್ಚುಕಟ್ಟಾಗಿ ಹಾಗೂ ಅಂದವಾಗಿ ಆಗಬೇಕು. ಈ ಉದ್ದೇಶಕ್ಕೆ ಹರಿತವಾದ ಕೊಡಲಿಯೇ ಸರಿಯಾದ ಆಯುಧ. ಆಸೆಗಳನ್ನು ಪೂರೈಸುವ ದಿಕ್ಕಿನಲ್ಲಿ ಅಹಂನಲ್ಲಿ ತೊಡಗಿಸಿಕೊಂಡಿರುವ ಮನಸ್ಸು ಅಶುದ್ಧವಾಗಿರುವುದು. ಅದೇ ರೇಣುಕಾದೇವಿಯನ್ನು ಸಾಂಕೇತಿಕವಾಗಿಸಿ ಕಾರ್ತವೀರ್ಯನು

(ದುರಹಂಕಾರಿ) ಕದ್ದೊಯ್ಯುವ ಘಟನೆ. ಅವಳನ್ನು ಮರಳಿ ಕರೆತರಬೇಕಾದರೆ ಮನಸ್ಸಿನ ಆಧಾರವಾದ ಕತ್ತನ್ನು ಕತ್ತರಿಸಬೇಕು. ಹಾಗಾಗಿ ಪರಿಶುದ್ಧವಾದ ಶಕ್ತಿಯು ಶಿರ ಅಥವಾ ಸಹಸ್ರಾರವನ್ನು ತಲುಪುವುದಕ್ಕೆ ಮೊದಲು ಮನಸ್ಸನ್ನು ನಾಶಪಡಿಸಬೇಕು. ಇದನ್ನು ರೇಣುಕಾಳ ತಲೆಯನ್ನು ಕೊಡಲಿಯಿಂದ ಕಡಿಯುವುದರ ಮೂಲಕ ಸಾಂಕೇತಿಕವಾಗಿ ವಿವರಿಸಲಾಗಿದೆ. ಈ ಯೋಗದಲ್ಲಿ ಕುಂಡಲಿನೀ ಶಕ್ತಿಯು ಜಾಗೃತಗೊಂಡಾಗ ಯೋಗಿಯ ಕಪಾಲವು (ತಲೆಬುರುಡೆ) ಒಡೆಯುತ್ತದೆ. ಉಪನಿಷತ್ತಿನಲ್ಲಿ ಇದನ್ನು ಜ್ಯೋತಿರವಿದ್ಯಾ ಪದ್ಧತಿ ಎಂದು ಕರೆಯುವರು. ಇದು ಪ್ರತ್ಯಕ್ಷ ಹಾಗೂ ಪರೋಕ್ಷ ಜ್ಞಾನವನ್ನು ಮತ್ತು ಪವಾಡಸದೃಶ ಶಕ್ತಿಯನ್ನು ನೀಡುವುದು. ನಾಯನರು ಈ ವಿದ್ಯೆಯನ್ನು ಅನುಭವಿಸಿದ್ದರು. (ಇದು ನಿಖರವಾದ ವಿವರಣೆ).

ಈ ಮಂತ್ರದ ದರ್ಶನವನ್ನು ಪಡೆದ ನಾಯನರು “ಹೊಸ ವಸಿಷ್ಠ”ರಾಗಿ ತಮ್ಮ ಅನೇಕ ಶಿಷ್ಯರಿಗೆ ಇದನ್ನು ಬೋಧಿಸಿದರು. ಮಂತ್ರವು ಅದನ್ನು ಪೂಜಿಸುವವರಿಗೆ ಸಮಸ್ತ ಅಭ್ಯುದಯಗಳನ್ನು ಉಂಟುಮಾಡುವುದೆಂದು ನಾಯನರು ಬಲವಾಗಿ ನಂಬಿದ್ದರು.

೨೧

ನೀರಿನಲ್ಲಿ ಕೊಚ್ಚಿಹೋದ ಉಮಾಸಹಸ್ರಮ್ ಹಸ್ತಪ್ರತಿ

ಭಗವತೀ ಗಗನಸ್ಥಲಚಾರಿಣೀ ಜಯತಿ ಸಂಗರರಂಗವಿಹಾರಿಣೀ
ಸುಕೃತಶತ್ರುಮತಿಭ್ರಮಕಾರಿಣೀ ಹರಿಹಯಾರಿಹಯಾದಿವಿದಾರಿಣೀ ॥
– ಇಂದ್ರಾಣಿ ಸಪ್ತಶತಿ (612)

"ಆಕಾಶದಲ್ಲಿ ಪಯಣಿಸುವ, ಯುದ್ಧಭೂಮಿಯಲ್ಲಿ ನಾಟ್ಯವಾಡುವ, ಸದಾಚಾರಿಗಳ ಶತ್ರುಗಳ ಮನಸ್ಸನ್ನು ಗೊಂದಲಗೊಳಿಸುವ ಮತ್ತು (ನಹುಷನಂಥ) ಇಂದ್ರನ ಶತ್ರುಗಳನ್ನು ನಾಶಮಾಡುವ ಶಕ್ತಿವಂತ ಮಾತೇ, ಭವ್ಯವಾಗಿ ಪ್ರಜ್ವಲಿಸು."

ದೈವೀ ಮಾತೆಯ ಪಾದಸೇವನೆಯಿಂದ ದೊರಕಿದ ಆನಂದವನ್ನು ಅನುಭವಿಸುತ್ತಾ ಹಾಗೂ ದೇವಿಯ ಕರುಣಾ ಸಮುದ್ರದಲ್ಲಿ ಈಜಾಡುತ್ತಾ ನಾಯನರು ದೇವಿಯ ನಿಜವಾದ ಕಥೆಯನ್ನು ಅರಿಯತೊಡಗಿದರು.

ನಾಯನರು ತಮ್ಮ "ಸಾಂಗ್ ಆಫ್ ರೇಣುಕಾ" ದಲ್ಲಿ ವಿವರಿಸಿರುವಂತೆ ದೇವಿಯನ್ನು ಭಾರತೀಯರನ್ನು ರಕ್ಷಿಸುವ ತೋಳುಗಳನ್ನಾಗಿ ಹಾಗೂ ಭಾರತೀಯರ ಮೇಲೆ ತನ್ನ ಕರುಣೆಯನ್ನು ಹರಿಸುತ್ತಿರುವಂತೆ ಕಲ್ಪಿಸಿಕೊಂಡರು. ಈ ಹಾಡನ್ನು ಅವರ ಶಿಷ್ಯರು ಪ್ರತಿದಿನವೂ ಹಾಡುತ್ತಿದ್ದರು. ಭಾರತವನ್ನು ಪರಕೀಯರ ಆಳ್ವಿಕೆಯಿಂದ ಮುಕ್ತಿಗೊಳಿಸುವ ಧ್ಯೇಯವನ್ನು ಹೊಂದಿರುವ ಇಂದ್ರ ಸೇನೆಯ ಸದಸ್ಯರಿಗೆ ಈ ಹಾಡು ಒಂದು ರೀತಿಯಲ್ಲಿ ರಕ್ಷಣೆಯ ಮಂತ್ರವಾಗತೊಡಗಿತು. ಈ ಮಂತ್ರವನ್ನು ಸದಾ ಪಠಿಸುವವರಿಗೆ ಅದು ದಿವ್ಯ ಶಕ್ತಿಯನ್ನು ನೀಡಿ, ಅವರನ್ನು ದುಷ್ಟ ಶಕ್ತಿಗಳಿಂದ ಪಾರುಮಾಡುತ್ತಿತ್ತು. ಅವರ ಮನೆಗಳಲ್ಲಿ ಆನಂದವು ತುಂಬಿ ತುಳುಕುತ್ತಿತ್ತು.

ನಾಯನರು ಮಹಾನ್ ದೇಶಭಕ್ತರು. ಅವರು ದೇಶವನ್ನು ಪರಕೀಯರ ಆಳ್ವಿಕೆಯಿಂದ ಮುಕ್ತಿಗೊಳಿಸುವಂತೆ, ತಮ್ಮ ಮೇರು ಕೃತಿಯಾದ ಉಮಾಸಹಸ್ರಮ್‌ನಲ್ಲಿ ದೇವಿಯ ಶಕ್ತಿಯನ್ನು ಆಹ್ವಾನಿಸಿ ಅನೇಕ ಶ್ಲೋಕಗಳನ್ನು ರಚಿಸಿದ್ದರು. ಇದರಿಂದಾಗಿ ಆಂಗ್ಲ ಸರ್ಕಾರದ ಅನುಯಾಯಿಗಳಿಗೆ ಅತೀವ ಕಸಿವಿಸಿಯಾಗಿ ಅವರುಗಳು ಉಮಾಸಹಸ್ರಮ್ ಕೃತಿಯು ಸರ್ಕಾರದ ವಿರುದ್ಧ ದಂಗೆ ಏಳುವ ವಿಷಯಗಳನ್ನೊಳಗೊಂಡಿರುವುದೆಂದು

ತಿಳಿಸತೊಡಗಿದರು. ಇಷ್ಟರಲ್ಲಾಗಲೇ ಸರ್ಕಾರವು ಇಂದ್ರಸೇನೆಯನ್ನು ಬಂಡುಕೋರರ ಗುಂಪೆಂದು ಪರಿಗಣಿಸಿತ್ತು. ಹಾಗಾಗಿ ನಾಯನರನ್ನು ಸರ್ಕಾರದ ವಿರೋಧಿಯೆಂದು ಗುರುತಿಸಲಾಯಿತು. ಸರ್ಕಾರವು, "ಈಗಾಗಲೇ ಒಂದು ಬಂಡುಕೋರ ಸಂಸ್ಥೆಯೊಂದನ್ನು ತಪಸ್ವಿಯ ವೇಷದಲ್ಲಿನ ಕಾವ್ಯಕಂಠ ಗಣಪತಿ ಶಾಸ್ತ್ರಿ ಎಂಬ ವ್ಯಕ್ತಿಯು ಪ್ರಾರಂಭಿಸಿರುವರು ಹಾಗೂ ಅದರಲ್ಲಿ ಅನೇಕ ವಿದ್ಯಾರ್ಥಿಗಳು ಸದಸ್ಯರಾಗಿರುವರು. ಗಣಪತಿ ಶಾಸ್ತ್ರಿಯು ತಪಸ್ಸಿನ ಸೋಗಿನಲ್ಲಿ ಊರಿಂದೂರಿಗೆ ಪಯಣಿಸಿ ಸರ್ಕಾರದ ವಿರುದ್ಧ ಪ್ರಚಾರ ಮಾಡುತ್ತಿರುವನು. ಆತನು ಈಗ ರೇಣುಕಾ ದೇವಿಯನ್ನು ಪೂಜಿಸುವ ಪವಿತ್ರ ಕ್ಷೇತ್ರ ಪಾದ್ಯವೀಡು ಪಟ್ಟಣದಲ್ಲಿರುವನು. ಈ ಬಂಡುಕೊರನು ಮದ್ದಿನ ಪುಡಿಯಂತೆ ಎಲ್ಲೆಲ್ಲೂ ಸಂದೇಶಗಳನ್ನು ಹರಡುವನು. ಸರ್ಕಾರಿ ಅಧಿಕಾರಿಗಳು ಎಚ್ಚರವಹಿಸಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು." ಎಂಬುದಾಗಿ ಸರ್ಕಾರವು ದಿನಪತ್ರಿಕೆಗಳಲ್ಲಿ ಪ್ರಕಟಿಸಿತು.

ಮಾರನೇ ದಿನವೇ ವೆಲ್ಲೂರಿನ ಕ್ರಿಶ್ಚಿಯನ್ ಕಾಲೇಜಿನ ಪ್ರಾಧ್ಯಾಪಕರಾದ ಸುಬ್ರಹ್ಮಣ್ಯಮ್ ಅವರು ಹಿಂದೂ ಪತ್ರಿಕೆಯಲ್ಲಿ ನಾಯನರ ವಿರುದ್ಧದ ಸರ್ಕಾರದ ಪ್ರಕಟಣೆಯನ್ನು ತೀವ್ರವಾಗಿ ಖಂಡಿಸಿ ಲೇಖನವನ್ನು ಬರೆದರು.

ಬ್ರಿಟಿಷ್ ಗವರ್ನರ್ ಉಮಾಸಹಸ್ರಮ್ ಕೃತಿಯನ್ನು ನಿಷೇಧಿಸಿ ಹಾಗೂ ನಾಯನರನ್ನು ಬಂಧಿಸುವಂತೆ ಫರ್ಮಾನನ್ನು ಹೊರಡಿಸಿದರು. ನಾಯನರನ್ನು ಬಂಧಿಸಲು ಇಬ್ಬರು ಪೋಲೀಸ್ ಬೇಹುಗಾರರನ್ನು ಕಳುಹಿಸಲಾಯಿತು. ಇದನ್ನರಿತ ಅಪ್ಪುಶಾಸ್ತ್ರಿಗಳು ನಾಯನರಿಗೆ ಈ ಬೆಳವಣಿಗೆಗಳನ್ನು ವರದಿಮಾಡಿದರು. ನಾಯನರಾದರೋ ಕಿಂಚಿತ್ತೂ ಭಯಬೀಳದೆ, "ಕುರುಕ್ಷೇತ್ರ ಯುದ್ಧದಲ್ಲಿ ರೇಣುಕಾದೇವಿಯು ದ್ರೌಪದಿಯಾಗಿ ಎಲ್ಲ ಅಧರ್ಮಿ ಶತ್ರುಗಳನ್ನೂ ನಾಶಪಡಿಸಿದಳು. ಈಗಲೂ ಸಹ ಅವಳು ಈ ಆಧರ್ಮೀಯರನ್ನು ಕಿತ್ತೊಗೆಯುವ ಕಾರ್ಯವನ್ನು ಈಗಾಗಲೇ ಪ್ರಾರಂಭಿಸಿರುವಳು" ಎಂದು ನುಡಿದು ನಾಯನರು ರೇಣುಕಾದೇವಿಯ ಮುಖವು ಕೋಪದಿಂದ ಕೆಂಪಾಗಿ, ದುಷ್ಟ ಶಕ್ತಿಗಳನ್ನು ನಾಶಮಾಡುವಂತೆ ತೋರುತ್ತಿರುವಂತಿರುವುದನ್ನು ವೀಕ್ಷಿಸಿದರು.

ವೈರಿಗಣ ನಿರ್ದಳನ ಖಡ್ಗವರಪಾಣೇ
ವಾಸಸಿ ಪದೋದಶನವಾಸಸಿ ಚ ಶೋಣೇ
ನೇತ್ರಮಿಷ ಪಾವಕವಿಶೇಷಿತಲಲಾಟೇ
ಪಾಪಮಖಿಲಂ ಜಹಿ ಮೃಗಾಧಿಪತಿ ಘೋಟೇ ॥

"ಓ ಮಾತೆ! ಸಿಂಹವಾಹಿನಿ, ಶತ್ರುಗಳನ್ನು ನಾಶಮಾಡುವ ಖಡ್ಗವನ್ನು ಹಿಡಿದ ದೇವಿಯೇ! ಹಸ್ತ, ಪಾದಗಳು, ಕೆಳತುಟಿ ಮತ್ತು ನಿನ್ನ ವಸ್ತ್ರವು ಕೆಂಪಾಗಿ ಶೋಭಿಸಿದೆ. ನಿನ್ನ ಹಣೆಯಲ್ಲಿರುವ ಬೆಂಕಿಯಂತಿರುವ ಕಣ್ಣುಗಳಿಂದ ದಯಮಾಡಿ ಎಲ್ಲ ಪಾಪಗಳನ್ನೂ ನಾಶಪಡಿಸು."

ಮಧ್ಯಾಹ್ನ 3 ಘಂಟೆಯ ಹೊತ್ತಿನಲ್ಲಿ ನಾಯನರು ಆರಾಮ ಕುರ್ಚಿಯಮೇಲೆ ಕುಳಿತಿದ್ದರು. ಅವರ ಮುಂದಿರುವ ಸಣ್ಣ ಮೇಜಿನ ಮೇಲೆ ಉಮಾಸಹಸ್ರಮ್ ಪುಸ್ತಕವನ್ನು ಇರಿಸಲಾಗಿತ್ತು. ನಾಯನರು ಅರೆ ನಿಮೀಲಿತ ನೇತ್ರರಾಗಿ ಧ್ಯಾನಿಸುತ್ತಿದ್ದರು. ಇದ್ದಕ್ಕಿದ್ದಂತೆ ಒಬ್ಬ ಅಪರಿಚಿತ ವ್ಯಕ್ತಿಯು ಬಂದು ನಾಯನರ ಪಾದವನ್ನು ಮುಟ್ಟಿದರು. ನಾಯನರು ಕಣ್ತೆರೆದು, ಅವರಿಗೆ ಏನು ಬೇಕೆಂದು ಕೇಳಿದರು. "ಓ ಗುರುಗಳೇ! ನಾನು ನಿಮ್ಮ ಸಾಹಿತ್ಯ ಕೆಲಸಗಳ ಬಗ್ಗೆ ಬಹಳಷ್ಟು ಪ್ರಭಾವಿತನಾಗಿದ್ದೇನೆ. ನಾನು ನಿಮ್ಮ ಶಿಷ್ಯನಾಗಿ ನಿಮ್ಮ ಸೇವೆಯನ್ನು ಮಾಡಲು ಇಚ್ಛಿಸುತ್ತೇನೆ." ಎಂದರು ಅಪರಿಚಿತ ವ್ಯಕ್ತಿ. ನಾಯನರು ಕ್ಷಣಕಾಲ ಕಣ್ಮುಚ್ಚಿ ಧ್ಯಾನಿಸಿ, ನಂತರ ಕಣ್ತೆರೆದು, "ಸತ್ಯವನ್ನರಸುವವರು ಸುಳ್ಳನ್ನು ಹೇಳಬಾರದು. ನೀವು ಬೇಹುಗಾರರಾದ್ದರಿಂದ ದಯವಿಟ್ಟು ನಿಮ್ಮ ಕೆಲಸವನ್ನು ಮಾಡಿ." ಎಂದು ಮತ್ತೆ ಕಣ್ಮುಚ್ಚಿದರು. ಆ ವ್ಯಕ್ತಿಯು ದಿಗ್ಭ್ರಾಂತನಾದನು. ಇಷ್ಟರಲ್ಲೇ ಅವನಿಗೆ ನಾಯನರು ಸಾಮಾನ್ಯ ವ್ಯಕ್ತಿಯಲ್ಲವೆಂಬುದು ಹಾಗೂ ಅವರು ಮಹಾತ್ಮರೆಂಬುದು ಅರಿವಾಯಿತು. ಅಷ್ಟರಲ್ಲಿ ಮತ್ತಷ್ಟು ಪೊಲೀಸರು ಅಲ್ಲಿಗೆ ಬಂದರು. ಅವರು ಒಂದು ಮನೆಶೋಧಿಸುವ ಅಜ್ಞಾಪತ್ರವನ್ನು ನಾಯನರಿಗೆ ತೋರಿಸಿ ಮನೆಯನ್ನೆಲ್ಲಾ ಉಮಾಸಹಸ್ರಮ್ ಪುಸ್ತಕಕ್ಕಾಗಿ ಶೋಧಿಸಲು ತೊಡಗಿದರು. ದಪ್ಪಕ್ಷರದಲ್ಲಿನ ಪುಸ್ತಕವು ನಾಯನರ ಮುಂದೇ ಇತ್ತು. ಆದರೆ ಯಾವುದೋ ಮಾಯೆಯಂತೆ ಅದು ಪೊಲೀಸರ ಕಣ್ಣಿಗೆ ಬೀಳಲೇ ಇಲ್ಲ. ಅವರಿಗೆ ಪುಸ್ತಕವು ಸಿಗದೇ ಇದ್ದದ್ದರಿಂದ ಅವರು ನಾಯನರನ್ನು ಬಂಧಿಸಬೇಕೇ ಅಥವಾ ಬೇಡವೇ ಎಂಬ ಸಂದಿಗ್ಧದಲ್ಲಿದ್ದರು. ಸರ್ಕಾರಿ ಅದೇಶವು ನಾಯನರನ್ನು ಪುಸ್ತಕ ಸಮೇತ ಬಂಧಿಸಬೇಕೆಂದಿದ್ದರಿಂದ ಅವರು ಪುಸ್ತಕವಿಲ್ಲದೆ ಅವರನ್ನು ಮಾತ್ರ ಬಂಧಿಸಲು ಹೆದರಿದರು. ಹಾಗಾಗಿ ಅವರುಗಳು ಮತ್ತೊಮ್ಮೆ ಬರುವುದಾಗಿ ತಿಳಿಸಿ ಅಲ್ಲಿಂದ ತೆರಳಿದರು.

ಈ ಘಟನೆಯಿಂದ ಭಯಭೀತರಾದ ದೊರೆಸ್ವಾಮಿ ಹಾಗೂ ಇನ್ನುಳಿದ ಶಿಷ್ಯರು ಪೊಲೀಸರು ನಾಯನರಿಗೆ ಮತ್ತಷ್ಟು ಕಿರುಕುಳ ಕೊಡಬಹುದೆಂದು ಹೆದರಿ ಉಮಾಸಹಸ್ರಮ್ ಹಸ್ತಪ್ರತಿಯನ್ನು ತೆಗೆದುಕೊಂಡು ಹತ್ತಿರದಲ್ಲಿ ಹರಿಯುತ್ತಿದ್ದ ಕುಂಡಲಿನಿ ನದಿಯ ಬಳಿಗೆ ಹೋಗಿ ಅದನ್ನು ಒಂದು ಬೆಟ್ಟದ ಕೆಳಗೆ ಮರಳಿನಲ್ಲಿ ಹೂತು ಹಾಕಿದರು. ಈ ಬೆಟ್ಟದ ಹೆಸರು, "ಪಂಬದಿಚ್ಚನ್ ಪರೈ". ಸ್ವಲ್ಪ ಸಮಯದ ನಂತರ ಆ ಹಸ್ತಪ್ರತಿಯನ್ನು ಮರಳಿ ಪಡೆಯಬಹುದೆಂದು ದೊರೈಸ್ವಾಮಿಯು ಯೋಚಿಸಿದ್ದರು. ಆದರೆ ದೈವ ಸಂಕಲ್ಪವೇ ಬೇರೆಯಾಗಿತ್ತು. ಆ ರಾತ್ರೆ ಧಾರಾಕಾರವಾಗಿ ಮಳೆ ಸುರಿದು, ನದಿಯು ಉಕ್ಕಿ ಹರಿದು ಆ ರಭಸದಲ್ಲಿ ಉಮಾಸಹಸ್ರಮ್ ಹಸ್ತಪ್ರತಿಯು ಯಾರ ಕೈಗೂ ಸಿಗದಂತೆ ಶಾಶ್ವತವಾಗಿ ಕೊಚ್ಚಿಕೊಂಡು ಹೋಗಿತ್ತು. ಬೆಳಗ್ಗೆ ನಾಯನರು ತಮ್ಮ ಶಿಷ್ಯರ ಈ ಘಟನೆಯ ಬಗ್ಗೆ ಅರಿತರು ಅಷ್ಟೇ. ಅವರು ಸ್ವಲ್ಪವೂ ವಿಚಲಿತರಾಗಲಿಲ್ಲ. ಅವರು ಮುಗುಳ್ನಗುತ್ತಾ ಎಲ್ಲವೂ ಮಾತೆಯ ಕೆಲಸ ಎಂದುಬಿಟ್ಟರು. ಅವರು ತಮ್ಮ ಶಿಷ್ಯರಿಗೆ ಈ ವಿಷಯವನ್ನು ತಿರುವಣ್ಣಾಮಲೈಯಲ್ಲಿರುವ ಭಗವಾನ್ ರಮಣ ಮಹರ್ಷಿಗಳಿಗೆ ಉಮಾಸಹಸ್ರಮ್ ಬಗ್ಗೆ ತಿಳಿಸುವಂತೆ ಹೇಳಿಬಿಟ್ಟರು.

ಸಾಯಂಕಾಲ ನಾಯನರು ರೇಣುಕಾ ಮಾತೆಯ ಮುಂದೆ ಧ್ಯಾನಿಸುತ್ತಿದ್ದಾಗ ಅವರ ಅಂತರಾತ್ಮವು, "ಚಿಂತಿಸದಿರು. ಉಮಾಸಹಸ್ರಮ್ ಕೃತಿಯು ಕಳೆದುಹೋಗಿಲ್ಲ, ನದಿಯ ಹರಿವಿನ ಮೂಲಕ ಅದು ಅತ್ಯಂತ ಶಕ್ತಿಶಾಲಿ ಅಸ್ತ್ರವಾಗಿರುವುದು. ಉಮಾಸಹಸ್ರಮ್ ಶಕ್ತಿಯು ಜನಗಳೊಂದಿಗೆ ಐಕ್ಯವಾಗಿ ಅದು ಜನಗಳಿಗೆ ಸ್ವಾತಂತ್ರ್ಯದ ಕಹಳೆಯನ್ನು ಊದಲು ಶಕ್ತಿಯನ್ನು ಕೊಟ್ಟಿದೆ. ಕೃತಿಯಲ್ಲಿನ ಮಂತ್ರ, ತಂತ್ರ ಹಾಗೂ ಆಧ್ಯಾತ್ಮಿಕ ವಿಷಯಗಳು ಯುದ್ಧದ ಅಸ್ತ್ರಗಳಾಗಿವೆ. ಆ ಕೆಲಸವು ದೈವೀ ಮಾತೆಯ ಶಕ್ತಿಯದೇ ಆಗಿದೆ. ಜನಗಳು ಸ್ವಾತಂತ್ರ್ಯ ಹೋರಾಟಕ್ಕೆ ಶಕ್ತಿಯನ್ನು ಪಡೆಯಬೇಕಿದ್ದರೆ, ಉಮಾಸಹಸ್ರಮ್ ಜನಗಳ ಹೃದಯಮಾನಸದಲ್ಲಿ ಒಂದಾಗಿ ಅವರನ್ನು ಶಕ್ತಿವಂತರಾಗಿ ಹಾಗೂ ಧೈರ್ಯಶಾಲಿಗಳನ್ನಾಗಿ ಮಾಡುವುದು. ಈಗ ಆಗಿರುವುದೂ ಅದೇ. ನೀನು ಮಹಾನ್ ಕವಿ. ನೀನು ಇನ್ನೂ ಅನೇಕ ಕೃತಿಗಳನ್ನು ರಚಿಸಬಲ್ಲೆ. ಹೋರಾಟವನ್ನು ಪ್ರಾರಂಭಿಸು!"

ದೇವಿಯ ಈ ರೀತಿಯ ಕರುಣಾಪೂರಿತ ಸಂದೇಶದಿಂದ ನಾಯನರು ಸಂಪೂರ್ಣವಾಗಿ ಭಾವಪರವಶರಾದರು. ಅವರು ರೇಣುಕಾ ಮಾತೆಯ ಪಾದಗಳನ್ನು ಮುಟ್ಟಿದರು. ರೇಣುಕಾ ದೇವಿಯು ಮುಗುಳ್ನಕ್ಕು ತನ್ನ ಪುತ್ರನನ್ನು ಹರಸಿದಳು.

"ಪಂಬದಿಚ್ಚನ್ ಪರೈ" ಅಂದರೆ ಹಾವಿನಿಂದ ಸಿಕ್ಕಿಹಾಕಿಕೊಂಡ ಬೆಟ್ಟ ಎಂದು. ಸಾಧಕನ ಬೆನ್ನು ಮೂಳೆಯಲ್ಲಿ ಎದ್ದೇಳುವ ಸರ್ಪವು ತನ್ನ ಹಾದಿಯಲ್ಲಿ ಸಿಗುವ ಗಂಟುಗಳನ್ನು ಭೇದಿಸಿ ಸಹಸ್ರಾರವನ್ನು ತಲುಪಿ ಅಮೃತಸಮಾನವಾದ ಕರುಣೆಯನ್ನು ಹರಿಸುತ್ತದೆ. ರೇಣುಕಾ ದೇವಿಯ ಶಿರಶ್ಛೇದನವು ಇದನ್ನೇ ಸೂಚಿಸಿದೆ ಹಾಗೂ ಇದೇ ಒಳಾರ್ಥ. ಉಮಾಸಹಸ್ರಮ್ ಇದೇ ಸ್ಥಳದಲ್ಲಿ (ಪಂಬದಿಚ್ಚನ್ ಪರೈ) ಮುಳುಗಿರುವುದು ಹಾಗೂ ನಾಯನರು ಈ ಅನುಭವವು (ನಾಡಿ ಭೇದನ) ಶೀಘ್ರದಲ್ಲೇ ಆಗುವುದೆಂದು ತೀರ್ಮಾನಿಸಿದರು.

ಮಾತೆಯ ದೈವೀ ಇಂಗಿತವನ್ನು ಅರಿತ ನಾಯನರು ಅವಳ ಸಂಕಲ್ಪಕ್ಕೆ ನಮಿಸಿ ಮನೆಗೆ ಮರಳಿದರು.

೨೨

ಎಫ್.ಹೆಚ್.ಹಂಫ್ರಿ ಅವರ ಆಗಮನ

ಅಭಿಸ್ತಸ್ಯ ಮಾತಾ ತವ ತೇಜೋಂಶಭೂತಾ
ಸುದಶಾಂ ಸೇವಮಾನಾಮನಯತ್ಪಶ್ಚಿಮಾಶಾಮ್ ॥

– ಇಂದ್ರಾಣಿ ಸಪ್ತಶತಿ (170)

"ಓ ಇಂದ್ರಾಣಿ! ಪ್ರತಿಷ್ಠಾಪಿಸಲ್ಪಟ್ಟ ಮಾತೆ, ನೀನು ಭಾಗಶಃ ಅಭಿವ್ಯಕ್ತಿಗೊಂಡು ಜನಿಸಿದ, ನಿನ್ನನ್ನು ಸೇವಿಸಿದ ಪಾಶ್ಚಿಮಾತ್ಯರಿಗೆ ವೈಭವವನ್ನು ತಂದುಕೊಟ್ಟೆ."

ಅಯಿ ಕಾಲಂ ಕಿಯಂತಂ ದಯಸೇ ಪಶ್ಚಿಮಸ್ಯಾಮ್
ಇತ ಇಂದ್ರಾಣಿ ಪೂರ್ವಾಮವಲೋಕಸ್ವ ದೀನಾಮ್ ॥

– ಇಂದ್ರಾಣಿ ಸಪ್ತಶತಿ (171)

"ಓ ಇಂದ್ರಾಣಿ! ಎಲ್ಲಿಯವರೆಗೂ ನೀನು ಪಶ್ಚಿಮವನ್ನು ದಯೆಯಿಂದ ನೋಡುವೆ? ಬಹಳವಾಗಿ ತೊಂದರೆಗೊಳಗಾದ ಪೂರ್ವವನ್ನು ಈಗಲಾದರೂ ಕರುಣೆಯಿಂದ ನೋಡು."

ನ ವಯಂ ಪಶ್ಚಿಮಸ್ಯಾಶ್ಶಚಿ ಯಾಚಾಮ ನಾಶಮ್
ಕೃಪಯೈತಾಂ ಚ ಪೂರ್ವಾಂ ನಿಹತಾಶಾಮವಾಶಾಮ್ ॥

– ಇಂದ್ರಾಣಿ ಸಪ್ತಶತಿ (172)

"ಓ ಶಚಿ ಮಾತೆ! ನಾವು ಪಶ್ಚಿಮದ ನಾಶವನ್ನು ಕೇಳುವುದಿಲ್ಲ. ನಾವು ಕೇಳಿಕೊಳ್ಳುವುದೇನೆಂದರೆ ಕಷ್ಟದಲ್ಲಿರುವ ಪೂರ್ವವನ್ನು ರಕ್ಷಿಸೆಂದು. ಇದು ನಮ್ಮ ಆಶಾಪೂರ್ಣ ಬೇಡಿಕೆ."

ಪ್ರಪಂಚದಲ್ಲಿನ ಇಂದ್ರಾಣಿಯ ಶಕ್ತಿಯನ್ನು ಆಹ್ವಾನಿಸುವ ಸಂದರ್ಭದಲ್ಲಿ ನಾಯನರು ಉಪಯೋಗಿಸುವ ಅಸ್ತ್ರವೇ ಇದು. ಧರ್ಮದ ಹಾಗೂ ಸಮಸ್ತ ಮಾನವತೆಯ ರಕ್ಷಣೆಯೇ ಗುರಿ. ಈ ಉದ್ದೇಶಕ್ಕಾಗಿ ನಾಯನರು ಎಲ್ಲ ದೇವರುಗಳ ಕರುಣೆಯನ್ನು ಆಹ್ವಾನಿಸುವುದಲ್ಲದೇ ಅವರು ಕನ್ಯೆ ಮೇರಿಯನ್ನೂ ಪ್ರಾರ್ಥಿಸುತ್ತಿದ್ದರು.

ಕಲಯಾ ತದಾತಿಬಲಯಾ ಕವಿತಾ ಪುರುಷಸ್ಯ ಯೋಗಮಖಿಲಾಂಬ ವಿನಾ
ಅಖಿಲೇಶ್ವರಪ್ರಹಿತತೇಜ ಇಯಂ ಸುತ ಜನ್ಮನೇ ಕಿಲ ದದಾವನಧಾ ॥

"ಓ ಸರ್ವರ ಮಾತೆ! ಪಾಪರಹಿತಳೆ, ನಿನ್ನ ಶಕ್ತಿಯುತವಾದ ಕಿರಣಗಳಿಂದ ಕೂಡಿದವಳೆ, ಎಲ್ಲ ದೇವರುಗಳ ಜ್ಯೋತಿಯ, ಪುರುಷನ ಸಾಂಗತ್ಯವಿಲ್ಲದೆ ಪುತ್ರನಿಗೆ ಜನ್ಮಕೊಟ್ಟವಳು"

ಸುರರಕ್ಷಕಸ್ಯ ಮದಯಿತ್ರಿ ದೃಶಾಂ ನರರಕ್ಷಕಸ್ಯ ಜನಯಿತ್ರಿಪರೇ
ಕುಲರಕ್ಷಣಾಯ ಕೃತಬುದಗದ್ಧಿಮಿಮಂ ಕುರುದಕ್ಷಮದ್ಭುತಪವಿತ್ರಕಥೇ ॥

"ಮನುಷ್ಯನನ್ನು ರಕ್ಷಿಸುವ ಓ ಮಾತೆ! ದೇಶವನ್ನು ರಕ್ಷಿಸುವ ಪ್ರಯತ್ನ ಮಾಡುತ್ತಿರುವ ಈ ಜೀವವನ್ನು ದಯಮಾಡಿ ಶಕ್ತಿಯುತನನ್ನಾಗಿ ಮಾಡು."

ನಮ್ರತೆಯಿಂದ ಕೂಡಿದ ಎಫ್.ಹೆಚ್.ಹಂಫ್ರಿ ಎಂಬ ಸಂಭಾವಿತ ವ್ಯಕ್ತಿಯನ್ನು ವೆಲ್ಲೂರು ಪೊಲೀಸ್ ವಿಭಾಗಕ್ಕೆ ಅಸಿಸ್ಟೆಂಟ್ ಸುಪರಿಂಟೆಂಡೆಂಟ್ ಆಗಿ ಬ್ರಿಟಿಷ್ ಸರ್ಕಾರವು ವರ್ಗಮಾಡಿತು. ಈತನು 1911ರಲ್ಲಿ ಮೊಟ್ಟ ಮೊದಲಿಗೆ ಭಾರತಕ್ಕೆ ಹಡಗಿನಲ್ಲಿ ಬಂದು ಬೊಂಬಾಯಿ ನಗರಕ್ಕೆ ಕಾಲಿಟ್ಟೊಡನೆ ಅವರಿಗೆ ವೈರಸ್ ಜ್ವರವು ಬಂದು ಅಲ್ಲೇ ಕೆಲವು ದಿನ ಇರಬೇಕಾಯಿತು. ಒಂದು ಸಂಜೆ ಅವರಿಗೆ ಶ್ವೇತವಸ್ತ್ರಧಾರಿ ಹಾಗೂ ಉದ್ದನೆಯ ಗಡ್ಡವುಳ್ಳ ಕ್ರೈಸ್ತನಂತೆ ಕಂಡುಬರುವ ವ್ಯಕ್ತಿಯೊಬ್ಬನು ಕಾಣಿಸಿಕೊಂಡನು. ಆತನು ಹಂಫ್ರಿಯು ವಿಶ್ರಾಂತಿಯಲ್ಲಿ ಮಲಗಿದ್ದ ಹಾಸಿಗೆಯ ಮೇಲೆ ಕುಳಿತು ತನ್ನ ಕೈಯನ್ನು ಅವರ ಹಸ್ತದ ಮೇಲಿರಿಸಿದನು. ಹಂಫ್ರಿಗೆ ಮೈಯಲ್ಲಿ ವಿದ್ಯುತ್ ಸಂಚಾರವಾದಂತೆ ಅನಿಸಿ ಕ್ಷಣಾರ್ಧದಲ್ಲೇ ಅವರಲ್ಲಿದ್ದ ಜ್ವರವು ಮಾಯವಾಯಿತು.

ಹಂಫ್ರಿಯು ತನ್ನ ಹೊಸಹುದ್ದೆಯನ್ನು ವಹಿಸಿಕೊಳ್ಳಲು ವೆಲ್ಲೂರಿಗೆ ಬಂದು ಸ್ವಲ್ಪ ದಿನಗಳ ನಂತರ ತೆಲುಗು ಭಾಷೆಯನ್ನು ಕಲಿಯಲು ನರಸಿಂಹನ್ ಎಂಬ ಮುನೌಯನ್ನು ನೇಮಿಸಿಕೊಂಡನು. ಒಂದು ದಿನ ಹಂಫ್ರಿಯು ಮುನೌಯನ್ನು ಅವರಿಗೆ ಯಾರಾದರೂ ಮಹಾತ್ಮರು ಗೊತ್ತಿರುವರೆ ಎಂದು ಕೇಳಿದನು.

ಆ ಸಮಯದಲ್ಲಿ ಥಿಯೋಸಾಫಿಕಲ್ ಸೊಸೈಟಿಯು ಪ್ರಪಂಚದ ಒಳಿತಿಗಾಗಿ ಮಹರ್ಷಿ ಮೈತ್ರೇಯ ಎಂಬ ಪ್ರವಾದಿಯೊಬ್ಬನ ಜನನವಾಗುವುದೆಂಬ ಸುದ್ದಿಯನ್ನು ಎಲ್ಲೆಡೆ ಹರಡುತ್ತಿತ್ತು. ಪೂರ್ವಾತ್ಯರ ತತ್ತ್ವಶಾಸ್ತ್ರ ಹಾಗೂ ಯೋಗದ ಅಧ್ಯಾತ್ಮಿಕತೆಗಳ ಬಗ್ಗೆ ಆಸಕ್ತಿಯುಳ್ಳ ಹಂಫ್ರಿಯು ಥಿಯೋಸಾಫಿಕಲ್ ಸೊಸೈಟಿಯವರ ಈ ಸುದ್ದಿಯನ್ನು ಕೇಳಿ ಆ ಹಿಂದೂ ಋಷಿಯ ದರ್ಶನವನ್ನು ಮಾಡಲು ಕಾತುರನಾಗಿದ್ದನು.

ಆದರೆ ಮುನೌಗೆ ಹಂಫ್ರಿಯ ಬೇಡಿಕೆಯ ಹಿಂದೆ ಯಾವುದೋ ದುರುದ್ದೇಶವಿರಬಹುದೆಂದು ಅನುಮಾನ ಬಂದಿತು. ಏಕೆಂದರೆ ನಾಯನರ ಮೇಲೆ ಪೊಲೀಸರ ಬೇಹುಗಾರಿಕೆ ಇನ್ನೂ

ನಡೆಯುತ್ತಲೇ ಇತ್ತು. ಹಂಫ್ರಿಯ ಬೇಡಿಕೆಯು ನಾಯನರನ್ನು ಬಂಧಿಸಲು ನಡೆಸಿರುವ ಸಂಚಿರಬೇಕೆಂದು, ತನಗೆ ಯಾವ ಮಹಾತ್ಮನೂ ಗೊತ್ತಿಲ್ಲವೆಂದನು.

ಇಷ್ಟಕ್ಕೇ ತೃಪ್ತರಾಗದೆ ಹಂಫ್ರಿಯು ತಾನು ಕನಸಿನಲ್ಲಿ ಮುನೌಯ ಗುರುಗಳನ್ನು ಕಂಡಿರುವುದಾಗಿಯೂ ತಿಳಿಸಿ, ಅವರ ಗುರುಗಳ ಭಾವಚಿತ್ರವನ್ನು ತೋರಿಸುವಂತೆ ಕೇಳಿದನು. ಮುನೌಯು ಅನೇಕ ಮಹಾತ್ಮರ ಚಿತ್ರಗಳ ಗುಡ್ಡೆಯಲ್ಲಿ ನಾಯನರ ಫೋಟೋವನ್ನೂ ಮಧ್ಯದಲ್ಲಿ ಸೇರಿಸಿ ಅವುಗಳನ್ನು ಹಂಫ್ರಿಯ ಮುಂದೆ ಇರಿಸಿದನು. ನೋಡು ನೋಡುತ್ತಿದ್ದಂತೆ ಹಂಫ್ರಿಯು ನಾಯನರ ಭಾವಚಿತ್ರವನ್ನು ಗುರುತಿಸಿ ಅದನ್ನು ಹಿಡಿದುಕೊಂಡು, "ಮುನೌಜಿ, ಇದು ನಿಮ್ಮ ಗುರುಗಳ ಫೋಟೋ ಅಲ್ಲವೇ? ಅವರು ಬೊಂಬಾಯಿಯಲ್ಲಿ ನನಗೆ ಕಾಣಿಸಿಕೊಂಡು ನನ್ನನ್ನಾವರಿಸಿಕೊಂಡಿದ್ದ ಜ್ವರವನ್ನು ವಾಸಿಮಾಡಿದರು. ದಯವಿಟ್ಟು ನನ್ನನ್ನು ಅವರ ಬಳಿಗೆ ಕರೆದುಕೊಂಡು ಹೋಗಿ, ನಾನು ಅವರ ದರ್ಶನ ಮಾಡಬೇಕು." ಎಂದನು.

ಇದರಿಂದ ಮುನೌಗೆ ಹಂಫ್ರಿಯ ನಿಜವಾದ ಉದ್ದೇಶವು ಅರಿವಾಗಿ ಸಂತೋಷದಿಂದ ಅವನನ್ನು ನಾಯನರ ಬಳಿಗೆ ಕರೆದೊಯ್ದನು. ಮೊತ್ತ ಮೊದಲಿಗೆ ಹಿಂದೂ ಋಷಿಯೊಬ್ಬನನ್ನು ಕಂಡು ಹಂಫ್ರಿಯು ಪರಮಾನಂದಭರಿತನಾದನು. ನಾಯನರೊಂದಿಗೆ ಅನೇಕ ಆಧ್ಯಾತ್ಮಿಕ ವಿಷಯಗಳ ಬಗ್ಗೆ ಬಹಳ ಹೊತ್ತು ಮಾತನಾಡಿದನು. ನಾಯನರು ಹಂಫ್ರಿಯಲ್ಲಿರುವ ಆಧ್ಯಾತ್ಮಿಕ ಹಸಿವನ್ನು ಮನಗಂಡು ಅವನನ್ನು ನವೆಂಬರ್ 1911 ರಲ್ಲಿ ಶ್ರೀ ರಮಣ ಮಹರ್ಷಿಗಳ ಬಳಿಗೆ ಕರೆದೊಯ್ದರು. ಹಂಫ್ರಿಯು ತನ್ನ ರಮಣ ಮಹರ್ಷಿಗಳೊಂದಿಗಿನ ಭೇಟಿಯನ್ನು ಇಂಟರ್ನ್ಯಾಷನಲ್ ಸೈಕಿಕ್ ಗೆಜೆಟ್ ನಲ್ಲಿ ಒಂದು ಲೇಖನದ ಮೂಲಕ ರಮಣ ಮಹರ್ಷಿಗಳನ್ನು "ಈ ಮಹರ್ಷಿಯು ವಿವರಣೆಗೆ ನಿಲುಕದವರು, ಅವರ ಧೀಮಂತ ವ್ಯಕ್ತಿತ್ವ ಹಾಗೂ ಆತ್ಮಸಂಯಮ ಮತ್ತು ಶಾಂತವಾದ ನಂಬಿಕೆಯ ಶಕ್ತಿಯು ಅಪಾರವಾದುದು" ಎಂದು ವಿವರಿಸಿದ್ದಾನೆ.

ಇವರೇ ಮೊತ್ತ ಮೊದಲ ವಿದೇಶೀ ಪ್ರಜೆಯು ರಮಣ ಮಹರ್ಷಿಯನ್ನು ಭೇಟಿಯಾಗಿದ್ದು. ರಮಣ ಮಹರ್ಷಿಗಳ ಉಪದೇಶವನ್ನು ಪಾಶ್ಚಿಮಾತ್ಯ ದೇಶಗಳಿಗೆ ಪರಿಚಯಿಸಿದವನೇ ಹಂಫ್ರಿ. ಇದರಿಂದ ರಮಣ ಮಹರ್ಷಿಗಳ ಉಪದೇಶಗಳು ದೂರದೇಶಗಳಿಗೆ ತಲುಪಲು ಸಾಧ್ಯವಾಯಿತು.

೨೩

ಗೋಕರ್ಣದೆಡೆಗೆ ತೀರ್ಥಯಾತ್ರೆ

ತೀರೇ ವಿಪಶ್ಚಿದ್ವರ ಪಶ್ಚಿಮಾಬ್ಧೇ-
ಗೋಕರ್ಣಗಾಂ ಲೋಕಯ ಭದ್ರಕರ್ಣೀಂ
ಬುದ್ಧಿಂ ಶಿವಾಂ ಸರ್ವಮನೋರಥಾನಾಂ
ಸಿದ್ಧಿಂ ಚ ಯದ್ಯಸ್ತಿ ಮನೋಽಧಿಗಂತುಂ ॥

– ಉಮಾಸಹಸ್ರಮ್ (7–25–13)

"ಓ ವಿದ್ವಾಂಸನೆ! ನಿಶ್ಚಲವಾದ ಮನಸ್ಸು ಹಾಗೂ ಸಮಸ್ತ ಆಸೆಗಳ ಪೂರೈಕೆಗೆ ಭಾರತದ ಪಶ್ಚಿಮ ಕರಾವಳಿಯಲ್ಲಿರುವ ಗೋಕರ್ಣ ಕ್ಷೇತ್ರಕ್ಕೆ ಹೋಗಿ ಆ ಪವಿತ್ರ ಕ್ಷೇತ್ರದಲ್ಲಿರುವ ಭದ್ರಕರ್ಣೀ ನಾಮದ ಕಾಳಿಕಾ ಮಾತೆಯ ದರ್ಶನ ಮಾಡು.

ನಾಯನರ ಪುತ್ರ ಮಹಾದೇವ ಶಾಸ್ತ್ರಿಗೆ ಹತ್ತು ವರ್ಷ ತುಂಬುತ್ತಿದ್ದಂತೆ ಅವನಿಗೆ ಉಪನಯನವನ್ನು ನಾಯನರು ಮಾಡಿದರು. ಕ್ರಮೇಣ ಮಹಾದೇವ ಶಾಸ್ತ್ರಿಯು ಗಾಯತ್ರೀ ಮಂತ್ರವನ್ನು ಕಲಿತು ಅದರೊಂದಿಗೆ ಧ್ಯಾನ ಮಾಡುವುದನ್ನೂ ಕಲಿತನು. ಇದು ರಮಣ ಮಹರ್ಷಿಗಳ ಕೃಪೆಯಿಂದ ಮಾತ್ರ ಸಾಧ್ಯವಾಯಿತು. ಈ ರೀತಿಯ ವೇಗದ ಬೆಳವಣಿಗೆಯು ನಾಯನರನ್ನೂ ಬೆರಗುಗೊಳಿಸಿತು. "ಬಹುಷಃ ಮಹಾದೇವನಿಗೆ ತನ್ನ ಪೂರ್ವಜನ್ಮದ ಸುಕೃತವು ಈ ಜನ್ಮಕ್ಕೂ ಬಂದಿದ್ದರಿಂದ ಈ ವಿಧದ ವೇಗದ ಬೆಳವಣಿಗೆ ಸಾಧ್ಯವಿರಬೇಕು," ಎಂದುಕೊಂಡರು ನಾಯನರು. ರಮಣ ಗೀತದಲ್ಲಿ ನಾಯನರು ಮಹದೇವ ಶಾಸ್ತ್ರಿಯ ಬಗ್ಗೆ, "ಮಹಾದೇವಸ್ಯ ಜನನಿ ಧೀರಸ್ಯ ಬ್ರಹ್ಮವಾದಿನಃ" ಎಂದಿದ್ದಾರೆ. ಅಂದರೆ ನಾಯನರು ಮಹಾದೇವನಿಗೆ ಬ್ರಹ್ಮನ ಬಗ್ಗೆ ಅರಿವಿದೆ ಎಂದು. ಮಗನ ಅಭ್ಯಾಸಗಳು ಸ್ವಲ್ಪ ವಿಚಿತ್ರವಾಗಿತ್ತು. ಹಗಲು ಹೊತ್ತಿನಲ್ಲಿ ಅವನು ಸಾಧಾರಣವಾಗಿರುತ್ತಿದ್ದನು. ಮಧ್ಯರಾತ್ರಿ ಹನ್ನೆರಡು ಘಂಟೆಯಾಗುತ್ತಿದ್ದಂತೆ ಅವನು ಸದಾ ಯೋಗಾಸಕ್ತನಾಗುತ್ತಿದ್ದನು. ಯಾರಾದರೂ ಅವನನ್ನು ನಿದ್ರಿಸುವುದಿಲ್ಲವೇಕೆಂದು ಕೇಳಿದರೆ, ಅವನು, "ನಾನು ಕುಳಿತೇ ನಿದ್ರಿಸುವೆ" ಎನ್ನುತ್ತಿದ್ದನೇ ಹೊರತು, ತಾನು ಧ್ಯಾನ ಮಾಡುತ್ತಿರುವೆನೆಂದು ಎಂದೂ ಹೇಳುತ್ತಿರಲಿಲ್ಲ. ಹೀಗೆ ಬೆಳಗಿನ ಝಾವ 4 ರ ವರೆಗೂ ಕುಳಿತಿರುತ್ತಿದ್ದನು. 4 ಘಂಟೆಗೆ ಸರಿಯಾಗಿ ಗುರು ಸ್ತುತಿ ಮತ್ತು ಇತರ ಶ್ಲೋಕಗಳನ್ನು ಸ್ತುತಿಸುತ್ತಿದ್ದನು.

ಒಂದು ಹೇಳಿಕೆಯ ಪ್ರಕಾರ, "ನೀವು ಸಾಯುವ ಸಮಯದಲ್ಲಿ ಏನನ್ನು ಯೋಚಿಸುವಿರೋ (ನಿಮ್ಮ ಮುಂದಿನ ಜನ್ಮದಲ್ಲಿ) ಅದೇ ಆಗುವಿರಿ." ಮಹಾದೇವನ ಎಲ್ಲ ಮಕ್ಕಳೂ ಅವನ ಸ್ಥಿತಿಯನ್ನು ಅವನು ಸಾಯುವ ಸಮಯದಲ್ಲಿ ಅರಿತರು. ಮಹಾದೇವ ಶಾಸ್ತ್ರಿಯು ತಾನು ಸಾಯುವ ಸಮಯದಲ್ಲಿ, "ಪುರಂಧರ, ಪ್ರಾಣವು ನನ್ನಿಂದ ಹೋಗಲಿದೆ! ಅದು ಹೋಗಲಿ." ಎಂದು ಹೇಳಿದನು. ಅನಂತರ ತನ್ನ ಎಡಗಡೆಗೆ ತಿರುಗಿ, "ಮಾತಾ, ಪಿತಾ ಮತ್ತು ಗುರುಗಳಿಗೆ ನಮಸ್ಕಾರ. ಭಗವಾನ್ ರಮಣ! ಶಿವ, ಶಿವ!" ಎಂದನು, ನಂತರ ಅವನ ಪ್ರಾಣವು ಹೊರಟು ಹೋಯಿತು.

ಇದು ನಡೆದದ್ದು ಖರಗಪುರದಲ್ಲಿ. ಭಗವಂತ ಅಥವಾ ಗುರುವಿನ ಆಶೀರ್ವಾದವಿಲ್ಲದೇ ಯಾರಿಗೂ ಈ ರೀತಿಯ ಸಾವು ಬರುವುದಿಲ್ಲ. ಭಗವಾನ್ ರಮಣರು ಮಹಾದೇವನನ್ನು ಹರಸಿರಬೇಕು.

ಏಕೇನಾಽಪಿ ಸುಪುತ್ರೇಣ ತಪೋಯುಕ್ತೇನ ಸಾಧುನಾ
ಆಹ್ಲಾದಿತಂ ಕುಲಂ ಸರ್ವಂ ಯಥಾ ಚಂದ್ರೇಣ ಶರ್ವರೀ ॥

"ರಾತ್ರಿ ಪೂರ್ತಿ ಹೇಗೆ ಚಂದ್ರನು ಸಂತೋಷವನ್ನು ನೀಡುವನೋ ಒಳ್ಳೆಯ ಮತ್ತು ಕಟ್ಟುನಿಟ್ಟಾದ ಕೇವಲ ಒಬ್ಬ ಮಗನೂ ಇಡೀ ಕುಟುಂಬಕ್ಕೆ ಸಂತೋಷ ನೀಡುವನು."

1912ರಲ್ಲಿ ನಾಯನರು ಪತ್ನಿ ಪುತ್ರ ಸಮೇತರಾಗಿ ಗೋಕರ್ಣದೆಡೆಗೆ ತೀರ್ಥಯಾತ್ರೆಯನ್ನು ಪ್ರಾರಂಭಿಸಿದರು. ಅವರು ಮೊದಲಿಗೆ ಶಂಕರಾಚಾರ್ಯರ ಜನ್ಮಸ್ಥಳವಾದ ಕಾಲಡಿಗೆ ಭೇಟಿಕೊಟ್ಟು ಅನಂತರ ಸಮುದ್ರ ಮಾರ್ಗವಾಗಿ ಗೋಕರ್ಣ ತಲುಪುವುದೆಂದು ತೀರ್ಮಾನಿಸಿದರು. ಅದೇ ರೀತಿ ಕಾಲಡಿಯನ್ನು ತಲುಪಿ, ಅಲ್ಲಿಂದ ಗೋಕರ್ಣಕ್ಕೆ ಹೋಗಲು ದೋಣಿಯನ್ನು ಹತ್ತಿದರು. ದೋಣಿಯು ಸಂಜೆ 6 ಘಂಟೆಗೆ ಚಲಿಸಲು ಪ್ರಾರಂಭಿಸಿತು. ಅಂದು ಹುಣ್ಣಿಮೆ ದಿನವಾಗಿತ್ತು, ಪೂರ್ಣಚಂದ್ರನು ಬೆಳಗಲು ಆಗತಾನೇ ಪ್ರಾರಂಭಿಸಿದ್ದನು. ರಾತ್ರೆ 10 ಘಂಟೆಗೆ ದೋಣಿಯು ಒಂದು ದ್ವೀಪವನ್ನು ತಲುಪಿತು. ಅಲ್ಲಿ ಯಾವ ಮನುಷ್ಯನೂ ವಾಸಿಸುತ್ತಿರಲಿಲ್ಲ. ಒಂದು ಮೈಲಿ ದೂರದಲ್ಲಿ ಒಂದು ತೋಪಿನ ನೆರಳು ಕಾಣಿಸಿತು. ದೋಣಿ ನಡೆಸುವವನು ಸಮುದ್ರ ತೀರವನ್ನು ತಲುಪಿ ಹಗ್ಗದಿಂದ ಮಾಡಿದ ಏಣಿಯಿಂದ ಎಲ್ಲರನ್ನೂ ಇಳಿಸಿದನು. ಪ್ರಯಾಣಿಕರಿಗೆ ತಿಳಿಯದಂತೆ ದ್ವೀಪದಲ್ಲಿರುವ ಕೆಲವರು ಆ ತೋಪಿನಲ್ಲಿ ಮದ್ಯಪಾನ ಮಾಡುವುದನ್ನರಿತ ದೋಣಿ ನಡೆಸುವವನು ಅಲ್ಲಿಗೆ ಹೋದನು. ಈ ಮಧ್ಯೆ ಕೆಲವು ಪ್ರಯಾಣಿಕರು ದ್ವೀಪದಲ್ಲಿ ಬೆಳದಿಂಗಳನ್ನು ಸವಿಯಲು ದೋಣಿಯಿಂದಿಳಿದರು. ಅರ್ಧ ಘಂಟೆಯ ನಂತರ ಆ ಸ್ಥಳವೇ ಗೋಕರ್ಣವೆಂದೂ ಹಾಗೂ ದೋಣಿಯು ಮುಂದೆ ಹೋಗುವುದಿಲ್ಲವೆಂದು ಅರಿವಾಯಿತು. ಸ್ವಲ್ಪ ಹೊತ್ತು ಗಡಿಬಿಡಿಯುಂಟಾಗಿ ಕೊನೆಗೆ ಎಲ್ಲ ಪ್ರಯಾಣಿಕರೂ ಬೇಗ ಬೇಗ ಇಳಿದರು. ಈ ಮಧ್ಯೆ ದೋಣಿ ನಡೆಸುವವನು ಮರಳಿ ಬಂದು ಇದು ಗೋಕರ್ಣ ಅಲ್ಲವೆಂದೂ ಪ್ರಯಾಣಿಕರನ್ನು

ಬೇಗ ಬೇಗ ಹತ್ತಿಸಿಕೊಂಡನು. ಆ ಸಮಯದಲ್ಲಿ ಗಡಿಬಿಡಿಯುಂಟಾಗಿ ತನ್ನ ತಂದೆಯ ಕೈಯನ್ನು ಹಿಡಿದಿದ್ದ ಮಹಾದೇವನು ನೀರಿಗೆ ಬಿದ್ದನು. ನಾಯನರು ಹಾಗೂ ವಿಶಾಲಾಕ್ಷಿಯು ದೋಣಿಯನ್ನು ಹತ್ತಿದರು, ಆದರೆ ಮಹಾದೇವನು ದೋಣಿಯನ್ನು ಹತ್ತಲಾಗಲಿಲ್ಲ, ಅವನು ನೀರಿನಲ್ಲಿ ಬಿದ್ದನು. ಅವನನ್ನು ಪ್ರಯಾಣಿಕನೊಬ್ಬನು ಮೇಲೆತ್ತಿದನಾದರೂ ಅದು ಫಲಕಾರಿಯಾಗದೆ ಮಹಾದೇವನು ಮತ್ತೆ ನೀರಿನಲ್ಲಿ ಬಿದ್ದನು. ಇದನ್ನು ಯಾರೂ ಗಮನಿಸಲೇ ಇಲ್ಲ. ದೋಣಿಯು ಹೊರಟೇ ಬಿಟ್ಟಿತು ಹಾಗೂ ಮಹಾದೇವನು ದ್ವಿಪದಲ್ಲೇ ಉಳಿದನು. ಅವನ ಕೂಗು ಹಾಗೂ ರೋದನವನ್ನು ದೋಣಿನಡೆಸುವವನಿಗೂ, ಇತರ ಪ್ರಯಾಣಿಕರಿಗೂ ಕೇಳಿಸಲೇ ಇಲ್ಲ.

ಆ ದ್ವೀಪವು ಒಂದು ಮರುಭೂಮಿಯಾಗಿತ್ತು, ಅಲ್ಲಿ ಯಾವುದೇ ಮಾನವ ಹಾಗೂ ಪ್ರಾಣಿಗಳ ಸುಳಿವು ಇರಲಿಲ್ಲ. ಎಲ್ಲೆಲ್ಲಿ ನೋಡಿದರೂ ಗಾಢಾಂಧಕಾರ. ಒಂದು ಕ್ಷಣ ಮಹಾದೇವನು ಹೆದರಿದನು ಹಾಗೂ ಗಿಡಗಳ ತೋಪಿನೆಡೆಗೆ ಹೋಗಲು ಯೋಚಿಸಿದನು. ಆದರೆ ತನ್ನ ತಂದೆ ತಾಯಿಗಳು ಮರಳಿ ಬಂದಾಗ ತಾನು ಅಲ್ಲಿಲ್ಲದಿದ್ದರೆ ಅವರು ಗಾಬರಿಯಾಗುವರೆಂದರಿತು, ಅಲ್ಲಿಗೆ ಹೋಗಲಿಲ್ಲ. ಅವನ ಕಣ್ಣುಗಳಿಂದ ಧಾರಾಕಾರವಾಗಿ ಕಣ್ಣೀರು ಸುರಿಯಿತು. ರಾತ್ರೆಯು ಮುಂದುವರೆಯುತ್ತಿದ್ದಂತೆ ಅವನಲ್ಲಿನ ಭಯವೂ ಹೆಚ್ಚಾಗತೊಡಗಿತು. ಆಗ ಮಹಾದೇವನು ಭಗವಾನರನ್ನು ಕುರಿತು ಪ್ರಾರ್ಥಿಸತೊಡಗಿದನು. ನಂತರ ಅಲ್ಲೇ ಒಂದು ಮರಳಿನ ದಿಬ್ಬದ ಮೇಲೆ ಕುಳಿತು ತನ್ನ ತಂದೆಯು ಉಪದೇಶಿಸಿದ್ದ ಗಾಯತ್ರಿ ಮಂತ್ರವನ್ನು ಜಪಿಸತೊಡಗಿದನು. ಕೆಲವೇ ಸಮಯದಲ್ಲಿ ಅವನು ಧ್ಯಾನದಲ್ಲಿ ಸಂಪೂರ್ಣವಾಗಿ ಮುಳುಗಿಹೋದನು. ಅವನ ಸುತ್ತ ಮರಳು ತುಂಬಿದ ಗಾಳಿಯು ಬೀಸತೊಡಗಿತು. ಆದರೆ ಮಹಾದೇವನು ಅಳಲೂ ಇಲ್ಲ ಹಾಗೂ ಅಲ್ಲಿಂದ ಚಲಿಸಲಿಲ್ಲ. ಹಸಿವು ಬಾಯಾರಿಕೆಗಳೂ ಮಹಾದೇವನನ್ನು ತಟ್ಟಲಿಲ್ಲ. ಮೂರನೇ ದಿನ ಮುಂಜಾನೆ ದೋಣಿಯು ಅಲ್ಲಿಗೆ ಮರಳಿ ಬಂದಿತು. ನಾಯನರು ಮಗನ ಧ್ಯಾನದಲ್ಲಿನ ಸ್ಥಿರತೆಯನ್ನು ಕಂಡು ದಂಗಾಗಿ ಹೋದರು. ಸತತವಾದ ಮರಳಿನಿಂದ ಕೂಡಿದ ಗಾಳಿಯಿಂದ ಮಹಾದೇವನ ಶರೀರದಮೇಲೆಲ್ಲಾ ಗಾಯಗಳಾಗಿತ್ತು. ನಾಯನರು ಮಗನನ್ನು ಮುಟ್ಟಿ ಅವನನ್ನು ಎಚ್ಚರಿಸಿದರು. ಮಹಾದೇವನು ತಂದೆಯನ್ನು ನೋಡಿ ಗಟ್ಟಿಯಾಗಿ ರೋಧಿಸಿದನು. ನಾಯನರು ಅವನಿಗೆ ಸೂಕ್ತವಾಗಿ ಸಮಾಧಾನ ಮಾಡಿ ಅನಂತರ ರೇಣುಕಾದೇವಿಯನ್ನು ತನ್ನ ಮಗನು ಮರಳಿ ಆರೋಗ್ಯವಂತನನ್ನಾಗಿ ಮಾಡೆಂದು ಪ್ರಾರ್ಥಿಸಿದರು. ಅವರು ಅಲ್ಲಿಂದ ದೋಣಿಯಲ್ಲಿ ಮತ್ತೆ ಗೋಕರ್ಣಕ್ಕೆ ಬಂದರು.

ನಾಯನರು ಗೃಹಸ್ಥರಾದರೂ ಅವರು ತಮ್ಮ ವಾಸಕ್ಕೆ ಹಾಗೂ ತಪಸ್ಸಿಗೆ ಗುಹೆ ಮತ್ತು ಬೆಟ್ಟಗುಡ್ಡಗಳನ್ನು ಅರಸುತ್ತಿದ್ದರು. ಬೇರೆ ತೀರ್ಥಯಾತ್ರಿಗಳಂತೆ ಧರ್ಮ ಛತ್ರಗಳಲ್ಲಿ ತಂಗಲು ಇಷ್ಟಪಡುತ್ತಿರಲಿಲ್ಲ. ಅವರು ಗೋಕರ್ಣದಲ್ಲಿ ಒಂದು ಪಾಳು ಬಿದ್ದ ಕೃಷ್ಣ ಮಂದಿರವನ್ನು ಕಂಡು ಅಲ್ಲೇ ಮೂವರೂ ಇರಲು ನಿರ್ಧರಿಸಿದರು. ಮಹಾದೇವನಿಗೆ

ಉಪನಯನವಾಗಿರುವುದರಿಂದ ಅವನು ಊರೊಳಗೆ ಹೋಗಿ ಭಿಕ್ಷೆಯೆತ್ತಿ ತಂದೆ ತಾಯಿಗಳಿಗೆ ಆಹಾರವನ್ನು ನೀಡುವಂತೆ ತಿಳಿಸಿದರು. ಮಹಾದೇವನು ಅದಕ್ಕೆ ಒಪ್ಪಿ ಊರೊಳಗೆ ಭಿಕ್ಷೆಯನ್ನು ನೀಡುವ ಮನೆಗಳು ಕೇವಲ ಮೂರೇ ಇದ್ದದ್ದರಿಂದ ಅಲ್ಲಿಂದ ಭಿಕ್ಷೆತಂದು ಕೊಡುತ್ತಿದ್ದನು.

ಒಂದು ದಿನ ಅಲ್ಲಿಗೆ ಒಬ್ಬ ವಿದ್ವಾಂಸನು ಬಂದು ನಾಯನರೊಂದಿಗೆ ಮಾತನಾಡುತ್ತಾ ಅವರು ಮಹಾನ್ ವಿದ್ವಾಂಸರೆಂದು ಅರಿತನು. ಈ ಸುದ್ದಿಯು ಊರೊಳಗೆಲ್ಲಾ ಕಾಡ್ಗಿಚ್ಚಿನಂತೆ ಹರಡಿತು. ಗೋಕರ್ಣದಲ್ಲಿ ಹೊಸಮನೆ ಶಾಸ್ತ್ರಿ ಎಂಬುವರು ಒಂದು ಸಂಸ್ಕೃತ ಶಾಲೆಯನ್ನು ನಡೆಸುತ್ತಿದ್ದರು. ಅಲ್ಲಿನ ಶಿಕ್ಷಕರು ಒಂದು ದಿನ ನಾಯನರನ್ನು ಭೇಟಿಯಾಗಿ, ಅವರನ್ನು ತಮ್ಮ ಶಾಲೆಗೆ ಆಹ್ವಾನಿಸಿದರು. ನಾಯನರು ಅವರ ಆಹ್ವಾನವನ್ನು ಅಂಗೀಕರಿಸಿದರು.

ವಿದ್ಯೆಯು ಎರಡು ವಿಧದ್ದು. ಒಂದು, ಪುಸ್ತಕಗಳನ್ನೋದಿ ಕಲಿಯುವುದು ಮತ್ತೊಂದು ಹೃದಯದ ಅರಿವಿನ ಮೂಲಕ ಕಲಿಯುವುದು. ನಾಯನರು ಇವೆರಡನ್ನೂ ಮಿಶ್ರಣ ಮಾಡಿ ಒಂದು ಶ್ಲೋಕದ ಮೂಲಕ ವಿವರಿಸಿದರು:

ಸ್ವಾಧೀನೇ ಹೃದಯೇ ವಾಣೀ ಸರ್ವಮರ್ಥಂ ಚ ಪಶ್ಯತಿ
ಮನಸಾ ರಂಜಿತಾ ವಾಣೀ ವ್ಯಷ್ಟೇರನುಭವಂ ಮಿತಮ್!!

"ಹೃದಯದ ಅರಿವಿನಿಂದ ಹೊರಬಂದ ಪದಗಳು ಎಲ್ಲವನ್ನೂ ತಿಳಿಸುತ್ತದೆ. ಅದು ಮನಸ್ಸಿನಿಂದ ಹೊರಬಂದಾಗ ಅದು ಆ ಮನುಷ್ಯನ ವೈಯುಕ್ತಿಕ ಅನುಭವಗಳಿಗೆ ಸೀಮಿತವಾಗಿರುತ್ತದೆ."

ಹೀಗೆ, ಯಾರು ತನ್ನ ಬುದ್ಧಿಯು ಹೃದಯದೊಂದಿಗೆ ಸಂಪರ್ಕ ಹೊಂದಿ ಅದರ ಮೂಲಕ ಮಾತನಾಡುವನೋ ಅವನೇ ವಿದ್ವಾಂಸನು. ಅವನೇ ನಿಜವಾದ ಜ್ಞಾನಿಯು ಹಾಗೂ ಕವಿಯು.

ಗೋಕರ್ಣದಲ್ಲಿ ಅನಂತ ಶಾಸ್ತ್ರಿಯು ಹೆಸರಾಂತ ವಿದ್ವಾಂಸರು ಹಾಗೂ ವಿಷ್ಣುವಿನ ಪರಮ ಭಕ್ತ. ಅವರು ವಿಷ್ಣುತತ್ತ್ವದ ಬಗ್ಗೆ ಪ್ರವಚನ ಮಾಡಲು ನಿಪುಣರು. ಒಂದು ದಿನ ಅವರು ನಾಯನರೊಂದಿಗೆ ಚರ್ಚಿಸುತ್ತಿದ್ದಾಗ ಇಂದ್ರತತ್ತ್ವದ ಬಗ್ಗೆ ನಾಯನರು ವಿವರಿಸುತ್ತಿರುವಾಗ ಅನಂತ ಶಾಸ್ತ್ರಿಗಳಿಗೆ ನಾಯನರ ವಿದ್ವತ್ತಿನ ಹಾಗೂ ಪ್ರವಾಹದೋಪಾದಿಯಲ್ಲಿ ಅವರ ಬಾಯಿಯಿಂದ ಹೊರಬರುತ್ತಿದ್ದ ವಾಗ್ಝರಿಯನ್ನು ಎದುರಿಸಲು ಅಸಾಧ್ಯವಾಯಿತು. ನಾಯನರು ವೇದ ವಾಸಿಷ್ಠರಂತೆ ಮಹಾನ್ ಋಷಿಗಳೆಂದು ಅರಿವಾಗಿ ತಮ್ಮ ಸೋಲನ್ನೊಪ್ಪಿಕೊಂಡು ಅವರ ಶಿಷ್ಯರಾದರು.

ಗೋಕರ್ಣದ ವಿದ್ವಾಂಸರಿಗೆ ನಾಯನರು ಜ್ಯೋತಿಷ್ಯ ಶಾಸ್ತ್ರ ಪ್ರವೀಣರೆಂದು ಅರಿವಾಗಿ ಅವರಲ್ಲಿ ಬಂದು ತಮಗೆ ಜ್ಯೋತಿಷ್ಯ ಶಾಸ್ತ್ರದ ಸೂಕ್ಷ್ಮತೆಗಳನ್ನು ಕಲಿಸುವಂತೆ ಕೇಳಿಕೊಂಡರು.

ನಾಯನರು ತಮ್ಮದೇ ಆದ ರೀತಿಯಲ್ಲಿ ಕಲಿಸಲು ಒಪ್ಪಿಕೊಂಡರು. ಅವರು ತಮ್ಮ ತಪಸ್ಸನ್ನು ಸ್ವಲ್ಪ ದಿನಗಳ ಮಟ್ಟಿಗೆ ನಿಲ್ಲಿಸಿ ಜ್ಯೋತಿಷ್ಯವನ್ನು ಹೇಳಿಕೊಡಲು ಪ್ರಾರಂಭಿಸಿದರು. ಆ ಸಂದರ್ಭದಲ್ಲಿ ಅವರು – ತ್ರಿಭಾವ ಫಲ ಚಂದ್ರಿಕಾ, ನಿರ್ಣಯ ಸಂಗ್ರಹ ಮತ್ತು ಲಘು ಸಂಹಿತ, ಇತ್ಯಾದಿ ಗ್ರಂಥಗಳನ್ನು ರಚಿಸಿದರು.

ನಾಯನರು ಈ ರೀತಿ ಪಾಠಪ್ರವಚನದಲ್ಲಿ ಮೂರು ತಿಂಗಳುಗಳ ಕಾಲ ಕಳೆದ ನಂತರ ಒಂದು ದಿನ ಅವರಿಗೆ ತಮ್ಮ ಊರಿನಿಂದ ಅವರ ತಂದೆಯವರ ಅನಾರೋಗ್ಯದ ಬಗ್ಗೆ ಒಂದು ತಂತಿವಾರ್ತೆಯು ಬಂದಿತು. ಕೂಡಲೇ ಅವರು ಸಂಸಾರ ಸಮೇತ ಕಲುವರ್ಕೈಗೆ ಪಯಣಿಸಿದರು.

೨೪

ತಂದೆಯ ಅವಸಾನ

ತಪೋನಿರ್ಧೂತಪಾಪ್ಮಾನಃ ತಥಾತಥ್ಯಾಭಿಧಾಯಿನಃ

ವೇದವೇದಾಂಗತತ್ತ್ವಜ್ಞಾಃ ಋಷಯಃ ಪರಿಕೀರ್ತಿತಾಃ ॥

"ಯಾರು ತಮ್ಮ ತಪಸ್ಸಿನ ಮೂಲಕ ಪಾಪಗಳನ್ನು ತೊಳೆಯುತ್ತಾರೋ, ಯಾರು ಸದಾ ಸತ್ಯವನ್ನೇ ನುಡಿಯುತ್ತಾರೋ, ಯಾರಿಗೆ ವೇದ ವೇದಾಂಗಗಳ ಸಾರವು ತಿಳಿದು ಅದರಂತೆ ನಡೆದುಕೊಳ್ಳುವರೋ ಅವರೇ ಋಷಿಗಳೆಂದು ಪ್ರಶಂಶಿಸಲ್ಪಡುತ್ತಾರೆ"

ನಾಯನರ ಕೆಳಗೆ ಕಲಿಯುವ ಸಾಧಕರಿಗೆ ಸದಾ ಕೂಡಲೇ ಫಲವು ದೊರಕುತ್ತಿತ್ತು. ಇದು ಏಕೆಂದರೆ ನಾಯನರ ನೋಟ ಹಾಗೂ ಮಾತುಗಳಲ್ಲಿ ಅಪಾರವಾದ ಶಕ್ತಿಯಿರುತ್ತಿತ್ತು. ಅವರು ಎಲ್ಲೇ ಹೋದರೂ ಅಕಾಶಗಾಮಿಗಳು ಅವರೊಂದಿಗೆ ನಡೆಯುತ್ತಿದ್ದರು. ನಾಯನರ ತಂದೆ, ನೃಸಿಂಹಶಾಸ್ತ್ರಿಗಳು ಅವರಿಗೆ ಅತ್ಯಂತ ಶಕ್ತಿಯುತವಾದ ಮಂತ್ರವನ್ನು ಉಪದೇಶಿಸಿ ಅದರ ಮೂಲಕ ನಾಯನರು ದೈವೀ ಮಾತೆಯನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಾಯಿತು. ಶಾಸ್ತ್ರಿಗಳೇ ಸ್ವತಃ ದೇವಿಯ ಆರಾಧಕರಾಗದೇ ಇದ್ದಿದ್ದರೆ ಅವರು ತಮ್ಮ ಮಗನಿಗೆ ಈ ರೀತಿಯ ಶಕ್ತಿಶಾಲಿ ಮಂತ್ರವನ್ನು ಉಪದೇಶಿಸಲು ಸಾಧ್ಯವಾಗುತ್ತಿರಲಿಲ್ಲ.

ನೃಸಿಂಹ ಶಾಸ್ತ್ರಿಗಳು ರಮಣ ಮಹರ್ಷಿಯವರ ದರ್ಶನವನ್ನು 1910ರಲ್ಲೇ ಪಡೆದಿದ್ದರು. ಈ ಇಬ್ಬರು ಗುರುಗಳ ಮಧ್ಯೆ ಸಂಪೂರ್ಣವಾದ ನಿಃಶಬ್ದವು ಮನೆಮಾಡಿತ್ತು. ನೃಸಿಂಹ ಶಾಸ್ತ್ರಿಗಳು ಭಗವಾನರ ಆಶೀರ್ವಚನವನ್ನು ಬೇಡಿದರು ಹಾಗೂ ಪಡೆದರು.

1912ರ ವರೆಗೂ ನೃಸಿಂಹ ಶಾಸ್ತ್ರಿಗಳು ದೈವೀ ಮಾತೆಯನ್ನು ಪೂಜಿಸುತ್ತಿದ್ದರು. ಅಲ್ಲಿಂದ ಅವರಿಗೆ ಪದೇ ಪದೇ ಜ್ವರವು ಬರುತ್ತಿತ್ತು. ಅದಾದನಂತರ ನಾಯನರಿಗೆ ತಮ್ಮ ತಂದೆಯವರ ಅನಾರೋಗ್ಯದ ಬಗ್ಗೆ ತಂತಿ ವರ್ತಮಾನವು ಬಂದಿತು. ಅಲ್ಲಿಂದ ಕಲುವರ್ರೈ ತಲುಪಲು ಒಂದು ವಾರ ಹಿಡಿಯಿತು. ನಾಯನರ ಹಿರಿಯ ಸಹೋದರ ಭೀಮಾಶಾಸ್ತ್ರಿ ಹಾಗೂ ಕಿರಿಯ ಸಹೋದರ ಶಿವರಾಮ ಶಾಸ್ತ್ರಿಗಳು ತಂದೆಯವರನ್ನು ನೋಡಿಕೊಳ್ಳುತ್ತಿದ್ದರು. ನಾಯನರು ಮನೆಗೆ ಬರುವ ಮೊದಲೇ, ಡಿಸೆಂಬರ್ 5, 1912ರಂದು ಅವರ ತಂದೆಯವರು ದೈವಾಧೀನರಾದರು. ನಾಯನರು ತಾವು ತಮ್ಮ ತಂದೆಯವರ ಸಾವಿಗೆ ಮೊದಲೇ ಅವರನ್ನು ನೋಡಲಾಗಲಿಲ್ಲವೆಂದು ಅತೀವವಾಗಿ ದುಃಖಿತರಾದರು, ಆದರೆ, ಎಲ್ಲ ಸಂದರ್ಭದಲ್ಲೂ ಭಗವಂತನ ಇಚ್ಛೆಯೇ ಮೇಲುಗೈ ಸಾಧಿಸುತ್ತದೆಂಬುದನ್ನು ಅರಿತರು

ಭಾಗ – ೩

೧

ಮಹಾನ್ ಯಜ್ಞದ ಕಾರ್ಯನಿರ್ವಹಣೆ

"ಆತ್ಮವನ್ನು ನೆನಪಿಸಿಕೊಳ್ಳುವುದೆಂದರೆ ದೋಷಾತೀತವಾಗಿರುವುದು

ಆತ್ಮವನ್ನು ಮರೆಯುವುದೆಂದರೆ ದೋಷಪೂರಿತರಾಗಿರುವುದು.

ನೆನಪಿಸಿಕೊಳ್ಳುವುದು ಅತ್ಯಂತ ಉಪಯುಕ್ತ ವಿಚಾರ.

ಹರಿ ಹಯನೇ! ಯಾರು ನಿನ್ನನ್ನು ಸತತವಾಗಿ ನೆನಪಿಸಿಕೊಳ್ಳುವರೋ

ಅವರು ನಿನ್ನನ್ನು ತಲುಪುತ್ತಾರೆ.

ನಿನ್ನನ್ನು ತಲುಪುವುದು ಎಂದರೆ ನಿನ್ನಲ್ಲಿ ಒಂದಾಗುವುದು.

ಆತ್ಮವನ್ನು ಹಿಡಿದಿಟ್ಟುಕೊಳ್ಳುವುದೇ ತಪಸ್ಸು.

ಆತ್ಮವನ್ನು ಕಳೆದುಕೊಳ್ಳುವುದೇ ಪ್ರಾಪಂಚಿಕತೆ.

ಆತ್ಮದೊಂದಿಗೆ ಅಲೋಚನಾರಹಿತ ಸ್ಥಿತಿಯಲ್ಲಿರುವುದೇ ನಿನ್ನೊಳಗೆ ಇರುವ ಮಹಾನ್

ಸ್ಥಿತಿ, ಓ ಇಂದ್ರನೇ!"

– ಗಣಪತಿ ಮುನಿ

"ಇಂದ್ರನನ್ನು ಪೂಜಿಸಿ, ವೇದವನ್ನು ಅಧ್ಯಯನಮಾಡಿ", ಇದು ಒಂದು ಮಹಾನ್ ಆಣತಿ. ಗೋಕರ್ಣದ ವಿದ್ವಾಂಸರಿಗೆ ಈ ಪಥವನ್ನು ನಾಯನರು ಬೋಧಿಸಿದರು. ಪ್ರಪಂಚದ ಸೃಷ್ಟಿಕರ್ತನೇ ಇಂದ್ರ, ಪ್ರಪಂಚದಲ್ಲಿನ ಎಲ್ಲ ಜೀವಿಗಳಲ್ಲಿನ ಉಜ್ವಲತೆಯಿಂದ ಹೊಳೆಯುವ ಆತ್ಮವೇ ಇಂದ್ರನು. ಅವನು ದೇವತೆಗಳ ರಾಜ ಹಾಗೂ ಯಜ್ಞದೇವತೆ ಕೂಡಾ. ದೇವತೆಗಳ ಋಣವನ್ನು ಯಜ್ಞಾಚರಣೆಯ ಮೂಲಕ ತೀರಿಸಬಹುದೆಂದು ಧರ್ಮಗ್ರಂಥಗಳು ತಿಳಿಸುವುದು. ಜೀವನ, ಮನಸ್ಸು ಹಾಗೂ ಇಂದ್ರಿಯಗಳನ್ನು ದೇವತೆಗಳೇ ನಮಗೆ ನೀಡಿರುವರು. ಹಾಗಾಗಿ ಇವುಗಳು ಅವರ ಪ್ರಕಟೀಕರಣ. ಅವರಿಗೇ ಅವುಗಳನ್ನು ಸಮರ್ಪಿಸುವುದು

ನಮ್ಮ ಕರ್ತವ್ಯ. ಈ ವಿಧದ ಅರ್ಪಣೆಯನ್ನು ಸರ್ವಸಮರ್ಪಣೆ ಎಂದು ಕರೆಯಬಹುದು. ಶರಣಾಗತಿ ಹಾಗೂ ಆತ್ಮದರಿವು ಎರಡು ವಿಧದ ಸಮರ್ಪಣೆ. ಯೋಗಿಗಳ ಮಾರ್ಗದಲ್ಲಿ ಅವರ ಅಂತರಾರ್ಪಣೆಯೇ ಈ ವಿಧದ ಯಜ್ಞ, ಅದು ವೇದಾಧ್ಯಯನದ ಮೂಲಕವೂ ಸಾಧ್ಯವಾಗುವುದು. ಎಲ್ಲರಲ್ಲಿಯೂ ಹೊಳೆಯುತ್ತಿರುವ ಆತ್ಮನಂತಿರುವ ಇಂದ್ರನನ್ನು ಪೂಜಿಸಿ. ಅಂತರಂಗವನ್ನು ಮಥಿಸುವುದರ ಮೂಲಕ ಹಾಗೂ ವೇದಗಳನ್ನು ವಿಶ್ಲೇಷಿಸುವುದರ ಮೂಲಕ ಪರಮಸತ್ಯವನ್ನು ತಲುಪಬಹುದು."

ಗೋಕರ್ಣಕ್ಕೆ ಮರಳಿ ಬಂದನಂತರ ನಾಯನರು ಅಲ್ಲಿ ವಾಸಿಸುತ್ತಿದ್ದ ವಿದ್ವಾಂಸರಿಗೆ ಈ ಸತ್ಯವನ್ನು ಅರಿವುಂಟು ಮಾಡಿದರು.

ಗೋಕರ್ಣದ ಒಂದು ತುದಿಯಲ್ಲಿ ಉಮಾಮಹೇಶ್ವರ ಎಂದು ಕರೆಯುವ ಬೆಟ್ಟವೊಂದಿದೆ. ಅಲ್ಲಿ ಸುಂದರ ಉದ್ಯಾನವನದಿಂದ ಸುತ್ತುವರೆದಿರುವ ಒಂದು ವಿನಾಯಕನ ಮಂದಿರವಿರುವುದು. ನಾಯನರು ತಮ್ಮ ಸಂಸಾರದೊಂದಿಗೆ ಮರಳಿ ಗೋಕರ್ಣಕ್ಕೆ ಬಂದಾಗ ಈ ಸ್ಥಳವನ್ನು ತಮ್ಮ ನಿವಾಸಕ್ಕೆ ಆರಿಸಿಕೊಂಡರು. ಇಲ್ಲಿ ಅವರು "ವೇದಕೋಶ ಮಂಥನ" ಎಂಬ ಯಜ್ಞವನ್ನು ಪ್ರಾರಂಭಿಸಿದರು. ಈ ಯಜ್ಞದ ಪ್ರಕ್ರಿಯೆಗಳೆಂದರೆ ವೇದಗಳ ವಿಶ್ಲೇಷಣೆ, ದೇವತೆಗಳಿಗೆ ನಮ್ಮ ಋಣವನ್ನು ಖಾತರಿಪಡಿಸುವುದು ಹಾಗೂ ಅಗ್ನಿಯ ಅನೇಕ ಅಂಶಗಳನ್ನು ವಿವರಿಸುವುದು. ನಾಯನರು ಹಾಗೂ ಅವರ ಪತ್ನಿ ವಿಶಾಲಾಕ್ಷಮ್ಮ (ಅಮ್ಮ) ಹಗಲು ವೇಳೆ ಧ್ಯಾನದಲ್ಲಿರುತ್ತಿದ್ದರು. ಸಂಜೆಯ ಹೊತ್ತು ವಿದ್ವಾಂಸರು ಸೇರಿ ಚರ್ಚಾಕೂಟವನ್ನೇರ್ಪಡಿಸುತ್ತಿದ್ದರು. ಮೊದಲಿನಂತೆ ಮಹಾದೇವನು ಊರೊಳಗೆ ಹೋಗಿ ಬಹುತೇಕವಾಗಿ ಅಕ್ಕಿ ಬೇಳೆಗಳಿಂದ ಕೂಡಿದ ಭಿಕ್ಷೆಯನ್ನು ತರುತ್ತಿದ್ದ. ಅಮ್ಮನು ಅದರಿಂದ ಅಡಿಗೆ ತಯಾರಿಸುತ್ತಿದ್ದರು. ಸ್ವಲ್ಪ ದಿನಗಳ ನಂತರ ವಿಶಾಲಾಕ್ಷಿಯು ಮಹಾದೇವನಿಗೆ ಈ ಕೆಲಸವು ಆಯಾಸದಾಯಕವಾದುದೆಂದು ಯೋಚಿಸಿ, ಬೇರೆ ಯಾರಾದರೂ ಒಬ್ಬ ವಿದ್ಯಾರ್ಥಿಯು ಮಹಾದೇವನಿಗೆ ಸಹಾಯಕನಾದರೆ ಒಳ್ಳೆಯದೆಂದು ನಾಯನರಿಗೆ ಸೂಚಿಸಿದರು.

ಮಹಾತ್ಮರ ಅಲೋಚನೆಗಳಲ್ಲಿ ಸದಾ ಏನಾದರೊಂದು ದೈವೀ ಉದ್ದೇಶವಿದ್ದೇ ಇರುತ್ತದೆ. ಗೋಕರ್ಣ ವಿದ್ಯಾಪೀಠವನ್ನು ಗಣೇಶ ಶಾಸ್ತ್ರಿ ಎಂಬುವವರು ಪ್ರಾರಂಭಿಸಿದ್ದರು. ಅವರಿಗೆ "ಹೊಸ್ಮನೆ" ಎಂಬ ಬಿರುದನ್ನು ನೀಡಲಾಗಿತ್ತು. ವಿಘ್ನೇಶ್ವರ ಭಡತಿ ಎಂಬುವರು ಅವರ ಅಳಿಯ. ಅವರು ಮೇಧಾವಿ, ಬುದ್ಧಿವಂತ ಹಾಗೂ ನಮ್ರ ಯುವಕ ಮತ್ತು ಅವರನ್ನು ಗಣೇಶಭಟ್ ಎಂದೂ ಕರೆಯುತ್ತಿದ್ದರು. ಆತನು ವಿದ್ಯಾಪೀಠವನ್ನು ಅತ್ಯಂತ ಶ್ರೇಷ್ಠಮಟ್ಟದಲ್ಲಿ ನಡೆಸಬೇಕೆಂಬ ಕನಸನ್ನು ಕಂಡಿದ್ದನು. ಆ ಕನಸನ್ನು ನನಸು ಮಾಡಲು ಮೊದಲಿಗೆ ಅವನು ಸ್ವತಃ ವಿದ್ಯಾವಂತನಾಗಬೇಕಿತ್ತು. ಅವನು ಮೊದಲಿಗೆ ವೇದಾಧ್ಯಯನವನ್ನು ಮುಗಿಸಿ ನಂತರ ಕಾವ್ಯವನ್ನು ಅಧ್ಯಯನ ಮಾಡಿದನು. ರಾಮದಾಸ ಎಂಬ ಗುರುಗಳಿಂದ

ಮಂತ್ರದೀಕ್ಷೆಯನ್ನು ಪಡೆದು ನಂತರ ಹಠಯೋಗವನ್ನು ಕಲಿತು, ಆಗಾಗ್ಗೆ ಧ್ಯಾನವನ್ನೂ ಮಾಡುತ್ತಿದ್ದನು. ನಾಯನರ ಆಗಮನದ ನಂತರ ಗಣೇಶಭಟ್ಟನ ಈ ಕ್ಷೇತ್ರದಲ್ಲಿನ ಬೆಳವಣಿಗೆಯು ಕ್ಷಿಪ್ರಗತಿಯಲ್ಲಿ ಮುಂದುವರೆಯತೊಡಗಿತು. ಶ್ರೀ ರಮಣ ಮಹರ್ಷಿಗಳು ಯಾವಾಗಲೂ, "ಮೊದಲು ನೀನು ಧ್ಯಾನ ಮಾಡು ಅನಂತರ ಸೂಕ್ತಸಮಯದಲ್ಲಿ ಗುರುವು ತಾನಾಗಿಯೇ ನಿನ್ನನ್ನು ಹರಸಲು ನಿನ್ನ ಬಳಿ ಬರುವರು. ಅವರನ್ನು ಹುಡುಕಿಕೊಂಡು ಅಲೆಯಬೇಕಿಲ್ಲ," ಎಂಬುದಾಗಿ ಹೇಳುತ್ತಿದ್ದರು. ಗಣೇಶಭಟ್ಟನ ವಿಷಯದಲ್ಲೂ ಹಾಗೇ ಆಯಿತು. ಇದು ಆಗುವುದಕ್ಕೆ ವಿಶಾಲಾಕ್ಷಿಯ (ಅಮ್ಮನ) ಸಲಹೆಯು ಪ್ರೇರಣೆಯಾಯಿತು.

ಒಂದು ದಿನ ನಾಯನರು ತಮ್ಮ ಶಿಷ್ಯರಿಗೆ ಯಾರಾದರೊಬ್ಬನು ಮಹಾದೇವನಿಗೆ ಸಹಾಯಮಾಡಲು ಬೇಕೆಂದು ತಿಳಿಸಿದರು. ಕೂಡಲೇ ಗಣೇಶಭಟ್ಟನು ಮುಂದೆ ಬಂದು ಸಾಂಪ್ರದಾಯಿಕ ರೀತಿಯಲ್ಲಿ ತನ್ನ ಪ್ರವರವನ್ನು ಹೇಳಿಕೊಂಡು ಪರಿಚಯ ಮಾಡಿಕೊಂಡು ನಾಯನರ ಪಾದಮುಟ್ಟಿ ನಮಸ್ಕರಿಸಿದನು. ಅತ್ಯಂತ ಸಂತೋಷದಿಂದ ನಾಯನರು ಅವನನ್ನು ಮೇಲೆತ್ತಿ ಅವನ ಹಣೆಗೆ ಮುತ್ತನ್ನು ಕೊಟ್ಟರು. ನಾಯನರು ಅವನ ತಲೆಯನ್ನು ಮುಟ್ಟಿದ ಕೂಡಲೇ ಅವನ ಶರೀರದಾದ್ಯಂತ ವಿದ್ಯುತ್ ಸಂಚಾರವಾಗಿ ಅವನು ಹರ್ಷದಿಂದ ಪುಳಕಿತನಾದನು. ನಾಯನರು ಅವನು ಮುಂದೆ ಮಹಾನ್ ಯೋಗಿಯಾಗುವ ಎಲ್ಲ ಲಕ್ಷಣಗಳನ್ನೂ ಮನಗಂಡು ಅವನನ್ನು ಆ ಕ್ಷಣದಿಂದಲೇ ದೈವರಾತ ಎಂದು ಕರೆಯತೊಡಗಿದರು ಹಾಗೂ ಅದೇ ಅವನ ಶಾಶ್ವತವಾದ ಹೆಸರಾಯಿತು.

ಸಹ್ಯಾದ್ರಿ ಕಣಿವೆಯಲ್ಲಿನ ನಾಲ್ಕು ಕಿಲೋ ಮೀಟರ್ ದೂರದಲ್ಲಿ ಸಮುದ್ರ ತೀರದಲ್ಲಿ ಸಣ್ಣಬೆಳ ಎಂಬ ಸಣ್ಣ ಹಳ್ಳಿಯಿದೆ. ಗೋಕರ್ಣದ ಧರ್ಮಪರಿಷತ್ತು ಈ ಹಳ್ಳಿಯಲ್ಲಿ ಯಜ್ಞವೊಂದನ್ನು ನಡೆಸಲು ಯೋಜಿಸಿತ್ತು. ಆ ಯಜ್ಞವನ್ನು ನಡೆಸುವವರಿಗೆ ನಾಯನರು ಮಹಾ ತಪಸ್ವಿಗಳೆಂದು ಗೊತ್ತಿದ್ದರಿಂದ ಅವರನ್ನು ಯಜ್ಞದ ಅಧ್ಯಕ್ಷರಾಗುವಂತೆ ವಿನಂತಿಸಿಕೊಂಡರು. ಅವರ ವಾಸಕ್ಕೆ ಆ ಹಳ್ಳಿಯಲ್ಲಿ ಒಂದು ಆಶ್ರಮವನ್ನು ಕಟ್ಟಿಸಲಾಯಿತು. ಯಜ್ಞಕಾರ್ಯವು ಪ್ರಾರಂಭವಾದಾಗ ನಾಯನರನ್ನು ವೇದ ಬ್ರಾಹ್ಮಣರು ಮಂತ್ರ ಸಮೇತವಾಗಿ ಪೂರ್ಣಕುಂಭ ಸ್ವಾಗತದೊಂದಿಗೆ ಬರಮಾಡಿಕೊಂಡರು. ಈ ಯಜ್ಞವು ಅತಿದೊಡ್ಡ ಯಜ್ಞವಾದ್ದರಿಂದ ದೂರ ಪ್ರದೇಶಗಳಿಂದ ಅನೇಕ ವಿದ್ವಾಂಸರು ಆಗಮಿಸಿದ್ದರು. ವೆಲ್ಲೂರಿನಿಂದ ಅಪ್ಪುಶಾಸ್ತ್ರಿ ಹಾಗೂ ಕಲ್ಯಾಣಶಾಸ್ತ್ರಿಗಳೂ ಬಂದರು. ಆದರೆ ದೈವ ಸಂಕಲ್ಪದಂತೆ ಅಪ್ಪುಶಾಸ್ತ್ರಿಗಳು ಜಾಂಡೀಸ್ ಖಾಯಿಲೆಯೊಂದಿಗೆ ಬಂದರು.

ನಾಯನರು ಆಶ್ರಮವನ್ನು ಪ್ರವೇಶಿಸುತ್ತಿದ್ದಂತೆ ಅವರು ಸ್ಥಳೀಯ ಗ್ರಾಮ ದೇವತೆಯಾದ ವನದೇವತೆಯನ್ನು ಪ್ರಾರ್ಥಿಸಿದರು. ಕೂಡಲೇ ವನದೇವತೆಯು ಅವರ ಮುಂದೆ ಪ್ರತ್ಯಕ್ಷಳಾದಳು. ನಾಯನರು ದೇವತೆಯನ್ನು ಯಜ್ಞಕಾರ್ಯವು ಸುಗಮವಾಗಿ ನಡೆಸಿಕೊಡುವಂತೆ ಹಾಗೂ ಅವಳೇ ಅನ್ನಪೂರ್ಣೆಯಾಗಿ ಯಜ್ಞಕ್ಕೆ ಬಂದವರಿಗೆಲ್ಲರಿಗೂ ಸಾಕಷ್ಟು ಆಹಾರವನ್ನು

ಕರುಣಿಸುವಂತೆ ಪ್ರಾರ್ಥಿಸಿದರು. ದೇವಿಯು ನಾಯನರೆಡೆಗೆ ಮಂದಹಾಸದ ದೃಷ್ಟಿಯನ್ನು ಬೀರಿದಳು. ಮಾರನೇ ದಿನ ಮುಂಜಾನೆಯೇ ವನದುರ್ಗ ದೇವಿಯು ಅಮ್ಮನ ಮುಂದೆ ಒಬ್ಬ ವಯಸ್ಸಾದ ಹೆಂಗಸಿನ ರೂಪದಲ್ಲಿ ಬಂದು ಕೆಲವು ಪತ್ರೆಗಳನ್ನು ಕೊಟ್ಟು ಅದರ ರಸವು ಅಪ್ಪುಶಾಸ್ತ್ರಿಗಳ ಜಾಂಡೀಸ್ ಖಾಯಿಲೆಯನ್ನು ಗುಣಪಡಿಸುವುದೆಂದು ತಿಳಿಸಿದಳು. ಅವಳ ಸೂಚನೆಯಂತೆ ಅಮ್ಮನು ಆ ಪತ್ರೆಯ ರಸವನ್ನು ಕೆಲವು ದಿನ ನೀಡಿದ ಮೇಲೆ ಅಪ್ಪುಶಾಸ್ತ್ರಿಗಳು ಗುಣಮುಖರಾದರು.

1913ರ ಫಾಲ್ಗುಣ ಮಾಸದಲ್ಲಿ ಯಜ್ಞ ಕಾರ್ಯಗಳು ಒಂದು ಸಾವಿರ ಹೋತೃಗಳ ಹಾಗೂ ಮೂರು ಸಾವಿರ ಸಹಾಯಕರ ಸಮ್ಮುಖದಲ್ಲಿ ಪ್ರಾರಂಭವಾಯಿತು. ನಾಯನರು ಯಜ್ಞ ಕಾರ್ಯಗಳಿಗೆ ಸೂಕ್ತ ಮಾರ್ಗದರ್ಶನಗಳನ್ನು ನೀಡಿದರು. ಬಂದ ಅತಿಥಿಗಳಿಗೆ ಭೂರಿ ಭೋಜನದ ವ್ಯವಸ್ಥೆಗಳನ್ನು ಮಾಡಲಾಗಿತ್ತು. ವಿದ್ವಾಂಸರಿಂದ ಚರ್ಚೆಗಳನ್ನು ನಡೆಸಿಕೊಡಲಾಯಿತು. ನಾಯನರ ಭಾಷಣವು ಸರ್ವರನ್ನೂ ಪುಳಕಿತರನ್ನಾಗಿಸಿತು. ಎಲ್ಲರೂ ದೈವೀ ಅನುಭವವನ್ನು ಪಡೆದರು.

ಈ ಯಜ್ಞವು ನಾಯನರು ಪ್ರಾರಂಭಿಸಿದ್ದ ವೇದಕೋಶ ಮಂಥನ ತಪಸ್ಸಿಗೆ ಅಂತಿಮ ಕೊಡುಗೆಯಾಗಿ ಪರಿಣಮಿಸಿತು. ನಾಯನರು ವೇದಗಳಲ್ಲಿನ ಯೋಗವಿದ್ಯೆ ಮತ್ತು ಅದರ ರಹಸ್ಯಾರ್ಥಗಳನ್ನೊಳಗೊಂಡ "ಯೋಗಸಾರ ಗೀತಮ್" ಎಂಬ ಕೃತಿಯನ್ನು ರಚಿಸಿದರು.

ಬಹುಳಯೋಗಿ ವಾಙ್ಮಧನತೋಽಮೃತಮ್
ಅನುಭವಕ್ಷಮಂ ತದಿದ ಮಾಹೃತಮ್ ॥"

"ಅನೇಕ ಋಷಿಮುನಿಗಳ ಘೋಷಣೆಗಳ ಸಾರವನ್ನು ಯೋಗಸಾರದ ಅಮೃತವನ್ನು ನಿನಗೆ ನೀಡುತ್ತಿರುವೆ. ನೀನು ಅದನ್ನು ಅನುಭವಕ್ಕೆ ತಂದುಕೊಳ್ಳಬಹುದಾಗಿದೆ.."

ಮೇಲಿನ ಶ್ಲೋಕವನ್ನು ಹೇಳುತ್ತಿದ್ದಂತೆ ನಾಯನರು ಮೌನಿಗಳಾದರು. ನೆರೆದಿದ್ದ ಸಭಾಸದರು ವ್ಯಕ್ತಿಗತ ಕಾವ್ಯಕಂಠ ಗಣಪತಿ ಮುನಿಗಳಲ್ಲಿ ವೇದ ವಸಿಷ್ಠರ ವೈಭವವನ್ನು ಕಂಡರು. ಚೈತ್ರ ಶುಕ್ಲ ಪಕ್ಷದ ಹತ್ತನೇ ದಿನ ಮಹಾನ್ ಯಜ್ಞವು ಸಮಾಪ್ತಿಯಾಯಿತು.

೨

ಸಮತತ್ತ್ವ ದರ್ಶಿನಿ

ಸಂಕರ್ಷಣಸ್ಯಾಂಶಮನನ್ಯಶಕ್ತಿಂ ಅನಂತನಾಮಾನ ಮಮುಂ ನಮಾಮಿ
ರಾಮಂ ತೃತೀಯಂ ರಮಣೀಯಗಾತ್ರಂ ರಮಾನಿವಾಸಾನನುಪುಂಡರೀಕಮ್ ॥
– ತತ್ತ್ವ ಘಂಟಾ ಶತಕಮ್

"ಸಂಕರ್ಷಣನ ಭಾಗಶಃ ಅವತಾರವಾದ, ಅಪಾರವಾದ ಶಕ್ತಿಯುಳ್ಳ, ಅನಂತನ ಹೆಸರಿನ, ಸುಂದರ ಶರೀರವುಳ್ಳ ಮತ್ತು ಲಕ್ಷ್ಮೀದೇವಿಯ ವಾಸಸ್ಥಳವಾದ ಕಮಲ ಪುಷ್ಪದಂತೆ ಮುಖವುಳ್ಳ ಬಲರಾಮನಿಗೆ ನಮಸ್ಕರಿಸುವೆ."

ನಾಯನರು ಶ್ರೀ ರಮಣರನ್ನು ಗುರುಗಳೆಂದು ಸ್ವೀಕರಿಸಿ ಅರುಣಾಚಲದಲ್ಲಿ ಇದ್ದಾಗ, ಶೈವಸಿದ್ಧಾಂತ ಸಭೆಯು ಅರುಣಾಚಲದಲ್ಲಿ ಒಂದು ಅತಿ ದೊಡ್ಡ ಸಭೆಯನ್ನು ನಡೆಸಿತು. ಅದರ ಅಧ್ಯಕ್ಷತೆಯನ್ನು ವಹಿಸಬೇಕೆಂದು ಅವರು ನಾಯನರಲ್ಲಿ ಪ್ರಾರ್ಥಿಸಿಕೊಂಡರು. ನಾಯನರು ಎಂದೂ ಯಾವ ಕೋರಿಕೆಗಳಿಗೂ ಇಲ್ಲ ಎಂದವರಲ್ಲ. ಹಾಗಾಗಿ ಅವರು ಕೂಡಲೇ ತಮ್ಮ ಒಪ್ಪಿಗೆಯನ್ನು ಸೂಚಿಸಿದರು. ಇಡೀ ನಗರದಲ್ಲಿ ಈ ಸುದ್ದಿಯನ್ನು ಪ್ರಚಾರ ಮಾಡಲಾಯಿತು.

ಹಿಂದೂ ಧರ್ಮದಲ್ಲಿ ದ್ವೈತ, ವಿಶಿಷ್ಟಾದ್ವೈತ, ಅದ್ವೈತ, ಶೈವ, ವೈಷ್ಣವ, ಇತ್ಯಾದಿ ಧರ್ಮ ಪಂಥಗಳಿವೆ. ಎಲ್ಲ ಧರ್ಮ ಪಂಥಗಳೂ ಕಟ್ಟ ಕಡೆಗೆ ಬೋಧಿಸುವುದೇನೆಂದರೆ ದೇವನೊಬ್ಬನೇ ಎಂಬುದಾಗಿ. ಇದು ಆಯಾಯ ಧರ್ಮದ ಪೂಜೆಗಳಿಗೆ ಸೀಮಿತವಾಗಿದ್ದಲ್ಲಿ ಯಾವ ನಷ್ಟವೂ ಆಗುವುದಿಲ್ಲ. ಆದರೆ ತೊಂದರೆಯಾಗುವುದು ಯಾವಾಗ ಎಂದರೆ ಪ್ರತಿಯೊಂದು ಪಂಥವೂ ತಮ್ಮ ನಂಬಿಕೆಗಳೇ ಅತ್ಯಂತ ಶ್ರೇಷ್ಠವಾದದ್ದೆಂದು ಹಾಗೂ ಉಳಿದ ಧರ್ಮಗಳೆಲ್ಲವೂ ಸುಳ್ಳೆಂದು ಪ್ರತಿಪಾದಿಸಿದಾಗ ಮಾತ್ರ. ಈ ವಿಧದ ದೃಷ್ಟಿಕೋನದಿಂದುಂಟಾಗುವ ಯುದ್ಧಕ್ಕೆ ಆಂಧ್ರಪ್ರದೇಶದಲ್ಲಿನ ಪಾಲನಾಡುವಿನಲ್ಲಿ ನಡೆದ ಧರ್ಮಗಳ ಯುದ್ಧವೇ ಸಾಕ್ಷಿ. ನಾಯನರು ಸಾಮಾನ್ಯವಾಗಿ ಮುಗ್ಧರು ಹಾಗೂ ತಾವು ಅನುಭವಿಸಿದ್ದನ್ನು, ತಾವು ನಂಬಿದ್ದನ್ನು, ತಮಗನಿಸಿದ್ದನ್ನು ನೇರವಾಗಿ ಯಾವುದೇ ಮುಚ್ಚುಮರೆಯಿಲ್ಲದೇ ವ್ಯಕ್ತಪಡಿಸುವ ಸ್ವಭಾವದವರು. ಶೈವ ಸಿದ್ಧಾಂತದ ಪ್ರಕಾರ ಕೆಲವು ನಿರ್ದಿಷ್ಟವಾದ ಕ್ರಮಗಳನ್ನು ಮಾತ್ರ ಕಾರ್ಯಕ್ರಮದಲ್ಲಿ

ಅನುಸರಿಸಬೇಕು ಮತ್ತು ಭಕ್ತರು ಏನನ್ನು ಹೇಳುವರೋ ಅದೇ ಗುರುಗಳ ಪದಗಳೆಂದು ಪರಿಗಣಿಸಬೇಕು. ಈ ರೀತಿಯ ಕ್ರಮಗಳನ್ನು ಆಚರಿಸಬೇಕೆಂಬುದು ನಾಯನರಿಗೆ ಕಾರ್ಯಕ್ರಮದ ಪ್ರಾರಂಭದ ದಿನದ ಮುಂಜಾನೆ ಮಾತ್ರ ಗೊತ್ತಾಯಿತು. ಹೀಗಾಗಿ ನಾಯನರು ಯಾವ ಮಾತನ್ನೇ ಆಡಿದರೂ ಅದು ರಮಣ ಮಹರ್ಷಿಗಳ ಮಾತೇ ವಿನಃ ಬೇರಲ್ಲ.

ಸಮಸ್ತ ತಮಿಳುನಾಡು ಶಿವ ಭಕ್ತರ ಭಂಡಾರ. ಮಹಾನ್ ಶಿವಭಕ್ತರನ್ನು "ನಾಯನ್ಮಾರ" ಎಂದು ಕರೆಯುವರು ಹಾಗೂ ಭಗವಾನರು ಅರುಣಾಚಲ ಶಿವನ ಮಹಾನ್ ಭಕ್ತರು. ಹಾಗಾಗಿ, ನಾಯನರು ಕಾರ್ಯಕ್ರಮ ಪ್ರಾರಂಭವಾಗುವ ದಿನದ ಮುಂಜಾನೆಯೇ ಭಗವಾನರ ಬಳಿಗೆ ಹೋಗಿ, "ಭಗವಾನ್! ಶೈವ ಸಿದ್ಧಾಂತ ಮಹಾಸಭೆಯವರು ನನ್ನನ್ನು ಶೈವ ಸಿದ್ಧಾಂತದ ಬಗ್ಗೆ ಮಾತನಾಡಲು ಕೇಳಿಕೊಂಡರು, ಅದಕ್ಕೆ ನಾನು ಒಪ್ಪಿದೆ. ನಿಜವಾಗಿ ಹೇಳಬೇಕೆಂದರೆ, ನನಗೆ ಶೈವ ಸಿದ್ಧಾಂತದ ಬಗ್ಗೆ ಏನೂ ಅರಿಯದು. ಈ ಸಿದ್ಧಾಂತವು ಏನು?" ಎಂದು ಕೇಳಿದರು. ನಾಯನರ ಈ ವಿಧವಾದ ದ್ವಂದ್ವ ಸ್ಥಿತಿಯನ್ನು ಗಮನಿಸಿ ಭಗವಾನರು ಮುಗುಳ್ನಕ್ಕರು. ಅವರು ಶಿವ ಜ್ಞಾನ ಬೋಧ ಪುಸ್ತಕವನ್ನು ತರಲು ತಮ್ಮ ಶಿಷ್ಯರಿಗೆ ಹೇಳಿ, ಅದರಿಂದ ಶೈವ ಸಿದ್ಧಾಂತದ ಹನ್ನೆರಡು ಮುಖ್ಯ ತತ್ತ್ವೋಕ್ತಿಗಳನ್ನು ತೋರಿಸಿ ಅದರ ಬಗ್ಗೆ ಸಂಕ್ಷಿಪ್ತ ವ್ಯಾಖ್ಯಾನವನ್ನು ಹೇಳಿದರು.

ಗುರುಗಳಿಂದ ಈ ರೀತಿಯಾಗಿ ಪಡೆದ ಜ್ಞಾನದಿಂದ ನಾಯನರು ಕಾರ್ಯಕ್ರಮದ ತಮ್ಮ ಅಧ್ಯಕ್ಷಭಾಷಣದಲ್ಲಿ ತಮಿಳು ಭಾಷೆಯಲ್ಲಿ ಸಮಸ್ತ ಸಭಾಸದರು ತಲೆದೂಗುವಂತೆ ಅದ್ಭುತವಾಗಿ ಹಾಗೂ ನಿರರ್ಗಳವಾಗಿ ಮಾತನಾಡಿದರು. ಸಭೆಯು ಮುಗಿದ ನಂತರ ನಾಯನರು ಭಗವಾನರ ಬಳಿಗೆ ಹೋಗಿ, "ಭಗವಾನ್, ನಾನು ಈ ದಿನ ಏನು ಮಾತನಾಡಿದೆನೋ ಅದು ಕೇವಲ ನಿಮ್ಮ ಅನುಗ್ರಹದಿಂದ ಮಾತ್ರ ಸಾಧ್ಯವಾಯಿತು. ನಾನು ಎಂದೂ ಓದಿರದ ಈ ಮಹಾನ್ ಶೈವ ಸಿದ್ಧಾಂತವು ನನ್ನ ಹಸ್ತದಲ್ಲಿನ ನೆಲ್ಲಿಕಾಯಿಯಂತಾಯಿತು." ಎಂದರು. ನಾಯನರ ವಿಧೇಯತೆ ಹಾಗೂ ಸಮರ್ಪಣಾ ಭಾವಕ್ಕೆ ಇದು ಒಂದು ಉತ್ತಮ ಉದಾಹರಣೆ.

ಉಡುಪಿ ಕ್ಷೇತ್ರದಲ್ಲಿಯೂ ಇದೇ ರೀತಿಯ ಘಟನೆಯು ನಡೆಯಿತು. ಉಡುಪಿ ಕ್ಷೇತ್ರವು ವೈಷ್ಣವ ಪಂಥದವರ ಶಕ್ತಿಸ್ಥಳ. ಅಮ್ಮ ಹಾಗೂ ನಾಯನರು 1913 ರಲ್ಲಿ ಉಡುಪಿಗೆ ಬಂದರು. ಅಲ್ಲಿ ಅವರು ಶ್ರೀಕೃಷ್ಣನ ದರ್ಶನವಾಗುತ್ತಿದ್ದಂತೆ ನಿಂತ ಭಂಗಿಯಲ್ಲೇ ಅಶುಕವಿತೆಯ ರೀತಿಯಲ್ಲಿ ವಿಷ್ಣುವಿನ ದಶಾವತಾರಗಳ ಬಗ್ಗೆ ಹತ್ತು ಶ್ಲೋಕಗಳನ್ನೊಳಗೊಂಡ ಸ್ತೋತ್ರವನ್ನು ರಚಿಸಿದರು. ದೇವಸ್ಥಾನದ ಅಧಿಕಾರಿಗಳು ಈ ಅದ್ಭುತವಾದ, ವೈಭವವಾದ ಸ್ತೋತ್ರವನ್ನು ಆಲಿಸಿ ಅತ್ಯಾಶ್ಚರ್ಯಪಟ್ಟರು. ಈ ಶ್ಲೋಕಗಳನ್ನು ನಂತರದ ದಿನಗಳಲ್ಲಿ ಗೀತಮಾಲಾ ಪುಸ್ತಕದಲ್ಲಿ, "ದಶಾವತಾರ ಗೀತಮ್" ಎಂದು ಪ್ರಕಟಿಸಲಾಯಿತು.

ಉಡುಪಿ ಕ್ಷೇತ್ರದ ಹತ್ತಿರದಲ್ಲಿ ಬಡಬಾಂಡೇಶ್ವರ ಕ್ಷೇತ್ರವಿರುವುದು. ಇದು ಬಲರಾಮ ಕ್ಷೇತ್ರ. ಇಲ್ಲಿ ಅನೇಕ ಸಣ್ಣ ಪುಟ್ಟ ಬೆಟ್ಟಗಳು ಹಾಗೂ ನೀರಿನ ತೊರೆಗಳಿರುವುದು. ಈ ಪ್ರಶಾಂತ ಪ್ರದೇಶವನ್ನು ಕಂಡು ನಾಯನರು ಇಲ್ಲಿ ತಪಸ್ಸನ್ನಾಚರಿಸಲು ನಿರ್ಧರಿಸಿದರು. ಅವರು ತಮ್ಮ ಪತ್ನಿಯನ್ನು ಉಡುಪಿಯಲ್ಲಿನ ವಾಸುದೇವ ಶಾಸ್ತ್ರಿಗಳ ಮಗಳ ಮನೆಯಲ್ಲಿ ಬಿಟ್ಟು ಬಡಬಾಂಡೇಶ್ವರಕ್ಕೆ ಬಂದು ಅಲ್ಲಿನ ಒಂದು ತೊರೆಯ ಬದಿಯಲ್ಲಿನ ಒಂದು ಸಣ್ಣ ಗುಹೆಯನ್ನು ಆರಿಸಿಕೊಂಡು ಅಲ್ಲಿ ಸಂಪೂರ್ಣ ಏಕಾಗ್ರತೆಯಿಂದ ಹದಿನೈದು ದಿನಗಳ ಕಾಲ ತಪಸ್ಸನ್ನಾಚರಿಸಿದರು. ಮರಳಿನಿಂದ ಕೂಡಿದ ಗಾಳಿಯಿಂದಾಗಿ ಅವರ ವಸ್ತ್ರಗಳು ಮಲಿನವಾಯಿತು. ಅನ್ನಾಹಾರವಿಲ್ಲದೆ ಅವರ ಶರೀರವು ನಿತ್ರಾಣವಾಯಿತು. ಇದ್ದಕ್ಕಿದ್ದಂತೆ ಅವರ ಮುಂದೆ ಒಬ್ಬ ಸುಂದರ ಹಾಗೂ ಸುದೃಢ ಯುವಕನೊಬ್ಬನು ಅಭಯಮುದ್ರೆಯೊಡನೆ ಕಾಣಿಸಿಕೊಂಡನು. ನಾಯನರಿಗೆ ಆ ವ್ಯಕ್ತಿಯು ಬೇರಾರೂ ಅಲ್ಲದೆ ಬಲರಾಮನೆಂದು ಅರಿವಾಗಿ ಅವನಿಗೆ ನಮಸ್ಕರಿಸಲು ಏಳಲು ಹೋಗಿ, ನಿಃಶಕ್ತಿಯಿಂದ ಏಳಲಾಗದೆ ಕುಸಿದರು. ಆ ಯುವಕನು ಮಂದಹಾಸದಿಂದ ತನ್ನ ಕೈಯನ್ನು ನಾಯನರ ಬೆನ್ನ ಮೇಲಿಟ್ಟು ಸವರಿದನು. ಕೂಡಲೇ ಆ ಕೈಗಳ ಮೂಲಕ ಶಕ್ತಿಯು ನಾಯನರ ಬೆನ್ನನ್ನು ಪ್ರವೇಶಿಸಿದ ಅನುಭವವಾಗಿ ಎದ್ದು ನಿಲ್ಲಲು ಸಾಧ್ಯವಾಯಿತು. ಅನಂತರ ಆ ಯುವಕನು ನಾಯನರ ಕೈ ಹಿಡಿದು ಅವರನ್ನು ನೀರಿನ ತೊರೆಯ ಬಳಿ ಸ್ನಾನದ ಸಲುವಾಗಿ ಕರೆದೊಯ್ದನು. ಅನಂತರ ಯುವಕನು ಊರೊಳಗೆ ಹೋಗಿ ಅಲ್ಲಿ ಒಬ್ಬರಿಗೆ ಊಟವನ್ನು ಕೊಂಡೊಯ್ದು ಅದನ್ನು ನಾಯನರಿಗೆ ಬಡಿಸಲು ಹೇಳಿದನು. ಅನಂತರ ಆ ಯುವಕನು ಯಾರ ಕಣ್ಣಿಗೂ ಬೀಳಲಿಲ್ಲ.

ಅಲ್ಲಿಂದ ನಂತರ ಬಡಬಾಂಡೇಶ್ವರದ ಮಠದಲ್ಲಿನ ಅಧಿಕಾರಿಗಳು ನಾಯನರ ಅಗತ್ಯತೆಗಳನ್ನು ನೋಡಿಕೊಳ್ಳತೊಡಗಿದರು. ನಾಯನರು ಅದೇ ಗುಹೆಯಲ್ಲಿ ಮತ್ತೆ ಐದು ದಿನಗಳು ತಪಸ್ಸನ್ನಾಚರಿಸಿ ಅನಂತರ ತಮ್ಮ ತಪಸ್ಸಿನ ಅವಧಿ ಮುಗಿದ ಮೇಲೆ ಊರೊಳಗೆ ಪ್ರವೇಶಿಸುತ್ತಿದ್ದಂತೆ ವೈಷ್ಣವ ಪಂಗಡದ ಅನೇಕ ಮುಂದಾಳುಗಳು ಅವರನ್ನು ಸುತ್ತುವರೆದು ಅವರನ್ನು ತಮ್ಮ ಸಭೆಯಲ್ಲಿ ಮಾತನಾಡುವಂತೆ ಕೇಳಿಕೊಂಡರು.

ಸಭೆಯ ವೇದಿಕೆಯಲ್ಲಿ ಕುಳಿತು ನಾಯನರು ಕಣ್ಣುಗಳನ್ನು ಮುಚ್ಚಿ ತಮಗೆ ಗುಹೆಯ ಬಳಿ ದರ್ಶನ ನೀಡಿದ ಬಲರಾಮರನ್ನು ಕುರಿತು ಧ್ಯಾನಿಸಿದರು. ನಾಯನರು ಮಾತನಾಡಲು ಪ್ರಾರಂಭಿಸುತ್ತಿದ್ದಂತೆ ಅವರಿಂದ 92 ದಿವ್ಯವಾದ ಶ್ಲೋಕಗಳು ಓತಪ್ರೋತವಾಗಿ ಹರಿದು ಬಂದು ನಾಯನರ ಕಣ್ಮುಂದೆ ವೈಷ್ಣವ ಪಂಗಡದ ಎಲ್ಲ ಸಂಸ್ಥಾಪಕರು ಹಾದುಹೋದರು ಹಾಗೂ ನೆರೆದಿದ್ದ ವೈಷ್ಣವ ಪಂಗಡದ ಧುರೀಣರನ್ನು ಆನಂದದ ಕಡಲಿನಲ್ಲಿ ಮುಳುಗಿಸಿತು.

ಋಷಿಭೀರ್ವಾಮದೇವಾದ್ಯೈರ್ಯ ದೃಷ್ಟಂ ಮಂತ್ರದರ್ಶಿಭಿಃ
ತಸ್ಯ ಶಾಸ್ತ್ರಸ್ಯ ಸಾರೋಽಯಂ ಮಯಾ ಸಂಗೃಹ್ಯ ಕೀರ್ತಿತಃ ॥"

"ಮಂತ್ರದ್ರಷ್ಟಾರಾದ, ವಾಮದೇವ ಮುಂತಾದ ಮಹಾಮಹಿಮರಿಗೆ ಗೋಚರವಾದ ತತ್ತ್ವವನ್ನು ನಾನು ಸಂಕ್ಷಿಪ್ತವಾಗಿ ವಿವರಿಸಿರುವೆ."

ನಾಯನರು ತಮ್ಮ ಭಾಷಣದಲ್ಲಿ ಶಂಕರ, ರಾಮಾನುಜ, ಮಧ್ವ, ವಲ್ಲಭ ಹಾಗೂ ಶ್ರೀಕಂಠರಾದಿಯಾಗಿ ಎಲ್ಲ ಅಚಾರ್ಯರನ್ನೂ ಶ್ಲೋಕವೊಂದರ ಮೂಲಕ ಉದ್ಧರಿಸಿ ಕೊನೆಗೆ ಸಾಧಕನು ಯೋಗ, ಜ್ಞಾನ ಹಾಗೂ ಸೇವೆಯ ಮೂಲಕ ಬ್ರಹ್ಮನನ್ನು ತಲುಪಬಹುದೆಂದು ಭಾಷಣವನ್ನು ಮುಗಿಸಿದರು. ಎಲ್ಲ ಅಚಾರ್ಯರುಗಳು ನಾಯನರ ಮೂಲಕ ತಮ್ಮ ಕಣ್ಣ ಮುಂದೆ ಹಾದು ಹೋದರೆಂದು ಸಭಿಕರು ಭಾವಿಸಿದರು.

ನಾಯನರು ತಮ್ಮ ಭಾಷಣದಲ್ಲಿ, "ಬಲರಾಮನು ಅಸ್ತ್ರವಿದ್ಯೆಯ ಜ್ಞಾನವನ್ನು ನೀಡಿದರೆ (ಅಸ್ತ್ರವಿದ್ಯಾಪ್ರದಾತಃ ರಾಮಃ ॥), ದಶರಥ ಪುತ್ರ ಶ್ರೀರಾಮ, ರೇಣುಕಾ ದೇವಿಯ ಪುತ್ರ ಭಾರ್ಗವರಾಮ, ಹಾಗೂ ಬಲರಾಮರನ್ನು ಹಿಂದುಗಳು ಸದಾ ಪೂಜಿಸುವರು ಮತ್ತು ಸ್ಕಂದ, ಬಲರಾಮ ಮತ್ತು ಪರಶುರಾಮರು ಒಂದೇ ದೈವದ ಭಾಗಶಃ ಅವತಾರಗಳು. ಅವರುಗಳು ಮಹಾತಪಸ್ವಿಗಳು ಹಾಗೂ ಗುರುಗಳು ಹಾಗೂ ಅವರುಗಳು ಹೃದಯ ವಿದ್ಯೆಯಲ್ಲಿ ಪರಿಣತರು, ಹಾಗೂ ಒಬ್ಬರನ್ನು ಕಂಡಲ್ಲಿ ಉಳಿದಿಬ್ಬರನ್ನೂ ಕಾಣಬಹುದು." ಮುಂದುವರೆದು, ಅವರು ಈ ಅವತಾರ ಪುರುಷರು ಹೃದಯ ವಿದ್ಯೆಯ ಸಂಸ್ಥಾಪಕರು ಮತ್ತು ಅವರಲ್ಲಿನ ಸ್ಕಂದನೇ ಶ್ರೀರಮಣ ಮಹರ್ಷಿಯಾಗಿ ಅವತರಿಸಿರುವರೆಂದು ತಿಳಿಸಿದರು.

ಇದ್ದಕ್ಕಿದ್ದಂತೆ ಸಭಿಕರಿಂದ ಒಬ್ಬ ಹುಡುಗನು ವೇದಿಕೆಗೆ ಬಂದು ನಾಯನರ ಪಾದಗಳನ್ನು ಘಟ್ಟಿಯಾಗಿ ಹಿಡಿದುಕೊಂಡು, "ಭಗವನ್! ನನ್ನ ತಂದೆಯು ತೀರಿಹೋದರು. ನಾನು ಬ್ರಾಹ್ಮಣ ಬಾಲಕ. ನನ್ನ ತಾಯಿಯು ಹಿಂದೂ ಧರ್ಮದಿಂದ ಕ್ರೈಸ್ತ ಧರ್ಮಕ್ಕೆ ಮತಾಂತರಗೊಂಡರು. ನಾನು ವೈದಿಕ ಕ್ರಿಯೆಗಳನ್ನು ಪ್ರೀತಿಸಿದರೂ, ಇಲ್ಲಿನ ಪಂಡಿತರು ನನಗೆ ಉಪನಯನ ಮಾಡಲು ನಿರಾಕರಿಸಿದರು. ನಾನು ಸರಿಯಾದ ಮಾರ್ಗವನ್ನು ದೃಢ ನಂಬಿಕೆಯಿಂದ ಅನುಸರಿಸುವೆ." ನಾಯನರು ಕೂಡಲೇ ಧರ್ಮ ಪರಿಷತ್ತನ್ನು ಸೇರಿಸಿ, ಅವರಿಗೆ, ವೈದಿಕ ಕ್ರಿಯೆಗಳನ್ನು ನಡೆಸುವುದಕ್ಕೆ ಬೇಕಿರುವುದು ಅದನ್ನು ಅನುಸರಿಸುವವನಲ್ಲಿರುವ ದೃಢವಾದ ನಂಬಿಕೆಯೇ ಹೊರತು ಬೇರೇನೂ ಅಲ್ಲವೆಂದೂ, ಈ ಬಾಲಕನು ಪ್ರಾಮಾಣಿಕನಾದ್ದರಿಂದ ಅವನಿಗೆ ಉಪನಯನವನ್ನು ಮಾಡಬಹುದೆಂದು ವಿವರಿಸಿದರು. ಪರಿಷತ್ತಿನ ಸದಸ್ಯರು ಒಪ್ಪಿಗೆ ಸೂಚಿಸಿ ಬಾಲಕನ ಉಪನಯನವನ್ನು ಮಾಡಿದರು.

ನಾಯನರ ಪತ್ನಿ ವಿಶಾಲಾಕ್ಷಿಯು, ಬಲರಾಮನನ್ನು ದರ್ಶಿಸಿದ್ದರಿಂದ ಏನು ಅನುಕೂಲವಾಯಿತೆಂದು ಕೇಳಿದ್ದಕ್ಕೆ ನಾಯನರು ತಾವು ಬಲರಾಮನಿಂದ ಶಕ್ತಿಯ ಅಸ್ತ್ರವನ್ನು ಪಡೆದದ್ದಲ್ಲದೆ, ಅದರ ಬಗ್ಗೆ ಆಧುನಿಕ ಸೈದ್ಧಾಂತಿಕ ದೃಷ್ಟಿಯನ್ನು ಗಳಿಸಿದೆನೆಂದರು. "ಬಲರಾಮನ ಶಕ್ತಿಯು ಸ್ವಾತಂತ್ರ್ಯಕ್ಕಾಗಿ ಹೋರಾಡುವ ನಮ್ಮ ಜನಗಳನ್ನು ರಕ್ಷಿಸುತ್ತದೆ" ಎಂದರು.

ಎಲ್ಲ ನಂಬಿಕೆಗಳ ನಡುವಿನ ಸಮಾನತೆಯೆಂಬ ಹೊಸ ಅವಿಷ್ಕಾರವು "ತತ್ತ್ವ ಘಂಟಾ ಶತಕಮ್" ರಚನೆಯ ರೂಪವನ್ನು ಪಡೆದುಕೊಂಡಿತು. ಈ ಕೃತಿಯು ಭಗವನ್ ರಮಣ ಮಹರ್ಷಿಗಳ ಪ್ರೀತಿಯ ಪದ್ಯವಾಗಿತ್ತು.

ವೇದಾಂತಶಾಸ್ತ್ರಶತಕಾನ್ ಸಕಲಾನೆಚಾರ್ಯ
ಪ್ರಾಚಾಮ್ಯಗಾಗಮದೃಶಾಂ ಮತಮಾದಧಾನಃ
ಕ್ಷೇತ್ರೇ ಫಣೇಶ್ವರಕಲಾಜನಿತಸ್ಯ ಪುಂಸೋ
ಘಂಟಾಶತಂ ಗಣಪತಿಃ ಕವಿರಾಡಕರ್ಷಿತ್ ॥"

"ಆದಿಶೇಷನ ಅವತಾರವಾದ ಬಲರಾಮನ ಕ್ಷೇತ್ರದಲ್ಲಿ ಋಗ್ವೇದ ಋಷಿಗಳ ಎಲ್ಲ ತತ್ತ್ವಶಾಸ್ತ್ರಗಳನ್ನೂ ಅವಲೋಕಿಸಿ ಗಣಪತಿ ಮುನಿಗಳು "ತತ್ತ್ವ ಘಂಟಾ ಶತಕ"ವನ್ನು ರಚಿಸಿದರು.

೨

ದಹರಗುಹೇಶನ ದರ್ಶನ

ತ್ವದೀಯಾ ಸಾ ಶಕ್ತಿಸ್ಸಕಲಜಗದಂತೇಷ್ವನಲಸಾ
ಪುರಾ ಕಾರ್ಯಸ್ಯಾಂತೇ ತನಯಮಯಿ ಹಿತ್ವಾ ನೃಪರಿಪುಂ
ಅವಿಕ್ಲಿಷ್ಟಾರುತ್ಸ್ಥಂ ದಶಮುಖಕುಲೋನ್ಮಾಥವಿಧಯೇ
ಸಹಸ್ರಾಂಶುಂ ಹಿತ್ವಾ ಶಶಿನಮಿವ ಘಸ್ರೇ ಗಲತಿ ಭಾ ॥
– ಉಮಾಸಹಸ್ರಮ್ (7-27-11)

"ಓ ರೇಣುಕಾ ಮಾತೆ! ನಿನ್ನ ಶಕ್ತಿಯು ಮೊದಲು ದುಷ್ಟ ಕ್ಷತ್ರಿಯ ವಧೆಯಿಂದ ಪ್ರಪಂಚವನ್ನೆಲ್ಲ ನಾಶಪಡಿಸುವ ಕಾರ್ಯವನ್ನು ಪರಶುರಾಮನ ಮೂಲಕ ಮುಗಿಸಿ, ಪ್ರಭೆಯು ಸಾಯಂಕಾಲದ ಸೂರ್ಯನನ್ನು ಬಿಟ್ಟು ಚಂದ್ರನ ಕಡೆಗೆ ಜಾರುವಂತೆ ನಿನ್ನ ಮಗನೇ ಆದ ಪರಶುರಾಮನನ್ನು ಬಿಟ್ಟು ದಶಕಂಠ ರಾವಣ ಹಾಗೂ ಅವನ ಸಮಸ್ತ ಸೈನ್ಯವನ್ನೂ ನಾಶಪಡಿಸಲು ಶ್ರೀರಾಮನನ್ನು ಪ್ರವೇಶಿಸಿತು. (ನಿನ್ನ ಶಕ್ತಿಯು ಪರಶುರಾಮನನ್ನು ಕಾರ್ಯಾಂತದಲ್ಲಿ ಬಿಟ್ಟು ಶ್ರೀರಾಮನನ್ನು ಪ್ರವೇಶಿಸಿತು ಎಂದರ್ಥ.)"

ಒಮ್ಮೆ ಭಕ್ತನೊಬ್ಬನು ಶ್ರೀ ರಮಣ ಮಹರ್ಷಿಗಳನ್ನು, "ಸ್ವಾಮಿ, ಮಹಾಭಾರತದಲ್ಲಿ ಅರ್ಜುನನು ಶ್ರೀಕೃಷ್ಣನಿಂದ ಗೀತೋಪದೇಶವನ್ನು ಪಡೆದನಂತರವೂ ಯುದ್ಧ ಮಾಡುವುದಿಲ್ಲವೆಂದಿದ್ದರೆ ಏನಾಗುತ್ತಿತ್ತು?" ಎಂದು ಕೇಳಿದನು. ಅದಕ್ಕೆ ರಮಣ ಮಹರ್ಷಿಗಳು, "ಯಾವ ಅಗೋಚರ ಶಕ್ತಿಯು ಎಲ್ಲರನ್ನೂ ಯುದ್ಧಭೂಮಿಗೆ ಬರುವಂತೆ ಮಾಡಿತೋ ಅದು ಅರ್ಜುನನನ್ನು ಯುದ್ಧಮಾಡಲು ಒತ್ತಾಯ ಮಾಡುತ್ತಿತ್ತು." ಎಂದು ಉತ್ತರಿಸಿದರು. ಇದು ದೈವೀ ಶಕ್ತಿಯು ಎಲ್ಲವನ್ನೂ ಮಾಡಿಸುತ್ತದೆ ಎಂಬುದನ್ನು ತೋರಿಸಿಕೊಡುತ್ತದೆ. ಮೇಲಿನ ಶ್ಲೋಕದಲ್ಲಿ ಇದನ್ನೇ ನಾಯನರು ವಿವರಿಸಿರುವರು.

ಶ್ರೀರಾಮ ಹಾಗೂ ಪರಶುರಾಮರು ಸಮಕಾಲೀನರು. ಪರಶುರಾಮಾವತಾರದ ಉದ್ದೇಶವು ಅಪಾರ ಶಕ್ತಿಗಳಿಂದ ದುರಹಂಕಾರಿಗಳಾದ ಕ್ಷತ್ರಿಯರ ನಾಶಮಾಡಿ ತಪಸ್ಸಿನಿಂದ ಪಡೆದ ಶಕ್ತಿಯು ದೈಹಿಕ ಶಕ್ತಿಗಿಂತ ಮಿಗಿಲಾದದ್ದು ಎಂಬುದನ್ನು ಪ್ರಪಂಚಕ್ಕೆ ತೋರಿಸುವುದು. ಶ್ರೀರಾಮನ ಗುರಿಯೆಂದರೆ ರಾಕ್ಷಸ ಶಕ್ತಿಯನ್ನು ಸಂಪೂರ್ಣವಾಗಿ ನಾಶಮಾಡುವುದು.

ಪುರಾಣದ ಪ್ರಕಾರ ಶ್ರೀರಾಮನು ಶಿವಧನಸ್ಸನ್ನು ಮುರಿದ ಸುದ್ದಿಯನ್ನು ಕೇಳಿದ ಪರಶುರಾಮನು ಅತ್ಯಂತ ಕೋಪಾವಿಷ್ಟನಾದನು. ಶ್ರೀರಾಮನು ಸೀತೆಯನ್ನು ವರಿಸಿದ ನಂತರ ಅಯೋಧ್ಯೆಗೆ ಪಯಣಿಸುತ್ತಿದ್ದಾಗ ಪರಶುರಾಮನು ಅವನನ್ನು ಅಡ್ಡಗಟ್ಟಿದನು. ಆಗ ನಡೆದ ಹೋರಾಟದ ನಂತರ ಪರಶುರಾಮರಲ್ಲಿನ ಶಕ್ತಿಯು ಅವರ ಬಿಲ್ಲಿನ ಮೂಲಕ ಶ್ರೀರಾಮನನ್ನು ಪ್ರವೇಶಿಸಿತು ಹಾಗೂ ಆ ಬಿಲ್ಲನ್ನು ಪರಶುರಾಮರು ಶ್ರೀರಾಮನಿಗೆ ಅವನ ಶಕ್ತಿಯನ್ನು ಪರೀಕ್ಷಿಸಲು ನೀಡಿದರು. ಪರಶುರಾಮರು ಸ್ಕಂದನ (ಕಾರ್ತಿಕೇಯ) ಅವತಾರ ಹಾಗೂ ಸದಾ ಆತ್ಮಾಭಿಮಾನವುಳ್ಳವರು. ಮಾತೆಯ ಮೂಲಕ ಪರಶುರಾಮರು ಕುಂಡಲಿನಿ ವಿದ್ಯೆಯನ್ನು ಪಡೆದುಕೊಂಡಿದ್ದರು. ಅಂತಹ ಮಹರ್ಷಿಗಳಲ್ಲಿರುವ ಶಕ್ತಿಯನ್ನು ಪ್ರಚಂಡ ಚಂಡಿ ಅಥವಾ ಕೃತ್ತಿಕಾ ಎಂದು ಕರೆಯುವರು. ಧರ್ಮ ರಕ್ಷಣೆ ಮಾಡಲು ಈ ಶಕ್ತಿಯು ಅಗತ್ಯ. ಹಾಗಾಗಿ ಪರಶುರಾಮರಿಂದ ಈ ಶಕ್ತಿಯು ಶ್ರೀರಾಮನಿಗೆ ಹರಿದುಬಂದು ಮುಂದೆ ಶ್ರೀರಾಮನು ಧರ್ಮ ರಕ್ಷಣೆ ಮಾಡಲು ಸಹಕರಿಸಿತು.

ಕಾರ್ತಿಕೇಯನ ಅಂಶವಾಗಿ ಜನಿಸಿದ ಪರಶುರಾಮನು ಶ್ರೀರಾಮನನ್ನು ಹರಸಿದನು. ಅದೇ ರೀತಿ ಆದಿಶೇಷನ ಅವತಾರವಾದ ಬಲರಾಮನು ಶ್ರೀಕೃಷ್ಣನಿಗೆ ಸಹಾಯ ಮಾಡಿದನು ಎಂದು ಋಷಿವರೇಣ್ಯರು ವಿವರಿಸುತ್ತಾರೆ. ನಾಯನರು ಶ್ರೀ ರಮಣರನ್ನು ಕಾರ್ತೀಕನ ಅವತಾರವೆಂದು ಘೋಷಿಸಿದರು. ನಾಯನರೆದುರಿಗೆ ಪರಶುರಾಮರು ಪ್ರತ್ಯಕ್ಷವಾದ ರೀತಿಯೂ ಸಹ ಒಂದು ರೀತಿಯಲ್ಲಿ ಆಶ್ಚರ್ಯಕರವಾದ ರೀತಿಯಾಗಿತ್ತು.

ಭಾರತದಲ್ಲಿ ಎರಡು ಗೋಕರ್ಣ ಕ್ಷೇತ್ರಗಳಿವೆ. ಅದರಲ್ಲಿ ಒಂದು ಕರ್ನಾಟಕದಲ್ಲಿದ್ದು ಅಲ್ಲಿ ಶಿವ ಲಿಂಗವನ್ನು ರಾವಣನು ಪ್ರತಿಷ್ಠಾಪಿಸಿದನೆಂದು ಒಂದು ಕಥೆ. ಆದರೆ ಈ ಲಿಂಗವನ್ನು ನಿಜವಾಗಿ ಪ್ರತಿಷ್ಠಾಪಿಸಿದ್ದು ಮಹಾಗಣಪತಿ. ಆತ್ಮ ಲಿಂಗವನ್ನು ಪಡೆಯುವುದೆಂದರೆ ಆತ್ಮಜ್ಞಾನವನ್ನು ಪಡೆದಂತೆ. ಅಹಂಕಾರಿಗಳಿಗೆ ಆತ್ಮಜ್ಞಾನವು ಒಲಿಯುವುದಿಲ್ಲ. ಹಾಗಾಗಿ ರಾವಣನಿಗೆ ಆತ್ಮಲಿಂಗವು ದೊರಕಲಿಲ್ಲ. ಆಂಧ್ರಪ್ರದೇಶದಲ್ಲಿನ ಶ್ರೀಕಾಕುಳಂ ಜಿಲ್ಲೆಯಲ್ಲಿನ ಮಹೇಂದ್ರಗಿರಿ ಬೆಟ್ಟದ ಮೇಲೆ ಮತ್ತೊಂದು ಗೋಕರ್ಣ ಕ್ಷೇತ್ರವಿರುವುದು. ಅಲ್ಲಿ ಗೋಕರ್ಣೇಶ್ವರನ ಮಂದಿರವಿರುವುದು. ಈ ಬೆಟ್ಟವು ಮಂದಸದ ಜಮೀನ್ದಾರನಿಗೆ ಸೇರಿದ ಸ್ಥಳದಲ್ಲಿರುವುದು. ಇದು ಪರಶುರಾಮರ ಕ್ಷೇತ್ರ. ಈ ಸ್ಥಳದಲ್ಲಿ ಪಾಂಡವರು ಕೆಲಕಾಲ ನೆಲಸಿದ್ದರೆಂದು ಪ್ರತೀತಿ. ಮಹೇಂದ್ರಗಿರಿಯು ಸಮುದ್ರ ಮಟ್ಟಕ್ಕಿಂತ ಅತಿ ಎತ್ತರ ಪ್ರದೇಶದಲ್ಲಿದ್ದು ಸಂಪೂರ್ಣವಾಗಿ ದಟ್ಟವಾದ ಕಾಡಿನಿಂದಾವೃತವಾಗಿದೆ. ಈ ಬೆಟ್ಟದಲ್ಲಿ ಕಾಡುಮೃಗಗಳಿದ್ದು ಸುತ್ತಲೂ ಗಿರಿಜನರು ವಾಸಿಸುವ ಹಳ್ಳಿಗಳಿವೆ.

ಈ ಬೆಟ್ಟದ ಸ್ವಾಮಿಯು ಗೋಕರ್ಣೇಶ್ವರ. ಪ್ರತಿವರ್ಷದ ಶಿವರಾತ್ರಿ ದಿನದಂದು ಉತ್ಸವವನ್ನು ಆಚರಿಸಲಾಗುವುದು. ಆ ದಿನ ಮಂದಸದ ಜಮೀನ್ದಾರನು ಸಂಸಾರ ಸಮೇತ ಈ ಮಂದಿರಕ್ಕೆ ಬಂದು ಶಿವನನ್ನು ಪೂಜಿಸುವನು. ಆ ದಿನ ಕಾಡುಪ್ರಾಣಿಗಳಿಂದ ರಕ್ಷಣೆಯನ್ನು

ಪಡೆಯುವ ಉದ್ದೇಶದಿಂದ ದೀಪದ ದೊಂದಿಗಳನ್ನು ಹಿಡಿದು ತಮಟೆಗಳನ್ನು ಬಾರಿಸುತ್ತಾ ಭಕ್ತರು ಬೆಟ್ಟವನ್ನು ಹತ್ತುವರು.

ಕ್ರಿ.ಶ.1913 ಮತ್ತು 1915ರ ನಡುವಿನಲ್ಲಿ ನಾಯನರು ದೇಶದ ಅನೇಕ ಭಾಗಗಳಿಗೆ ಪ್ರಯಾಣ ಮಾಡಿದರು. ತಮ್ಮ ಪ್ರವಾಸದಲ್ಲಿ ನಾಯನರು ಸಿಕಂದರಾಬಾದ್, ಕುಮಟಾ, ಕಾರ್ಕಳ ಇತ್ಯಾದಿ ಊರುಗಳಲ್ಲಿ ನಡೆದ ವಿದ್ವತ್ ಸಭೆಗಳಲ್ಲಿ ಭಾಗವಹಿಸಿದರು. ತಮ್ಮ ಪತ್ನಿಯೊಂದಿಗೆ ಉತ್ತರ ಭಾರತ ಪ್ರವಾಸವನ್ನೂ ಮಾಡಿ, ಕೊನೆಗೆ ಮಂದಸದ ಕ್ಷೇತ್ರಕ್ಕೆ ಬಂದು ಅಲ್ಲಿ ತಮ್ಮ ಹಳೆಯ ಮಿತ್ರ ಮಂದಸದ ರಾಜ (ಜಮೀನ್ದಾರ)ನನ್ನು ಭೇಟಿಯಾಗಿ ಅವನ ಕೋರಿಕೆಯ ಮೇರೆಗೆ ಅಲ್ಲೇ ಕೆಲವು ದಿನ ತಂಗಿದರು. 1915ರ ನವೆಂಬರ್ ಮತ್ತು ಡಿಸೆಂಬರ್ ನಡುವಿನಲ್ಲಿ ನಾಯನರು ಭುವನೇಶ್ವರದಲ್ಲಿ ಮತ್ತೊಮ್ಮೆ ತಪಸ್ಸನ್ನಾಚರಿಸಿದರು. ಬೃಂದಾವನದ ಮಣ್ಣಿನ ಪ್ರತಿಯೊಂದು ಕಣವೂ ಶ್ರೀಕೃಷ್ಣನ ಪಾದಸ್ಪರ್ಶದಿಂದಾಗಿ ಪವಿತ್ರವಾದಂತೆ ಭುವನೇಶ್ವರದಲ್ಲಿನ ಪ್ರತೀಯೊಂದು ಕಲ್ಲೂ ಲಿಂಗರೂಪಿಯಾಗಿರುವುದೆಂದು ನಾಯನರು ಸದಾ ಹೇಳುತ್ತಿದ್ದರು. ಭುವನೇಶ್ವರವನ್ನು ಶಿವನ ಭೂಮಿಯೆಂದು ಪರಿಗಣಿಸುವರು. ಈ ಸ್ಥಳದಲ್ಲಿ ನಾಯನರು ಉಮಾಸಹಸ್ರಮ್ ಕೃತಿಯನ್ನು ಪುನರ್ರಚಿಸಲು ತೀರ್ಮಾನಿಸಿ, ಅವರ ನೆನಪಿನ ಶಕ್ತಿಯು ಉತ್ತಮ ಸ್ಥಿತಿಯಲ್ಲಿದ್ದಿದ್ದರಿಂದ ರಚನೆಯ ಕಾರ್ಯವನ್ನು ಪ್ರಾರಂಭಿಸಿಯೇಬಿಟ್ಟರು. ಅವುಗಳನ್ನು ಸ್ತಬಕ ಅಥವಾ ಪುಷ್ಪಗುಚ್ಛಗಳಂತೆ ಜೋಡಿಸಲಾಯಿತು. ಪ್ರತಿಯೊಂದು ಸ್ತಬಕಗಳ ನಡುವೆಯೂ ಸ್ವಲ್ಪ ಜಾಗವನ್ನು ಬಿಡಲಾಯಿತು ಹಾಗೂ ಕೆಲವು ಜಾಗಗಳಲ್ಲಿ ಶ್ಲೋಕಗಳು ನೆನಪಿಗೆ ಬಾರದೇ ಇದ್ದಾಗಲೂ ಜಾಗವನ್ನು ಬಿಡಲಾಯಿತು.

ಕ್ರಿ.ಶ.1916 ರಲ್ಲಿ ನಾಯನರ ಮೆಚ್ಚಿನ ಶಿಷ್ಯನಾದ ದೈವರಾತನು ನಾಯನರನ್ನು ಭೇಟಿಯಾಗಲು ಮಂದಸಕ್ಕೆ ಬಂದನು. ಹಾಗೇ ಅರುಣಾಚಲದಿಂದಲೂ ಕೆಲವು ಶಿಷ್ಯರು ಬಂದರು. ಅಷ್ಟರಲ್ಲೇ ಶಿವರಾತ್ರೆಯು ಬಂದಿತು. ಮಹೇಂದ್ರಗಿರಿಯ ಗೋಕರ್ಣೇಶ್ವರ ಮಂದಿರದಲ್ಲಿ ಶಿವರಾತ್ರೆಯನ್ನು ಆಚರಿಸಲು ತಯಾರಿ ಶುರುವಾಯಿತು. ದೈವರಾತನು ಕುತೂಹಲದಿಂದ ಮಂದಸದ ರಾಜ (ಜಮೀನ್ದಾರ)ನನ್ನು, ಓ ರಾಜನೆ! ಇಲ್ಲಿನ ಮಹೇಂದ್ರಗಿರಿಯಲ್ಲಿ ಗೋಕರ್ಣೇಶ್ವರನು ನೆಲೆಸಿರುವನೆಂದು ಕೇಳಿ ನನಗೆ ಆಶ್ಚರ್ಯವಾಯಿತು. ಇದು ಕರ್ನಾಟಕದಲ್ಲಿನ ಗೋಕರ್ಣದಲ್ಲಿನ ಲಿಂಗದಂತೆ ಇರುವುದು, ಇದು ಆತ್ಮಲಿಂಗವೆ? ಎಂದು ಕೇಳಿದನು.

ಅದಕ್ಕೆ ರಾಜನು, "ಈ ಲಿಂಗವನ್ನು ಯಾರು ಪ್ರತಿಷ್ಠಾಪಿಸಿದರು ಎಂಬುದು ನಮಗೆ ಗೊತ್ತಿಲ್ಲ. ಇಲ್ಲಿನ ಭಕ್ತಾದಿಗಳ ಪ್ರಕಾರ ಇದು ಸ್ವಯಂಭೂ ಲಿಂಗ. ನನಗೆ ತಿಳಿದಿರುವಂತೆ ನಮ್ಮ ಪೂರ್ವಜರು ಈ ಮಂದಿರವನ್ನು ಕಟ್ಟಿಸಿದರು." ಎಂದು ಉತ್ತರಿಸಿದನು. ಈ ಸಂವಾದವನ್ನು ಕಣ್ಣುಮುಚ್ಚಿ ಆಲಿಸುತ್ತಿದ್ದ ನಾಯನರು ಕಣ್ತೆರೆದು, "ಈ ಲಿಂಗವನ್ನು ಕುಮಾರಸ್ವಾಮಿಯು ಪ್ರತಿಷ್ಠಾಪಿಸಿದ್ದು. ಇದನ್ನು ಪರಶುರಾಮರು ಪೂಜಿಸಿದ್ದರು." ಎಂದು ಹೇಳಿದರು.

ಶಿವರಾತ್ರಿಯ ದಿನದಂದು ರಾಜ ಹಾಗೂ ಪರಿವಾರದವರು ಬೆಟ್ಟವನ್ನೇರಲು ಸಿದ್ಧತೆಗಳನ್ನು ಮಾಡಲಾಯಿತು. ರಾಜ ಪರಿವಾರದೊಂದಿಗೆ ನಾಯನರು, ಅವರ ಪತ್ನಿ ಹಾಗೂ ದೈವರಾತರೂ ಹೊರಟರು. ಎಲ್ಲರೂ ಮಂದಿರವನ್ನು ಪ್ರವೇಶಿಸುತ್ತಿದ್ದಂತೆ ನಾಯನರು ಅಂತರ್ಮುಖಿಯಾದರು. ಗೋಕರ್ಣೇಶ್ವರನ ಪೂಜೆಯು ಸಾಂಗವಾಗಿ ನೆರವೇರಿತು. ಅನಂತರ ನಾಯನರು ಒಳಗೆ ಪ್ರವೇಶಿಸಿ ಲಿಂಗವನ್ನು ತಮ್ಮೆರಡು ಕೈಗಳಿಂದಲೂ ಮುಟ್ಟಿದರು. ಕೂಡಲೇ ಅವರಿಗೆ ತಮ್ಮ ಬೆನ್ನಿನ ಭಾಗದಲ್ಲಿ ವಿದ್ಯುತ್ ಸಂಚಾರವಾದಂತೆ ಭಾಸವಾಯಿತು. ಪೂಜೆಯ ನಂತರ ಎಲ್ಲರೂ ಮಂದಿರದಿಂದ ಹೊರಬಂದು ಬೆಟ್ಟದ ಸುತ್ತ ನಡೆಯತೊಡಗಿದರು. ನಾಯನರು ಹಾಗೂ ದೈವರಾತರು ಜನಗಳಿಂದ ಸ್ವಲ್ಪ ದೂರ ಬಂದು ಸುತ್ತ ನೋಡತೊಡಗಿದರು. ನಾಯನರು, "ದೈವರಾತ, ಈ ಜಾಗವು ನನಗೆ ಪಾದ್ಯೈವೀಡುವನ್ನು ನೆನಪಿಗೆ ತರುತ್ತದೆ. ಪರಶುರಾಮರು ಈ ಜಾಗದಲ್ಲಿ ನಡೆದಾಡಿರಬೇಕು. ಈಗಲೂ ಅವರು ತಪಸ್ವಿಗಳಿಗೆ ಕಾಣಿಸಿಕೊಳ್ಳುವರು. ಈ ಬೆಟ್ಟದ ಆಕಾರವನ್ನು ನೋಡು. ಇದರ ದಕ್ಷಿಣದಲ್ಲಿ ಇದು ಕುಳಿತಿರುವ ಹಸುವಿನಾಕಾರದಂತೆ ಕಂಡುಬರುವುದು. ರೇಣುಕಾ ಮಾತೆಯು ಪರಶುರಾಮರಿಗೆ ಕುಂಡಲಿನಿ ವಿದ್ಯೆಯನ್ನು ನೀಡಿದಳು. ಸಾಧಕನಿಗೆ ಅಹಂಕಾರ, ಮಮಕಾರ, ಆಸೆಗಳು ಶತ್ರುಗಳು. ರೇಣುಕಾ ಮಾತೆಯ ಶಕ್ತಿಯು ನಾಡಿ ಗ್ರಂಥಿಯನ್ನು ಕಡಿದುಹಾಕಿ ಅದನ್ನು ಶಿರದಿಂದ ಬೇರ್ಪಡಿಸುವಳು. ಪರಶುರಾಮರು ಸ್ವಯಂ ಕಾರ್ತಿಕೇಯ, ಹಾಗೂ ಅವರು ರುದ್ರಗ್ರಂಥಿಯ ಭೇದನದ ಮೂಲಕ ತಮ್ಮ ನಿಜರೂಪವನ್ನು ಅರಿತರು. ಈ ಲಿಂಗವನ್ನೇ ಅವರು ಪೂಜಿಸಿದ್ದು. ಈ ಪ್ರದೇಶವು ತಪಸ್ಸನ್ನಾಚರಿಸಲು ಪವಿತ್ರವಾದದ್ದು" ಎಂದರು. ದೈವರಾತನು ನಾಯನರಿಗೆ ನಮಸ್ಕರಿಸಿ ತನಗೂ ಇಲ್ಲಿಯೇ ತಪಸ್ಸನ್ನಾಚರಿಸಲು ಅನುಮತಿಯನ್ನು ಬೇಡಿದನು. ನಾಯನರು ಮುಗುಳ್ನಗುತ್ತಾ ದೈವರಾತನ ಶಿರವನ್ನು ಮುಟ್ಟಿ, "ಹಾಗೇ ಆಗಲಿ" ಎಂದರು.

ನಾಯನರು ತಮ್ಮ ಪತ್ನಿಗೆ, "ಇಲ್ಲಿನ ದಹರ ಗುಹೇಶನ ಸಮ್ಮುಖದಲ್ಲಿ ತಪಸ್ಸನ್ನಾಚರಿಸುವೆ. ನೀನು ರಾಜ ಪರಿವಾರದೊಂದಿಗೆ ನಗರಕ್ಕೆ ಹೋಗು. ದೈವರಾತನೂ ನನ್ನೊಂದಿಗೆ ಇರಲು ಬಯಸಿರುವನು. ಮೂರು ದಿನಕ್ಕೊಮ್ಮೆ ಆಹಾರವನ್ನು ಕಳಿಸಿದರಾಯಿತು. ಅದನ್ನು ರಾಜನು ಏರ್ಪಾಡುಮಾಡುವನು. ನೀನು ನನಗೆ ತಪಸ್ಸನ್ನಾಚರಿಸಲು ಅನುಮತಿಯನ್ನು ನೀಡು." ಎಂದರು. ನಾಯನರ ಸ್ವಭಾವವನ್ನರಿತಿದ್ದ ವಿಶಾಲಾಕ್ಷಿಯು ಕೂಡಲೇ ಒಪ್ಪಿದಳು. ರಾಜನಿಗೆ ಸ್ವಲ್ಪ ಆತಂಕವಾಗಿ, "ಈ ಸ್ಥಳದಲ್ಲಿ ಬಹಳ ಕ್ರೂರ ಮೃಗಗಳಿರುವುದು. ಹೇಗೆ ತಪಸ್ಸನ್ನು ಮಾಡುವಿರಿ?" ಎಂದು ಕೇಳಿದನು. ತಪಸ್ವಿಗಳಿಗೆ ಕ್ರೂರ ಮೃಗಗಳು ಅಪಾಯವನ್ನು ಮಾಡುವುದಿಲ್ಲ ಎಂದು ಭರವಸೆಯನ್ನು ನಾಯನರು ನೀಡಿದರು. ಸಂಜೆಯ ಹೊತ್ತಿಗೆ ಎಲ್ಲರೂ ಬೆಟ್ಟದಿಂದ ಕೆಳಗಿಳಿದು ಹೋದರು. ಕೇವಲ ನಾಯನರು ಹಾಗೂ ದೈವರಾತ ಮಾತ್ರ ಬೆಟ್ಟದ ಮೇಲೆ ಉಳಿದರು.

ಗೋಕರ್ಣೇಶ್ವರ ಮಂದಿರದ ಬಳಿ ನಾಯನರು ಒಂದು ಪ್ರಶಸ್ತವಾದ ಸ್ಥಳವನ್ನು ಹುಡುಕಿ ಅಲ್ಲಿನ ಕಲ್ಲು ಚಪ್ಪಡಿಯ ಮೇಲೆ ಕುಳಿತು ಕೂಡಲೇ ಅಂತರ್ಮುಖಿಯಾಗಿ ಧ್ಯಾನಾಸಕ್ತರಾದರು. ದೈವರಾತನು ಅವರ ರಕ್ಷಕನಾಗಿ ಅವರನ್ನು ಕಾಯತೊಡಗಿದನು. ಇಪ್ಪತ್ತು ದಿನಗಳ ದೀರ್ಘಕಾಲ ತೀವ್ರವಾದ ತಪಸ್ಸನ್ನಾಚರಿಸಿದರು. ನಾಯನರ ತಪಸ್ಸಿನ ತೀವ್ರತೆಯನ್ನು ಈ ಕೆಳಗಿನ ಶ್ಲೋಕದಲ್ಲಿ ಅರಿಯಬಹುದು:

ನಭಸಃ ಶೀರ್ಷದ್ವಾರಾ ಪ್ರವಹಂತೀಂ ಯ ಇಹ ವಿಗ್ರಹೇ ಶಕ್ತಿಮ್
ಅನುಸಂದಧಾತಿ ನಿತ್ಯಂ ಕೃತಿನಸ್ತಸ್ಯೇತರೈರಲಂ ಯೋಗೈಃ ॥
– ಉಮಾಸಹಸ್ರಮ್ (1–4–8)

“ಆಕಾಶದಿಂದ ಭೌತಿಕ ಶರೀರದೊಳಕ್ಕೆ ಮಸ್ತಕದ ಮೂಲಕ ಸತತವಾಗಿ ಹರಿಯುವ ಶಕ್ತಿಯನ್ನು ನೋಡುವ ಮುನಿಗಳಿಗೆ ಬೇರೆ ಯಾವುದೇ ಯೋಗಾಭ್ಯಾಸದ ಅಗತ್ಯವಿರುವುದಿಲ್ಲ.”

ದಿನೇ ದಿನೇ ನಾಯನರ ಮುಖದಲ್ಲಿ ಪ್ರಕಾಶತೆಯು ಹೆಚ್ಚತೊಡಗಿತು. ಇಪ್ಪತ್ತನೇ ದಿನ ದಹರ ಗುಹೆಯಿಂದ ರೂಪವೊಂದು ಹೊರಬಂದು ನಾಯನರ ಬಳಿಬಂದು ತೀವ್ರವಾದ ಕರುಣೆಯಿಂದ ಅವರನ್ನು ನೋಡಿತು. ಆ ರೂಪದ ಹಸ್ತದಲ್ಲಿ ಕೊಡಲಿಯಿತ್ತು ಹಾಗೂ ಶ್ವೇತವಸ್ತ್ರಧಾರಿಯಾಗಿ ಋಷಿಯಂತೆ ಕಂಡುಬರುತ್ತಿತ್ತು. ಆ ರೂಪವು ಪರಶುರಾಮನಲ್ಲದೆ ಬೇರೆ ಅಲ್ಲ. ಆ ರೂಪದ ಶಿರದಿಂದ ಬೆಳಕಿನ ಕಿರಣವೊಂದು ಹೊರಬಂದು ನಾಯನರ ಶಿರವನ್ನು ತಲುಪಿ ಅನಂತರ ಅವರ ಶರೀರವನ್ನು ಪ್ರವೇಶಿಸಿತು. ಕೂಡಲೇ ನಾಯನರ ಶರೀರದಾದ್ಯಂತ ವಿದ್ಯುತ್ ಸಂಚಾರವಾದ ಅನುಭವವಾಯಿತು.

ಈ ಅನುಭವದ ನಂತರ ನಾಯನರು ತಪಸ್ಸನ್ನು ಸಮಾಪ್ತಿಗೊಳಿಸಿದರು. ದೈವರಾತನು ನಾಯನರ ಶಿರದ ಹಿಂಭಾಗದಲ್ಲಿ ಪ್ರಜ್ವಲವಾದ ಪ್ರಭೆಯನ್ನು ಕಂಡು ಅವರ ತಪಸ್ಸು ಫಲಪ್ರದವಾಯಿತೆಂದುಕೊಂಡನು. ನಾಯನರು, “ದೈವರಾತ! ಪರಶುರಾಮರ ಕರುಣೆಯನ್ನು ನಾನು ಪಡೆದೆ. ನಾವು ಮನೆಗೆ ಹೋಗೋಣವೇ?” ಎಂದರು. ಅನಂತರ ಇಬ್ಬರೂ ಮನೆಯಕಡೆಗೆ ನಡೆದರು. ದೈವರಾತ ತನ್ನ ಗುರುವು ತಪಸ್ಸನ್ನಾಚರಿಸುವುದನ್ನು ಮೊಟ್ಟ ಮೊದಲ ಬಾರಿಗೆ ಕಂಡನು. ಅವನು ಭಕ್ತಿಯಿಂದ ನಾಯನರಿಗೆ ನಮಸ್ಕರಿಸಿದನು.

ರಾಜ ಹಾಗೂ ಅವನ ಪರಿವಾರದವರು ನಾಯನರ ವದನದಿಂದ ಹೊರಬರುತ್ತಿರುವ ಉಜ್ವಲ ಪ್ರಭೆಯನ್ನು ಕಂಡು ಅವರ ತಪಃಶಕ್ತಿಯ ಬಗ್ಗೆ ಆಶ್ಚರ್ಯಚಕಿತರಾದರು.

೪

ಶ್ರೀ ರಮಣ ಗೀತೆಯ ಉದಯ

ಮಹರ್ಷಿಂ ರಮಣಂ ನತ್ವಾ ಕಾರ್ತಿಕೇಯಂ ನರಾಕೃತಿಂ
ಮತಂ ತಸ್ಯ ಪ್ರಸನ್ನೇನ ಗ್ರಂಥೇನೋಪನಿಬಧ್ಯತೇ ॥
– ಶ್ರೀ ರಮಣ ಗೀತ

"ಕಾರ್ತಿಕೇಯ ಸ್ವಾಮಿಯು ಮಾನವನಾಗಿ ಜನಿಸಿರುವ ಶ್ರೀ ರಮಣ ಮಹರ್ಷಿಗಳಿಗೆ ನಮಿಸುತ್ತಾ ಅವರ ಬೋಧನೆಗಳನ್ನು ಪರಿಶುದ್ಧ ಮನಸ್ಸಿನಿಂದ ಪುಸ್ತಕ ರೂಪದಲ್ಲಿ ಹೊರತರಲಾಗಿದೆ."

ಸತ್ಯವನ್ನು ಸಾಕ್ಷಾತ್ಕರಿಸಿಕೊಂಡವನೇ ಋಷಿ. ಅವನು ಸತ್ಯಾನ್ವೇಷಕರಿಗೆ ಮಾರ್ಗದರ್ಶಿ. ಅವನು ತಾನು ಯಾವ ರೀತಿಯಲ್ಲಿ ಸತ್ಯವನ್ನು ಸಾಕ್ಷಾತ್ಕರಿಸಿಕೊಂಡೆ ಎಂಬುದನ್ನು ತಿಳಿಸುತ್ತಾನೆ. ಯಾರಿಗೆ ಅವನಲ್ಲಿ ನಂಬಿಕೆಯುಂಟೋ ಅವರು ಅವನನ್ನು ಅನುಸರಿಸುತ್ತಾರೆ. ಆಧುನಿಕ ಪರಿಕಲ್ಪನೆಯೆಂದರೆ "ಪ್ರತ್ಯಕ್ಷಂ ಪರಮಂ ಪ್ರಮಾಣಂ" – "ನಾವು ಏನನ್ನು ನೋಡುತ್ತೇವೆಯೋ ಅದನ್ನು ಮಾತ್ರ ನಂಬುವೆವು," ಎಂಬುದಾಗಿ. ಆಧುನಿಕ ಜನಾಂಗಕ್ಕೆ ಶ್ರೀರಮಣ ಮಹರ್ಷಿಗಳು ಸ್ವೀಕಾರಾರ್ಹ ಋಷಿಗಳು. ಅವರ ಉಪದೇಶಗಳು ಧರ್ಮ, ಜಾತಿ, ಕಾಲ, ದೇಶ, ನಂಬಿಕೆಗಳ ಪರಿಧಿಯಿಂದಾಚೆಗೆ ಇರುವುದು. ಅದಕ್ಕೆ ವೇದಗಳ ಒಪ್ಪಿಗೆ ಇರುವುದು.

ದರ್ಶನವೆಂದರೆ ಅನುಭವಜನ್ಯ ಜ್ಞಾನ. ಅದನ್ನು ವಿದ್ಯಾ ಎಂದೂ ಕರೆಯಲಾಗುವುದು. ವೇದಗಳಲ್ಲಿ ತನ್ನನ್ನು ಅರಿಯಲು ಅನೇಕ ರೀತಿಯ ವಿದ್ಯೆಗಳನ್ನು ಸೂಚಿಸಲಾಗಿದೆ. ಆತ್ಮವನ್ನು ಅರಸಲು ಹಾಗೂ ಆತ್ಮಜ್ಞಾನವನ್ನು ಅರಿಯುವುದನ್ನು ವೈಶ್ವಾನರ ವಿದ್ಯಾ ಎಂದು ಕರೆಯಲಾಗುವುದು. ಹೃದಯವೇ ಪರಮೋಚ್ಚ ಆಕಾಶ ಅಥವಾ ದಹರಮ್. ಋಷಿಗಳು ಈ ದಹರಮ್‌ನ್ನು ಆತ್ಮ ಎಂದು ಘೋಷಿಸಿದರು. ಸದಾ ಈ ದಹರಮ್‌ನಲ್ಲಿ ಐಕ್ಯವಾಗಿರುವುದೇ ಆತ್ಮನಿಷ್ಠ ದಹರ ವಿದ್ಯೆಯೇ ಹೃದಯ ವಿದ್ಯಾ. ಶ್ರೀರಮಣ ಮಹರ್ಷಿಗಳಿಗೆ ಈ ವಿದ್ಯೆಯ ಅನುಭವ ಜ್ಞಾನವಿತ್ತು.

ಮಹರ್ಷಿಯ ನಿಜವಾದ ಉಪದೇಶವೆಂದರೆ ಮೌನ. ಹೇಗೆ ಮಹಾಗಣಪತಿಯು ವೇದವ್ಯಾಸರಿಗೆ ಲೇಖಕನಾದನೋ ಅದೇ ರೀತಿ ಈ ಉಪದೇಶವನ್ನು ಮಾತುಗಳಲ್ಲಿ

ಪ್ರಚುರಪಡಿಸಲು ಗಣಪತಿ ಮುನಿಗಳು ಲೇಖಕರಾದರು. ದಿನಾಂಕ 29–12–1913ರಂದು ಗಣಪತಿ ಮುನಿಗಳು (ತಾವು ಕೇಳುವ ಪ್ರಶ್ನೆಗಳಿಗೆ ಬರುವ ಉತ್ತರವು ಅನೇಕ ಅನ್ವೇಷಕರಿಗೆ ಲಾಭವಾಗುವುದೆಂದು ಅರಿತು) ಭಗವಾನರಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಿದರು. ಗಣಪತಿ ಮುನಿಗಳು ಈ ಪ್ರಶ್ನೋತ್ತರಗಳನ್ನು ಹದಿನೇಳು ಶ್ಲೋಕಗಳ ಅಧ್ಯಾಯವನ್ನು "ಉಪಾಸನಾ ಪ್ರಾಧಾನ್ಯ ನಿರೂಪಣಮ್" ಎಂದು ಕರೆದರು.

1917ರರ ವರೆಗೂ ಬೇರಾವ ಯೋಚನೆಯನ್ನೂ ಮಾಡಲಿಲ್ಲ. ನಾಯನರು ಮಹೇಂದ್ರಗಿರಿಯಲ್ಲಿ ಪರಶುರಾಮರ ದರ್ಶನದ ನಂತರ ಮನೆಗೆ ಮರಳಿ ಬಂದಾಗ ಅವರ ಶಿಷ್ಯ ರಾಮನಾಥ ಬ್ರಹ್ಮಚಾರಿಯು ಅರುಣಾಚಲದಿಂದ ನಾಯನರನ್ನು ನೋಡಲು ಬಂದನು. ಅವನು ಭಗವಾನ್ ರಮಣ ಮಹರ್ಷಿಗಳು ರಚಿಸಿದ ಈ ಕೆಳಗಿನ ಶ್ಲೋಕವನ್ನು ನಾಯನರಿಗೆ ತೋರಿಸಿದನು:

ಹೃದಯಕುಹರಮಧ್ಯೇ ಕೇವಲಂ ಬ್ರಹ್ಮಮಾತ್ರಂ
ಅಹಮಹಮಿತಿ ಸಾಕ್ಷಾದಾತ್ಮರೂಪೇಣ ಭಾತಿ
ಹೃದಿ ವಿಶ ಮನಸಾ ಸ್ವಂ ಚಿನ್ವತಾ ಮಜ್ಜತಾ ವಾ
ಪವನಚಲನಾರೋಧಾದಾತ್ಮನಿಷ್ಠೋ ಭವ ತ್ವಂ ॥

"ಹೃದಯ ಗುಹೆಯ ಮಧ್ಯದಲ್ಲಿ ಕೇವಲ ಬ್ರಹ್ಮನ್ ಸ್ವಯಂ ಆಗಿ 'ನಾನು ನಾನು' ಎಂದು ಸ್ವಯಂ ಆತ್ಮರೂಪನಾಗಿ ಬೆಳಗುತ್ತಿರುವನು. ಆತ್ಮನನ್ನು ಅರಿಯುವ ಅನ್ವೇಷಣೆಯಲ್ಲಿ ಹೃದಯದ ಆಳಕ್ಕೆ ತಲುಪಿ, ಅಥವಾ ಉಸಿರಾಟದ ಮೂಲಕ ಮನಸ್ಸನ್ನು ಹತೋಟಿಯಲ್ಲಿರಿಸಿಕೊಂಡು ಆತ್ಮನಲ್ಲಿ ಪ್ರತಿಷ್ಠಾಪಿಸಿಕೊಂಡಿರು."

ಈ ಶ್ಲೋಕವು ಭಗವಾನ್ ರಮಣ ಮಹರ್ಷಿಗಳ ಉಪದೇಶದ ಸಾರ. 1917ರಲ್ಲಿ ಜಗದೀಶ್ವರ ಶಾಸ್ತ್ರಿ ಎಂಬ ವಿದ್ವಾಂಸನು ರಮಣ ಮಹರ್ಷಿಗಳ ಉಪದೇಶವನ್ನು ಶ್ಲೋಕಗಳ ಮೂಲಕ ಪ್ರಸ್ತುತಿಪಡಿಸಲು ಪ್ರಾರಂಭಿಸಿ ಮೊದಲನೇ ಸಾಲನ್ನು "ಹೃದಯ ಕುಹರ ಮಧ್ಯೆ" ಎಂದಷ್ಟೇ ಬರೆದು ಮುಂದೆ ಬರೆಯಲಾಗಲೇ ಇಲ್ಲ. ಅಪೂರ್ಣವಾದ ಶ್ಲೋಕವನ್ನು ವಿದ್ವಾಂಸನು ಭಗವಾನರ ಬಳಿ ಕೊಂಡೊಯ್ದನು ಹಾಗೂ ಭಗವಾನರು ಅದನ್ನು ಪೂರ್ಣಗೊಳಿಸಿದರು. ಕಡೆಗೆ ಈ ಶ್ಲೋಕವು ನಾಯನರ ಬಳಿಗೆ ಬಂದಿತು.

ನಾಯನರು ಈ ಶ್ಲೋಕವನ್ನು ನೋಡಿ ಅತ್ಯಂತ ಸಂತೋಷಭರಿತರಾದರು. 1917ರಲ್ಲಿ ನಾಯನರು ತಮ್ಮ ಪತ್ನಿ ವಿಶಾಲಾಕ್ಷಿಯೊಡನೆ ಭಗವಾನರ ದರ್ಶನವನ್ನು ಪಡೆಯಲು ಅರುಣಾಚಲಕ್ಕೆ ಬಂದರು. ನಾಯನರು ಅರುಣಾಚಲಕ್ಕೆ ಬಂದಿರುವ ವಿಷಯವನ್ನರಿತ ಅವರ ಶಿಷ್ಯ ದೈವರಾತನೂ ಗೋಕರ್ಣದಿಂದ ಅರುಣಾಚಲಕ್ಕೆ ಬಂದನು. ಹಾಗೆ ಕಪಾಲಿ ಶಾಸ್ತ್ರಿ ಮತ್ತಿತರ ೦ ಅಲ್ಲಿಗೆ ಬಂದರು. ಅವರೆಲ್ಲರೂ ವಿದ್ವಾಂಸರು ಹಾಗೂ ಪ್ರತಿನಿತ್ಯವೂ

ಭಗವಾನರ ಬಳಿಬಂದು ಅನೇಕ ಪ್ರಶ್ನೆಗಳನ್ನು ಕೇಳುತ್ತಿದ್ದರು ಹಾಗೂ ಕರುಣಾಮಯಿಯಾದ ಭಗವಾನರು ಅವುಗಳಿಗೆ ಸೂಕ್ತವಾಗಿ ಉತ್ತರಿಸುತ್ತಿದ್ದರು. ಈ ಪ್ರಶ್ನೋತ್ತರಗಳು ಜುಲೈ 7, 1917ರಂದು ಪ್ರಾರಂಭವಾಯಿತು. ನಾಯನರು ಈ ಎಲ್ಲ ಪ್ರಶ್ನೋತ್ತರಗಳನ್ನೂ ಒಂದೆಡೆ ಕ್ರೋಢೀಕರಿಸಿ ಅದಕ್ಕೆ "ರಮಣಗೀತ" ಎಂದು ಹೆಸರಿಸಿದರು. ಈ ರಮಣಗೀತೆಯ ಬಗ್ಗೆ ಭಗವಾನರು ಒಮ್ಮೆ ಈ ರೀತಿ ಪ್ರತಿಕ್ರಿಯಿಸಿರುವರು, "1913ರಲ್ಲಿ ನಾಯನರು ಕೆಲವು ಪ್ರಶ್ನೆಗಳನ್ನು ನನ್ನ ಬಳಿ ಕೇಳಿದರು ಹಾಗೂ ನನ್ನಿಂದ ಉತ್ತರವನ್ನು ಪಡೆದರು. ಈ ಆಲೋಚನೆಗಳು ಅವರ ಮನದಲ್ಲಿ ಆಳವಾಗಿ ಬೇರೂರಿದ್ದರಿಂದ ಈ ಬಗ್ಗೆ ಯಾರಾದರೂ ಯಾವುದೇ ಪ್ರಶ್ನೆಗಳನ್ನು ಕೇಳಿದರೂ, ಕೂಡಲೇ ಅವರು ಅದಕ್ಕೆ ಉತ್ತರವನ್ನು ಸಂಸ್ಕೃತ ಶ್ಲೋಕ ರಚನೆಯ ಮೂಲಕ ನಿಂತಲ್ಲೇ ರಚಿಸಿ, ಅದು ರಮಣಗೀತೆಯಲ್ಲಿ ಇಂಥದೇ ಅಧ್ಯಾಯದಲ್ಲಿ ಇರುವುದೆಂದು ಖಡಾಖಂಡಿತವಾಗಿ ಹೇಳುತ್ತಿದ್ದರು. ಇವೆಲ್ಲವನ್ನೂ ಅವರು ಕಾಗದದಲ್ಲಿ ಬರೆಯುವ ಮೊದಲೇ ವಿವರಿಸುತ್ತಿದ್ದರು. ಅವರು ಅಧಿಕೃತವಾಗಿ ಎಷ್ಟು ಖಚಿತವಾಗಿ ಹೇಳುತ್ತಿದ್ದರೆಂದರೆ, ಅದನ್ನು ಯಾರೂ ಪ್ರಶ್ನಿಸುವ ಮಾತೇ ಇಲ್ಲ. ಇಂತಹ ಸಂದರ್ಭದಲ್ಲಿ ಅವರು ಭಾವುಕರಾಗುತ್ತಿದ್ದರು. ಬಹಳ ಕಾಲ ಈ ರೀತಿ ಮಾಡಿದ ನಂತರವೇ ಅವರು ರಮಣಗೀತೆಯನ್ನು ರಚಿಸಿದರು.

ಒಮ್ಮೆ ಭಕ್ತನೊಬ್ಬನು ರಮಣ ಮಹರ್ಷಿಗಳಲ್ಲಿ, "ಭಗವನ್, ನಾಯನರಲ್ಲಿ ಯಾರಾದರೂ, "ಎಲ್ಲಿದೆ ಆ ಗೀತ" ಎಂದು ಕೇಳಿದರೆ, ನಾಯನರು ಹೇಗೆ ಉತ್ತರಿಸಬಹುದು" ಎಂದು ಕೇಳಿದಾಗ, ಭಗವಾನರು, "ಯಾರು ಅವರೊಂದಿಗೆ ವಿರೋಧಿಸುವರು ಅಥವಾ ವಾದಿಸುವರು? ಯಾರಿಗೆ ಧೈರ್ಯವಿದೆ?" ಎಂದರು. ಅವರ ವರ್ತನೆಯು ಎಷ್ಟರ ಮಟ್ಟಿಗೆ ಅಧಿಕೃತವಾಗಿರುತ್ತಿತ್ತೆಂದರೆ ಯಾರೂ ಸಹ ಅವರನ್ನು ಪ್ರಶ್ನಿಸುವ ಸಾಹಸ ಮಾಡುತ್ತಿರಲಿಲ್ಲ. ರಮಣಗೀತೆಯನ್ನು ರಚಿಸಿದ ನಂತರ ನಾಯನರು ಕೆಲವು ವೇಳೆ ನಿಂತ ನಿಲುವಿನಲ್ಲೇ ಶ್ಲೋಕವನ್ನು ಉದ್ಧರಿಸಿ ಅದು ರಮಣ ಗೀತೆಯಲ್ಲಿ ಇರುವುದೆಂದು ಹೇಳುತ್ತಿದ್ದರು. ಯಾರಾದರೂ ಆ ಶ್ಲೋಕವು ರಮಣ ಗೀತೆಯಲ್ಲಿ ಇಲ್ಲವೆಂದಾಗ ಅದಕ್ಕೆ ನಾಯನರು ಅದು ಮಹಾ ರಮಣ ಗೀತೆಯಲ್ಲಿರುವುದೆಂದು ಹೇಳುತ್ತಿದ್ದರು. ಈ ಮಹಾ ರಮಣಗೀತೆಯು ಕೃತಿರೂಪದಲ್ಲಿರದೇ ಅದು ನಾಯನರ ತಲೆಯಲ್ಲಿರುತ್ತಿತ್ತು.

ಶ್ರೀರಮಣಗೀತೆಯು ಭಗವದ್ಗೀತೆಯಂತೆ ಹದಿನೆಂಟು ಅಧ್ಯಾಯಗಳಿಂದ ಕೂಡಿದೆ. ಇದು ಉಪಾಸನೆ (ಪೂಜೆ)ಯಿಂದ ಪ್ರಾರಂಭವಾಗಿ ಕೊನೆಯ ಅಧ್ಯಾಯವು ಭಗವಾನ್ ರಮಣ ಮಹರ್ಷಿಗಳನ್ನು ವೈಭವೀಕರಿಸಿ ಸಿದ್ಧರ ಮಹತ್ವವನ್ನು ವಿವರಿಸುತ್ತದೆ. ಈ ಕೃತಿಯು ಎಲ್ಲ ರೀತಿಯಲ್ಲೂ ಗೃಹಸ್ಥರಿಗೆ, ತಪಸ್ವಿಗಳಿಗೆ, ಸಾಧುಗಳಿಗೆ, ಬ್ರಹ್ಮವಾದಿಗಳಿಗೆ, ಸಾಂಖ್ಯರಿಗೆ, ಭಾರತೀಯರಿಗೆ ಹಾಗೂ ವಿದೇಶಿಯರಿಗೂ ಅತ್ಯಂತ ಉಪಯುಕ್ತವಾದದ್ದು.

ಈ ಕೃತಿಯಲ್ಲಿ ಪ್ರಶ್ನೆಗಳನ್ನು ಕೇಳಿರುವವರು ಸಾಮಾನ್ಯ ಮನುಷ್ಯರಲ್ಲ. ಪ್ರಶ್ನೆಗಳನ್ನು ಕೇಳಿದವರೆಂದರೆ:

1. ದೈವರಾತ ಅವರ ಮತ್ತೊಂದು ನಾಮಧೇಯವು ಗಜಾನನ. ಅವರು ನಾಯನರ ಶಿಷ್ಯರು. ವೇದ ವಿದ್ವಾಂಸರು ಮತ್ತು ಮಹಾನ್ ಭಕ್ತರು ಹಾಗೂ ರಮಣ ಮಹರ್ಷಿಗಳನ್ನು ಕುರಿತು "ವಿಭಕ್ತ್ಯಾಷ್ಟಕಮ್" ಕೃತಿಯನ್ನು ರಚಿಸಿದವರು.
2. "ಯೋಗನಾಥ ಯತೀಂದ್ರ", ಇವರು ಸಂನ್ಯಾಸಿಗಳು, ಶಂಕರನಾರಾಯಣನ್ ಎನ್ನುವವರು.
3. "ಕಪಾಲಿ ಶಾಸ್ತ್ರಿ", ಇವರು ನಾಯನರ ಶಿಷ್ಯರು ಹಾಗೂ "ಸದ್ದರ್ಶನ" ಕೃತಿಯ ವಿಮರ್ಶಕರು, ಸಂಸ್ಕೃತ ವಿದ್ವಾಂಸರು, ಕವಿಗಳು ಹಾಗೂ ರಮಣ ಮಹರ್ಷಿಗಳ ಭಕ್ತರು.
4. "ಶ್ರೀಮತಿ ವಿಶಾಲಾಕ್ಷಿ", ನಾಯನರ ಧರ್ಮಪತ್ನಿ. ಶ್ರೀವಿದ್ಯಾ ಉಪಾಸಕರು, ತಾರಾಮಂತ್ರ ಸಿದ್ಧಿಯನ್ನು ಪಡೆದಿದ್ದರು ಹಾಗೂ ತಮ್ಮದೇ ಆದ ರೀತಿಯಲ್ಲಿ ಮಹಾನ್ ತಪಸ್ವಿನಿ.
5. "ಭಾರದ್ವಾಜ" (ಕರ್ಶನಿ), ಇವರು ಶ್ರೀಕೃಷ್ಣ ಐಯ್ಯರ್ ಅವರ ಪುತ್ರ ಹಾಗೂ ವೈದ್ಯನಾಥ ಐಯ್ಯರ್ ಅವರ ಮೇಲ್ವಿಚಾರಕರು.
6. "ಭಾರದ್ವಾಜ ವೈದರ್ಭಿ", ಇವರು ಒಂಗೋಲ್ ನಿವಾಸಿ ಹಾಗೂ ಇವರ ಮತ್ತೊಂದು ಹೆಸರು ಚಿವ್ವುಕುಲ ವೆಂಕಟ ಶಾಸ್ತ್ರಿ. ನಂತರ ಸಂನ್ಯಾಸವನ್ನು ಸ್ವೀಕರಿಸಿ ಉಪನಿಷತ್ ಬ್ರಹ್ಮೇಂದ್ರ ಸರಸ್ವತಿ ಎಂದು ಕರೆಯಲ್ಪಟ್ಟವರು.
7. ಕೇರಳ ನಿವಾಸಿ "ಅಮೃತನಾಥ ಯತೀಂದ್ರ".

ಈ ಮಹಿಮಾನೆತರೆಲ್ಲರ ಸಹಕಾರದಿಂದ ಶ್ರೀರಮಣಗೀತ ಕೃತಿಯು ಹೊರಬರಲು ಕಾರಣವಾಯಿತು.

ಗಳಂತೀ ಗಂಗೇಯಂ ವಿಮಲತರಗೀತ್ಯೈವ ಮಹತೋ
ನಗಾಧೀಶಾತ್‌ಶ್ರೀಮದ್ರಮಣ ರೂಪಾಜ್ಞನಿಮತೀ
ಪಥೋ ವಾಣೀರೂಪಾದ್ಗಣಪತಿಕವೇರ್ಭಕ್ತಹೃದಯಂ
ಸಮುದ್ರಂ ಸಂಯಾತಿ ಪ್ರಬಲಮಲಹಾರಿಣ್ಯನುಪದಮ್ ॥

"ಶ್ರೀರಮಣಗೀತವೆಂಬ ಪರಿಶುದ್ಧವಾದ ಗಂಗೆಯು ಮಹರ್ಷಿ ರಮಣರೆಂಬ ಹಿಮಾಲಯದಲ್ಲಿ ಹುಟ್ಟಿ ಕಾವ್ಯಕಂಠ ಗಣಪತಿ ಮುನಿಗಳ ಮೂಲಕ ಹರಿದುಬಂದು ಅನೇಕ ದುಷ್ಟಶಕ್ತಿಗಳನ್ನು ಶುದ್ಧಿಮಾಡಿ ಭಕ್ತರ ಹೃದಯ ಸಾಗರದಲ್ಲಿ ಲೀನವಾಗುವುದು."

ಆಶ್ಚರ್ಯವೆಂದರೆ, ಭಗವಾನ್ ರಮಣ ಮಹರ್ಷಿಗಳು ಸಂಸ್ಕೃತ ಭಾಷೆಯಲ್ಲಿ ಪರಿಣತರೇನಲ್ಲ, ಆದರೆ ನಾಯನರೊಂದಿಗಿನ ಒಡನಾಟದಿಂದ ಅವರಲ್ಲಿ ಸಂಸ್ಕೃತ ಜ್ಞಾನವು ವೃದ್ಧಿಯಾಯಿತು ಒಮ್ಮೆ ನಾಯನರು ರಮಣ ಮಹರ್ಷಿಗಳನ್ನು ಸಂಸ್ಕೃತದಲ್ಲಿ ಶ್ಲೋಕ
ು ಕೇಳಿಕೊಂಡಾಗ ಅವರು ತಮಗೆ ಹೇಗೆ ರಚಿಸುವುದೆಂದು

ಗೊತ್ತಿಲ್ಲವೆಂದರು. ಅವರು ನಾಯನರನ್ನು ಸಂಸ್ಕೃತ ಶ್ಲೋಕ ರಚನೆ ಹಾಗೂ ಛಂದಸ್ಸುಗಳ ಬಗ್ಗೆ ಕಲಿಸುವಂತೆ ಕೇಳಿಕೊಂಡರು. ನಂತರ ನಾಯನರು ರಮಣ ಮಹರ್ಷಿಗಳಿಗೆ ಆರ್ಯಾವೃತ್ತ ಛಂದಸ್ಸಿನಲ್ಲಿ ಸಂಸ್ಕೃತ ಶ್ಲೋಕವನ್ನು ರಚಿಸುವುದರ ಬಗ್ಗೆ ಕಲಿಸಿಕೊಟ್ಟರು. ಇದರ ಫಲವಾಗಿ ರಮಣ ಮಹರ್ಷಿಗಳು "ಅರುಣಾಚಲ ಪಂಚರತ್ನ" ಎಂಬ ಐದು ಶ್ಲೋಕಗಳನ್ನೊಳಗೊಂಡ ಕೃತಿಯನ್ನು ರಚಿಸಿದರು. ಇದರಿಂದ ಅಪಾರವಾಗಿ ಸಂತೋಷಗೊಂಡ ನಾಯನರು ಅದನ್ನು ಶ್ರೀರಮಣಗೀತೆಯಲ್ಲಿ ಪ್ರಾರ್ಥನಾ ಶ್ಲೋಕಗಳನ್ನಾಗಿ ಸೇರಿಸಿದರು.

ಈ ರಚನೆಯ ನಂತರ ಪ್ರಣವಾನಂದರು ನಾಯನರನ್ನು ಶ್ರೀರಮಣಗೀತೆಗೆ ಭಗವಾನ್ ರಮಣ ಮಹರ್ಷಿಗಳನ್ನು ಕುರಿತು ಹಿನ್ನುಡಿಯನ್ನು ರಚಿಸುವಂತೆ ಕೇಳಿಕೊಂಡರು. ನಾಯನರು ಇದಕ್ಕೆ ಒಪ್ಪಿ ಕೂಡಲೇ "ಗುರುಗೀತಮ್" ಎಂಬುದಾಗಿ ರಚಿಸಿದರು. ಈ ರಚನೆಯ ಸಂದರ್ಭವು ಬೇರೆಯಾಗಿದ್ದರೂ, ಇವೆಲ್ಲವೂ ಶ್ರೀರಮಣಗೀತೆಗೆ ಹೊಂದಿಕೊಂಡೇ ಇದೆ.

೨೪

ಹೊಸ ವೇದದ ಅವತರಣಿಕೆ

ವೇದಾಃ ಸರ್ವೇ ಪರಾವಾಣೇ ಶುದ್ಧಜ್ಞಾನಮಯಾಹಿ ತೇ
ಅಂತರಸ್ಯಾತ್ಮನಃ ಸಾಕ್ಷಾತ್ತೇ ಸ್ಯುಃ ಶಬ್ದಮಯಂ ಮಹಾಃ ॥
– ಗಣಪತಿ ಮುನಿ ವಿರಚಿತ (ವಿಶ್ವ ಮೀಮಾಂಸ)

"ವೇದಗಳು ದೈವೀ ಶಬ್ದಗಳಾದ್ದರಿಂದ (ಪರಾವಾಕ್), ಅದು ಪರಿಶುದ್ಧವಾದ ಜ್ಞಾನ. ಅದು ಪದಗಳ ರೂಪದಲ್ಲಿನ ಆತ್ಮ ಜ್ಯೋತಿ."

ಸಮಸ್ತ ಶಬ್ದಗಳಿಗೂ ಮೂಲವೇ ಪ್ರಣವ. ಹಾಗಾಗಿ "ಓಂ" ಅಥವಾ ಪ್ರಣವವನ್ನು ಶಬ್ದ ಬ್ರಹ್ಮನ್ ಎಂದು ಕರೆಯಲಾಗುವುದು. ಓಂಕಾರ ಶಬ್ದವು ರೂಪುಗೊಳ್ಳುವುದಕ್ಕೆ ಮೊದಲೇ ಶಬ್ದವು ಅಸ್ತಿತ್ವದಲ್ಲಿತ್ತು. ಆ ಹಂತದಲ್ಲಿ ಅದು ಶಕ್ತಿ. ಮಂತ್ರಗಳ ಭಾಷೆಯಲ್ಲಿ ಅದನ್ನು ಶುದ್ಧ ಚಿತ್ ಅಥವಾ ಶುದ್ಧ ಜ್ಞಾನವೆಂದು ಕರೆಯಲಾಯಿತು. ಅದೇ ವೇದದ ಸ್ವರ ಅಥವಾ ಶಬ್ದರೂಪ. ಸಮಸ್ತ ಜ್ಞಾನದ ಮೂಲವೇ ಈ ಶಬ್ದ. ಯಾರು ಈ ಶಬ್ದವನ್ನು ಸಂಪೂರ್ಣವಾಗಿ ಅರಿಯುತ್ತಾರೋ ಅವರೇ ಸಮಸ್ತ ಜ್ಞಾನಗಳ ಒಡೆಯ. ಶಬ್ದವನ್ನು ಪೂಜಿಸುವುದೆಂದರೆ ಸ್ವತಃ ಭಗವಂತನನ್ನು ಪೂಜಿಸಿದಂತೆ.

ಯಾರು ಪರಾ ಶಬ್ದವನ್ನು ಅರಿಯುವರೊ ಅವರೇ ಋಷಿ. ಇದು ತಪಸ್ಸಿನ ಮೂಲಕ ಸಾಧ್ಯ. ವೇದಗಳ ಜ್ಞಾನವೇ ಸತ್ಯದ ಜ್ಞಾನ. ಸತ್ಯವನ್ನು ತಿಳಿಯಪಡಿಸುವುದಕ್ಕೆ ಋಷಿಯು ಮಾಧ್ಯಮವಾಗುವನು. ಪರಾವಾಕ್ ಇಂದ್ರಿಯ, ಮನಸ್ಸು ಹಾಗೂ ಬುದ್ಧಿಗಳಿಗೆ ಮೀರಿದ್ದು. ಋಷಿಯು ಆಳವಾದ ಧ್ಯಾನದಲ್ಲಿರುವಾಗ ಈ ಸತ್ಯವನ್ನು ಅರಿತು ಕೂಡಲೇ ಆ ಅನುಭವವನ್ನು ಪದಗಳ ರೂಪದಲ್ಲಿ ವ್ಯಕ್ತಪಡಿಸುವನು. ಅದೇ ವೇದಮಂತ್ರವಾಗುವುದು.

ವೇದ ಮಂತ್ರಗಳು ಅನಂತವಾದದ್ದು. ಅದು ದೇಶ, ಕಾಲ, ವರ್ತಮಾನಗಳಿಗೆ ಒಳಗಾಗಿರುವುದಿಲ್ಲ. ಅದು ಶಾಶ್ವತವಾದದ್ದು. ಆದರೆ, ನಮಗೆ ತಿಳಿದಿರುವಂತೆ ಭಾಷೆಗೆ ಮಿತಿಯುಂಟು. ಹಾಗಾಗಿ ವೇದಗಳ ಶಾಶ್ವತವಾದ ಸತ್ಯವು ಅನುಭವ ಜ್ಞಾನವಾಗುವುದು ಮತ್ತು ಅವುಗಳ ಅಂತಿಮ ಭಾಷೆಯು ಮೌನ. ಶ್ರೀರಮಣ ಮಹರ್ಷಿಗಳ ಅಂತರಾರ್ಥವೆಂದರೆ, "ಹೃದಯ-ಹೃದಯಗಳ ನಡುವಿನ ನೈಜವಾದ ಮಾತುಗಳೇ ಮೌನ." ಆದರೆ, ಜಗತ್ತಿನ

ಒಳಿತಿಗಾಗಿ, ವೇದಗಳ ಸತ್ಯವನ್ನು ಭಾಷೆಯ ಮೂಲಕ ವ್ಯಕ್ತಪಡಿಸಬೇಕಿದೆ. ಈ ಹಂತದಲ್ಲಿ ಪರಿಕಲ್ಪನೆಯು ಶಾಶ್ವತವಾಗುವುದು ಹಾಗೂ ಭಾಷೆಯು ನಶ್ವರವಾಗುವುದು. ಹಾಗಾಗಿ ಜ್ಞಾನಿಗಳ ಪ್ರಕಾರ ವೇದವು ಪರೋಕ್ಷವಾಗಿ ಸತ್ಯವನ್ನು ಘೋಷಿಸುತ್ತದೆ.

ಪ್ರಾಚೀನಕಾಲದ ಋಷಿಮುನಿಗಳು ವೇದಗಳನ್ನು ಜಗತ್ತಿನ ಒಳಿತಿಗಾಗಿರುವ ಮಾರ್ಗದರ್ಶಿಯೆಂದು ಘೋಷಿಸಿರುವರು. ನಾಯನರ ಪ್ರಕಾರ ಆ ರೀತಿಯ ವೇದಗಳ ಬಹಿರಂಗಪಡಿಸುವಿಕೆಯು ಈ ಕಾಲದಲ್ಲೂ ಸಾಧ್ಯ.

ನಾಯನರು ಈ ರೀತಿಯಾಗಿ ಘೋಷಿಸಿರುವರು:

1. ವೇದಗಳು ಶಬ್ದಾಧಾರಿತ ಮಂತ್ರಗಳು. ಅವುಗಳು ಭಗವಂತನ ಬಗ್ಗೆ ಜ್ಞಾನವನ್ನು ಹಾಗೂ ಆಧ್ಯಾತ್ಮ ಅನುಭವಗಳನ್ನು ನೀಡುವುದು. ಅವುಗಳನ್ನು ತಪಸ್ಸಿನ ಮೂಲಕ ಹಾಗೂ ಒಳನೋಟಗಳಿಂದ ಅರಿಯಬಹುದು.
2. ಅತ್ಯುತ್ತಮವಾದ ಬ್ರಹ್ಮಜ್ಞಾನವೇ ವೇದಗಳು ಹಾಗೂ ಅದನ್ನು ಸಾಧನೆ ಮತ್ತು ಅನುಭವಗಳ ಮೂಲಕ ಪಡೆದುಕೊಳ್ಳಬಹುದು. ತಪಸ್ಸಿನ ಮೂಲಕ ಕೇಳಿಬರುವ ಪದಗಳು ಬ್ರಹ್ಮಜ್ಞಾನವನ್ನು ಅರಿಯಲು ಸಹಕಾರಿಯಾಗುವುದು.
3. ಸತ್ಯದರ್ಶನಕ್ಕಾಗಿ ಯಾವಾಗ ಋಷಿಯು ತನ್ನೆಲ್ಲ ತಪಃಶಕ್ತಿಯನ್ನು ಹಾಗೂ ಜ್ಞಾನವನ್ನು ಉಪಯೋಗಿಸುವನೋ ಆಗ ತಂತಾನೆ ಅವನ ಹೃದಯದಲ್ಲಿ ಸತ್ಯಜ್ಞಾನವು ಉಂಟಾಗುವುದು. ಅದನ್ನೇ ಅಂತರದರ್ಶನ ಎನ್ನುವರು.
4. ವೇದಗಳು ಸದಾ ಹರಿಯುವ ಸತ್ಯದ ಶಬ್ದ. ಅವು ಅಪಾರ ಹಾಗೂ ಋಷಿಗಳು ಅದನ್ನು ತಪಸ್ಸಿನ ಮೂಲಕ ಕಂಡುಕೊಳ್ಳುವರು.
5. ಸಾಧಕನ ಸಾಧನೆಯ ಪ್ರಗತಿಯ ಮೇಲೆ ಅವಲಂಬಿಸಿ ಅವನಿಗೆ ಸತ್ಯದ ಜ್ಞಾನೋದಯವಾಗುವುದು.
6. ಹಿಂದಿನ ಋಷಿಗಳಿಗೆ ಹೇಗೆ ಇದು ಸಾಧ್ಯವಾಗುತ್ತಿತ್ತೋ ಅದೇ ರೀತಿಯಲ್ಲಿ ಈಗಲೂ ವೇದದರ್ಶನವು ಸಾಧ್ಯ.
7. ತಪಸ್ಸು ಹಾಗೂ ಅಂತಃಚಕ್ಷುವಿನ ಮೂಲಕ ಸತ್ಯದರ್ಶನವನ್ನು ಗಳಿಸಬಹುದು. ಅದೇ ರೀತಿಯಲ್ಲಿ ಮಂತ್ರದರ್ಶನವೂ ಸಾಧ್ಯ.

ನಾಯನರು ಈ ಬೋಧನೆಗಳನ್ನು ನೀಡಿದ್ದಲ್ಲದೆ, ಅವರು ಹೊಸ ವೇದದರ್ಶನವನ್ನು ಆರಂಭಿಸಿದರು. ಅದು ಆಗಿದ್ದು ಹೀಗೆ:

1917ರಲ್ಲಿ ನಾಯನರು ಮಂದಸವನ್ನು ಬಿಟ್ಟು ಅರುಣಾಚಲವನ್ನು ತಲುಪಿದರು. ಅವರೊಂದಿಗೆ ಅವರ ಪತ್ನಿಯೂ ಬಂದರು. ಇದನ್ನು ಅರಿತ ದೈವರಾತನೂ ಅರುಣಾಚಲಕ್ಕೆ

ಬಂದನು. ನಾಯನರು ದೈವರಾತನನ್ನು ಭಗವಾನರಿಗೆ ಪರಿಚಯಿಸಿದರು. ಭಗವಾನರ ಸಹಜನಿಷ್ಠೆಯ (ಆತ್ಮನಲ್ಲಿಯ ಸತತವಾದ ನಿಷ್ಠೆ) ಬಗ್ಗೆ ದೈವರಾತನು ಬಹಳವಾಗಿ ಪ್ರಭಾವಿತನಾಗಿ ತಾನೂ ಅದನ್ನು ಅನುಭವಿಸಬೇಕೆಂಬ ಸ್ಫೂರ್ತಿಯನ್ನು ಅವರಿಂದ ಪಡೆದನು. ನಾಯನರಿಗೆ ತನ್ನ ಶಿಷ್ಯನ ಈ ವಿಧದ ಸಂಕಲ್ಪವು ಅರಿವಾಯಿತು.

ನಾಯನರು ತಮ್ಮ ಪತ್ನಿ ಹಾಗೂ ದೈವರಾತನೊಂದಿಗೆ ತಮಗಿಷ್ಟವಾದ ತಪಸ್ಸಿನ ಕ್ಷೇತ್ರವಾದ ಪಾದೈವೀಡುವಿಗೆ ಪ್ರಯಾಣ ಬೆಳೆಸಿದರು. "ದೈವರಾತ, ನಾವು ಮಾತೆ ರೇಣುಕಾದೇವಿಯ ಪಾದದಡಿಯಲ್ಲಿ ತಪಸ್ಸನ್ನಾಚರಿಸೋಣ" ಎಂದು ದೈವರಾತನಿಗೆ ಹೇಳಿದರು.

ಇದಕ್ಕೆ ದೈವರಾತನು, "ಓ ಗುರುವೇ! ನಿಮ್ಮ ಕರುಣೆಯಿಂದ ರಮಣ ಮಹರ್ಷಿಗಳ ದರ್ಶನ ಭಾಗ್ಯವು ಲಭಿಸಿ ನಾನು ಧನ್ಯನಾದೆ. ಅದೇ ರೀತಿ ನಾನು ನಿಮ್ಮ ಸನ್ನಿಧಿಯಲ್ಲಿ ತಪಸ್ಸನ್ನಾಚರಿಸಲು ಆಶೀರ್ವದಿಸಿ." ಎಂದನು. ಈ ಮಾತನ್ನು ಮಾತೆ ರೇಣುಕಾ ದೇವಿಯು ಆಲಿಸಿದಳೋ ಎಂಬಂತೆ ದೇವಿಯ ಪಾದಗಳಿಂದ ಪುಷ್ಪವೊಂದು ಜಾರಿ ಬಿದ್ದಿತು ಹಾಗೂ ಅದನ್ನು ಪೂಜಾರಿಯು ಎತ್ತಿ ಇವರಿಗೆ ನೀಡಿದನು.

ಒಂದು ಸಣ್ಣ ಗುಡಿಸಿಲನ್ನು ಕಟ್ಟಿ ಭಾದ್ರಪದ ನವಮಿಯಂದು ಮೂರೂ ಜನರು ತಪಸ್ಸನ್ನು ಆರಂಭಿಸಿದರು. ದೈವರಾತನು ವೇಗವಾಗಿ ತಪಸ್ಸನ್ನು ಆಚರಿಸತೊಡಗಿದನು. ಅವನ ಸುತ್ತಲೂ ವಿಚಿತ್ರ ಹಾಗೂ ಸುಂದರವಾದ ಪ್ರಭೆಯು ಹೊಳೆಯುತ್ತಿತ್ತು. ದೈವರಾತನು ಗಾಢವಾದ ಸಮಾಧಿಸ್ಥಿತಿಯಲ್ಲಿರುವಾಗ ಅವನ ಬಾಯಿಂದ ಅಸ್ಪಷ್ಟ ಪದಗಳು ಹೊರಬರುತ್ತಿರುವುದನ್ನು ನಾಯನರು ಗಮನಿಸಿದರು. ಮೊದಲಿಗೆ ನಾಯನರು ಅದರ ಬಗ್ಗೆ ಹೆಚ್ಚಿನ ಮಹತ್ವವನ್ನು ನೀಡಲಿಲ್ಲ. ಆದರೆ ಎರಡನೇ ದಿನವೂ ಅವನ ಬಾಯಿಂದ ಅಸ್ಪಷ್ಟವಾದ ಮಂತ್ರಗಳು ಹೊರಬರುತ್ತಿರುವುದನ್ನು ಮನಗಂಡರು. ಕುತೂಹಲರಾದ ನಾಯನರು ದೈವರಾತನ ಬಳಿಗೆ ಹೋಗಿ ಎಚ್ಚರಿಕೆಯಿಂದ ಅವನ ಬಾಯಿಂದ ಹೊರಬರುತ್ತಿದ್ದ ಶಬ್ದಗಳನ್ನು ಕೇಳಿಸಿಕೊಳ್ಳತೊಡಗಿದರು. ಅದು ವೇದ ಮಂತ್ರಗಳಂತೆ ಕೇಳಿಬರುತ್ತಿತ್ತು. ಆಶ್ಚರ್ಯಚಕಿತರಾದ ನಾಯನರು ರೇಣುಕಾ ದೇವಿಯನ್ನು ಸ್ತುತಿಸಿ ಮತ್ತು ಅವಳೇ ವೇದಮಾತೆಯೆಂದು ಅರಿತರು. ವೇದಮಾತೆಯ ಸಂಪೂರ್ಣ ಶಕ್ತಿಯು ದೈವರಾತನ ಮೇಲೆ ಮಳೆಗರೆಯುತ್ತಿತ್ತು. ನಾಯನರ ಕಣ್ಣುಗಳಿಗೆ ದೇವಿಯ ಮುಖಭಾವದಿಂದ ಯಾವುದೋ ಸಂದೇಶವು ಹೊರಬರುತ್ತಿರುವಂತೆ ಅನಿಸಿತು ಮತ್ತು ಅದನ್ನು ಅವರು ತಮ್ಮ ಅಂತಃಚಕ್ಷುವಿನಿಂದ ಅರಿತರು. ನಿಂತ ನಿಲುವಿನಲ್ಲೇ ಅವರು ಹೊಸ ವೇದವನ್ನು ಬರೆಯಲು ಪ್ರಾರಂಭಿಸಿದರು. ಮೊದಲಿಗೆ ಮಾತೆಯನ್ನು ಈ ಶ್ಲೋಕದ ಮೂಲಕ ಹೊಗಳಿದರು:

ವೇದಮಾತಾ ಭಗವತೀ ಶಬ್ದಬ್ರಹ್ಮಾತ್ಮಿಕಾ ಪರಾ
ತತ್ತ್ವಂ ಪ್ರಬೋಧಯತ್ವಾಶು ಲೇಖಿನೀ ಬ್ರಹ್ಮಚೋದಿನೀ ॥

"ವೇದ ಮಾತೆಯು ಪದಗಳ ರೂಪದಲ್ಲಿ ನನ್ನನ್ನು ಬ್ರಹ್ಮಸತ್ಯದ ಬಗ್ಗೆ ಬರೆಯಲು ಸ್ಫೂರ್ತಿನೀಡುತ್ತಿರುವಳು. ಈ ಸತ್ಯವನ್ನು ಶೀಘ್ರವಾಗಿ ತಲಪುವಂತೆ ಅವಳು ನಮ್ಮನ್ನು ಆಶೀರ್ವದಿಸಲಿ."

ಕೂಡಲೇ ನಾಯನರು ದೈವರಾತನ ಬಾಯಿಂದ ಹೊರಬರುತ್ತಿದ್ದ ವೇದ ಮಂತ್ರಗಳನ್ನು ಬರೆದುಕೊಳ್ಳತೊಡಗಿದರು. ಈ ದೈವೀ ಕಾರ್ಯವು (ಯಜ್ಞ) ಹೇಗೆ ಕಾರ್ಯಗತವಾಯಿತು ಎಂಬುದನ್ನು ಅವರ ಮಾತಿನಲ್ಲೇ ಕೇಳೋಣ:

"ಮೌಲ್ಯದಿಂದ ಕೂಡಿದ ಪದಗಳು ಮಕ್ಕಳ ಬಾಯಿಂದ ಹೊರಬಂದರೂ ಅವುಗಳನ್ನು ಬರೆದಿಟ್ಟುಕೊಳ್ಳಬೇಕು. ವೇದಗಳ ಬಗೆಗೆ ಅಪಾರ ಗೌರವವನ್ನು ಹೊಂದಿರುವ ಹಾಗೂ ನನ್ನ ಶಿಷ್ಯರ ಮೇಲಿನ ವಿಶೇಷ ಪ್ರೀತಿಯಿಂದಾಗಿ ನಾನು ದೈವರಾತನಿಂದ ಹೊರಬರುತ್ತಿರುವ ಮಂತ್ರಗಳು "ಛಂದೋ-ದರ್ಶನಮ್" ಎಂಬುದನ್ನರಿತು ಅವುಗಳನ್ನು ಸರಿಯಾಗಿ ಜೋಡಿಸಿಕೊಳ್ಳಲು ಪ್ರಾರಂಭಿಸಿದೆ.

ಕೆಲವು ಪದಗಳು ವೇಗವಾಗಿ ಹಾಗೂ ಅಸ್ಪಷ್ಟವಾಗಿ ಹಾಗೂ ಅಪೂರ್ಣವಾಗಿ ಹೊರಬರುತ್ತಿತ್ತು. ಅಸ್ಪಷ್ಟ ಪದಗಳನ್ನು ಕಡೆಗಣಿಸಿ ನಾನು ಸ್ಪಷ್ಟವಾದ ಪದಗಳನ್ನು ಮಾತ್ರವೇ ಆರಿಸಿಕೊಂಡು ಅವುಗಳನ್ನು ಬರೆದುಕೊಳ್ಳತೊಡಗಿದೆ. ಈ ಮಂತ್ರಗಳು ಜನಸಾಮಾನ್ಯರಿಗೆ ಅನುಕೂಲವಾಗುವುದೆಂಬ ಉದ್ದೇಶದಿಂದ ಮಂತ್ರದ ಮೂಲಕ ಹೊರಬರುತ್ತಿದ್ದ ದೇವತೆಗಳ ವರ್ಣನೆಗಳನ್ನು ಕ್ರಮವಾಗಿ ಬರೆದುಕೊಳ್ಳತೊಡಗಿದೆ. ಎಲ್ಲ ಮಂತ್ರಗಳನ್ನೂ ಮಂತ್ರ, ಸೂಕ್ತ ಹಾಗೂ ಅನುವಾಕಗಳನ್ನಾಗಿ ವಿಂಗಡಿಸಿ ಸಂಪೂರ್ಣ ಕೃತಿಯನ್ನು ಆಧರಿಸಿ ವ್ಯಾಖ್ಯಾನವನ್ನು ಬರೆಯತೊಡಗಿದೆ.

ಈ ಸಮಯದಲ್ಲಿ ದೈವರಾತನು ಕೇವಲ ಇಪ್ಪತ್ತೈದು ವರ್ಷದ ಯುವಕ ಹಾಗೂ ತನ್ನ ಬಾಲ್ಯದಿಂದಲೂ ಯೋಗಾಭ್ಯಾಸವನ್ನು ಮಾಡುತ್ತಿದ್ದರೂ ಸಂಸ್ಕೃತ ಭಾಷೆಯ ಮೇಲೆ ಅವನಿಗೆ ಅಷ್ಟೇನೂ ವಿದ್ವತ್ತಿರಲಿಲ್ಲ. ಯೋಗಾಭ್ಯಾಸದ ಮೇಲಿನ ಈ ರೀತಿಯ ಶಿಸ್ತು ಅವನಿಗೆ ತಪಸ್ಸನ್ನಾಚರಿಸಲು ಸಹಕಾರಿಯಾಯಿತು ಹಾಗೂ "ಛಂದೋ-ದರ್ಶನಮ್" ಕೃತಿಯು ಹೊರಬರಲು ಸಾಧ್ಯವಾಯಿತು. ಮಂತ್ರಗಳು ಋಗ್ವೇದ ಮಂತ್ರಗಳಂತೇ ಇದ್ದವು.

"ದೈವರಾತನ ಮೇಲೆ ನನಗೆ ಅತೀವ ಪ್ರೀತಿ. ಅವನು ಯೋಗಿ, ತಪಸ್ವಿ, ಸತ್ಯದರ್ಶನವನ್ನು ಪಡೆದವನು ಹಾಗೂ ವೇದ ಮಂತ್ರಗಳನ್ನು ಸಾಕ್ಷಾತ್ಕರಿಸಿಕೊಂಡವನು. ಅವನ ವರ್ತನೆ, ವಿದ್ಯಾರ್ಹತೆ, ತಪಸ್ಸು, ಯೋಗಗಳೆಲ್ಲವೂ ಮಹಾನ್ ಋಷಿಪಂಥವನ್ನು ನೆನಪಿಗೆ ತರುತ್ತದೆ.

ಹಾಗಾಗಿ ನಾನು ಅವನನ್ನು ಬ್ರಹ್ಮರ್ಷಿ ಎಂದು ಘಂಟಾಘೋಷವಾಗಿ ಘೋಷಿಸುವೆ." ಎಂಬುದಾಗಿ ನಾಯನರು ಬರೆದರು.

ಈ ಮಹಾನ್ ಪವಿತ್ರ ಕೃತಿಯನ್ನು ನಾಯನರು ಕಾರ್ತೀಕ ಹುಣ್ಣಿಮೆಯ ದಿನದಂದು ಬರೆಯಲು ಪ್ರಾರಂಭಿಸಿ ಅದನ್ನು ಮಾಘ ಮಾಸದ ಹುಣ್ಣಿಮೆಯ ದಿನದಂದು ಪೂರ್ಣಗೊಳಿಸಿದರು. "ಛಂದೋ-ದರ್ಶನಮ್" ಕೃತಿಯನ್ನು ಹೊಸವೇದವೆಂದು ಪರಿಗಣಿಸಲಾಯಿತು ಹಾಗೂ ಇದರ ಆಂಗ್ಲ ಭಾಷೆಯ ಆವೃತ್ತಿಯನ್ನು ಭಾರತೀಯ ವಿದ್ಯಾ ಭವನವು ಪ್ರಕಟಿಸಿತು. ದೈವರಾತನು ಅತ್ಯಂತ ವಿನಯದಿಂದ ಈ ಮಂತ್ರಗಳು ತನ್ನಿಂದ ಹೊರಬರಲು ನಾಯನರೇ ಕಾರಣವೆಂದು ಘೋಷಿಸಿದನು.

ನಾಯನರು ತಮ್ಮ ಗುರು ರಮಣರನ್ನು ಮಹರ್ಷಿ ಎಂದೂ ಮತ್ತು ದೈವರಾತನನ್ನು ಬ್ರಹ್ಮರ್ಷಿ ಎಂದೂ ಘೋಷಿಸಿದರು. ಸಾಮಾನ್ಯವಾಗಿ ನಾವು ಶಿಷ್ಯನು ಗುರುಗಳನ್ನು ಹೊಗಳುವುದನ್ನು ನೋಡಿದ್ದೇವೆ, ಆದರೆ ನಾಯನರಂತೆ ಶಿಷ್ಯನನ್ನು ಹೊಗಳುವುದನ್ನು ನೋಡಿಲ್ಲ. ಇದು ನಾಯನರ ಉದಾತ್ತತೆಯನ್ನು ತೋರುತ್ತದೆ.

ವೇದದ್ರಷ್ಟಾ ಸ ಭಗವಾನ್ ಬ್ರಹ್ಮರ್ಷಿಃ ಬ್ರಹ್ಮಣಸ್ಪತಿಃ
ವಾಚಂ ಸಂಚೋದಯತ್ವಾಶು ವೇದಾರ್ಥಸ್ಯ ಪ್ರಕಾಶನೇ ॥

"ವೇದಗಳನ್ನು ಗ್ರಹಿಸಿದ ಬ್ರಹ್ಮರ್ಷಿಯಾದ ಭಗವಾನ್ ಬ್ರಹ್ಮಣಸ್ಪತಿಯು ವೇದಗಳ ಸತ್ಯಗಳನ್ನು ತೋರಲು ನನ್ನ ನುಡಿಗಳ ಮೂಲಕ ಪ್ರಕಾಶಿಸಲಿ."

೭

ಆಯುಧಗಳ ಶಕ್ತಿ

ಅಸ್ತ್ರಂ ಮಮ ಭವಧ್ವಂಸಾಯ ರಟತಾಮ್
ಸುತ್ರಾಮತರುಣಿ ಶ್ರೀಮಾತರಸತಾಮ್ ॥

– ಇಂದ್ರಾಣಿ ಸಪ್ತಶತಿ – 97

"ಓ ಇಂದ್ರಾಣಿ ಮಾತೆ! ಶ್ರೀ ಮಾತಾ! ದುಷ್ಟ ಕಾರ್ಯಗಳನ್ನು ಎಸಗುವವರನ್ನು ನಾಶಪಡಿಸಲು ನನ್ನ ಆಯುಧವಾಗಿ ಬೆಳಗು."

ಈಗ ನಮ್ಮದು ಅಣುಯುಗ. ಶಕ್ತಿಯುತ ರಾಷ್ಟ್ರಗಳು ತಮ್ಮಲ್ಲಿನ ಅಣ್ವಸ್ತ್ರಗಳನ್ನು ನಭೋಮಂಡಲದಲ್ಲಿ ಶೇಖರಿಸಿಟ್ಟುಕೊಂಡು ಬೇಕಾದಾಗ ಅದನ್ನು ಉಪಯೋಗಿಸುವ ಆಲೋಚನೆಯಲ್ಲಿರುವರು. ಈ ಶಕ್ತಿಶಾಲಿ ರಾಷ್ಟ್ರಗಳ ಟೀಕಾಕಾರರು ಈ ರೀತಿಯ ಆಲೋಚನೆಗಳನ್ನು ಶಾಂತಿಗೆ ಧಕ್ಕೆ ಬರುವುದೆಂದು ಟೀಕಿಸುತ್ತಾರೆ. ಈ ರೀತಿಯ ವಿನಾಶಕಾರಿ ಅಸ್ತ್ರಗಳ ಮೂಲವೇ ಶಕ್ತಿ. ಎಲ್ಲಿಯವರೆಗೂ ಇವುಗಳು ನಿರ್ಜೀವ ವಸ್ತುಗಳ ವಶದಲ್ಲಿರುವುದೋ ಅಲ್ಲಿಯವರೆಗೂ ಯಾವ ವಿಧದ ಅಪಾಯವೂ ಇರುವುದಿಲ್ಲ. ಹೀಗಾಗಿ ನಮ್ಮ ಪೂರ್ವಜರು ಈ ವಿಧದ ಶಕ್ತಿಯನ್ನು ಹತೋಟಿಯಲ್ಲಿಟ್ಟುಕೊಂಡಿದ್ದರು. ಅಣ್ವಸ್ತ್ರಗಳು ಅವರಿಗೆ ಗೊತ್ತಿಲ್ಲದ್ದೇನಲ್ಲ. ಅವರು ಅವುಗಳನ್ನು ತಮ್ಮ ತಪಃಶಕ್ತಿಯಿಂದ ಪಡೆದುಕೊಂಡು ಅವುಗಳನ್ನು ಪ್ರಪಂಚದ ಒಳಿತಿಗಾಗಿ ಉಪಯೋಗಿಸುತ್ತಿದ್ದರು. ಆ ಅಸ್ತ್ರಗಳಿಗೆ ಪ್ರಪಂಚವನ್ನು ಸಂಪೂರ್ಣವಾಗಿ ನಾಶಮಾಡುವ ಶಕ್ತಿಗಳಿದ್ದರೂ, ಅವರುಗಳು ಪ್ರಕೃತಿಯೊಂದಿಗೆ ಶಾಂತಿಯಿಂದ ಇದ್ದರು. ಈ ವಿಷಯವಾಗಿ ರಾಮಾಯಣದ ಕರ್ತೃ ವಾಲ್ಮೀಕಿ ಮುನಿಗಳು ನಾರದ ಮುನಿಗಳನ್ನು ಪ್ರಶ್ನಿಸಿದರು:

ಆತ್ಮವಾನ್ ಕೋ ಜಿತಕ್ರೋಧೋ ಧೃತಿಮಾನ್ ಕೋಽನಸೂಯಕಃ
ಕಸ್ಯ ಬಿಭ್ಯತಿ ದೇವಾಶ್ಚ ಜಾತರೋಷಸ್ಯ ಸಂಯುಗೇ ॥

"ಆತ್ಮಸಂಯಮವುಳ್ಳವನಾರು? ಕೋಪವನ್ನು ಗೆದ್ದವನು, ಧೈರ್ಯಶಾಲಿ ಯಾರು? ಅಸೂಯೆರಹಿತನು. ದೇವಾನುದೇವತೆಗಳೂ ಭಯಪಡುವುದು ಯಾರಿಗೆ? ಯುದ್ಧದಲ್ಲಿ ಕ್ರೋಧಗೊಂಡವನಿಗೆ".

ಕೋಪವನ್ನು ಗೆಲ್ಲುವುದೆಂದರೆ ಅದನ್ನು ವಿವೇಚನೆಯಿಂದ ಬಳಸುವುದು ಎಂಬುದನ್ನು ಮೇಲೆ ತಿಳಿಸಿರುವ ಶ್ಲೋಕವು ತೋರಿಸಿವುದು. ಶಾಂತಿ ಪ್ರಿಯರು ಕೋಪೋದ್ರಿಕ್ತರಾದಾಗ ಅದು ವಿಶ್ವಶಾಂತಿಗೆ ಒಳಿತಾಗುವುದು. ವಿಶ್ವಾಮಿತ್ರ, ದೂರ್ವಾಸ ಮುನಿಗಳು ಕೋಪೋದ್ರಿಕ್ತರಾದಾಗ ಅವರಿತ್ತ ಶಾಪಗಳು ಹಾಗೂ ಕಟುನುಡಿಗಳು ಯಾವಾಗಲೂ ಮಾನವತೆಗೆ ಒಳಿತನ್ನೇ ಉಂಟುಮಾಡಿದೆ. ಶ್ರೀಕೃಷ್ಣನು ಭೀಷ್ಮ ಪಿತಾಮಹನೆಡೆಗೆ ಕೋಪೋದ್ರಿಕ್ತನಾಗಿ ಅವನನ್ನು ಸಂಹಾರಮಾಡಲು ಸುದರ್ಶನ ಚಕ್ರವನ್ನು ಹಸ್ತದಲ್ಲಿ ಧರಿಸಿದಾಗ ಅದು ಅವನ ಧರ್ಮ ರಕ್ಷಣೆಯ ಬಗೆಗಿನ ಸಂಕಲ್ಪವನ್ನು ತೋರುತ್ತದೆ.

ಋಷಿಮುನಿಗಳ ಮಾರ್ಗವನ್ನು ಅನುಸರಿಸಿದ ನಾಯನರು ತಪಸ್ಸಿನ ಮೂಲಕ ಅಸ್ತ್ರಗಳನ್ನು ಪಡೆದರು. ಅವರ ಗುರಿಯು ದೇಶವನ್ನು ಪರಕೀಯರ ಆಳ್ವಿಕೆಯಿಂದ ಮುಕ್ತಗೊಳಿಸುವುದು ಹಾಗೂ ವೇದ ಸಂಸ್ಕೃತಿಯನ್ನು ಪುನರುತ್ಥಾನಗೊಳಿಸುವುದಾಗಿತ್ತು. ಭಗವಂತನು ಅವರಿಗೆ ಮಹಾನ್ ಗುರು ರಮಣ ಮಹರ್ಷಿಗಳ ಸಂಪರ್ಕವನ್ನು ಉಂಟುಮಾಡುವ ಮೂಲಕ ಅವರನ್ನು ಆಶೀರ್ವದಿಸಿದನು ಹಾಗೂ ರಮಣ ಮಹರ್ಷಿಗಳ ಆಶೀರ್ವಾದದ ಮೂಲಕ ನಾಯನರು ಗುರುಗಳ ಬೋಧನೆಗಳನ್ನು ಶ್ರೀ ರಮಣ ಗೀತೆಯ ಮೂಲಕ ಪ್ರಪಂಚಕ್ಕೆ ಪರಿಚಯಿಸಿದರು. ಆದರೆ ಮೂರ್ಖತನದ ಸಾಂಪ್ರದಾಯಿಕತೆ, ಪದ್ಧತಿಗಳಿಂದ ತುಂಬಿರುವ ಸಮಾಜವನ್ನು ಮೇಲೆತ್ತುವುದು ಅಷ್ಟು ಸುಲಭವಾದ ಕಾರ್ಯವಾಗಿರಲಿಲ್ಲ. ಆದರೆ ನಾಯನರು ತಮ್ಮದೇ ಆದ ರೀತಿಯಲ್ಲಿ ಅಸ್ತ್ರಗಳನ್ನುಪಯೋಗಿಸಿಕೊಂಡು ಸಮಾಜದಲ್ಲಿನ ಮೂಢ ಸಂಪ್ರದಾಯಗಳನ್ನು ನಾಶಮಾಡಲು ಪ್ರಯತ್ನಿಸಿದರು. ರಮಣ ಮಹರ್ಷಿಗಳ ಕಣ್ಣೆದುರೇ ಉದಾಹರಣೆಯ ಸಹಿತ ಈ ಪ್ರಯತ್ನವು ನಡೆಯಿತು.

ಮಲೆಯಾಳಿ ಪಳನಿ ಸ್ವಾಮಿಯು ಹಲವಾರು ವರ್ಷ ರಮಣ ಮಹರ್ಷಿಗಳನ್ನು ಸೇವಿಸುತ್ತಿದ್ದನು. ಅವನು ಒಬ್ಬ ಸಂನ್ಯಾಸಿ ಹಾಗೂ ಅಷ್ಟೇನೂ ವಿದ್ಯಾವಂತನಲ್ಲ. ರಮಣ ಮಹರ್ಷಿಗಳನ್ನು ಬ್ರಾಹ್ಮಣ ಸ್ವಾಮಿ ಎಂದು ಕರೆಯುತ್ತಿದ್ದ ಕಾಲದಿಂದಲೂ ಅವರನ್ನು ಸೇವಿಸುತ್ತಿದ್ದ. ಪಳನಿಗೆ ಧರ್ಮಗ್ರಂಥಗಳಲ್ಲಿರುವ ಸತ್ಯವನ್ನು ಅರಿಯಲು ಉತ್ಸುಕನಾಗಿದ್ದು ಗ್ರಂಥಾಲಯದಿಂದ ಅನೇಕ ಪುಸ್ತಕಗಳನ್ನು ತಂದು ಕಷ್ಟದಿಂದ ಅದನ್ನು ಓದಿ ಅರ್ಥಮಾಡಿಕೊಳ್ಳಲು ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದ್ದ. ಭಗವಾನರು ಅವನ ಆಸೆಯನ್ನು ಅರ್ಥಮಾಡಿಕೊಂಡು ಆ ಪುಸ್ತಕಗಳನ್ನು ಅವನೆದುರಿಗೆ ಓದಿ ಅದರ ಅರ್ಥಗಳನ್ನು ವಿವರಿಸುತ್ತಿದ್ದರು. ಅಲ್ಲಿಂದ ಅವನು ಅವೆಲ್ಲವನ್ನೂ ಮತ್ತೆ ಮತ್ತೆ ಓದಿ ಸತ್ಯದರ್ಶನವನ್ನು ಮಾಡಿಕೊಳ್ಳುತ್ತಿದ್ದನೆಂದು ಭಗವಾನರು ಆಶ್ಚರ್ಯದಿಂದ ಬೇರೆಯವರಲ್ಲಿ ಹೇಳುತ್ತಿದ್ದರು.

ಕ್ರಿ.ಶ.1914ರಲ್ಲಿ ಒಮ್ಮೆ ಶೇಷಾದ್ರಿ ಸ್ವಾಮಿಗಳು ರಮಣ ಮಹರ್ಷಿಗಳನ್ನು ಅವರಿದ್ದ ಬೆಟ್ಟದ ಮೇಲಿನ ಗುಹೆಯಲ್ಲಿ ಭೇಟಿಯಾಗಲು ಬಂದು ಅವರೊಂದಿಗೆ ಭೋಜನವನ್ನು

ಮಾಡಿದರು. ಅವರು ಊಟಮಾಡುತ್ತಿದ್ದಾಗ ತಟ್ಟೆಯ ಸುತ್ತಲೂ ಅನ್ನದ ಅಗುಳುಗಳು ಚೆಲ್ಲಾಡಿದ್ದವು. ಅದನ್ನು ನೋಡಿ ಪಳನಿಗೆ ಕೋಪಬಂದು, "ನೀವು ಈ ರೀತಿ ಊಟಮಾಡಿದರೆ ಇನ್ನು ಮುಂದೆ ನಾನು ಊಟವನ್ನು ನೀಡುವುದಿಲ್ಲ" ಎಂದನು. ಶೇಷಾದ್ರಿ ಸ್ವಾಮಿಯು ಈ ಎಚ್ಚರಿಕೆಯನ್ನು ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಳ್ಳದಿದ್ದರೂ ಅವರು ಮತ್ತೆಂದೂ ಅಲ್ಲಿಗೆ ಊಟಕ್ಕೆ ಬರಲಿಲ್ಲ.

ಹೊಸವೇದವಾದ "ಛಂದೋ–ದರ್ಶನಮ್" ಕೃತಿಯ ರಚನೆಯ ನಂತರ 1918ರಲ್ಲಿ ನಾಯನರು ತಮ್ಮ ಪತ್ನಿಯೊಂದಿಗೆ ರಮಣ ಮಹರ್ಷಿಗಳನ್ನು ಕಾಣಲು ಬಂದರು. ಅರುಣಾಚಲವನ್ನು ಪ್ರವೇಶಿಸುತ್ತಿದ್ದಂತೆ ಅವರು ರಮಣ ಮಹರ್ಷಿಗಳು ವಾಸಿಸುತ್ತಿದ್ದ ಬೆಟ್ಟದ ಮೇಲಿನ ಸ್ಕಂದಾಶ್ರಮಕ್ಕೆ ತೆರಳಿದರು. "ಛಂದೋ–ದರ್ಶನಮ್" ಕೃತಿಯ ಬಗ್ಗೆ ನಾಯನರು ಮಹರ್ಷಿಗಳೊಂದಿಗೆ ಮಾತನಾಡುತ್ತಾ ಅವರಿಗೆ ಕತ್ತಲಾಗಿದ್ದು ಗೊತ್ತಾಗಲಿಲ್ಲ. ಮಹರ್ಷಿಗಳಿಗೆ ಕತ್ತಲಾಗಿದ್ದು ಅರಿವಾಗಿ ಅವರು ಪಳನಿಗೆ ನಾಯನರು ಹಾಗೂ ಅವರ ಪತ್ನಿಯೂ ರಾತ್ರೆಯನ್ನು ವಿರೂಪಾಕ್ಷ ಗುಹೆಯಲ್ಲಿ ಕಳೆಯುವರೆಂದು ಹಾಗಾಗಿ ಗುಹೆಯನ್ನು ಶುದ್ಧಿಗೊಳಿಸುವಂತೆ ತಿಳಿಸಿದರು. ಭಗವಾನರು ಸ್ಕಂದಾಶ್ರಮದಲ್ಲಿರುವಾಗ ಪಳನಿಯು ವಿರೂಪಾಕ್ಷ ಗುಹೆಯಲ್ಲಿರುತ್ತಿದ್ದನು. ಈಗ ಪಳನಿಗೆ ಗೃಹಸ್ಥರು ವಿರೂಪಾಕ್ಷ ಗುಹೆಯಲ್ಲಿ ರಾತ್ರೆ ಮಲಗುವುದು ಇಷ್ಟವಾಗಲಿಲ್ಲ. ಆದರೆ ಅವನಿಗೆ ಇದನ್ನು ಮಹರ್ಷಿಗಳ ಬಳಿ ಹೇಳಲು ಧೈರ್ಯವಿರಲಿಲ್ಲ. ಹಾಗಾಗಿ ಅವನು ಗುಹೆಯ ಬಾಗಿಲಿನ ಕೀಲಿಯನ್ನು ನಾಯನರಿಗೆ ಕೊಡದೇ ಅಲ್ಲಿಂದ ಹೊರಟು ಹೋದನು.

ಸಂಪೂರ್ಣವಾಗಿ ಕತ್ತಲಾದಾಗ ನಾಯನ ದಂಪತಿಗಳು ರಮಣ ಮಹರ್ಷಿಗಳೊಂದಿಗೆ ಬೆಟ್ಟವನ್ನು ಇಳಿದು ವಿರೂಪಾಕ್ಷ ಗುಹೆಯನ್ನು ತಲುಪಿದರು. ಅವರು ಅಲ್ಲಿಗೆ ಬಂದಾಗ ಗುಹೆಯ ಬಾಗಿಲಿಗೆ ಬೀಗ ಹಾಕಲಾಗಿತ್ತು. ಅವರು ಪಳನಿಗಾಗಿ ಸ್ವಲ್ಪ ಸಮಯ ಕಾದರು. ಆದರೆ ಪಳನಿಯು ಬಾರದೇ ಇದ್ದದ್ದರಿಂದ ನಾಯನರಿಗೆ ಪಳನಿಗೆ ತಾವು ಗುಹೆಯಲ್ಲಿ ಮಲಗುವುದು ಇಷ್ಟವಿಲ್ಲವೆಂದು ಅರಿತರು. ಪಳನಿಯ ಪ್ರಕಾರ ಗೃಹಸ್ಥರು ಸಂನ್ಯಾಸಿಗಳು ವಾಸಿಸುವ ಜಾಗದಲ್ಲಿ ನೆಲಸಬಾರದೆಂದಾಗಿತ್ತು. ನಾಯನರಿಗೆ ಅವನ ಮೂರ್ಖತೆಯ ಬಗ್ಗೆ ದುಃಖವಾಗಿ ಅವರು ಮಾತೆಯನ್ನು ಕುರಿತು ಈ ಶ್ಲೋಕದ ಮೂಲಕ ಪ್ರಾರ್ಥಿಸಿದರು:

ಅದ್ಯ ಕ್ರೋಧಂ ವಿಮೋಕ್ಷ್ಯಾಮಿ ಖಾಂಡವೇಽಗ್ನಿಮಿವಾರ್ಜುನಃ
ಭುವನೇ ಪ್ರಾಣಿಭಿಃ ಪೂರ್ಣೇ ಪರಿತೋಽಪಿ ಚ ವಿಸ್ತೃತೇ ॥

"ಅಸಂಖ್ಯಾತ ಜೀವಿಗಳಿಂದ ಕೂಡಿದ ವಿಶಾಲವಾದ ಪ್ರಪಂಚದ ಮೇಲೆ ನಾನು ಕ್ರೋಧವೆಂಬ ಅಸ್ತ್ರವನ್ನು ಅರ್ಜುನನು ಖಾಂಡವ ಅರಣ್ಯದ ಮೇಲೆ ಆಗ್ನೇಯಾಸ್ತ್ರವನ್ನು ಪ್ರಯೋಗಿಸಿದಂತೆ, ಎಸೆಯುತ್ತಿರುವೆನು"

ಗುಹೆಯ ಬಾಗಿಲಿಗೆ ಹಾಕಿದ ಬೀಗದೆಡೆಗೆ ನಾಯನರು ಒಂದು ಸಣ್ಣ ಕಲ್ಲನ್ನು ಎಸೆದರು. ಇದರಿಂದ ಬೀಗವು ಶಬ್ದದೊಡನೆ ಮುರಿದು ಬಿತ್ತು. ವಿಶಾಲಾಕ್ಷಿ ಅಮ್ಮನು ಬಾಗಿಲನ್ನು ತೆಗೆದು ಗುಹೆಯೊಳಗೆ ಪ್ರವೇಶಿಸಿದರು. ನಾಯನರು ಎಸೆದ ಕಲ್ಲು ಬೆಟ್ಟದೊಳಗೆ ತೂತನ್ನು ಮಾಡಿಕೊಂಡು ಮುಂದುವರೆಯತೊಡಗಿತು. ಇದನ್ನು ವೀಕ್ಷಿಸಿದ ನಾಯನರು ಗುಹೆಯ ಬಳಿಯಲ್ಲಿನ ಕಲ್ಲುಹಾಸಿನ ಮೇಲೆ ಕುಳಿತು ಈ ರೀತಿಯಾಗಿ ಪ್ರಾರ್ಥಿಸತೊಡಗಿದರು:

ಸಲಿಲಂ ಕ್ಷಿಪತಶ್ಚಾಪಿ ಧುನ್ವತಶ್ಚಾಪಿ ಪರ್ವತಾನ್
ಯಥೇಂದ್ರಸ್ಯ ತಥೇಶಸ್ಯ ಪುತ್ರಸ್ಯ ಮಮ ವೈಮಹಃ ॥

"ಹೇಗೆ ಇಂದ್ರನ ತೇಜಸ್ಸು ಮಳೆಗರೆಯುವುದೋ ಅಥವಾ ಪರ್ವತಗಳನ್ನು ಒಡೆಯುವುದೋ ಅದೇ ರೀತಿ ನನ್ನ ತೇಜಸ್ಸು ಫಲಪ್ರದವಾಗಲಿ, ಏಕೆಂದರೆ ನಾನು ಭಗವಂತನ ಪುತ್ರ."

ಕೇವಲ ಹದಿನೈದು ನಿಮಿಷಗಳೊಳಗೆ ಅರುಣಾಚಲದ ನಭೋಮಂಡಲವು ದಟ್ಟವಾದ ಕರಿ ಮೋಡಗಳಿಂದಾವೃತವಾಗಿ ಕುಂಭದ್ರೋಣ ಮಳೆಯು ಸುರಿದು ಪರ್ವತದಲ್ಲಿ ಪ್ರವಹಿಸಿತು. ಅರುಣಾಚಲದ ಜನಗಳು ಈ ರೀತಿಯ ಮಳೆಯಿಂದ ಆಶ್ಚರ್ಯಚಕಿತರಾದರು. ಇದ್ದಕ್ಕಿದ್ದಂತೆ ಸಿಡಿಲಿನಿಂದ ಕೂಡಿದ ಭಯಂಕರವಾದ ಶಬ್ದವು ಕೇಳಿಬಂತು. ನಾಯನರು ಕಣ್ತೆರೆದು ನೋಡಿದಾಗ ಅವರ ಮುಂದೆ ಶಾಂತಮೂರ್ತಿಯಾಗಿ ಗುರುಗಳು ನಿಂತಿದ್ದರು. ನಾಯನರಿಗೆ ತಮ್ಮ ಗುರುಗಳು ಈ ರೀತಿಯಾಗಿ ಮಾತನಾಡಿದಂತೆ ಭಾಸವಾಯಿತು, "ನಾಯನ! ಚಿಂತಿಸದಿರು. ನೀನು ಬಿಟ್ಟ ಬಾಣವು ಸ್ವತಂತ್ರ ಭಾರತಕ್ಕೆ ದಾರಿದೀಪವಾಗುವುದು. ಧರ್ಮವನ್ನು ರಕ್ಷಿಸುವವರಿಗೆ ಇದು ಅಂತಃಶಕ್ತಿಯಾಗುವುದು ಹಾಗೂ ಮಾನವ ಕುಲದ ಏಳ್ಗೆಗೆ ಮೊದಲ ಹೆಜ್ಜೆಯಾಗುವುದು."

ದೂರಂ ಯಾಹಿ ಕುವಾದ ಧರ್ಮವೃಷ ತೆ ನೇತಃ ಪರಂ ಪಂಗುತಾ
ದುರ್ಭ್ರಾಂತೇ ಭುವನಂ ಜಹೀಹಿ ಪರಿತೋ ವರ್ಧಸ್ವ ಸಂಸತ್ಸತಾಂ ।
ಸೋದರ್ಯೇಣ ಸಮನೆತೋ ಭುವಮಿಮಾಂ ಪ್ರಾಪ್ತೋ ಗುರುಗ್ರಾಮಣೀಃ
ಶೂರಾನ್ತಃ ಪುರನೇತ್ರವಿಭ್ರಮಹರೋ ದೇವೋ ಭವಾನೀಸುತಃ ॥

"ಓ ಕುತರ್ಕವೇ! ದೂರಹೋಗು. ಓ ಸದಾಚಾರದ ಕೋಣವೇ, ನೀನು ಇನ್ನು ಮುಂದೆ ಎಂದಿಗೂ ಮೂಕನಲ್ಲ. ಓ ಸುಳ್ಳಿನ ಮಾಯೆಯೇ! ಪ್ರಪಂಚದಿಂದ ತೊಲಗು. ಓ ಬುದ್ಧಿವಂತ ಮಾನವರೇ! ನೀವು ಅಭ್ಯುದಯವನ್ನು ಹೊಂದಿರಿ, ಏಕೆಂದರೆ, ಅಸುರರನ್ನು ನಾಶಮಾಡಿದ್ದ ದೇವಾದಿದೇವ ಕುಮಾರಸ್ವಾಮಿಯು ತನ್ನ ಸಹೋದರನೊಂದಿಗೆ ಭುವಿಗಿಳಿದು ಬಂದಿರುವನು."

ನಾಯನರು ತಮ್ಮ ಗುರು ರಮಣರನ್ನು ಹೀಗೆ ಹೊಗಳಿದರು.

ಮಾರನೇ ದಿನ ಅವರಿಗೆ ತಿಳಿದುಬಂದಿದ್ದೇನೆಂದರೆ ಹಿಂದಿನ ದಿನ ಬಡಿದ ಸಿಡಿಲಿನ ಆರ್ಭಟದಿಂದ ಅರುಣಾಚಲೇಶ್ವರ ಮಂದಿರದ ಹಳೇ ರಥವು ಮುರಿಯಿತೆಂದು. ನಾಯನರು ತಾವು ಕೋಪದಿಂದ ಎಸೆದ ವಿನಾಶಕಾರಿ ಅಸ್ತ್ರದಿಂದುಂಟಾಗಬೇಕಿದ್ದ ಅಪಾಯವನ್ನು ಮಾತೆ ಉಮಾ ತನ್ನ ಕರುಣೆಯಿಂದ ಪಾರುಮಾಡಿದ್ದಕ್ಕೆ ಮಾತೆಗೆ ಧನ್ಯವಾದವನ್ನು ಅರ್ಪಿಸಿದರು.

ಶ್ರೀರಮಣರು ನಾಯನರಿಗೆ ಅನೇಕ ಬಾರಿ ಕಾರ್ತಿಕೇಯನಾಗಿ ಕಾಣಿಸಿಕೊಂಡಿದ್ದರಿಂದ ನಾಯನರು ತಮ್ಮ ಅನೇಕ ಕೃತಿಗಳಲ್ಲಿ ಅವರನ್ನು ಕಾರ್ತಿಕೇಯನೆಂದೇ ಚಿತ್ರಿಸಿದ್ದಾರೆ. ಒಮ್ಮೆ ಅವರು ಈ ರೀತಿ ಮಾಡುವುದು ಸರಿಯೆ ಎಂದು ಭಗವಾನರನ್ನು ಕೇಳಿದ್ದಕ್ಕೆ ಮಹರ್ಷಿಯು ಏನನ್ನೂ ಹೇಳದೇ ಮೌನವಹಿಸಿದರು. ಮಾರನೇ ದಿನ ಭಗವಾನರು ನಾಯನರಿಗೆ ವೆನ್ಬ ಛಂದಸ್ಸಿನಲ್ಲಿರುವ ತಮಿಳಿನ ಶ್ಲೋಕವನ್ನು ತೋರಿಸಿ ಅದನ್ನು ಈಶ್ವರ ಸ್ವಾಮಿಯು ವಿನಾಯಕನನ್ನು ಕುರಿತು ವೆನ್ಬ ಛಂದಸ್ಸಿನಲ್ಲಿ ಬರೆದಿರುವರೆಂದು ಹಾಗೂ ಈಶ್ವರ ಸ್ವಾಮಿಯ ಕೋರಿಕೆಯ ಮೇರೆಗೆ ತಾವು ವಿನಾಯಕನನ್ನು ಕುರಿತು ತಮಿಳಿನಲ್ಲಿ ಒಂದು ಶ್ಲೋಕವನ್ನು ಬರೆಯಬೇಕಾಯಿತೆಂದು ತಿಳಿಸಿದರು. ಆ ಶ್ಲೋಕದಲ್ಲಿ ಶ್ರೀರಮಣರು ಗಣಪತಿಯು ತನ್ನ ಸಹೋದರನೆಂದು ಬರೆದು ಹಾಗೂ ಅವರು ವಿನಾಯಕನನ್ನು ರಕ್ಷಿಸಬೇಕೆಂದು ಈಶ್ವರನಲ್ಲಿ ಬೇಡಿಕೊಂಡಿದ್ದರು. ನಾಯನರು ಆ ಶ್ಲೋಕವನ್ನು ಓದಿ ಭಗವಾನರು ತನ್ನ ಮೇಲಿಟ್ಟುಕೊಂಡಿರುವ ಪ್ರೀತಿಯನ್ನು ಕಂಡು ಅವರ ಕಣ್ಣುಗಳು ಅನಂದಾಶ್ರುಗಳಿಂದ ತುಂಬಿಬಂದಿತು. ನಾಯನರಿಗೆ ತಾವು ಭಗವಾನರನ್ನು ಕುಮಾರಸ್ವಾಮಿಯ ಅವತಾರವೆಂದು ಘೋಷಿಸಿದ್ದಕ್ಕೆ ಇದೇ ಸಾಕಷ್ಟು ಪುರಾವೆಯೆಂದು ಭಾವಿಸಿದರು.

೭

ವಿಧಿವಶರಾದ ಅಳಗಮ್ಮ

ಅಳಗು ಸುಂದರಂಪೋಲ್ ಅಗಮುಮ್ ನಿಯುಮುರ್
ತ್ರಭಿನ್ನಾಮ ಇರುಪ್ಪೋಂಮ್ ಅರುಣಾಚಲ

– ಅಕ್ಷರಮನಮಾಲೈ

"ಓ ಅರುಣಾಚಲ! ಅಳಗು ಹಾಗೂ ಸುಂದರಮ್ ಅವರಂತೆ ನಾವಿಬ್ಬರೂ ಬೇರ್ಪಡಿಸಲಾಗದೇ ಇರೋಣ"

ಶಿವ ಮತ್ತು ಶಕ್ತಿ ಒಂದೇ ಹಾಗೂ ಬೇರ್ಪಡಿಸಲಾಗದ್ದು. ಅವರ ಶರೀರಗಳು ನಾಟಕೀಯವಾದದ್ದು. ಶಕ್ತಿಯು ಸ್ತ್ರೀಯನ್ನು ಪ್ರತಿನಿಧಿಸಿದರೆ, ಶಿವನು ಪುರುಷನನ್ನು ಪ್ರತಿನಿಧಿಸುವನು. ಸಾಧಕನು ಅವರ ಐಕ್ಯರೂಪವನ್ನು ಗ್ರಹಿಸಬಹುದು. ರಮಣ ಮಹರ್ಷಿಗಳು ತಮ್ಮ "ಅಕ್ಷರಮನಮಾಲೈ" ಕೃತಿಯಲ್ಲಿ ಈ ಎರಡು ವಿಧದ ದೈವೀ ಸ್ವರೂಪವನ್ನು ಹಾಡಿದ್ದಾರೆ. ಅವರು ಶಿವ ಹಾಗೂ ಶಕ್ತಿಯರ ಐಕ್ಯತೆಯನ್ನು ತಮ್ಮ ಮಾತಾ ಪಿತೃಗಳಾದ ಅಳಗಮ್ಮ ಹಾಗೂ ಸುಂದರಂ ಅವರ ಐಕ್ಯತೆಗೆ ಹೋಲಿಸುತ್ತಾರೆ. ಅವರ ಐಕ್ಯತೆಯೇ ಒಂದು ಅದರ್ಶವಾದದ್ದು, ಏಕೆಂದರೆ ಅವರು ಶ್ರೀ ರಮಣ ಮಹರ್ಷಿಗಳ ತಂದೆ ತಾಯಿಗಳು. ಅವರ ಹೆಸರುಗಳೂ ಒಂದೇ ಅರ್ಥವನ್ನು ನೀಡುವುದು, ಅದೇ ಸೌಂದರ್ಯ. ಮಹರ್ಷಿಯು ತನ್ನ ಬಾಲ್ಯದಲ್ಲೇ ತಂದೆಯನ್ನು ಕಳೆದುಕೊಂಡಿದ್ದರು, ಆದರೆ ಅವರು ತಮ್ಮ ತಾಯಿಯ ಸೇವೆಯನ್ನು ಅವರು ಸಾಯುವವರೆಗೂ ಮಾಡುವ ಹಾಗೂ ಆ ಮೂಲಕ ಅವರ ಋಣವನ್ನು ಮಗನಾಗಿ ಸಲ್ಲಿಸಿದ್ದರು.

ಕ್ರಿ.ಶ.1916ರಲ್ಲಿ ವೃದ್ಧರಾದ ಅಳಗಮ್ಮ ಅವರು ಶ್ರೀ ರಮಣರೊಂದಿಗೆ ಜೀವಿಸಲು ಬಂದರು. ಮೊದಲಿಗೆ ಅವರಿಗೆ ತಪಸ್ವಿ ಹಾಗೂ ನೆಲೆಯಿಲ್ಲದ ಮಗನು ತನ್ನನ್ನು ನೋಡಿಕೊಳ್ಳುತ್ತಾನೋ ಇಲ್ಲವೋ ಎಂಬ ಸಂದೇಹವಿತ್ತು. ಅಲ್ಲದೇ ಶ್ರೀ ರಮಣರ ಶಿಷ್ಯರುಗಳು ತಾನು ಅವರೊಂದಿಗೆ ಇರುವುದಕ್ಕೆ ಒಪ್ಪದೇ ಇರಬಹುದೆಂದು ಅಲೋಚಿಸಿದ್ದರು. ಹಾಗೆ ನೋಡಿದರೆ ಅವರ ಶಿಷ್ಯರು ಇದಕ್ಕೆ ಮೊದಲಿಗೆ ಒಪ್ಪಲಿಲ್ಲ, ಆ ಸಂದರ್ಭದಲ್ಲಿ ರಮಣರು ತಮ್ಮ ತಾಯಿಯ ಬಳಿಗೆ ಬಂದು ಅವರ ಕೈಯನ್ನು ಹಿಡಿದು, "ಅಮ್ಮ, ನಾವು ಇಲ್ಲಿಂದ

ಹೋಗೋಣ. ಬೇರೆಲ್ಲಾದರೂ ಜೀವಿಸುವುದಕ್ಕೆ ಜಾಗವನ್ನು ಹುಡುಕಿಕೊಳ್ಳೋಣ" ಎಂದು ಅಲ್ಲಿಂದ ಹೊರಡಲು ಪ್ರಾರಂಭಿಸಿದರು. ಆ ಸಂದರ್ಭದಲ್ಲಿ ಎಲ್ಲ ಶಿಷ್ಯರೂ ಒಕ್ಕೊರಲಿನಿಂದ ಅವರು ಹೋಗಕೂಡದೆಂದು ಬೇಡಿಕೊಂಡರು ಹಾಗೂ ಇಬ್ಬರೂ ಅಲ್ಲಿಯೇ ಇರಲು ಪ್ರಾರ್ಥಿಸಿಕೊಂಡರು.

ಆ ಕಾಲದಲ್ಲಿ ಅವರ ಶಿಷ್ಯರು ಸಂಗ್ರಹಿಸುತ್ತಿದ್ದ ಸಿದ್ಧಪಡಿಸಿದ ಆಹಾರವು ಹಾಗೂ ಊರಿನ ಬೇರೆ ಜನಗಳು ನೀಡುತ್ತಿದ್ದ ಆಹಾರವು ಎಲ್ಲರಿಗೂ ಆಗುತ್ತಿತ್ತು ಹಾಗೂ ಬೇರೆ ಅಡಿಗೆ ಮಾಡುವ ಸಂದರ್ಭವೇ ಬರುತ್ತಿರಲಿಲ್ಲ.

ಶ್ರೀ ರಮಣರ ತಮ್ಮ ನಾಗಸುಂದರಂ ಕೂಡಾ ತನ್ನ ಪತ್ನಿಯು ತೀರಿಕೊಂಡ ಕೆಲವೇ ದಿನದಲ್ಲಿ ಅರುಣಾಚಲ್ಲಿದ್ದ ಭಗವಾನರ ಪಾದದಡಿಯಲ್ಲಿ ವಾಸಿಸಲು ಬಂದರು. ಅವರು ಸಂನ್ಯಾಸ ದೀಕ್ಷೆಯನ್ನು ಸ್ವೀಕರಿಸಿ ನಿರಂಜನಾನಂದ ಸ್ವಾಮಿಯಾದರು. ಆ ಸಂದರ್ಭದಲ್ಲಿ ವಿರೂಪಾಕ್ಷ ಗುಹೆಯು ವಾಸಿಸಲು ಚಿಕ್ಕದಾದ್ದರಿಂದ ಅವರೆಲ್ಲರೂ ಸ್ಕಂದಾಶ್ರಮಕ್ಕೆ ಬಂದರು. ಅಲ್ಲಿಂದ ಅವರ ತಾಯಿಯು ಎಲ್ಲರಿಗೂ ಅಡುಗೆ ಮಾಡಲು ಪ್ರಾರಂಭಿಸಿದರು.

ಭಗವಾನರು ಎಲ್ಲರಲ್ಲಿಯೂ ತೋರುತ್ತಿದ್ದ ಸಮಾನತೆಯನ್ನು ಪದಗಳಲ್ಲಿ ವರ್ಣಿಸಲಾಗುವುದಿಲ್ಲ. ಅವರ ದೃಷ್ಟಿಯಲ್ಲಿ ಎಲ್ಲ ಜೀವಿಗಳೂ, ಪ್ರಾಣಿ, ಪಕ್ಷಿ ಮತ್ತು ಮಾನವರೂ ಸಮಾನರು. ಅಳಗಮ್ಮನು ಸಂಪ್ರದಾಯಸ್ಥೆಯಾದ್ದರಿಂದ ಅವಳಿಗೆ ಈ ರೀತಿಯ ಸಮಾನತೆಯನ್ನು ಒಪ್ಪಿಕೊಳ್ಳುವುದು ಅಷ್ಟು ಸುಲಭವಾಗಿರಲಿಲ್ಲ. ಆಕೆಗೆ ಶರೀರ ಶುದ್ಧಿ ಮತ್ತು ಧರಿಸುವ ವಸ್ತ್ರಗಳ ಬಗ್ಗೆ ಅತಿಯಾದ ಕಾಳಜಿಯಿತ್ತು ಹಾಗೂ ಈರುಳ್ಳಿಯನ್ನು ಯಾವುದೇ ಸಂದರ್ಭದಲ್ಲೂ ಸೇವಿಸುತ್ತಿರಲಿಲ್ಲ. ಭಗವಾನರು ತನ್ನ ಮಗನೆಂಬ ಮೋಹವನ್ನು ಆಕೆಯು ತೊರೆಯಲು ಸಿದ್ಧಳಿರಲಿಲ್ಲ. ಆದರೆ ಸ್ವಾಭಾವಿಕವಾಗಿ ಆಕೆಯು ಸರಳ ವ್ಯಕ್ತಿ ಹಾಗೂ ಪ್ರಾಮಾಣಿಕ ಭಕ್ತೆ. ತತ್ವಗಳಿಂದ ಕೂಡಿದ ಅನೇಕ ದೈವೀ ಹಾಡುಗಳನ್ನು ಹಾಡುತ್ತಿದ್ದರು. ಅವರ ಹಾಡುಗಳಲ್ಲಿ ವಿವಿಧ ಆಹಾರ ಪದಾರ್ಥಗಳ ತಯಾರಿಕೆಯ ಬಗೆಗಿನ ಸಾಂಕೇತಿಕ ಅರ್ಥಗಳ ಬಗ್ಗೆ ವಿವರಗಳಿರುತ್ತಿದ್ದವು ಹಾಗೂ ಅದರ ಮೂಲಕ ಸಾಮಾನ್ಯರಲ್ಲಿ ವೇದಾಂತದ ಭಾವನೆಗಳನ್ನು ಉಂಟುಮಾಡುತ್ತಿದ್ದರು.

ಭಗವಾನರಿಗೆ ತಮ್ಮ ತಾಯಿಯು ಶಾರೀರಿಕ ಹಾಗೂ ಮಾನಸಿಕ ಬಂಧನಗಳಿಂದ ಹೊರಬರಬೇಕೆಂಬ ಆಸೆಯಿತ್ತು. ಆ ಉದ್ದೇಶದಿಂದ ಅವರು ತಾಯಿಗೆ ಅನೇಕ ರೀತಿಯಲ್ಲಿ ತರಬೇತಿ ನೀಡಿ ಅದರ ಮೂಲಕ ಅವರು ಅತಿಯಾದ ಸಂಪ್ರದಾಯಬದ್ಧ ಸಂಕೋಲೆಯಿಂದ ಹೊರಬರಲು ಸಹಾಯ ಮಾಡುತ್ತಿದ್ದರು. ಅವರು ತಾಯಿಗೆ, "ಅಮ್ಮಾ! ಯಾರಾದರೂ ನಿನ್ನ ಸೀರೆಯನ್ನು ಮುಟ್ಟಿದರು ಎಂದುಕೊ, ಅಥವಾ ಈ ದಿನ ತಿನ್ನಲು ಈರುಳ್ಳಿಯನ್ನು ಬಿಟ್ಟು ಬೇರೇನೂ ಇಲ್ಲವೆಂದುಕೊ, ಇಲ್ಲವೇ ಈ ಪಾತ್ರೆಯನ್ನು ಬೇರೆ ಯಾರೋ ಮುಟ್ಟಿದರೆಂದುಕೊ, ಆಗ ನೀನು ಏನು ಮಾಡುವೆ?" ಎಂಬುದಾಗಿ ಭಗವಾನರು ತಾಯಿಯನ್ನು

ಕೀಟಲೆ ಮಾಡುತ್ತಿದ್ದರು. ಕ್ರಮೇಣ ಭಗವಾನರು ತಮ್ಮ ತಾಯಿಯ ಈ ರೀತಿಯ ವಿಪರೀತವಾದ ಸಂಪ್ರದಾಯಗಳ ನಿರುಪಯುಕ್ತತೆಯ ಬಗ್ಗೆ ಅರಿವುಂಟು ಮಾಡಿದರು. ಅಳಗಮ್ಮನಿಗೆ ತನ್ನ ಮಗನು ದೈವೀ ಆತ್ಮನೆನ್ನುವುದರ ಬಗ್ಗೆ ಅಪಾರ ನಂಬಿಕೆಯಿತ್ತು ಹಾಗೂ ಅವನ ದೈವೀ ರೂಪವನ್ನು ಆಗಾಗ್ಗೆ ಕಾಣುತ್ತಿದ್ದರು. ಒಮ್ಮೆ ಅವರಿಗೆ ಭಗವಾನರು ದಿವ್ಯ ಜ್ಯೋತಿಯಂತೆ ಹಾಗೂ ಮತ್ತೊಮ್ಮೆ ಅವರನ್ನು ಸರ್ಪಗಳನ್ನೇ ಒಡವೆಯನನ್ನಾಗಿ ಧರಿಸಿದ ದೇವರಂತೆ ಕಂಡುಬರುತ್ತಿದ್ದರು.

ತಮ್ಮ ಮಗನ ಮಾರ್ಗದರ್ಶನದಲ್ಲಿ ಅಳಗಮ್ಮನವರಲ್ಲಿನ ಹಲವಾರು ಸಾಂಪ್ರದಾಯಿಕ ಸಂಪ್ರದಾಯಗಳು ನಿಧಾನವಾಗಿ ಅವರನ್ನು ಬಿಟ್ಟು ಹೋಗತೊಡಗಿತು. ಅವರು ಕಾವಿಬಣ್ಣದ ಸೀರೆಯನ್ನುಟ್ಟು ಭಗವಾನರನ್ನು ನೋಡಲು ಬರುವ ಎಲ್ಲ ಭಕ್ತರಿಗೂ ಆಹಾರವನ್ನು ನೀಡುತ್ತಿದ್ದರು.

1922ರ ನಂತರ ಅಳಗಮ್ಮನವರ ಆರೋಗ್ಯವು ಕ್ಷೀಣಿಸತೊಡಗಿತು ಹಾಗೂ ಶ್ರೀ ರಮಣರು ತಮ್ಮ ತಾಯಿಯ ಕಡೆಯ ದಿನಗಳಲ್ಲಿ ಅವರ ಸೇವೆಯನ್ನು ಶ್ರದ್ಧೆಯಿಂದ ಮಾಡಿದರು. ದಿನಾಂಕ 19 ಮೇ, 1922ರಂದು ಭಗವಾನರಿಗೆ ಅದು ತಮ್ಮ ತಾಯಿಯ ಕೊನೆಯ ದಿನವೆನ್ನಿಸತೊಡಗಿತು. ಆ ದಿನ ವೈಶಾಖ ಮಾಸ ಕೃಷ್ಣ ಪಕ್ಷದ ನವಮಿ ದಿನವಾಗಿತ್ತು. ಅಳಗಮ್ಮನವರ ಉಸಿರಾಟವು ಕ್ಷೀಣಿಸತೊಡಗಿತು. ಭಗವಾನರು ತಮ್ಮ ಬಲಹಸ್ತವನ್ನು ಅವರ ಎದೆಯ ಮೇಲಿರಿಸಿ, ಎಡ ಹಸ್ತವನ್ನು ಅವರ ತಲೆಯ ಮೇಲಿರಿಸಿ ಅವರನ್ನೇ ತದೇಕಚಿತ್ತದಿಂದ ನೋಡುತ್ತಾ ಕುಳಿತುಕೊಂಡರು. ಅನಂತರ ಏನಾಯಿತೆಂಬುದನ್ನು ವಿವರಿಸುತ್ತಾ ಅವರು ಹೀಗೆ ಹೇಳಿದರು:

"ಮನಸ್ಸಿನೊಳಗೆ ಹುದುಗಿದ್ದ ಆಸೆಗಳು ಹಾಗೂ ಪೂರ್ವಜನ್ಮದ ಪ್ರವೃತ್ತಿಗಳ ಅವಶೇಷಗಳು ಭಯಂಕರವಾಗಿ ಹೊರಬರಲು ಪ್ರಯತ್ನಿಸುತ್ತಿತ್ತು. ಹೊರ ಪ್ರಪಂಚದ ಅರಿವು ಕಡಿಮೆಯಾಗತೊಡಗಿತು. ಸೂಕ್ಷ್ಮ ದೇಹವು ನಿಧಾನವಾಗಿ ಪ್ರಪಂಚದ ಸೂಕ್ಷ್ಮವಾದ ನೋಟಗಳನ್ನು ಒಂದರ ಮೇಲೊಂದರಂತೆ ವೀಕ್ಷಿಸಲು ಪ್ರಾರಂಭಿಸಿತು." ಮಹರ್ಷಿಗಳು ಅವರ ತಾಯಿಯು ಅನುಭವಿಸುತ್ತಿರುವ ಈ ವಿಧದ ಪ್ರವೃತ್ತಿಯನ್ನು ನಿಗ್ರಹಿಸಲು ಹಾಗೂ ಅವುಗಳು ಸಂಪೂರ್ಣವಾಗಿ ನಿಗ್ರಹವಾಗುವವರೆಗೂ ತಮ್ಮ ಸ್ಪರ್ಶದ ಮೂಲಕ ಪ್ರಯತ್ನಿಸುತ್ತಿದ್ದರು. ರಾತ್ರೆ 8 ಘಂಟೆಯ ಹೊತ್ತಿಗೆ ಇವೆಲ್ಲವೂ ಅವರ ಹೃದಯದಲ್ಲೇ ಸಂಪೂರ್ಣವಾಗಿ ನಿಗ್ರಹವಾಯಿತು. ಆ ಸಮಯದಲ್ಲಿ ಅವರು ಹೊರ ಪ್ರಪಂಚದಿಂದ ಮುಕ್ತಿಯನ್ನು ಪಡೆದರು. ಅವರ ಬಳಿ ಕೊನೆಯವರೆಗೂ ನಾಯನರು ಹಾಗೂ ನಿರಂಜನಾನಂದರು ಕುಳಿತಿದ್ದು ಮಾತೆಯು ಕೊನೆ ಉಸಿರುಬಿಡುವುದಕ್ಕೆ ಮುಂಚಿತವಾಗಿ ದೇಹದ ... ಯಿಂದ ಥಡ್ ಎಂಬ ಶಬ್ದದಂತೆ ಹೊರಬಿಟ್ಟ ಕೊನೆಯ ಶಬ್ದವನ್ನು ಕೇಳಿಸಿದ.

ಮಾತೆ ಅಳಗಮ್ಮನವರು ತಮ್ಮ ಮಗನ ವಿಶೇಷವಾದ ಕರುಣೆಯಿಂದಾಗಿ ಇಹಲೋಕವನ್ನು ತೊರೆದು ಮುಕ್ತಿಯನ್ನು ಪಡೆದರು. ಯಾರೋ ಒಬ್ಬನು ಆಕಸ್ಮಿಕವಾಗಿ "ಅಮ್ಮನು ಹೋಗಿಬಿಟ್ಟರು" ಎಂದು ಹೇಳಿದಾಗ ಭಗವಾನರು, "ಇಲ್ಲ, ಅಮ್ಮನು ಐಕ್ಯವಾದಳು, ಅವಳು ಭಗವಂತನಲ್ಲಿ ಒಂದಾದಳು." ಎಂದು ಅವನ ಉದ್ಗಾರವನ್ನು ಸರಿಪಡಿಸಿದರು.

ಈಗ ಉದ್ಭವಿಸಿದ ಪ್ರಶ್ನೆಯೆಂದರೆ ಅಮ್ಮನ ಪಾರ್ಥಿವ ಶರೀರವನ್ನು ಹೇಗೆ ಸಂಸ್ಕರಿಸುವುದು – ಸುಡುವುದೇ ಅಥವಾ ಹೂಳುವುದೇ? ಎಂಬುದು. ಈ ಪ್ರಶ್ನೆಗೆ ರಮಣ ಗೀತೆಯ 12ನೇ ಅಧ್ಯಾಯದಲ್ಲಿ ಉತ್ತರವಿದೆ. ಅದೇನೆಂದರೆ, "ಮಹಿಳೆಯೊಬ್ಬಳು ತನ್ನ ಸಾವಿನ ನಂತರ ಮುಕ್ತಿಯನ್ನು ಹೊಂದಿದಲ್ಲಿ, ಅವಳ ಪಾರ್ಥಿವ ಶರೀರವನ್ನು ಕೇವಲ ಹೂಳಬೇಕೇ ಹೊರತು ಸುಡುವುದಲ್ಲ". ಹಾಗಾಗಿ ಗಣಪತಿ ಮುನಿಯು ಪಾರ್ಥಿವ ಶರೀರವನ್ನು ಹೂಳಬೇಕೆಂದೇ ಸಲಹೆ ನೀಡಿದರು. ಎಲ್ಲರೂ ಇದಕ್ಕೆ ಒಪ್ಪಿ ಅಮ್ಮನ ಪಾರ್ಥಿವ ಶರೀರವನ್ನು ಪಾಲಿತೀರ್ಥದ ಬಳಿಯಲ್ಲಿನ ಅಶ್ವತ್ಥ ಮರದ ನೆರಳಿನಲ್ಲಿ ಸಮಾಧಿ ಮಾಡಲಾಯಿತು.

ಮಹಾ ಪೂಜೆಯ ದಿನ ನಾಯನರು ಅಮ್ಮನವರ ಮೇಲೆ ಆರು ಶ್ಲೋಕಗಳನ್ನು "ಸೌಂದರ್ಯಾಂಬ ಷಟ್ಕಮ್" ಎಂಬ ಹೆಸರಿನಲ್ಲಿ ರಚಿಸಿದರು:

ದುಂದುಭಿವರ್ಷೇ ವೃಷಷಷ್ಠದಿನೇ ಮಾಧವಕೃಷ್ಣದಲೀಯ ನವಮ್ಯಾಂ
ಭಾರ್ಗವವಾಸರನಿಶಿ ಶತತಾರಾ ಸಂಯುಕ್ತಾಯಾಂ ಪ್ರಥಮೇ ಯಾಮೇ ॥

"ದುಂದುಭಿ ಸಂವತ್ಸರದ ವೈಶಾಖಮಾಸ ಕೃಷ್ಣಪಕ್ಷದ ಷಷ್ಠಿಯ ಶುಕ್ರವಾರದಂದು ವೃಷಭ ಲಗ್ನದಲ್ಲಿ ಶತಭಿಷ ನಕ್ಷತ್ರವು ಅಕಾಶದಲ್ಲಿ ಕಂಗೊಳಿಸುತ್ತಿರುವಾಗ ರಾತ್ರಿಯ ಮೊದಲ ಮೂರು ಘಂಟೆಗಳಲ್ಲಿ"

ಭಾರದ್ವಾಜೀ ಪಾರಾಶರ್ಯ ಶ್ರೇಷ್ಠಕುಲೋದ್ಭವಸುಂದರಪತ್ನೀ
ಗುರುಗುಹ ಭಾಗಜರಮಣ ಮಹರ್ಷೇರ್ಮಾತಾ ಪೂತಾ ಚಾರಿತ್ರ್ಯೇಣ ॥

"ಭಾರದ್ವಾಜ ಗೋತ್ರದಲ್ಲಿ ಜನಿಸಿದ ಪರಾಶರ ಗೋತ್ರದ ಸುಂದರನ ಪತ್ನಿಯಾಗಿ, ಗುರುಗುಹನ ಅವತಾರನಾಗಿ ಹುಟ್ಟಿದ ಶ್ರೀ ರಮಣ ಮಹರ್ಷಿಯ ಮಾತೆ."

ತ್ಯಾಜಿತಮಾನಸಸಂಗಾ ಹಂಸೀ ಶಿವಪದಭಕ್ತಿಕ್ಷಾಲಿತಪಂಕಾ
ಗುಹಕರಶಕ್ತ್ಯಾ ರುದ್ಧಪ್ರಾಣಾ ತತ್‌ಕ್ಷಣ ಧೂತಸಮಸ್ತ ವಿಕಲ್ಪಾ ॥

"ಯಾವುದೇ ಆಕರ್ಷಣೆಯಿಲ್ಲದ ಹಂಸಿ, ಭಗವಾನ್ ಶಂಕರನ ಪಾದಗಳಲ್ಲಿನ ಭಕ್ತಿಯ ಮೂಲಕ ತನ್ನೆಲ್ಲ ಪಾಪಗಳನ್ನು ತೊಳೆದ ಆಕೆಯು, ಶ್ರೀಗುಹನ ಹಸ್ತದಲ್ಲಿನ ಶಕ್ತಿಯಿಂದ ತನ್ನ ಜೀವದ ಉಸಿರನ್ನು ನಿಯಂತ್ರಣದಲ್ಲಿಟ್ಟುಕೊಂಡಿರುವ ಹಾಗೂ ಕ್ಷಣಾರ್ಧದಲ್ಲೇ ಅವಳ ವಿಕಲ್ಪವನ್ನು ನಂದಿಸುವಳು."

ನಿಗಮಾಂತವತೋ ವೇದಂ ಜ್ಯೋತಿಃ ಸರ್ವಜಗತ್ಸು ವ್ಯಾಪ್ತಂ ಜ್ಯೋತಿಃ
ಸುತಗುಹದೃಷ್ಟ್ಯಾ ವ್ಯಕ್ತಂ ಜ್ಯೋತಿಃ ಸೌಂದರ್ಯಾಂಬಾ ಸಮಭೂಜ್ಯೋತಿಃ ॥

"ವೇದಾಂತದ ಘೋಷಣೆಗಳಿಂದ ಅರಿವಿನ ಬೆಳಕಾದ ಸೌಂದರ್ಯಾಂಬಾ, ಸಮಸ್ತ ಜಗತ್ತನ್ನೂ ಆವರಿಸಿರುವ ಸ್ವತಃ ಕುಮಾರಸ್ವಾಮಿಯೇ ಆದ ಮಗನಿಂದ ಪ್ರಬುದ್ಧವಾದ."

ರಮಣಮಹರ್ಷೇಃ ಕರಸರಸಿಜದ್ವಯಮಕರಂದಸ್ಫುಟಧಾರೇವ
ಅತ್ರ ಸಮಾಧೌ ಸೌಂದರ್ಯಾಂಬಾದೇವ್ಯಾಸ್ತೀರ್ಥಂ ನವಮಘಶಮನಮ್ ॥

"ಸೌಂದರ್ಯಾಂಬಾ ಅವರ ಸಮಾಧಿಯ ಪವಿತ್ರ ತೀರ್ಥವು ಶ್ರೀರಮಣಮಹರ್ಷಿಗಳ ಕಮಲ ಹಸ್ತದಿಂದ ಹುಟ್ಟಿಬರುವ ಜೇನಿನಂತೆ ಪಾಪಗಳನ್ನು ತೊಳೆಯಲಿ ॥"

ಜಯತು ಮಹರ್ಷೇರ್ಮಾತಾ ಪೂತಾ ಜಯತು ಸಮಾಧಿಃ ಕೋಽಪಿ ತದೀಯಃ
ಜಯತು ಮಹರ್ಷಿಸ್ಥಾಪಿತಲಿಂಗಂ ಜಯತು ಚ ತೀರ್ಥಂ ನವಮಘಶಮನಂ ॥

"ಶ್ರೀ ರಮಣ ಮಹರ್ಷಿಗಳ ಪರಿಶುದ್ಧ ಮಾತೆಗೆ ಜಯವಾಗಲಿ! ಅವರ ಸಮಾಧಿಗೆ ಜಯವಾಗಲಿ! ಮಹರ್ಷಿಯು ಸ್ಥಾಪಿಸಿದ ಲಿಂಗಕ್ಕೆ ಜಯವಾಗಲಿ! ಅಘಮರ್ಶನವೆಂಬ ಹೊಸ ತೀರ್ಥಕ್ಷೇತ್ರದ ಪವಿತ್ರ ಜಲಕ್ಕೆ ಜಯವಾಗಲಿ!"

ನಾಯನರ ವೇದಘೋಷಗಳ ನಡುವೆ ಶ್ರೀ ರಮಣರು ತಮ್ಮ ತಾಯಿಯ ಸಮಾಧಿಯ ಮೇಲೆ ಲಿಂಗವನ್ನು ಪ್ರತಿಷ್ಠಾಪಿಸಿದರು. ಆ ಪವಿತ್ರ ಸ್ಥಳದಲ್ಲೇ ವೇದ ವಿಶ್ವವಿದ್ಯಾಲಯವು ಸ್ಥಾಪಿತವಾಗಬೇಕೆಂದು ನಾಯನರ ಇಚ್ಛೆಯಾಗಿತ್ತು, ಆದರೆ ಸ್ವಾಮಿ ನಿರಂಜನಾನಂದರಿಗೆ ಮಾತೆಯ ಸಮಾಧಿಯ ಮೇಲೆ ಒಂದು ದೇವಾಲಯ ನಿರ್ಮಾಣ ಮಾಡುವ ಮನಸ್ಸಿತ್ತು. ಆದರೆ ಅವರ ಮೊದಲನೇ ಪ್ರಯತ್ನವೇ ಫಲಕಾರಿಯಾಗಲಿಲ್ಲ. ಇದರಿಂದ ಹತಾಶರಾದ ಅವರು ಭಗವಾನರ ಬಳಿ ಬಂದು ಹೀಗೆ ಹೇಳಿದರು, "ಮಾತೆಯ ಸಮಾಧಿಯ ಮೇಲೆ ಮಂದಿರವನ್ನು ನಿರ್ಮಿಸಬೇಕೆಂದು ನನ್ನ ಇಚ್ಛೆ, ಆದರೆ ನನ್ನ ಯಾವ ಪ್ರಯತ್ನಗಳೂ ಇಲ್ಲಿಯವರೆಗೂ ಫಲಕಾರಿಯಾಗಿಲ್ಲ." ಮಹರ್ಷಿಯು ಹೀಗೆ ನುಡಿದರು, "ಹೋಗು, ಈ ವಿಷಯದಲ್ಲಿ ನಾಯನರನ್ನು ಸಂಪರ್ಕಿಸು. ಅವರ ಸಹಕಾರದಿಂದ ನೀನು ಸಫಲನಾಗುವೆ." ನಿರಂಜನಾನಂದರು ನಾಯನರನ್ನು ಸಂಪರ್ಕಿಸಿ ಅವರ ಬಳಿ ಭಗವಾನರು ಹೇಳಿದ್ದನ್ನು ವಿವರಿಸಿ ಅವರ ಸಲಹೆಯನ್ನು ಕೇಳಿದರು. ನಾಯನರಿಗೆ ಭಗವಾನರು ತನ್ನಲ್ಲಿ ಇಟ್ಟಿರುವ ವಿಶ್ವಾಸಕ್ಕೆ ತುಂಬಾ ಹರ್ಷಿತರಾಗಿ ನಿರಂಜನಾನಂದರಿಗೆ, "ಭಗವಾನರು ಆ ರೀತಿ ಹೇಳಿದರೆ, ಹಾಗೇ ಆಗಲಿ." ಎಂದರು. ಮಂದಿರವನ್ನು ಕಟ್ಟಲು ಹತ್ತು ವರ್ಷಗಳೇ ಹಿಡಿದರೂ ... ವಯುತವಾಗಿ ಮಾತೃಭೂತೇಶ್ವರ ಮಂದಿರವು ನಿರ್ಮಾಣವಾಯಿತು.

... ನಿರೀಕ್ಷಿತವಾಗಿ ನಾಯನರ ಆಸೆಯಾದ ವೇದ ವಿಶ್ವವಿದ್ಯಾಲಯದ ... ರಿಸಿದರು. ಒಂದು ದಿನ ಭಗವಾನರು ತಮ್ಮ ತಾಯಿಯ ಸಮಾಧಿಯ

ಬಳಿ ಬಂದವರು ಮರಳಿ ಆಶ್ರಮಕ್ಕೆ ಹೋಗಲೇ ಇಲ್ಲ. ಯಾವುದೋ ಶಕ್ತಿಯು ತನ್ನನ್ನು ಇಲ್ಲಿಗೆ ಬರುವಂತೆ ಮಾಡಿ ಅದು ತನ್ನನ್ನು ಮರಳಿ ಆಶ್ರಮಕ್ಕೆ ಹೋಗಲು ಬಿಡುತ್ತಿಲ್ಲ ಎಂದರು. ಅನಂತರ ಆ ಸ್ಥಳವು ಶ್ರೀರಮಣಾಶ್ರಮ ಎಂದಾಯಿತು. ಅಲ್ಲಿ ಸ್ವತಃ ವೇದಮೂರ್ತಿ (ಶ್ರೀ ರಮಣರು) ನೆಲಸಿದ್ದರಿಂದ, ಸ್ವಾಭಾವಿಕವಾಗಿಯೇ ಪ್ರಪಂಚದಾದ್ಯಂತ ಈ ಸ್ಥಳವು ವೇದ ಧ್ಯಾನಗಳ ಸುಪ್ರಸಿದ್ಧ ಕೇಂದ್ರವಾಯಿತು.

೮

ಕಪಾಲ ಭೇದನ

ಆತ್ಮಸ್ಥಸ್ಯ ಸಹಸ್ರಾರಂ ಶುದ್ಧಂ ಜ್ಯೋತಿರ್ಮಯಂ ಭವೇತ್
ತತ್ರ ಜೀವೇನ್ನ ಸಂಕಲ್ಪೋ ಯದಿ ಸಾನ್ನಿಧ್ಯತಃ ಪತೇತ್ ॥
– ಶ್ರೀ ರಮಣ ಗೀತ

"ಆತ್ಮಜ್ಞಾನಿಯ ಸಹಸ್ರಾರವು ಪರಿಶುದ್ಧವಾದ ಬೆಳಕು. ಈ ಆತ್ಮಜ್ಞಾನದಿಂದಾಗಿ ಯಾವುದೇ ಉದ್ದೇಶವು ಆಕಸ್ಮಿಕವಾಗಿ ಇದರಲ್ಲಿ ಬಿದ್ದರೆ ಅದು ಅಲ್ಲಿ ಬದುಕುವುದಿಲ್ಲ."

ಸೃಷ್ಟಿಗೆ ಕಾರಣವಾದ ಶಕ್ತಿಯು ಪರಮೇಶ್ವರಿ. ಈ ಶಕ್ತಿಯು ವಿಶ್ವದಲ್ಲಿನ ಎಲ್ಲ ಜೀವಿಗಳಲ್ಲಿಯೂ ಹರಿಯುತ್ತಿರುವುದು. ದೇಹದಲ್ಲಿನ ಶಕ್ತಿಯನ್ನು ಕುಂಡಲಿನಿ ಎಂದು ಕರೆಯಲಾಗುವುದು. ಅದು ಪ್ರಾರಂಭವಾಗುವುದು ಮೂಲಾಧಾರ ಚಕ್ರದಲ್ಲಿ, ಅನಂತರ ಹೃದಯ ಮಧ್ಯದವರೆಗೂ ಏರಿ ಅಲ್ಲಿಂದ ಶಿರಸ್ಸನ್ನು ತಲುಪಿ ನಂತರ ಇಡೀ ಶರೀರವನ್ನು ವ್ಯಾಪಿಸುವುದು. ಸಮಸ್ತ ಜೀವಿಗಳ ಚಲನವಲನೆಗೆ ಇದೇ ಕಾರಣ. ತಾವೇ ಶರೀರವೆಂದು ಭಾವಿಸುವವರಲ್ಲಿ ಇದು ಅರಿವಿಲ್ಲದಂತೆ ವರ್ತಿಸುವುದು. ಆಸೆಗಳಿಂದ ಹೊರತಾದ ಜ್ಞಾನಿಗಳಲ್ಲಿ ಇದು ಶುದ್ಧವಾದ ಕುಂಡಲಿನಿ ಶಕ್ತಿ. ಹೃದಯ ಮಧ್ಯದಲ್ಲಿ ಅದು "ನಾನು" ಎಂದು ಬೆಳಗಿ ನಂತರ ಸತ್ ಒಂದಿಗೆ ಸೇರುವುದು ಹಾಗೂ ಇದರ ಫಲವಾಗಿ ಯೋಗಿಯು ಆತ್ಮನೊಂದಿಗೆ ಸ್ಥಿರನಾಗುತ್ತಾನೆ. ತಪಸ್ಸಿನಲ್ಲಿ ಮಗ್ನನಾಗಿರುವಾಗ ಯೋಗಿಗೆ ಇದರ ದರ್ಶನವಾಗುವುದು. ಇದನ್ನೇ ಕುಂಡಲಿನೀ ವಿದ್ಯಾ ಎನ್ನುವರು.

ರೇಣುಕಾ–ಜಮದಗ್ನಿಯರ ಕಥೆಯಲ್ಲಿ ಈ ವಿದ್ಯೆಯ ಸತ್ಯಾಸತ್ಯತೆಯನ್ನು ಕಂಡುಕೊಳ್ಳಬಹುದು. ತನ್ನ ತಂದೆಯ ಆಜ್ಞೆಯನ್ನು ಶಿರಸಾವಹಿಸಿ ಪಾಲಿಸಲು ಪರಶುರಾಮನು ತನ್ನ ತಾಯಿ ರೇಣುಕಳ ಶಿರವನ್ನು ಕತ್ತರಿಸುವನು. ಈ ಕ್ರಿಯೆಯನ್ನು ಸಾಧಾರಣ ರೀತಿಯಲ್ಲಿ ಗಮನಿಸಿದಲ್ಲಿ ಇದು ಕ್ರೌರ್ಯದ ಪರಮಾವಧಿ ಎನಿಸುವುದು. ಆದರೆ ಸತ್ಯಾನ್ವೇಷಕರು ಈ ಕ್ರಿಯೆಯನ್ನು ಕುಂಡಲಿನೀ ವಿದ್ಯೆಯ ಒಂದು ಭಾಗವೆಂದು ವಿವರಿಸುತ್ತಾರೆ.

"ವ್ಯಾಪೋಹ್ಯ ಶೀರ್ಷ ಕಪಾಲೇ" (ತಲೆಬುರುಡೆಯನ್ನು ಭೇಧಿಸುವುದು) ಎಂಬುದು ತೈತ್ತೀರಿಯ ಉಪನಿಷತ್ತಿನಲ್ಲಿ ಬರುವ ಒಂದು ಘೋಷಣೆ. ಈ ಅನುವಾಕವನ್ನು ಅಧ್ಯಯನ

ಮಾಡಿದಾಗ, ಯೋಗಿಯು ಕುಂಡಲಿನೀ ಶಕ್ತಿಯನ್ನು ಶಿರದವರೆಗೂ ಜಾಗೃತಗೊಳಿಸಿದಾಗ ಆ ಶಕ್ತಿಯು ಭೇಧಿಸುವುದು ಹಾಗೂ ಶರೀರದ ಹೊರಗಿನ ಶಕ್ತಿಯೊಂದಿಗೆ ಕುಂಡಲಿನಿಯು ಶರೀರದ ಒಳ ಹಾಗೂ ಹೊರಗೆ ಚಲಿಸುವುದು. ಈ ಯೋಗಿಯ ಸ್ಥಿತಿಯನ್ನು ಈ ಕೆಳಗೆ ವಿವರಿಸಲಾಗಿದೆ:

"ತನಗೆ ತಾನೇ ಸ್ವತಂತ್ರ ಸಾರ್ವಭೌಮತ್ವವನ್ನು ಪಡೆಯುವನು; ಭಗವಂತನ ಮನಸ್ಸನ್ನು ಅವನು ತಲುಪುವನು; ಅವನು ವಾಕ್, ಚಕ್ಷು ಹಾಗೂ ಶ್ರವಣ ಹಾಗೂ ಜ್ಞಾನಗಳನ್ನು ಆಳುವನು. ಇವೆಲ್ಲದರ ಮೇಲೆ ಅವನು ಆಕಾಶದಲ್ಲಿ ಮೂರ್ತಿವೆತ್ತ ಸ್ಥೂಲ, ಸೂಕ್ಷ್ಮ ಹಾಗೂ ಸತ್ಯಗಳ ನೈಜ ಸ್ವಭಾವವಾದ ಬ್ರಹ್ಮನ್ ಆಗುವನು. ಇದು ಅಮರತ್ವದ ಆನಂದವನ್ನು ಹೊಂದಿರುವವರ ಜೀವನದಲ್ಲಿ ಕಾಣುವುದು."

ಈ ವಾಕ್ಯಗಳನ್ನು ನಂಬಿದ ಹಾಗೂ ಶರೀರದಿಂದ ಪ್ರಾಣವು ಶಿರದ ಮೂಲಕ ಹೊರಬಂದಲ್ಲಿ ಆ ವ್ಯಕ್ತಿಯು ಮೋಕ್ಷವನ್ನು ಹೊಂದುವನು ಎಂಬುದನ್ನು ನಂಬಿದ ತಪಸ್ವಿಗಳು ತಮ್ಮ ದೇಹತ್ಯಾಗದ ಸಮಯದಲ್ಲಿ ತಮ್ಮ ಶಿರವನ್ನು ತೆಂಗಿನಕಾಯಿಯಿಂದ ಹೊಡೆದು ಅದನ್ನು ಭೇದಿಸಲು ಆಶಿಸುತ್ತಾರೆ. ಕೆಲವು ತಪಸ್ವಿಗಳಲ್ಲಿ ಇದು ಒಂದು ಸಂಪ್ರದಾಯವಾಗಿರುವುದು. ಚರಿತ್ರೆಯನ್ನು ನಾವು ಪರಿಶೀಲಿಸಿದಾಗ ನಮಗೆ ಕಂಡುಬರುವುದೇನೆಂದರೆ ಕೆಲವು ಯೋಗಿಗಳು ಕಪಾಲ ಭೇದನ ಸಿದ್ಧಿಯನ್ನು ಹೊಂದಿರಬಹುದು ಆದರೆ ಯಾರೂ ಈ ಸಿದ್ಧಿಯನ್ನು ತಲುಪಿದ ನಂತರ ಬದುಕುಳಿದಿಲ್ಲ.

ಪರಶುರಾಮರ ಕಥೆಯನ್ನು ಗಮನಿಸಿದಾಗ, ಅವರು ತಮ್ಮ ತಾಯಿಯ ಶಿರವನ್ನು ಕತ್ತರಿಸಿದರು ಅಂದರೆ ಅವರು ತಮ್ಮ ಮನಸ್ಸನ್ನು ಶಿರದ ಮೂಲಕ ಭೇದಿಸಿ ಮತ್ತು ಅವರಲ್ಲಿರುವ ಶಕ್ತಿಯು ಹೊರಗಿನ ಶಕ್ತಿಯೊಂದಿಗೆ ಬೆರೆತ ನಂತರ, ಅವರ ಶರೀರದ ಒಳಗೂ ಹಾಗೂ ಹೊರಗೂ ಚಲಿಸಲು ಪ್ರಾರಂಭಿಸಿತು. ನಾಯನರ ಹೇಳಿಕೆಯಂತೆ ಆ ಸಮಯದಲ್ಲಿ ಯೋಗಿಯ ಶರೀರವು ಶಕ್ತಿಶಾಲಿ ವಿದ್ಯುತ್ ಮೋಟರಿನಂತೆ ಆಗುವುದು.

ಅವರ ಮೇರು ಕೃತಿಯಾದ ಉಮಾಸಹಸ್ರಮ್‌ನಲ್ಲಿ ಈ ರೀತಿಯಾಗಿ ಬರೆಯುತ್ತಾರೆ:

ಅವತರಣಂ ಧ್ಯಾತಂ ಚೇದಾರೋಹಣ ಮದ್ಭುತಂ ಭವೇಚ್ಚಕ್ತೇಃ
ಯಸ್ಮಿನ್ನಿದಂ ಶರೀರಂ ಭವತಿ ಮಹಾವೈದ್ಯುತಾಗ್ನಿಯಂತ್ರಮಿವ ॥

– ಉಮಾ ಸಹಸ್ರಮ್ (1–4–10)

"ಯಾರಿಗೆ ಶಕ್ತಿಯು ಆಕಾಶದಿಂದ ಕೆಳಗಿಳಿದು ಬಂದು ತನ್ನ ಶಿರದ ಮೂಲಕ ಶರೀರವನ್ನು ಪ್ರವೇಶಿಸುವುದು ಅನುಭವದ ಮೂಲಕ ಅರಿವಾಗುವುದೋ, ಅವನಲ್ಲಿ ಶಕ್ತಿಯು ಮೂಲಾಧಾರದಿಂದ ಅತ್ಯಂತ ವೇಗದಲ್ಲಿ ಮೇಲೇರುವುದು. ಆಶ್ಚರ್ಯಕರವಾಗಿ ಹೀಗೆ

ಅದು ಮೇಲೇರಿದಾಗ ಆ ಶರೀರವು ಭಯಂಕರವಾದ ಶಕ್ತಿಶಾಲಿ ವಿದ್ಯುತ್ ಮೋಟರಾಗುವುದು."

ಈ ಸ್ತೋತ್ರವನ್ನು ನಾವು ವಿಶ್ಲೇಷಿಸಿದಾಗ, ನಮಗೆ ಅರ್ಥವಾಗುವುದೇನೆಂದರೆ, ಈ ಕಪಾಲ ಭೇದನದ ಕ್ರಿಯೆಯನ್ನೇ ರೇಣುಕಾದೇವಿಯ ಶಿರಚ್ಛೇದನವನ್ನಾಗಿ ವಿವರಿಸಲಾಗಿದೆ. ಹಾಗೆ ನೋಡಿದರೆ ಮಾತೆ ರೇಣುಕಾದೇವಿಯ ಕರುಣೆಯಿಂದಾಗಿಯೇ ಕಪಾಲ ಭೇದನದ ಸಿದ್ಧಿಯನ್ನು ತನ್ನ ಮಗ ಪರಶುರಾಮನಿಗೆ ನೀಡಿದಳು. "ಚಿತ್" ಎಂಬುದೇ "ಜ್ಞಾನ" ಎಂದು ಭಗವಾನರು ಹೇಳುವರು. ಅಜ್ಞಾನವನ್ನು ಕತ್ತರಿಸುವುದನ್ನೇ ಶಿರವನ್ನು ಕತ್ತರಿಸುವುದು. ಬಹುಶಃ ಜನಗಳು ಅಸಿರಮ್ಮನನ್ನು (ಶಿರವಿಲ್ಲದ ಮಾತೆ) ಪೂಜಿಸಲು ಇದೇ ಕಾರಣ.

ಪರಶುರಾಮರ ನಂತರ ಆಧುನಿಕ ಕಾಲದಲ್ಲಿ ಕಪಾಲ ಭೇದನ ಸಿದ್ಧಿಯನ್ನು ಪಡೆದವರೆಂದರೆ ಕೇವಲ ನಾಯನರೊಬ್ಬರೇ. ಪಾದ್ಯೈವೀಡುವಿನಲ್ಲಿ ಮಾತೆ ರೇಣುಕಾದೇವಿಯ ಸಾಕ್ಷಾತ್ಕಾರದ ಸಮಯದಿಂದ ನಾಯನರಿಗೆ ಶಕ್ತಿಯ ಚಲನೆಯು ತನ್ನಲ್ಲಿ ಆಗುವ ಅನುಭವವನ್ನು ತಮ್ಮ "ಉಮಾಸಹಸ್ರಮ್" ಕೃತಿಯಲ್ಲಿ ವಿವರಿಸಿರುವರು. ಅವರು ತಮ್ಮಲ್ಲಿರುವ ಬೇರೆ ಬೇರೆಯಾಗಿರುವ ಜಡ ಹಾಗೂ ಆತ್ಮಚೈತನ್ಯಗಳನ್ನು ಹೀಗೆ ವಿವರಿಸುತ್ತಾರೆ:

ಕಾಪಿ ಮೋದಲಹರೀ ತವ ವೀಚಿರ್ನಿರ್ಗತಾ ದಶಶತಾರಸುಧಾಬ್ಧೇಃ
ಪೂರಯತ್ಯಖಿಲಮಂಬ ಶರೀರಂ ನೇಹ ವೇದ್ಮಿ ಪರಮೇ ಜಡಭಾಗಮ್ ॥
– ಉಮಾಸಹಸ್ರಮ್ (4–15–13)

"ಓ ಮಾತೆ! ಸಹಸ್ರಾರದ ಅಮೃತ ಸಾಗರದಿಂದ ಹೊರಬಂದ ನಿನ್ನ ದೈವೀ ಪರಮಾನಂದದ ಅಲೆಗಳು ಇಡೀ ಶರೀರದಲ್ಲಿ ಶಕ್ತಿಯೊಂದಿಗೆ ತುಂಬುತ್ತಿರುವುದು. ನನ್ನ ಶರೀರದ ಯಾವ ಭಾಗವೂ ಜಡವಾಗಿಲ್ಲ."

ಸೇಯಮುತ್ತಮತಮಾನಿಪತಂತೀ ಶೀತಲಾತ್ ದಶಶತಾರಪಯೋದಾತ್
ಪ್ರೇರಿತಾದಖಿಲ ರಾಜ್ಞಿ ಭವ್ಯತಾಬುದ್ಧಿಸಸ್ಯಮವತಾತ್ ರಸವೃಷ್ಟಿಃ ॥
– ಉಮಾಸಹಸ್ರಮ್ (4–15–14)

"ಓ ಎಲ್ಲದಕ್ಕೂ ರಾಣಿಯೇ! ನಾನು ಈಗ ಅನುಭವಿಸುತ್ತಿರುವ ವೈಭವೋಪೇತ ರಸವರ್ಷವು (ಭಾವನೆಗಳು) ನಿನ್ನಿಂದಲೇ ನಿರ್ದೇಶಿತವಾಗಿದ್ದು ಸಹಸ್ರಾರದ ಮೋಡಗಳಿಂದ ಕೆಳಗೆ ಹರಿಯುತ್ತಿರುವುದು. ಈ ರಸವರ್ಷವು ಜ್ಞಾನವೆಂಬ ಬೆಳೆಯನ್ನು ರಕ್ಷಿಸಲಿ."

ಅನುಭವರಹಿತ ಜೀವಿಗೆ ಯೋಗದ ವೈಭವ ರಹಸ್ಯವನ್ನು ಸ್ಪಷ್ಟೀಕರಿಸುವುದು ಅಸಾಧ್ಯ. ನಾಯನರಿಗೆ ಅರುಣಾಚಲದಲ್ಲಿ ಈ ಮಹಾನ್ ಅನುಭವವು ಆಗಿತ್ತು. ಆ ಸಮಯದಲ್ಲಿ ಅವರು ತಮ್ಮ ಪತ್ನಿಯೊಂದಿಗೆ ಅರುಣಾಚಲದಲ್ಲಿನ ಮಾವಿನ ತೋಪಿನಲ್ಲಿ ವಾಸಿಸುತ್ತಿದ್ದರು. ದಿನದ ಬಹುಭಾಗ ಅವರು ಧ್ಯಾನದಲ್ಲಿರುತ್ತಿದ್ದರು. ಶಕ್ತಿಯ ಹರಿಯುವಿಕೆಯು ಕ್ರಮೇಣ

ಹೆಚ್ಚುತ್ತಿತ್ತು ಹಾಗೂ 20-08-1922ರಂದು, ಅದರಿಂದ ಕಪಾಲ ಭೇದನ ಸಿದ್ಧಿಯು ಉಂಟಾಯಿತು. ನಾಯನರು ತಮ್ಮ ಚಿಕ್ಕಪ್ಪ ಪ್ರಕಾಶ ಶಾಸ್ತ್ರಿಗಳಿಗೆ ಒಂದು ಪತ್ರವನ್ನು ಬರೆದರು:

ತಿರುವಣ್ಣಾಮಲೈ, ಮಂಗಳವಾರ, 22-8-1922

ಓ ಚಿಕ್ಕಪ್ಪ,

ನಿಮ್ಮ ಪತ್ರ ತಲುಪಿತು. ಸಾಯಂಕಾಲ 3 ಘಂಟೆಯಿಂದ ತಡರಾತ್ರೆಯವರೆಗೂ ಕುಂಡಲಿನಿ ಶಕ್ತಿಯು ಶಕ್ತಿಯುತವಾಗಿ ಮೇಲೇರಿ ಸಹಸ್ರಾರವನ್ನು ಸಂಪೂರ್ಣವಾಗಿ ತುಂಬಿ ಅದು ನನ್ನನ್ನು ವಿದ್ಯುಚ್ಛಕ್ತಿಯ ಸಾಗರದಲ್ಲಿ ಐಕ್ಯಗೊಳಿಸಿತು. ಏನು ಮಾಡಬೇಕೆಂದು ನನಗೆ ತೋಚಲಿಲ್ಲ. ಈ ಶಕ್ತಿಯನ್ನು ನನ್ನ ಶರೀರವು ತಡೆದುಕೊಳ್ಳಬಹುದೆ ಎಂಬುದರ ಬಗ್ಗೆ ನನಗೆ ನಂಬಿಕೆ ಇರಲಿಲ್ಲ. ನನಗೆ ಮಾತನಾಡಲೂ ಶಕ್ತಿ ಇರಲಿಲ್ಲ. ರಾತ್ರೆ 8 ಘಂಟೆಯ ಹೊತ್ತಿನಲ್ಲಿ ನಾನು ಗುಹೆಯಲ್ಲಿದ್ದೆ. ಕಾಪಾಲದ ಎರಡು ಭಾಗಗಳು ಸಡಿಲವಾಗತೊಡಗಿತು ಹಾಗೂ ವಿಪರೀತವಾದ ಶಾಖದಿಂದ ಅವೆರಡೂ ಸ್ವಲ್ಪ ಬೇರ್ಪಟ್ಟವು. ಅದು ಒಡೆದಿರಲೂ ಸಾಧ್ಯವಿರಬಹುದು. ಇದೇ ಕಾಪಾಲ ಮೋಕ್ಷ. ಇದು ಒಂದು ರೀತಿಯ ಗಂಟನ್ನು ಸಡಿಲಗೊಳಿಸಿ ಅದನ್ನು ಭೇದಿಸುವ ರೀತಿ. ನನಗನಿಸುತ್ತೆ ಇದು ಛಿನ್ನಮಸ್ತದ ಕಲ್ಪನೆ. ಅದಾದ ನಂತರ ಈ ಶಕ್ತಿಯು ಶಿರದಿಂದ ಅನಿಲದ ರೀತಿಯಲ್ಲಿ ಮೂರು ನಿಮಿಷಗಳವರೆಗೂ ಹೊರಹರಿಯಿತು. ಅನಂತರ ನಾನು ಮೊದಲಿನಂತಾದೆ. ಈಗ ವಿದ್ಯುತ್ ಶಕ್ತಿಯು (ಈ ಶಕ್ತಿಯು) ಒಳಗೂ ಹೊರಗೂ ಸ್ವತಂತ್ರವಾಗಿ ಹರಿದಾಡುತ್ತಿದೆ. ನನ್ನ ಹಸ್ತವನ್ನು ಶಿರದ ಬಳಿ ಅದನ್ನು ಮುಟ್ಟದೆ ಹಿಡಿದಾಗ ಶಕ್ತಿಯಂತಿರುವ ಅನಿಲವು ಹರಿಯುತ್ತಿರುವಂತೆ ಭಾಸವಾಗುವುದು. ಅಂದರೆ ಶರೀರದಲ್ಲಿನ ವಿದ್ಯುತ್ ಶಕ್ತಿಯು ನೈಸರ್ಗಿಕ ವಿದ್ಯುತ್ ಶಕ್ತಿಯೊಂದಿಗೆ ಬೆರೆತಂತೆ.

– ನಾಯನ

ನಾಯನರಿಗೆ ಈ ಅನುಭವವಾಗುತ್ತಿದ್ದಾಗ ಅವರ ಪತ್ನಿಯೂ ಅವರೊಂದಿಗಿದ್ದರು. ಅವರು ನಾಯನರ ಶಿರದಿಂದ ಪ್ರಖರವಾದ ಬೆಳಕು ಹೊರಬರುತ್ತಿದ್ದದ್ದನ್ನು ಕಂಡರು. ಆ ಬೆಳಕು ಹೊರಬಂದು ಗುಹೆಯ ಛಾವಣಿಯಲ್ಲಿ ಬೆಳಕಿನ ವೃತ್ತಾಕಾರವಾಗಿ ಹರಡಿತ್ತು ಹಾಗೂ ಇಡೀ ಗುಹೆಯಲ್ಲಿ ಪ್ರಖರವಾದ ಬೆಳಕನ್ನು ಚೆಲ್ಲುತ್ತಿತ್ತು. ನಾಯನರ ಪತ್ನಿಯು ಸ್ವಲ್ಪ ಭಯವುಳ್ಳವರಾಗಿ ಅಲ್ಲಿಂದ ಸ್ಕಂದಾಶ್ರಮಕ್ಕೆ ಕೂಡಲೇ ಹೋಗಿ ಭಗವಾನರಿಗೆ ಈ ವಿಷಯವನ್ನು ತಿಳಿಸಿದರು. ಭಗವಾನರು ಗುಹೆಗೆ ಬಂದು ನಾಯನರ ಶಿರಕ್ಕೆ ಹರಳೆಣ್ಣೆಯನ್ನು ತಿಕ್ಕಿ ನೆತ್ತಿಯನ್ನು ತಂಪಾಗಿಸಿದರು. ಮಾರನೇ ದಿನ ಭಗವಾನರು ಒಂದು ಜೊತೆ ಮರದ ಚಪ್ಪಲಿಯನ್ನು ತರಿಸಿ ಅದನ್ನು ನಾಯನರಿಗೆ ಕೊಟ್ಟು ಯಾವುದೇ ಸಂದರ್ಭದಲ್ಲೂ ಅದನ್ನು ಧರಿಸದೇ ನೆಲದ ಮೇಲೆ ಕಾಲನ್ನು ಇಡಕೂಡದೆಂದು ತಿಳಿಸಿದರು. ನಾಯನರು ಪಾದುಕೆಗಳನ್ನು

ಭಗವಾನರಿಂದ ಪಡೆದು ತಮಗೆ ಭಗವಾನರಿಂದ ಪಾದುಕಾ ದೀಕ್ಷೆ ದೊರಕಿತೆಂದು ಹೇಳಿದರು.

ತವಚ್ಛಿ ನ್ನಂ ಶೀರ್ಷಂ ವಿದುರಖಿಲಧಾತ್ರ್ಯಾಗಮವಿದೋ
ಮನುಷ್ಯಾಣಾಂ ಮಸ್ತೇ ಬಹುಲತಪಸಾ ಯದ್ವಿದಲಿತೇ
ಸುಷುಮ್ನಾಯಾಂ ನಾಡ್ಯಾಂ ತನುಕರಣಸಂಪರ್ಕರಹಿತಾ
ಬಹಿಶ್ಚಕ್ತ್ಯಾ ಯುಕ್ತಾ ವಿಗತಚಿರನಿದ್ರಾ ವಿಲಸಸಿ ॥

– ಉಮಾಸಹಸ್ರಮ್ (7–27–21)

"ಯೋಗಿಗಳಲ್ಲಿ ಕುಂಡಲಿನಿಯು ಎಚ್ಚೆತ್ತುಕೊಂಡು ಸುಷುಮ್ನೆಯಲ್ಲಿ ಪ್ರವಹಿಸುತ್ತಾ, ಶರೀರವನ್ನಾಶ್ರಯಿಸದೆ ತಲೆಬುರುಡೆಯನ್ನು (ಶೀರ್ಷಕಪಾಲ) ಒಡೆದು ಬಂದು ಹೊರಗಡೆಯಿರುವ ಬ್ರಹ್ಮಾಂಡಶಕ್ತಿಯೊಂದಿಗೆ ಕೂಡಿದವಳಾಗಿ – ಒಳಗೆ ಮತ್ತು ಹೊರಗೆ – ಹೋಗಿ ಬಂದು ಮಾಡುತ್ತಾ ಬೆಳಗುತ್ತೀಯೆ. ಈ ದೃಷ್ಟಿಯಿಂದ ಶಾಸ್ತ್ರಗಳನ್ನೂ ಬಲ್ಲ ತಾಂತ್ರಿಕರು ನಿನ್ನನ್ನು ಶಿರ ರಹಿತ ಶಕ್ತಿ "ಛಿನ್ನಮಸ್ತಾ" ಎಂದು ಕರೆಯುವರು."

೬

ಜೇನಿನ ಮೇಘ ಇಂದ್ರಾಣಿ

ರಕ್ಷಿತುಂ ಭರತವಿಷಯಂ ಶಕ್ತಮಿಂದ್ರಹೃದಯಸಖೀ
ಚಂದ್ರಬಿಂಬರುಚಿರಮುಖೀ ಸಾ ಕ್ರಿಯಾತ್ ಭುವಿ ಗಣಪತಿಮ್ ॥
– ಇಂದ್ರಾಣಿ ಸಪ್ತಶತಿ (4–1–324)

"ಚಂದ್ರಮುಖಿಯಾದ ಇಂದ್ರನ ಸಂಗಾತಿಯು ಗಣಪತಿಯು ತನ್ನ ಮಾತೃಭೂಮಿಯನ್ನು ಉಳಿಸಲು ಸಮರ್ಥನಾಗುವಂತೆ ಮಾಡಲಿ."

ಕಪಾಲ ಮೋಕ್ಷ ಸಿದ್ಧಿಯ ನಂತರ ಗಣಪತಿಗೆ ಬೇರೆಲ್ಲ ಸಿದ್ಧಿಗಳೂ ವಶವಾದವು. ಅನೇಕ ಜನಗಳು ಅವರನ್ನು ಭೇಟಿಯಾಗಲು ಬರತೊಡಗಿದರು. ಮಾವಿನ ತೋಪಿನಲ್ಲಿನ ಗುಹೆಯು ಚಿಕ್ಕದಾಗಿದ್ದರಿಂದ ಗುಹೆಯ ಹೊರಗೆ ಒಂದು ತೆಂಗಿನಗರಿಯ ಛಾವಣಿಯಿಂದಾವೃತವಾದ ವಿಶಾಲವಾದ ವೇದಿಕೆಯನ್ನು ಸಿದ್ಧಪಡಿಸಲಾಯಿತು. ನಾಯನರಿಗೆ ತಾವು ಭಗವಾನರ ಸಮೀಪದಲ್ಲಿರಬೇಕೆಂಬ ಬಯಕೆ ಇದ್ದದ್ದರಿಂದ ಅವರಿಗೆ ಗುಹೆಯನ್ನು ಬಿಡಲು ಮನಸ್ಸಿರಲಿಲ್ಲ. ಅವರು ಅಲ್ಲಿಯೇ 1917 ರಿಂದ 1926ರ ವರೆಗೂ ವಾಸಿಸುತ್ತಿದ್ದರು. ಅವರೊಂದಿಗೆ ಅವರ ಪತ್ನಿಯೂ ಇದ್ದರು. ಮಗ ಮಹಾದೇವನನ್ನು ಅವನ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಅಪ್ಪುಶಾಸ್ತ್ರಿಗಳ ಮನೆಯಲ್ಲಿ ಬಿಟ್ಟಿದ್ದರು. ರಜಾ ದಿನಗಳಲ್ಲಿ ಮಹಾದೇವನು ತನ್ನ ತಂದೆ ತಾಯಿಯರನ್ನು ಕಾಣಲು ಬರುತ್ತಿದ್ದನು. ಮಗಳು ವಜ್ರೇಶ್ವರಿಯ ಮದುವೆಯಾಗಿದ್ದರಿಂದ ಅವಳು ಆಗಾಗ್ಗೆ ತನ್ನ ಮಾತಾ ಪಿತೃಗಳನ್ನು ನೋಡಲು ಬರುತ್ತಿದ್ದಳು. 1918ರಲ್ಲಿ ಮಹಾದೇವನಿಗೂ ವಿವಾಹ ಮಾಡಲಾಯಿತು.

ಕಪಾಲ ಮೋಕ್ಷ ಸಿದ್ಧಿಯ ನಂತರ ಅವರ ಶರೀರ ರಚನೆಯು ಬದಲಾಯಿತು. ಯಾವುದೇ ಲೋಹವು ಅವರ ಶರೀರವನ್ನು ಮುಟ್ಟಿದ ಕೂಡಲೇ ಅದು ಬಂಗಾರದಂತಹ ಹಳದಿ ಬಣ್ಣಕ್ಕೆ ಬದಲಾಯಿಸುತ್ತಿತ್ತು. ಹಾಗಾಗಿ ಅವರು ಯಾವುದೇ ಲೋಹವನ್ನು ಮುಟ್ಟುವುದನ್ನು ನಿಲ್ಲಿಸಿದರು. ಸದಾ ಅವರು ಮರದ ಪಾದರಕ್ಷೆಯನ್ನು ಧರಿಸಿರಲೇಬೇಕಿತ್ತು. ಮರದ ಹಲಗೆಯ ಮೇಲೆ ಮಾತ್ರ ಕುಳಿತುಕೊಳ್ಳಬೇಕಿತ್ತು. ಅವರ ಮೊದಲಿನ ಅಭ್ಯಾಸವೆಂದರೆ ಲೋಹದ ತಟ್ಟೆಯಲ್ಲಿ ಊಟಮಾಡಿ, ತಟ್ಟೆಯಲ್ಲೇ ಕೈ ತೊಳೆಯುವುದು. ಈಗ ಅವರು

ಲೋಹದ ತಟ್ಟೆಯ ಬದಲಿಗೆ ಎಲೆಯನ್ನು ಉಪಯೋಗಿಸಬೇಕಾಯಿತು. ಒಂದು ದಿನ ಅವರು ಊಟಕ್ಕೆ ಕುಳಿತಿದ್ದಾಗ, ಊಟದ ನಂತರ ಅಭ್ಯಾಸಬಲದಿಂದ ಕೈಯನ್ನು ಎಲೆಯಲ್ಲೇ ಕೈತೊಳೆದು ಬಿಟ್ಟರು. ಆಗ ಕೈ ತೊಳೆದ ನೀರು ಎಲೆಯ ಕೆಳಗಿನಿಂದ ಹರಿದು ಸಮೀಪದಲ್ಲಿ ಊಟಮಾಡುತ್ತಿದ್ದ ಅತಿಥಿಗಳ ಎಲೆಯ ಕೆಳಗೆ ಹರಿಯಿತು. ಸಾಮಾನ್ಯವಾಗಿ ಊಟಮಾಡುವವರ ಎಲೆಗೆ ಬೇರೆಯವರು ಊಟಮಾಡಿದ ಎಂಜಲು ಆಹಾರ ಅಥವಾ ನೀರು ತಗುಲಿದ ಪಕ್ಷದಲ್ಲಿ ಅದರಲ್ಲಿ ಊಟಮಾಡುವುದು ನಿಷಿದ್ಧವಾದ್ದರಿಂದ ಅತಿಥಿಗಳೆಲ್ಲರೂ ಈ ಸಂದರ್ಭದಲ್ಲಿ ಸ್ಥಂಭೀಭೂತರಾದರು. ಅತಿಥಿಗಳ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡ ಭಗವಾನರು, "ಇದು ಗಣಪತಿಯ ಪ್ರಸಾದ, ತಿನ್ನಿರಿ," ಎಂದು ಹೇಳಿ ಅವರ ಮುಜುಗರ ಪರಿಸ್ಥಿತಿಯನ್ನು ತಿಳಿಗೊಳಿಸಿದರು.

ಮದ್ರಾಸಿನ ಚಂದಮಾಮ ಮುದ್ರಣ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಶ್ರೀ ಬಿ.ಎಸ್.ರಾಮರಾವ್ ಅವರಿಗೆ ನಾಯನರು ಲೋಹವನ್ನು ಮುಟ್ಟಿದ ಕೂಡಲೇ ಅದು ಬಂಗಾರವಾಗುವ ಸಿದ್ಧಿಯ ವಿಷಯವನ್ನು ಕೇಳಿ, ಅವರು ತಮ್ಮ ಅನುಭವವನ್ನು ಈ ರೀತಿಯಾಗಿ ಬರೆದರು, "ನಾನು ಇಂಟರ್‌ಮೀಡಿಯೆಟ್ ತರಗತಿಯಲ್ಲಿ ಓದುತ್ತಿದ್ದಾಗ, ಮದ್ರಾಸಿನ ಒಂದು ಭಾಗದಲ್ಲಿ ನಾಯನರ ಭಾಷಣವನ್ನು ಏರ್ಪಡಿಸಿದ್ದರು. ನನಗೆ ನಾಯನರು ಪಡೆದ ಸ್ವರ್ಣ-ಸಿದ್ಧಿಯ ಬಗ್ಗೆ ಗೊತ್ತಿತ್ತು. ನಾಯನರು ವೇದಿಕೆಯ ಮೇಲೆ ಕುಳಿತುಕೊಳ್ಳುವ ಸ್ಥಳದಲ್ಲಿ ಹಾಸಿದ್ದ ಜಮಖಾನದ ಕೆಳಗೆ ನಾನು ಎರಡು ನಾಣ್ಯಗಳನ್ನು ಇಟ್ಟಿದ್ದೆ. ನಾಯನರು ಸಭೆಗೆ ಬಂದು ವೇದಿಕೆಯ ಮೇಲೆ ಹಾಸಿದ್ದ ಜಮಖಾನದ ಮೇಲೆ ಕುಳಿತುಕೊಂಡರು. ಕೂಡಲೇ ಅವರು ವಿದ್ಯುತ್ ಶಾಕ್‌ನ್ನು ಅನುಭವಿಸಿದವರಂತೆ ಥಂಗನೆ ಎಗರಿದರು ಹಾಗೂ ಜಮಖಾನೆಯನ್ನು ಸರಿಸಿದರು. ಅವರು ಎರಡು ನಾಣ್ಯಗಳನ್ನು ಕಂಡು ಕೂಡಲೇ ಅವುಗಳನ್ನು ದೂರ ಎಸೆದರು. ತಃಕ್ಷಣವೇ ನಾನು ನಾಣ್ಯಗಳನ್ನು ಆಯ್ದುಕೊಂಡು ನೋಡಿದರೆ ಅವು ಹಳದಿ ಬಣ್ಣಕ್ಕೆ ಬದಲಾಯಿಸಿತ್ತು. ಇತ್ತೀಚಿನವರೆಗೂ ಅವುಗಳನ್ನು ನನ್ನ ಬಳಿ ಇಟ್ಟುಕೊಂಡು ಅವುಗಳನ್ನು ಅನೇಕರಿಗೆ ತೋರಿಸಿರುವೆ."

ನಾಯನರು ಗುಹೆಯಿಂದ ಹೊರಬಂದ ಕೂಡಲೇ ಅವರ ಮೇಲೆ ಸಣ್ಣದಾಗಿ ತುಂತುರು ಹನಿಗಳು ಉದುರುತ್ತಿದ್ದವು. ಅವರು ಅದನ್ನು ಭಗವಂತನ ಕರುಣೆಯೆಂದು ಪರಿಗಣಿಸುತ್ತಿದ್ದರು. ಆಗಾಗ್ಗೆ ಇಂದ್ರಾಣಿ ಮಾತೆಯು ನಾಯನರ ಮೇಲೆ ಅಮೃತದ ಮಳೆಗರೆಯುತ್ತಿದ್ದಳು. ಇಂದ್ರಾಣಿಯು ಇಂದ್ರನ ಪತ್ನಿ. ನಾಯನರು ಯಾವುದೇ ಪ್ರತಿಫಲವನ್ನು ನಿರೀಕ್ಷಿಸದ ಕವಿಗಳು. ಇಂದ್ರಾಣಿಯು ವಜ್ರವೈರೋಚನಿಯೂ ಕೂಡ. ನಾಯನರು ಇಂದ್ರಾಣಿಯನ್ನು ಎಂದಿಗೂ ಬಿಡಲಾರರು. ನಾಯನರ ಆಲೋಚನೆಯ ಪ್ರಕಾರ ಇಂದ್ರಾಣಿಯು ತನ್ನ ಮೇಲೆ ಸುಂಸುತ್ತಿದ್ದ ಶಕ್ತಿಯು ಎಷ್ಟು ಮಹತ್ತಾದದ್ದೆಂದರೆ ಅದನ್ನು ಭೂಮಿಯ ಮೇಲಿನ ಪಕ್ಷದಲ್ಲಿ ಅದು ಭಾರತವನ್ನು ಸಂಪೂರ್ಣವಾಗಿ ಅಭಿವೃದ್ಧಿ

ಪಡಿಸಬಹುದೆಂದು. ಇದರಿಂದಾಗಿ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಅಪಾರವಾದ ಶಕ್ತಿಯು ಉಂಟಾಗಬಹುದು. ನಾಯನರು ಮಾತೆಯಲ್ಲಿ ಈ ರೀತಿಯಾಗಿ ಪ್ರಾರ್ಥಿಸಿದರು, "ಓ ಮಾತೇ! ನನ್ನ ಮೇಲೆ ನೀನು ಸುರಿಸುತ್ತಿರುವ ಅಪಾರವಾದ ಕರುಣೆಗೆ ಬದಲಾಗಿ ನಾನು ಏನನ್ನು ನೀಡಲಿ? ನಾನು ಶ್ಲೋಕಗಳನ್ನು ರಚಿಸಿ ಅವುಗಳಿಂದ ಪುಷ್ಪಮಾಲೆಯನ್ನು ಹೆಣೆದು ನಿನ್ನನ್ನು ಅಲಂಕರಿಸಬಲ್ಲೆ. ದಯಮಾಡಿ ಅದನ್ನು ನೀನು ಸ್ವೀಕರಿಸು ಹಾಗೂ ಹಾಗೆ ಸ್ವೀಕರಿಸಿದ ಕುರುಹಾಗಿ ನಿನ್ನ ಶಕ್ತಿ ಹಾಗೂ ಸೌಂದರ್ಯಗಳನ್ನು ನಿನ್ನನ್ನು ಹೊಗಳುವ ಈ ಶ್ಲೋಕಗಳ ಮೂಲಕ ತೋರು ಮತ್ತು ಅವುಗಳಿಂದ ಓದುವವರ ಹೃದಯಗಳನ್ನು ಸಂತಸಪಡಿಸು.'

ಈ ರೀತಿಯಾಗಿ ವಿನಯದಿಂದ ಪ್ರಾರ್ಥಿಸಿದ ನಂತರ ನಾಯನರು ಇಂದ್ರಾಣಿಯನ್ನು ಕುರಿತು ಶ್ಲೋಕರಚನೆಗೆ ತೊಡಗಿದರು. ಪ್ರತಿನಿತ್ಯವೂ ಅವರು ಶ್ಲೋಕಗಳನ್ನು ರಚಿಸಿ ಅವುಗಳನ್ನು ಓದಿದ ನಂತರ ಆಕಾಶದಲ್ಲಿ ಸ್ವಲ್ಪ ಮೋಡಗಳು ಕಾಣುತ್ತಿದ್ದವು ಮತ್ತು ಬೆಳಕಿನ ಕಿರಣವು ಮಾತೆಯು ಈ ಶ್ಲೋಕಗಳನ್ನು ಆಲಿಸಿ ಮುಗುಳ್ನಗೆಯನ್ನು ಬೀರಿದಳೋ ಎಂಬಂತೆ ಕಂಡುಬರುತ್ತಿತ್ತು. ಅದನ್ನು ಕಂಡು ನಾಯನರು, "ಆಗೋ! ಮಾತೆಯು ಒಪ್ಪಿದ್ದಾಳೆ", ಎಂದು ಉದ್ಗರಿಸುತ್ತಿದ್ದರು. ಹೀಗೆ ನಾಯನರು ಅನೇಕ ಶ್ಲೋಕಗಳನ್ನು ರಚಿಸಿದರು. ಸಾಮಾನ್ಯವಾಗಿ ಈ ವಿಧದ ರಚನೆಗಳಲ್ಲಿ ಭಕ್ತಿಯೇ ಪ್ರಧಾನವಾಗಿರುತ್ತಿತ್ತು. ಆದರೆ, ನಾಯನರ ರಚನೆಯಲ್ಲಿ ದೇಶದ ಹೀನ ಪರಿಸ್ಥಿತಿಯ ಬಣ್ಣನೆಗಳು ಇರುತ್ತಿದ್ದವು, ಹಾಗೂ ಅದಕ್ಕೆ ಕಾರಣ ಮತ್ತು ಪರಿಹಾರವೂ ಇರುತ್ತಿತ್ತು.

ಅಗತಿ ಮವೀರ್ಯದಪಗತ ಧೈರ್ಯಂ
ಅವತು ಶಚೀ ಮೇ ಜನಿಭುವಮಾರ್ಯಾಮ್ ॥

– ಇಂದ್ರಾಣಿ ಸಪ್ತಶತಿ (2)

"ಅಭಿವೃದ್ಧಿಯಿಲ್ಲದೆ ಮತ್ತು ದ್ವೇಷದಿಂದ, ನನ್ನ ದೇಶವು ಎಲ್ಲ ಧೈರ್ಯವನ್ನೂ ಕಳೆದುಕೊಂಡಿತು. ಮಾತೆಯು ನಮ್ಮ ಮಾತೃಭೂಮಿಯನ್ನು ರಕ್ಷಿಸಲಿ."

ಭಿನ್ನಾಂ ಸಂಘಸಹಸ್ರೈರ್ಖಿನ್ನಾಂ ಶತ್ರುಭರೇಣ
ಪಾತುಂ ಭಾರತಭೂಮಿಂ ಮಾತರ್ದೇಹಿ ಬಲಂ ನಃ ॥

– ಇಂದ್ರಾಣಿ ಸಪ್ತಶತಿ (149)

"ಓ ಮಾತೇ! ನಮ್ಮ ಮಾತೃಭೂಮಿಯನ್ನು ಉಳಿಸಲು ನಮಗೆ ಶಕ್ತಿಯನ್ನು ನೀಡು. ಶತ್ರುಗಳ ದಬ್ಬಾಳಿಕೆಯಿಂದ ಮಾತೃಭೂಮಿಯು ಬಹಳವಾಗಿ ನಲುಗಿದೆ ಮತ್ತು ಸಾವಿರಾರು ಪಂಥಗಳಾಗಿ ಛಿದ್ರ ಛಿದ್ರವಾಗಿದೆ."

ಅಧ್ವಾನೋ ಗಲಿತಚರಣಾ ಮಧ್ವರಕ್ಷಿತಿ ಮವಿಭವಾಮ್
ಆದದಾತು ಪಥಿ ವಿಮಲೇ ವೈಭವೇ ಚ ಹರಿತರುಣೀ ॥
– ಇಂದ್ರಾಣಿ ಸಪ್ತಶತಿ (302)

"ತನ್ನ ಮಾರ್ಗದಿಂದ ಜಾರಿದ ಹಾಗೂ ಎಲ್ಲ ವೈಭವಗಳನ್ನೂ ಕಳೆದುಕೊಂಡು ತ್ಯಾಗದಿಂದ ಮೂಡಿಬಂದ ಈ ದೇಶವು ಹೀನಾಯ ಸ್ಥಿತಿಯಲ್ಲಿದೆ."

ಛಿನ್ನಾಂ ಭಿನ್ನಾಂ ಸುತರಾಂ ಸನ್ನಾ ಮನ್ನಾಭಾವಾದಭಿತಃ ಖಿನ್ನಾಮ್
ಏತಾಂ ಪಾತುಂ ಭರತಕ್ಷೋಣೀಂ ಜಾಯೇ ಜಿಷ್ಣೋಃ ಕುರುಮಾಂ ಶಕ್ತಮ್ ॥
– ಇಂದ್ರಾಣಿ ಸಪ್ತಶತಿ (379)

"ಓ ಮಾತೆ! ಭರತ ಭೂಮಿಯು ಛಿದ್ರ ಛಿದ್ರವಾಗಿ ಕ್ಷೀಣಿಸುತ್ತಾ ಹಾಗೂ ಆಹಾರದ ಕೊರತೆಯಿಂದಾಗಿ ತೊಂದರೆಗೊಳಗಾಗಿದೆ. ಈ ದೇಶವನ್ನು ರಕ್ಷಿಸಲು ನನ್ನಲ್ಲಿ ಶಕ್ತಿಯನ್ನು ತುಂಬು."

ಸ್ವಾತಂತ್ರ್ಯ ಹೋರಾಟಗಾರರ ಮುಖಂಡರಲ್ಲಿ ಶಕ್ತಿಯನ್ನು ತುಂಬಲು ನಾಯನರು ಕೆಲವು ಶ್ಲೋಕಗಳನ್ನು ರಚಿಸಿದರು.

ಜಗತಾಂ ಚಕ್ರವರ್ತಿನ್ಯಸಿತಕಟಾಕ್ಷಃ ಜಲದಃ
ಭಕ್ತಿಭಾಜಾಂ ಶಿಖಿನಾಂ ನರ್ತನಾಯ
ಸುಕೃತೀ ಕೋಪಿ ನಾಟ್ಯೇ ಬಹುಲೇ ತತ್ರ ಮಾತಃ
ಜಗತೀಸಾರಭೂತಾನುಪದೇಶಾನುಕರೋತಿ ॥

"ಓ ಪ್ರಪಂಚದ ರಾಣಿಯೇ! ನಿನ್ನ ಕಪ್ಪುಬಣ್ಣದ ದರ್ಶನವು ನವಿಲುಗಳಿಗೆ ನಾಟ್ಯವಾಡಲು ಕಪ್ಪು ಬಣ್ಣದ ಮೋಡಗಳಾಗಿವೆ. ಈ ರೀತಿಯ ನಿನ್ನ ಅನೇಕ ನಾಟ್ಯಗಳಲ್ಲಿ ಪವಿತ್ರ ಮಹಾಮಹಿಮನು (ಶ್ರೀ ರಮಣ) ಜ್ಞಾನದ ಸಾರವನ್ನು ಬೋಧಿಸುತ್ತಿರುವರು. ದಯಮಾಡಿ ನಿನ್ನ ಕರುಣೆಯ ವರ್ಷವನ್ನು ಅವರ ಮೇಲೆ ಸುರಿಸು."

ಅಪರೋ ನವ್ಯಕಾವ್ಯಾ ನ್ಯಾನವಧ್ಯಾನಿ ಧನ್ಯಃ
ವಿದಧಾತ್ಯಪ್ರಯತ್ನಾ ದ್ಬುಧಭೋಗಕ್ಷಮಾಣಿ ॥

"ಆಶೀರ್ವದಿಸಲ್ಪಟ್ಟ ಇನ್ನೊಬ್ಬನು (ಗಣಪತಿ ಮುನಿ) ಜ್ಞಾನಿಗಳನ್ನು ಸಂತೋಷಪಡಿಸಲು ಹೊಸ ಕಾವ್ಯ ಕೃತಿಯನ್ನು ಸೃಷ್ಟಿಸುತ್ತಿರುವನು. ದಯಮಾಡಿ ಅವನಿಗೆ ಸಹಾಯ ಮಾಡು.

ಇತರೋ ಭಾಗ್ಯಶಾಲೀ ರಮಣೀಯೈಃ ಪ್ರಸಂಗೈಃ
ವಿತನೋತಿ ಸ್ವಜಾತಿಂ ಜಗತಿ ಶ್ರೇಷ್ಠನೀತಿಮ್ ॥

"ಮತ್ತೊಬ್ಬ ಅದೃಷ್ಟವಂತನು ಮೃದುವಾದ ಭಾಷಣಗಳಿಂದ ತತ್ವಗಳನ್ನು ತಿಳಿಸುತ್ತಾ ತನ್ನ ಕುಲದವರನ್ನು ಎಚ್ಚರಿಸುತ್ತಿದ್ದಾನೆ. ಅವನ ಮೇಲೆ ದಯೆ ತೋರು."

ಜಗತಾಂ ಮಾತರೇಕೋ ಮಹಸಾ ಪುಣ್ಯಶಾಲೀ
ವಿಧುತಾರಿ ಸ್ವದೇಶಂ ಕುರುತೇ ವೀತಪಾಶಮ್ ॥

"ಓ ವಿಶ್ವ ಮಾತೆಯೇ! ಮತ್ತೊಬ್ಬ ಪವಿತ್ರ ಮಹಾತ್ಮರು (ಗಾಂಧೀಜಿ) ದೇಶವನ್ನು ಶತ್ರುಗಳ ದಾಸ್ಯದಿಂದ ಹೊರತರಲು ಪ್ರಯತ್ನಿಸುತ್ತಿರುವರು. ದಯಮಾಡಿ ಅವರಿಗೆ ಶಕ್ತಿಯನ್ನು ದಯಪಾಲಿಸು."

ಪರ ಇಂದ್ರಾಣಿ ಸಾಧುರ್ಬತ ವಿಸ್ಮೃತವಿಶ್ವಃ
ರಮತೇ ಸಿಕ್ತಗಂಡಃ ಪ್ರಮದಾಶ್ರುಪ್ರತಾನೈಃ ॥

"ಓ ಇಂದ್ರಾಣಿ! ಮತ್ತೊಬ್ಬ ತಪಸ್ವಿಯು (ಅರವಿಂದರು) ಪ್ರಪಂಚವನ್ನೇ ಮರೆತು ಸಂತೋಷದ ಕಣ್ಣೀರಿನಲ್ಲಿ ಆಡುತ್ತಿರುವರು. ದಯಮಾಡಿ ಅವರನ್ನು ರಕ್ಷಿಸು."

ಹೀಗೆ ನಾಯನರು ಏಳುನೂರು ಶ್ಲೋಕಗಳನ್ನು ರಚಿಸಿ ಅದಕ್ಕೆ "ಇಂದ್ರಾಣಿ ಸಪ್ತಶತಿ" ಎಂದು ನಾಮಕರಣ ಮಾಡಿದರು. ಅವುಗಳನ್ನು ನೂರು ಶ್ಲೋಕಗಳನ್ನಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ಶತಕವನ್ನೂ ಇಪ್ಪತ್ತೈದು ಶ್ಲೋಕಗಳ ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ಇಪ್ಪತ್ತೈದು ಶ್ಲೋಕಗಳಲ್ಲೂ ಎರಡನೆಯ ಹಾಗೂ ಇಪ್ಪತ್ನಾಲ್ಕನೆಯ ಶ್ಲೋಕಗಳು ದೇಶಭಕ್ತಿಯಿಂದ ಕೂಡಿದೆ. ಮೊದಲನೇ ಶತಕದಲ್ಲಿನ ಪ್ರತಿಯೊಂದು ಶ್ಲೋಕದ ಪ್ರತಿಸಾಲಿನಲ್ಲೂ ಹನ್ನೆರಡು ಅಕ್ಷರಗಳಿರುವುದು ಹಾಗೂ ಎರಡನೇ ಶತಕದ ಪ್ರತಿ ಶ್ಲೋಕದ ಪ್ರತಿಯೊಂದು ಸಾಲಿನಲ್ಲೂ ಹದಿನಾಲ್ಕು ಅಕ್ಷರಗಳಿರುವುದು, ಹಾಗೇ ಉಳಿದವುಗಳೂ ಸಮಾಂತರ ಅಂಕಶ್ರೇಣಿಯಲ್ಲಿ ಮುಂದುವರೆದು ಏಳನೇ ಶತಕದಲ್ಲಿನ ಶ್ಲೋಕಗಳ ಪ್ರತಿಯೊಂದು ಸಾಲುಗಳಲ್ಲೂ ಇಪ್ಪತ್ನಾಲಕ್ಕು ಅಕ್ಷರಗಳಿರುವುದು.

೧೦

ರಾಜಕೀಯದ ಕರೆ

ನ ಮಮ ಪರಮೇ ಮುಕ್ತಾವಾಶಾ ನ ವಾ ವಿಭವಾಷ್ಟಕೇ
ನ ಚ ಗಜಘಟಾಪೂರ್ಣಾಯಾಂ ವಾ ಮಹೇಶ್ವರಿ ಸಂಪದಿ
ನ ಚ ಮಧುಮುಚಾಂ ವಾಚಾಂ ಸರ್ಗೇ ನಿರರ್ಗಳವೈಭವೇ
ಮುನಿಭುವಿ ಕುತೋ ಜಾತಃ ಸೋಹಂ ತದೇವ ಸಮೀರ್ಯತಾಂ ॥

– ಉಮಾಸಹಸ್ರಮ್ (9–34–19)

"ತಾಯಿಯೆ! ನನಗೆ ಮೋಕ್ಷದಲ್ಲಿ ಆಸೆಯಿಲ್ಲ. ಅಣಿಮಾದಿ ಅಷ್ಟೈಶ್ವರ್ಯದಲ್ಲೂ ಆಸೆಯಿಲ್ಲ. ಆನೆಗಳ ಸಮೂಹದಿಂದ ಕೂಡಿದ ಐಶ್ವರ್ಯದಲ್ಲೂ ಆಸೆಯಿಲ್ಲ. ಜೇನನ್ನು ಸ್ರವಿಸುವ ನಿರರ್ಗಳವಾದ ವಾಕ್ ಶಕ್ತಿಯ ಸೃಷ್ಟಿಯಲ್ಲೂ ಆಸೆಯಿಲ್ಲ. ಋಷಿಗಳ ಬೀಡಾದ ಈ ಭಾರತ ಭೂಮಿಯಲ್ಲಿ ನಿನ್ನ ಮಗನಾದ ನಾನು ಏಕೆ ಹುಟ್ಟಿದೆ? ಅದೇ ನಿನ್ನಿಂದ ಹೇಳಲ್ಪಡಲಿ; ನಾನು ಇಲ್ಲಿ ಹುಟ್ಟಲು ಕಾರಣವೇನು? ಹೇಳು ತಾಯಿ!"

ಆಗಿನ ಕಾಲದಲ್ಲಿ ಅಂದರೆ ಸ್ವಾತಂತ್ರಪೂರ್ವ ಕಾಲದಲ್ಲಿ ರಾಜಕೀಯ ಕ್ಷೇತ್ರದಲ್ಲಿ ಅಸ್ಪೃಶ್ಯತೆ ಹಾಗೂ ಸ್ತ್ರೀ ಸ್ವಾತಂತ್ರ್ಯಗಳೇ ಅತಿ ಮುಖ್ಯವಾದ ಸಾಮಾಜಿಕ ಸಮಸ್ಯೆಗಳಾಗಿದ್ದವು. ಈ ಸಮಸ್ಯೆಗಳಿಗೆ ಧಾರ್ಮಿಕ ಪರಿಹಾರವನ್ನು ಕಂಡುಕೊಳ್ಳಲು ರಾಷ್ಟ್ರ ನಾಯಕರುಗಳು ವಿದ್ವಾಂಸರನ್ನು, ಧಾರ್ಮಿಕ ಮಠಾಧೀಶರನ್ನು ಹಾಗೂ ಸಾಧು ಸಂತರುಗಳನ್ನು ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನೀಡುವಂತೆ ಕರೆ ಕೊಟ್ಟರು. ಸಾಮಾನ್ಯ ಜನಗಳಲ್ಲಿ ಧಾರ್ಮಿಕ ಹಾಗೂ ಸಾಮಾಜಿಕ ಸಂಪ್ರದಾಯ ಮತ್ತು ಕಟ್ಟಳೆಗಳಲ್ಲಿ ಅಪಾರವಾದ ನಂಬಿಕೆ ಇದ್ದದ್ದೇ ಈ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವುದು ಕಷ್ಟಕರವಾಗಿತ್ತು. ಸಮಾಜದಲ್ಲಿನ ಕೆಲವು ಗುಂಪುಗಳು ಜಾತಿ ಪದ್ಧತಿ ಹಾಗೂ ಇತರೆ ಸಂಪ್ರದಾಯಗಳ ಹೆಸರಿನಲ್ಲಿ ಅಸ್ಪೃಶ್ಯತೆ ಹಾಗೂ ಸ್ತ್ರೀ ಸ್ವಾತಂತ್ರ್ಯಗಳ ಬಗ್ಗೆ ಸೂಕ್ತ ಪರಿಹಾರ ಕಂಡುಕೊಳ್ಳುವುದಕ್ಕೆ ಅಡ್ಡಿಪಡಿಸತೊಡಗಿದರು. ಎರಡೂ ಕಡೆಗಳಿಂದ ಪರ ಹಾಗೂ ವಿರೋಧವಾಗಿ ಕೊನೆಯಿಲ್ಲದ ವಾದ ವಿವಾದಗಳು ಹುಟ್ಟಿಕೊಂಡು, ಪರಿಹಾರವು ಕನಸಿನ ಮಾತಾಯಿತು. ಸಮಾಜ ಸುಧಾರಕರು ಹಾಗೂ ಸಂಪ್ರದಾಯವಾದಿಗಳು ಪರಸ್ಪರರ ಅಭಿಪ್ರಾಯಗಳನ್ನು ತಮ್ಮ ಶಕ್ತಿ

ಮೀರಿ ವಿರೋಧಿಸತೊಡಗಿದರು. ಈ ರಾಜಕೀಯ ಕಾರ್ಮೋಡಗಳು ಅರುಣಾಚಲದ ಆಕಾಶಕ್ಕೂ ವ್ಯಾಪಿಸಿತು.

ಕ್ರಿ.ಶ.1916ರಲ್ಲಿ ಶ್ರೀ ಬಯ್ಯ ನರಸಿಂಹಮ್ ಅವರು ಮದ್ರಾಸಿನಲ್ಲಿ ನಡೆದ ರಾಜ್ಯಮಟ್ಟದ ಕಾಂಗ್ರೆಸ್ ಸಮಿತಿಯ ಸಭೆಯನ್ನು ಉದ್ಘಾಟಿಸಿದರು. ಮತ್ತೆ 1923ರರಲ್ಲಿ ಸಮಿತಿಯು ಮತ್ತೊಂದು ಸಭೆಯನ್ನು ಕರೆದು ನಾಯನರನ್ನು ಮಾತನಾಡಲು ಆಹ್ವಾನಿಸಿತು. ನಾಯನರು ಎರಡೂ ಸಭೆಗಳಲ್ಲಿ ಭಾಗವಹಿಸಿದರು. ನಾಯನರು ವೇದಕಾಲದಲ್ಲಿದ್ದ ಸ್ತ್ರೀ ಸ್ವಾತಂತ್ರ್ಯದ ಬಗ್ಗೆ ಹಲವಾರು ವೇದ ಸೂಕ್ತಗಳನ್ನು ಆಧರಿಸಿ ಭಾಷಣ ಮಾಡಿದರು. ಇದರಿಂದಾಗಿ ಅವರು ಕಾಂಗ್ರೆಸ್ ಪಕ್ಷದ ಸದಸ್ಯರಾದರು. 1924ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯನ್ನು ತಿರುವಣ್ಣಾಮಲೈನಲ್ಲಿ ನಡೆಸಲಾಯಿತು. ಆ ಸಭೆಯಲ್ಲಿ ಮಹಾತ್ಮ ಗಾಂಧಿ, ಮದನ ಮೋಹನ ಮಾಳವೀಯ, ಅನಿಬೆಸೆಂಟ್ ಹಾಗೂ ಇತರೆ ನಾಯಕರುಗಳು ಭಾಗವಹಿಸಿದ್ದರು. ನಾಯನರು ಆ ಸಭೆಯಲ್ಲಿ ಉದ್ಘಾಟನಾ ಭಾಷಣವನ್ನು ಮಾಡಿದರು ಹಾಗೂ ಇದರಿಂದ ಎಲ್ಲ ನಾಯಕರುಗಳೂ ಪ್ರಭಾವಿತರಾದರು. ಅದೇ ವರ್ಷದ ಡಿಸೆಂಬರ್ ತಿಂಗಳಿನಲ್ಲಿ ಬೆಳಗಾವಿಯಲ್ಲಿ ಗಾಂಧೀಜಿಯವರ ನೇತೃತ್ವದಲ್ಲಿ ಮತ್ತೊಂದು ಸಮ್ಮೇಳನ ನಡೆಯಿತು. ಆ ಸಮ್ಮೇಳನದಲ್ಲಿ ಗಾಂಧೀಜಿಯು ಹಿಂದಿ ಭಾಷೆಯು ರಾಷ್ಟ್ರ ಭಾಷೆಯಾಗಬೇಕೆಂದು ಸೂಚಿಸಿದರು. ನಾಯನರು ಆ ಸೂಚನೆಯನ್ನು ವಿರೋಧಿಸಿದರು. ಅವರು ಹಿಂದೂ ಸಂಸ್ಕೃತಿಯು ಸಂಸ್ಕೃತ ಭಾಷೆಯ ತಳಹದಿಯ ಮೇಲೆ ನಿಂತಿರುವುದು ಹಾಗೂ ಈ ಸಂಸ್ಕೃತಿಯು ಬೆಳೆಯುವುದಕ್ಕೆ ಸಹಕಾರಿಯಾಗಲು ಸಂಸ್ಕೃತವನ್ನೇ ರಾಷ್ಟ್ರ ಭಾಷೆಯನ್ನಾಗಿ ಘೋಷಿಸಬೇಕೆಂದು ಬಲವಾಗಿ ವಾದಿಸಿದರು. ಹಾಗಾಗದಿದ್ದಲ್ಲಿ ರಾಷ್ಟ್ರವು ಅಧೋಗತಿಯೆಡೆಗೆ ವಾಲುವುದೆಂದು ಅಭಿಪ್ರಾಯಪಟ್ಟರು. ಗಾಂಧೀಜಿಯವರು ಸಂಸ್ಕೃತವು ಕೇವಲ ಸಮಾಜದ ಒಂದು ಗುಂಪಿಗೆ ಸೀಮಿತವಾಗಿರುವುದೆಂದು ಹಾಗೂ ಅದು ಎಲ್ಲ ವರ್ಗದವರಿಗೂ ಒಪ್ಪಿಗೆಯಾಗುವುದಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಕೂಡಲೇ ನಾಯನರು ಸಂಸ್ಕೃತವು ಪುರಾತನ ಭಾಷೆಯಾಗಿದ್ದು ಅದನ್ನು ಭಾರತೀಯ ಸಮಾಜದ ಎಲ್ಲ ವರ್ಗದವರೂ ಉಪಯೋಗಿಸುತ್ತಿದ್ದರೆಂದು ಗಾಂಧೀಜಿಯ ಅಭಿಪ್ರಾಯಕ್ಕೆ ಪ್ರತಿವಾದಿಸಿದರು. ಕಡೆಯಲ್ಲಿ ನಾಯನರ ವಾದವನ್ನು ಸಮಿತಿಯು ತಳ್ಳಿಹಾಕಿತು. ಈ ಸಭೆಯು ನಾಯನರಿಗೆ "ಲಾಲಿ ಭಾಷಾ" (ಸುಲಭ ಸಂಸ್ಕೃತ) ಕೃತಿಯನ್ನು ರಚಿಸಲು ಸಹಾಯವಾಯಿತು.

ನಾಯನರು ಜಾತಿ ಪದ್ಧತಿಯ ವಿರುದ್ಧವಾಗಿ ಮಾತನಾಡಲಿಲ್ಲ. ಚಾರಿತ್ರಿಕವಾಗಿ, ಜಾತಿಯು ಹುಟ್ಟಿನಿಂದಾಗಲಿ, ಮನುಷ್ಯನ ಅಂತಸ್ತಿನಿಂದಾಗಲಿ ನಿರ್ಧಾರವಾಗುವುದಿಲ್ಲ. ಅದು ಮನುಷ್ಯನ ಗುಣದ ಮೇಲೆ ನಿರ್ಧಾರವಾಗುವುದು. ಯಾವ ಮನುಷ್ಯನಲ್ಲಿ ಸತ್ವ ಗುಣವು ಪ್ರಮುಖವಾಗಿದ್ದು, ರಜೋಗುಣವು ಅತಿ ಕಡಿಮೆ ಇದ್ದು, ತಮೋಗುಣವು ನಾಮಮಾತ್ರವಾಗಿದ್ದಲ್ಲಿ ಅಂತಹ ಮನುಷ್ಯನನ್ನು ಬ್ರಾಹ್ಮಣ ಎಂದು ಪರಿಗಣಿಸಬಹುದು. ಬ್ರಾಹ್ಮಣರು ದೈವಾಲೋಚನೆಗಳಲ್ಲಿ

ಸದಾ ದೃಢವಾಗಿದ್ದು ಹಾಗೂ ಆಧ್ಯಾತ್ಮಿಕವಾಗಿ ಸಮಾಜವನ್ನು ಮುನ್ನಡೆಸುವರು. ಕ್ಷತ್ರಿಯ ಜಾತಿಯವರ ಶಕ್ತಿಯು ನಾಯಕರಲ್ಲಿರುವುದು. ಅವರಲ್ಲಿ ಧೈರ್ಯ, ಶೌರ್ಯ, ಬಂಡಾಯ ಪ್ರವೃತ್ತಿಗಳು ಹಾಗೂ ಅಹಂಭಾವವು ಅತಿಯಾಗಿ ಅಥವಾ ಮಿತಿಯಾಗಿ ಇರುವುದು. ಅವರಲ್ಲಿ ರಜೋಗುಣವು ಪ್ರಾಧಾನ್ಯವಾಗಿದ್ದು ಕಡಿಮೆ ಮಟ್ಟದಲ್ಲಿ ಸತ್ವ ಹಾಗೂ ತಮೋ ಗುಣಗಳಿರುವುದು. ಯಾರಲ್ಲಿ ತಮೋಗುಣವು ಪ್ರಧಾನವಾಗಿದ್ದು, ಸತ್ವ ಹಾಗೂ ರಜೋಗುಣವು ಕಡಿಮೆಯಿದ್ದಲ್ಲಿ ಅವರನ್ನು ವೈಶ್ಯರೆಂದು ಕರೆಯಲಾಗುವುದು. ಯಾರಲ್ಲಿ ತಮೋಗುಣವು ಹೆಚ್ಚಾಗಿ ಅಥವಾ ಸಂಪೂರ್ಣವಾಗಿರುವುದೋ ಅವರನ್ನು ಶೂದ್ರ ಎಂದು ಕರೆಯಲಾಗುವುದು. ಹಿಂದೂಧರ್ಮದಲ್ಲಿ ಜಾತಿಗಳನ್ನು ಒಂದರಿಂದ ಬೇರೆಯಾಗಿ ಪರಿಗಣಿಸಲು ಯಾವುದೇ ಅಡೆತಡೆಗಳು ಇರುವುದಿಲ್ಲ. ಸಮಾಜವು ಮನುಷ್ಯನ ಮಾನಸಿಕ ಬೆಳವಣಿಗೆ ಮತ್ತು ವರ್ತನೆಗಳಿಗನುಸಾರವಾಗಿ ಗೌರವವನ್ನು ಕೊಡುತ್ತದೆ. ಇದೇ ವೇದ ಸಂಸ್ಕೃತಿಯಾಗಿತ್ತು. ನಾಯನರು ಈ ಸಂಸ್ಕೃತಿಗೆ ಮಾತ್ರ ಬದ್ಧರಾಗಿದ್ದರು.

1927ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಅಸ್ಪೃಶ್ಯತೆಯ ಸಮಸ್ಯೆಯನ್ನು ಬಗೆಹರಿಸಲು ಹಲವಾರು ಸಭೆಗಳನ್ನು ಹೈದರಾಬಾದ್, ಮಚಲಿಪಟ್ಟಣಂ ಹಾಗೂ ಇತರೆ ಕಡೆಗಳಲ್ಲಿ ನಡೆಸಿತು. ನಾಯನರು ಆ ಸಭೆಗಳಲ್ಲಿ ಭಾಗವಹಿಸಿದರು. ದಿನಾಂಕ 25-2-1927ರಂದು ಶ್ರೀಮಾದಪಟ್ಟಿ ಹನುಮಂತರಾವ್ ಅವರ ಗೃಹದಲ್ಲಿ ಒಂದು ಸಭೆ ನಡೆಯಿತು. ಅಲ್ಲಿ ಸಭಿಕರಿಂದ ನಡೆದ ಸಂವಾದಗಳು ಪ್ರಶ್ನೆಗಳ ರೂಪವನ್ನು ಪಡೆದು ಅವುಗಳಿಗೆ ನಾಯನರು ಸೂಕ್ತ ಉತ್ತರವನ್ನು ನೀಡಿದರು.

ಪ್ರಶ್ನೆ: ಹಿಂದೂಗಳ ಸಾಮಾನ್ಯ ಮೌಲ್ಯಗಳು ಯಾವುವು?

ಉತ್ತರ: ವೇದಗಳಲ್ಲಿನ ನಂಬಿಕೆ. ಎಲ್ಲರಿಗೂ ಸಮಾನ ಹಕ್ಕನ್ನು ನೀಡುವುದು. ಇವೆರಡರ ಬಗ್ಗೆ ಖಚಿತವಾದ ಭರವಸೆಯನ್ನು ನೀಡದಿದ್ದಲ್ಲಿ ಜನಗಳಲ್ಲಿ ನೈಜವಾದ ನಂಬಿಕೆಯು ಉಂಟಾಗುವುದಿಲ್ಲ. ಹೇಗೆ ಕ್ರಿಶ್ಚಿಯನ್ನರು ಬೈಬಲ್ಲನ್ನು ಒಪ್ಪಿಕೊಂಡಿರುವರೋ ಹಾಗೇ ಹಿಂದೂಗಳೂ ವೇದಗಳನ್ನು ಒಪ್ಪಿಕೊಳ್ಳಲೇಬೇಕು.

ಪ್ರಶ್ನೆ: ಇದು ಒಂದು ಆದರ್ಶ. ಎಲ್ಲರನ್ನೂ ಹಿಂದೂಗಳೆಂದು ಕರೆಯಲಾಗುವುದು. ಯಾರು ನಿಜವಾಗಿ ಹಿಂದೂಗಳು?

ಉತ್ತರ: ಯಾರು ನಾಲ್ಕು ವರ್ಣದ ಜಾತಿಪದ್ಧತಿಯನ್ನು ನಂಬುವರೋ ಅವರೇ ಂದೂಗಳು ... ನಾಸ್ತಿಕನೂ ಸಹ ವೇದಗಳಲ್ಲಿ ನಂಬಿಕೆ ಇದ್ದಲ್ಲಿ ಅವನೂ ಹಿಂದೂ ... ದಾಹರಣೆಗೆ, ಸಾಂಖ್ಯರು ಭಗವಂತನನ್ನು ನಂಬುವುದಿಲ್ಲ. ಆದರೆ ಅವರು ... ಕೊಳ್ಳುವರು ಹಾಗಾಗಿ ಅವರೂ ಕೂಡಾ ಹಿಂದೂಗಳೇ.

ಪ್ರಶ್ನೆ: ವೇದಗಳನ್ನು ಹೇಗೆ ಪ್ರಚಾರ ಮಾಡಬೇಕು?

ಉತ್ತರ: ವೇದಗಳ ಅತಿ ಮುಖ್ಯವಾದ ಭಾಗಗಳನ್ನು ರಾಷ್ಟ್ರೀಯ ಭಾಷೆಯಲ್ಲಿ ಅನುವಾದಿಸಬೇಕು.

ಪ್ರಶ್ನೆ: ಬೌದ್ಧರು ಹಿಂದೂಗಳೇ?

ಉತ್ತರ: ಇಲ್ಲ. ಬೌದ್ಧರು, ಜೈನರು ಮತ್ತು ಬ್ರಹ್ಮ ಸಮಾಜದ ಅನುಯಾಯಿಗಳು ವೇದಗಳನ್ನು ಒಪ್ಪುವುದಿಲ್ಲ. ಹಾಗಾಗಿ ಅವರುಗಳು ಹಿಂದೂಗಳಲ್ಲ. ಆರ್ಯ ಸಮಾಜದ ಅನುಯಾಯಿಗಳು ಹಿಂದುಗಳು.

ಪ್ರಶ್ನೆ: ಜಾತಿ ವ್ಯತ್ಯಾಸಗಳು ಅಸ್ತಿತ್ವದಲ್ಲಿರಬೇಕೆ?

ಉತ್ತರ: ಪ್ರತಿಯೊಬ್ಬರೂ ಬ್ರಾಹ್ಮಣರಾಗಬೇಕು. ಅಲ್ಲಿಯವರೆಗೂ ಜಾತಿ ಜಾತಿಗಳಲ್ಲಿನ ಆಂತರಿಕ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಬೇಕು. ಜಾತಿಯೊಳಗೆ ಯಾವುದೇ ಒಳ ಜಾತಿ ಇರಬಾರದು. ಸಂಪ್ರದಾಯಗಳ ಐಕ್ಯತೆಯೊಂದೇ ಬ್ರಾಹ್ಮಣತ್ವದೆಡೆಗೆ ಸಾಗಲು ಸಹಾಯಕ. ಭಗವಂತನನ್ನು ಸಾಕ್ಷಾತ್ಕರಿಸಿಕೊಂಡವರು ಪ್ರಾರಂಭಿಸಿದ ಸಂಪ್ರದಾಯಗಳನ್ನು ಅಧಿಕೃತವೆಂದು ಪರಿಗಣಿಸಿ ಅವುಗಳನ್ನು ಒಪ್ಪಿಕೊಳ್ಳಬೇಕು. ಸಮಾನತೆ ಎಂದರೆ ಉಪನಯನದಂತಹ ಪದ್ಧತಿಗಳು ಎಲ್ಲರಿಗೂ ಅನ್ವಯಿಸಬೇಕು. ಬೇರೆ ರೀತಿಯ ಅಸಮಾನತೆಗಳಾದ ಸಂಪ್ರದಾಯಗಳು ಇತ್ಯಾದಿಗಳನ್ನು ಹೋಗಲಾಡಿಸಬೇಕು. ಸಸ್ಯಾಹಾರಿ ಹಾಗೂ ಮಾಂಸಾಹಾರಿಗಳ ನಡುವಿನ ವ್ಯತ್ಯಾಸಗಳು ಇರುವುದರಿಂದಾಗಿ ಅಸಮಾನತೆಯನ್ನು ಆಹಾರಪದ್ಧತಿಯಲ್ಲಿ ತೊಡೆದುಹಾಕಲಾಗುವುದಿಲ್ಲ.

ಪ್ರಶ್ನೆ: ಬೇರೆಯವರನ್ನು ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳಬಹುದೇ? ಹಾಗೆ ಹಿಂದೂ ಧರ್ಮಕ್ಕೆ ಸೇರಿಕೊಂಡವರ ಜಾತಿ ಯಾವುದು?

ಉತ್ತರ: ಹಿಂದೂ ಧರ್ಮದಲ್ಲಿನ ಒಬ್ಬನನ್ನು ಬೇರೆ ಧರ್ಮಕ್ಕೆ ಮತಾಂತರಿಸಲಾಗಿದ್ದರೆ ಅವನನ್ನು ಮರಳಿ ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳಬಹುದು. ಅಂಥವರು ಹಿಂದೂ ಧರ್ಮದಿಂದ ಬೇರೆ ಧರ್ಮಕ್ಕೆ ಮತಾಂತರಗೊಳ್ಳುವ ಸಮಯದಲ್ಲಿ ಯಾವ ಜಾತಿಯಲ್ಲಿದ್ದರೋ, ಮತ್ತೆ ಹಿಂದೂ ಧರ್ಮಕ್ಕೆ ಮತಾಂತರಗೊಂಡಾಗ ಅದೇ ಜಾತಿಗೆ ಸೇರಿದವರಾಗುತ್ತಾರೆ. ಅಂತಹವರನ್ನು "ಅವಿಶೇಷ" ಎಂದು ಕರೆಯಬಹುದು.

ಪ್ರಶ್ನೆ: ಜಾತಿಗಳು ಒಳ್ಳೆಯದೇ?

ಉತ್ತರ: ತಾರತಮ್ಯವಿದ್ದಲ್ಲಿ, ಜಾತಿಗಳು ಖಂಡಿತವಾಗಿಯೂ ಕೆಟ್ಟದ್ದು.

ಪ್ರಶ್ನೆ: ಸ್ಮೃತಿಗಳನ್ನು ಪುನಃ ಬರೆಯಬಹುದೇ?

ಉತ್ತರ: ಬರೆಯಬಹುದು.

ಪ್ರಶ್ನೆ: ಅವುಗಳನ್ನು ಹೇಗೆ ಅನುಸರಿಸಬಹುದು?

ಉತ್ತರ: ಪಂಡಿತರ ಸಮಿತಿಯಿರಬೇಕು. ಅವರು ನಿಯಮಗಳನ್ನು ಸಿದ್ಧಪಡಿಸಬೇಕು.

ಪ್ರಶ್ನೆ: ಅಸ್ಪೃಶ್ಯರನ್ನು ಹೇಗೆ ನಡೆಸಿಕೊಳ್ಳಬೇಕು?

ಉತ್ತರ: ಅವರನ್ನು ಶೂದ್ರರೆಂದು ಪರಿಗಣಿಸಬೇಕು.

ಪ್ರಶ್ನೆ: ಸಾಮಾಜಿಕ ಸುಧಾರಣೆಯ ಉಪಯೋಗವೇನು?

ಉತ್ತರ: ಸಮಾಜ ಸುಧಾರಕರು ಸ್ವಾತಂತ್ರ್ಯವನ್ನು ಕಲಿಸಬೇಕು. ಆದರೆ ಸರಿಯಾದ ವರ್ತನೆಗಳನ್ನು ಅವರಿಗೆ ತರಲಾಗುವುದಿಲ್ಲ. ಅವರು ಸಮಾಜದಲ್ಲಿನ ಓರೆ ಕೋರೆಗಳನ್ನು ಸರಿಪಡಿಸಬಹುದು. ಉದಾಹರಣೆಗೆ, ವಿವಾಹ ಪದ್ಧತಿಗಳಲ್ಲಿನ ದೋಷಗಳು.

ಪ್ರಶ್ನೆ: ಚಾತುರ್ವರ್ಣಾಶ್ರಮವನ್ನು ಪುನರಾರಂಭಿಸಬಹುದೇ?

ಉತ್ತರ: ಅವುಗಳು ಈಗಿನ ಪರಿಸ್ಥಿತಿಗೆ ಅನುಗುಣವಾಗಿರಬೇಕು. ಗುರುಕುಲ ಪದ್ಧತಿಯಲ್ಲಿ, ಈಗಿನ ವಸತಿಗೃಹದ ಮಾದರಿಯಲ್ಲಿ ಆರಂಭಿಸಬಹುದು. ಸ್ತ್ರೀಯರಿಗೂ ಗುರುಕುಲ ಆರಂಭಿಸಬಹುದು. ಸ್ತ್ರೀಯರಿಗೂ ಉಪನಯನವನ್ನು ಮಾಡಬಹುದು. ಋಗ್ವೇದದ ಕಾಲದಲ್ಲಿ ಸ್ತ್ರೀಯರಿಗೂ ಮೌಂಜೀ ಬಂಧನ (ಸೊಂಟದ ನಡುವಿಗೆ ದಾರವನ್ನು ಕಟ್ಟುವುದು)ವನ್ನು ಮಾಡುತ್ತಿದ್ದರು. ಸ್ತ್ರೀಯರಿಗೆ ಅವರು ಋತುಮತಿಗಳಾಗುವುದಕ್ಕೆ ಮೊದಲೇ ಉಪನಯನವನ್ನು ಮಾಡಬೇಕು. ಸ್ತ್ರೀಯರೂ ಕೂಡ ವಾನಪ್ರಸ್ಥಕ್ಕೆ ಹೋಗಬಹುದು.

ಪ್ರಶ್ನೆ: ಬ್ರಾಹ್ಮಣ ಹಾಗೂ ಬ್ರಾಹ್ಮಣೇತರರ ನಡುವಿನ ಸಮಸ್ಯೆಗಳನ್ನು ಹೇಗೆ ಬಗೆಹರಿಸಬಹುದು?

ಉತ್ತರ: ವೇದಾಧ್ಯಯನದ ಹಕ್ಕನ್ನು ಎಲ್ಲರಿಗೂ ನೀಡುವುದರ ಮೂಲಕ.

ಪ್ರಶ್ನೆ: ಕೆಲವು ಸ್ಮೃತಿಗಳಲ್ಲಿ, ವೇದಾಧ್ಯಯನವನ್ನು ಶೂದ್ರರಿಗೆ ನೀಡಲಾಗಿಲ್ಲ. ಹೇಗೆ ಅದನ್ನು ನೀವು ಬಗೆಹರಿಸುವಿರಿ?

ಉತ್ತರ: ಅವುಗಳು ತಾತ್ಕಾಲಿಕ ತಡೆಗಳು. ಅವುಗಳನ್ನು ಅಸೂಯೆಯಿಂದ ಬರೆದಿರುವಾಗ, ಅವುಗಳನ್ನು ಮಾದರಿಯನ್ನಾಗಿ ಸ್ವೀಕರಿಸಲಾಗುವುದಿಲ್ಲ. ವೇದಗಳ ವಿರುದ್ಧ ರಚಿಸಲಾದ

ಸ್ಮೃತಿಗಳನ್ನು ಆಧಾರವನ್ನಾಗಿ ಸ್ವೀಕರಿಸಲಾಗುವುದಿಲ್ಲ. ವೇದಗಳ ಅಧ್ಯಯನವನ್ನು ಬಹಿಷ್ಕರಿ ರಚಿಸಿದ ಸೂತ್ರಗಳು ಅಸೂಯೆಯಿಂದ ಕೂಡಿದ್ದು. ಅವುಗಳು ವೇದ ಘೋಷಣೆಗಳ ವಿರುದ್ಧವಾದದ್ದು. ಹಾಗಾಗಿ ಅವುಗಳನ್ನು ಗಣನೆಗೆ ತೆಗೆದುಕೊಳ್ಳಬೇಕಿಲ್ಲ.

ಪ್ರಶ್ನೆ: ಶೂದ್ರ ಹಾಗೂ ಅಸ್ಪೃಶ್ಯರ ನಡುವೆ ಯಾವ ವ್ಯತ್ಯಾಸವಿದೆ?

ಉತ್ತರ: ಬಹಳ ಕಡಿಮೆ. ತಿನ್ನುವ ತಟ್ಟೆಗಳನ್ನು ಬೇರೆ ಇಡುವುದು.

ಪ್ರಶ್ನೆ: ಪಂಚಮರು ಕ್ಷೀಣಿಸಿದ ಆರ್ಯನ್ನರೆ?

ಉತ್ತರ: ಅಲ್ಲ. ಅವರು ಮೂಲನಿವಾಸಿಗಳು.

ಪ್ರಶ್ನೆ: ಆರ್ಯನರು ಹಾಗೂ ಪಂಚಮರ ನಡುವೆ ಊಟೋಪಚಾರಗಳು ನಡೆಯಬಹುದೇ?

ಉತ್ತರ: ಧಾರ್ಮಿಕವಾಗಿ ಯಾವುದೇ ಅಡಚಣೆ ಇಲ್ಲ. ಈ ರೀತಿಯ ನಿರ್ಬಂಧಗಳು ಕೇವಲ ಸಾಂಪ್ರದಾಯಿಕವಾದದ್ದು. ದಾಕ್ಷಿಣಾತ್ಯರಲ್ಲಿ ಇದನ್ನು ಬಹಳ ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬರಲಾಗಿದೆ. ಅವರುಗಳು ತಾಂತ್ರಿಕರಾದ್ದರಿಂದ ಕೆಟ್ಟ ದೃಷ್ಟಿಗಳಿಂದ ರಕ್ಷಣೆಯಿರುವುದು. ಧಾರ್ಮಿಕ ಗ್ರಂಥಗಳ ಪ್ರಕಾರ ಸಹ ಭೋಜನವು ಮೊದಲ ಮೂರು ವರ್ಣಗಳ ನಡುವೆ ನಡೆಯಬಹುದು. ಆದರೆ ಶೂದ್ರರನ್ನು ಈ ಪಂಕ್ತಿಯಲ್ಲಿ ಕೂರಲು ಅನುಮತಿ ಇರುವುದಿಲ್ಲ.

ಪ್ರಶ್ನೆ: ಮ್ಲೇಚ್ಛರೆಂದರೆ ಯಾರು?

ಉತ್ತರ: ಯಾರು ಮಾತನಾಡಬಾರದ್ದನ್ನು ಮಾತನಾಡುವರೋ ಅವರು ಮ್ಲೇಚ್ಛರು. ಬೇರೆ ಯಾರೂ ಅಲ್ಲ.

ಪ್ರಶ್ನೆ: ಕನ್ಯೆಯು ಪ್ರೌಢಾವಸ್ಥೆಯ ನಂತರವೇ ವಿವಾಹವಾಗಬೇಕೆಂದು ಶಾಸ್ತ್ರಗಳಲ್ಲಿ ವಿಧಿಸಲಾಗಿದೆಯೇ?

ಉತ್ತರ: ಹೌದು. ಆದರೆ ಪ್ರೌಢಾವಸ್ಥೆಯ ನಂತರ ವಿವಾಹವಾದ ಕನ್ಯೆಯು ಅಶುದ್ಧಳಲ್ಲ. ಅಂತಹ ಸ್ತ್ರೀಯರನ್ನು ಶುದ್ಧೀಕರಣಗೊಳಿಸುವ ಕಾರ್ಯಕ್ರಮವಿರುವುದು. ಬಾಲ್ಯ ವಿವಾಹವು ಕೆಟ್ಟದ್ದಲ್ಲ. ಆದರೆ ಪ್ರಸ್ತವನ್ನು ಪ್ರೌಢಾವಸ್ಥೆಯ ನಂತರ ನಡೆಸಬಹುದು.

ಪ್ರಶ್ನೆ: ಸ್ತ್ರೀಯು ಅವಿವಾಹಿತೆಯಾಗಿರಬಹುದೇ?

ಉತ್ತರ: ಇರಬಹುದು.

ಪ್ರಶ್ನೆ: ವಿವಾಹವನ್ನು ಪಾಶ್ಚಿಮಾತ್ಯ ಶೈಲಿಯಲ್ಲಿ ಏಕೆ ಮಾಡಬಾರದು?

ಉತ್ತರ: ಸಂಪ್ರದಾಯಗಳು ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆಯಾಗಿರುವುದು. ನಮ್ಮ ದೇಶದಲ್ಲಿ ಗಾಂಧರ್ವ ರೀತಿಯಲ್ಲಿ ಮದುವೆಯಾದವರು ಬಹುತೇಕವಾಗಿ ಪರದಾ ಪದ್ಧತಿಗೆ ಬದಲಾಯಿಸಿಕೊಂಡರು. ನಮ್ಮ ದೇಶದಲ್ಲಿ ಹಾಗೂ ಅರೇಬಿಯಾ ದೇಶದಲ್ಲಿ ವಿಪರೀತದ ಬಿಸಿಲಿನ ಹವಾಮಾನದಿಂದಾಗಿ ಭಾವನೆಗಳು ಬಹು ಬೇಗ ತಾರಕಕ್ಕೇರುವುದು. ಶೀತ ಹವಾಮಾನ ಇರುವ ದೇಶಗಳಲ್ಲಿ ಹಾಗಿರುವುದಿಲ್ಲ. ಒಂದು ದೇಶದ ಸಂಪ್ರದಾಯವು ಮತ್ತೊಂದು ದೇಶಕ್ಕೆ ಹೊಂದಿಕೆಯಾಗುವುದಿಲ್ಲ.

ಪ್ರಶ್ನೆ: ಹಿಂದೂಗಳ ಗುರಿಯೇನು?

ಉತ್ತರ: ಪ್ರತಿಯೊಬ್ಬರೂ ವೇದಾಭ್ಯಾಸವನ್ನು ಮಾಡಬೇಕು ಹಾಗೂ ಪವಿತ್ರ ದಾರವನ್ನು ಧರಿಸಬೇಕು.

ಪ್ರಶ್ನೆ: "ವಯಸ್ಸಿನ ಒಪ್ಪಿಗೆ"ಯ (ವಿವಾಹಕ್ಕೆ)ಬಗ್ಗೆ ನಿಮ್ಮ ಅಭಿಪ್ರಾಯವೇನು?

ಉತ್ತರ: ಈ ವಿಷಯದಲ್ಲಿ ನಾನು ತಟಸ್ಥ

ಪ್ರಶ್ನೆ: ಎಲ್ಲ ಧರ್ಮಗಳ ಐಕ್ಯತೆಯು ಸಾಧ್ಯವೇ?

ಉತ್ತರ: ಅದು ಅಸಾಧ್ಯ. ಆದರೆ ಹಿಂದೂಧರ್ಮದಲ್ಲಿನ ಸಾಮಾಜಿಕ ಕಟ್ಟಳೆಗಳನ್ನು ತೆಗೆದುಹಾಕಿದಲ್ಲಿ, ವೇದ ಧರ್ಮವೊಂದೇ ಪ್ರಪಂಚದಲ್ಲಿ ಐಕ್ಯತೆಯನ್ನು ತರಬಹುದು.

ಪ್ರಶ್ನೆ: ಸ್ತ್ರೀಯು ಪುನರ್ವಿವಾಹ ಅಗಬಹುದೇ?

ಉತ್ತರ: ಆಗಬಹುದು. ಧರ್ಮ ಗ್ರಂಥಗಳಲ್ಲಿ ಅದಕ್ಕೆ ಒಪ್ಪಿಗೆ ಇದೆ. ಪುರಾಣಗಳಲ್ಲಿ ಹಲವಾರು ಈ ರೀತಿಯ ಸಂದರ್ಭಗಳುಂಟು, ಯಯಾತಿಯ ಕಥೆಯೇ ಇದಕ್ಕೆ ಉದಾಹರಣೆ.

ಪ್ರಶ್ನೆ: ಸಾಮಾನ್ಯರಿಗೆ ಭಕ್ತಿ ಹಾಗೂ ವಿಗ್ರಹಾರಾಧನೆಯನ್ನು ಹೇಗೆ ಕಲಿಸಬಹುದು?

ಉತ್ತರ: ಸೂರ್ಯನಲ್ಲಿನ ತೇಜಸ್ಸನ್ನು, ಭೂಮಿಯಲ್ಲಿನ ಅಗ್ನಿಯನ್ನು ಹಾಗೂ ಆಕಾಶದಲ್ಲಿನ ರುದ್ರನನ್ನು ಪೂಜಿಸಬೇಕು. ಸೂರ್ಯಾರಾಧನೆಯು ವಿದ್ವಾಂಸರಿಗೂ ಸಾಮಾನ್ಯರಿಗೂ ಬಹಳ ಒಳ್ಳೆಯದು.

ಆ ದಿನ ಸಂಜೆ 5 ಘಂಟೆಗೆ ಇನ್ನೂರಕ್ಕೂ ಹೆಚ್ಚಿನ ಹಿಂದುಗಳು ನಾಯನರನ್ನು ಪಲ್ಲಕ್ಕಿಯಲ್ಲಿ ಕೂರಿಸಿ ಊರಿನಲ್ಲಿ ಮೆರವಣಿಗೆ ಮಾಡಿ ಅವರಿಗೆ "ಮುನಿ" ಎಂಬ ಬಿರುದನ್ನು ನೀಡಿದರು. ಸಿಕಂದರಾಬಾದಿನ ಆಂಧ್ರ ಸಂವರ್ಧಿನಿ ಗ್ರಂಥಾಲಯವೂ ನಾಯನರನ್ನು ಗೌರವಿಸಿತು

ನಾಯನರು ತಮ್ಮ ಸಾಮಾಜಿಕ ಹಾಗೂ ರಾಜಕೀಯ ನಿಲುವುಗಳಿಂದಾಗಿ ವಿರೋಧದ ಟೀಕೆಗಳನ್ನು ಎದುರಿಸಬೇಕಾಯಿತು. ಕೆಲವರು ಅವರನ್ನು ಅನುಸರಿಸಿದರು ಹಾಗೂ ಕೆಲವರು ಅವರನ್ನು ತಿರಸ್ಕರಿಸಿದರು. ಆದರೆ ಯಾರಿಗೂ ಅವರೆದುರು ನಿಂತು ವಾದಮಾಡುವ ಧೈರ್ಯವಿರಲಿಲ್ಲ.

ಕಡೆಯಲ್ಲಿ ನಾಯನರು "ಸಂವಿಧಾನ", "ಪಂಚಮ ಮೀಮಾಂಸ" ಮತ್ತು "ಪಂಚಜನ ಚರ್ಚಾ" ಎಂಬ ಕೃತಿಗಳನ್ನು ರಚಿಸಿ ಅನಂತರ ರಾಜಕೀಯದಿಂದ ನಿವೃತ್ತರಾದರು.

೧೧

ಭವ್ಯ ವ್ಯಕ್ತಿತ್ವ

ಪರಿಪಾಕೇನ ಕಾಲೇ ಸ್ಯುಃ ಸಿದ್ಧಯಸ್ತಾನ್ ತಪಸ್ಯತಃ
ಪ್ರಾರಬ್ಧಂ ಯದಿ ತಾಭಿಃ ಸ್ಯಾದ್ವಿಹಾರೋ ಜ್ಞಾನಿನೋಽಪಿ ಚ ॥

– ಶ್ರೀ ರಮಣ ಗೀತ

"ಪರಿಪಕ್ವ ಸ್ಥಿತಿಯಲ್ಲಿ ಸಿದ್ಧಿಗಳು ಕಾಲಾನುಕ್ರಮದಲ್ಲಿ ಋಷಿಮುನಿಗಳ ಬಳಿಗೆ ಬರುವುವು. ಪ್ರಾರಬ್ಧವು ಆ ಮಾರ್ಗದಲ್ಲಿದ್ದರೆ ಜ್ಞಾನಿಯು ಕೂಡಾ ಅಂತಹ ಶಕ್ತಿಗಳನ್ನು ಪ್ರದರ್ಶಿಸಬಹುದು."

ಅನೇಕ ಭಕ್ತರು ಶ್ರೀ ರಮಣರಲ್ಲಿ ಸಿದ್ಧಿಗಳ ಬಗ್ಗೆ ಕೇಳುತ್ತಿದ್ದರು, ಅದಕ್ಕೆ ರಮಣರು ಈ ರೀತಿ ಉತ್ತರಿಸುತ್ತಿದ್ದರು:

ಭಕ್ತ: ಆಧ್ಯಾತ್ಮಿಕ ಪ್ರಗತಿಯಲ್ಲಿ ಸಿದ್ಧಿ ಶಕ್ತಿಗಳಾದ ಶರೀರದ ಅಂತರ್ಧಾನವು ಅಗತ್ಯವೇ?

ಮಹರ್ಷಿ: ಹಾಗಂದರೇನು? ನೀನು ಶರೀರವೇ?

ಭಕ್ತ: ಇಲ್ಲ. ಆದರೆ ಆಧ್ಯಾತ್ಮಿಕ ಪ್ರಗತಿಯಲ್ಲಿ ಶರೀರದಲ್ಲಿ ಬದಲಾವಣೆ ಉಂಟಾಗುತ್ತದೆ ಅಲ್ಲವೇ?

ಮಹರ್ಷಿ: ಯಾವ ರೀತಿಯ ಬದಲಾವಣೆಗಳನ್ನು ನೀನು ನಿರೀಕ್ಷಿಸುವೆ? ಯಾತಕ್ಕಾಗಿ?

ಭಕ್ತ: ಶರೀರವು ಅದೃಶ್ಯವಾಗುವುದು ಪ್ರಗತಿಯ ಚಿಹ್ನೆಯಲ್ಲವೇ?

ಮಹರ್ಷಿ: ಅಂದರೆ, ಆಗ, ಯಾರು ಮಾತನಾಡುವರೋ ಹಾಗೂ ಬರೆಯುವರೋ ಮತ್ತು ಕಾಣಿಸಿಕೊಳ್ಳುವರೊ ಅವರು ಅಜ್ಞಾನಿಗಳು ಎಂದು ನಿನ್ನ ಅಭಿಪ್ರಾಯವೇ?

ಭಕ್ತ: ಹಾಗಲ್ಲ. ಮಹರ್ಷಿಗಳಾದ ವಸಿಷ್ಠ ಹಾಗೂ ವಿಶ್ವಾಮಿತ್ರರಿಗೆ ಆ ಶಕ್ತಿ ಇತ್ತೆಂದು ನನಗನಿಸುತ್ತೆ.

ಮಹರ್ಷಿ: ಅದು ಅವರ ಪ್ರಾರಬ್ಧ. ಪ್ರಾರಬ್ಧದಿಂದಾಗಿ ಅವರು ಬಹುಶಃ ಸಿದ್ಧಿ ಹಾಗೂ

ಜ್ಞಾನವನ್ನು ಪಡೆದಿರಬಹುದು. ಜ್ಞಾನಕ್ಕೆ ಅಡ್ಡಿಯಾಗುವ ಅಂತಹ ಸಿದ್ಧಿಗಾಗಿ ನೀನು ಏಕೆ ಆಸೆಪಡುವೆ? ಜ್ಞಾನಿಯು ತನ್ನ ಶರೀರವು ಒಂದು ಅಡಚಣೆ ಎಂದು ಯೋಚಿಸುವನೆ?

ಸಿದ್ಧಿ ಎಂದರೆ ಸಾಧನೆ ಎಂದರ್ಥ. ಇದನ್ನು ಅತೀಂದ್ರಿಯ ಶಕ್ತಿಗಳೊಂದಿಗೆ ಜೋಡಿಸುವುದು ಸರಿಯಲ್ಲ. ಕಪಾಲ ಮೋಕ್ಷ ಸಿದ್ಧಿಯನ್ನು ಪಡೆದುಕೊಂಡ ನಂತರವೂ ನಾಯನರು ಅದನ್ನು ಪ್ರದರ್ಶಿಸಲು ಹಿಂಜರಿಯುತ್ತಿದ್ದರು. ಆದರೆ ಪ್ರಪಂಚವು ಅಂತಹ ಜನಗಳನ್ನು ಹಾಗೆ ಬಿಡುವುದಿಲ್ಲ.

ಡಿಸೆಂಬರ್ 25ರಂದು ವಿಜಯವಾಡದಲ್ಲಿ ನಡೆದ ರಾಜಕೀಯ ಸಮ್ಮೇಳನದಲ್ಲಿ ನಾಯನರು ಭಾಗವಹಿಸಿದ್ದರು. ಅವರು ಸಮ್ಮೇಳನದಲ್ಲಿ ಪ್ರಸ್ತುತ ಸಾಮಾಜಿಕ ಪಿಡುಗುಗಳ ಬಗ್ಗೆ ಹಾಗೂ ಅವುಗಳನ್ನು ಪರಿಹರಿಸಿಕೊಳ್ಳಲು ಅನುಸರಿಸಬೇಕಾದ ರೀತಿಗಳ ಬಗ್ಗೆ ಮಾತನಾಡಿದರು. ಸಭೆಯಲ್ಲಿನ ಸಂಪ್ರದಾಯವಾದಿಗಳು ಅಸಮಾಧಾನವನ್ನು ವ್ಯಕ್ತಪಡಿಸಿದರು. ಆದರೆ, ಯುವಕರು ಅವರ ಭಾಷಣದಿಂದ ಸ್ಫೂರ್ತಿಗೊಂಡರು. ಚೆರುವು ರಾಮಕೃಷ್ಣಯ್ಯ ಎಂಬ ಯುವಕನು ಅಂಥವರಲ್ಲಿ ಪ್ರಮುಖನು. ಒಂದು ದಿನ ಅವನು ನಾಯನರನ್ನು ತನ್ನ ಮನೆಗೆ ಊಟಕ್ಕೆ ಆಹ್ವಾನಿಸಿದನು. ಅವನ ತಂದೆಯು ಪಕ್ಕಾ ಸಂಪ್ರದಾಯಸ್ಥ. ಅವರು ಪ್ರತಿನಿತ್ಯವೂ ಅಗ್ನಿಕಾರ್ಯವನ್ನು ಮಾಡುತ್ತಿದ್ದರು. ಅವರಿಗೆ ನಾಯನರು ಈ ರೀತಿಯ ಸಾಂಪ್ರದಾಯಿಕ ಕ್ರಿಯೆಗಳನ್ನು ಅನುಸರಿಸುವುದಿಲ್ಲವೆಂಬುದು ಗೊತ್ತಿತ್ತು. ಹಾಗಾಗಿ ಅವರು ಮಗನಿಗೆ ನಾಯನರನ್ನು ತನ್ನ ಅಗ್ನಿಕಾರ್ಯವು ಮುಗಿಯುವವರೆಗೂ ಮನೆಯ ಹಿಂಭಾಗದಲ್ಲಿ ಕುಳಿತುಕೊಳ್ಳಲು ಅನುಕೂಲ ಮಾಡಿಕೊಡಲು ಹೇಳಿದರು. ತನ್ನ ತಂದೆಯ ಈ ರೀತಿಯ ನಡವಳಿಕೆಯಿಂದ ಮಗನಿಗೆ ಮುಜುಗರವಾಯಿತು, ಆದರೆ ನಾಯನರು ಅವನ ತಂದೆಯವರು ಮನೆಯ ಯಜಮಾನರಾದ್ದರಿಂದ ಅವರ ಮಾತನ್ನು ಗೌರವಿಸಬೇಕೆಂದು ತಿಳಿಸಿದರು. ನಾಯನರು ದಿನಪತ್ರಿಕೆಯೊಂದನ್ನು ತೆಗೆದುಕೊಂಡು ಮನೆಯ ಹಿಂಭಾಗಕ್ಕೆ ಹೋಗಿ ಅಲ್ಲಿದ್ದ ಕುರ್ಚಿಯೊಂದರ ಮೇಲೆ ಕುಳಿತು ಪತ್ರಿಕೆಯನ್ನು ಓದತೊಡಗಿದರು.

ಅಗ್ನಿಪೂಜೆಯ ಕಾರ್ಯದಲ್ಲಿ ಸಂಪ್ರದಾಯದಂತೆ ಕರ್ತೃವಿನ ಪತ್ನಿಯು ಅಗ್ನಿಪೂಜೆಯು ಪ್ರಾರಂಭವಾಗುವುದಕ್ಕೆ ಮೊದಲು ಉರಿಯುತ್ತಿರುವ ಅಗ್ನಿಯನ್ನು ತರಬೇಕು. ರಾಮಕೃಷ್ಣನ ತಾಯಿಯು ಹಿತ್ತಲಿಗೆ ಹೋಗಿ ಬೆಂಕಿಯನ್ನು ಹೊತ್ತಿಸಿ ಅದನ್ನು ಬಾಣಲೆಯಲ್ಲಿ ಇಟ್ಟುಕೊಂಡು ಒಳಗೆ ತರುವ ಮೊದಲು ನಾಯನರನ್ನು ನೋಡಿದಳು. ಅವಳಿಗೆ ಆಶ್ಚರ್ಯವಾಗುವಂತೆ ನಾಯನರು ಗಜಮುಖವುಳ್ಳ ಗಣಪತಿಯಂತೆ ಕುರ್ಚಿಯ ಮೇಲೆ ಕುಳಿತಿದ್ದದ್ದು ಕಂಡಿತು. ಅವಳು ಒಳಗೆ ಓಡಿ ಹೋಗಿ ತನ್ನ ಗಂಡನಿಗೆ, "ಸಾಕ್ಷಾತ್ ಗಣಪತಿಯು ಹಿತ್ತಲಿನಲ್ಲಿ ಕುಳಿತಿರುವಾಗ ಅವನನ್ನು ಪೂಜಿಸುವುದನ್ನು ಬಿಟ್ಟು, ನಾವು ಇಲ್ಲಿ ಏನು ಮಾಡುತ್ತಿದ್ದೇವೆ? ಓ ದೇವರೇ ಹೊರಗೆ ಬಂದು ನೋಡಿರಿ!" ಎಂದು ಗಾಬರಿಯಿಂದ ಕೂಗಿ ತನ್ನ ಪತಿಯನ್ನು ಹಿತ್ತಲಿಗೆ ಕರೆದೊಯ್ದು ಗಣಪತಿಯಂತೆ ಕಾಣುತ್ತಿದ್ದ ನಾಯನರನ್ನು ತೋರಿಸಿದಳು.

ರಾಮಕೃಷ್ಣನ ತಂದೆಗೂ ನಾಯನರು ಸಾಕ್ಷಾತ್ ಗಣಪತಿಯಂತೆ ಕಂಡುಬಂದು, ತಮ್ಮ ವರ್ತನೆಗೆ ನಾಚಿ ಪಶ್ಚಾತ್ತಾಪ ಪಟ್ಟು, ಅವರು ನಾಯನರಲ್ಲಿ ಕ್ಷಮೆಕೋರಿ ಅವರನ್ನು ಒಳಗೆ ಕರೆದೊಯ್ದರು. ನಾಯನರು ಸ್ವತಃ ತಾವೇ ಮಂತ್ರಗಳನ್ನು ಹೇಳಿ ಅಗ್ನಿಪೂಜೆಯನ್ನು ಸಾಂಗವಾಗಿ ನಡೆಸಿಕೊಟ್ಟರು.

ಭಗವಾನರನ್ನು ನೋಡಲು ಬರುವ ಭಕ್ತರು ನಂತರ ನಾಯನರನ್ನೂ ಸದಾ ದರ್ಶಿಸುತ್ತಿದ್ದರು. ಒಮ್ಮೆ ಒಬ್ಬ ಭಕ್ತನು ಭಗವಾನರ ಬಳಿಬಂದು ಭಗವಾನರನ್ನು ವೈಷ್ಣವ ಸಂತರಂತೆ ಕಾಣುವ ಉದ್ದೇಶದಿಂದ ಅವರ ಹಣೆಯಮೇಲೆ ನಾಮವನ್ನು ಹಚ್ಚಲು ಅನುಮತಿ ಕೋರಿದನು. ಭಗವಾನರು ಜೋರಾಗಿ ನಕ್ಕು ಅವನನ್ನು ಮಾವಿನ ತೋಪಿನಲ್ಲಿನ ಗುಹೆಯಲ್ಲಿರುವ ನಾಯನರ ಬಳಿ ಹೋಗುವಂತೆ ತಿಳಿಸಿ ಅವರಿಗೆ ಹಚ್ಚಲು ಹೇಳಿದರು. ಹೀಗೆ ಹೇಳುವುದರಲ್ಲಿ ಒಂದು ರಹಸ್ಯ ಅರ್ಥವಿತ್ತು. ಅದೇನೆಂದರೆ, ಗಣಪತಿಯು ಭಗವಾನ್ ವಿಷ್ಣುವಿನ ಅಂಶರೂಪಿಯಾಗಿದ್ದು, ನಾಯನರನ್ನು ವೈಷ್ಣವ ಚಿನ್ಹೆಯಿಂದ ಅಲಂಕರಿಸುವುದು ಸೂಕ್ತ ಎಂದು. ಭಕ್ತನು ಮಾವಿನ ತೋಪಿನಲ್ಲಿನ ಗುಹೆಗೆ ಹೋದಾಗ ನಾಯನರು ಆಳವಾದ ಧ್ಯಾನದಲ್ಲಿ ಮಗ್ನರಾಗಿದ್ದರು. ನಾಯನರ ಧ್ಯಾನಕ್ಕೆ ಅಡ್ಡಿಪಡಿಸದೆ ಭಕ್ತನು ನಿಃಶಬ್ದದಿಂದ ಅವರ ಹಣೆಗೆ ನಾಮವನ್ನು ಹಚ್ಚಿ ತನ್ನ ಆಸೆಯನ್ನು ಪೂರೈಸಿಕೊಂಡನು. ಅನಂತರ ನಾಯನರು ಹಾಗೂ ಭಗವಾನರು ಒಟ್ಟಿಗೆ ಊಟಮಾಡುತ್ತಿದ್ದಾಗ ಭಗವಾನರು ನಗುತ್ತಾ, "ನಾಯನ, ನಿನ್ನ ಹಣೆಯ ಮೇಲಿರುವುದು ಏನು?" ಎಂದು ಕೇಳಿದರು. ಭಕ್ತನೊಬ್ಬನು ಕನ್ನಡಿಯನ್ನು ತಂದು ಅದನ್ನು ನಾಯನರ ಮುಖದ ಮುಂದೆ ಹಿಡಿದನು. ನಾಯನರು ನಗುತ್ತಾ ಭಗವಾನರ ಹಣೆಯ ಮೇಲೆ ರಾರಾಜಿಸುತ್ತಿದ್ದ ವಿಭೂತಿಯನ್ನು ಗಮನಿಸಿ, "ನಿಮ್ಮ ಹಣೆಯ ಮೇಲೆ ಏನಿದೆಯೋ ಅದೇ ನನ್ನ ಹಣೆಯ ಮೇಲೂ ಇದೆ", ಎಂದರು ಹಾಗೂ ಎಲ್ಲರೂ ಅವರು ಮಾಡಿದ ಹಾಸ್ಯವನ್ನು ಸವಿಯುತ್ತಾ ಜೋರಾಗಿ ನಕ್ಕರು.

ಇದೇ ಸಮಯದಲ್ಲಿ, ಮಹಾದೇವನ ಮದುವೆಯಾಗಿ, ವಧುವನ್ನು ಮನೆಗೆ ಕರೆತಂದರು. ನಾಯನರು ನಗರದಲ್ಲಿ ಒಂದು ಬಾಡಿಗೆ ಮನೆಯನ್ನು ಗೊತ್ತು ಮಾಡಿ ಎಲ್ಲರೂ ಅಲ್ಲಿಗೆ ಹೋದರು. ನಾಯನರು ಪ್ರಸಕ್ತ ಸಾಮಾಜಿಕ ಜೀವನದ ಬಗ್ಗೆ ಸಂಸ್ಕೃತದಲ್ಲಿ ಒಂದು ಕೃತಿಯನ್ನು ರಚಿಸಲು ಪ್ರಾರಂಭಿಸಿದರು. ಇದರಲ್ಲಿ ಅವರು ಸ್ತ್ರೀ ಸ್ವಾತಂತ್ರ್ಯ ಹಾಗೂ ಸ್ತ್ರೀಯರ ಸಾಮಾಜಿಕ ಹಾಗೂ ಸಾಂಸಾರಿಕ ಹಕ್ಕುಗಳ ಬಗ್ಗೆ ಅನುಸರಿಸುತ್ತಿರುವ ದ್ವಂದ್ವ ನೀತಿಗಳನ್ನು ಬಯಲಿಗೆಳೆದು ಕೃತಿಯನ್ನು ಚಾರಿತ್ರಾರ್ಹ ಕೃತಿಯನ್ನಾಗಿ ಪ್ರಕಟಿಸಬೇಕೆಂದು ಬರೆಯಲು ಪ್ರಾರಂಭಿಸಿದರು. ಅವರು ತಮ್ಮ ಮನಸ್ಸಿನಲ್ಲಿ ಯೋಜಿಸಿಕೊಂಡಿದ್ದೇನೆಂದರೆ ಈ ಕೃತಿಯನ್ನು ತೆಲುಗು ಹಾಗೂ ಸಂಸ್ಕೃತದಲ್ಲಿ ಬರೆಯಬೇಕೆಂದು. ಕೃತಿಗೆ "ಪೂರ್ಣ" ಎಂದು ಹೆಸರಿಟ್ಟು ಅದರಲ್ಲಿ 200 ಅಧ್ಯಾಯಗಳಿದ್ದು ಅದರಲ್ಲಿ ಬರುವ ದೃಶ್ಯಗಳು ಹಾಗೂ ಘಟನೆಗಳು ಅಂಧ್ರ ದೇಶದ ಸಂಸ್ಥಾಪಕ ಆಂಧ್ರ ಮಹಾವಿಷ್ಣುವಿನ ಕಾಲಘಟ್ಟದ್ದಾಗಿತ್ತು.

ಅದರಲ್ಲಿ ಬರುವ ಪಾತ್ರಧಾರಿಗಳು ಹಾಗೂ ಕಥೆಗಳನ್ನು ಅವರ ಮನದಲ್ಲಿ ವ್ಯವಸ್ಥಿತವಾಗಿ ಯೋಜಿಸಲಾಗಿತ್ತು. ಭಗವಾನರು ಹೇಳುವಂತೆ ಪ್ರತಿಯೊಂದೂ ನಾಯನರ ಮೆದುಳಿನಲ್ಲಿ ಯೋಜಿಸಲಾಗಿತ್ತು. ಪ್ರತಿದಿನ ಸಂಜೆಯ ಹೊತ್ತಿನಲ್ಲಿ ಅವರ ಶಿಷ್ಯರು ಅರುಣಾಚಲ ಮಂದಿರದ ಪ್ರಾಂಗಣದಲ್ಲಿ ನಾಯನರ ಸುತ್ತ ಕುಳಿತಿದ್ದಾಗ ಅವರು ವಿವರಿಸತೊಡಗುವರು ಹಾಗೂ ಅವುಗಳನ್ನು ಅವರುಗಳು ಬರೆದುಕೊಳ್ಳುತ್ತಿದ್ದರು.

1926ರಲ್ಲಿ ನಾಯನರ ಮಗಳು ವಜ್ರೇಶ್ವರಿಯನ್ನು ಹೆರಿಗೆಗೆ ತಾಯಿಯ ಮನೆಗೆ ಕರೆತಂದರು. ಅವಳಿಗೆ ಏಳು ತಿಂಗಳು ತುಂಬಿದಾಗ ಒಂದು ದಿನ ಅವಳಿಗೆ ವಿಪರೀತ ಹೊಟ್ಟೆನೋವು ಹಾಗೂ ಭೇದಿಯು ಆಗತೊಡಗಿತು. ಅವಳಿಗೆ ನೋವನ್ನು ತಡೆದುಕೊಳ್ಳಲು ಅಸಾಧ್ಯವಾಗತೊಡಗಿತು. ಸ್ಥಳೀಯ ವೈದ್ಯರನ್ನು ಕರೆತರಲಾಯಿತು. ಅವರು ಔಷಧಿಯನ್ನು ಕೊಟ್ಟು ಒಂದು ವಿಧದ ಬಾಳೆಹಣ್ಣನ್ನು ಕೊಡುವಂತೆ ಹೇಳಿದರು. ಆ ಸಮಯದಲ್ಲಿ ವೈದ್ಯರು ಹೇಳಿದ ಬಾಳೆಹಣ್ಣು ಎಲ್ಲಿ ಹುಡುಕಿದರೂ ಸಿಗಲಿಲ್ಲ. ನಾಯನರಿಗೆ ಏನೂ ಮಾಡಲು ತೋಚದೇ ತಮ್ಮ ಮಗನೊಂದಿಗೆ ಅರುಣಾಚಲ ಮಂದಿರದಲ್ಲಿ ಕೈಕಟ್ಟಿ ಕುಳಿತುಬಿಟ್ಟರು. ಸ್ವಲ್ಪಹೊತ್ತಿನಲ್ಲಿ ಒಬ್ಬ ಹಣ್ಣಿನ ವ್ಯಾಪಾರಿಯು ಒಂದು ಬುಟ್ಟಿಯಲ್ಲಿ ನಾಯನರಿಗೆ ಬೇಕಿದ್ದ ಬಾಳೆಹಣ್ಣುಗಳನ್ನು ಇಟ್ಟುಕೊಂಡು ಅವರ ಬಳಿ ಬಂದು, “ನೀವು ಗಣಪತಿ ಶಾಸ್ತ್ರಿಗಳೇ? ಈ ಬಾಳೆಹಣ್ಣುಗಳನ್ನು ನಿಮಗೆ ಕೊಡುವಂತೆ ನನಗೆ ತಿಳಿಸಲಾಯಿತು.” ಎಂದು ಹೇಳಿ ಹಣ್ಣಿನ ಬುಟ್ಟಿಯನ್ನು ಅವರಿಗೆ ನೀಡಿ ಮಂದಿರದೊಳಗೆ ಹೊರಟುಹೋದನು. ಕೂಡಲೇ ನಾಯನರು ಮಗನಿಗೆ ಅವನ ಹಿಂದೆ ಹೋಗಿ ಅವನು ಯಾರು ಎಂದು ತಿಳಿದು ಬಾ ಎಂದರು. ಮಹಾದೇವನು ಅವನ ಹಿಂದೆ ಓಡಿದನು. ಆದರೆ ಅವನು ಮಹಾದೇವನಿಗೆ ಸಿಗಲೇ ಇಲ್ಲ. ಆಗ ನಾಯನರು, “ಅವನು ಬೇರೆ ಯಾರೂ ಅಲ್ಲ, ಅವನೇ ಅರುಣಾಚಲ” ಎಂದು ಉದ್ಗರಿಸಿ ಶಂಕರ ಭಗವಾನನಿಗೆ ವಂದಿಸಿದರು.

೧೨

ವಿಶಾಲಾಕ್ಷಿ ಅಮ್ಮನವರ ಮರಣ

ಸ್ವರೂಪೇ ವರ್ತಮಾನಾನಾಂ ಪಕ್ವಾನಾಂ ಯೋಷಿತಾಮಪಿ
ನಿವೃತ್ತತ್ವಾನ್ನಿಷೇಧಸ್ಯ ಹಂಸೀತ್ವಂ ನೈವ ದುಷ್ಯತಿ ॥
– ಶ್ರೀ ರಮಣ ಗೀತ

"ಶಾಸ್ತ್ರದಲ್ಲಿ ಯಾವುದೇ ನಿರ್ಬಂಧವಿಲ್ಲದೇ ಇರುವುದರಿಂದ ವೃದ್ಧೆಯರಾದ ಸ್ತ್ರೀಯರು ತಮ್ಮ ಪಾಲನೆಯನ್ನು ತಾವೇ ಮಾಡಿಕೊಂಡು ತಪಸ್ವಿಗಳಾಗುವುದರಲ್ಲಿ ಯಾವುದೇ ತಪ್ಪಿಲ್ಲ."

ಭಗವಾನರು ವಿರೂಪಾಕ್ಷ ಗುಹೆಯಲ್ಲಿ ವಾಸಮಾಡುತ್ತಿದ್ದ ಕಾಲವದು. ಒಮ್ಮೆ ಶ್ರೀ ವಿದ್ಯಾರಣ್ಯ ಸ್ವಾಮಿಗಳ "ಶಂಕರ ವಿಜಯಮ್" ಕೃತಿಯು ಚರ್ಚೆಯ ವಿಷಯವಾಯಿತು. ಭಗವಾನರು, "ಶ್ರೀ ವಿದ್ಯಾರಣ್ಯರು ಶ್ರೀವಿದ್ಯಾ ಉಪಾಸಕರಾದ್ದರಿಂದ ಅವರು ಶ್ರೀಚಕ್ರದ ಮಾದರಿಯಲ್ಲಿ ಒಂದು ದೇವಾಲಯವನ್ನು ನಿರ್ಮಿಸಬೇಕೆಂದು ಬಯಸಿದರು," ಎಂದರು. ಕೂಡಲೇ, ನಾಯನರು ಶಂಕರರ "ಅರುಣಾಷ್ಟಕಮ್" ಕೃತಿಯಲ್ಲಿ ಅರುಣಾಚಲನನ್ನು "ಶ್ರೀಚಕ್ರಾಕೃತಿ ಶೋನಶೈಲವಮುಶಮ್ ಶ್ರೀ ಷೋಡಶರಾತ್ಮಕಮ್", ಎಂಬ ವಿವರಣೆ ಇದೆ ಹಾಗೂ ಅರುಣಾಚಲ ಪುರಾಣದಲ್ಲಿ ಈ ಬೆಟ್ಟವು ಶ್ರೀಚಕ್ರಾಕೃತಿಯಲ್ಲಿರುವುದೆಂದು ತಿಳಿಸಲಾಗಿದೆ ಎಂದರು. ಹೀಗಾಗಿ ನಮಗೆ ಕೇಳದೇ ಶ್ರೀಚಕ್ರದ ಆಕೃತಿಯಲ್ಲಿನ ಸ್ಥಳವು ದೊರಕಿದೆ ಹಾಗೂ ಈ ಸ್ಥಳದ ಚಕ್ರವರ್ತಿಯು ಭಗವಾನರು ಎಂದರು. ಮುಂದುವರೆದು ಇಲ್ಲಿ ಕೇವಲ ಹತ್ತು ಮನೆಗಳನ್ನು ನಿರ್ಮಿಸಿದರೆ ಸಾಕು ಈ ಜಾಗವು ಮಹಾನ್ ರಾಷ್ಟ್ರವಾಗುವುದು. ವಿದ್ಯಾರಣ್ಯರು ಇದನ್ನೇ ತಮ್ಮ ದೃಷ್ಟಿಯಲ್ಲಿಟ್ಟುಕೊಂಡಿದ್ದಿರಬಹುದು. ಇಲ್ಲಿ ಸೈನ್ಯದ ದಂಡನಾಯಕ ಹಾಗೂ ಖಜಾಂಚಿಗಳಿರುವರು. ಹೀಗೆ ಹೇಳಿದ ನಂತರ ನಾಯನರು ಎಲ್ಲವನ್ನೂ ಕ್ಷಣಾರ್ಧದಲ್ಲಿ ಸೇರಿಸಿದರು. ಆಧ್ಯಾತ್ಮಿಕ ವಿಷಯದಲ್ಲಿ ಶ್ರೀಚಕ್ರಕ್ಕೆ ತನ್ನದೇ ಆದ ವಿಶೇಷ ಸ್ಥಾನವಿರುವುದೆಂದು ಸರ್ವವಿದಿತ.

ವಿಶಾಲಾಕ್ಷಿ ಅಮ್ಮನು ಮಹಾನ್ ತಪಸ್ವಿ ಹಾಗೂ ಶ್ರೀಚಕ್ರವನ್ನು ಸತತವಾಗಿ ಪೂಜಿಸುತ್ತಿದ್ದರು. ವಿಶಾಲಾಕ್ಷಿ ಹಾಗೂ ಗಣಪತಿ ಮುನಿಗಳು ವಸಿಷ್ಠ – ಅರುಂಧತಿಯರಂತೆ ಪವಿತ್ರ ದಂಪತಿಗಳು. ಹಾಗೆ ಮಹಾನ್ ಕವಿದಂಪತಿಗಳಾದ ಜಯದೇವ ಮತ್ತು ಅವನ ಪತ್ನಿಯರಂತೆ. ಯಾವಾಗ

ದಂಪತಿಗಳು ಪರಸ್ಪರ ಸಮರ್ಪಣಾಭಾವದಿಂದಿರುತ್ತಾರೋ ಆಗ ಗೃಹಸ್ಥಾಶ್ರಮವು ಅತ್ಯುತ್ತಮ ಆಶ್ರಮವಾಗುವುದು. ಮಹಾನ್ ತಪಸ್ವಿಯಾದ ನಾಯನರೂ ಕೂಡ ಒಮ್ಮೆ ವಿಶಾಲಾಕ್ಷಿಯು ತಮ್ಮ ಮಕ್ಕಳ ಅಗತ್ಯತೆಗಳನ್ನು ಪೂರೈಸಲು ಕೆಲವು ದಿನ ಹೋಗಬೇಕಾದಾಗ, ಹತಾಶರಾದ ನಾಯನರು, "ನೀನಿಲ್ಲದೇ ನನ್ನ ತಪಸ್ಸು ಕಾಡಿನಲ್ಲಿನ ಕೂಗಾಗುವುದು." ಎಂದರು. ಸಮರ್ಪಣಾಭಾವವಿರುವ ದಂಪತಿಗಳ ನಡುವಿನ ಪ್ರೀತಿಯು ದೈವೀ ಪ್ರೀತಿ. ಋಷಿಮುನಿಗಳ ಆಶ್ರಮದಲ್ಲಿನ ವಾತಾವರಣವು ಆ ಪ್ರೀತಿಯನ್ನು ನಮಗೆ ನೆನಪಿಗೆ ತರುತ್ತದೆ.

1922ರಲ್ಲಿ ಭಗವಾನರು ಸ್ಕಂದಾಶ್ರಮದಿಂದ ಕೆಳಗಿಳಿದು ಬಂದು ತಮ್ಮ ತಾಯಿಯವರ ಸಮಾಧಿಯ ಬಳಿ ವಾಸಿಸತೊಡಗಿದರು. ಇದರಿಂದಾಗಿ ಭಕ್ತರ ಅನುಕೂಲಕ್ಕೆ ಒಂದು ಗುಡಿಸಲನ್ನು ಕಟ್ಟಲಾಯಿತು. ಕ್ರಮೇಣ ಆ ಸ್ಥಳವು ಈಗಿನ ರಮಣಾಶ್ರಮವಾಯಿತು. ವಿಶಾಲಾಕ್ಷಿ ಅಮ್ಮನವರು ಭಗವಾನರನ್ನು ಈ ಆಶ್ರಮದಲ್ಲಿ ಶ್ರೀಚಕ್ರಕ್ಕೆ ಒಂದು ಮಂದಿರವನ್ನು ಕಟ್ಟಿಕೊಡುವಂತೆ ಪ್ರಾರ್ಥಿಸಿದರು. ಭಗವಾನರು ಅವರ ಮಾತಿಗೆ ವಿಶೇಷವಾದ ಬೆಲೆಯನ್ನು ಕೊಟ್ಟು ಅತ್ಯಂತ ಮುತುವರ್ಜಿ ವಹಿಸಿ ತಮ್ಮ ತಾಯಿಯ ಸಮಾಧಿಯ ಮೇಲೆ ಶ್ರೀಚಕ್ರವನ್ನು ಸ್ಥಾಪಿಸಿದರು. ಬಹುಶಃ ಇದೇ ನಾಯನರು ವಿವರಿಸಿರುವ ಶ್ರೀಚಕ್ರಪುರಂ ಇರಬೇಕು.

ಸಾಮಾನ್ಯವಾಗಿ ಪ್ರತಿಯೊಬ್ಬ ಸ್ತ್ರೀಯರೂ ಬಾಹ್ಯಪ್ರಪಂಚದ ಅಭ್ಯುದಯವನ್ನು ಅಂದರೆ, ಮನೆ, ಒಳ್ಳೆಯ ಪತಿ, ಮಕ್ಕಳು, ಧನ ಇತ್ಯಾದಿಗಳನ್ನು ಆಶಿಸುತ್ತಾಳೆ. ಆವಳು ಕಾಡು ಮೇಡು ಹಾಗೂ ಗುಹೆ ಗಹ್ವರಗಳಲ್ಲಿ ವಾಸಿಸಲು ಇಚ್ಛಿಸುವುದಿಲ್ಲ. ಆದರೆ, ಇದಕ್ಕೆ ತದ್ವಿರುದ್ಧವಾಗಿ ವಿಶಾಲಾಕ್ಷಿ ಅಮ್ಮನವರು ಸದಾ ತನ್ನ ಪತಿಯೊಂದಿಗೆ ಗುಹೆಯಲ್ಲಿರಲು ಬಯಸುತ್ತಿದ್ದರು. ನಾಯನರೊಂದಿಗೆ ತಾವೂ ತಪಸ್ಸನ್ನು ಆಚರಿಸುತ್ತಿದ್ದರು.

ಅವರು ಅರುಣಾಚಲಕ್ಕೆ ಬರುತ್ತಿದ್ದಂತೆ, ಭಗವಾನರು, "ಅಮ್ಮ ಬಂದರು" ಎಂದು ಉದ್ಗರಿಸಿದರು. ಅಂದಿನಿಂದ ಅವರು ಎಲ್ಲರಿಗೂ ಅಮ್ಮ ಆದರು. ನಾಯನರ ಭಕ್ತರು ಅವರಿಗೆ ಮಕ್ಕಳಿಗೆ ಸಮಾನ. ಎಲ್ಲರಿಗೂ ಅವರೇ ಅಡಿಗೆಯನ್ನು ಮಾಡುತ್ತಿದ್ದರು. ವಿನಾಯಕ ಚೌತಿಯ ದಿನದಂದು ಅವರು ಎಲ್ಲರಿಗೂ ಮೋದಕವನ್ನು ತಯಾರು ಮಾಡಿದರು. ಸಾಮಾನ್ಯವಾಗಿ ಒಂದು ದೊಡ್ಡ ಮೋದಕವನ್ನು ತಯಾರು ಮಾಡಿ ಬಟ್ಟೆ ಒಗೆಯುವವನಿಗೆ ಕೊಡುವುದು ವಾಡಿಕೆ. ಅದರ ಹಿಂದಿನ ಅರ್ಥವೆಂದರೆ ಯಾರು ಇದನ್ನು ತಿನ್ನುವರೋ ಅವರಿಗೆ ಓದು, ಬರಹ ಹತ್ತುವುದಿಲ್ಲ ಎಂಬುದು. ವಿಶಾಲಾಕ್ಷಮ್ಮನವರು ಆ ದೊಡ್ಡ ಮೋದಕವನ್ನು ನಾಯನರಿಗೆ ಬಡಿಸಿದರು. ಭಕ್ತನೊಬ್ಬನು ಇದಕ್ಕೆ ಆಕ್ಷೇಪಿಸಿದನು. ಅದಕ್ಕೆ ಅಮ್ಮನೂ, "ಇರಲಿ ಬಿಡಿ, ಅವರು ಅದನ್ನು ತಿನ್ನಲಿ. ನಮ್ಮಲ್ಲಿ ಈಗಾಗಲೇ ಸಾಕಷ್ಟು ವಿದ್ಯೆಯು ಇಲ್ಲಿ ಹರಡಿದೆ!" ಎಂದರು. ನೆರೆದಿದ್ದವರೆಲ್ಲಾ ಅವರ ಹಾಸ್ಯಕ್ಕೆ ಜೋರಾಗಿ ನಕ್ಕರು.

...ರಿಗೆ ಮಹಿಳೆಯರು ಕೂಪಮಂಡೂಕದಂತಾಗಬಾರದೆಂದು ಅಭಿಪ್ರಾಯ. ಅವರಿಗೂ ...ಸುವ ಹಕ್ಕಿರಬೇಕೆಂದು ವಾದಿಸುತ್ತಿದ್ದರು. ಮಹಿಳೆಯರು ಹಂಸಿನಿಯಂತೆ ...ಬೇಕೆಂದು ಹೇಳುತ್ತಿದ್ದರು. ಅವರು ನಾಯನರು ಭಗವಾನರಲ್ಲಿ ಮಹಿಳೆಯರ ಬಗ್ಗೆ ...ಡು ಪ್ರಶ್ನೆಗಳನ್ನು ಕೇಳುವಂತೆ ಪ್ರೇರೇಪಿಸಿದರು:

1. ಮಹಿಳೆಯರು ಸ್ವಾಧ್ಯಾಯಿಗಳಾಗಿ ಹಾಗೂ ಮನೆಯನ್ನು ತೊರೆದು ಹಂಸಿನಿಗಳಾಗಿ (ತಪಸ್ವಿನಿಯರಾಗಿ) ಜೀವನ ನಡೆಸಬಹುದೇ? ಇದಕ್ಕೆ ಧಾರ್ಮಿಕ ಒಪ್ಪಿಗೆ ಇದೆಯೇ?
2. ಆತ್ಮಜ್ಞಾನಿಯಾದ ಮಹಿಳೆಯು ತನ್ನ ಶರೀರವನ್ನು ತ್ಯಜಿಸಿದಾಗ, ಆ ಶರೀರವನ್ನು ಹೂಳಬೇಕೇ ಅಥವಾ ದಹಿಸಬೇಕೆ?

ಭಗವಾನರು ಈ ಎರಡೂ ಸ್ಪಷ್ಟವಾದ ಪ್ರಶ್ನೆಗಳಿಗೆ ಈ ರೀತಿ ಉತ್ತರಿಸಿದರು:

1. ಆತ್ಮಜ್ಞಾನಿಗಳಾದ ಮಹಿಳೆಯರು ಹಂಸಿನಿಗಳಾಗಿ ಇರಬಹುದು. ಇದಕ್ಕೆ ಧಾರ್ಮಿಕ ಒಪ್ಪಿಗೆ ಇದೆ.
2. ಜ್ಞಾನ ಹಾಗೂ ಮುಕ್ತಿಯು ಗಂಡಸು ಹಾಗೂ ಹೆಂಗಸಿಗೂ ಒಂದೇ. ಹಾಗಾಗಿ, ಮೋಕ್ಷ ಹೊಂದಿದ ವ್ಯಕ್ತಿಯ ಶರೀರವನ್ನು ಸುಡಬಾರದು. ಅವಳ ಶರೀರವು ದೇವಾಲಯ. ಇದೇ ರೀತಿಯಾಗಿ ಮುತ್ತೈದೆಯಾದ ಹೆಂಗಸಿಗೂ ಅನ್ವಯಿಸುವುದು.

ನಾಯನರು ಕಪಾಲ ಮೋಕ್ಷ ಸಿದ್ಧಿಯನ್ನು ಪಡೆಯುವ ಹೊತ್ತಿಗೆ ಅಮ್ಮನೂ ಕುಂಡಲಿನಿ ವಿದ್ಯೆಯಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದರು. ನಾಯನರು ಇದನ್ನು ತಮ್ಮ ಮಗನಿಗೆ ಪತ್ರಮುಖೇನ ಹೀಗೆ ವಿವರಿಸಿದ್ದರು:

"ವಿಶಾಲಾಕ್ಷಿಯು ತನ್ನ ಹೆಸರೇ ಸೂಚಿಸುವಂತೆ ಈಗ ಯೋಗೇಶ್ವರಿ ಆಗಿದ್ದಾಳೆ. ಅವಳು ಪ್ರಚಂಡ ಚಂಡೀ ಏಕಾಕ್ಷರ ಜಪವನ್ನು 12000 ಬಾರಿ ಹಾಗೂ ತೀವ್ರವಾದ ಧ್ಯಾನವನ್ನು ಪ್ರತಿನಿತ್ಯವೂ ಮಾಡುತ್ತಿರುವಳು. ಧ್ಯಾನವು ಪ್ರಯತ್ನದಿಂದ ಬಂದಿದ್ದಲ್ಲ, ಇದು ದೇವಿಯ ಕರುಣೆಯಿಂದ ಬಂದಿದ್ದು. ಅರ್ಧ ಮುಚ್ಚಿದ ಕಣ್ಗಳಲ್ಲಿ ಅವಳು ಎಷ್ಟು ಹೊತ್ತು ಬೇಕಾದರೂ ಇರಬಲ್ಲಳು. ಆ ಸ್ಥಿತಿಯು ನೆನ್ನೆಯಿಂದ (14–1–1922) ಪ್ರಾರಂಭವಾಗಿದೆ. ಆ ಸಂದರ್ಭದಲ್ಲಿ ಅವಳ ದೇಹದಲ್ಲಿ ವಿದ್ಯುತ್ ಸಂಚಾರವಾಗುವುದೆಂದು ಹೇಳುವಳು. ಅವಳ ಮುಖದಲ್ಲಿ ಮಹತ್ತರವಾದ ದೈವೀ ಪ್ರಭೆಯು ಕಂಡುಬರುವುದೆಂದು ಪ್ರತಿಯೊಬ್ಬರೂ ತಿಳಿಸುವರು. ನೀನು ನಿನ್ನ ತಾಯಿಗೆ ಪತ್ರವನ್ನು ಬರೆಯುವುದರ ಮೂಲಕ ಸೇವೆಯನ್ನು ಮಾಡು. ಅವಳು ಯೋಗದಲ್ಲಿ ಹೊಸ ಸ್ಥಿರತೆಯನ್ನು ತಲುಪಿದ್ದಾಳೆ."

1926ರ ನಂತರ ಅಮ್ಮನ ದೇಹಸ್ಥಿತಿಯು ಕ್ಷೀಣಿಸತೊಡಗಿತು. ರಕ್ತಹೀನತೆ ಹಾಗೂ ಅಜೀರ್ಣದಿಂದಾಗಿ ಅವರ ದೇಹವು ಕೃಶವಾಗತೊಡಗಿತು. ಆದರೆ ಅವರ ತಪಸ್ಸು ಎಂದಿನಂತೆ ಬಲವಾಗಿ ಮುಂದುವರೆಯುತ್ತಿತ್ತು. ಅವಳಲ್ಲಿನ ದೈವೀ ಪ್ರಭೆಯು ಎಲ್ಲರನ್ನೂ ಆಕರ್ಷಿಸುತ್ತಿತ್ತು.

ಅವರ ಪತಿ ಹಾಗೂ ಭಗವಾನರ ಸಹಾಯದಿಂದ ಅವರು ತಮ್ಮಲ್ಲೇ ಸ್ಥಿರತೆಯನ್ನು ಹೊಂದಿ ದಿನಾಂಕ 26.7.1926ರಂದು ಅರುಣಾಚಲದಲ್ಲಿ ಜೀವನ್ಮುಕ್ತರಾದರು. ಭಾರತೀಯ ಕಾಲಮಾನದ ಪ್ರಕಾರ ಆ ದಿನ ಆಷಾಢ ಕೃಷ್ಣಪಕ್ಷ, ಸೋಮವಾರವಾಗಿತ್ತು.

ನಾಯನರು ಅವಳನ್ನು, "ಆತ್ರೇಯ ವಂಶದ ಚಂದ್ರಪ್ರಭೆ, ವಾಸಿಷ್ಠರ ಸೊಸೆ, ಮಹಾದೇವನ ಮಾತೆ, ಬ್ರಹ್ಮವೇತ್ತಳು (ಜ್ಞಾನಿಯ ಆತ್ಮ), ಪ್ರಪಂಚದ ಸೇವೆಯನ್ನೇ ಪ್ರೀತಿಸುವವಳು, ಪಂಚಾದಶಿ ವಿದ್ಯೆಯಲ್ಲಿ ಪ್ರವೀಣಳು, ವಿಂಧ್ಯ ಪರ್ವತದ ದಕ್ಷಿಣ ದೇಶದಲ್ಲಿನ ಮೊದಲನೇ ತಾರಿಣೀ ವಿದ್ಯೆಯ ಗುರು ಹಾಗೂ ತಪಸ್ಸಿನಲಿ ಸ್ನೇಹಿತೆ, ವಿಶಾಲಾಕ್ಷಿಯು ವಿಶಾಲಾಕ್ಷಿ ಮಾತೆಯಾದಳು", ಎಂಬುದಾಗಿ ಉದ್ಗರಿಸಿದರು.

೧೩

ಶ್ರೀ ರಮಣ ಮಹರ್ಷಿಗಳ ಬೋಧನೆಗಳ ಪ್ರಸಾರ

ನವಕುಂಕುಮರೇಣುಪಂಕಿಲಸ್ಯ ಸ್ಮರಣಾತ್ತೇ ಸತತಂ ಸ್ತನಾಚಲಸ್ಯ
ಸ್ವಯಮಪ್ಯಚಲೋ ಬಭೂವ ಶೋಣಃ ಶಶಿಧಾರೀ ಜಗತಾಂ ಸವಿತ್ರಿ ಶಂಕೇ ॥

– ಉಮಾಶತಕಮ್ (49)

"ಓ ಸಾವಿತ್ರಿ ಮಾತೆಯೇ! ನಿನ್ನ ಕುಂಕುಮವನ್ನು ಹಚ್ಚಿರುವ ಸ್ತನಗಳ ತುದಿಗಳ ಬಗ್ಗೆ ಯೋಚಿಸುತ್ತಾ ಶಿವನು ಕೆಂಪು ಬೆಟ್ಟವಾದನು (ಅರುಣಾಚಲ)."

ಈ ಸ್ತೋತ್ರವನ್ನು ಆಲಿಸಿದ ಸಭಿಕರೆಲ್ಲರೂ ಹೃದಯಪೂರ್ವಕ ನಕ್ಕರು. ರಮಣ ಮಹರ್ಷಿಗಳೂ ಸಹ ನಕ್ಕು ಹೀಗೆ ಹೇಳಿದರು, "ಅರುಣಾಚಲವೂ ಕೂಡಾ ನಾಯನರ ಕವಿತೆಯನ್ನು ಕೇಳಿ ಕೆಂಪಾಗಲೇಬೇಕು."

ನಾಯನರು ಇದಕ್ಕೆ ನಗುತ್ತಾ, "ಯೋಚಿಸದಿರಿ, ನಾನು ಶಿವನ ನಿರ್ಗುಣತ್ವಕ್ಕೆ ಕಳಂಕವನ್ನುಂಟು ಮಾಡುವುದಿಲ್ಲ" ಎಂದರು. ಮತ್ತೆ ನಾಯನರು ಇನ್ನಷ್ಟು ಶ್ಲೋಕಗಳನ್ನು ರಚಿಸಿದರು:

ಕಮಲಾಸನಕಂಜಲೋಚನಾದೀನವಮತ್ಯ ತ್ರಿದಶಾನ್ನಗೇಶಕನ್ಯೇ
ಅಗುಣೇ ರಮಸೇ ನಗೇತ್ರ ಶೋಣೇ ಕ್ವ ಗುಣಾನ್ ಪಶ್ಯತಿ ಜಾತಿಪಕ್ಷಪಾತಃ ॥

– ಉಮಾಶತಕಮ್ (46)

"ಓ ಪರ್ವತರಾಜನ ಪುತ್ರಿಯೇ! ಬ್ರಹ್ಮ, ವಿಷ್ಣು ಹಾಗೂ ಇತರೆ ದೇವತೆಗಳನ್ನು ತಿರಸ್ಕರಿಸಿ, ನೀನು ನಿರಾಕಾರನಾದ ಅರುಣಾಚಲ ಪರ್ವತವನ್ನು ನಿನ್ನ ಪತಿಯನ್ನಾಗಿ ಸ್ವೀಕರಿಸಿದೆ. ತಮ್ಮದೇ ಆದ ವಂಶದೆಡೆಗೆ ಪಕ್ಷಪಾತವಿದ್ದಾಗ ಗುಣಗಳ ಬಗ್ಗೆ ಯಾರು ಗಮನಿಸುತ್ತಾರೆ?"

ಕುಸುಮಾದಪಿ ಕೋಮಲಂ ವಪುಸ್ತೇ ಹೃದಯೇಶಸ್ತ್ವರುಣೋಗಿರಿಃ ಕಠೋರಃ
ಪ್ರಚಲಾಖುತುರಂಗಮಸ್ಯ ಮಾತಃ ಸಮನುಧ್ಯಾಯ ಬಿಭೇಮಿ ಚೇತಸೇದಮ್ ॥

– ಉಮಾ ಶತಕಮ್ (47)

"ಓ ಮಾತೇ! ನಿನ್ನ ಶರೀರವು ಪುಷ್ಪಕ್ಕಿಂತ ಮೃದುವಾದದ್ದು. ನಿನ್ನ ಪತಿಯ ಶರೀರವು ಬೆಟ್ಟವಾದದ್ದರಿಂದ ಅದು ಅತ್ಯಂತ ಗಟ್ಟಿಯಾದದ್ದು. ನಿನ್ನ ಮಗನ ವಾಹನವು ಇಲಿ, ಅದು ವಿಪರೀತ ಮುಕ್ಕಲು. ಅಂತಹ ಮಗನ ಮಾತೆಯೇ! ನಿನ್ನ ಈ ಎಲ್ಲ ಕಷ್ಟಗಳನ್ನು ಕಂಡು ನಾನು ಹೆದರಿದ್ದೇನೆ."

ನಾಯನರು ಭಗವಾನರ ಭಕ್ತರ ಮನಸ್ಸನ್ನು ಪ್ರತಿನಿತ್ಯವೂ ಈ ರೀತಿಯ ಶ್ಲೋಕಗಳನ್ನು ರಚಿಸುವುದರ ಮೂಲಕ ಮುದಗೊಳಿಸುತ್ತಿದ್ದರು. ಇಂತಹ ಸುಂದರ ವಾತಾವರಣದಲ್ಲಿ ಭಕ್ತರು ಅಳಗಮ್ಮ ಹಾಗೂ ವಿಶಾಲಾಕ್ಷಮ್ಮನವರ ಅಗಲುವಿಕೆಯನ್ನು ಬಹುವಾಗಿ ಅನುಭವಿಸುತ್ತಿದ್ದರು. ತನ್ನ ಪತ್ನಿಯ ಕಾಲಾನಂತರ ನಾಯನರು ಭಗವಾನರ ತತ್ವಗಳ ಪ್ರಚಾರದ ಕಾರ್ಯವನ್ನು ಮತ್ತಷ್ಟು ಆಸಕ್ತಿಯಿಂದ ಮಾಡತೊಡಗಿದರು. ಕೆಲವು ಕಾಲ ನಾಯನರು ಕರ್ನಾಟಕದಲ್ಲಿದ್ದದ್ದರಿಂದ ಕರ್ನಾಟಕದ ಅನೇಕ ಜನಗಳು ಶ್ರೀ ರಮಣ ಮಹರ್ಷಿಗಳ ಭಕ್ತರಾದರು. ತಮಿಳು ನಾಡಿನಲ್ಲೂ ಅನೇಕ ಸ್ಥಳಗಳಲ್ಲಿ ನಾಯನರು ಮಹರ್ಷಿಗಳ ಬಗ್ಗೆ ಪ್ರವಚನಗಳನ್ನು ಮಾಡಿದರು.

ಇದೇ ಸಂದರ್ಭದಲ್ಲಿ ನಾಯನರು "ವಿಶ್ವ ಮೀಮಾಂಸ" ಕೃತಿಯ ರಚನೆಯಲ್ಲಿ ತೊಡಗಿದರು.

ರಮಣಸ್ಯ ಗುರೋಃ ಪ್ರಾಪ್ಯ ಕಟಾಕ್ಷಂ ಜ್ಯೋತಿರದ್ಭುತಂ
ಕುರ್ಮೋ ವಿಶ್ವಸ್ಯ ಮಿಮಾಂಸಾಂ ಯಥಾಬುದ್ಧ್ವಂ ಯಥಾ ಶ್ರುತಂ ॥
– ಉಮಾ ಶತಕಮ್

"ಗುರು ರಮಣ ಮಹರ್ಷಿಗಳ ಕರುಣಾಪೂರಿತ ಸುಂದರವಾದ ಬೆಳಕನ್ನು ಪಡೆದು ಹಾಗೂ ನಮ್ಮ ಜ್ಞಾನದಿಂದ ಮತ್ತು ಹಿರಿಯರಿಂದ ಆಲಿಸಿದ, ವಿಶ್ವದ ವಿಶ್ಲೇಷಣೆಗಳ ಅಧ್ಯಯನದಿಂದ ಈ ಕೃತಿಯನ್ನು ಬರೆಯುವೆ."

ಆದಿ ಶಂಕರರು, ಮನುಷ್ಯನನ್ನು ತಮ್ಮ ವಿಶ್ಲೇಷಣೆಯ ಕೇಂದ್ರವಾಗಿರಿಸಿಕೊಂಡು "ಶಾರೀರಿಕ ಮೀಮಾಂಸ"ದ ಮೂಲಕ ಆತ್ಮಬೋಧವನ್ನು ಕಲಿಸಿದರು. ನಾಯನರು ವಿಶ್ವವನ್ನೇ ವಿಶ್ಲೇಷಣಾ ಕೇಂದ್ರವಾಗಿರಿಸಿಕೊಂಡರು. ಇದು ವೇದ ಮಂತ್ರವನ್ನು ಆಧಾರವಾಗಿರಿಸಿಕೊಂಡು, "ವಿಶ್ವಮೇವೇದಂ ಪುರುಷಃ." ಎಂಬುದಾಗಿ ಹೇಳಬಹುದು. ಶ್ರೀ ರಮಣ ಮಹರ್ಷಿಗಳ ತತ್ತ್ವವನ್ನು ವಿವರಿಸಿರುವ ಈ ಕೃತಿಯಲ್ಲಿ ಸತ್ ದರ್ಶನ ಹಾಗೂ ರಮಣ ಗೀತಗಳಿಂದ ಕೆಲವು ಉತ್ತಮ ಕಲ್ಪನೆಗಳನ್ನು ಆಯ್ದುಕೊಳ್ಳಲಾಗಿದೆ. ಇದು ಒಂದು ಸ್ವತಂತ್ರವಾದ ಯೋಜನೆ. ಮೊದಲಿಗೆ ಈ ಕೃತಿಯಲ್ಲಿ 37 ಶ್ಲೋಕಗಳನ್ನು ರಚಿಸಿ, ಅನಂತರ 394 ಸ್ತೋತ್ರಗಳವರೆಗೂ ವಿಸ್ತರಿಸಲಾಯಿತು. ತತ್ತ್ವಶಾಸ್ತ್ರದ ಅಧ್ಯಯನಕಾರರು ಖಂಡಿತವಾಗಿಯೂ ಇದನ್ನು ನೋಡಿರಬೇಕು.

ನಾಯನರು ಈ ರೀತಿಯಾಗಿ ಬರವಣಿಗೆಯಲ್ಲಿ ಮುಳುಗಿದ್ದಾಗ, ಒಂದು ದಿನ ಅವರಿಗೆ ಸಿಕಂದರಬಾದಿನ ಶ್ರೀ ಕೃಷ್ಣದೇವರಾಯ ಆಂಧ್ರ ಭಾಷಾ ನಿಲಯದ ಬೆಳ್ಳಿ ಮಹೋತ್ಸವದಲ್ಲಿ ಭಾಷಣ ಮಾಡಲು ಆಹ್ವಾನ ಬಂದಿತು. ಈ ಉತ್ಸವವು 1927, ಫೆಬ್ರವರಿ ತಿಂಗಳಿನ 16, 17 ಹಾಗೂ 18ರಂದು ನಡೆಯುವುದಿತ್ತು. ಉತ್ಸವ ಸಮಿತಿಯವರು ನಾಯನರನ್ನು ಒಂದು ತಿಂಗಳ ಮುಂಚೆಯೇ ಬರಬೇಕೆಂದು ಕೋರಿಕೊಂಡರು. ನಾಯನರು ಈ ಆಹ್ವಾನವನ್ನು ಸ್ವೀಕರಿಸಿ ಒಂದು ತಿಂಗಳ ಮೊದಲೇ ಹೋಗಲು ತಯಾರು ಮಾಡಿಕೊಳ್ಳತೊಡಗಿದರು. ಆದರೆ ಅವರು ಪೊಂಗಲ್ ಹಬ್ಬಕ್ಕೆ ಮುಂಚೆಯೇ ಮೂತ್ರಕೋಶದ ಬಳಲಿಕೆಯಿಂದ ಹಾಸಿಗೆ ಹಿಡಿದರು.

ಈ ಸಮಯದಲ್ಲಿ ಒಬ್ಬ ಸಾಧುವು ನಾಯನರ ಮನೆಗೆ ಬಂದು ಮನೆಯ ಬಳಿ ಉಳಿತಿದ್ದ ಅವರ ಅಳಿಯನನ್ನು ನಾಯನರು ಎಲ್ಲಿ ಎಂದು ಕೇಳಿ, ತಾನು ಕನ್ಯಾಕುಮಾರಿಯಿಂದ ನಾಯನರನ್ನು ಕಾಣಲು ಬಂದಿರುವುದಾಗಿ ತಿಳಿಸಿದನು. ನಾಯನರ ಅಳಿಯನು ಸಾಧುವನ್ನು ಇರುವಂತೆ ತಿಳಿಸಿ ನಾಯನರಿಗೆ ವಿಷಯ ತಿಳಿಸಲು ಮನೆಯ ಒಳಗೆ ಹೋದನು. ನಾಯನರು ಹೊರಬಂದು ನೋಡುದಾಗ ಅಲ್ಲಿ ಸಾಧುವು ಇರಲಿಲ್ಲ. ಸುತ್ತ ಮುತ್ತ ಹುಡುಕಿದರೂ ಉಪಯೋಗವಾಗಲಿಲ್ಲ. "ಆ ಸಾಧುವು ಅರುಣಾಚಲನೆ ಇರಬೇಕು ಹಾಗೂ ನನ್ನ ರೋಗವನ್ನು ಗುಣಪಡಿಸಲು ಬಂದಿರಬಹುದು" ಎಂದು ನಾಯನರು ಆಲೋಚಿಸಿದರು. ಸ್ವಲ್ಪ ದಿನದಲ್ಲೇ ಅವರು ಗುಣಮುಖರಾದರು ಹಾಗೂ ಪೊಂಗಲ್ ಹಬ್ಬದ ನಂತರ ಸಿಕಂದರಾಬಾದಿಗೆ ತೆರಳಿದರು.

ಸಿಕಂದರಾಬಾದಿನಲ್ಲಿ ನಾಯನರ ಬರುವಿಕೆಯ ಸುದ್ದಿಯು ತಿಳಿಯುತ್ತಿದ್ದಂತೆ ಅನೇಕ ಮಂದಿ ಹಿರಿಯರು ಅವರನ್ನು ಕಾಣಲು ಬಂದರು. ಕೆಲವರಿಗೆ ನಾಯನರು ಮಂತ್ರದೀಕ್ಷೆಯನ್ನು ನೀಡಿದರು. ಊರಲ್ಲೆಲ್ಲಾ ಅನೇಕ ಕಡೆಗಳಲ್ಲಿ ನಾಯನರ ಭಾಷಣವನ್ನು ಏರ್ಪಡಿಸಲಾಯಿತು.

"ಮಹಾತ್ಮರು ಆಗಾಗ್ಗೆ ಭೂಮಿಯ ಮೇಲೆ ಅವತರಿಸುತ್ತಾರೆ. ಪ್ರತಿ ದಶಕದಲ್ಲೂ ನಾವು ಮಹಾತ್ಮರನ್ನು ಕಾಣುವೆವು. ಆದರೆ ಮಹರ್ಷಿಯೊಬ್ಬನು ಅವತರಿಸುವುದು ಅತ್ಯಂತ ಅಪರೂಪದ ಸಂಗತಿ. ಶ್ರೀ ರಮಣ ಮಹರ್ಷಿಗಳು ನಮ್ಮೊಂದಿಗಿರುವುದು ನಮ್ಮ ಸೌಭಾಗ್ಯ. ಹೋಗಿ ಅವರ ದರ್ಶನವನ್ನು ಪಡೆಯಿರಿ. ಅವರ ದರ್ಶನವು ನಿಮ್ಮನ್ನು ಉದ್ಧರಿಸುತ್ತದೆ." ಹೀಗೆ ನಾಯನರು ಅನೇಕರಿಗೆ ಹೇಳುತ್ತಿದ್ದರು.

ಫೆಬ್ರವರಿ 16ರಿಂದ 18ರ ವರೆಗೂ ಬೆಳ್ಳಿ ಮಹೋತ್ಸವವು ವಿಜೃಂಭಣೆಯಿಂದ ಜರುಗಿತು. ಸಾವಿರಾರು ಪ್ರೇಕ್ಷಕರಿಗೆ ನಾಯನರ ಭಾಷಣವನ್ನು ಕೇಳುವ ಸುಯೋಗ ಒದಗಿತು. ಅವರು ನೆರೆದಿದ್ದವರಿಗೆ ಹೀಗೆ ಹೇಳಿದರು, "ಹಠ, ರಾಜ ಮತ್ತು ಭಕ್ತಿಯೋಗಗಳಂತೆ, ಯೋಗವೂ ಒಂದು ರೀತಿಯ ಅಧ್ಯಯನ. ಇದನ್ನು ಸ್ವಾಧ್ಯಾಯ ಯೋಗವೆನ್ನುವರು.

ಹೇಗೆ ಯೋಗವಿಲ್ಲದ ಕರ್ಮವು ಫಲವನ್ನು ಕೊಡುವುದಿಲ್ಲವೋ, ಅದೇ ರೀತಿ ಯಾವುದೇ ಅಧ್ಯಯನವೂ ಯೋಗವಿಲ್ಲದೆ ಫಲವನ್ನು ನೀಡುವುದಿಲ್ಲ. ಅದು ಸಾಧಕನಿಗೆ ಸರಿಯಾದ ದೃಷ್ಟಿಕೋನವನ್ನು ನೀಡುವುದಿಲ್ಲ. ಫಲಾಪೇಕ್ಷೆಯಿಲ್ಲದೆ ಮಾಡುವ ಕರ್ಮವು ಮತ್ತು ಅದೇ ರೀತಿ ಸ್ವಾಧ್ಯಾಯವನ್ನು ಸರಿಯಾದ ವಿಶ್ಲೇಷಣೆ ಮಾಡಿದಲ್ಲಿ ಅದು ಯೋಗವಾಗುತ್ತದೆ. ಪುಸ್ತಕವನ್ನು ಓದುವ ಪ್ರತಿಯೊಬ್ಬರೂ ಅದನ್ನು ಓದುವ ಮೊದಲು ಇದನ್ನು ಗಮನದಲ್ಲಿರಿಸಬೇಕು."

1928ರಲ್ಲಿ ಬಿಡುಗಡೆಯಾದ ಬೆಳ್ಳಿ ಮಹೋತ್ಸವದ ಸ್ಮರಣ ಸಂಚಿಕೆಯಲ್ಲಿ ನಾಯನರ ಭಾಷಣಗಳನ್ನು ಪ್ರಕಟಿಸಲಾಯಿತು. ಆಗಿನ ಕಾಲದ ಯುವಕರನ್ನು ಈ ಸಂದೇಶಗಳು ಎಚ್ಚೆತ್ತುಕೊಳ್ಳುವಂತೆ ಮಾಡಿತು.

ಬೋಲಾರಾಂ ಹಾಗೂ ಗಢವಾಲ್ ಪ್ರದೇಶಗಳಲ್ಲೂ ನಾಯನರ ಭಾಷಣವನ್ನು ಏರ್ಪಡಿಸಲಾಯಿತು. ಶ್ರೀ ವೀರಭದ್ರಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ದ್ರಾವಿಡ ಸಮ್ಮೇಳನದಲ್ಲಿ ನಾಯನರನ್ನು ಪಲ್ಲಕ್ಕಿಯಲ್ಲಿ ಕುಳ್ಳಿರಿಸಿ ಮೆರವಣಿಗೆಯ ಮೂಲಕ ಸಮ್ಮೇಳನದ ಸ್ಥಳಕ್ಕೆ ಕರೆತರಲಾಯಿತು.

ಈ ಎಲ್ಲ ಸಭೆಗಳು ಮುಗಿದ ನಂತರ ನಾಯನರು ತಮ್ಮ ಹುಟ್ಟೂರಾದ ಕಲುವರೈ ಗ್ರಾಮಕ್ಕೆ ತೆರಳಿದರು. ಅಲ್ಲಿಂದ ಕೆಲವು ವಿದ್ವಾಂಸರ ಆಹ್ವಾನದ ಮೇರೆಗೆ ಸುಂಕಿಗೆ ತೆರಳಿದರು. ಸುಂಕಿಯು ನಾಗವಲ್ಲಿ ನದಿಯ ದಡದಲ್ಲಿರುವ ಪಾರ್ವತಿಪುರಂ ಪಟ್ಟಣದಿಂದ 9 ಕಿ.ಮೀ ದೂರದಲ್ಲಿ ತೋಟಗಳ ಮಧ್ಯೆ ಇರುವ ಒಂದು ಸಣ್ಣ ಗ್ರಾಮ. ಅದು ನಾಯನರ ಮಗ ಮಹಾದೇವನ ಮಾವನವರ ವಾಸಸ್ಥಳ. ಆ ಗ್ರಾಮದಲ್ಲಿ ಸದಾ ವೇದ ಮಂತ್ರ ಪಠನ, ತಪಸ್ಸು ಹಾಗೂ ಯಜ್ಞಗಳು ನಡೆಯುತ್ತಿದ್ದವು. ಇಲ್ಲಿನ ಶ್ರೀ ವಿಶ್ವನಾಥ ರಾಮ ಸೋಮಯಾಜುಲು ಅವರನ್ನು ಸುತ್ತ ಮುತ್ತಲಿನ ಹಳ್ಳಿಗಳವರು ಮಹಾತ್ಮರೆಂದು ಗೌರವಿಸುತ್ತಿದ್ದರು. ಅವರು ಹುಟ್ಟು ಬ್ರಹ್ಮಚಾರಿಗಳು ಹಾಗೂ ವೇದಾಧ್ಯಾಯನವನ್ನು ಮಾಡಿಕೊಂಡವರು ಮತ್ತು ಆತಿಥ್ಯದಲ್ಲಿ ಎತ್ತಿದ ಕೈ ಅಲ್ಲದೇ ಸಮಾಜ ಸುಧಾರಕರು. ಅವರ ತಮ್ಮನೂ ಸಹ ಅವರ ಬಲಗೈ ಆಗಿ ಕೆಲಸ ಮಾಡುತ್ತಿದ್ದನು. ಮಹಾದೇವನ ಪತ್ನಿ ರಾಜೇಶ್ವರಿಯು ಇವರ ತಂಗಿ. ಸೋಮಯಾಜುಲು ಅವರು ಸಮಾಜ ಸುಧಾರಕರೂ ಹಾಗೂ ವೇದಪಂಡಿತರೂ ಆಗಿದ್ದರಿಂದ ಅವರು ಇವೆರಡೂ ಕ್ಷೇತ್ರಗಳ ಸಹಯೋಗದ ದೃಷ್ಟಿಯಿಂದ ಸರಿಯಾದ ಕ್ರಮಗಳನ್ನು ಮುಂದುವರೆಸಿಕೊಂಡು ಹೋಗುವ ಸಲುವಾಗಿ ತಮ್ಮ ಗ್ರಾಮದಲ್ಲಿ ಕೆಲವು ನಿಯಮಗಳನ್ನು ಕಂಡುಕೊಳ್ಳಲು ಸಭೆಯನ್ನು ಕರೆದಿದ್ದರು. ಈ ಸಭೆಯಲ್ಲಿ ಸುಪ್ರಸಿದ್ಧರಾದ ಶ್ರೀ ತಾತ ಸುಬ್ಬರಾಯ ಶಾಸ್ತ್ರಿ, ಶ್ರೀ ಪೇರಿ ಕಾಶಿನಾಥ್ ಶಾಸ್ತ್ರಿ ಹಾಗೂ ಶ್ರೀ ಆದಿ ಭಟ್ಲ ನಾರಾಯಣ ದಾಸರುಗಳು ಭಾಗವಹಿಸಿದ್ದರು. ಈ ಸಭೆಯಲ್ಲಿ ಗಣಪತಿ ಮುನಿಗಳು ವಯಸ್ಸಿನಲ್ಲಿ ಚಿಕ್ಕವರಾದ್ದರಿಂದ ಅವರು ಸಭಾಸದರೊಂದಿಗೆ ಕುಳಿತು

ಕಲಾಪಗಳನ್ನು ವೀಕ್ಷಿಸಿದರು. ಮೂರು ದಿನಗಳ ಕಾಲ ಅನೇಕ ಧಾರ್ಮಿಕ ವಿಷಯಗಳ ಬಗ್ಗೆ ಚರ್ಚೆಗಳು ನಡೆದವು. ಸಮಾರಂಭದ ಕಡೆಯದಿನ ನಾಯನರು ಸದ್ದಿಲ್ಲದೇ ಏನನ್ನೋ ಬರೆದುಕೊಳ್ಳುತ್ತಿದ್ದದ್ದನ್ನು ಕೃಷ್ಣಶಾಸ್ತ್ರಿಗಳು ಗಮನಿಸಿದರು. ಅವರು ನಾಯನರ ಬಳಿ ಬಂದು ಏನನ್ನು ಬರೆದುಕೊಳ್ಳುತ್ತಿದ್ದರು ಎಂಬುದನ್ನು ನೋಡಿದರು. ನಾಯನರು ಮೂರು ದಿನಗಳ ಕಲಾಪಗಳನ್ನು ಕ್ರೋಢಿಕರಿಸಿ ಅವುಗಳನ್ನು ತತ್ತೋಕ್ತಿಯ ರೂಪದಲ್ಲಿ ಬರೆದು ಕೊಳ್ಳುತ್ತಿದ್ದರು. ಅವರು ನಾಯನರನ್ನು ಅಲಂಗಿಸಿಕೊಂಡು, "ಗಣಪತಿಗಳೇ, ನೀವು ನಿಜವಾಗಿಯೂ ಗಣಪತಿಯೇ. ಸದ್ದಿಲ್ಲದೇ ಕುಳಿತು ನೀವು ಸಭೆಯ ಸಮಸ್ತ ಕಲಾಪಗಳಿಗೂ ಒಂದು ರೂಪವನ್ನು ನೀಡಿರುವಿರಿ. ಇದು ಅತ್ಯದ್ಭುತವಾದ ಕೆಲಸ" ಎಂದು ಅವರ ಗುಣಗಾನ ಮಾಡಿದರು.

ನಾಯನರು ಇನ್ನೂ ಸ್ವಲ್ಪ ದಿನ ಸುಂಕಿಯಲ್ಲೇ ಇದ್ದು "ಧರ್ಮಾನುಶಾಸನಮ್" ಹಾಗೂ "ದೇವತಾ ಸಿದ್ಧಾಂತ ತಾರಾವಳಿ" ಎಂಬ ಎರಡು ಶಾಸ್ತ್ರ ಗ್ರಂಥಗಳನ್ನು ರಚಿಸಿದರು. ಅವರು ಸೋಮಯಾಜುಲು ಹಾಗೂ ಇತರರಿಗೆ ಮಂತ್ರದೀಕ್ಷೆಯನ್ನು ಉಪದೇಶಿಸಿದರು. ಅವರೆಲ್ಲರೂ ನಾಯನರ ಶಿಷ್ಯರಾಗಿ ಅವರನ್ನು ಪ್ರೀತಿಯಿಂದ ಸೇವಿಸಿದರು.

೧೪

ದೈವೀ ನಾಟಕ

ಕೇಚಿದ್ಯೋಗವಿದಾಂ ಪುರಸ್ಸರ ಇತಿ ಪ್ರಜ್ಞಾನಿಬುದ್ಧ್ಯಾಪರೇ
ಸಾಧುಃ ಕಶ್ಚಿದಿತೀತರೇ ಗುರುಧಿಯಾ ಕೇಪ್ಯಂಘ್ರಿಪದ್ಮಂ ತವ
ಸೇವಂತೇ ರಮಣಾಭಿದಾನಮನುಜಕ್ಷೇಮಾಯ ಜಾತಕ್ಷಿತಃ
ದ್ವಿತ್ರಾಸ್ತ್ವಾಂ ಗಿರಿಜಾಂಕಪೀಠನಿಲಯಂ ಜಾನಂತಿ ದೇವಂ ಗುಹಮ್ ॥

– ಶ್ರೀ ರಮಣ ಚತ್ವಾರಿಂಶತ್ (15)

"ಓ ರಮಣ! ಕೆಲವರು ನಿಮ್ಮನ್ನು ಮಹಾನ್ ಯೋಗಿಯೆಂದು ಪರಿಗಣಿಸಿದರೆ, ಕೆಲವರು ಮಹಾಜ್ಞಾನಿಯೆಂದೂ, ಕೆಲವರು ಒಬ್ಬ ಸಾಧುವೆಂದೂ ಮತ್ತೆ ಕೆಲವರು ತಮ್ಮ ಗುರುಗಳೆಂದೂ ಪರಿಗಣಿಸುವರು. ಇಬ್ಬರು ಅಥವಾ ಮೂವರು ಮಾತ್ರ ನಿಮ್ಮನ್ನು ಸದಾ ತಾಯಿ ಉಮಾದೇವಿಯ ತೊಡೆಯ ಮೇಲೆ ಕುಳಿತಿರುವ ಸಾಕ್ಷಾತ್ ಕುಮಾರಸ್ವಾಮಿಯ ಅವತಾರವೆಂದೇ ಅರಿತಿರುವರು."

ಯಾವಾಗ ಒಬ್ಬನು ಶರೀರದ ಅಲೋಚನೆಯಿಂದ ಹೊರಬಂದು ಅಲೋಚಿಸಲು ಯತ್ನಿಸುತ್ತಾನೋ ಅವನಿಗೆ ಗುರು ಎಂಬ ಪದದ ನಿಜವಾದ ಅರ್ಥವು ಅರಿವಾಗುವುದು. ಅದಕ್ಕೆ ಸಂಪೂರ್ಣ ಶರಣಾಗತಿಯ ಮನೋಭಾವ ಇರಬೇಕು. ಯಾವಾಗ ಶಿಷ್ಯನು ಗುರುವಿನಲ್ಲಿ ಸಂಪೂರ್ಣ ಶರಣಾಗುತ್ತಾನೋ ಆಗ ಅವನಿಗೆ ಗುರುವು ಬೇರಾರೂ ಅಲ್ಲದೆ ಅವರು ಸಾಕ್ಷಾತ್ ಈಶ್ವರ ಹಾಗೂ ಸ್ವಯಂ ಆತ್ಮ (ಈಶ್ವರೋ ಗುರೂರಾತ್ಮೇತಿ) ಎಂಬುದು ಅರಿವಾಗುವುದು.

ಎಲ್ಲ ಗುರುಗಳೂ ತಾವು ಶರೀರವಲ್ಲವೆಂದೂ ಹಾಗೂ ನಾವುಗಳೂ ಶರೀರವಲ್ಲ ವೆಂಬುದನ್ನು ನಮಗೆ ಮೊದಲಿಗೆ ಕಲಿಸಿಕೊಡುತ್ತಾರೆ. ನಾವೆಲ್ಲರೂ ಪವಿತ್ರಾತ್ಮರು. ಶ್ರೀ ರಮಣರು ಶರೀರವನ್ನು ಜಡವಸ್ತುವೆಂದು ಪರಿಗಣಿಸುತ್ತಿದ್ದರು. ಅವರು ತಮ್ಮ ಶರೀರವನ್ನು ಪೂಜಿಸುವುದನ್ನು ವಿರೋಧಿಸುತ್ತಿದ್ದರು. ಅವರು ಮುಕ್ತರು ಆದರೂ ಈಗಲೂ ಮುಕ್ತಿಯನ್ನು ಬಯಸುವ ಅನೇಕರಿಗೆ ತಮ್ಮ ದೈವೀ ಕರುಣೆಯಿಂದ ಮುಕ್ತಿಯನ್ನು ಕರುಣಿಸುತ್ತಿದ್ದಾರೆ. ನಾಯನರು ಅವರನ್ನು ಮಾನವರೂಪಿಯನ್ನಾಗಿ ವರ್ಣಿಸದೆ, ಅವರನ್ನು ಮಾನವ ರೂಪವನ್ನು ತಳೆದ ದೈವೀ ಅಂಶವೆಂದು ವರ್ಣಿಸುವರು. ನಾಯನರು ಭಕ್ತರಿಗೆ ಅವರುಗಳು ಭಗವಾನರ

...ಗ ಕುಳಿತಿದ್ದಾಗ ಕಣ್ಣುಗಳನ್ನು ಮುಚ್ಚದೇ ತೆರೆದುಕೊಂಡೇ ತಮ್ಮ ದೈಹಿಕ ಕಣ್ಣುಗಳಿಂದ ಸಾಕ್ಷಾತ್ ಭಗವಂತನನ್ನೇ ನೋಡಬಹುದು ಎಂದು ಹೇಳುತ್ತಿದ್ದರು.

ಶ್ರೀ ಅರೋಬಿಂದೊ ಅವರು 'ಮದರ್' ಎಂಬ ಶೀರ್ಷಿಕೆಯಡಿಯಲ್ಲಿ ಒಂದು ಕಿರುಪುಸ್ತಕ ಬರೆದರು. ಈ ಕೃತಿಯು ಭಗವಂತನ ಶಕ್ತಿ ಸ್ವರೂಪವನ್ನು ಬಹಿರಂಗ ಪಡಿಸುತ್ತದೆ. ಶ್ರೀ ಅರೋಬಿಂದೊ ಅವರಿಗೆ ನಾಯನರ ಮೇರು ಕೃತಿಯಾದ "ಉಮಾಸಹಸ್ರಮ್" ಅವರ ಭಕ್ತರೊಬ್ಬರು ತೋರಿಸಿದಾಗ ಅವರು ಅದನ್ನು ಪರಾಮರ್ಶಿಸಿ ಆ ಕೃತಿಗೆ ಅತ್ಯಂತ ಸೂಕ್ತವಾದ ಅಭಿಪ್ರಾಯವನ್ನು ಈ ರೀತಿ ವ್ಯಕ್ತಪಡಿಸಿದರು, "ಇದು ಒಂದು ಅದ್ಭುತವಾದ ಕೃತಿ. ಇದರ ಕರ್ತೃವು ಒಬ್ಬ ದೇವಮಾನವನು. ಈ ಕೃತಿಯಲ್ಲಿನ ಪ್ರತಿಯೊಂದು ಶ್ಲೋಕದಲ್ಲೂ ಅವರ ದೈವೀ ಧ್ವನಿಯು ಕೇಳಿಬರುತ್ತದೆ. ನಾನು ಈ ಮಹಾ ಸಂತನನ್ನು ಒಮ್ಮೆ ಕಣ್ಣಾರೆ ನೋಡಬೇಕು." ಎಂದರು.

ನಾಯನರು ಸುಂಕಿಯಿಂದ ತಮ್ಮ ಮನೆಯಿರುವ ಕಾಲುವರೈಗೆ ತಮ್ಮ ಪತ್ನಿ ವಿಶಾಲಾಕ್ಷಮ್ಮನವರ ವೈದಿಕವನ್ನು ಮಾಡಲು ಹೊರಟರು. ಅನಂತರ ಅವರು "ಇಂದ್ರ ಸಹಸ್ರನಾಮ" ಕೃತಿಯನ್ನು ರಚಿಸಲು ಪ್ರಾರಂಭಿಸಿದರು. ಅವರು ಇದರಲ್ಲಿನ ಹೆಸರುಗಳನ್ನು ಋಗ್ವೇದದಿಂದ ಆರಿಸಿಕೊಂಡರು. ಈ ಕೃತಿಯನ್ನು ಲಲಿತಾ ಸಹಸ್ರನಾಮ ಹಾಗೂ ವಿಷ್ಣು ಸಹಸ್ರನಾಮಗಳ ಶೈಲಿಯಲ್ಲಿ ರಚಿಸಿದರು. ಅರುಣಾಚಲದಲ್ಲಿ ಕ್ರಿ.ಶ.1927ರಲ್ಲಿ ಈ ಕೃತಿಯ ರಚನೆಯನ್ನು ಪೂರ್ಣಗೊಳಿಸಿ ಅದನ್ನು ಭಗವಾನ್ ರಮಣ ಮಹರ್ಷಿಗಳಿಗೆ ತೋರಿಸಿದರು. ಭಗವಾನರು ಈ ಕೃತಿಯಲ್ಲಿರುವ ಇಂದ್ರನ ಕೆಲವು ನಾಮಗಳಾದ, ಆಚಕ್ರಾಯ, ಸ್ವಧಾಯ, ವರ್ತಮಾನಃ, ಅನಿಲಃ, ಸುಪರ್ಣ ಮತ್ತು ಕಿಯಿಜಃ ಹೆಸರುಗಳನ್ನು ನೋಡಿ ಅವರು ಅತ್ಯಂತ ಆಸಕ್ತಿಯನ್ನು ಪ್ರಕಟಿಸಿದರು. ಈ ಕೃತಿಯನ್ನು ದೈನಂದಿನ ಪೂಜೆಯಲ್ಲೂ ಪಠನ ಮಾಡಬಹುದು. ಈ ಕೃತಿಯ ಕೊನೆಯಲ್ಲಿ ಫಲಶ್ರುತಿಯೂ ಇರುವುದು.

ಮುರುಗನಾರ್ ಅವರು ಭಗವಾನರ ಭಕ್ತರಲ್ಲಿ ಮಂಚೂಣಿಯಲ್ಲಿರುವವರು. ಅವರು ತಮಿಳು ಭಾಷೆಯಲ್ಲಿ ಮಹಾನ್ ಕವಿಗಳು. ಅವರು ಶಿವನ ಲೀಲೆಯನ್ನು ಕೊಂಡಾಡಿ ಒಂದು ಪದ್ಯವನ್ನು ರಚಿಸಿದರು. ಈ ಪದ್ಯದಲ್ಲಿ ಕೆಲವು ಋಷಿಮುನಿಗಳು ದಾರುಕಾವನದಲ್ಲಿ ಯಜ್ಞಮಾಡುತ್ತಿದ್ದಾಗ ಶಿವನು ಅವರಿಗೆ ಸತ್ಯಜ್ಞಾನವನ್ನು ನೀಡುವ ಒಂದು ದೃಶ್ಯವನ್ನು ವಿವರಿಸಬೇಕಿತ್ತು. ಮುರುಗನ್ ಅವರು ಈ ದೃಶ್ಯಕ್ಕೆ ಸಂಬಂಧಿಸಿದ ಪದ್ಯವನ್ನು ಭಗವಾನರೇ ರಚಿಸಿದರೆ ಸೂಕ್ತವೆಂದು ಆಲೋಚಿಸಿದ್ದರು. ಭಗವಾನರು ಇದಕ್ಕೆ ಸಮ್ಮತಿಸಿ ತಮಿಳಿನಲ್ಲಿ, "ಉಪದೇಶ ಉಂಡಿಯಾರ್" ಎಂಬ ನಾಮದಲ್ಲಿ ಪದ್ಯವನ್ನು ರಚಿಸಿದರು. ಭಗವಾನರು ನಾಯನರಿಗೆ ಈ ಪದ್ಯಕ್ಕೆ ವ್ಯಾಖ್ಯಾನವನ್ನು ಬರೆಯಲು ಹೇಳಿದರು. ನಾಯನರು ಆ ಪುಸ್ತಕವನ್ನು ಅತ್ಯಂತ ವಿನಯ ಹಾಗೂ ಭಕ್ತಿಯಿಂದ ಕಣ್ಣುಗಳಿಂದ ನೀರನ್ನು ಸುರಿಸುತ್ತಾ ಗದ್ಗದ ಸ್ವರದಲ್ಲಿ ನೆರೆದಿದ್ದ ಜನಗಳಿಗೆ, "ನಾವೆಲ್ಲರೂ ನಾವೇ ಮಹಾನ್ ಪಂಡಿತರೆಂದು ಯೋಚಿಸುತ್ತೇವೆ. ನಮಗೆ ಇದರಲ್ಲಿನ ಒಂದು ಶ್ಲೋಕವನ್ನು ರಚಿಸಲು ಆಗುವುದೇ?" ಎಂದರು. ಭಗವಾನರ ಆದೇಶದ ಮೇರೆಗೆ ನಾಯನರು ವ್ಯಾಖ್ಯಾನವನ್ನು ಬರೆದರು.

ಸುಧನ್ವ (ದೊರೈಸ್ವಾಮಿ)ರು ಶ್ರೀ ಅರೋಬಿಂದೊ ಆಶ್ರಮದಿಂದ ನಾಯನರನ್ನು ಆಶ್ರಮಕ್ಕೆ ಬರಲು ಶ್ರೀ ಆರೋಬಿಂದೊ ಅವರ ಆಹ್ವಾನವನ್ನು ನೀಡುವುದಕ್ಕೆ ಬಂದರು. ಈ ಆಹ್ವಾನದ ಸುದ್ಧಿಯನ್ನು ಕೇಳುತ್ತಿದ್ದಂತೆ ನಾಯನರಿಗೆ ಶ್ರೀ ಅರೋಬಿಂದೊ ಅವರ ಕಾಲ್ಪನಿಕ ದರ್ಶನವಾಯಿತು.

ಪರಂ ಇಂದ್ರಾಣಿ ಸಾಧುರ್ಬತ ವಿಸ್ಮೃತ್ಯ ವಿಶ್ವಂ
ರಮತೇ ಸಿಕ್ತಗಂಡಃ ಪ್ರಮದಾಶ್ರುಪ್ರತಾನೈಃ ॥

"ಓ! ಪ್ರಪಂಚವನ್ನೇ ಮರೆತು ಯೋಗದಲ್ಲಿ ತಲ್ಲೀನರಾಗಿರುವ, ಶ್ರೀ ಅರವಿಂದರ ಕಣ್ಣುಗಳಿಂದ ಅಶ್ರುಬಿಂದುಗಳು ಗಲ್ಲದವರೆಗೂ ಹರಿದುಬರುತ್ತಿದ್ದು ಪರಮಾನಂದವನ್ನು ಅನುಭವಿಸುತ್ತಿರುವರು."

ಅರವಿಂದರು ಏಕಾಂಗಿಯಾಗಿ ಕುಳಿತಿದ್ದಾಗ, ನಾಯನರು ಅವರನ್ನು ದರ್ಶಿಸಿದರು. ಹತ್ತು ನಿಮಿಷಗಳವರೆಗೂ ಇಬ್ಬರೂ ನಿಃಶಬ್ದವಾಗಿ ಕುಳಿತಿದ್ದರು. ಅನಂತರ ಶ್ರೀ ಅರೋಬಿಂದೊ ಅವರು ಸುಧನ್ವರೆಡೆಗೆ ತಿರುಗಿ, "ನಾಯನರು ಗಣಪತಿ ಉಪಾಸಕರೆ?" ಎಂದು ಕೇಳಿದರು. ಅದಕ್ಕೆ ಸುಧನ್ವರು ನಾಯನರು ಸ್ವತಃ ಗಣಪತಿಯ ಅವತಾರ ಪುರುಷರೆಂದು ಶ್ರೀ ಅರೋಬಿಂದೊ ಅವರಿಗೆ ತಿಳಿಸಿದರು. ಅಂಬಿಂದೊ ಅವರು ತಾವು ನಾಯನರ ಮಸ್ತಕದಲ್ಲಿ ಗಣಪತಿಯನ್ನು ಕಂಡೆನೆಂದು ಸುಧನ್ವರಿಗೆ ಹೇಳಿದರು.

ಮಾರನೇ ದಿನ ಸಂಜೆಯಲ್ಲಿ ಮಾತೆಯವರು ನಾಯನರನ್ನು ಬರಲು ತಿಳಿಸಿದರು. ಅವರಿಬ್ಬರೂ ಒಟ್ಟಿಗೆ ನಲವತ್ತೈದು ನಿಮಿಷ ಧ್ಯಾನದಲ್ಲಿ ತಲ್ಲೀನರಾಗಿದ್ದರು. ಮಾತೆಯವರು ಕಣ್ಣು ಮುಚ್ಚಿ ಕುಳಿತಿದ್ದರೆ, ನಾಯನರು ಕಣ್ತೆರೆದು ಕುಳಿತಿದ್ದರು. ಅನಂತರ ಮಾತೆಯವರು ಕಪಾಲಿ ಶಾಸ್ತ್ರಿಗೆ, "ನಾವಿಬ್ಬರೂ ಧ್ಯಾನವನ್ನು ಪ್ರಾರಂಭಿಸುತ್ತಿದ್ದಂತೆ ನನ್ನ ಮನಸ್ಸು ಸುದೀರ್ಘವಾದ ಆಳವನ್ನು ಪ್ರವೇಶಿಸಿತು. ಈ ಹಿಂದೆ ನಾನು ಯಾರೊಂದಿಗೂ ಧ್ಯಾನದಲ್ಲಿದ್ದಾಗ ಈ ಹಂತವನ್ನು ತಲುಪಿರಲಿಲ್ಲ." ಎಂದರು.

ನಾಯನರ ಭಕ್ತರು ಅವರು ಶ್ರೀ ಅರೋಬಿಂದೋ ಆಶ್ರಮದಲ್ಲೇ ಅವರ ಒಳಿತಿಗಾಗಿ ನೆಲೆಸುವರೆಂದು ಭಾವಿಸಿದರು. ಕಪಾಲಿ ಶಾಸ್ತ್ರಿಗಳು ಶ್ರೀ ಅರೋಬಿಂದೋ ಅವರ ಕೃತಿ "ಜನನಿ" ಯನ್ನು ಸಂಸ್ಕೃತ ಭಾಷೆಗೆ ಭಾಷಾಂತರಿಸುತ್ತಿದ್ದರು. ಅವರು ತಮ್ಮ ಕೃತಿಗೆ ಮುನ್ನುಡಿಯನ್ನು ಬರೆದುಕೊಡುವಂತೆ ನಾಯನರನ್ನು ಕೇಳಿಕೊಂಡರು. ನಾಯನರು ಮುನ್ನಡಿಯ ಮೊದಲನೇ ಆಹ್ವಾನಿತ ಶ್ಲೋಕವನ್ನು ಕೆಳಕಂಡಂತೆ ಬರೆಯಲು ಪ್ರಾರಂಭಿಸಿದರು:

ವಂದೇ ಶ್ರೀ ರಮಣಷರಾಚಾರ್ಯಸ್ಯ ಪದಾಬ್ಜಂ
ಯೋ ಮೇಽದಯೇಷಯದೀಶಂ ಭಾಂತಂ ಧ್ವಾಂತಮತೀತ್ಯ ॥

"ಕತ್ತಲಿನಾಚೆಗೆ ಪ್ರಖರವಾಗಿ ಬೆಳಗುತ್ತಿರುವ ಈಶ್ವರನನ್ನು ನನಗೆ ತೋರಿದ ಶ್ರೀ ರಮಣ ಮಹರ್ಷಿಗಳ ಪಾದಕ್ಕೆ ತಲೆಬಾಗುವೆ."

ಗುರುವಿಗೆ ಶರಣಾಗುವುದು ಜೀವನದಲ್ಲಿ ಒಮ್ಮೆ ಮಾತ್ರ ಜರುಗುವುದು ಮತ್ತು ಶಿಷ್ಯನಲ್ಲಿನ ಕ್ತಿಯು ಗುರುವಿನ ಶಕ್ತಿ ಎಂಬುದು ಎಲ್ಲರಿಗೂ ಅರ್ಥವಾಗುವುದು. ಈ ರೀತಿಯ ರುವಿನಿಂದ ನಾಯನರ ಶಿಷ್ಯರು ಅವರು ಶ್ರೀ ಅರೋಬಿಂದೋ ಆಶ್ರಮದಲ್ಲೇ ಉಳಿಯುವರೆಂಬ ಆಶೆಯನ್ನು ಬಿಡಬೇಕಾಯಿತು.

ಒಂದು ವಾರ ಕಳೆಯಿತು, ಆದರೂ ನಾಯನರು ಇನ್ನೂ ಶ್ರೀ ಅರೋಬಿಂದೂ ಆಶ್ರಮದಲ್ಲೇ ಇದ್ದರು. ರಮಣಾಶ್ರಮದಲ್ಲಿದ್ದ ನಾಯನರ ಶಿಷ್ಯರಿಗೆ ಆ ಸಂದರ್ಭದಲ್ಲಿ ರಮಣಾಶ್ರಮದಲ್ಲಿನ ಪರಿಸ್ಥಿತಿಯು ಹತೋಟಿ ಮೀರುತ್ತಿರುವುದರಿಂದ ನಾಯನರು ತಮ್ಮ ಒಳ್ಳೆಯದಕ್ಕಾಗಿ ಶ್ರೀ ಅರೋಬಿಂದೋ ಆಶ್ರಮದಲ್ಲೇ ಉಳಿಯಬಹುದೆಂದು ಚಿಂತೆಯಾಗತೊಡಗಿತು. ಕಡೆಗೆ ಭಕ್ತರು ತಮ್ಮ ಅನಿಸಿಕೆಯನ್ನು ಭಗವಾನರ ಬಳಿ ಹೇಳಿಕೊಂಡರು. ಭಗವಾನರು ನಿಗೂಢವಾಗಿ, "ಓಹ್! ಅವರು ಎಲ್ಲಿಗೆ ಹೋಗುವರು? ಅವರಿಗೆ ಹೋಗಲು ಜಾಗವೆಲ್ಲಿದೆ? ಅವರು ಖಂಡಿತ ಬಂದೇ ಬರುತ್ತಾರೆ" ಎಂದುಬಿಟ್ಟರು. ಭಗವಾನರು ಊಹಿಸಿದಂತೆ ನಾಯನರು ಒಂದು ವಾರದ ನಂತರ ಅರುಣಾಚಲಕ್ಕೆ ಮರಳಿ ಬಂದರು.

"ನನ್ನನ್ನು ಅಲ್ಲಿ ನೋಡುತ್ತಿದ್ದಂತೆ ಅಲ್ಲಿದ್ದವರೆಲ್ಲಾ ನಿಮ್ಮ ಇರುವಿಕೆಯನ್ನು ಅನುಭವಿಸಿದರು," ಎಂದು ನಾಯನರು ಭಗವಾನರಿಗೆ ಹೇಳಿದರು. ಅದಕ್ಕೆ ಭಗವಾನರು ಮುಗುಳ್ನಕ್ಕರು.

ನಾಯನರು ಗುರುವಿನ ಬಗ್ಗೆ ಬೇರೆ ಬೇರೆ ಸಂದರ್ಭಗಳಲ್ಲಿ ಅನೇಕ ಶ್ಲೋಕಗಳನ್ನು ರಚಿಸಿದರು. ಭಗವಾನರು ಅವುಗಳನ್ನೆಲ್ಲ ಎಚ್ಚರಿಕೆಯಿಂದ ಒಂದೆಡೆ ಸಂಗ್ರಹಿಸಿಡುತ್ತಿದ್ದರು. ಅವುಗಳ ಸಂಖ್ಯೆಯು ನಲವತ್ತಾಗಿತ್ತು. ನಾಯನರ ಕಾಲಾನಂತರ ಭಗವಾನರು ಈ ಸಂಗ್ರಹಕ್ಕೆ, "ಶ್ರೀ ರಮಣ ಚತ್ವಾರಿಂಷತ್" ಎಂಬ ಹೆಸರಿನಲ್ಲಿ ಪ್ರಕಟಿಸಿದರು. ಈ ಶ್ಲೋಕಗಳನ್ನು ಈಗಲೂ ಪ್ರತಿನಿತ್ಯವೂ ಭಗವಾನರ ಸಮಾಧಿಯೆದುರಿನಲ್ಲಿ ಪಠಿಸಲಾಗುವುದು.

1936ರರಲ್ಲಿ ಇದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲಾಯಿತು. ಸ್ವಲ್ಪ ಕಾಲದ ನಂತರ ಭಗವಾನರ ಭಕ್ತ ಹಾಗೂ ನಾಯನರ ಶಿಷ್ಯರಾದ ಕೆ.ನಟೇಶನ್, ಅರೋಬಿಂದೋ ಆಶ್ರಮಕ್ಕೆ ಹೋದರು. ಅಲ್ಲಿ ಆಶ್ರಮದವರು ಅವರಿಗೆ, "ವಂದೇ ಶ್ರೀರಮಣ" ಎಂಬ ಶ್ಲೋಕವನ್ನು ನಟೇಶನ್ ಅವರಿಗೆ ತೋರಿಸಿದರು. ನಟೇಶನ್ ಅವರು ಆ ಶ್ಲೋಕವನ್ನು ಬರೆದುಕೊಂಡು ಬಂದು ಭಗವಾನರಿಗೆ ತೋರಿಸಿದರು. ಭಗವಾನರು ಅದನ್ನು ಇಷ್ಟಪಟ್ಟು ಆ ಶ್ಲೋಕವನ್ನು "ಚತ್ವಾರಿಂಷತ್" ಸ್ತೋತ್ರದ ಆಹ್ವಾನ ಶ್ಲೋಕವನ್ನಾಗಿ ಸೇರಿಸುವಂತೆ ಶಿಷ್ಯರಿಗೆ ಹೇಳಿದರು. ಈ ಶ್ಲೋಕವನ್ನು ಪ್ರತಿದಿನವೂ ಭಗವಾನರ ಮಂದಿರದಲ್ಲಿ "ಶ್ರೀ ರಮಣ ಚತ್ವಾರಿಂಷತ್" ಸ್ತೋತ್ರವನ್ನು ಪಠಿಸುವುದಕ್ಕೆ ಮುಂಚಿತವಾಗಿ ಪಠಿಸಲಾಗುವುದು.

1929ರ ಬೇಸಗೆಯು ವಿಪರೀತವಾಗಿ ಸೆಖೆಯಿಂದ ಕೂಡಿತ್ತು. ನಾಯನರಿಗೆ ಈ ಸೆಖೆಯನ್ನು ಸಹಿಸಲಸಾಧ್ಯವಾಯಿತು. ಅವರಿಗೆ ಮಾವಿನ ತೋಪಿನಲ್ಲಿನ ಗುಹೆಯಲ್ಲಿ

ಇರಲಾಗಲಿಲ್ಲ. ಇದನ್ನು ಗಮನಿಸಿದ ಮುರುಗನಾರ್ ಅವರು ತಾವು ವಾಸಿಸುತ್ತಿದ್ದ ಹಲಸಿನ ತೋಟಕ್ಕೆ ನಾಯನರನ್ನು ಆಹ್ವಾನಿಸಿದರು.

"ಉಪದೇಶ ಸಾರಮ್" ಕೃತಿಗೆ ವ್ಯಾಖ್ಯಾನವನ್ನು ಬರೆದ ನಾಯನರು ಅದಕ್ಕೆ ಪೂರಕವಾಗಿ "ಮನೀಷ ಸಂಗ್ರಹ" ವನ್ನು ಬರೆದರು. ಸಾರೋಕ್ತಿಯನ್ನು ಬರೆಯುವುದು ಕಷ್ಟದ ಕೆಲಸ. ವಿಷಯವು ಸಂಕ್ಷಿಪ್ತ ಆದರೆ ಸಂಪೂರ್ಣವಾಗಿರಬೇಕು. ನಾಯನರು ವೇದಕಾಲದ ಋಷಿಮುನಿಗಳು ಬರೆಯುತ್ತಿದ್ದಂತೆ ಸಾರೋಕ್ತಿಗಳನ್ನು ಬರೆಯುವುದರಲ್ಲಿ ಅನನ್ಯ ವಿದ್ವಾಂಸರು. ಈ ಸಾರೋಕ್ತಿಯಲ್ಲಿ ನಾಯನರು ಆತ್ಮ, ಕಾಲ, ವಿಶ್ವ ಹಾಗೂ ಪ್ರಕೃತಿಯ ಬಗ್ಗೆ ಸ್ಪಷ್ಟವಾಗಿ ನಿರೂಪಿಸಿದರು. ಇದರೊಂದಿಗೆ ಅವರು ಋಷಿಮುನಿಗಳು ಕಂಡುಕೊಂಡ ಜ್ಞಾನದ ಸಾರಾಂಶವನ್ನೂ ವಿವರಿಸಿದರು.

ಬೇಸಗೆಯ ಧಗೆಯಿಂದಾಗಿ ನಾಯನರ ಆರೋಗ್ಯವು ಕ್ಷೀಣಿಸತೊಡಗಿತು. ಆಶ್ರಮದವರು ಇವರ ಸ್ಥಿತಿಯನ್ನು ಕಂಡು ಗೋಕರ್ಣದಲ್ಲಿದ್ದ ಅವರ ಶಿಷ್ಯನಾದ ದೈವರಾತನಿಗೆ ಪತ್ರ ಬರೆದರು. ಆ ಸಮಯದಲ್ಲಿ ದೈವರಾತನು ಭದ್ರಾ ನದಿಯ ತೀರದಲ್ಲಿ ತಪಸ್ಸನ್ನಾಚರಿಸಲು ಹೋಗುವವನಿದ್ದನು. ಹಾಗಾಗಿ ಅವನು ತಮ್ಮ ಇಬ್ಬರು ಶಿಷ್ಯರನ್ನು ಅರುಣಾಚಲಕ್ಕೆ ಕಳುಹಿಸಿ ಅವರು ನಾಯನರನ್ನು ಶಿರಸಿ ಪಟ್ಟಣಕ್ಕೆ ಕರೆತರಲು ಹೇಳಿದರು. ಹಾಗೂ ದೈವರಾತನು ನಾಯನರನ್ನು ಶಿರಸಿಯಲ್ಲಿ ಉಳಿದುಕೊಳ್ಳಲು ಪತ್ರಮುಖೇನ ವಿನಂತಿಸಿಕೊಂಡರು. ಭಗವಾನರು ಈ ಸಲಹೆಗೆ ಸಮ್ಮತಿಸಿ ನಾಯನರನ್ನು ಶಿರಸಿ ಪಟ್ಟಣಕ್ಕೆ ಹೋಗಲು ಉತ್ತೇಜಿಸಿದರು.

ಮನಸ್ಸಿಲ್ಲದ ಮನಸ್ಸಿನಿಂದ ನಾಯನರು ತಿರುವಣ್ಣಾಮಲೈಯನ್ನು ಬಿಡಲು ಒಪ್ಪಿಕೊಂಡರು. ಮಂದಿರದಲ್ಲಿನ ಮಾತೆಯ ಬಳಿ ಹೋಗಿ ಪ್ರಾರ್ಥನೆಯನ್ನು ಮಾಡಿದರು:

ಶೋಣನಗಾರ್ಧತನೋನಿಷಮಂಗೇ ಧಾರಾಯಸೇಯಿ ಗೃಹಂ ರಮಣಾಖಮ್
ಆಗತಮಪ್ಯಯಿ ಹಾ ಮುಹುರಂಭೋಚ್ಚಾಟಯಸೇ ಗಣಪಂ ನನು ಕಸ್ಮಾತ್ ॥

"ಓ ಮಾತೆ! ಅರುಣಾಚಲದ ಅರ್ಧ ಶರೀರದವಳೇ! ನೀನು ಸದಾ ರಮಣರನ್ನು ನಿನ್ನ ತೊಡೆಯ ಮೇಲಿರಿಸಿಕೊಂಡು ಮುದ್ದಾಡುತ್ತಿರುವೆ. ನಾನು ನಿನ್ನ ಬಳಿ ಬಂದರೂ ನೀನು ನನ್ನನ್ನು ದೂರ ಕಳಿಸುತ್ತಿರುವೆ. ಏಕೆ?"

ಹೀಗೆ ದುಃಖತುಂಬಿದ ಹೃದಯದಿಂದ ನಾಯನರು ಭಗವಾನರನ್ನೂ ಹಾಗೂ ಅರುಣಾಚಲವನ್ನೂ ಬಿಟ್ಟು ಶಿರಸಿಗೆ ಹೊರಟರು.

೧೫

ನಾಯನರ ಆಶೀರ್ವಾದಗಳು

ಪುಷ್ಕರಾನುಜನ್ಮ ವಹ್ನಿ ಶೀತಭಾನುಪೂರ್ವಜೈ-
ರ್ನೀಲಕಂಜಬಂಧುನಾ ಚ ಸಂಯತೈರುದೇತಿ ಯಾ
ನೃಸಿಂಹ ಶಕ್ತಿ ರುಗ್ರವಿಕ್ರಮೋಗ್ರ ಮಾನಿನೀ
ಮಂತ್ರರಾಜರೂಪಿಣೀ ಮಹೇಶ್ವರೀ ಗತಿರ್ಮಮ ॥

"ಎಲ್ಲ ದೇವರುಗಳೊಂದಿಗೆ ಎಚ್ಚರಗೊಳ್ಳುವ ಅತ್ಯಂತ ಶಕ್ತಿಶಾಲಿ ದೇವಿ ಮಹೇಶ್ವರಿಯು ಮಹಾನ್ ಮಂತ್ರಸ್ವರೂಪಿ ಹಾಗೂ ನೃಸಿಂಹನ ಶಕ್ತಿಯುಳ್ಳವಳು. ಆ ದೇವಿಯು ನನಗೆ ರಕ್ಷಕಳಾಗಲಿ."

ನಾಯನರು ಭಗವಾನರಿಗೆ ನಮಸ್ಕರಿಸಿ, ಅವರ ಆಶೀರ್ವಾದವನ್ನು ಪಡೆದು ಶಿರಸಿಯೆಡೆಗೆ ಪ್ರಯಾಣವನ್ನು ಪ್ರಾರಂಭಿಸಿದರು. ಕರ್ನಾಟಕದ ಗೋಕರ್ಣದ ಬಳಿ ಸಹ್ಯಾದ್ರಿ ಪರ್ವತ ಕಣಿವೆಯಲ್ಲಿ ಕೆಲವು ಹಳ್ಳಿಗಳಿವೆ. ಅಲ್ಲಿ ಜನಸಂಖ್ಯೆಯು ಅತಿ ವಿರಳವಾಗಿದ್ದರೂ, ಅಲ್ಲಿ ಅಪರೂಪದ ಮೆಣಸಿನ ತೋಟಗಳು ಹೇರಳ, ಹೀಗಾಗಿ ಈ ಪ್ರದೇಶವು ವ್ಯಾಪಾರಿ ಕೇಂದ್ರಗಳಾಗಿವೆ. ಅಲ್ಲದೇ ಈ ಪ್ರದೇಶವು ಸಮುದ್ರ ಮಟ್ಟದಿಂದ 2000 ಅಡಿ ಎತ್ತರದಲ್ಲಿರುವುದರಿಂದ ಈ ಸ್ಥಳಗಳು ಬೇಸಿಗೆಯ ಬೇಗೆಯಿಂದ ರಕ್ಷಣೆಯನ್ನು ಪಡೆಯಲು ಸೂಕ್ತವಾದ ಸ್ಥಳಗಳು.

ನಾಯನರು ಗೋಕರ್ಣವನ್ನು ತಲುಪಿ ದೈವರಾತನ ಮನೆಯಲ್ಲಿ ಮೂರು ದಿನ ತಂಗಿದರು. ದೈವರಾತನು ಭದ್ರಾನದಿ ದಂಡೆಯಲ್ಲಿ ತಪಸ್ಸನ್ನಾಚರಿಸಲು ಹೋಗಿದ್ದರಿಂದ, ಅವರ ಮನೆಯವರು ನಾಯನರನ್ನು ನೋಡಿಕೊಂಡರು. ದೈವರಾತನ ತಮ್ಮ ಸೀತಾರಾಮ ಭಡತಿಯು ಆಯುರ್ವೇದ ಪಂಡಿತನು. ಅವನು ಶಿರಸಿಯ ಹತ್ತಿರದಲ್ಲಿನ ಕುಲುವೆ ಹಳ್ಳಿಯಲ್ಲಿ ವಾಸಿಸುತ್ತಿದ್ದನು. ದೈವರಾತನು ತನ್ನ ತಮ್ಮನಿಗೆ ನಾಯನರ ಆಗಮನದ ವಿಷಯವನ್ನು ಮುಂಚಿತವಾಗಿ ತಿಳಿಸಿದ್ದರಿಂದ, ಅವನು ಶಿರಸಿಗೆ ಬಂದು ನಾಯನರನ್ನು ಕುಲುವೆಗೆ ಕರೆದೊಯ್ಯುವುದಕ್ಕೆ ಎಲ್ಲ ಏರ್ಪಾಡುಗಳನ್ನೂ ಮಾಡಿದ್ದನು. ನಾಯನರು ಶಿರಸಿಗೆ ಬಂದ ನಾಲ್ಕನೇ ದಿನ ಭಡತಿಯು ನಾಯನರನ್ನು ಒಂದು ಮೋಟಾರು ಕಾರಿನಲ್ಲಿ ಕರೆದೊಯ್ದನು.

ಹನ್ನೊಂದು ಘಂಟೆಯ ಹೊತ್ತಿಗೆ ನಾಯನರು ಯಾವುದೋ ಒಂದು ಸ್ಥಳದಲ್ಲಿ ವಿಶ್ರಾಂತಿಯನ್ನು ಪಡೆಯಲು ಕಾರನ್ನು ನಿಲ್ಲಿಸುವಂತೆ ಛಡತಿಯನ್ನು ಕೇಳಿಕೊಂಡರು. ಮುಂಜಾನೆಯಿಂದ ಪಯಣಿಸುತ್ತಿದ್ದರಿಂದ ಅವರು ಲಕ್ಷ್ಮೀ ನೃಸಿಂಹ ಚಂದ್ರಮೌಳೀಶ್ವರ ಪೀಠವನ್ನು ತಲುಪಿ ಅಲ್ಲಿ ರಾತ್ರಿಯನ್ನು ಕಳೆಯಲು ತೀರ್ಮಾನಿಸಿದರು.

ಈ ಪೀಠವು ನಿಜವಾಗಿ ಶಂಕರಮಠ (ಪೀಠವನ್ನು ವಿಶ್ವಾನಂದ ಭಾರತಿ ಅವರು ಪ್ರಾರಂಭಿಸಿದರು). ಈ ಪೀಠದಲ್ಲಿ ಶಿವ ಹಾಗೂ ವಿಷ್ಣು ದೇವರನ್ನು ಪೂಜಿಸುತ್ತಿದ್ದರು ಹಾಗೂ ಇದು ಶಾಲ್ಮಲಿ ನದಿಯ ದಡದಲ್ಲಿರುವುದು. ಈ ಮಠದ ದತ್ತಿ ನೀಡುವವರು ಸೋಂದ–ಸ್ವರ್ಣವಲ್ಲಿಯ ರಾಜರುಗಳು.

ನಾಯನರು ಈ ಮಠಕ್ಕೆ ಭೇಟಿಕೊಟ್ಟಾಗ ಇದರ ಮುಖ್ಯಸ್ಥರು ಶ್ರೀ ಸರ್ವಜ್ಞೇಂದ್ರ ಸರಸ್ವತಿಯವರಾಗಿದ್ದರು. ಅವರು ಈಗಾಗಲೇ ನಾಯನರ ಬಗ್ಗೆ ಕೇಳಿದ್ದರು ಹಾಗೂ ಅವರು ನಾಯನರನ್ನು ಉಪಚರಿಸುವುದು ಒಂದು ಒಳ್ಳೆಯ ಅದೃಷ್ಟವೆಂದು ಭಾವಿಸಿದ್ದರು. ಹೃದಯ ತುಂಬಿದ ಗೌರವದಿಂದ ಅವರು ನಾಯನರಿಗೆ ಎಲ್ಲ ಅನುಕೂಲಗಳನ್ನೂ ಕೊಡಮಾಡಿದರು. ಸ್ವಲ್ಪ ಹೊತ್ತಿನ ವಿಶ್ರಾಂತಿಯ ನಂತರ ನಾಯನರು ಮಠದ ಬೆಳವಣಿಗೆಯ ಬಗ್ಗೆ ವಿಚಾರಿಸಿದರು.

ಹಿಂದೆ ಪೀಠವು ಅತ್ಯಂತ ವೈಭವದಿಂದ ಅಭಿವೃದ್ಧಿ ಹೊಂದಿತ್ತಾದರೂ ಇತ್ತೀಚೆಗೆ ಪೀಠದ ಪೋಷಕರಾದ ಸೋಂದ–ಸ್ವರ್ಣವಲ್ಲಿಯ ರಾಜರು ಕೋರ್ಟಿನ ಕೇಸುಗಳಲ್ಲಿ ಸಿಕ್ಕಿಕೊಂಡು, ಮಠದ ಅಗತ್ಯತೆಗಳೆಡೆಗೆ ಗಮನ ಹರಿಸುತ್ತಿಲ್ಲವೆಂದು ಮಠದ ಪೀಠಾಧಿಪತಿಯು ಭಾರವಾದ ಹೃದಯದಿಂದ ಹೇಳಿದರು. ಮೂರು ವರ್ಷಗಳಿಂದ ಮಠದಲ್ಲಿನ ನಿತ್ಯ ಪೂಜೆಗೂ ಹಣದ ಕೊರತೆಯಾಗಿದೆ ಎಂದರು. ಭಕ್ತರ ಕಾಣಿಕೆಯಿಂದ ಹೇಗೋ ಮಠವನ್ನು ನಡೆಸಿಕೊಂಡು ಹೋಗುತ್ತಿರುವುದಾಗಿ ತಿಳಿಸಿದರು.

ಈ ಕಥೆಯನ್ನು ಕೇಳಿದ ನಾಯನರ ಕಣ್ಣುಗಳು ಅಶ್ರುವಿನಿಂದ ತುಂಬಿಬಂದು ಬಹಳವಾಗಿ ದುಃಖಿತರಾದರು. ರಾಜರುಗಳು ಪರಕೀಯರ ಆಳ್ವಿಕೆಗೆ ತಮ್ಮನ್ನು ಅರ್ಪಿಸಿಕೊಂಡು ಶರಣಾಗಿರುವಂತಹ ದೀನಾವಸ್ಥೆಯನ್ನು ಕಂಡು ಮಮ್ಮಲ ಮರುಗಿದರು.

ಉದಿತ ವಿರೋಧಾ ಸ್ವಯುತಭಿದಾಸು
ಚತಸೃಷು ಜಾತಿಷ್ವಬಲತಮಾಸು ॥

"ನಾಲ್ಕು ಜಾತಿಗಳಲ್ಲಿ ಅನೇಕ ಆಂತರಿಕ ಭಿನ್ನಾಭಿಪ್ರಾಯಗಳಿವೆ. ಹಾಗೇ ಅವರ ನಡುವೆ ಅನೇಕ ಬಾರಿ ಆಂತರಿಕ ಹೊಡೆದಾಟಗಳೂ ಆಗಿವೆ."

ಮುಹುರಪಿ ಲೋಕೇ ಕ್ಷಿತಿಸುರಶೀಲೇ ಅಜಗಣಕಲ್ಪೇ ಭುಜಭುವಸಂಘೇ ॥

ಅನೇಕ ವ್ಯಸನಗಳಿಗೆ ಬಲಿಯಾಗಿ ಬ್ರಾಹ್ಮಣರು ತಮ್ಮ ಗುಣಗಳನ್ನು ಕಳೆದುಕೊಂಡರು. ಅವರುಗಳು ತಮ್ಮ ತಮ್ಮಲ್ಲೇ ಹೋರಾಡಲು ಪ್ರಾರಂಭಿಸಿದರು."

ಸುರವಿರೋಧಿವ್ರತಹೃತಸಾರಾಂ ಅವಿರತನೇತ್ರ ಸೃತಜಲಧಾರಾಂ
ಭರತಧರಿತ್ರೀಂ ಭುವನನೃಪಾಲಃ ಅವತು ದಯಾಲುಃ ಸಿತಗಿರಿಶಾಲಃ ॥

"ಸತತವಾಗಿ ರೋದಿಸುತ್ತಿರುವ ಮತ್ತು ಶತ್ರುಗಳ ಕೃತ್ರಿಮತೆಗಳಿಂದ ತನ್ನೆಲ್ಲ ಶಕ್ತಿಗಳನ್ನು ಕಳೆದುಕೊಂಡಿರುವ ಭರತಭೂಮಿಯನ್ನು ಬೆಳ್ಳಿಯ ಪರ್ವತದಲ್ಲಿ ನೆಲೆಸಿರುವ ಭಗವಾನ್ ಶಿವನು ರಕ್ಷಿಸಲಿ."

ಈ ರೀತಿಯಾಗಿ ಪ್ರಾರ್ಥನೆ ಮಾಡಿದ ಕೂಡಲೇ ನಾಯನರಿಗೆ ಅರುಣಾಚಲನ ದರ್ಶನವಾಯಿತು. ನಾಯನರು, "ನಾನು ಭಾರತೀಯರ ಪ್ರತಿನಿಧಿಯಾಗಿ ನಿನ್ನೆಡೆಗೆ ಬಂದು ಪ್ರಾರ್ಥಿಸುತ್ತಿರುವೆ" ಎಂದರು.

ಅರುಣಧರಿತ್ರೀಧರ ಹರ ದೂನಾಂ ಭರತಧರಿತ್ರೀ ಮವ ಶಿವ ದೀನಾಮ್ ॥

"ಓ ಶಿವನೇ! ತೀವ್ರ ಯಾತನೆಯನ್ನು ಅನುಭವಿಸುತ್ತಿರುವ ನಮ್ಮ ಭರತ ಭೂಮಿಯನ್ನು ದಯಮಾಡಿ ರಕ್ಷಿಸು."

ಹರ ಭರತಕ್ಷ್ಮಾಜನವರದೂತಂ ಕುರುಚರಿತಾರ್ಥಂ ಗಣಪತಿ ಮೇತಮ್ ॥

"ಓ ಶಿವ! ಭರತ ಭೂಮಿಯ ಸಂದೇಶವಾಹಕನಾಗಿ ನಾನು ನಿನ್ನ ಬಳಿ ಬಂದಿರುವೆ. ಗಣಪತಿಯಾದ ನನ್ನ ಉದ್ದೇಶವು ಫಲಿಸುವಂತೆ ಮಾಡು."

ನಾಯನರ ಪ್ರಾರ್ಥನೆಯನ್ನು ಕೇಳಿಸಿಕೊಂಡ ಪೀಠಾಧಿಪತಿಗಳಿಗೆ ಶಿವ ಹಾಗೂ ವಿಷ್ಣುವು ಅಲ್ಲೇ ಪ್ರತ್ಯಕ್ಷರಾದ ಅನುಭವವಾಯಿತು. ನಾಯನರ ವಿಶ್ರಾಂತಿಗಾಗಿ ಛಡತಿಯನ್ನು ಎಲ್ಲಾದರೂ ವಾಹನವನ್ನು ನಿಲ್ಲಿಸಬೇಕೆಂದು ಪೀಠಾಧಿಪತಿಗಳು ಕೇಳಿಕೊಂಡರು. ಅವರು ಮಠದ ದುಃಸ್ಥಿತಿಯನ್ನು ನಾಯನರಿಗೆ ವಿವರಿಸಿ ಅವರಿಗೆ ತೊಂದರೆಯನ್ನು ಕೊಟ್ಟಿದ್ದಕ್ಕೆ ವಿಷಾದಿಸಿದರು. ಹೀಗಾಗಿ ಅವರು ನಾಯನರಿಗೆ, "ಆಚಾರ್ಯ! ನಿಮ್ಮ ಪ್ರಾರ್ಥನೆಯು ಪೀಠಕ್ಕೆ ಆಶೀರ್ವಾದವೆಂದು ನಾನು ಪರಿಗಣಿಸುವೆ. ನಾನು ಇಂದಿನಿಂದ ಆದಿ ಶಂಕರರಂತೆ ನನ್ನನ್ನು ದೇಶೋದ್ಧಾರಕ್ಕೆ ತೊಡಗಿಸಿಕೊಳ್ಳುವೆ." ಎಂದರು.

ನಾಯನರು, "ಸರಿ! ಅದೇ ಶಂಕರರ ಗುರಿಯಾಗಿತ್ತು. ಈ ಪೀಠಗಳನ್ನು ಆ ಉದ್ದೇಶಕ್ಕಾಗಿಯೇ ಪ್ರಾರಂಭಿಸಿದ್ದು," ಎಂದರು.

ನಾಯನರು ಆ ರಾತ್ರಿ ಮಠದಲ್ಲೇ ತಂಗಿದ್ದು ಮಾರನೇ ದಿನ ಕುಲುವೆಗೆ ಹೊರಡುವ ಮೊದಲು ಒಂದು ಕಾಗದದಲ್ಲಿ ಪ್ರಾರ್ಥನೆಯನ್ನು ಬರೆದು ಅದನ್ನು ಪೀಠಾಧಿಪತಿಗಳಿಗೆ ಕೊಟ್ಟು ಅದನ್ನು ಪೂಜಾ ಮಂಟಪದಲ್ಲಿ ಇರಿಸಬೇಕೆಂದು ಸೂಚಿಸಿದರು. ಸ್ವಲ್ಪ ದಿನಗಳ

ನಂತರ ಮಠದ ಪೋಷಕರು ಕೋರ್ಟ್ ಕೇಸಿನಲ್ಲಿ ಜಯಗಳಿಸಿದರು ಹಾಗೂ ಅವರು ಮಠದ ಅಗತ್ಯಗಳನ್ನು ಪೂರೈಸಲು ಪ್ರಾರಂಭಿಸಿದರು. ಈ ಬದಲಾವಣೆಗೆ ತಾಯಿಯ ಆಶೀರ್ವಾದವೇ ಕಾರಣವೆಂದು, ಮಠದವರು ಅವರು ಕಾಗದದ ಮೇಲೆ ಬರೆದುಕೊಟ್ಟ ಪ್ರಾರ್ಥನೆಯನ್ನು ಗಾಜಿನ ಪೆಟ್ಟಿಗೆಯಲ್ಲಿ ಇಟ್ಟು ಅದನ್ನು ಎಲ್ಲರ ಓದಲಿಕ್ಕೆ ಅನುಕೂಲಮಾಡಿಕೊಟ್ಟರು.

೧೬

ನಾಯನರ ತಮ್ಮನ ಮರಣ

ಪೋಷವಿಧಾನೇ ಶೀತಂ ದೈವಂ ಶೋಷವಿಧಾನೇ ತಪನಂ ದೈವಂ
ಸರ್ಗವಿಧಾನೇ ವಿಕಸದ್ದೈವಂ ಪ್ರಲಯವಿಧಾನೇ ಮೀಲದ್ದೈವಮ್ ॥

"ಚಟುವಟಿಕೆಗಳನ್ನು ಉಳಿಸಿಕೊಳ್ಳಲು ದೈವವು ಶಾಂತವಾಗಿರುವುದು, ಅವುಗಳನ್ನು ಒಣಗಿಸಲು (ನಿಲ್ಲಿಸಲು) ಅದು ಬಿಸಿಯಾಗುವುದು, ಸೃಜನಾತ್ಮಕ ಚಟುವಟಿಕೆಗಳಲ್ಲಿ ಅರಳುವುದು, ಮತ್ತು ವಿನಾಶದ ಕಾರ್ಯದಲ್ಲಿ ಒಂದೆಡೆ ಸೇರುವುದು."

ನಾಯನರು ಈ ಹಿಂದೆ ಗೋಕರ್ಣದಲ್ಲಿ ಬಹಳ ಕಾಲ ನೆಲೆಸಿದ್ದರಿಂದ, ಗೋಕರ್ಣದ ಸುತ್ತಮುತ್ತಲಿನ ಅನೇಕ ಜನಗಳು ನಾಯನರ ಭಕ್ತರಾಗಿದ್ದರು. ನಾಯನರ ಶಿಷ್ಯ ದೈವರಾತನನ್ನೂ ಅವರುಗಳು ಗೌರವಿಸುತ್ತಿದ್ದರು. ಆದ್ದರಿಂದ ಗೋಕರ್ಣದಲ್ಲಿ ಜನಗಳೆಲ್ಲರೂ ನಾಯನರ ಹುಟ್ಟುಹಬ್ಬವನ್ನು ಆದ್ದೂರಿಯಾಗಿ ಆಚರಿಸಿದರು ಹಾಗೂ ನಾಯನರ ಕಾಲಾನಂತರವೂ ಅವರ ಕಾಲವಾದ ದಿನವನ್ನೂ ಸೂಕ್ತವಾಗಿ ಆಚರಿಸುತ್ತಿದ್ದರು.

ನಾಯನರು ಕುಳುವೆಗೆ ಬರುವ ಹೊತ್ತಿಗಾಗಲೇ ಸುತ್ತ ಮುತ್ತಲಿನ ಹಳ್ಳಿಯಲ್ಲಿನ ಜನಗಳು ಅವರ ದರ್ಶನವನ್ನು ಮಾಡಲು ಆಗಲೇ ಅಲ್ಲಿ ಸೇರಿದ್ದರು. ಸ್ಥಳೀಯರು ನಾಯನರನ್ನು ವೇದ ಪದ್ಧತಿಯಂತೆ ಹಾರ್ದಿಕವಾಗಿ ಸ್ವಾಗತಿಸಿದರು. ನಾಯನರ ವಸತಿಗಾಗಿ ಒಂದು ಗುಡಿಸಿಲನ್ನು ಕಟ್ಟಲಾಯಿತು. ಪ್ರತಿನಿತ್ಯವೂ ನಾಯನರ ಹಸ್ತದಿಂದ ತೀರ್ಥವನ್ನು ಪಡೆಯಲು ಸಾವಿರಾರು ಭಕ್ತರು ಬರತೊಡಗಿದರು. ಸಂಜೆಯ ಹೊತ್ತಿನಲ್ಲಿ ನಾಯನರ ಭಾಷಣವನ್ನು ಕೇಳಲು ಅನೇಕ ಮಂದಿ ಬರುತ್ತಿದ್ದರು. ಈ ಸಂದರ್ಭವನ್ನು ನಾಯನರು ರಮಣ ಮಹರ್ಷಿಗಳ ತತ್ವಗಳನ್ನು ಪ್ರಚಾರ ಮಾಡಲು ಉಪಯೋಗಿಸಿಕೊಳ್ಳುತ್ತಿದ್ದರು. ಜನಗಳು ನಾಯನರೆದುರಿಗೆ ತಮ್ಮ ಕಷ್ಟ, ದುಃಖವನ್ನು ಹೇಳಿಕೊಳ್ಳುತ್ತಿದ್ದರು ಹಾಗೂ ಅವರು ನೀಡುವ ಪವಿತ್ರ ತೀರ್ಥವು ಜನಗಳ ದುಃಖವನ್ನು ಕಡಿಮೆ ಮಾಡುತ್ತಿತ್ತು. ನಾಯನರು ಶಾಂತಿಯುತವಾದ ಶಕ್ತಿಯಾದ ಅಂಬಿಕಾ ಶಕ್ತಿಯ ಬಗ್ಗೆಯೂ ಮಾತನಾಡುತ್ತಿದ್ದರು. ಅದು ಪ್ರಕೃತಿಯ ಸುಂದರ ಶಕ್ತಿ.

...ಮ್ಮೆ ಕುಳುವೆಯ ಜನರು ನಾಯನರ ಧಾರ್ಮಿಕ ಭಾಷಣವನ್ನು ಕೇಳಲು ಒಂದು ... ಡಿಸಿದರು. ಹಳ್ಳಿಯ ಹೊರಭಾಗದಲ್ಲಿ ಒಂದು ದೊಡ್ಡ ವೇದಿಕೆಯನ್ನು

ನಿರ್ಮಿಸಿ, ಸುತ್ತಲಿನ ಜಾಗವನ್ನು ಜನರು ಕುಳಿತುಕೊಳ್ಳಲು ಹುಲ್ಲನ್ನು ಹಾಸಿದರು. ನಾಯನರು ಮಾತನಾಡಲು ಪ್ರಾರಂಭಿಸುತ್ತಿದ್ದಂತೆ ಎಲ್ಲೆಡೆ ನಿಃಶಬ್ದದ ವಾತಾವರಣ ನೆಲೆಸಿತು. ಇದ್ದಕ್ಕಿದ್ದಂತೆ 4–5 ಹುಲ್ಲಿನ ಬಣವೆಗಳು ಬೆಂಕಿಯಲ್ಲಿ ಹೊತ್ತಿ ಉರಿಯತೊಡಗಿತು. ಜನಗಳು ಗಾಬರಿಯಾಗತೊಡಗಿದರು, ಆದರೆ ನಾಯನರು ಜನರನ್ನು ಶಾಂತರಾಗಿರೆಂದು ಹೇಳಿ ಋಗ್ವೇದದ ಮಂತ್ರ – "ವನೇಮ ಪೂರ್ವಿರ್ಯೋರ್ ಮನೀಷಾ ಅಗ್ನಿಃ ಸುಶೋಕೋ ವಿಶ್ವಾನ್ಯಸ್ಯಾಃ"ವನ್ನು ಪಠಿಸಿ ಬೆಂಕಿಯೆಡೆಗೆ ಒಂದು ಒಣ ಹುಲ್ಲುಕಡ್ಡಿಯನ್ನು ಎಸೆದರು. ಆಶ್ಚರ್ಯಕರವಾದ ರೀತಿಯಲ್ಲಿ ಗಾಳಿಯು ಉರಿಯುತ್ತಿದ್ದ ಹುಲ್ಲನ್ನು ದಿಕ್ಕಾಪಾಲಾಗಿ ಚದುರಿಸಿತು. ಅದು ಬೆಂಕಿಯನ್ನು ನಿಃಶಕ್ತವನ್ನಾಗಿ ಮಾಡಿತು ಹಾಗೂ ಕ್ರಮೇಣ ಹತೋಟಿಗೆ ಬಂದಿತು. ಅನಂತರ ಉಳಿದ ಬೆಂಕಿಯ ಮೇಲೆ ನೀರನ್ನು ಸುರಿದು ಸಂಪೂರ್ಣವಾಗಿ ಆರಿಸಲಾಯಿತು. ನಾಯನರು ಈ ಘಟನೆಯನ್ನು ಅಪಶಕುನದ ಸಂಕೇತವೆಂದು ನಿರ್ಧರಿಸಿದರು, ಈ ಘಟನೆಯಿಂದ ನಾಯನರ ಬಗ್ಗೆ ಜನಗಳ ನಂಬಿಕೆ ವಿಶ್ವಾಸಗಳು ಅನೇಕ ಪಟ್ಟು ಹೆಚ್ಚಿತು.

ಕಲುವರೈನಲ್ಲಿನ ನಾಯನರ ಸಂಬಂಧಿಗಳು ನಾಯನರ ಅನಾರೋಗ್ಯದ ವಿಷಯವನ್ನರಿತು ಹಾಗೂ ಅವರು ಈಗ ವಿಶ್ರಾಂತಿಗಾಗಿ ಕುಳುವೆ ಹಳ್ಳಿಗೆ ಹೋಗಿರುವ ವಿಷಯವನ್ನು ಕೇಳಿದರು. ಅವರಿಗೆ ತೀವ್ರವಾದ ಚಿಂತೆಯಾಗತೊಡಗಿತು. ನಾಯನರ ತಂದೆಯವರ ಕಾಲಾನಂತರ ಅವರ ಸಹೋದರ ಪ್ರಕಾಶ ಶಾಸ್ತ್ರಿಯು ನಾಯನರ ಉಳಿದ ಸಹೋದರರಾದ ಭೀಮಾ ಶಾಸ್ತ್ರಿ ಹಾಗೂ ಶಿವರಾಮ ಶಾಸ್ತ್ರಿಗಳ ಸಹಾಯದಿಂದ ನಾಯನರ ಕೆಲಸ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದರು. ಶಿವರಾಮ ಶಾಸ್ತ್ರಿಗಳನ್ನು ನಾಯನರನ್ನು ಕರೆತರುವಂತೆ ಕುಳುವೆಗೆ ಕಳಿಸಿದರು.

ಶಿವರಾಮ ಶಾಸ್ತ್ರಿಯು ನಾಯನರ ಸಹೋದರರಲ್ಲದೇ ಅವರ ತಪಸ್ಸಿನ ಸಂಗಾತಿಯಾಗಿದ್ದರು. ಅವರು ಕುಳುವೆಗೆ ಬಂದಿದ್ದು ನಾಯನರಿಗೆ ಸಂತೋಷವಾಯಿತು. ಅವರು ನಾಯನರನ್ನು ಅವರು ಹೋದಲ್ಲೆಲ್ಲಾ ಅನುಸರಿಸಿ ಅವರನ್ನು ತನ್ನ ಶಕ್ತಿ ಮೀರಿ ಸೇವಿಸುತ್ತಿದ್ದರು. ಅವರಿಬ್ಬರೂ ಈಗ ಭೇಟಿಯಾದಾಗ ಇಬ್ಬರೂ ಒಬ್ಬರನ್ನೊಬ್ಬರು ತಬ್ಬಿಕೊಂಡು ಕಣ್ಣೀರು ಸುರಿಸಿದರು. ಶಿವರಾಮನು ನಾಯನರ ಆರೋಗ್ಯ ಸರಿಯಿಲ್ಲದಿರುವುದರಿಂದ ಅವರನ್ನು ಮನೆಗೆ ಬರಲು ಕೇಳಿಕೊಂಡನು. ನಾಯನರು ತಾವು ಕುಳುವೆಯಲ್ಲಿ ಆರೋಗ್ಯವಾಗಿರುವುದಾಗಿಯೂ ಹಾಗೂ ಇಲ್ಲಿನ ಜನಗಳು ಅವರನ್ನು ಚೆನ್ನಾಗಿ ನೋಡಿಕೊಳ್ಳುತ್ತಿರುವವರೆಂದೂ ಉತ್ತರಿಸಿದರು. ಆ ರಾತ್ರಿ ಅವರಿಬ್ಬರೂ ಚೆನ್ನಾಗಿ ನಿದ್ರಿಸಿದರು. ಮಾರನೇ ದಿನ ಸಹೋದರರಿಬ್ಬರೂ ಸ್ನಾನಾನ್ಹಿಕಗಳನ್ನು ಮುಗಿಸಿಕೊಂಡು ಧ್ಯಾನಕ್ಕೆ ಕುಳಿತುಕೊಂಡರು. ಸ್ವಲ್ಪ ಸಮಯದ ನಂತರ ಶಿವರಾಮನಿಗೆ ಎದೆಯಲ್ಲಿ ಸಣ್ಣದಾಗಿ ನೋವಾಗತೊಡಗಿತು. ಅವರು ಈ ವಿಷಯವನ್ನು ನಾಯನರಿಗೆ ತಿಳಿಸಿದರು. ಅನಂತರ

ರಾಮರು ಮಜ್ಜಿಗೆಯಲ್ಲಿ ಸ್ವಲ್ಪ ಅನ್ನವನ್ನು ತಿಂದರು ಮತ್ತು ಇದ್ದಕ್ಕಿದ್ದಂತೆ ಎದೆ ನೋವು ವಾಯಿತು. ಶಿವರಾಮರು ಮುರುಬಾರಿ ಕೂಗಿದರು ಹಾಗೂ ಮೂರು ಬಾರಿ ವೇಗವಾಗಿ ಸಿರಾಡಿ. ಕೂಡಲೇ ನಾಯನರ ತೋಳಿನಲ್ಲಿ ಕುಸಿದು ಬಿದ್ದು ಸಾವನ್ನಪ್ಪಿದರು. ಅಂದು -02-1930 ಆಗಿತ್ತು.

"ನನ್ನ ತಮ್ಮನು ಇನ್ನಿಲ್ಲ. ಅವನು ನನ್ನ ಬಳಿ ಬಂದು ನಾಯಕನಂತೆ ಅಸುನೀಗಿದನು," ಎಂದು ನಾಯನರು ದುಃಖದಿಂದ ಉದ್ಗರಿಸಿದರು. ಅನಂತರ ನಾಯನರು ಶಿವರಾಮನ ಅಂತ್ಯಕ್ರಿಯೆಗಳನ್ನು ನಡೆಸಿದರು.

ಆ ರಾತ್ರಿ ನಾಯನರಿದ್ದ ಗುಡಿಸಿಲಿನ ಮಾಲೀಕನ ಹೆಂಡತಿ, ಸೀತಮ್ಮನಿಗೆ ಕನಸೊಂದು ಆಯಿತು. ಅದರಲ್ಲಿ ಅವಳಿಗೆ ಹೆಂಗಸೊಬ್ಬಳು ಮೃತಶರೀರವನ್ನು ಅಲ್ಲಾಡಿಸುತ್ತಿರುವಂತೆ ಕಾಣಿಸಿತು. ಶಿವರಾಮನು ಆ ಮೃತಶರೀರದಿಂದ ಪ್ರಕಾಶಮಾನವಾದ ಯುವಕನಂತೆ ಹೊರಬಂದನು. ಸೀತಮ್ಮನು, "ನೀನು ಬದುಕಿರುವೆಯಾ?" ಎಂದು ಕೇಳಿದಳು. ಅದಕ್ಕೆ ಶಿವರಾಮನು "ಹೌದು" ಎಂದು ಹೇಳಿ, "ನಾನು ತಪಸ್ಸಿಗಾಗಿ ನರ್ಮದಾ ನದಿಯ ತೀರಕ್ಕೆ ಹೋಗುವೆ" ಎಂದು ಹೇಳಿ ಅಂತರ್ಧಾನನಾದ. ಸೀತಮ್ಮನು ನಾಯನರಿಗೆ ತನ್ನ ಕನಸಿನ ವಿಷಯವನ್ನು ಹೇಳಿದಳು. ಭಾರವಾದ ಧ್ವನಿಯಿಂದ ನಾಯನರು, "ಅವನು ತಪಸ್ಸಿನಿಲ್ಲಿ ತೀವ್ರವಾಗಿ ನಿರತನಾಗಿದ್ದ, ತೀರ್ಥ ಕ್ಷೇತ್ರಗಳನ್ನು ತೀವ್ರವಾಗಿ ಪ್ರೀತಿಸುತ್ತಿದ್ದ, ಈಗ ನರ್ಮದೆಯ ಬಳಿ ತಪಸ್ಸನ್ನಾಚರಿಸಲು ಹೊರಟುಹೋದ. ವಿಧಿಯ ಲೀಲೆಯು ಕೆಲಸ ಮಾಡುತ್ತಿದೆ" ಎಂದು ಹೇಳಿದರು.

ಚಿಕ್ಕಪ್ಪ ಶಿವರಾಮನು ತೀರಿಕೊಂಡ ನಂತರ ಮಗ ಮಹಾದೇವನಿಗೆ ತಂದೆಯ ಯೋಗಕ್ಷೇಮವನ್ನು ನೋಡಿಕೊಳ್ಳುವ ಜವಾಬ್ದಾರಿಯು ಬಂದಿತು. ಅವನು ಪತ್ನಿಯೊಂದಿಗೆ ತಂದೆಯನ್ನು ಸೇವಿಸಲು ಕುಳುವೆಗೆ ಬಂದನು.

೧೭

ಸತ್-ದರ್ಶನಮ್

ಸತ್ ತ್ವಸಾರಂ ಸರಲಂ ದಧಾನಾ ಮುಮುಕ್ಷುಲೋಕಾಯ ಮುದಂ ದಧಾನಾ
ಅಮಾನುಷಶ್ರೀರಮಣೀಯವಾಣೀಮಯೂಖ್ಯಭಿತ್ತಿರ್ಮುನಿವಾಗ್ವಿಭಾತಿ ॥
– ಸತ್-ದರ್ಶನಮ್, ಫಲಶ್ರುತಿ

"ಮಹಾಮಾನವ ರಮಣರ ನುಡಿಯು ಸತ್ಯದ ಸಾರವನ್ನು ಹೊರಹೊಮ್ಮಿಸುವ ಮತ್ತು ಸತ್ಯಾನ್ವೇಷಕರಿಗೆ ಅಪಾರ ಆನಂದವನ್ನು ನೀಡುವ ಗಣಪತಿ ಮುನಿಯ ಮಾತುಗಳ ಮೂಲಕ ಪ್ರಕಾಶಿಸುವುದು."

ಪ್ರತಿಯೊಬ್ಬ ಅನ್ವೇಷಕನೂ ಸ್ವಾಭಾವಿಕವಾಗಿ ಸತ್ಯವನ್ನು ಕಂಡುಕೊಳ್ಳಲು ಬಯಸುತ್ತಾನೆ. ಅನ್ವೇಷಕರು ಇದನ್ನು ಕಂಡುಕೊಳ್ಳಲು, ಪೂಜೆ, ಸತತ ನಾಮಸ್ಮರಣೆ, ಹಾಗೂ ತಪಸ್ಸೇ ಮೊದಲಾದ ಅನೇಕ ಮಾರ್ಗಗಳನ್ನು ಅನುಸರಿಸುತ್ತಾರೆ. ಇದರ ಫಲವಾಗಿ ಕೆಲವು ಅನ್ವೇಷಕರು ಗುರಿಯನ್ನು ತಲುಪಲು ತೀವ್ರವಾದ ಹಂಬಲವನ್ನು ಬೆಳೆಸಿಕೊಳ್ಳುವರು. ಅನ್ವೇಷಕರ ಕ್ಷಮತೆಯನ್ನು ಅವರೇ ಕೆಲವು ತತ್ವಗಳ ಒರೆಗಲ್ಲಿನ ಆಧಾರದ ಮೇಲೆ ಪರೀಕ್ಷಿಸಿಕೊಳ್ಳಬೇಕು. ಅವರು ತಮ್ಮನ್ನೇ ಈ ರೀತಿಯಾಗಿ ಪ್ರಶ್ನಿಸಿಕೊಳ್ಳಬೇಕು:

1. ನಾನು ಇಷ್ಟ ಪಟ್ಟ ಕೆಲಸವನ್ನು ಬಿಟ್ಟು ಇಷ್ಟವಿಲ್ಲದ ಕೆಲಸವನ್ನು ಅರಿಸಿಕೊಳ್ಳಬಹುದೇ?
2. ಬೇರೆ ಯಾರಾದರೂ ಸತ್ಯಾನ್ವೇಷಣೆಯ ಮಾರ್ಗವನ್ನು ಅನುಸರಿಸಿದಲ್ಲಿ ನನ್ನ ಈಗಿನ ಜೀವನ ಶೈಲಿಯು ಸಂಪೂರ್ಣವಾಗಿ ಬದಲಾಗುವುದೆಂದು ಹೇಳಿದಲ್ಲಿ, ನಾನು ಈಗಿನ ಜೀವನ ಶೈಲಿಯನ್ನು ತೊರೆದು ಬದಲಾಗ ಬಹುದಾದ ಜೀವನ ಶೈಲಿಯನ್ನು ಅನುಸರಿಸಲು ಸಿದ್ಧನಿದ್ದೇನೆಯೇ?
3. ಸತ್ಯಾನ್ವೇಷಣೆಯು ಅತ್ಯಂತ ಕಷ್ಟಕರವಾದರೂ ನಾನು ಈ ಸಾಧನೆಯನ್ನು ಅವಿರತವಾಗಿ ಮುಂದುವರೆಸಲು ಸಿದ್ಧನಿದ್ದೇನೆಯೇ?
4. ನಾನು ಸಾವನ್ನು ಎದುರಿಸುವ ಸಂದರ್ಭ ಉಂಟಾದಾಗಲೂ, ನಚಿಕೇತನ ತರಹ, ಸತ್ಯಾನ್ವೇಷಣೆಯನ್ನು ಮುಂದುವರೆಸಲು ಸಿದ್ಧನಿದ್ದೇನೆಯೇ?

ಸತ್ಯಾನ್ವೇಷಕನು ಈ ಪ್ರಶ್ನೆಗಳಿಗೆ ಸದೃಢತೆಯಿಂದ ಉತ್ತರಿಸಿದಲ್ಲಿ ಅವನು ನಿಜವಾಗಿಯೂ

ಮುಕ್ತಿಯನ್ನು ಹೊಂದಬಲ್ಲನು. ಸತ್-ದರ್ಶನವು ಅನ್ವೇಷಕನನ್ನು ಸುರಕ್ಷಿತವಾಗಿ ಸತ್ಯಾನ್ವೇಷಣೆಯ ಗುರಿಯನ್ನು ತಲುಪಲು ಮಾರ್ಗದರ್ಶನವನ್ನು ಮಾಡುತ್ತದೆ.

ಶ್ರೀ ರಮಣ ಮಹರ್ಷಿಗಳು ತಮಿಳು ಭಾಷೆಯಲ್ಲಿ "ಉಲ್ಲಾಡು ನಾರ್ಪಡು" ಎಂಬ ಗ್ರಂಥವನ್ನು ಬರೆದರು. ಇದನ್ನು ಉಪನಿಷತ್ತುಗಳು ಹಾಗೂ ಬ್ರಹ್ಮಸೂತ್ರಕ್ಕೆ ಸರಿಸಮಾನವಾದದ್ದೆಂದು ಪರಿಗಣಿಸಬಹುದು. ನಾಯನರನ್ನು ಭಗವಾನರು ಈ ಗ್ರಂಥವನ್ನು ಸಂಸ್ಕೃತ ಭಾಷೆಗೆ ಭಾಷಾಂತರಿಸಲು ಆದೇಶಿಸಿದರು.

ಕಡೆಗೆ ನಾಯನರು ಮಹಾದೇವನೊಂದಿಗೆ ಕಲುವರ್ರೈಗೆ ಹೋಗಿ ಅಲ್ಲಿ ನಾಲ್ಕು ತಿಂಗಳು ನೆಲಸಿದರು. ಫೆಬ್ರವರಿ 1931ರಲ್ಲಿ ಶಿರಸಿ ನಾಗರಿಕರ ಸತತವಾದ ಬೇಡಿಕೆಯಿಂದಾಗಿ ಶಿರಸಿಗೆ ಮರಳಿದರು.

ಪುಂಡರೀಕ ರಾಯ ಎಂಬ ವ್ಯಕ್ತಿಯು ಕೆಲವು ಕಾಲ ವಿದೇಶದಲ್ಲಿದ್ದು, ಅಲ್ಲಿ ಬ್ಯಾರಿಸ್ಟರ್ ಆಗಿ ಕೆಲಸ ಮಾಡಿ, ನಂತರ ಶಿರಸಿಗೆ ಮರಳಿ ಬಂದು ತನ್ನ ಉಳಿದ ಜೀವನವನ್ನು ನೆಮ್ಮದಿ ಹಾಗೂ ಶಾಂತಿಯಿಂದ ಕಳೆಯಲು ಒಂದು ಆಶ್ರಮವನ್ನು ನಿರ್ಮಿಸಿಕೊಂಡನು. ಆದರೆ ಕೆಲವು ಕಾರಣಗಳಿಂದಾಗಿ ಅವನು ಆಶ್ರಮದಲ್ಲಿ ನೆಲಸಲಾಗಲಿಲ್ಲ. ಹಾಗಾಗಿ ಆ ಆಶ್ರಮದಲ್ಲಿ ನಾಯನರು ಇರಲು ವ್ಯವಸ್ಥೆಯನ್ನು ಮಾಡಲಾಯಿತು. ಈ ಆಶ್ರಮವನ್ನು ಆನಂದಾಶ್ರಮ ಎಂದು ಕರೆಯಲಾಗುತ್ತಿತ್ತು.

ನಾಯನರ ಅಗತ್ಯಗಳನ್ನು ಶಿರಸಿಯ ನಾಗರೀಕರಾದ ಶ್ರೀ ಎಸ್.ಡಿ.ವಿಶ್ವಾಮಿತ್ರ, ಎಸ್.ಪಿ.ಪಂಡಿತ್, ಸುಂದರ ಪಂಡಿತ್ ಹಾಗೂ ಇತರರು ನೋಡಿಕೊಳ್ಳುತ್ತಿದ್ದರು. ಕಪಾಲಿ ಶಾಸ್ತ್ರಿಗಳು ತಮ್ಮ ಸಂಸಾರದೊಂದಿಗೆ ಇಲ್ಲಿಗೆ ಬಂದರು. ಶಿರಸಿ ನಾಗರೀಕರಿಗೆ ಸಂತೋಷವಾಗುವಂತೆ ನಾಯನರು ಕನ್ನಡದಲ್ಲಿ ಭಾಷಣ ಮಾಡುತ್ತಿದ್ದರು. ಪ್ರತಿನಿತ್ಯವೂ ವೇದಗಳ ಪಠನ, ಜಪ ಮತ್ತು ಹೋಮಗಳು ತಪ್ಪದೇ ನಡೆಯುತ್ತಿತ್ತು. ಅಲ್ಲಿನ ವಾತಾವರಣವು ಪುರಾಣಕಾಲದ ಋಷಿಮುನಿಗಳ ಆಶ್ರಮವನ್ನು ನೆನಪಿಗೆ ತರುತ್ತಿತ್ತು.

ವಿಶ್ವನಾಥ ಬ್ರಹ್ಮಚಾರಿಯು ಸ್ವತಃ ತಾನೇ ಭಗವಾನರ ತಮಿಳಿನಲ್ಲಿ ರಚಿಸಿದ ಕೃತಿಯಾದ "ಉಲ್ಲಾಡು ನಾರ್ಪಡು" ವನ್ನು ತಂದು ನಾಯನರಿಗೆ ನೀಡಿ ಭಗವಾನರ ಸಂದೇಶವನ್ನು ತಲುಪಿಸಿದನು. ನಾಯನರು ಅತ್ಯಂತ ಹರ್ಷದಿಂದ ಅದನ್ನು ಸ್ವೀಕರಿಸಿ ಅವರ ಆಜ್ಞೆಯನ್ನು ಶಿರಸಾ ಪಾಲಿಸುವುದಾಗಿ ತಿಳಿಸಿದರು. ಅಲ್ಲದೆ ಅವರು ಕೂಡಲೇ ಭಗವಾನರಿಗೆ ತಮಗೆ ವಹಿಸಿದ ಭವ್ಯವಾದ ಕೆಲಸವನ್ನು ಸಂಪೂರ್ಣವಾಗಿ ಮಾಡುವುದಾಗಿ ಒಂದು ಪತ್ರದಲ್ಲಿ [illegible] [illegible]ಗದರು:

"ಓ ಗುಹಾವತಾರ ಭಗವನ್!

ಕಪಾಲಿ, ಸುಂದರ ಪಂಡಿತ ಹಾಗೂ ವಿಶ್ವನಾಥರ ಪತ್ರಗಳಿಂದ ನಾನು ಇಲ್ಲಿ ನನ್ನ ಶಿಷ್ಯರೊಂದಿಗೆ ತಪಸ್ಸನ್ನಾಚರಿಸುತ್ತಿರುವುದು ನಿಮಗೆ ಈಗಾಗಲೇ ತಿಳಿದಿದೆ. ಮೂರು ದಿನಗಳಿಂದಲೂ ನನಗೆ ಅತ್ಯಂತ ಸಂತೋಷವನ್ನು ಉಂಟುಮಾಡುವ ಅನುಭವಗಳಾಗುತ್ತಿತ್ತು. ಇಲ್ಲಿ ಅನೇಕ ಶಿಷ್ಯರುಗಳಿಗೆ ತಮ್ಮ ಕನಸಿನಲ್ಲಿ ಭಗವಾನರ ದರ್ಶನವು ಆಗುತ್ತಿತ್ತು. ಇದೆಲ್ಲವೂ ಭಗವಾನರ ದಯೆ ಎಂಬುದಾಗಿ ಅವರೆಲ್ಲರೂ ಖಚಿತವಾಗಿ ನಂಬಿರುವರು.

ಓ ದೇವನೆ! ಭಗವಂತನ ದಯೆಯಿಂದ ಪಡೆದ ಆ ನಿಷ್ಠೆಯು ಇಲ್ಲಿ ನನಗೆ ಅನುಭವಜನ್ಯವಾಗಿದೆ. ನಾನು ಗುಹೆಯಲ್ಲಿರುವ ಆತ್ಮದ ಇರವನ್ನು ಶರೀರದಿಂದ ಬೇರೆಯಾಗಿ ಅನುಭವಿಸುತ್ತಿದ್ದೇನೆ. ಆದರೆ ಇದು ಅಪೂರ್ಣವೆಂದು ನನಗೆ ಅನಿಸುತ್ತಿದೆ, ಏಕೆಂದರೆ ಈ ಅನುಭವವು ಪ್ರಾಪಂಚಿಕ ಅನುಭವಕ್ಕಿಂತ ಬೇರೆಯಾದದ್ದು ಎಂದು ನನಗೆ ಅನಿಸುತ್ತಿಲ್ಲ. ಸಂಪೂರ್ಣ ನಿಷ್ಠೆ ಸಾಧಿಸಲು ಕ್ಷಣಾರ್ಧದಲ್ಲಿ ಅನೇಕ ಮೈಲುಗಳ ಹಾದಿಯನ್ನು ಕ್ರಮಿಸಬಲ್ಲ ನಿಮ್ಮ ಕರುಣೆಯನ್ನು ಕಳಿಸಿರೆಂದು ನಿಮ್ಮಲ್ಲಿ ಪ್ರಾರ್ಥಿಸುವೆ. ನಾನು ಹಿಂದೆ ಅನುಭವಿಸುತ್ತಿದ್ದ ಶಕ್ತಿಯು ಭಾರವಾದ ಹರಿವು ಹಾಗೂ ಅದು ಕೇವಲ ಶಕ್ತಿಯ ಹರಿವು. ಆದರೆ ಈಗ ಶಕ್ತಿಯು ಅತ್ಯಂತ ಹಗುರವಾಗಿದ್ದು ಅದು ಬೆಳಕಿನ ಪ್ರವಾಹ. ಭಗವಾನರ ಕರುಣೆಯಿಂದ ದೇವರುಗಳು ಸ್ಫೂರ್ತಿಗೊಂಡು ಮಹಾನ್ ಉದ್ದೇಶವನ್ನು ಪೂರೈಸಲು ನನ್ನನ್ನು ಬದಲಾಯಿಸಿರುವರೆಂದು ನಾನು ಭಾವಿಸುವೆ. ದಯಮಾಡಿ ನಿಮ್ಮ ಕರುಣಾಪೂರಿತ ನೋಟವನ್ನು ಈ ಪತ್ರದ ಉತ್ತರವಾಗಿ ಕಳುಹಿಸುವಿರಾ!

ಮಹದೇವ, ವಿಶ್ವನಾಥ, ರಂಗ, ಸೀತಾರಾಮರ ಮಗಳು ಮತ್ತು ಕಪಾಲಿ ಹಾಗೂ ಅವರ ಪತ್ನಿ, ಎಲ್ಲರೂ ಈ ಆಶ್ರಮದ ಶಾಶ್ವತ ನಿವಾಸಿಗಳು. ಇಂದು ಸಂಜೆಗೆ ಸುಂದರ ಪಂಡಿತರ ಸಹೋದರಿ ಹಾಗೂ ದೇವೇಂದ್ರ ಶರ್ಮರು ಇಲ್ಲಿಗೆ ಬರಲಿದ್ದಾರೆ. ಅವರೆಲ್ಲರೂ ಭಗವಾನರ ಕರುಣೆಗಾಗಿ ಕಾತರಿಸುತ್ತಿದ್ದಾರೆ.

ಭಗವಾನರ ಸೇವಕ,
ವಾಶಿಷ್ಠ ಗಣಪತಿ

ಭಗವಾನರ ತಮಿಳಿನ ಪದ್ಯವನ್ನು ಓದಿ, ಅದರ ಮಹೋನ್ನತೆಯನ್ನು ವಿವರಿಸಿ, ಅದನ್ನು ಸಂಸ್ಕೃತದಲ್ಲಿ ಸರಿಯಾಗಿ ಭಾಷಾಂತರಿಸಿ ಹಾಗೂ ರಚಿಸಿ, ಅನಂತರ ಅದರ ಕಾವ್ಯಶ್ರೇಷ್ಠತೆಯನ್ನು ಕಪಾಲಿ, ವಿಶ್ವನಾಥ ಮತ್ತು ಮಹಾದೇವನಿಗೆ ವಿವರಿಸಿ, ನಾಯನರು "ನಲ್ವತ್ತು ಸ್ತೋತ್ರಗಳ" ಭಾಷಾಂತರ ಕಾರ್ಯವನ್ನು ನಾಲ್ಕು ದಿನಗಳಲ್ಲಿ 14-3-1931ರಂದು ಮುಗಿಸಿದರು. ಸಂಸ್ಕೃತದಲ್ಲಿ ಭಾಷಾಂತರಿಸಿದ ಕೃತಿಗೆ "ಸತ್-ದರ್ಶನ" ಎಂಬ ಹೆಸರನ್ನು

...ಲಾಯಿತು. ಅದರ ಎರಡು ಪ್ರತಿಗಳನ್ನು ತಯಾರಿಸಲಾಯಿತು. ಒಂದು ಪ್ರತಿಯನ್ನು ...ಹಾದೇವನ ಮೂಲಕ ಭಗವಾನರಿಗೆ ಒಂದು ಪತ್ರದ ಮೂಲಕ ಕಳಿಸಲಾಯಿತು. ಆ ...ತ್ರದ ಒಕ್ಕಣೆಯು ಈ ರೀತಿಯಾಗಿತ್ತು:

ಆನಂದಾಶ್ರಮ, ಶಿರಸಿ
17– 03 –1931

ವಿಶ್ವ ಗುರು, ಭಗವಾನರಿಗೆ,

ಪ್ರತಿ ವಾರವೂ ಒಂದು ಪತ್ರವನ್ನು ನಿಮಗೆ ಕಳಿಸುವಂತೆ ನನ್ನ ಹೃದಯವು ಪ್ರೇರೇಪಿಸುತ್ತದೆ. 14–03–1931, ಶನಿವಾರದಂದು, "ಸತ್–ದರ್ಶನ"ವು ಸಂಪೂರ್ಣವಾಯಿತು. ಭಗವಾನರ ಅರ್ಥವಾದ "ಶುಕ್ಲ ಛಂದಸ್ಸು" (ಯಾಜ್ಞವಲ್ಕ್ಯ ಸೂತ್ರ)ವನ್ನು ಉಪಜಾತಿ ಛಂದಸ್ಸಿಗೆ ಬದಲಾಯಿಸಿದೆ. ನನ್ನ ಈ ಕೃತಿಯಲ್ಲಿ ಯಾವುದೇ ಅರ್ಹ ಅಂಶಗಳಿದ್ದರೂ ಅವೆಲ್ಲವೂ ಭಗವಾನರ ಸ್ವಂತದ್ದು. ಆ ಶನಿವಾರದಿಂದ ನನ್ನ ದೃಷ್ಟಿಯು ಸಂಪೂರ್ಣವಾಗಿ ರೂಪಾಂತರಗೊಂಡಿತು. ನಾನು ಎಲ್ಲವನ್ನೂ ಒಂದಾಗಿ ನೋಡುತ್ತಿರುವೆ. ಇದು ಶಾಶ್ವತವಾಗಿರಿಸುವಂತೆ ನಾನು ಭಗವಾನರಲ್ಲಿ ಪ್ರಾರ್ಥಿಸುವೆ. ನೀರಿನ ಮೇಲಿನ ಗುಳ್ಳೆಗಳಂತೆ ನಾನು ಈ ಎಲ್ಲ ರೂಪಗಳನ್ನೂ ಒಂದೇ ಸದ್ವಸ್ತುವನ್ನಾಗಿ ಕಾಣುತ್ತಿರುವೆ. ಈ ಗುಳ್ಳೆಗಳನ್ನು ತಿರಸ್ಕರಿಸಿ, ನಾನು ಶುದ್ಧ ಸತ್ ಸ್ವರೂಪವನ್ನು ಕಾಣಲು ಪ್ರಯತ್ನಿಸುತ್ತಿರುವೆ. (ನಿರುಪಾಧಿಕ ಅಸ್ತಿತ್ವ).

ನಿಮ್ಮ ಕರುಣೆಗಾಗಿ ಕಾತುರನಾಗಿರುವ,
ವಾಸಿಷ್ಠ

ಮಹಾದೇವನು "ಸತ್–ದರ್ಶನಮ್" ಕೃತಿಯನ್ನು ಹಸ್ತದಲ್ಲಿರಿಸಿಕೊಂಡು ಅರುಣಾಚಲದೆಡೆಗೆ ಹೊರಟನು. ಕಪಾಲಿಯವರ ಮನಸ್ಸಿನಲ್ಲಿ ಸತ್–ದರ್ಶನಕ್ಕೆ ವ್ಯಾಖ್ಯಾನವನ್ನು ಬರೆಯುವ ಇಂಗಿತವುಂಟಾಯಿತು. ಅವರು ನಾಯನರ ಬಳಿ ತನ್ನ ಆಸೆಯನ್ನು ಹೇಳಿಕೊಂಡರು. ಕೂಡಲೇ ನಾಯನರು ಇದಕ್ಕೆ ಒಪ್ಪಿಗೆಯನ್ನು ಸೂಚಿಸಿದರು.

ನಾಯನರು ರಚಿಸಿದ ಎಲ್ಲ ಪ್ರಾರ್ಥನಾ ಪದ್ಯಗಳನ್ನು ಒಂದೆಡೆ ಸೇರಿಸಿ ಅದನ್ನು "ಗೀತಮಾಲಾ" ಎಂಬ ಹೆಸರಿನಲ್ಲಿ ಪ್ರಕಟಿಸಲಾಯಿತು. ನಾಯನರು ಗೀತಮಾಲಾದ ಒಂದು ಪ್ರತಿಯನ್ನು ಮಹಾದೇವನಿಗೆ ಕೊಟ್ಟು ಅದನ್ನು ಭಗವಾನರಿಗೆ ಅರ್ಪಿಸುವಂತೆ ತಿಳಿಸಿದರು.

ಏತನ್ಮಧ್ಯೆ ದೈವರಾತನ ಮಗನ ಉಪನಯನವನ್ನು ಗೋಕರ್ಣದಲ್ಲಿ ನಡೆಸಲು ತೀರ್ಮಾನಿಸಲಾಯಿತು. ದೈವರಾತನು ಸ್ವತಃ ನಾಯನರ ಬಳಿ ಬಂದು ಅವರನ್ನು

ಕಾರ್ಯಕ್ರಮದಲ್ಲಿ ಭಾಗವಹಿಸಲು ಗೋಕರ್ಣಕ್ಕೆ ಬರುವಂತೆ ಆಹ್ವಾನಿಸಿದನು. ನಾಯನರು ಭಗವಾನರಿಗೆ ತಮ್ಮ ಮುಂದಿನ ವಾರದ ಪತ್ರವನ್ನು ಗೋಕರ್ಣದಿಂದ ಬರೆದರು.

ಗೋಕರ್ಣ
21–04–1931

ಓ ಭಗವನ್! ಸರ್ವವ್ಯಾಪಿಯೇ!

ದೈವರಾತನು ತನ್ನ ಮಗನ ಉಪನಯನ ಕಾರ್ಯಕ್ರಮದಲ್ಲಿ ಭಾಗವಹಿಸಲು ಕೋರಿಕೊಂಡದ್ದರಿಂದ ನಾನು ಗೋಕರ್ಣಕ್ಕೆ ಬಂದಿರುವೆ. ನಾನು ಇಲ್ಲಿಂದ ಶನಿವಾರ ಮರು ಪ್ರಯಾಣವನ್ನು ಮಾಡಲಿರುವೆ. ಗುಹಾವಾಸಿಯಾದವನು, ಎಲ್ಲರ ಶರೀರದಲ್ಲೂ ನೆಲಸಿರುವವನು ಮತ್ತು ಯೋಗಿಗಳ ಹೃದಯದಲ್ಲಿ ವಿಸ್ತರಿಸುವವನು, ಯಾರ ಅಂತರಂಗದ ವಿಸ್ತರಣೆಯು ಎರಡನೇ ಜನ್ಮವಾಗುವುದೋ, ಯಾರನ್ನು ಮಂತ್ರದ್ರಷ್ಟಾರರು ವೈಶ್ವಾನರನೆಂದು ಶ್ಲಾಘಿಸುವರೊ ಹಾಗೂ ವಿದ್ವಾಂಸರು ವಿರಾಟ್ ಪುರುಷನೆಂದು, ಯಾರು ಜ್ಞಾನವೇ ಸಾಕಾರನೋ, ಯಾರಿಗೆ ಜ್ಞಾನವೇ ಶರೀರ, ವಾಸಸ್ಥಳ ಮತ್ತು ಅಸ್ತ್ರವೋ, ಅವನೇ ನನ್ನ ಕಿರಿಯ ಸಹೋದರ, ಅವನಿಗೆ ನಾನು ಸಾಷ್ಟಾಂಗ ಎರಗುವೆನು.

ಹಿರಿಯವನು

ಮಹಾದೇವನು ಅರುಣಾಚಲಕ್ಕೆ ಬಂದು "ಸತ್–ದರ್ಶನ"ದ ಪ್ರತಿಯನ್ನು ಭಗವಾನರಿಗೆ ನೀಡಿದನು. ನಾಯನರು ಮೂಲ ಕೃತಿಯಲ್ಲಿದ್ದ ಕೆಲವು ಭಾಗವನ್ನು ಭಾಷಾಂತರಿಸುವಾಗ ಬದಲಾಯಿಸಿದ್ದರು ಮತ್ತು ಭಗವಾನರು ಅದನ್ನು ಓದಿ ಸಂತೋಷಪಟ್ಟು ಅದನ್ನು ಅನುಮೋದಿಸಿದರು. ಮಹಾದೇವನು ಭಗವಾನರ ಒಪ್ಪಿಗೆಯನ್ನು ನಾಯನರಿಗೆ ತಿಳಿಸಿದನು. ನಾಯನರು ಅತ್ಯುತ್ಸಾಹದಿಂದ ಭಗವಾನರಿಗೆ ಉತ್ತರಿಸಿದರು.

ಆನಂದಾಶ್ರಮ, ಶಿರಸಿ
28–04–1931

ಓ ಭಗವಾನ್! ಕರುಣಾಮಯಿ!

ನಾನು ಮಹಾದೇವ ಹಾಗೂ ಸುಂದರನಿಂದ ಪತ್ರಗಳನ್ನು ಸ್ವೀಕರಿಸಿದೆ ಹಾಗೂ ಗೋಕರ್ಣದಿಂದ ಇಲ್ಲಿಗೆ ಬಂದೆ. ಅಪ್ಪು ದಂಪತಿಗಳು ಇಲ್ಲಿಗೆ ಬಂದಿರುವರು. ವಿಶ್ವನಾಥನೂ ಕೂಡಾ ನನ್ನೊಂದಿಗೆ ಶಿರಸಿಗೆ ಬಂದನು. ಕಪಾಲಿಯು ಬರೆಯುತ್ತಿದ್ದ ಸತ್–ದರ್ಶನದ ಬಗೆಗಿನ ವ್ಯಾಖ್ಯಾನವು ಚೆನ್ನಾಗಿ ಮುಂದುವರೆಯುತ್ತಿದೆ. ಮಹಾದೇವನ ಪತ್ರದಲ್ಲಿರುವಂತೆ ಸತ್–ದರ್ಶನದಲ್ಲಿ ನಾನು ಮಾಡಿದ ಬದಲಾವಣೆಯನ್ನು ನೀವು ಒಪ್ಪಿರುವಂತಿದೆ. ಅದು ನನ್ನನ್ನು ಭಾವಪರವಶನನ್ನಾಗಿಸಿದೆ. ಕಪಾಲಿಯ ವ್ಯಾಖ್ಯಾನವು ಮುಗಿದ ನಂತರ ಸತ್–

ದರ್ಶನವು ಒಂದು ಪ್ರಖ್ಯಾತವಾದ ಗ್ರಂಥವಾಗಲಿದೆ. ನನ್ನ "ಗುಹ ಮತ್ತು ಗಣಪತಿಯರ ನಡುವಿನ ಸಂವಾದದ" ಶ್ಲೋಕವನ್ನು ಓದಿ ನೀವು ಮುಗುಳ್ನಕ್ಕು ಮೆಚ್ಚಿಕೊಂಡಿರೆಂದು ಮಹಾದೇವನು ಪತ್ರದಲ್ಲಿ ವಿವರಿಸಿರುವನು. ನಿಮ್ಮ ಅಮೋಘವಾದ ಮುಗುಳ್ನಗುವನ್ನು ನೋಡುವ ಅದೃಷ್ಟವನ್ನು ಮಹಾದೇವನು ಹೊಂದಿದನೆಂದೆನಿಸುತ್ತೆ. ನನ್ನ "ಗೀತಮಾಲಾ ಕೃತಿಯೂ ಭಗವಾನರ ಹಸ್ತದಲ್ಲಿ ನಲಿಯುವುದೆಂದು ನಾನು ಆಶಿಸುವೆ.

ಭಗವಾನರ "ಉಪದೇಶ ಸಾರಮ್" ಮಹಾನ್ ಕೃತಿಯ ನಂತರ ಈ "ಸತ ದರ್ಶನಮ್" ಕೃತಿಯು ಜನಪ್ರಿಯವಾಗಿದೆ ಹಾಗೂ ಇದನ್ನು ಆನೇಕ ಆಶ್ರಮಗಳಲ್ಲಿ ಪುಸ್ತಕವನ್ನಾಗಿ ಸ್ವೀಕರಿಸಲಾಗಿದೆ. ಅನೇಕ ಮಂದಿ ಅನ್ವೇಷಕರಿಗೆ ಈ ಕೃತಿಯು ಸಾ ಸಹಾಯವನ್ನು ನೀಡುತ್ತಿದೆ. ಸತ್ಯಾನ್ವೇಷಕರಿಗೆ "ಸತ್-ದರ್ಶನಮ್" ಕೃತಿಯು ಕಣ್ತೆರೆ ಗ್ರಂಥವಾಗಿದೆ.

೧೮

ಭಕ್ತಿ ಭಾವದ ಪತ್ರಗಳು

ಅತೀತಗುಣಜಾಲಾಯ ನೈಷ್ಠಿಕಬ್ರಹ್ಮಚಾರಿಣೇ
ನಮೋ ಮಾಯಾಮನುಷ್ಯಾಯ ಗುರವೇ ತಾರಕಾರಯೇ ॥
– ಶ್ರೀ ರಮಣ ಚತ್ವಾರಿಂಷತ್ (12)

"ಭಗವಂತನೇ ಮೂರ್ತಿವೆತ್ತ, ತಾರಕಾಸುರನ ಶತ್ರುವಾದ ಕುಮಾರಸ್ವಾಮಿಯೇ ಆದ, ಸದಾ ಬ್ರಹ್ಮನಿಷ್ಠನಾದ ಗುಣಾತೀತ ಗುರುವಿಗೆ ನಮಿಸುತ್ತೇನೆ"

ಭಗವಾನ್ ರಮಣ ಮಹರ್ಷಿಗಳಲ್ಲಿ ಯಾವುದೇ ಆಸೆ ಆಕಾಂಕ್ಷೆಗಳು ಇರುವುದಿಲ್ಲ ಎಂಬುದು ಪ್ರತಿಯೊಬ್ಬರಿಗೂ ತಿಳಿದಿರುವುದು. ಶೇಷಾದ್ರಿ ಸ್ವಾಮಿಗಳಂತಹ ಯೋಗಿಗಳೂ ಭಗವಾನರ ಮನದಲ್ಲಿ ಯಾವುದೇ ಆಸೆ ಅಥವಾ ಬಯಕೆಗಳಿರಬಹುದೇ ಎಂಬುದನ್ನು ಅರಿಯಲು ಪ್ರಯತ್ನಿಸಿ ತಮ್ಮ ಪ್ರಯತ್ನದಲ್ಲಿ ಸಫಲರಾಗಲಿಲ್ಲ. ನಾಯನರು ಭಗವಾನರಲ್ಲಿ ಈ ಕೆಳಗಿನ ಪತ್ರದ ಮೂಲಕ ಕಡೇಪಕ್ಷ ಒಂದೇ ಒಂದಾದರೂ ಉದ್ದೇಶವನ್ನು ಹೊಂದಿರುವಂತೆ ಬೇಡಿಕೊಂಡರು.

ಆನಂದಾಶ್ರಮ, ಶಿರಸಿ
24–03–1931

ಓ ಭಗವನ್! ಕಾರಣಗುರು!

ಭಗವಂತನ ದಯೆಯಿಂದ ನಾವೆಲ್ಲರೂ ಭಗವಾನರ ಕರುಣೆಯ ಬೆಳಕಿನಲ್ಲಿ ಮುಳುಗಿರುವೆವು. ಓ ಮಾಯೆಯನ್ನು ನಾಶಮಾಡುವವನೆ! ಈಗಲೂ ನನ್ನ ಮನಸ್ಸಿನಲ್ಲಿನ ದ್ವಂದ್ವ ಪರಿಕಲ್ಪನೆಗಳು ನಾಶವಾಗಿಲ್ಲ. ನೀವು ಒಂದು ಕ್ಷಣದ ಆಸೆಯನ್ನು ಪ್ರಸರಿಸಿದಲ್ಲಿ, ಈ ದ್ವಂದ್ವವು ಮಾಯವಾಗುವುದೆಂಬುದು ನನಗೆ ಗೊತ್ತು ಹಾಗೂ ಇದರಿಂದಾಗಿ ಸಮಸ್ತ ಪ್ರಪಂಚದಲ್ಲಿ ನನ್ನನ್ನು ಗುರುತಿಸಿಕೊಳ್ಳಲು ಆಗುವುದು. ಆದರೆ ನನಗೆ ಗೊತ್ತಿರುವುದೇನೆಂದರೆ ನಿಮ್ಮ ಮನಸ್ಸಿನಲ್ಲಿ ಕಿಂಚಿತ್ತಾದ ಆಸೆಯೂ ಇಲ್ಲವೆಂಬುದು ಕೇವಲ ಭಗವಂತನೊಬ್ಬನೇ

ನಿಮ್ಮಲ್ಲಿ ಈ ಆಲೋಚನೆಯನ್ನು ಸೃಷ್ಟಿಸಬಲ್ಲನು. ಏಕೆ ನಾನು ಈ ರೀತಿಯ ಸುತ್ತುಬಳಸುವ ವಿಧಾನದ ಪ್ರಾರ್ಥನೆಯನ್ನು ಮಾಡುತ್ತಿರುವೆ ಎಂದು ನೀವು ಕೇಳಬಹುದು. ಏಕೆ ಭಗವಂತನು ಸ್ವತಃ ತಾನೇ ಅನುಗ್ರಹದ ಮಳೆಯನ್ನು ಕರೆಯದೇ ಬೇರೊಬ್ಬರು ಆ ಕೆಲಸ ಮಾಡುವಂತೆ ಪ್ರೇರೇಪಿಸುತ್ತಾನೆ? ಪವಿತ್ರಾತ್ಮರಿಗೆ ಮಾತ್ರ ಈ ಗುಟ್ಟು ಗೊತ್ತಿರುವುದು. ಭೂಮಿಯ ಮೇಲೆ ಅವತಾರ ಪುರುಷರು ಜನ್ಮತಾಳಿರುವಾಗ ಭಗವಂತನು ಸ್ವತಃ ತಾನೇ ಏನನ್ನೂ ಮಾಡುವುದಿಲ್ಲ ಎಂಬುದು ದೈವೀ ನಿಯಮ. ಹೀಗಾಗಿ, ನಿಮ್ಮ ಮನಸ್ಸಿನಲ್ಲಿ ಆಸೆಯನ್ನು ಸೃಷ್ಟಿಸು ಎಂಬುದಾಗಿ ನಾನು ಭಗವಂತನಲ್ಲಿ ಪ್ರಾರ್ಥಿಸುವೆ.

ಇತಿ,

ಪೂರ್ವಜನ್ಮದಲ್ಲಿನ ನಿಮ್ಮ ಸಹೋದರ

ನಮ್ಮಲ್ಲಿನ ಅಹಂಕಾರವನ್ನು ನಾಶಪಡಿಸಿದಲ್ಲಿ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಬಹುದು. ಹೀಗಾಗಿ ನಾಯನರು ಮಹರ್ಷಿಯು ಅಹಂಕಾರವನ್ನು ಪುಡಿ ಪುಡಿ ಮಾಡಿ ಅದನ್ನು ಆಕಾರರಹಿತ ಮುದ್ದೆಯನ್ನಾಗಿ ಮಾಡುವವರೆಂದು ಹೊಗಳಿದರು. ಶಿರಸಿಯಲ್ಲಿಯೂ ಸಹ ಒಬ್ಬ ಮಹಿಳೆಯು ಇದೇ ರೀತಿ ಮಾಡುತ್ತಿರುವಳೆಂದು ಈ ಪತ್ರದಲ್ಲಿ ವಿವರಿಸಿದರು.

ಆನಂದಾಶ್ರಮ, ಶಿರಸಿ

15–07–1931

ಓ ಭವ್ಯ ಜೀವಿಯೇ!

ಭಗವಂತನ ದಯೆಯಿಂದ ಎಲ್ಲರೂ ಸೌಖ್ಯ. ಸತತವಾದ ಮಳೆಯಿಂದಾಗಿ ಹಗಲಿನ ಸಮಯವು ಕಡಿಮೆಯಾಗಿದೆ. ಆದರೆ ದೈವೀ ಶಕ್ತಿಯಿಂದ ಬಿಸಿಯಾದ ನಮ್ಮ ಹೃದಯಗಳು ಸಾಕಷ್ಟು ಚುರುಕಾಗಿವೆ. ಸೂರ್ಯನ ಬೆಳಕು ಇಲ್ಲವೇ ಇಲ್ಲ. ಆದರೆ ನಮಗೆಲ್ಲರಿಗೂ ನಾವುಗಳು ಸೂರ್ಯನ ಸಂಪೂರ್ಣ ಬೆಳಕಿನಲ್ಲಿರುವಂತೆ ಅನಿಸುತ್ತಿದೆ. ನಮ್ಮನ್ನು ಈ ರೀತಿಯಾಗಿ ಬೇಯಿಸುವ ಕಾರ್ಯವನ್ನು ಮಾಡುವ ಬಾಣಸಿಗನು ಭಗವಂತನೆಂಬುದನ್ನು ನಾವುಗಳು ಮರೆಯುವುದಿಲ್ಲ. ಈ ರೀತಿಯ ಅಡಿಗೆ ಮಾಡುವ ಬಾಣಸಿಗನಿಗೆ ಯಾವುದೇ ಸಂಬಳವಿರುವುದಿಲ್ಲ. ಈ ರೀತಿಯ ಕೆಲಸಗಳಲ್ಲಿ ಮಹಿಳೆಯೊಬ್ಬಳು ನಿಮಗೆ ಸಹಾಯ ಮಾಡುತ್ತಿರುವರು. ಅವಳು ಯಾರು? ಅವಳೇ ರೇಣುಕಾ ದೇವಿ ಹಾಗೂ ಅವಳ ಪುತ್ರ ಪರಶುರಾಮನು ರಾಜರುಗಳ ಅಹಂಕಾರವನ್ನು ಪುಡಿ ಪುಡಿ ಮಾಡಿದವನು ಹಾಗೂ ಇವನು ಭಗವಾನ್ ವಿಷ್ಣುವಿನ ಆರನೇ ಅವತಾರ. ಭಕ್ತರು ಹಾಗೂ ಎಲ್ಲವನ್ನೂ ಬಲ್ಲ ಜ್ಞಾನಿಗಳ ಮೇಲಿರುವವನೆ ಭಗವಂತನಿರುವನು ಹಾಗೂ ಅವನೇ ಎಲ್ಲರನ್ನೂ ನಡೆಸುವವನು.

ಅವನು ಈ ಬಾಣಸಿಗನ ಮೂಲಕ ಬೇಗನೆ ಆಹಾರವನ್ನು ಬೇಯಿಸಿ ಅದನ್ನು ಸವಿಯಲಿ ಎಂದು ಪ್ರಾರ್ಥಿಸುವೆ.

– ಮನುಷ್ಯ ರೂಪದ ಬೇಯಿಸಿದ ಆಹಾರ

ಹೊಸವರ್ಷದ ಶುಭಾಶಯಗಳು

ಆನಂದಾಶ್ರಮ, ಶಿರಸಿ
14–04–1931

ಓ ಗುಹಾವಾಸಿ ಭಗವನ್!

ಹೊಸವರ್ಷದ ಈ ದಿನದಂದು ನಮ್ಮ ಶುಭಕಾಮನೆಗಳನ್ನು ನೀವು ಸ್ವೀಕರಿಸಿ ಅಭ್ಯುದಯದ ವರ್ಷವನ್ನು ನಿಮ್ಮ ಕರುಣೆಯಿಂದ ಹರಿಸಿ ನಮ್ಮನ್ನು ಆಶೀರ್ವದಿಸಬೇಕೆಂದು ನನ್ನ ಆಸೆ. ನಿಮ್ಮ ದಯೆಯಿಂದ ಈ ವರ್ಷವು ನಮಗೆ ಸಂಪೂರ್ಣ ವಿಜಯವನ್ನು ತಂದುಕೊಡಲಿ. ಓ ನನ್ನ ದೇವರೇ! ತಪಸ್ಸು ಹಣ್ಣಾಗಿ, ಅಹಂಕಾರವು ನಾಶವಾಗಿ, ಮೊದಲಿನ ಸ್ಥಿತಿಯಲ್ಲಿ ಸ್ಥಿರವಾಗಿ, ಎಲ್ಲ ಇಂದ್ರಿಯಗಳೂ ಭಗವಾನರಲ್ಲಿ ನೆಟ್ಟಿದ್ದಲ್ಲಿ ನನಗನಿಸುವಂತೆ ಎಲ್ಲ ಗುರಿಗಳನ್ನೂ ತಲುಪಬಹುದು. ನನ್ನ ಜ್ಞಾನದಲ್ಲಿನ ಸ್ಥಿರತೆಯು ಜ್ಞಾನದ ಮೂಲದಲ್ಲಿ ಸ್ಥಿರವಾಗುವುದಕ್ಕೆ ನನ್ನನ್ನು ಕರೆದೊಯ್ಯಲಿ. ಈ ಕಟ್ಟಕಡೆಯ ಆಸೆಯು ಈಡೇರುವುದೆಂಬುದು ನನಗೆ ಖಚಿತವಾಗಿ ಗೊತ್ತಿದೆ. ಆ ಶುಭ ಘಳಿಗೆಗಾಗಿ ನಾನು ಕಾಯುತ್ತಿರುವೆ. ಈ ಮನುಷ್ಯನು ಈ ಗುರಿಯಿಂದ ಬಹು ದೂರದಲ್ಲಿದ್ದರೂ, ನಿಮ್ಮ ಇರುವಿಕೆಯಲ್ಲಿ ಇವನು ಪ್ರಕಾಶಿಸಲಿ. ಓ ದೇವರೇ! ನೀನು ಸದಾ ನನ್ನ ಹೃದಯದಲ್ಲೇ ವಾಸಿಸುತ್ತಿರುವೆ. ನಾನು ಸದಾ ನಿಮ್ಮ ಪಾದ ಪದ್ಮಗಳಲ್ಲಿ ಇರುವೆ. ನೀವು ನನ್ನ ದೇವರು ಹಾಗೂ ನನ್ನನ್ನು ನೀವು ಇಲ್ಲಿಗೆ ಕಳಿಸಿರುವಿರಿ ಮತ್ತು ನಾನು ನಿಮ್ಮ ಆಜ್ಞೆಯನ್ನು ಪಾಲಿಸುವ ಸೇವಕ.

ಸದಾ ನಿಮ್ಮವನೇ ಆದ,
ವಾಸಿಷ್ಠ

ಆನಂದಾಶ್ರಮ, ಶಿರಸಿ
09–06–1931

ಮಾನವ ರೂಪದಲ್ಲಿನ ಹೇ ಭಗವನ್!

ಶ್ರೀ ಮಾತೆಯ ಮಹಾಪೂಜೆಯ ಸಂದರ್ಭದಲ್ಲಿ ದಯಮಾಡಿ ನಮ್ಮ ಪ್ರಣಾಮಗಳನ್ನು ಸ್ವೀಕರಿಸಿ. ಋಷಿಮುನಿಗಳಿಗೆ ಸಹಾಯಹಸ್ತ ನೀಡಿದ ಶ್ರೀರಾಮನಿಗೆ ಕೌಸಲ್ಯೆಯಂತೆ ಹಾಗೂ ಯೋಗವಿದ್ಯೆಯನ್ನು ಪಸರಿಸಿದ ಶ್ರೀ ಕೃಷ್ಣನಿಗೆ ದೇವಕಿಯಂತೆ, ಆಜನ್ಮ ಬ್ರಹ್ಮಚಾರಿಯಾದ

ಪರಶುರಾಮನಿಗೆ ರೇಣುಕಳಂತೆ, ಭಗವಾನ್ ಬುದ್ಧನಿಗೆ ಮಾಯಾ ದೇವಿಯಂತೆ, ಎಲ್ಲ ಜೀವಿಗಳನ್ನೂ ಉದ್ಧರಿಸುವ ಹಾಗೂ ಮಾನವ ಕುಲದ ಪಾಪಗಳನ್ನು ತನ್ನ ಮೇಲೆ ಹೊತ್ತುಕೊಂಡ ಏಸು ಕ್ರಿಸ್ತನಿಗೆ ಮೇರಿಯಂತೆ, ಈ ಎಲ್ಲ ಗುಣಗಳನ್ನೂ ಒಂದೆಡೆ ಹೊಂದಿ ಮಾನವ ಕುಲದ ಒಳಿತಿಗಾಗಿ, ಅಜ್ಞಾನದ ಅಂಧಕಾರವನ್ನು ನಾಶಪಡಿಸುವುದಕ್ಕಾಗಿ, ಅಡ್ಡದಾರಿಗೆಳೆಯುವ ಬುದ್ಧಿವಂತರನ್ನು ಹೊಡೆದೋಡಿಸಲು, ಸತ್ಯವನ್ನು ಪ್ರಚುರಿಸಲು, ಶ್ರೀ ಸುಂದರಂ ಐಯ್ಯರ್ ಅವರ ದೈವೀ ಪತ್ನಿ, ನಿಮ್ಮನ್ನು ಹೆತ್ತ ಸೌಂದರ್ಯಾಂಬಾ ಮಾತೆಗೆ ನಾನು ನಮಿಸುತ್ತೇನೆ. ನಾನು ಸೌಂದರ್ಯಾಂಬಾ ಮಾತೆಯು ವಾಸಿಸಲು ಆರಿಸಿಕೊಂಡಿರುವ ಮಾತೃಭೂತೇಶ್ವರಿ ಭಗವತಿಗೆ ನಮಸ್ಕರಿಸುವೆ.

ಸುಂದರ ಅವರ ಹೂವಿನಂತಹ ಪತ್ರವನ್ನು ಓದಿ ಆಶ್ರಮದ ತುಂಬಾ ಸುಗಂಧ ಪರಿಮಳವು ಪಸರಿಸಿದಂತಿದೆ. ಭಗವಾನರ ಸಂದೇಶವುಳ್ಳ ಪತ್ರವನ್ನೂ ಸ್ವೀಕರಿಸಲಾಗಿದೆ. ನನ್ನ ಹೃದಯವು ಶಾಂತಿಯಿಂದಿದೆ. “ಸತ್-ದರ್ಶನದ”ಮೇಲಿನ ಕಪಾಲಿಯವರ ವ್ಯಾಖ್ಯಾನವೂ ಹೆಚ್ಚು ಕಡಿಮೆ ಮುಗಿಯಲಿದೆ.

ಭಗವಾನರ ಪಾದ ಧೂಳಿಯನ್ನು ಧರಿಸಿರುವ,
ವಾಸಿಷ್ಠ

ನಾಯನರು ರಚಿಸಿದ “ಸತ್-ದರ್ಶನಮ್” ಕೃತಿಯು ರಮಣಾಶ್ರಮವನ್ನು ತಲುಪಿ ಅದು ಅನೇಕ ವಿದ್ವಾಂಸರನ್ನು ಆಕರ್ಷಿಸಿತು. ಆದರೆ ಅದರಲ್ಲಿನ ಕೆಲವು ಶ್ಲೋಕಗಳು ಮೂಲದಲ್ಲಿದ್ದ ಶ್ಲೋಕಗಳಿಗಿಂತ ಭಿನ್ನವಾಗಿದೆ ಎಂದು ಕೆಲವರು ಭಗವಾನರ ಗಮನಕ್ಕೆ ತಂದರು. ಭಗವಾನರು ನಾಯನರ ಬದಲಾವಣೆಗಳನ್ನು ಅನುಮೋದಿಸಿದರು. ಈ ವಿಷಯವನ್ನು ಸುಂದರ ಕೃಷ್ಣರು ನಾಯನರಿಗೆ ತಿಳಿಸಿದರು ಮತ್ತು ನಾಯನರ ಸಂತೋಷವು ಮುಗಿಲು ಮುಟ್ಟಿತು. ಕೂಡಲೇ ಅವರು ತಮ್ಮ ಸಂತೋಷವನ್ನು ವ್ಯಕ್ತಪಡಿಸುವ ಉದ್ದೇಶದಿಂದ ಭಗವಾನರಿಗೆ ಪತ್ರವೊಂದನ್ನು ಬರೆದರು.

ಆನಂದಾಶ್ರಮ, ಶಿರಸಿ
03–06–1931

ಓ ಭಗವನ್! ಸಂತ್ರಸ್ತರ ಸ್ನೇಹಿತ!

ಸುಂದರ ಕೃಷ್ಣರು ತಮ್ಮ ಪತ್ರದ ಮೂಲಕ ಭಗವಾನರ ನಿರೂಪಣೆಯನ್ನು ತಿಳಿಸಿದರು. ನಮ್ಮ ಎಲ್ಲ ಅನುಮಾನಗಳೂ ಪರಿಹಾರವಾದವು. ನೀವು ನೀಡಿದ, “ಅಸ್ತಿತ್ವದಲಿ ಇಲ್ಲದ್ದು ಮುಕ್ತಿಯನ್ನು ಹೊಂದಿದವರಿಗೂ ಹಾಗೂ ಈಶ್ವರ, ಇಬ್ಬರಿಗೂ ಸೀಮಿತವಾದದ್ದು” ಎಂಬ ವಿವರಣೆಯು ನಮ್ಮ ಎಲ್ಲ ಸಂದೇಹಗಳನ್ನು ದೂರಮಾಡಿದೆ. ಒಂದೆಡೆ ಸೃಷ್ಟಿಕ್ರಿಯೆಯ ದೈವವಾದ ಈಶ್ವರನಿರುವನು. ಮುಕ್ತನಿಗೆ ವ್ಯಕ್ತಿತ್ವವಿದೆ. ಅವರ ಅನುಭವಗಳು ಒಂದೇ

ಆಗಿದ್ದು ಅವುಗಳು ಆಲೋಚನೆ ಮತ್ತು ಅಲೋಚನಾಸ್ಥಿತಿಯಿಂದ ಹೊರತಾಗಿರುವುದು. ಈ ವಿಷಯವು ನಿಮ್ಮ ಪದಗಳ ಮೂಲಕ ನಮಗೆ ಸ್ಪಷ್ಟವಾಗಿದೆ. ಹೀಗಾಗಿ, "ಸತ್-ದರ್ಶನಮ್" ಕೃತಿಯು ದೃಷ್ಟಿ-ಸೃಷ್ಟಿಗಳಿಗೆ ಅವಕಾಶ ನೀಡುವುದು ಎಂಬ ವಾದವನ್ನು ಅನೂರ್ಜಿತಗೊಳಿಸುತ್ತದೆ. ಈ ಉತ್ತರವು "ಸತ್-ದರ್ಶನಮ್" ಕೃತಿಯಲ್ಲೇ ಅಡಕವಾಗಿದೆ.

"ಸತ್-ದರ್ಶನಮ್" ಕೃತಿಯ ಮೇಲೆ ವ್ಯಾಖ್ಯಾನ (ಅರ್ಪಣೆ)

ಆನಂದಾಶ್ರಮ, ಶಿರಸಿ
07-04-1931

ಪರಾಶರರ ಅವತಾರಿ; ಓ ಭಗವನ್!

ಭಗವಾನರ ಅನುಗ್ರಹದಿಂದ ನಾವೆಲ್ಲರೂ ಕ್ಷೇಮ ಹಾಗೂ ಆರೋಗ್ಯದಿಂದಿರುವೆವು. ಪ್ರೀತಿಯ ಕಪಾಲಿಯು "ಸತ್-ದರ್ಶನಮ್" ಮೇಲಿನ ವ್ಯಾಖ್ಯಾನವನ್ನು ಪ್ರಾರಂಭಿಸಿರುವರು. ಮೂಲ ಗ್ರಂಥದ ಮಹತ್ವವನ್ನು ಗಮನದಲ್ಲಿರಿಸಿಕೊಂಡು, "ಭಾಷ್ಯಮ್" ಎಂಬ ಪದವನ್ನು ನಾನೇ ಸೂಚಿಸಿರುವೆ. "ಸತ್-ದರ್ಶನಮ್" ಕೃತಿಯನ್ನು ಸರಿಯಾಗಿ ಅಧ್ಯಯನ ಮಾಡಿದಾಗ ಅದರ ಆಳವು ಗಮನಕ್ಕೆ ಬರುವುದೆಂಬುದು ಕಪಾಲಿಯ ಅಭಿಪ್ರಾಯ. ಆ ಕೃತಿಯನ್ನು ನನಗೆ ಕೊಟ್ಟ ಕೂಡಲೇ ಅದರ ಆಳವನ್ನು ನಾನು ಅರ್ಥಮಾಡಿಕೊಂಡೆ. ಗ್ರಂಥದಲ್ಲಿರುವ ವಿಷಯವು ಕಿರಿದಾದರೂ ಅದರ ನಿರೂಪಣೆಯಲ್ಲಿ ತತ್ವ ರಹಸ್ಯ ಮತ್ತು ಯೋಗಶಾಸ್ತ್ರಗಳ ಸಂಪೂರ್ಣ ಸಾರೋಕ್ತಿಯು ಅಡಗಿದೆ (ಯೋಗ ಮತ್ತು ತತ್ತ್ವಗಳ ವಿಜ್ಞಾನ). ಆದರೂ ಅದರಲ್ಲಿ ಬೇರಾವ ಧರ್ಮಗಳ ಅವಹೇಳನೆ ಇಲ್ಲ. ಹೀಗಿದ್ದರೂ ಕೆಲವರ ದೃಷ್ಟಿಕೋನವು ವಿಚಿತ್ರವಾಗಿದೆ. ಇದರಲ್ಲಿನ ಚರ್ಚೆಯ ವಿಷಯವು ವಿದ್ವಾಂಸರು ಹಾಗೂ ಸಾಮಾನ್ಯರ ಹೃದಯವನ್ನು ಒಂದೇ ರೀತಿಯಾಗಿ ತಟ್ಟುತ್ತದೆ. ಇದರಲ್ಲಿ ಯಾವುದೇ ಧರ್ಮ ಗ್ರಂಥಗಳನ್ನು ಮಾದರಿಯಾಗಿ ಪರಿಗಣಿಸಿಲ್ಲವಾದರೂ, ಇದು ಎಲ್ಲ ವೇದಗಳ ಸಾರವಾಗಿ ಬೆಳಗುತ್ತದೆ. ಇದನ್ನು ಸರಿಯಾಗಿ ವಿವರಿಸಿ ವ್ಯಾಖ್ಯಾನಕಾರನು ಹಲವಾರು ವಿಷಯಗಳನ್ನು ಅಲ್ಲಗಳೆಯಬಹುದು. ಅಲ್ಲದೆ ಅನೇಕ ಹೊಸ ವಿಷಯಗಳನ್ನು ಅರ್ಥಮಾಡಿಕೊಳ್ಳಬೇಕಿದೆ. ಆದರೆ ವ್ಯಾಖ್ಯಾನವು ತೀರಾ ದೊಡ್ಡದಾಗಿರಲೂಬಾರದು. ವಿಷಯಗಳ ಬಗ್ಗೆ ವಿವರಣೆ ನೀಡುವುದನ್ನು ಬಿಡುವುದಕ್ಕಾಗುವುದಿಲ್ಲವಾದ್ದರಿಂದ, ಅತಿ ಮುಖ್ಯವಾದ ವಿಷಯಗಳನ್ನು ವ್ಯಾಖ್ಯಾನಿಸುವುದಕ್ಕೆ ಆರಿಸಿಕೊಳ್ಳಬೇಕು. ಕಪಾಲಿಗೆ ಭಗವಾನರ ಸ್ವಲ್ಪ ಕರುಣೆಯು ದೊರಕಿದಲ್ಲಿ ಅವರು ಆ ಕೆಲಸವನ್ನು ಮಾಡಲು ಆಗುವುದು.

ಗುರುವಿನಲ್ಲಿನ ಅಚಲವಾದ ಭಕ್ತಿ, ಈಶ್ವರ ಮತ್ತು ಮಾತೃಭೂಮಿ (ಕಾಣಿಕೆ)

ನಾಯನರ ಮಾತೃಭೂಮಿಯ ಮೇಲಿನ ಪ್ರೀತಿಯು ಅವರ ತಪಸ್ಸಿನ ಮೇಲಿನ ಪ್ರೀತಿಗಿಂತ

ಮಾನವನ್ನು. ಗಾಂಧೀಜಿಯು ಮಾತೃಭೂಮಿಯನ್ನು ಸೇವಿಸಲು ಕರ್ಮಯೋಗದ ಮಾರ್ಗವನ್ನು ಆರಿಸಿಕೊಂಡರು. ಜನಗಳನ್ನು ಸೇವಿಸಲು ಹಾಗೂ ಜ್ಞಾನಪ್ರಸಾರವನ್ನು ಸಾರಲು ನಾಯಿನರು ಈ ಕೆಳಗಿನ ಪತ್ರದಲ್ಲಿ ವಿವರಿಸಿರುವಂತೆ ತಪಸ್ಸನ್ನು ಮಾರ್ಗವಾಗಿ ಆರಿಸಿಕೊಂಡರು.

ಆನಂದಾಶ್ರಮ, ಶಿರಸಿ
05-05-1931

ಓ ಭಗವನ್! ಮಾನವ ರೂಪದ ಮಾಯೆ!

ಇಲ್ಲಿ ಎಲ್ಲವೂ ಸಮರ್ಪಕ ಹಾಗೂ ಒಳ್ಳೆಯದಾಗಿದೆ. ಓ ದೇವನೇ! ನಿಮ್ಮ ಪಾದಗಳಲ್ಲಿ ನನ್ನ ಪ್ರಸ್ತುತ ಸ್ಥಿತಿಯನ್ನು ವಿವರಿಸಲು ಕಾತುರನಾಗಿದ್ದೇನೆ. ಕೆಲವರು ಮಹದಾನಂದವನ್ನು ಜೀವನದ ಪರಮೋಚ್ಚ ಗುರಿಯೆಂದು ಪರಿಗಣಿಸುವರು. ಮತ್ತೆ ಕೆಲವರು ಯೋಗದಲ್ಲಿ ಅತ್ಯುನ್ನತ ಸ್ಥಾನವನ್ನು ತಲುಪುವುದು ಅತ್ಯಂತ ಸಮರ್ಪಕವಾದದ್ದೆಂದು ತಿಳಿಯುವರು. ನೋವು ನಲಿವುಗಳ ಸ್ಥಿತಿಯಿಂದಾಚೆಯ ಸ್ಥಿತಿಯನ್ನು ತಲುಪುವುದೇ ಕೆಲವರ ಗುರಿ. ಸಾವನ್ನು ಗೆಲ್ಲುವುದೇ ಕಟ್ಟ ಕಡೆಯ ಆಸೆ ಕೆಲವರಿಗೆ. ಆದರೆ ನನಗೆ ಆಸೆಯನ್ನು ನಾಶಮಾಡುವುದೇ ಅತಿ ಸುಂದರ ಗುರಿ. ಕೆಲವು ಅನುಪಯುಕ್ತವಾದ ಆಸೆಗಳು ಕಡಿಮೆಯಾಗಿವೆ. ಕೆಲವನ್ನು ಅನುಭವಿಸಿದ್ದೇನೆ ಹಾಗೂ ನಂತರ ಅವುಗಳು ಸತ್ತಿವೆ. ಕೆಲವನ್ನು ಹೊಡೆದೋಡಿಸಿ ಹಾಗೂ ನಾಶಪಡಿಸಿರುವೆ. ಆದರೆ ದೇವನೇ! ಅದರಲ್ಲಿ ಏನಾದರೂ ಅರ್ಥವುಂಟೇ ಎಂಬುದನ್ನು ನಾನು ಅರಿಯೆ. ಒಂದು ಆಸೆಯು ಉಳಿದುಹೋಗಿದೆ. ಅದನ್ನು ವಿರೋಧಿಸಲು ನನ್ನಲ್ಲಿ ಶಕ್ತಿ ಇಲ್ಲ. ಅಲ್ಲದೇ ಅದನ್ನು ಓಡಿಸಲು ನನಗೆ ಆಸೆಯಿಲ್ಲ. ನಾನು ಭಗವಂತನ ಸಹಾಯಕ್ಕೆ ಪ್ರಾರ್ಥಿಸುತ್ತಿರುವೆ. ಭಗವಾನರಿಗೆ ಬಹುಶಃ ಇದು ಗೊತ್ತಿರಬಹುದು (ದೇಶದ ಒಳಿತು).

ನಿಮ್ಮವ

ಆನಂದಾಶ್ರಮ, ಶಿರಸಿ
22-07-1931

ಓ ಭಗವನ್! ನಿಮ್ಮ ಭಕ್ತರ ಪ್ರೀತಿಪಾತ್ರನೇ!

ಸತತ ಮಂತ್ರೋಚ್ಚಾರದ ಫಲದ ವೈಭವವನ್ನು ಸಾಧಿಸಿದೆ. ಯೋಗದ ಸಾರವನ್ನು ಗ್ರಹಿಸಿದೆ. ಧರ್ಮ ಗ್ರಂಥಗಳನ್ನು ಚೆನ್ನಾಗಿ ಓದಿದೆ. ತೀವ್ರವಾದ ತಪಸ್ಸನ್ನಾಚರಿಸಿದೆ. ಕುಂಡಲಿನಿ ಶಕ್ತಿಯ ಜಾಗೃತಿ ಹಾಗೂ ಅದರ ಆರೋಹಣವನ್ನು ಅನುಭವಿಸಿದೆ. "ನಾನು" ಎಂಬುದರ ಮೂಲವನ್ನು ತಲುಪಿದೆ. ಶಾಂತತೆಯಲ್ಲಿ ಪ್ರಕೃತಿಯು ಮಾಗುವುದಕ್ಕೆ ಸಾಕ್ಷಿಯಾದೆ. ಅಗಲುವಿಕೆಯ ಭಾವನೆಯನ್ನು ಬಿಟ್ಟುಕೊಟ್ಟೆ, ವಿದ್ಯಮಾನಗಳೆಡೆಗಿನ ಮೋಹವನ್ನು ತಿರಸ್ಕರಿಸಿದೆ. ಇಷ್ಟಾದರೂ ನನಗೆ ತೃಪ್ತಿಯಾಗಿಲ್ಲ. ಈಗ ನಾನು ತೃಪ್ತಿಯನ್ನು ಭಕ್ತಿಯ ಮೂಲಕ ಪಡೆಯಬೇಕೆಂದಿರುವೆ. ಈ ರೀತಿಯ ಭಕ್ತಿಗೆ ಮೂರು ವಸ್ತುಗಳು – ಮೊದಲನೆಯದು ಭಗವಾನ್ ರಮಣ ಮಹರ್ಷಿ, ಎರಡನೆಯದು ಭಗವಾನ್ ಇಂದ್ರ ಹಾಗೂ ಮೂರನೆಯದು ಭಗವತಿ ಮಾತೆ ಭರತ ಭೂಮಿ (ಭಾರತ ಮಾತೆ).

ದೀರ್ಘ ಕಾಲದ ನಿಮ್ಮ ಭಕ್ತ
ಗಣಪತಿ

ನಾಯನರ ಪತ್ರಗಳು ಭಕ್ತಿ, ಜ್ಞಾನ ಹಾಗೂ ಯೋಗ ಕ್ಷೇತ್ರಗಳಲ್ಲಿ ಮಹತ್ತರವಾದದ್ದು. ಕೇವಲ ಕೆಲವು ಪತ್ರಗಳನ್ನು ಇಲ್ಲಿ ಉದಾಹರಣೆಯಾಗಿ ಕೊಡಲಾಗಿದೆ.

೧೯

ಸೀಮಿತ ಶರೀರ; ತಪಸ್ಸಿನ ಅಪಾರ ಶಕ್ತಿ

ತವ ಶಕ್ತಿಝರೀಪತನಂ ಬಹಿರದ್ಭುತವೃಷ್ಟಿರಿವ
ಇದಮಂತರನಂತಬಲೇ ಮದಿರಾರಸಪಾನಮಿವ ॥
– ಪ್ರಚಂಡ ಚಂಡೀ ತ್ರಿಶತಿ (41)

"ಓ ದೇವಿ! ನಿನ್ನ ಶಕ್ತಿಯು ಹೊರಗೆ ಬಿದ್ದಾಗ ಅದು ಅದ್ಭುತವಾದ ವರ್ಷಧಾರೆಯಂತೆ ಅನುಭವವಾಗುವುದು. ಅದು ಆಂತರ್ಯದಲ್ಲಿ ಕೆಲಸಮಾಡಿದಾಗ ಕುಡಿತದಿಂದಾಗುವ ಮಾದಕತೆಯಂಥ ಭಾವನೆಯುಂಟಾಗುವುದು."

"ಧ್ಯಾನವು ವಿದ್ಯುಚ್ಛಕ್ತಿಯಂತೆ ನಿರಂತರವಾಗಿರಬೇಕು. ಅದನ್ನೇ ಸಮಾಧಿ ಅಥವಾ ಕುಂಡಲಿನೀ ಶಕ್ತಿ" ಎನ್ನುವರು ಮಹರ್ಷಿ. ಕಾವ್ಯಕಂಠರಿಗೆ ಕಪಾಲ ಭೇದವಾದಾಗ, ಮಹರ್ಷಿಯು ಹರಳೆಣ್ಣೆಯನ್ನು ಅವರ ನೆತ್ತಿಗೆ ಹಚ್ಚಿ ಕಾವನ್ನು ತಂಪಾಗಿಸಿದರು. ಆಗ ಅವರು ಹೀಗೆ ಹೇಳಿದರು, "ನಾನು ಇಲ್ಲಿರುವುದು ನಾಯನರನ್ನು ನೋಡಿಕೊಳ್ಳಲು. ಆದರೆ ನನಗೆ ಯಾರಿದ್ದಾರೆ?" ಎಂದು ಪ್ರಶ್ನಿಸಿದರು.

ಪ್ರತಿಕ್ಷಣದಲ್ಲೂ ತೈಜಸ ಎಂದು ಕರೆಯಲ್ಪಡುವ ಶಕ್ತಿಯು ಮೂಲಾಧಾರದಿಂದ ಸಹಸ್ರಾರದೆಡೆಗೆ ಹರಿಯುತ್ತಲೇ ಇರುತ್ತದೆ. ಕುಂಡಲಿನೀ ಶಕ್ತಿಯನ್ನು ಹೊಂದಿದ ಯೋಗಿಗೆ ಇದರ ಚಲನೆಯು ಉಸಿರಾಟದ ಚಲನೆಯಂತೆ ಅರಿವಾಗುವುದು. ಕುಂಡಲಿನೀ ಶಕ್ತಿಯ ಸ್ತ್ರೀರೂಪವಾದ ಪ್ರಚಂಡ ಚಂಡಿಯನ್ನು ನಾಯನರು ಮುನ್ನೂರು ಶ್ಲೋಕಗಳಲ್ಲಿ ವಿವರಿಸಿದ್ದಾರೆ. ಆ ಸ್ತೋತ್ರದಲ್ಲಿ ಅವರು ತಮ್ಮ ಅನುಭವಗಳನ್ನೂ ವಿವರಿಸಿರುವರು. ಯಾರು ಈ ಅಪಾರವಾದ ಹಾಗೂ ಅಳೆಯಲಾಗದ ಶಕ್ತಿಯನ್ನು ಅನುಭವಿಸುವರೋ ಅವರಿಗೆ ಶರೀರವು ಒಂದು ಅಡಚಣೆಯಂತಾಗುವುದು.

ನಾಯನರ ಶರೀರವು ಈ ಶಕ್ತಿಯ ಆಟದ ಮೈದಾನವಾಗಿದ್ದರಿಂದ ಅದು ಖಾರ, ಹುಳಿ ಮತ್ತು ಲವಣಗಳಂತಹ ಘಟ್ಟಿಯಾದ ರುಚಿಗಳಿಗೆ ಹೊಂದಿಕೊಳ್ಳಲಾಗಲಿಲ್ಲ. ಆದರೆ ಭಕ್ತರು ವೈವಿಧ್ಯಮಯವಾದ ಆಹಾರವನ್ನು ಕಾಣಿಕೆಯನ್ನಾಗಿ ತರುತ್ತಿದ್ದರು ಮತ್ತು ನಾಯನರು ಅವರನ್ನು ತೃಪ್ತಿ ಪಡಿಸಲು ಅದನ್ನು ಸ್ವಲ್ಪವಾದರೂ ಸೇವಿಸಬೇಕಿತ್ತು. ಶರೀರಕ್ಕೆ

ವಯಸ್ಸಾಗುತ್ತಿದ್ದಂತೆ ಈ ಸ್ಥಿತಿಯನ್ನು ಅದು ತಡೆದುಕೊಳ್ಳಲಾಗುತ್ತಿರಲಿಲ್ಲ. ಹೀಗಾಗಿ ಅವರ ಶರೀರವು ಮಧುಮೇಹದ ಸೂಚನೆಗಳನ್ನು ತೋರತೊಡಗಿತು, ಆದರೆ ನಾಯನರು ಇದನ್ನು ಯಾರಿಗೂ ತೋರ್ಪಡಿಸಲಿಲ್ಲ. "ಪ್ರಚಂಡ ಚಂಡೀ ತ್ರಿಶತಿ"ಯಲ್ಲಿನ ಕೆಲವು ಶ್ಲೋಕಗಳು ಅವರ ದೇಹಸ್ಥಿತಿ ಹಾಗೂ ಅನುಭವಗಳನ್ನು ತೋರುತ್ತಿತ್ತು.

ಸಹತಾ ಮಿದ ಮಂಬ ವಪು ಸ್ತವ ನಾಟ್ಯಮಪಾರಜವಂ
ಬಹಿರಂತರ ಶತ್ರುಸಹಂ ಭಜತಾಂ ಬಹುಲಂ ಚ ಬಲಮ್ ॥
– ಪ್ರಚಂಡ ಚಂಡೀ ತ್ರಿಶತಿ (39)

"ಓ ಮಾತೇ! ನಿನ್ನ ನಾಟ್ಯದ ವೇಗವನ್ನು ಈ ಶರೀರವು ಸಹಿಸಲಿ. ಅಂತರಂಗದ ಹಾಗೂ ಬಹಿರಂಗದ ಶತ್ರುಗಳ ಹೊಡೆತಗಳನ್ನು ತಡೆದುಕೊಳ್ಳಲು ಈ ಶರೀರಕ್ಕೆ ಶಕ್ತಿಯನ್ನು ದಯಪಾಲಿಸು."

ಪೃಥಿವೀ ಚ ಸಹೇತ ನ ತೇ ತಟಿದೀಶ್ವರಿ ನಾಟ್ಯಜವಂ
ಕರುಣಾ ಯದಿ ದೇವಿ ನ ತೇ ವಪುಷಾಮಿಹ ಕಾ ನು ಕಥಾ ॥
– ಪ್ರಚಂಡ ಚಂಡೀ ತ್ರಿಶತಿ (40)

"ಓ ಮಿಂಚಿನ ಮಾತೇ! ಭೂಮಿಯೂ ನಿನ್ನ ನಾಟ್ಯದ ವೇಗವನ್ನು ಭರಿಸಲು ಅಸಾಧ್ಯ ಇನ್ನು ನಿನ್ನ ಕರುಣೆಯಿಲ್ಲದಿದ್ದರೆ ಈ ಶರೀರದ ಪಾಡೇನು?"

ವಾರ್ಧಕೇನ ಬಲಕಾಂತಿಹಾರಿಣಾ ದಾರುಣೇನ ಕಟುಕಾರ್ಯಕಾರಿಣಾ
ಗ್ರಸ್ತಮೇತಮಧುನಾ ಪುನಃ ಕುರು ತ್ರಾಣದೇ ಯುವಕವತ್ತ್ವದಾಶ್ರಿತಮ್ ॥
– ಪ್ರಚಂಡ ಚಂಡೀ ತ್ರಿಶತಿ (117)

"ವಯಸ್ಸಾದಂತೆ ಶರೀರವು ನಿಃಶಕ್ತಿಯನ್ನು ಪ್ರಕಟಿಸುತ್ತದೆ. ನಿನ್ನಲ್ಲಿ ಆಶ್ರಯ ಪಡೆದ ಈ ಶರೀರಕ್ಕೆ ನೀನು ಪುನಃ ಯೌವನವನ್ನು ನೀಡದಿದ್ದರೆ, ಅದು ನಿನ್ನ ನಾಟ್ಯದ ಶಕ್ತಿಯನ್ನು ತಡೆದುಕೊಳ್ಳಲಾರದು."

ಅನಂದಾಶ್ರಮದಲ್ಲಿನ ವಾಸ್ತವ್ಯವು ನಾಯನರಿಗೆ ಹಿಡಿಸಲಿಲ್ಲ. ಅಲ್ಲಿನ ವಾತಾವರಣವು ಸಾಧನೆ ಹಾಗೂ ವಿದ್ವತ್ ಚರ್ಚೆಗಳಿಗೆ ಸೂಕ್ತವಾಗಿದ್ದರೂ, ಭಕ್ತರು ಕಾಣಿಕೆಯಾಗಿ ನೀಡುತ್ತಿದ್ದ ಆಹಾರವನ್ನು ನಾಯನರಿಗೆ ತಿನ್ನಲು ಆಗುತ್ತಿರಲಿಲ್ಲ. ಮಹಾದೇವನು ನಾಯನರನ್ನು ನೋಡಿ ಕೊಳ್ಳಲು ಶಿರಸಿಗೆ ಬಂದನು. ಕುಳುವೆಯು ನಾಯನರ ಆರೋಗ್ಯಕ್ಕೆ ಸಹಕಾರಿಯಾಗಿದ್ದರಿಂದ ಅವರನ್ನು ಕುಳುವೆಗೆ ಕರೆದೊಯ್ಯಲಾಯಿತು.

ಮಹಾದೇವನು ಅತ್ಯಂತ ಎಚ್ಚರಿಕೆಯಿಂದ ನಾಯನರ ಯೋಗಕ್ಷೇಮವನ್ನು

ನೋಡಿಕೊಳ್ಳುತ್ತಿದ್ದರಿಂದ ಕಾಲಾನುಕ್ರಮದಲ್ಲಿ ನಾಯನರ ಆರೋಗ್ಯದಲ್ಲಿ ಚೇತರಿಕೆ ಉಂಟಾಯಿತು. ನಾಯನರಿಗೆ ಹೊಂದುವ ಅಡಿಗೆಯನ್ನು ಅವರ ಸೊಸೆ ರಾಜೇಶ್ವರಿಯು ತಯಾರು ಮಾಡುತ್ತಿದ್ದಳು. ಹಾಗಾಗಿ ನಾಯನರು 1932 ರಿಂದ 1934ರ ವರೆಗೂ ನೆಮ್ಮದಿಯ ಜೀವನವನ್ನು ನಡೆಸಿದರು. ಈ ಸಮಯದಲ್ಲಿ ಅವರು "ದಶ ಮಹಾ ವಿದ್ಯಾದಿ ಸೂತ್ರ ಗ್ರಂಥಾವಳಿ" ಕೃತಿಯ ಸಾರೋಕ್ತಿಯನ್ನು ಗದ್ಯರೂಪದಲ್ಲಿ ಬರೆದರು. ಇದು ಪರಾಶಕ್ತಿಯ ದಶಾವತಾರದ ಗ್ರಂಥವಾಗಿತ್ತು. ನಾಯನರಿಗೆ ಆ ಪುಸ್ತಕದಲ್ಲಿನ ಎಲ್ಲ ಮಂತ್ರಗಳ ದಿವ್ಯ ದರ್ಶನವಾಗಿತ್ತು. ಈ ಸಮಯದಲ್ಲಿ ನಾಯನರು ಸಂಸ್ಕೃತದಲ್ಲಿ "ಪೂರ್ಣ"ಎಂಬ ಕಾದಂಬರಿಯನ್ನು ಬರೆಯಲು ತೊಡಗಿದರು.

ಮಹಾದೇವನಿಗೆ ಐದು ಹೆಣ್ಣು ಮಕ್ಕಳಾದರೂ ಕೇವಲ ಎರಡು ಮಕ್ಕಳು ಉಳಿದರು. ಮಹಾದೇವನಿಗೆ ಗಂಡು ಮಗುವೊಂದು ಆಗುವ ಉದ್ದೇಶದಿಂದ ನಾಯನರು ರಾಜೇಶ್ವರಿಗೆ ಇಂದ್ರ ಮಂತ್ರವನ್ನು ಉಪದೇಶಿಸಿದರು. ಈ ಮಂತ್ರವನ್ನು ಸತತವಾಗಿ ಪಠಿಸಿದ್ದರಿಂದ ರಾಜೇಶ್ವರಿಗೆ ನಂತರ ನಾಲ್ಕು ಮಕ್ಕಳಾಗಿ ಅವುಗಳಲ್ಲಿ ಮೂರು ಗಂಡು ಮಕ್ಕಳಾದವು ಹಾಗೂ ಮೂರೂ ಗಂಡು ಮಕ್ಕಳು ಬದುಕುಳಿದರು.

ನಾಯನರ ಆರೋಗ್ಯವು ಸುಧಾರಿಸಿದ್ದರಿಂದ ಭಕ್ತರಿಗೆ ನಾಯನರು ಅನಂದಾಶ್ರಮಕ್ಕೆ ಮರಳುವುದು ಬೇಕಾಗಿತ್ತು. ಹಾಗಾಗಿ ಅವರು ಸಾರ್ವಜನಿಕರಿಂದ ಹಣ ಸಂಗ್ರಹಿಸಿ ಆಶ್ರಮವನ್ನು ಉತ್ತಮ ಸ್ಥಿತಿಗೆ ತರಲು ಪ್ರಯತ್ನಿಸುತ್ತಿದ್ದರು. ಮಹಾದೇವನಿಗೆ ತನ್ನ ತಂದೆಯವರು ಮರಳಿ ಅಲ್ಲಿಗೆ ಹೋದರೆ ಮತ್ತೆ ಆರೋಗ್ಯವು ಕೆಡಬಹುದೆಂದು ಭಯಪಟ್ಟು, ಅವನು ನಾಯನರೊಡನೆ ಎಲ್ಲರೂ ತಮ್ಮೂರಿಗೆ ಹೋಗಿ ಅಲ್ಲಿ ನಾಯನರಿಗೆ ಬೇರೆ ಸಣ್ಣ ಗುಡಿಸಿಲನ್ನು ಕಟ್ಟಿಕೊಟ್ಟು ಅವರ ಸೇವೆಯನ್ನು ಮಾಡಲು ಅವಕಾಶ ಕೊಡುವಂತೆ ಅವರಲ್ಲಿ ವಿನಂತಿಸಿಕೊಂಡನು.

ಮುಂದಾಗುವುದನ್ನು ಅರಿತಿದ್ದ ನಾಯನರು ತಮ್ಮ ಮಗನ ವದನದಲ್ಲಿ ಪ್ರತಿಫಲಿಸುತ್ತಿದ್ದ ತನ್ನ ತಂದೆಯಲ್ಲಿನ ಭಕ್ತಿಯನ್ನು ಕಂಡರು ಹಾಗೂ ಅವನ ಕೋರಿಕೆಗೆ ಒಪ್ಪಿಕೊಂಡರು.

೨೦

ಕಟ್ಟಕಡೆಯ ಕರೆ

ಪಾಹಿವಾ ಪಶುಪತೇ ಜಹೀಹಿ ವಾ ಜೀವನಂ ತವ ಪದೋಃ ಸಮರ್ಪಿತಂ
ದೇಹಿ ವಾ ವಿಮುಖತಾ ಮುಸೇಹಿ ವಾ ಪ್ರಾರ್ಥಯೇ ಕಿಮಪಿ ನಾಥ ನಾಪರಮ್ ॥
– ಶಿವ ಶತಕಮ್

"ಓ ಸಮಸ್ತ ಸೃಷ್ಟಿಗಳ ಒಡೆಯನೇ! ನನ್ನನ್ನು ಉಳಿಸು ಇಲ್ಲವೇ ಬಿಡು. ಏನೇ ಆದರೂ ನನ್ನ ಜೀವವು ನಿನ್ನ ಪಾದಗಳಲ್ಲಿ ಮೀಸಲಾಗಿದೆ. ನೀನು ನಿನ್ನ ಕರುಣೆಯನ್ನು ನನ್ನ ಮೇಲೆ ವರ್ಷಿಸು ಅಥವಾ ವರ್ಷಿಸದಿರು, ನಾನು ನಿನ್ನಲ್ಲಿ ಬೇರೇನನ್ನೂ ಬೇಡುವುದಿಲ್ಲ."

ಒಮ್ಮೆ ಒಬ್ಬ ರಾಮ ಭಕ್ತನು ಗೋದಾವರಿ ನದಿಯ ದಡದಲ್ಲಿ ವಾಸಿಸುತ್ತಿದ್ದನು. ಒಂದು ದಿನ, ಶ್ರೀರಾಮನು ಅವನ ಕನಸಿನಲ್ಲಿ ಬಂದು ಅವನನ್ನು ಕೂಡಲೇ ದೋಣಿಯೊಂದರಲ್ಲಿ ಭದ್ರಾದ್ರಿಯೆಡೆಗೆ ಹೋಗುವಂತೆ ಹಾಗೂ ದಾರಿಯಲ್ಲಿ ಅವನಿಗೆ ಪುಷ್ಪಕ ವಿಮಾನವನ್ನು ಕಳಿಸುವುದಾಗಿ ಹಾಗೂ ಅದರಲ್ಲಿ ಅವನನ್ನು ವೈಕುಂಠಕ್ಕೆ ಕರೆದೊಯ್ಯುವುದಾಗಿ ಸೂಚಿಸಿದನು.

ಮಾರನೇ ದಿನ ಅವನು ತನ್ನ ಹೆಂಡತಿಗೆ ಹಿಂದಿನ ರಾತ್ರೆ ಅವನ ಕನಸಿನಲ್ಲಿ ನಡೆದ ಘಟನೆಯನ್ನು ಅತೀವ ಸಂತಸದಿಂದ ತಿಳಿಸಿದ. ಅದೇ ರೀತಿ ದಂಪತಿಗಳು ತಯಾರಾಗಿ ದೋಣಿಯೊಂದರಲ್ಲಿ ಕುಳಿತು ಪ್ರಯಾಣ ಶುರು ಮಾಡಿದರು. ಭಕ್ತನು ಶ್ರೀರಾಮನ ಧ್ಯಾನದಲ್ಲಿ ಮುಳುಗಿದ್ದರೆ, ಅವನ ಪತ್ನಿಯು ಪುಷ್ಪಕ ವಿಮಾನಕ್ಕಾಗಿ ಸುತ್ತಲೂ ನೋಡುತ್ತಿದ್ದಳು. ಅವರು ಗೋದಾವರಿ ನದಿಯಲ್ಲಿ ಅರ್ಧ ದೂರ ಪಯಣಿಸಿದ ನಂತರ ಅವಳಿಗೆ ಆಕಾಶದಿಂದ ಪುಷ್ಪಕ ವಿಮಾನ ಬರುತ್ತಿರುವುದು ಕಂಡು ಬಂದಿತು. ಕೂಡಲೇ ಅವಳು ಆನಂದದಿಂದ "ಅಗೋ ಅಲ್ಲಿ ಪುಷ್ಪಕ ವಿಮಾನ" ಎಂದು ಕೂಗುತ್ತಾ ತಾನು ತಂದಿದ್ದ ಬಟ್ಟೆ ಬರೆಗಳನ್ನು ಜೋಡಿಸಿಕೊಳ್ಳತೊಡಗಿದಳು. ಭಕ್ತನು ಸದ್ದಿಲ್ಲದೇ ವಿಮಾನವನ್ನು ಹತ್ತಿದನು ಹಾಗೂ ವಿಮಾನವು ಮೇಲೆ ಹಾರತೊಡಗಿತು. ಬಡ ಹೆಂಗಸು ತಾನು ತಂದಿದ್ದ ಬಟ್ಟೆ ಗಂಟುಗಳನ್ನು ಜೋಡಿಸಿಕೊಳ್ಳುತ್ತಲೇ ಇದ್ದಳು, ಹೀಗಾಗಿ ಅವಳನ್ನು ಒಬ್ಬಂಟಿಯಾಗಿ ಬಿಟ್ಟು ವಿಮಾನವು ಹೊರಟೇ ಹೋಯಿತು!

ಸದಾ ದೈವ ಧ್ಯಾನದಲ್ಲಿ ಮುಳುಗಿರುವ ನಾಯನರು ಒಂದು ಸ್ಥಳದಿಂದ ಮತ್ತೊಂದು

ಸ್ಥಳವನ್ನು ಭೇದಭಾವದಿಂದ ನೋಡುತ್ತಿರಲಿಲ್ಲ. ಒಮ್ಮೆ ಒಬ್ಬ ಭಕ್ತನು ಶ್ರೀ ರಮಣರ ಬಳಿ, "ಭಗವನ್, ಇಲ್ಲಿಗೆ ಬರಲು ನಾನು ಎರಡು ದಿನ ಪ್ರಯಾಣ ಮಾಡಿದೆ!" ಎಂದನು. ಭಗವಾನರು ಅವನಿಗೆ, "ನೀನು ಪ್ರಯಾಣ ಮಾಡಿಲ್ಲ, ಕೇವಲ ನಿನ್ನ ಶರೀರವು ಪ್ರಯಾಣ ಮಾಡಿದೆ," ಎಂದು ಉತ್ತರಿಸಿದರು. ಬೇರೆಯವರಿಗೆ ಇರುವಂತೆ ಜ್ಞಾನಿಗಳಿಗೆ ಸಂಬಂಧಿಕರು, ಸ್ನೇಹಿತರು ಅಥವಾ ಮಕ್ಕಳುಗಳ ಬಗ್ಗೆ ಯಾವುದೇ ಮೋಹವಿರುವುದಿಲ್ಲ. ಕೇವಲ ಕರುಣೆ ಮಾತ್ರ ಅವರಿಂದ ಸಮಸ್ತ ಸೃಷ್ಟಿಯ ಮೇಲೆ ಹರಿಯುವುದು.

ಅನೇಕ ದಿನಗಳ ನಂತರ ನಾಯನರು ಕಲುವರೈಗೆ ಬಂದಿದ್ದು ಅವರ ಸ್ನೇಹಿತರು, ಸಂಬಂಧಿಗಳಿಗೆ ಅತೀವ ಸಂತಸವುಂಟಾಯಿತು. ಅವರೆಲ್ಲರೂ ನಾಯನರನ್ನು ಸ್ವಾಗತಿಸಿ ನಂತರ ಅವರೊಂದಿಗೆ ಮಾತನಾಡಿ ಸಂಭ್ರಮಗೊಂಡರು. ನಾಯನರು ತಮ್ಮ ಊರಿನಲ್ಲೇ ಶಾಶ್ವತವಾಗಿ ನೆಲಸುವರು ಎಂಬ ಸುದ್ದಿಯನ್ನು ಕೇಳಿ ಎಲ್ಲರೂ ಸಂತೋಷಪಟ್ಟರು. ಜನಗಳು ಗುಂಪು ಗುಂಪಾಗಿ ಪ್ರತಿ ದಿನವೂ ನಾಯನರ ದರ್ಶನವನ್ನು ಪಡೆಯಲು ಬರತೊಡಗಿದರು. ಮಹಾದೇವನಿಗೆ ಜನಗಳನ್ನು ನಿಯಂತ್ರಿಸುವುದು ಕಷ್ಟವಾಗತೊಡಗಿತು. ಆದರೆ ಅವನು ಅದನ್ನು ತುಂಬಾ ಚಾಕಚಕ್ಯತೆಯಿಂದ ನಿಭಾಯಿಸಿದನು.

ಮಹಾದೇವನು ತಮ್ಮ ಮನೆಯಿಂದ ಎರಡು ಫರ್ಲಾಂಗ್ ದೂರದಲ್ಲಿ ಎರಡು ಕೋಣೆಗಳಿಂದ ಕೂಡಿದ ಕುಟೀರವನ್ನು ನಾಯನರ ವಾಸಕ್ಕಾಗಿ ನಿರ್ಮಿಸಿದನು. ನಾಯನರು ಗೃಹ ಪ್ರವೇಶವನ್ನು 14–9–34ರಂದು ಮಾಡಬೇಕೆಂದು ದಿನವನ್ನು ನಿರ್ಧರಿಸಲಾಗಿತ್ತು. ಈ ಮಧ್ಯೆ ಆಂಧ್ರ ವಿಶ್ವವಿದ್ಯಾಲಯದವರು ವಾರ್ಷಿಕೋತ್ಸವವನ್ನು ವಿಶಾಖಪಟ್ಟಣಮ್ ನಲ್ಲಿ ಆಚರಿಸುವವರಿದ್ದರು. ನಾಯನರು ವಿಶಾಖಪಟ್ಟಣಮ್ ಹತ್ತಿರದಲ್ಲೇ ಕಲುವರೈನಲ್ಲಿರುವುದನ್ನು ಅರಿತು, ಆಂಧ್ರ ವಿಶ್ವವಿದ್ಯಾಲಯದ ಕಾರ್ಯದರ್ಶಿಯು ನಾಯನರನ್ನು ಭಾಷಣಮಾಡಲು ವಿಶೇಷ ಆಮಂತ್ರಣ ಪತ್ರಿಕೆಯೊಂದಿಗೆ ಅವರನ್ನು ಆಮಂತ್ರಿಸಿದರು. ಆ ಸಮಯದಲ್ಲಿ ಸರ್ ಎಸ್.ರಾಧಾಕೃಷ್ಣನ್ ಅವರು ವಿಶ್ವವಿದ್ಯಾಲಯದ ಉಪಕುಲಪತಿಗಳು. ಇವರು ನಾಯನರ ಶಿಷ್ಯ ಸರ್ವೆಪಲ್ಲಿ ನರಸಿಂಹನ್ ಅವರ ಸೋದರಳಿಯ. ಸರ್ವೆಪಲ್ಲಿ ನರಸಿಂಹನ್ ಅವರು ನಂತರದ ದಿನಗಳಲ್ಲಿ ಪ್ರಣವಾನಂದ ಎಂಬ ಹೆಸರಿನಿಂದ ಪ್ರಖ್ಯಾತರಾದರು. ಶ್ರೀ ರಾಧಾಕೃಷ್ಣನ್ ಅವರು ತನ್ನ ಸೋದರ ಮಾವನ ಮೂಲಕ ನಾಯನರ ಬಗ್ಗೆ ಸಾಕಷ್ಟು ಕೇಳಿದ್ದರು. ನಾಯನರು ತನ್ನ ಸೋದರ ಮಾವನಿಗೆ ಸಂಸ್ಕೃತವನ್ನು ಹೇಳಿಕೊಡುತ್ತಿದ್ದಾಗ ಅದನ್ನು ಕೇಳಿಸಿಕೊಳ್ಳುತ್ತಿದ್ದರು. ಈಗ ಅವರು ನಾಯನರ ಭಾಷಣವನ್ನು ಕೇಳಲು ಸಂತೋಷದಿಂದ ಕಾಯುತ್ತಿದ್ದರು.

ವಾರ್ಷಿಕೋತ್ಸವ ಸಮಾರಂಭವನ್ನು ಅತ್ಯಂತ ಅದ್ದೂರಿಯಾಗಿ ನಡೆಸಲಾಯಿತು. ನಾಯನರು ಮಹಾಭಾರತದ ಬಗ್ಗೆ ಎರಡು ದಿನ ಭಾಷಣವನ್ನು ಮಾಡಿದರು.

ತಮ್ಮ ಭಾಷಣದಲ್ಲಿ ನಾಯನರು, "ಮಹಾಭಾರತ ಕಥೆಯು ವೇದಕಾಲದಲ್ಲಿ ನಡೆಯಿತು. ಋಗ್ವೇದದಲ್ಲಿ ಮಹಾಭಾರತದಲ್ಲಿನ ಮಹಾನ್ ನಾಯಕರುಗಳ ಹೆಸರುಗಳು ಉಲ್ಲೇಖವಾಗಿವೆ. ಪಾಂಡವರ ಪ್ರಪಿತಾಮಹ, ಶಂತನುವು ಋಗ್ವೇದ ಸೂಕ್ತಗಳ ರಚನಾಕಾರ. ದೇವಕಿಯ ಸಹೋದರ ಶ್ರೀಕೃಷ್ಣನು ಚಂದ್ರಗುಪ್ತ ಮೌರ್ಯನ ಹಿಂದಿನ 138 ತಲೆಮಾರುಗಳಲ್ಲಿ ಇದ್ದನು. ಪುರಾಣಗಳ ರಚನಕಾರರು ವೇದಕಾಲದ ಮಹಾಭಾರತವನ್ನು ಬದಲಾಯಿಸಿ ಸೃಷ್ಟಿಕರ್ತ ದೇವನಾದ ಮಹೇಂದ್ರನ ಜಾಗದಲ್ಲಿ ವಿಷ್ಣುವನ್ನು ತಂದರು. ಇಂದ್ರನನ್ನು ಕೆಳಮಟ್ಟದಲ್ಲಿ ಚಿತ್ರಿಸಿ ಅವನಿಗೆ ಪರ್ಜನ್ಯ (ಮಳೆಯ ಅಧಿಪತಿ) ಪದವಿಯನ್ನು ನೀಡಿದರು." ಈ ರೀತಿಯ ವ್ಯಾಖ್ಯಾನದಿಂದ ನಾಯನರು ಉತ್ಸಾಹಿ ವಿಮರ್ಶಕರಲ್ಲಿ ಸ್ಫೂರ್ತಿಯನ್ನು ತುಂಬಿದರು. ಮಹಾನ್ ವಿದ್ವಾಂಸರುಗಳಾದ ತಾತಾ ಸುಬ್ಬರಾಯ ಶಾಸ್ತ್ರಿ ಮತ್ತು ಕಸಿನತುನಿ ನಾಗೇಶ್ವರ ರಾವ್ ಅವರುಗಳು ಈ ಸಭೆಯಲ್ಲಿ ಹಾಜರಿದ್ದರು. ನಾಯನರ ಭಾಷಣಗಳನ್ನು ಆಂಧ್ರ ಪತ್ರಿಕೆಯಲ್ಲಿ ಪ್ರಕಟಿಸಲಾಯಿತು.

ಉಪಕುಲಪತಿ ಡಾ.ಶ್ರೀ.ಎಸ್.ರಾಧಾಕೃಷ್ಣನ್ ಅವರು ನಾಯನರು ಡಿಪಾರ್ಟ್‌ಮೆಂಟ್ ಆಫ್ ಓರಿಯೆಂಟಲ್ ರಿಸರ್ಚ್‌ನಲ್ಲಿ ಕೆಲಸ ಮಾಡಿದರೆ ಡಿಪಾರ್ಟ್‌ಮೆಂಟಿಗೆ ಅನುಕೂಲವಾಗುವುದೆಂದು ಅವರಿಗೆ ಅಲ್ಲಿಯ ಡೀನ್ ಪದವಿಯನ್ನು ನೀಡಿದರು. ಆದರೆ ನಾಯನರು ಅದನ್ನು "ಡೀನ್, ಯಾರು ಡೀನ್" ಎಂದು ಹೇಳಿ ಹೇಗೆ ತಾವು ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿನ ಪ್ರೋಫೆಸರ್ ಹುದ್ದೆಯನ್ನು ತಿರಸ್ಕರಿಸಿದ್ದರೋ ಅದೇ ರೀತಿ ಈ ಪದವಿಯನ್ನೂ ಒಪ್ಪಿಕೊಳ್ಳಲಿಲ್ಲ. ತಪಸ್ವಿಗಳಿಗೆ ಸ್ವಾಭಾವಿಕವೆಂಬಂತೆ ನಾಯನರಿಗೆ ಪದವಿ, ಪ್ರಶಸ್ತಿಗಳು ವರ್ಜ್ಯ. ಆದರೆ ಅವರು "ದಿ ಕ್ರಿಟಿಕಲ್ ಅನಾಲಿಸೀಸ್ ಆಫ್ ದಿ ಹಿಸ್ಟರಿ ಆಫ್ ಇಂಡಿಯಾ" ಎಂಬ ಭಾರತ (ಇಂಡಿಯಾ)ದ ವಿಮರ್ಶಾತ್ಮಕ ಕೃತಿಯನ್ನು ಭಾರತದ ಚರಿತ್ರೆಯ ವಿಮರ್ಶಾತ್ಮಕರ ಒತ್ತಾಯದ ಮೇರೆಗೆ ರಚಿಸಿದರು.

ನಾಯನರು ಕಲುವರೈನಲ್ಲಿ ವಾಸಿಸುತ್ತಿರುವರೆಂದು ತಿಳಿದು ಖರಗಪುರದಿಂದ ಮರುವಾಡ ಪ್ರಸಾದ ರಾವ್ ಬಂದರು. ಅವರು ನಾಯನರ ಸೋದರಸಂಬಂಧಿ ಸೂರ್ಯನಾರಾಯಣ ಶಾಸ್ತ್ರಿಗಳ ಅಳಿಯ. ಪ್ರಸಾದ್ ರಾವ್ ಅವರು ಒಳ್ಳೆಯ ವಾಗ್ಮಿ. ಅವರು ಜೀವನದಲ್ಲಿ ತೊಂದರೆಗೆ ಒಳಗಾಗಿ ಅದು ಗ್ರಹಗಳ ನಕಾರಾತ್ಮಕ ವರ್ತನೆಗಳಿಂದ ತನ್ನ ಮೇಲೆ ಅದ ಪ್ರಭಾವವೆಂದು ನಂಬಿ ಅದರ ಪರಿಹಾರಕ್ಕೆ ಅನೇಕ ರೀತಿಯ ಪೂಜೆಗಳನ್ನು ಮಾಡಿದ್ದರು. ಅವರು ನಾಯನರ ಉಪಸ್ಥಿತಿಯಲ್ಲಿ ತನ್ನ ಮೇಲೆ ಆಗಿರುವ ಗ್ರಹಗಳ ಪ್ರಭಾವವು ನಿವಾರಣೆಯಾಗುವುದೆಂದು ನಂಬಿದ್ದು ಅವರನ್ನು ಖರಗಪುರಕ್ಕೆ ಕರೆದೊಯ್ಯಲು ಬಂದಿದ್ದರು. ನಾಯನರ ಮಗ ಮಹಾದೇವ ಹಾಗೂ ಶಿವರಾಮ ಶಾಸ್ತ್ರಿಗಳ ಪುತ್ರರಿಬ್ಬರೂ ಪ್ರಸಾದ್ ರಾವ್ ಅವರ ಆಹ್ವಾನವನ್ನು ವಿರೋಧಿಸಿದರು. ಆದರೂ ಪ್ರಸಾದ್ ರಾವ್ ಅವರು ತಮ್ಮ ಪಟ್ಟು ಬಿಡದೇ, ನಾಯನರ ಆರೋಗ್ಯವನ್ನು ಎಚ್ಚರಿಕೆಯಿಂದ ನೋಡಿಕೊಳ್ಳುವುದಾಗಿ ಒತ್ತಾಯ ಮಾಡಿದರು. ಅವರ ಪತ್ನಿಯೂ ನಾಯನರನ್ನು ಕಡೇ ಪಕ್ಷ ಎರಡು ತಿಂಗಳ

ಮಟ್ಟಿಗಾದರೂ ಬರಲೇ ಬೇಕೆಂದು ಪಟ್ಟುಬಿಡದೇ ಬೇಡಿಕೊಂಡರು. ಆಕೆಯ ಬೇಡಿಕೆಯನ್ನು ಹೇಗೆ ತಿರಸ್ಕರಿಸುವುದು ಎಂಬುದನ್ನರಿಯದ ಮಹಾದೇವನು ಏನೂ ಮಾಡಲು ತೋಚದೇ ಇದ್ದನು. ಅವನು ನಾಯನರನ್ನು ಶಿರಸಿಯಿಂದ ಕಲುವರ್ಲೈಗೆ ಕರೆತಂದು ಅವರನ್ನು ತನ್ನೊಂದಿಗೆ ಹಾಗೂ ಇತರೆ ಸಂಬಂಧಿಕರೊಂದಿಗೆ ನೆಮ್ಮದಿಯಿಂದ ಇರಲೆಂದು ಅವರಿಗಾಗಿ ಕುಟೀರವನ್ನೂ ನಿರ್ಮಿಸಿದ್ದನು ಹಾಗೂ ಅದರ ಗೃಹ ಪ್ರವೇಶಕ್ಕೆ ದಿನವನ್ನೂ ನಿರ್ಧರಿಸಿಯಾಗಿತ್ತು.

ನಾಯನರು ಎರಡೂ ಕಡೆಗಳ ವಾದ ವಿವಾದವನ್ನು ಆಲಿಸಿದರು. ಅವರಿಗೆ ಪ್ರಸಾದ ರಾವ್ ಅವರ ಇಂಗಿತ ಹಾಗೂ ತಮ್ಮ ಮಗನ ಭಾವನೆಗಳು ಗೊತ್ತಾದವು. ನಾಯನರು ತಮ್ಮ ಕಣ್ಣುಗಳನ್ನು ಮುಚ್ಚಿ ಕೆಲ ನಿಮಿಷ ಧ್ಯಾನಿಸಿ ನಂತರ ಕಣ್ತೆರೆದು "ಒಳ್ಳೆಯದು, ಕರೆ ಬಂದಿದೆ, ನಾನು ಹೋಗಲೇ ಬೇಕು." ಎಂದರು.

14–08–1934, ಗೃಹ ಪ್ರವೇಶವನ್ನು ನಿಗದಿಪಡಿಸಿದ ದಿನದಂದೇ ತನ್ನ ಕಿರಿಯ ಸಹೋದರನಾದ ಶಿವರಾಮ ಶಾಸ್ತ್ರಿಗಳ ಮಗ ಸಿಂಹಲುವಿನ ಜೊತೆಗೂಡಿ ನಾಯನರು ಖರಗಪುರದೆಡೆಗೆ ಪ್ರಸಾದ ರಾವ್ ದಂಪತಿಗಳೊಂದಿಗೆ ಹೊರಟರು. ಮಹಾದೇವನು ಬಹಳವಾಗಿ ದುಃಖಿತನಾಗಿದ್ದನು.

೨೧

ದಯಾಮಯ ನೋಟ

ಮುಧಾ ಕ್ಷಿಪಸ್ಯದ್ರಿಸುತೇ ಕಟಾಕ್ಷಾನ್
ಕೈಲಾಸಕಾಂತಾರಮಹೀರುಹೇಷು
ಇತಃ ಕಿರೇಷತ್ತವ ನಾಸ್ತಿ ಹಾನಿಃ
ಸಿದ್ಧಯತ್ಯಭೀಷ್ಟಂ ಚ ಸಮಸ್ತಮಸ್ಯ

– ಉಮಾಸಹಸ್ರಮ್ (4–13–21)

"ಓ ಗಿರಿಜಾ! ನಿನ್ನ ಫಲಪ್ರದವಾದ ನೋಟವನ್ನು ಬರಡಾದ ಕೈಲಾಸ ಪರ್ವತದೆಡೆಗೆ ಹರಿಸಿ ಏಕೆ ವ್ಯರ್ಥಗೊಳಿಸುವೆ? ಅದೇ ನೋಟವನ್ನು ನನ್ನೆಡೆಗೆ ಹರಿಸಿದಲ್ಲಿ ನೀನು ಏನನ್ನೂ ಕಳೆದುಕೊಳ್ಳುವುದಿಲ್ಲ; ಬದಲಾಗಿ ನನಗೆ ಹೊಂದಬಹುದಾದ ಎಲ್ಲವನ್ನೂ ಪಡೆದುಕೊಳ್ಳುವ ಲಾಭವಾಗುವುದು."

ಹಿಮಾಲಯ ಪರ್ವತ ಶ್ರೇಣಿಯಲ್ಲಿ ಉತ್ತುಂಗ ಪರ್ವತಶಿಖರವಾದ ಕೈಲಾಸವು ಪರಿಶುದ್ಧವಾದ ಹಿಮದಿಂದ ಬೆಳಗುತ್ತಿದೆ. ಈ ರಾಜ ಶಿಖರವು ಶಿವ–ಪಾರ್ವತಿಯರ ವಾಸಸ್ಥಳ, ಮತ್ತು ಇದು ಸಮಸ್ತ ವಿಶ್ವಕ್ಕೂ ಭಾರತದ ಶಾಂತಿಪ್ರಿಯ ಪ್ರಕೃತಿಯನ್ನು ಘೋಷಿಸುತ್ತದೆ. ಪಾರ್ವತಿಯ ಮನೋಹರವಾದ ನೋಟವು ಆದಿ ಶಂಕರ ಹಾಗೂ ಈ ಪವಿತ್ರ ಪರ್ವತದಲ್ಲಿ ನೆಲಸಿದ್ದ ಹಾಗೂ ನೆಲಸಿರುವ ಅನೇಕ ಮಹಾನ್ ಋಷಿಮುನಿಗಳ ಆಧ್ಯಾತ್ಮಿಕ ವೈಭವದ ಮೂಲವೆಂದು ನಾಯನರು ಹೇಳುತ್ತಿದ್ದರು.

ಅಂತಹ ಪವಿತ್ರವಾದ ಹಾಗೂ ದೈವೀ ಪರಿಸರದಲ್ಲಿ, ಒಬ್ಬ ಮಹಾತ್ಮನು ಸೂರ್ಯನೆಡೆಗೆ ಅರ್ಘ್ಯವನ್ನು ನೀಡುತ್ತಿದ್ದನು. ಅವರ ಪಕ್ಕದಲ್ಲಿ ನಿಂತಿದ್ದ ಭಕ್ತನು ಅದನ್ನು ನೋಡುತ್ತಿದ್ದನು. ಇದ್ದಕ್ಕಿದ್ದಂತೆ ಮಹಾತ್ಮನು ಭಕ್ತನನ್ನು ನೋಡಿ ಅವನ ಹಸ್ತವನ್ನು ಚಾಚುವಂತೆ ಹೇಳಿದನು. ಅವನು ಭಕ್ತನ ಹಸ್ತದಲ್ಲಿ ಸ್ವಲ್ಪ ನೀರನ್ನು ಸುರಿದು ಅವನೆಡೆಗೆ ಅಪಾರ ಕರುಣೆಯಿಂದ ನೋಡಿದನು.

ನಾಯನರು ಖರಗಪುರಕ್ಕೆ ಬರುವುದಕ್ಕೆ ಹತ್ತು ವರ್ಷಗಳ ಹಿಂದೆ ಗುಂಟೂರು ಲಕ್ಷ್ಮೀಕಾಂತಮ್ ಎಂಬ ಗೃಹಸ್ಥನಿಗೆ ಕನಸಿನಲ್ಲಿ ಮೇಲೆ ವಿವರಿಸಿದ ಮಹಾತ್ಮನ ಘಟನೆಯು

ಬಂದಿತ್ತು. ಲಕ್ಷ್ಮೀಕಾಂತಮ್ ಅಂದೇ ಆ ಮಹಾತ್ಮನೇ ತನ್ನ ಗುರುವಾಗಬೇಕೆಂದು ದೃಢ ನಿರ್ಧಾರವನ್ನು ಮಾಡಿದ್ದನು. ಲಕ್ಷ್ಮೀಕಾಂತಮ್ ಅಕೆಲ್ಲ ಸೂರ್ಯನಾರಾಯಣರ ಅಳಿಯ ಹಾಗೂ ನಂತರದ ದಿನದಲ್ಲಿ ಜ್ಞಾನಾನಂದ ಭಾರತಿ ಎಂದು ಹೆಸರನ್ನು ಬದಲಾಯಿಸಿಕೊಂಡಿದ್ದನು. ನಾಯನರು ಖರಗಪುರದಲ್ಲಿದ್ದಾಗ ಜ್ಞಾನಾನಂದ ಭಾರತಿಯು ಕಲ್ಕತ್ತಾದಲ್ಲಿ ವಾಸಿಸುತ್ತಿದ್ದು, ತನ್ನ ಕನಸಿನ ಗುರುವು ತನ್ನೆಡೆಗೆ ಬಂದೇ ಬರುವರೆಂದು ದೃಢವಾಗಿ ನಂಬಿದ್ದನು.

ನಾಯನರು ಖರಗಪುರದಲ್ಲಿ ಪ್ರಸಾದ್‌ರಾವ್ ಅವರ ಮನೆಯಲ್ಲಿದ್ದರು. ಅದೇ ಸಮಯದಲ್ಲಿ ಕಂಚಿ ಕಾಮಕೋಟಿ ಪೀಠದ ಪೀಠಾಧಿಪತಿಗಳು ಖರಗಪುರದಲ್ಲಿ ಬಿಡಾರ ಮಾಡಿದ್ದರು. ನಾಯನರು ಅವರ ದರ್ಶನಕ್ಕಾಗಿ ಅಲ್ಲಿಗೆ ಹೋದರು. ನಾಯನರು ಸದಾ ಧೋತಿ, ಜುಬ್ಬ ಹಾಗೂ ಹೆಗಲ ಮೇಲೆ ಶಲ್ಯವನ್ನು ಧರಿಸುತ್ತಿದ್ದರು. ಅದನ್ನು ಊಟದ ಸಮಯದಲ್ಲೂ ಬದಲಾಯಿಸುತ್ತಿರಲಿಲ್ಲ. ಅವರು ಕಪಾಲ ಭೇದ ಸಿದ್ಧಿಯನ್ನು ಹೊಂದಿದ್ದರಿಂದ, ನಾಯನರು ಊಟದ ಸಮಯದಲ್ಲಿ ರೇಷ್ಮೆ ವಸ್ತ್ರವನ್ನೂ ಧರಿಸುತ್ತಿರಲಿಲ್ಲ. ಮಠಾಧಿಪತಿಗಳನ್ನು ದರ್ಶಿಸುವಾಗ ಭಕ್ತರು ಸಾಂಪ್ರದಾಯಿಕ ವಸ್ತ್ರವಾದ ಪಂಚೆ ಮಾತ್ರ ಧರಿಸಿ, ಮೇಲ್ಭಾಗದಲ್ಲಿ ಯಾವ ವಸ್ತ್ರವನ್ನೂ ಧರಿಸಿರಕೂಡದು. ಹೀಗಾಗಿ ಶ್ರೀ ಚಂದ್ರಶೇಖರೇಂದ್ರ ಸರಸ್ವತಿ ಸ್ವಾಮಿಗಳ ಅನುಚರರು ಬಾಗಿಲಿನಲ್ಲೇ ನಾಯನರನ್ನು ತಡೆದರು. ಆದರೆ ಸ್ವಾಮಿಗಳು ತಾವು ಕುಳಿತಿದ್ದ ಸ್ಥಳದಿಂದಲೇ ನಾಯನರನ್ನು ಕಂಡರು ಹಾಗೂ ಅವರನ್ನು ಭೇಟಿಯಾಗಲು ಕೂಡಲೇ ಎದ್ದು ಹೊರಬಂದರು. ಅವರು ತಮ್ಮ ಹೆಗಲಿನ ಮೆಲಿದ್ದ ಶಾಲನ್ನು ತೆಗೆದು ನಾಯನರ ಹೆಗಲಿಗೆ ಹಾಕಿ ಅವರನ್ನು ಒಳಗೆ ಬರುವಂತೆ ಆಹ್ವಾನಿಸಿ ನಂತರ ಅವರಿಗೆ ಕುಳಿತುಕೊಳ್ಳಲು ಆಸನವನ್ನು ನೀಡಿದರು. ಅಲ್ಲೇ ಸ್ವಾಮಿಗಳು ವಿದ್ವಾಂಸರ ಸಭೆಯನ್ನು ಕರೆದು ಆ ಸಭೆಯಲ್ಲಿ ನಾಯನರ ತಪಸ್ಸಿದ್ಧಿಯನ್ನು ಹೊಗಳಿದರು. ನಾಯನರು ಧನ್ಯವಾದಪೂರ್ವಕವಾಗಿ "ಅಂಬಿಕಾ ಗೀತಮ್"ನ್ನು ಸ್ತುತಿಸಿ ಸ್ವಾಮಿಗಳ ಎದುರಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿದರು. ಖರಗಪುರದ ನಾಗರಿಕರಿಗೆ ಈಗ ನಾಯನರ ಮಹತ್ವವು ಅರಿವಾಗಿ ಅನೇಕರು ಅವರ ಶಿಷ್ಯರಾದರು.

ನಂತರ ನಾಯನರು ಇಂಡಿಯನ್ ಇನ್‌ಸ್ಟಿಟ್ಯೂಟ್‌ನಲ್ಲಿ ಸ್ಫೂರ್ತಿದಾಯಿಕ ಭಾಷಣವನ್ನು ಮಾಡಿದರು. ಕಲ್ಕತ್ತಾ ನಿವಾಸಿಯಾದ ನಮನಿ ಸೂರ್ಯನಾರಾಯಣ ಅವರು ನಾಯನರ ಭಾಷಣದಿಂದ ಪ್ರಭಾವಿತರಾಗಿ ಅವರನ್ನು ಕಲ್ಕತ್ತೆಗೆ ಆಹ್ವಾನಿಸಿದರು. ನಾಯನರು ಆಹ್ವಾನವನ್ನು ಸ್ವೀಕರಿಸಿ 24-11-1934ರಂದು ಕಲ್ಕತ್ತೆಗೆ ಬಂದರು. ಗುಂಟೂರು ಲಕ್ಷ್ಮೀಕಾಂತಮ್ ಅವರ ಮನೆಯಲ್ಲಿ ಅವರ ವಾಸ್ತವ್ಯವನ್ನು ಗೊತ್ತುಮಾಡಲಾಯಿತು.

೯೬ ದಲ್ಲಿ ಹೆಚ್ಚು ಜನಗಳಿಗೆ ನಾಯನರ ಬಗ್ಗೆ ಗೊತ್ತಿರಲಿಲ್ಲವಾದ್ದರಿಂದ ಸಂಜೀವರಾವ್

ತುಪಡಿಸಿ ಎಲ್ಲರೂ ತಮ್ಮ ತಮ್ಮ ಕಛೇರಿಗೆ ಹೋಗಿದ್ದರು. ಹೀಗಾಗಿ

ನಾಯನರು ಬಂದಾಗ ಲಕ್ಷ್ಮೀಕಾಂತಮ್ ಅವರ ಪತ್ನಿ ಸೂರಮ್ಮನವರೇ ನಾಯನರನ್ನು ಸ್ವಾಗತಿಸಿ ಅವರ ಅಗತ್ಯತೆಗಳನ್ನು ನೋಡಿಕೊಂಡರು. ಮಧ್ಯಾಹ್ನ ಲಕ್ಷ್ಮೀಕಾಂತಮ್ ಅವರು ಮನೆಗೆ ಬಂದು ಮೊಟ್ಟ ಮೊದಲಿಗೆ ನಾಯನರನ್ನು ತಮ್ಮ ಮನೆಯಲ್ಲಿ ನೋಡಿ ಸ್ತಂಭೀಭೂತರಾದರು. ಅವರ ಹೃದಯ ಬಡಿತವು ಅತಿ ಹೆಚ್ಚಾಗಿ ದೇಹದ ತುಂಬಾ ಬೆವರತೊಡಗಿದರು. ಆಶ್ಚರ್ಯದಿಂದ ಅವರ ಬಾಯಿಂದ ಮಾತುಗಳೇ ಹೊರಬರಲಿಲ್ಲ. ಹತ್ತು ವರ್ಷಗಳ ಹಿಂದೆ ತಾನು ಕನಸಿನಲ್ಲಿ ಕಂಡ ಪವಿತ್ರ ಮಹಾತ್ಮರೇ ಇವರಾಗಿದ್ದರು. ತನ್ನ ಕನಸಿನಲ್ಲಿ ಹಿಮಾಲಯದ ಕೈಲಾಸ ಪರ್ವತ ಪ್ರದೇಶದಲ್ಲಿ ಕಂಡ ಗುರು ಈಗ ತಮ್ಮ ಮನೆಯಲ್ಲಿ ತಮ್ಮ ಮುಂದೆ ಪ್ರತ್ಯಕ್ಷವಾಗಿರುವರು! ಲಕ್ಷ್ಮೀಕಾಂತಮ್ ಅವರು ತಮ್ಮ ಸ್ಥಿಮಿತವನ್ನು ಮರಳಿ ಪಡೆದು, ಅವರಿಗೆ ನಮಸ್ಕರಿಸಿ ಅವರ ಯೋಗಕ್ಷೇಮವನ್ನು ವಿಚಾರಿಸಿದರು.

ನಾಯನರನ್ನು ಕಲ್ಕತ್ತಾದ ತೆಲುಗು, ತಮಿಳು ಹಾಗೂ ಮಲಯಾಳಿ ಸಮಾಜಗಳು ಆಹ್ವಾನಿಸಿದವು. ಅವರುಗಳು ನಾಯನರ ಭಾಷಣಗಳನ್ನು ಏರ್ಪಾಟು ಮಾಡಿದರು. ನಾಯನರು ತಮ್ಮ ಭಾಷಣಗಳಲ್ಲಿ ತಮ್ಮ ಸ್ವಂತ ಜೀವನದ ಸಂಗತಿಗಳನ್ನೂ ಹಂಚಿಕೊಂಡರು. ಅವರು "ಪ್ರಪಂಚ", "ಅಯೋನ್ಸ್ ಆಫ್ ಟೈಮ್", "ಅವತಾರ" ಹಾಗೂ "ವೇದ"ಗಳ ಬಗೆಗಿನ ಸಭಿಕರ ಸಂದೇಹಗಳನ್ನು ದೂರಮಾಡಿದರು. ಅನೇಕರಿಗೆ ಶ್ರೀ ರಮಣ ಮಹರ್ಷಿಗಳ ಜೀವನ, ಅವರ ತತ್ತೋಪದೇಶ ಹಾಗೂ ನಾಯನರ ಬಗ್ಗೆ ಅರಿಯಲು ಅವಕಾಶವೊದಗಿತು.

ಲಕ್ಷ್ಮೀಕಾಂತಮ್ ಅವರ ಮನೆಯಲ್ಲಿ ಪ್ರತಿದಿನವೂ ಸತ್ಸಂಗವಿರುತ್ತಿತ್ತು. ನಾಯನರು ಅನೇಕರಿಗೆ ಇಂದ್ರಾಣಿ ಮಂತ್ರವನ್ನು ಉಪದೇಶಿಸಿದರು. ಸೂರಮ್ಮನವರ ಪ್ರೀತಿಪೂರ್ವಕ ಆತಿಥ್ಯದಲ್ಲಿ ನಾಯನರು ಸಮಯವನ್ನು ಸಂತೋಷದಿಂದ ಕಳೆದರು.

ಲಕ್ಷ್ಮೀಕಾಂತಮ್ ಅವರ ಕನಸಿನ ಮಹಾತ್ಮನು ಹಿಮಾಲಯದ ನಿವಾಸಿ. ನಾಯನರ ಬಗ್ಗೆ ಅವರ ಮನಸ್ಸಿನಲ್ಲಿ ಕೊರೆಯುತ್ತಿದ್ದ ಸಂದೇಹವನ್ನು ಪರಿಹರಿಸಿಕೊಳ್ಳಲು ಅವರು ನಾಯನರನ್ನು ಎಂದಾದರೂ ಹಿಮಾಲಯಕ್ಕೆ ಹೋಗಿದ್ದೀರಾ ಎಂದು ಕೇಳಿದರು. ನಾಯನರು ಮೆದುವಾಗಿ, "ನಾನು ಹಿಮಾಲಯದಿಂದಲೇ ಬಂದಿರುವೆ ಮತ್ತು ನೀವು ನನ್ನ ವಾಸಸ್ಥಳವನ್ನು ನಿಮ್ಮ ಕನಸಿನಲ್ಲಿ ಕಂಡಿರುವಿರಿ," ಎಂದು ಅವರೆಡೆಗೆ ಕರುಣಾಪೂರಿತ ಮುಗುಳ್ನಗೆಯಿಂದ ನೋಡಿದರು. ಆ ನೋಟವು ಲಕ್ಷ್ಮೀಕಾಂತಮ್ ಅವರ ಮನಸ್ಸನ್ನು ಅಂತರ್ಮುಖಿಯನ್ನಾಗಿಸಿತು.

ನಂತರದ ದಿನಗಳಲ್ಲಿ ಲಕ್ಷ್ಮೀಕಾಂತಮ್ ಅವರು ನಾಯನರ ಜೀವನ ಚರಿತ್ರೆಯನ್ನು ತೆಲುಗಿನಲ್ಲಿ ಬರೆದರು ಮತ್ತು ಅವರ ಅನೇಕ ಕೃತಿಗಳನ್ನು ತೆಲುಗಿನಲ್ಲಿ ಭಾಷಾಂತರಿಸಿದರು. ಅವರು ತಮ್ಮೆಲ್ಲ ಅಭಿವೃದ್ಧಿಗಳಿಗೂ ನಾಯನರ ದಯೆ ಮಾತ್ರವೇ ಕಾರಣವೆಂದು ಹೇಳಿದರು.

ನಾಯನರ ಭಕ್ತರು ಅವರ ವಾಸ್ತವ್ಯಕ್ಕಾಗಿ ಖರಗಪುರದಲ್ಲಿ ಅನುಕೂಲಗಳನ್ನು ಕಲ್ಪಿಸಿಕೊಟ್ಟರು. 1935ರ ಆಗಸ್ಟ್ ತಿಂಗಳಿನ ಮೂರನೇ ವಾರದಲ್ಲಿ ನಾಯನರನ್ನು ಖರಗಪುರಕ್ಕೆ

ಕರೆತಂದರು. ಗಣಪತಿ ಹಬ್ಬದ ದಿನವಾದ 01-09-1935ರಂದು ಗಣಪತಿ ಮುನಿಗಳನ್ನು (ನಾಯನರು) ಆಂಧ್ರ ಪಾಠಶಾಲೆಯ ಕಟ್ಟಡದಲ್ಲಿನ ವೇದಿಕೆಯ ಮೇಲೆ ಕುಳ್ಳಿರಿಸಿ ಅವರನ್ನು ಸಂಪೂರ್ಣ ವೇದ ಪದ್ಧತಿಯಲ್ಲಿ ದೇವರನ್ನು ಅವಾಹಿಸಿ ಹಾಗೂ ವಿಸರ್ಜಿಸಿದ ರೀತಿಯಲ್ಲಿ ಪೂಜಿಸಿದರು. ಆದರೆ ಇದನ್ನು ಕೆಲವರು ಅಪಶಕುನವೆಂದು ಪರಿಗಣಿಸಿದರು. ಆದರೆ ನಾಯನರು ಭಕ್ತರು ಏನು ಮಾಡಿದರೂ ಅದಕ್ಕೆ ಅಡ್ಡಿಪಡಿಸಲಿಲ್ಲ.

೨೨

ಮಹಾ ನಿರ್ವಾಣ

ಯೋಽನ್ತಸ್ಸುಖೋಽನ್ತರಾರಾಮಸ್ತಥಾಽನ್ತರ್ಜ್ಯೋತಿರೇವ ಯಃ
ಸ ಯೋಗೀ ಬ್ರಹ್ಮನಿರ್ವಾಣಂ ಬ್ರಹ್ಮಭೂತೋಽಧಿಗಚ್ಛತಿ ॥
– ಭಗವದ್ಗೀತೆ (ಅಧ್ಯಾಯ 5, ಶ್ಲೋಕ 24)

"ಯಾರು ನಿಶ್ಚಯಿಸಿಕೊಂಡು ಸರ್ವವ್ಯಾಪೀ ಆತ್ಮನಲ್ಲಿಯೇ ಸುಖಿಯಾಗಿರುತ್ತಾನೆಯೋ ಮತ್ತು ಅಂತರಂಗದಲ್ಲೇ ಅನಂದಾನುಭವ ಪಡೆಯುತ್ತಾನೆಯೋ ಪರಬ್ರಹ್ಮ ಪರಮಾತ್ಮನಲ್ಲಿ ಒಂದೇ ಭಾವವಾಗಿ ಬೆರೆತ ಆ ಯೋಗಿಯು ಬ್ರಹ್ಮಾನಂದವನ್ನು ಹೊಂದುವನು."

ಮಹಾದೇವನಿಗೆ ಗಂಡು ಮಗುವಾಯಿತೆಂದು ತಿಳಿದಕೂಡಲೇ, ನಾಯನರು ಖರಗಪುರದಿಂದ ಕಲುವರೈಗೆ ಹೊರಟರು. ಮಗುವಿಗೆ ಇಂದ್ರನ ಮತ್ತೊಂದು ಹೆಸರಾದ ಪುರಂಧರ ಎಂದು ನಾಮಕರಣ ಮಾಡಲಾಯಿತು. ಈ ಮಧ್ಯೆ ಖರಗಪುರದಲ್ಲಿ ನಾಯನರ ಶಿಷ್ಯರು ನಾಯನರಿಗಾಗಿ ಆಶ್ರಮವೊಂದನ್ನು ನಿರ್ಮಿಸಲು ಒಂದು ವಿಶಾಲವಾದ ಸ್ಥಳವನ್ನು ಖರೀದಿಸಿದರು ಹಾಗೂ ನಾಯನರನ್ನು ಖರಗಪುರಕ್ಕೆ ಮರಳಿ ಬರುವಂತೆ ಒತ್ತಾಯಪಡಿಸತೊಡಗಿದರು. ಅವರ ಕೋರಿಕೆಯನ್ನು ಮನ್ನಿಸುವ ಸಲುವಾಗಿ ನಾಯನರು 21–09–1935ರಂದು ಖರಗಪುರದೆಡೆಗೆ ಹೊರಟರು.

ಡಿಸೆಂಬರ್ 1935ರಲ್ಲಿ ಖರಗಪುರದಲ್ಲಿ ಆಶ್ರಮ ನಿರ್ಮಿಸುವ ಸಲುವಾಗಿ ಶಂಖುಸ್ಥಾಪನೆಯನ್ನು ಮಾಡಲಾಯಿತು. ಈ ಕಾರ್ಯಕ್ರಮಕ್ಕೆ ಕಲ್ಕತ್ತದಿಂದ ಅನೇಕ ಭಕ್ತರು ಆಗಮಿಸಿದ್ದರು. ನಾಯನರು ಆಶ್ರಮದ ಕಟ್ಟಡವು ನಿರ್ಮಾಣವಾಗುತ್ತಿದ್ದಂತೆ ಮರಳಿ ಖರಗಪುರಕ್ಕೆ ಬರುವೆನೆಂದು ಆಶ್ವಾಸನೆ ನೀಡಿ ಅಲ್ಲಿಂದ ಕಲ್ಕತ್ತಾ ನಗರಕ್ಕೆ ಲಕ್ಷ್ಮೀಕಾಂತಮ್ ಅವರೊಡನೆ ಹೊರಟರು. ಲಕ್ಷ್ಮೀಕಾಂತಮ್ ಅವರೊಡನೆ ಇದ್ದು ತಮ್ಮ "ಪೂರ್ಣಾ" ಕಾದಂಬರಿಯ 30 ಅಧ್ಯಾಯಗಳನ್ನು ಬರೆದರು. "ವಿಶ್ವ ಮೀಮಾಂಸ"ಕ್ಕೆ ಅರ್ಥವನ್ನು ರಚಿಸಿದರು ಮತ್ತು ಈ ಸಮಯದಲ್ಲೇ "ಕ್ರಿಟಿಸಿಸಂ ಆಫ್ ಇಂಡಿಯನ್ ಹಿಸ್ಟರಿ" ಕೃತಿಯನ್ನು ಭಾಗಶಃ ರಚಿಸಿದರು. ಅಷ್ಟರಲ್ಲಿ ಖರಗಪುರದ ಆಶ್ರಮವು ಸಿದ್ಧವಾಗಿತ್ತು ಹಾಗೂ ಅಲ್ಲಿನ ಭಕ್ತರು ನಾಯನರನ್ನು ಕರೆದೊಯ್ಯಲು ಕಲ್ಕತ್ತಕ್ಕೆ ಬಂದೇ ಬಿಟ್ಟರು. ದಿನಾಂಕ 25–04–

1936ರರಂದು ನಾಯನರು ಆಶ್ರಮವನ್ನು ಪ್ರವೇಶಿಸಿದರು. ಶಿವರಾಮ ಶಾಸ್ತ್ರಿಯ ಮಗ ಸಿಂಹಲು ಕಲುವರ್ರೈನಿಂದ ನಾಯನರನ್ನು ನೋಡಿಕೊಳ್ಳುವ ಸಲುವಾಗಿ ಖರಗಪುರಕ್ಕೆ ಬಂದನು. ಎಸ್.ಸೂರ್ಯನಾರಾಯಣರ ಮನೆಯು ಸಮೀಪದಲ್ಲೇ ಇದ್ದದ್ದರಿಂದ ಅವರ ಮನೆಯಿಂದಲೇ ಊಟವನ್ನು ತರುವ ವ್ಯವಸ್ಥೆಯಾಯಿತು. ಸೂರ್ಯನಾರಾಯಣರಿಗೆ ಇಬ್ಬರಿಗೆ ಪ್ರತಿದಿನವೂ ಅಡಿಗೆಯನ್ನು ಕಳುಹಿಸುವುದು ಕಷ್ಟವಾಗುತ್ತಿದ್ದರಿಂದ ಸಿಂಹಲು ನಗರದೊಳಗೆ ಹೋಗಿ ಭಿಕ್ಷೆ ಎತ್ತಲು ಪ್ರಾರಂಭಿಸಿದನು. ಶನಿವಾರ ದಿನಗಳಂದು ಆಶ್ರಮದಲ್ಲಿ ಹೋಮವನ್ನು ನಡೆಸಲಾಗುತ್ತಿತ್ತು ಹಾಗೂ ಇದರಲ್ಲಿ ಭಾಗವಹಿಸಲು ಅನೇಕ ಮಂದಿ ಬರುತ್ತಿದ್ದರು. ಸಂಜೆ ವೇಳೆ ನಾಯನರು ಅನೇಕ ವಿಷಯಗಳನ್ನು ಕುರಿತು ಭಾಷಣವನ್ನು ಮಾಡುತ್ತಿದ್ದರು.

ಭಕ್ತರ ಮನೆಗಳು ಆಶ್ರಮದಿಂದ ಬಹಳ ದೂರವಿದ್ದುದರಿಂದ ಸಿಂಹಲುಗೆ ಭಿಕ್ಷೆಯನ್ನು ಬೇಡಿ ಮರಳಿ ಆಶ್ರಮಕ್ಕೆ ಬರುವುದು ಬಹಳ ತಡವಾಗುತ್ತಿತ್ತು. ಹಾಗಾಗಿ ನಾಯನರು ಬಹಳ ಸಮಯ ಆಶ್ರಮದಲ್ಲಿ ಒಂಟಿಯಾಗಿರುತ್ತಿದ್ದರು. ಆ ಸಮಯದಲ್ಲಿ ಅವರು ಕೇವಲ ದ್ರವಾಹಾರವನ್ನೇ ಸೇವಸಬೇಕಿತ್ತು. ಆದರೆ ಅದನ್ನು ಯಾರ ಬಳಿಯೂ ಹೇಳಿಕೊಂಡಿರಲಿಲ್ಲ. ಹೀಗಾಗಿ ಅವರ ತೋಳಿನ ಒಳಭಾಗದಲ್ಲಿ ಕುರುವಿನ ಗೆಡ್ಡೆ ಬೆಳೆಯಿತು. ಅದು ಮಧುಮೇಹದ ಕುರು ಆಗಿತ್ತು. ಹೀಗಾಗಿ ಈ ಕುರುವನ್ನು ಸಾಮಾನ್ಯವಾದದ್ದೆಂದು ಭಾವಿಸಿ ಅದಕ್ಕೆ ಚಿಕಿತ್ಸೆಯನ್ನು ನೀಡಲಾಯಿತು. ಸ್ವಲ್ಪ ದಿನದಲ್ಲೇ ಮಧುಮೇಹದ ಲಕ್ಷಣಗಳು ಉಲ್ಬಣವಾಗತೊಡಗಿತು.

ಒಂದು ದಿನ ನಾಯನರು ಸೂರ್ಯನಾರಾಯಣನಿಗೆ, "ನಾನು ಇಲ್ಲಿ ಕೇವಲ ಮೂರು ತಿಂಗಳು ಮಾತ್ರ ಇರುವೆ" ಎಂದರು. ನಾಯನರ ಈ ಮಾತುಗಳು ಸೂರ್ಯನಾರಾಯಣನಿಗೆ ಅರ್ಥವಾಗಲಿಲ್ಲ. "ಮೂರು ತಿಂಗಳಿನ ನಂತರ ಎಲ್ಲಿಗೆ ಹೋಗುವಿರಿ, ಸರ್," ಎಂದು ಸೂರ್ಯನಾರಾಯಣನು ಕೇಳಿದನು. ನಾಯನರು, "ನಾನು ನನ್ನ ಕೃತಿಗಳನ್ನು ಮುದ್ರಿಸಿ ಪ್ರಕಟಿಸಲು ಇಲ್ಲಿಂದ ಹೋಗುವೆ," ಎಂದರು. ಸೂರ್ಯನಾರಾಯಣನು ಇದನ್ನು ಹಾಸ್ಯವೆಂದು ಪರಿಗಣಿಸಿದನು.

ಮಾಣಿಕ್ಯಮ್ ಎಂಬ ಭಕ್ತನೊಬ್ಬನು ನಾಯನರ ಜಾತಕವನ್ನು ಪರೀಕ್ಷಿಸಬೇಕೆಂದನು. ನಾಯನರು, "ನನ್ನ ಜಾತಕದ ಪ್ರಕಾರ ಅಪಾಯಕರ ಬದಲಾವಣೆಯು ಈ ಅವಧಿಯಲ್ಲಿದೆ, ನನ್ನ ಜಾತಕವನ್ನು ನೋಡಿ," ಎಂದರು. ಆದರೆ ಭಕ್ತನು ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳಲೇ ಇಲ್ಲ.

ಒಂದು ದಿನ ನಾಯನರು, "ನನ್ನ ದೈವೀ ಶರೀರವನ್ನು ಸರಿಯಾಗಿ ಜೋಡಿಸಲಾಗಿದೆ ಹಾಗೂ ಅದನ್ನು ಭೌತಿಕ ಶರೀರದಿಂದ ಬೇರ್ಪಡಿಸಲಾಗಿದೆ ಹಾಗೂ ಅದು ನನ್ನ ಹತೋಟಿಯಲ್ಲಿದೆ. ನಾನು ಸಿದ್ಧ ಪುರುಷ ಸ್ಥಿತಿಯನ್ನು ತಲುಪಲಿದ್ದೇನೆ." ಎಂದು ಹೇಳಿದರು.

21-07-1936ರರಂದು ನಾಯನರು ತೀವ್ರ ನಿಃಶಕ್ತರಾದರು. ಮಧ್ಯಾಹ್ನದ ನಿದ್ರೆಯ ನಂತರ ಅವರಿಗೆ ಹಾಸಿಗೆಯಿಂದ ಏಳಲು ಆಗಲಿಲ್ಲ. ವೈದ್ಯರು ಅವರಿಗೆ ಗ್ಲುಕೋಸ್ ನೀರನ್ನು ಕೊಡಲು ಹೇಳಿದರು. ಆದರೆ ಅವರು ನೀರನ್ನೂ ಸಹ ಕುಡಿಯಲಾಗಲಿಲ್ಲ. ಅವರ ಸ್ಥಿತಿಯನ್ನು ನೋಡಿದ ಸೂರ್ಯನಾರಾಯಣನು ಗಾಬರಿಯಾಗಿ ನಾಯನರ ಮಗ ಮಹಾದೇವನಿಗೆ ಟೆಲಿಗ್ರಾಮ್ ಕಳಿಸಿ ಲಕ್ಷ್ಮೀಕಾಂತಮ್ ಅವರಿಗೆ ದೂರವಾಣಿಯ ಮೂಲಕ ಪರಿಸ್ಥಿತಿಯನ್ನು ವಿವರಿಸಿದರು.

ನಾಯನರ ನಾಲಿಗೆಯು ದಪ್ಪವಾಗತೊಡಗಿದ್ದರಿಂದ ಅವರಿಗೆ ಸರಿಯಾಗಿ ಮಾತನಾಡಲು ಆಗುತ್ತಿರಲಿಲ್ಲ. ಯಾರಿಗೂ ಅವರ ಈ ಸ್ಥಿತಿಯ ಅರಿವಿರಲಿಲ್ಲ ಹಾಗೂ ಯಾರೂ ಇವರ ಬಗ್ಗೆ ಕಾಳಜಿ ವಹಿಸುತ್ತಿರಲಿಲ್ಲ. ವೈದ್ಯರೂ ಕೂಡಾ ಇವರ ಪರಿಸ್ಥಿತಿಯನ್ನು ಸರಿಯಾಗಿ ಗಮನಿಸಲಿಲ್ಲ.

23-07-1936ರಂದು ಮಹಾದೇವನು ಖರಗಪುರಕ್ಕೆ ಬಂದನು ಹಾಗೂ ಲಕ್ಷ್ಮೀಕಾಂತಮ್ ಅವರೂ ಕಲ್ಕತ್ತದಿಂದ ತಮ್ಮ ಪತ್ನಿಯೊಂದಿಗೆ ಬಂದರು. ಅವರು ನಾಯನರಿಗೆ ಒಂದು ಲೋಟ ಹಣ್ಣಿನ ರಸವನ್ನು ಕುಡಿಸಿದರು, ನಂತರ ಮಹಾದೇವನು, "ಅಪ್ಪಾ ಹೇಗಿರುವಿರಿ" ಎಂದು ಕಣ್ಣಿನಲ್ಲಿ ನೀರು ತುಂಬಿಕೊಂಡು ಕೇಳಿದನು. ನಾಯನರು ಅವರೆಡೆಗೆ ಮುಗುಳ್ನಕ್ಕು ಒಂದು ಕಾಗದದ ಮೇಲೆ, "ನೀನು ಈಗ ತಾನೆ ಬಂದಿರುವುದರಿಂದ ಆಯಾಸ ಪರಿಹರಿಸಿಕೊ," ಎಂದು ಬರೆದರು.

ಆಗ 24-07-1936 ಮಧ್ಯಾಹ್ನ 1 ಘಂಟೆ. ನಾಯನರು ಸ್ವಲ್ಪ ಹಣ್ಣಿನ ರಸವನ್ನು ಕುಡಿದು ಹಾಸಿಗೆಯಿಂದ ಎದ್ದು ಬಚ್ಚಲು ಮನೆಗೆ ಹೋಗಿ ಬಂದರು. ಸ್ವಲ್ಪ ಹೊತ್ತಿನಲ್ಲೇ ಜೋರಾಗಿ ಮಳೆಯು ಸುರಿಯಿತು. ಗುಡಿಸಿಲಿನ ಮೇಲ್ಛಾವಣಿಯಲ್ಲಿ ಅನೇಕ ಕಡೆ ತೂತಾಗಿದ್ದದ್ದರಿಂದ ಮಳೆಯ ನೀರು ಒಳಗೆ ಇಳಿಯತೊಡಗಿತು. ಆಶ್ರಮವನ್ನು ಬಹಳ ದಿನಗಳಿಂದ ಶುದ್ಧಿಮಾಡಿರಲಿಲ್ಲವಾದ್ದರಿಂದ ಬಹಳ ಕೊಳಕಾಗಿತ್ತು. ಲಕ್ಷ್ಮೀಕಾಂತಮ್ ಸುತ್ತಲೂ ನೋಡಿ, "ಈ ಗುಡಿಸಲು ನಿಮಗೆ ಅನುಕೂಲವಾಗಿಲ್ಲ. ನೀವು ಪಾರ್ವತಿಶಮ್ ಅವರ ಮನೆಗೆ ಬದಲಾಯಿಸಿದಲ್ಲಿ ಅನುಕೂಲವಾಗುವುದು," ಎಂದರು. ತಕ್ಷಣವೇ ನಾಯನರು, "ನಾಳೆ ಶನಿವಾರ. ಮಧ್ಯಾಹ್ನ 2.30ಕ್ಕೆ ಹೊರಗೆ ಹೋದಲ್ಲಿ ಅದು ಶ್ರೇಷ್ಠ." ಎಂದರು. ಯಾರಿಗೂ ಇವರು ಉಪಯೋಗಿಸಿದ ಪದಗಳ ಅರ್ಥವು ಹೊಳೆಯಲೇ ಇಲ್ಲ. ಲಕ್ಷ್ಮೀಕಾಂತಮ್ ಕಲ್ಕತ್ತೆಗೆ ಹೊರಟು ಹೋದರು.

25ನೇ ತಾರೀಖು ಶನಿವಾರ, ನಾಯನರು ಬಹಳ ಸಂತೋಷದಿಂದಿರುವಂತೆ ಕಂಡು ಬಂದರು. ಎರಡು ಬಾರಿ ಅವರಿಗೆ ಮಲ ವಿಸರ್ಜನೆಯು ಸುಲಭವಾಗಿ ಆಯಿತು, ಅನಂತರ ಅವರಿಗೆ ತಮ್ಮ ಶರೀರವು ಹಗುರವಾದಂತೆ ಅನಿಸಿತು. ಆದರೆ ಶಕ್ತಿಯು ಅವರ

ಬೆನ್ನೆಲುಬಿನ ತಳಭಾಗದಿಂದ ಮೇಲೇರಲು ಪ್ರಾರಂಭಿಸಿತು. ಮಧ್ಯಾಹ್ನ 2.15ರ ವರೆಗೂ ಹೋಮವು ನಡೆಯುತ್ತಿತ್ತು. ನಾಯನರು ತಮ್ಮ ಮಂಚದಿಂದೆದ್ದರು ಹಾಗೂ ಮಂತ್ರ ಘೋಷಗಳನ್ನು ಕೇಳಿಸಿಕೊಂಡರು.

2.30ರ ಹೊತ್ತಿಗೆ, ನಾಯನರು ಹಾಸಿಗೆಯ ಮೇಲೆ ಮಲಗಿ ಕಣ್ಮುಚ್ಚಿದರು. ಕಪಾಲವು ಭೇದಿಸಿ ಬೇರೆ ಆಯಿತು. ಮಹಾದೇವನು ದುಃಖದಿಂದ, “ಅಪ್ಪಾ, ನನಗೆ ನಿಮ್ಮ ಸಂದೇಶವೇನು?” ಎಂದು ಗದ್ಗದಿತನಾಗಿ ಕೇಳಿದನು. ನಾಯನರು ಶರೀರವನ್ನು ತೊರೆಯುವ ಮೊದಲು ಒಂದು ಕ್ಷಣ ತಡೆದು, “ಜಪಧ್ಯಾನಾಧಿಕಂ ದೈವತಾರಾಧನಂ ಮಹಾಮನೀಃ” (ಜಪ, ಧ್ಯಾನ ಹಾಗೂ ದೇವರ ಪೂಜೆಯು ಅತಿ ಮುಖ್ಯ, ಮತ್ತು ಅವುಗಳನ್ನು ನಿತ್ಯವೂ ಆಚರಿಸಬೇಕು), ಎಂದರು. ಅನಂತರ ನಾಯನರ ಜೀವಾತ್ಮವು ಶಿರದ ಮೂಲಕ ವಿಶ್ವವನ್ನು ಸೇರಿಕೊಂಡಿತು.

ಮಹಾನ್ ಕವಿ, ಮಂತ್ರ ದ್ರಷ್ಟ, ಯೋಗಿಗಳಲ್ಲಿ ಚಕ್ರವರ್ತಿ, ಋಷಿ, ಹಾಗೂ ಮಹಾನ್ ತಪಸ್ವಿ, ವಾಸಿಷ್ಠ ಗಣಪತಿ ಮುನಿಗಳು ತಮ್ಮ ಭೌತಿಕ ಶರೀರವನ್ನು ಮಹೇಶ್ವರಿ ಮಾತೆಯ ಮಡಿಲಲ್ಲಿ ಬಿಟ್ಟು ಅನಾಮಯ ಸ್ಥಿತಿಯಲ್ಲಿ ಐಕ್ಯರಾದರು.

ಬೆಳಗಿನಿಂದಲೂ ಅರುಣಾಚಲದಲ್ಲಿ ಭಗವಾನರು ಗಹನವಾದ ಮೌನದಲ್ಲೇ ಕುಳಿತಿದ್ದರು. ಮಾರನೇ ದಿನ ಅವರಿಗೆ ನಾಯನರ ನಿರ್ವಾಣದ ಸಂದೇಶವು ಟೆಲಿಗ್ರಾಮ್ ಮೂಲಕ ತಲುಪಿತು, “ನಾಯನರು ಹೋದರೆ! ನಾಯನರು ಹೋದರು! ಅವರೆಲ್ಲಿಗೆ ಹೋಗುವರು? ಅವರು ಇಲ್ಲಿಗೆ ಬಂದಿರುವರು!” ಎಂದು ಹೇಳಿ ತಮ್ಮ ಕಣ್ಣುಗಳಲ್ಲಿನ ನೀರನ್ನು ಒರೆಸಿಕೊಳ್ಳಲು ಪಕ್ಕಕ್ಕೆ ತಿರುಗಿದರು.

೨೩

ನಾಯನರಿಗೆ ವಂದನೆಗಳು

ಶ್ರೀಮತ್ಸರ್ವಜ್ಞಕಲ್ಪಃ ಸಕಲಗುಣನಿಧಿಃ ಪೂಜನೀಯಃ ಪರಮಾತ್ಮಾ
ಸಾಕ್ಷಾದ್ವಿದ್ಯೇಶವಾಚಸ್ಪತಿರಿವ ಸಕಲಶ್ರೋತ್ರತತ್ತ್ವಾರ್ಥವೇತ್ತಾ
ಅಂತೇವಾಸೀ ಮಹರ್ಷೇಃ ರಮಣಭಗವತೋ ರಾಜಯೋಗೀ ತಪಸ್ವಿ
ವಾಸಿಷ್ಠಃ ಶ್ರೀ ಮುನೀಂದ್ರಃ ಜಯತಿ ಗಣಪತಿಃ ಕಾವ್ಯಕಂಠೋ ಕವೀಂದ್ರಃ ॥

– ದೈವರಾತ ಗಜಾನನ

"ಸಮಸ್ತವನ್ನೂ ಬಲ್ಲವ, ಅತ್ಯಂತ ಸದ್ಗುಣ ಸಂಪನ್ನ, ಪೂಜಿಸಲ್ಪಡುವ, ಪರಮಾತ್ಮ, ಜ್ಞಾನದಲ್ಲಿ ಸ್ವತಃ ಬೃಹಸ್ಪತಿಯೇ ಆದ, ಸಮಸ್ತ ವೇದಗಳ ಸಾರವನ್ನರಿತವ, ಶ್ರೀ ರಮಣ ಮಹರ್ಷಿಗಳ ಶಿಷ್ಯ, ರಾಜ ಯೋಗಿ, ತಪಸ್ಸಿನಲ್ಲಿ ದೃಢ, ವಾಸಿಷ್ಠ ಕುಲೋದ್ಭವ, ಮಹಾನ್ ಕವಿ ಕಾವ್ಯಕಂಠ ಶ್ರೀ ಗಣಪತಿ ಮುನಿಗೆ ಜಯವಾಗಲಿ."

ಉದಾತ್ತ ಮೌಲ್ಯಗಳನ್ನು ಸ್ಥಾಪಿಸಿ ಹಾಗೂ ನಮ್ಮ ಸಮಾಜದ ಸಂಸ್ಕೃತಿಯನ್ನು ರಕ್ಷಿಸುವ ಮಾರ್ಗದರ್ಶಕನೇ ಋಷಿ. ಭರತ ಭೂಮಿಯಲ್ಲಿನ ಕಟ್ಟ ಕಡೆಯ ಅಂತಹ ಋಷಿ, ಗಣಪತಿ ಮುನಿ. ಅವರು ಅವಸಾನ ಸ್ಥಿತಿಯಲ್ಲಿದ್ದ ವೇದ ಸಂಸ್ಕೃತಿಯನ್ನು ಪುನಃ ಪ್ರತಿಷ್ಠಾಪಿಸಿದರು. ಅವರ ಅವತಾರದಲ್ಲಿ ಒಂದು ದೈವೀ ಉದ್ದೇಶವಿತ್ತು. ಶ್ರೀ ರಮಣ ಮಹರ್ಷಿ ಹಾಗೂ ಗಣಪತಿ ಮುನಿಗಳಿಬ್ಬರ ಜೊತೆಗೂಡಿದ ಅವತಾರದ ರಹಸ್ಯವೆಂದರೆ ತಪಸ್ಸಿನ ಅರ್ಥವನ್ನು ಮನಗಾಣಿಸುವುದೇ ಆಗಿತ್ತು. (ಎಲ್ಲಿ ಆತ್ಮದ–ಆಲೋಚನೆಯು ಉದಯಿಸುತ್ತೋ ಆ ಸ್ಥಳವನ್ನು ಅಂತರಂಗದಲ್ಲಿ ಅರಸುವುದು. ಅಲ್ಲಿ ಮನಸ್ಸು ಶಾಂತವಾಗುವುದು. ಅದೇ ತಪಸ್ಸು. ಮಂತ್ರವೊಂದನ್ನು ಸತತವಾಗಿ ಪಠಿಸುವುದು, ಮಂತ್ರದ ಹಿಂದಿರುವ ಶಬ್ದದ ಮೂಲವನ್ನು ಅರಸುವುದು ಮತ್ತು ಮನಸ್ಸು ಅಲ್ಲಿ ಶಾಂತವಾಗುವುದು. ಅದೇ ತಪಸ್ಸು). ಅವರ ಗುರು ಶಿಷ್ಯರ ಅವಿನಾಭಾವ ಸಂಬಂಧವು ಅವರ ಪೂರ್ವ ಜನ್ಮದ ಮುಂದುವರೆದ ಭಾಗ ಹಾಗೂ ಅವರ ಜೀವನವು ವೇದಗಳಲ್ಲಿ ವೈಭವೀಕರಿಸಿದಂತಹ ಸಂಬಂಧವನ್ನು ಪ್ರತಿಫಲಿಸುತ್ತದೆ.

ಮಾನವನ ಗುರಿಯೇ ತಪಸ್ಸು ಹಾಗೂ ಅದು ಪ್ರಾರಂಭವಾಗುವುದು ಮಾನವ ಜೀವನದ ಗುರಿಯನ್ನು ತಲುಪಬೇಕೆಂಬ ಶಕ್ತಿಯುತ ಮಹತ್ವಾಕಾಂಕ್ಷೆಯಿಂದ. ಯಾರು ತನ್ನೊಳಗಿರುವ

ಶಕ್ತಿಯನ್ನು ಜಾಗೃತಗೊಳಿಸಿ, ಅದನ್ನು ತಲುಪಿ ಅಲ್ಲೇ ಆತ್ಮಜ್ಞಾನದಲ್ಲಿ ಸ್ಥಿರವಾಗಿ ನೆಲೆ ನಿಲ್ಲುವನೋ ಅವನೇ ನಿಜವಾದ ಮಾನವ. ಅಂಥವನು ಮಾತ್ರ ನಿಜವಾದ ದೇಶ ಭಕ್ತನಾಗಬಲ್ಲ ಹಾಗೂ ನಿಃಸ್ವಾರ್ಥದಿಂದ ದೇಶವನ್ನು ಸೇವಿಸಬಲ್ಲ.

"ಓಂ" ಎಂಬುದು ಶಬ್ದದ ಹಾಗೂ ಅನಂತ ಶಕ್ತಿಯ ಮೂಲ. ಸ್ಪಷ್ಟವಾಗಿ ಅರ್ಥೈಸಿಕೊಂಡು ಹಾಗೂ ಆತ್ಮಜ್ಞಾನದಿಂದ ಬೆಳಗುತ್ತಿರುವ ಪದವನ್ನು ಉಪಯೋಗಿಸಿ ಮಾತನಾಡಿದಲ್ಲಿ ಅದಕ್ಕೆ ನಿರೀಕ್ಷಿತ ಫಲವನ್ನು ಉಂಟುಮಾಡುವ ಶಕ್ತಿ ಇರುವುದು. ಬಾಹ್ಯ ವಿದ್ಯಮಾನಗಳ ಪ್ರಸ್ತುತ ಜ್ಞಾನವು ಅನೇಕ ಮಹಾನ್ ಆತ್ಮಗಳಲ್ಲಿ ಅಡಗಿರುವ ಜ್ಞಾನದ ಗಣಿಗಳ ಫಲವಾಗಿರುವುದು. ನಾಯನರ ಜೀವನವು ಈ ಸತ್ಯವನ್ನು ಪ್ರತಿಬಿಂಬಿಸುತ್ತದೆ.

ನಾಯನರ ಜೀವನದಲ್ಲಿ ನಾವು ಆದಿಗುರು ಶಂಕರಾಚಾರ್ಯರ ಪ್ರತಿಭೆಯನ್ನು ಹಾಗೂ ಶ್ರೀ ರಮಣ ಮಹರ್ಷಿಗಳ ಮೌನದ ಚೇತನವನ್ನು ಕಾಣಬಹುದು. ನಾಯನರು ತಮ್ಮನ್ನು ದೇವರ ಸಂದೇಶವಾಹಕನೆಂದು ಘೋಷಿಸಿಕೊಂಡಿದ್ದರು. ನಾಯನರ ಬಗ್ಗೆ ಭಗವಾನರು, "ನಾಯನರು ಕವಿತ್ವ ವಾಚನ ಮಾಡಿದರೆ, ದೇವತೆಗಳು ಅದನ್ನು ಆಲಿಸಲು ಸಾಲಾಗಿ ನಿಲ್ಲುತ್ತಿದ್ದರು" ಎಂದು ಹೇಳುತ್ತಿದ್ದರು. ನಾಯನರು ವಾಚಸ್ಪತಿಗಳು (ದೇವತೆಗಳ ಗುರು) ಹಾಗೂ ಭಗವಾನರು ಮೌನಿಗಳಾಗಿದ್ದರು. ಒಬ್ಬರು ಮುನಿಯಾದರೆ ಮತ್ತೊಬ್ಬರು ಮಹರ್ಷಿ.

ನಾಯನರು ತಮ್ಮ ದೇಶದ ಅಭ್ಯುದಯಕ್ಕಾಗಿ ತಪಸ್ಸನ್ನಾಚರಿಸಿದರು. ಈ ಸತ್ಯವು ಅವರ ಕಾವ್ಯದುದ್ದಕ್ಕೂ ಹರಿಯುತ್ತಿತ್ತು. ಅವರ ಸಂಸ್ಕೃತ ಕಾದಂಬರಿ "ಪೂರ್ಣ"ದಲ್ಲಿ ಅವರು ಸ್ತ್ರೀಯರ ಜೀವನ ಸ್ಥಿತಿಗತಿಗಳನ್ನು ಸ್ಪಷ್ಟವಾಗಿ ಚಿತ್ರಿಸಿರುವರು. ಈ ಕಾದಂಬರಿಯನ್ನು ನಾಯನರು ಪೂರ್ಣಗೊಳಿಸಲಾಗಲಿಲ್ಲ. ಅವರ ಮಗ ಮಹದೇವ ಶಾಸ್ತ್ರಿಗಳು ಇದನ್ನು ಪೂರ್ಣಗೊಳಿಸಿ ಅದಕ್ಕೆ "ಸತ್ಯ ಪ್ರಭ" ಎಂಬ ಹೆಸರನ್ನಿಟ್ಟರು. ಈ ಕಾದಂಬರಿಯು ಓದುಗನನ್ನು ಆಂಧ್ರದೇಶದ ಸಂಸ್ಥಾಪಕ ಶ್ರೀಕಾಕುಲ ಆಂಧ್ರ ಮಹಾ ವಿಷ್ಣುವಿನ ಕಾಲಕ್ಕೆ ಕೊಂಡೊಯ್ಯುತ್ತದೆ. ಈ ಚರಿತ್ರೆಯನ್ನು ಆರು ದಶಕಗಳ ಹಿಂದೆ ಒಂದು ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು.

ನಾಯನರ ತಾತ್ವಿಕ ಕೃತಿಗಳು ದಾರಿದೀಪ. ಅವರ ಕೃತಿಗಳಲ್ಲಿನ ಮಂತ್ರಗಳ ಭಾಗವು ಪೂಜಾ ಪದ್ಧತಿಗಳಿಗೆ ಕನ್ನಡಿ ಹಿಡಿಯುವ ಹಾಗಿದೆ. ಅವರ ಕೃತಿಗಳನ್ನು ವಿವರವಾಗಿ ಅಧ್ಯಯನ ಮಾಡುವುದು ಎಲ್ಲರ ಕರ್ತವ್ಯ ಹಾಗೂ ಅದರ ಮೂಲಕ ಅವರ ನೈತಿಕ ಮತ್ತು ಆಧ್ಯಾತ್ಮಿಕ ನಿಲುವನ್ನು ಅಭಿವೃದ್ಧಿಸಿಕೊಳ್ಳುವುದು ಅತಿ ಮುಖ್ಯವಾದದ್ದು. ಇದು ಅವರಿಗೆ ಸಲ್ಲಿಸುವ ಅತ್ಯಂತ ಉತ್ತಮ ಶ್ರದ್ಧಾಂಜಲಿ. ನಾಯನರು ಕಪಾಲ ಭೇದವನ್ನು ತಲುಪಿದ ನಂತರ ಹದಿಮೂರು ವರ್ಷಗಳವರೆಗೂ ಜೀವಿಸಿದ್ದರು. ಎಲ್ಲ ಸಾಧಕರಿಗೂ ಈ ಋಷಿಯ ಜೀವನವು ಮಾರ್ಗದರ್ಶಿ.

ಜಯತು ಭರತಕ್ಷೋಣಿಖಂಡಮ್ ವಿಷಾದವಿವರ್ಜಿತಮ್
ಜಯತು ಗಣಪಸ್ತಸ್ಯ ಕ್ಷೇಮಂವಿಧಾತುಮನಾ ಮುನಿಃ
ಜಯತು ರಮಣಸ್ತಸ್ಯಾಚಾರ್ಯೋ ಮಹರ್ಷಿಕುಲಾಚಲೋ
ಜಯತು ಚ ತಯೋರ್ಮಾತಾ ಪೂತಾ ಮಹೇಶವಿಲಾಸಿನೀ ॥

ಭರತ ಭೂಮಿಯು ಯಾತನೆಯಿಂದ ಬಿಡುಗಡೆ ಹೊಂದಲಿ!

ಈ ಸ್ಥಿತಿಯನ್ನು ಗುರಿಯಾಗಿ ಹೊಂದಿದ್ದ ಗಣಪತಿಗೆ ಜಯವಾಗಲಿ!

ಅವರ ಗುರು ಮಹಾನ್ ಮಹರ್ಷಿ ಶ್ರೀರಮಣರಿಗೆ ಜಯವಾಗಲಿ!

ಅವರ ಮಾತೆ, ಮಹೇಶ್ವರನ ದಿವ್ಯ ಪತ್ನಿಗೆ ಜಯವಾಗಲಿ!

ಓಂ ತತ್ ಸತ್

ಅನುಬಂಧ –೧

ಕಾವ್ಯಕಂಠ ವಾಸಿಷ್ಠ ಗಣಪತಿ ಮುನಿಗಳು ರಚಿಸಿದ ಕೃತಿಗಳು

1. ಆದಿಶಾಸ್ತ್ರಾರ್ಥಸೂತ್ರಮ್
2. ಆಗ್ನೇಃ ಜಾತಸ್ರೋ ವಿಭೂತಯಃ
3. ಐಂದ್ರಸಹಸ್ರನಾಮಭಾಷ್ಯಮ್
4. ಐವೇದಮೀಮಾಂಸಾ
5. ಅಕ್ಷರಾವಳಿ
6. ಅಮ್ರಿತಅಂಬಾಪಂಚಾರತ್ನಮ್
7. ಅಥ ಶತೀತಪೋಬೋಧಾನಾಮ್ ಫಲನಿರೂಪಣಮ್
8. ಭಾರತಚರಿತ್ರಮೀಮಾಂಸಾ
9. ಭೃಗುವಂಷೇತಿಹಾಸಃ
10. ಚತುರ್ವ್ಯೂಹಸೂತ್ರಮ್
11. ಚಿಕಿತ್ಸಾನುಶಾಸನಮ್
12. ದೈವರಾತದರ್ಶನಮ್
13. ದರ್ಶನಮಾಲಾ
14. ದೇವತಾಮೀಮಾಂಸಾ – 1
15. ದೇವತಾಮೀಮಾಂಸಾ – 2
16. ದೇವೀಸ್ತೋತ್ರಮಂಜರಿ
17. ಧರ್ಮಾನುಶಾಸನಮ್ (1–9 ಸೂತ್ರ ರೂಪದಲ್ಲಿ)
18. ಧರ್ಮಾನುಶಾಸನಮ್ (ಶ್ಲೋಕರೂಪದಲ್ಲಿ)
19. ಗಾಯತ್ರೀವ್ಯಾಖ್ಯಾನಮ್
20. ಗಣಕಕಂಠಾಭರಣಮ್
21. ಗಣಪತಿದರ್ಶನಮ್

22. ಗಣಪತಿಮುನೇಃ ಪತ್ರಾಣಿ
23. ಗೀತಮಾಲಾ
24. ಗೋತ್ರಪ್ರವರನಿರ್ಣಯ
25. ಗುರುಮಂತ್ರಭಾಷ್ಯಮ್
26. ಹೆರಂಭೋಪಸ್ಥಾನಮ್
27. ಹೋರಾನಿರ್ಣಯಸಂಗ್ರಹ
28. ಇಂದ್ರಾಣಿಸಪ್ತಶತಿ
29. ಇಂದ್ರನಾಮನಿರ್ವಾಚನಮ್
30. ಇಂದ್ರಸಹಸ್ರನಾಮಸ್ತೋತ್ರಮ್
31. ಇಂದ್ರಸಹಸ್ರೇ ಕಟಾಕ್ಷಸ್ತ್ರಬಕಃ
32. ಇಂದ್ರಸಹಸ್ರೇ ಪ್ರಥಮಾಮ್ ಶತಕಮ್
33. ಇಂದ್ರಸಪ್ತಕಮ್
34. ಇಂದ್ರವಿಂಶತಿಃ
35. ಇಂದ್ರೇಶ್ವರಾಭೇದಸೂತ್ರಮ್
36. ಈಶೋಪನಿಷದ್ ಭಾಷ್ಯಮ್
37. ಈಶ್ವರಮೀಮಾಂಸಾ
38. ಇತರಗ್ರಂಥಾಃ
39. ಜೈಮಿನೀಯಸೂತ್ರಭಾಷ್ಯಮ್
40. ಜೈಮಿನೀಯತರ್ಕವಾರ್ತಿಕಮ್
41. ಕೃಷ್ಣವ್ಯಾಖ್ಯಾನಮ್
42. ಕ್ರಿಯಾಶಕ್ತಿಮೀಮಾಂಸಾ
43. ಲಾಲಿಭಾಷೋಪದೇಶಶಃ
44. ಮಾತ್ರಿತತ್ತ್ವಪ್ರಕಾಶಿಕಾ
45. ಮಹಾವಾರ್ತಿಕಮ್
46. ಮಹಾವಿದ್ಯಾಸೂತ್ರಮ್
47. ಮನೀಷಾಸಂಗ್ರಹಃ
48. ಮಂಗಳಗೌರೀಸ್ತೋತ್ರಮ್.

49. ಮೂಲಗ್ರಂಥಾಪ್ರಷಂಸಾ
50. ನವದ್ವಿಪಕಾವ್ಯಕಂಠಾಃ
51. ನೂತನಭಾಷ್ಯಕರಣಾವಸರಕಥನಮ್
52. ಪಾನದವಧಾರ್ತರಾಷ್ಟ್ರಸಂಭವಃ
53. ಪಂಚಜನಚರ್ಚಾ
54. ಪಂಚಮಮೀಮಾಂಸಾ
55. ಪ್ರಾಂತೋಷನಮ್
56. ಪ್ರಾಸ್ತಾವಿಕಪದ್ಯಾನಿ
57. ಪ್ರಚಂಡಚಂಡೀತ್ರಿಶತಕತಿ
58. ಪ್ರಮಾಣಪರೀಕ್ಷಾಃ
59. ಪೂರ್ಣಾ (ಎರಡು ಭಾಗಗಳಲ್ಲಿ)
60. ರಾಜಯೋಗಸಾರಸೂತ್ರಮ್
61. ರಾಮಗೀತಾ
62. ರಮಣಗೀತಮ್
63. ರೇಣುಕಾಸಪ್ತಕಮ್
64. ರೇಣುಕಾಷ್ಟಕಮ್
65. ಋಗ್ವೇದಭಾಷ್ಯಮ್ – 1
66. ಋಗ್ವೇದಭಾಷ್ಯಮ್ – 2
67. ಋಗ್ವೇದಭಾಷ್ಯಮ್ – 3
68. ಋಗ್ವೇದಮಂತ್ರಭಾಷ್ಯಮ್
69. ಋಗ್ವೇದಮಹರ್ಷಿಣೀ
70. ರುದ್ರಕುಟುಂಬಸೂತ್ರಮ್
71. ಸಾಮ್ರಾಜ್ಯನಿಬಂಧನಮ್
72. ಸದಾಚಾರಬೋಧಿನೀ
73. ಸದ್ದರ್ಶನಮ್
74. ಸಮವಾಯಪರೀಕ್ಷಾ
75. ಸರ್ವಾರ್ಥದರ್ಶನಮ್

76. ಸೌಂದರ್ಯಾರ್ಣನಿರ್ವಾಣಷಟ್ಕಮ್
77. ಸೀತಾವ್ಯಾಖ್ಯಾನಮ್
78. ಶಾರೀರಕಮೀಮಾಂಸಾಟಿಪ್ಪಣಿ
79. ಶಬ್ದಪ್ರಮಾಣಚರ್ಚಾ
80. ಶಕ್ತಿದರ್ಶನಮ್
81. ಶಿವಗೀತಮ್
82. ಶಿವಸಪ್ತತಿನಾಮಸ್ತೋತ್ರಮ್
83. ಶಿವಶತಕಮ್
84. ಶಿವಾಸ್ತವರಾಜಃ
85. ಷೋಡಷಶ್ಲೋಕೀ
86. ಶ್ರೀಗುರುಸ್ತುತಿಃ
87. ಶ್ರೀಕೃಷ್ಣಾಕ್ಷರಮಾಲಿಕಾ
88. ಶ್ರೀನೃಸಿಂಹಪಂಚರತ್ನಮ್
89. ಶ್ರೀಪವನಾಷ್ಟಕಮ್
90. ಶ್ರೀರಮಣಚತ್ವಾರಿಂಷತ್
91. ಶ್ರೀರಮಣಗೀತಾ
92. ಶ್ರೀತಾರಕನಾಮಸ್ತುತಿಃ
93. ಶ್ರೀತ್ರಿಪುರಸುಂದರೀಗೀತಮ್
94. ಶ್ರೀಯೋಗಾಂಜಾನೇಯಪಂಚರತ್ನಮ್
95. ಸಿದ್ಧಾಂತಸಾರಸೂತ್ರಮ್
96. ಸೃಷ್ಟಿಸೂತ್ರಮ್
97. ಸುಕನ್ಯಾದಸ್ರಸಂವಾದಃ
98. ತಂತ್ರಹೃದಯಮ್
99. ತತ್ವಾನುಶಾಸನಸೂತ್ರಾಣಿ
100. ತತ್ತ್ವಘಂಟಾಶತಕಮ್
101. ತತ್ತ್ವಮೀಮಾಂಸಾ
102. ತತ್ತ್ವಸಾಮಾನ್ಯಮೀಮಾಂಸಾ

103. ತ್ರಿಭಾವಫಲಚಂದ್ರಿಕಾ
104. ಉಮಾಕ್ಷರಮಾಲಾ
105. ಉಮಾಸಹಸ್ರಮ್
106. ಉಮಾಶತಕಮ್
107. ಉಮಾತ್ರಿಶತೀ
108. ಉಪದೇಶಸಾರಸೂತ್ರಮ್
109. ವಾಸಿಷ್ಠದರ್ಶನಮ್
110. ವಾಸಿಷ್ಠಕಾಮಸೂತ್ರಾಣಿ
111. ವೈದಿಕಪದಾನಾಮರ್ಥಾಃ
112. ವಿಶ್ವಮಿಮಾಂಸಾ (1–16 ಸೂತ್ರರೂಪ)
113. ವಿಶ್ವಮಿಮಾಂಸಾ (ಶ್ಲೋಕರೂಪ)
114. ವಿವಾಹಧರ್ಮಸೂತ್ರಮ್
115. ಯೋಗವ್ಯಾಖ್ಯಾನಮ್

ನಮ್ಮ ಪ್ರಕಟಣೆಗಳು

1.	ಋಗ್ವೇದದ ಅಂತರಂಗ	50
2.	ಯಜುರ್‌ವೇದದ ಅಂತರಂಗ	80
3.	ಸಾಮವೇದದ ಅಂತರಂಗ	25
4.	ಅಥರ್ವ ವೇದದ ಅಂತರಂಗ	50
5.	ಋಗ್ವೇದ ಸಂಹಿತೆ : ಮಂಡಲ 1 ರಿಂದ 10 (14 ಸಂಪುಟಗಳು) (ಮಂತ್ರ, ಅರ್ಥ ಹಾಗೂ ಟಿಪ್ಪಣಿಗಳು)	4550
6.	ಕೃಷ್ಣ ಯಜುರ್‌ವೇದ ತೈತ್ತಿರೀಯ ಸಂಹಿತೆ – ಕಾಂಡ 1–7 (4 ಸಂಪುಟಗಳು) (ಮಂತ್ರ, ಅನುವಾದ ಹಾಗೂ ವಿವರಣೆ)	1040
7.	ಅಥರ್ವ ವೇದ ತೈತ್ತಿರೀಯ ಸಂಹಿತೆ – ಕಾಂಡ 1–20 (6 ಸಂಪುಟಗಳು) (ಮಂತ್ರ, ಅನುವಾದ ಹಾಗೂ ವಿವರಣೆ)	1750
8.	ಸಾಮ ವೇದ (2 ಸಂಪುಟಗಳು) (ಮಂತ್ರ, ಅನುವಾದ ಹಾಗೂ ವಿವರಣೆ)	450
9.	ಕೃಷ್ಣ ಯಜುರ್‌ವೇದ ತೈತ್ತಿರೀಯ ಆರಣ್ಯಕ – ಭಾಗ 1 ಮತ್ತು 2	350
10.	ತೈತ್ತಿರೀಯ ಬ್ರಾಹ್ಮಣ – ಭಾಗ 1	200
11.	ಋಗ್ವೇದವನ್ನು ಯಾಕೆ ಓದಬೇಕು	30
12.	ಅಂತರ್‌ಯಜ್ಞ	12
13.	ಸರಸ್ವತಿ (ಋಗ್ವೇದ ಮಂತ್ರಗಳು)	25
14.	ಭೂ ಸೂಕ್ತ	20
15.	ಪರಮಾನಂದ ಪ್ರಾಪ್ತಿ (ಋಗ್ವೇದ ಮಂತ್ರಗಳು)	25
16.	ಆಧುನಿಕರಿಗಾಗಿ ವೇದ ಜ್ಞಾನ	30
17.	ನೆಮ್ಮದಿಯ ಬಾಳು ನಿಮ್ಮದಾಗಿಸಿಕೊಳ್ಳಿ	50
18.	ಭುವನದ ಬೆಳಕು ಶ್ರೀಮಾತಾ	60
19.	ಯಂತ್ರಗಳು	75
20.	ನಿಶ್ಚಿತ ಪ್ರಯೋಜನಗಳಿಗಾಗಿ ಪ್ರಾಣಾಯಾಮ ಹಾಗೂ ಆಸನಗಳು	40
21.	'ಸಾವಿತ್ರಿ' ಸಾರಸಂಗ್ರಹ	20
22.	ಶ್ರೀವಿದ್ಯಾ ಸಾಧನೆ	35
23.	ರುದ್ರ ಮಂತ್ರಗಳು (ನಮಕ, ಚಮಕ)	50
24.	ವೇದ ಪ್ರಕಾಶ	20
25.	ಆಧುನಿಕ ಮಾನವನಿಗಾಗಿ ಯೋಗ	30
26.	ಶಾಂತಿ ಮಂತ್ರಗಳು	20
27.	ಅಗ್ನಿ – ದೈವೀ ಸಂಕಲ್ಪದ ಅಧಿದೇವತೆ	65
28.	ಆತ್ಮ ಪರಿಪೂರ್ಣತೆಯ ಯೋಗ	25
29.	ವಾಯು ಹಾಗೂ ಸೋಮ ಸಹಸ್ರನಾಮ	35
30.	ಋಗ್ವೇದದ ಶಬ್ದಾರ್ಥ ವಿಚಾರ	200
31.	ಶ್ರೀ ಶಂಕರರು ಮತ್ತು ಅಧ್ಯಾಸ–ಭಾಷ್ಯ	125
32.	ವೇದ ಮತ್ತು ಉಪನಿಷತ್ತುಗಳ ಋಷಿಗಳು	100
33.	ಆಧುನಿಕ ಕಾಲಕ್ಕೆ ವೇದಜ್ಞಾನ	100
34.	ಆಧುನಿಕ ವಿಜ್ಞಾನ – ಐತಿಹಾಸಿಕ ಮತ್ತು ಸಾಮಾಜಿಕ ಸಮೀಕ್ಷೆ	300
35.	ತೈತ್ತಿರೀಯ ಉಪನಿಷತ್	50
36.	ವೇದ ವೈಭವ	50

(ಪ್ರಕಟಣೆಗಳ ಸಂಪೂರ್ಣ ಪಟ್ಟಿಗಾಗಿ ಹಾಗೂ ಖರೀದಿಗಾಗಿ www.vedah.com ನೋಡಿ)

ಶ್ರೀಗಣಪತಿ ಮುನಿಗಳ ಮೊಮ್ಮಗ ಶ್ರೀ ಎ.ವಿ.ರಮಣರು ಬರೆದಿರುವ ಪುಸ್ತಕದಲ್ಲಿನ ಪುಟಗಳ ನಂತರದ ಪುಟಗಳು ಈ ಮಹಾಮಾನವನನ್ನು (ಗಣಪತಿ ಮುನಿ) ಮಹಾತಪಸ್ವಿ, ಮಹಾಕವಿ, ಮಹಾವಿದ್ವಾನ್ ಹಾಗೂ ಮಹಾಭಕ್ತನನ್ನಾಗಿ ಬಹಿರಂಗಪಡಿಸುತ್ತದೆ. ನಿಸ್ಸಂಶಯವಾಗಿಯೂ ಅವರು ಮಹಾ ತಪಸ್ವಿ, ಕವಿ, ಮಹಾನ್ ವಿದ್ವಾಂಸರು ಹಾಗೂ ಅಸಾಮಾನ್ಯ ದೈವೀ ಭಕ್ತ. ಅವರು ತಮ್ಮ ತೀವ್ರ ತಪಸ್ಸಿನ ಜೀವನದ ಶಕ್ತಿಕೇಂದ್ರವನ್ನು ಅರುಣಾಚಲದ ವಿರೂಪಾಕ್ಷ ಗುಹೆಯಲ್ಲಿ ರಮಣ ಭಗವಾನರನ್ನು ಸಂಧಿಸಿ ಅವರನ್ನು ತಪಸ್ಸಿನ ನೈಜ ಅರ್ಥದೆಡೆಗೆ ದೀಕ್ಷೆಯನ್ನು ನೀಡಿದ ಕ್ಷಣದಲ್ಲಿ ಕಂಡುಕೊಂಡರು. ಎಂದೂ ಇಂತಹ ಮಹಾನ್ ಕವಿ ಹಾಗೂ ಮಹಾನ್ ಜ್ಞಾನಿ–ಸದ್ಗುರುಗಳ ಸಮಾಗಮ ಆಗಿರಲಿಲ್ಲ. ಮುನಿಯು ಯುವಕ ಸ್ವಾಮಿಯ ವಿಶಿಷ್ಟವಾದ ಮಹೋನ್ನತೆಯನ್ನು ಗುರುತಿಸಿದ ಕ್ಷಣದಲ್ಲೇ ಅವರನ್ನು ಭಗವಾನ್ ಶ್ರೀ ರಮಣ ಮಹರ್ಷಿಯೆಂದು ಘೋಷಿಸಿದರು.

ಮುನಿಗಳ ಜೀವನದುದ್ದಕ್ಕೂ ರೋಚಕ ಘಟನೆಗಳ ಸರಣಿಗಳನ್ನು ಈ ಪುಸ್ತಕದಲ್ಲಿ ವಿವರಿಸಿರುವುದನ್ನು ವೀಕ್ಷಿಸಬಹುದು: ಅವರು ತಾರ್ಕಿಕ ಸಂಪ್ರದಾಯವಾದಿ ಹಾಗೂ ಬಂಡಾಯ–ಸುಧಾರಕರು; ಅವರು ತಮ್ಮ ಮಾತೃಭೂಮಿ ಹಾಗೂ ಸನಾತನ ಧರ್ಮದ ಬಗ್ಗೆ ಅತ್ಯಂತ ಹೆಮ್ಮೆಯುಳ್ಳವರು ಹಾಗೇ ವೈಯುಕ್ತಿಕವಾಗಿ ಅತಿ ವಿನಮ್ರರು; ಸಮಸ್ತ ವಿದ್ವಾಂಸರಿಂದ ಮಹಾನ್ ಗುರುಗಳೆಂದು ಪೂಜಿಸಲ್ಪಡುವವರು; ಹಾಗೂ ಸ್ವತಃ ತಾವೇ ತಮ್ಮ ಗುರುಗಳಿಗೆ ಸಂಪೂರ್ಣವಾಗಿ ಶರಣಾದವರು; ಸಮಾಜವನ್ನು ಉದ್ಧರಿಸಲು ಸದಾ ಹಾತೊರೆಯುವ ಆದರೆ ಅಂತರಂಗದ ರಹಸ್ಯಗಳನ್ನು ಅರಿಯುವಲ್ಲಿ ಅಪಾರ ತಾಳ್ಮೆಯುಳ್ಳವರು; ಪ್ರಪಂಚದೆದುರಿನಲ್ಲಿ ಸಿಂಹವಾದರೆ, ಗುರುಗಳ ಪಾದದಡಿಯಲ್ಲಿ ವಿನಮ್ರ ಶಿಷ್ಯ; ಬೌದ್ಧಿಕತೆಯಲ್ಲಿ ಬೃಹತ್ ಪ್ರಮಾಣದ ವ್ಯಕ್ತಿ, ಮನಸ್ಸು ಹಾಗೂ ಬುದ್ಧಿಶಕ್ತಿಯನ್ನು ಮೀರಿದ ಗುರುವಿನಿಂದ ಶಾಂತಿಯನ್ನು ಪಡೆದ ಬೌದ್ಧಿಕ ದೈತ್ಯ. ಈ ಪುಸ್ತಕವು ಮಹಾನ್ ವ್ಯಕ್ತಿಯ ಈ ಎಲ್ಲ ವಿಷಯಗಳ ಮೇಲೂ ಬೆಳಕನ್ನು ಚೆಲ್ಲುವುದು.

ಗಣಪತಿ ಮುನಿಗಳು ಕಾಲವಾದ ವಿಷಯವನ್ನು ಅರಿತ ಅವರ ಗುರು ಭಗವಾನ್ ರಮಣ ಮಹರ್ಷಿಗಳು "ಅಂತಹ ಮತ್ತೊಬ್ಬ ವ್ಯಕ್ತಿಯು ಎಂದು ಬರುವನು" ಎಂಬ ಉದ್ಗಾರಕ್ಕಿಂತ ಹೆಚ್ಚಿನ ಗೌರವವನ್ನು ಊಹಿಸಲು ಅಸಾಧ್ಯ.

SAKSHI
Trust

ISBN 10: 81-7994-216-3
ISBN 13: 97[redacted]6-1
EAN : 97[redacted]

₹ 100/-